ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 4 | ಮಂಗಳೂರು, ತಾರೀಕು 7ನೇ ಶುಕ್ರವಾರ ಜನವರಿ 1910 | ಸಂಚಿಕೆ 1

William & Co. Fort Bombay.

ಅಮೃತಾಂಜನ.

Trade Mark Registered

ಹಿಂದೂ ಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟನೋವು ಗಂಟಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಅಗು ಸಣ್ಣ ಮಗುವಿನ ಮೇಲೆ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಲ್ಲಾ ನಗರಗಳಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುರ್ದುಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಿದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ ಆರು ಡಬ್ಬಿಗಳ ಕಿಮ್ಮತು ರೂ 2—4—0

ಕೇಶವರ್ಧಿನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ಸಮವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃಶುದ್ಧಿ ಮಾಡುವದು ಬಾಟ್ಲಿ ೧ರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯೂ ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಹೆಪೋಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಚೇಳು ಕಡತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0
ಕಸ್ತೂರಿ ಮಾತ್ರೆ 50	,,	0—10—0
ಖಜ್ಜಿ ಮುಲಾಮು	,,	0—3—0
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು

ವಿಳಾಸ:— ವಿಲಿಯಂ ಮತ್ತು ಕಂಪೆನಿ ಫೋರ್ಟ್ ಮುಂಬಯಿ: ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ" ಮುಂಬಯಿ

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ; ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦.
ಉತ್ತರ ರಾಮಚರಿತ್ರೆ ಕಥೆ.	೧-೫-೦.
ಟೀಕಾ ರಾಘವೇಂದ್ರ ಸ್ತೋತ್ರ.	೦-೨-೦.
ತೈಚಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦-೨-೦.
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨-೦
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ.	೦-೨-೦.
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨ ೦.
ಸ್ವರಸಹಿತವಾದ ನಮಕ ಚ ಮಕ	೦ ೨-೦.
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦.
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨ ೦
ಕೃಷ್ಣ ಕರ್ಣಾಮೃತ ಮೂಲ	೦ ೨ ೦
ದೇವರ ಸೇವೆ ಹೊಸ ಪುಸ್ತಕ.	೦-೪-೦
ಮುಕುಂದ ಮಾಲಾ (ಗೀತಾ)	೦-೪-೦
ಶಿವ ನಾಮಾ	೦-೦-೬.
ಹನುಮನ್ನಾಮಾ	೦-೦-೬.
ಹರಿ ನಾಮಾ	೦-೦-೬.
ಯಾಜುಷ ಪ್ರಯೋಗ	೦-೮-೦.
ಬೃಹತ್ಕಥಾ ಮಂಜರಿ	೦-೮-೦.
ಕೃಷ್ಣ ಬೋಧಾಮೃತ	೦-೬-೦

೦ ೪ ೦ ಕಮ್ಮಿ . . ಪಿ ರವಾನಿಸುವದಿಲ್ಲ.

ಕೆಟಲಾಗು ಬೇಕಾದಕ್ಕೆ . . . ತರಿಸಿಕೊಳ್ಳಬಹುದು

ಛಾಸ — ಬಿ ಅವಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್, ಬೆಂಗಳೂರು

ಕುಂತಳ ಕೌಮುದಿ ತೈಲ.

. . . . ಯವರು — ಅವರು ಉಪಯೋಗಿಸಿದ ಕೇಶವರ್ಧಕ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು — ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಸವಾಯಿ ಮಹಾರಾಣಿಯವರು — ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು — ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಹಿಡಿದು . . . ಒಪ್ಪಿದರು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು — ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿ . . .

ಕುಂತಳ ಕೌಮುದಿ ತೈಲ — ಪ್ರತ್ಯಹವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,

216 ಕಾರನ್ ವಾಲಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್ ಎ. ಪೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;—ಮ| ರಾ| ರಾ| ಸಿ. ಆರ್. ಕಾಮತರು,

ಉಲನ್ ಮಾರ್ಕೆಟ್, ಮಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್‌ಬತ್ತಿ ವಗ್ಯೆರೆ ರಂಗುಗಳ ವಸ್ತ್ರ 1ಕ್ಕೆ . . . ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ . . . „ 1— 1—0.

ಸೈಜು ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳ್ ದೊಡ್ಡ ಚೌಕಳೀ ಹೂ ರೇಷ್ಮೆ ವಸ್ತ್ರ 1ಕ್ಕೆ ರೂ 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6, 7, 8, 9, 10.

ರೇಷ್ಮೆ ನಡುಕಟ್ಟುಗಳು.

ಕೆಂಪು, ವೂನಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5–6 ಮೊಳ, ಅ. 2–3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1–4–0 1–8–0, 1–10 0, 1–12 0, 2–0 0, 2–8–0.

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಡಿಗಪ್ಪು, ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾಥರಟಿ ಲಾತಿಮುಂಗಿ, ಹಳದಿ ಮುಂಗಿ, ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗ್ಯೆರೆ 1ಕ್ಕೆ ರೂ 1–6–0, 1 12–0.

ಡಿಟೊ ಕಪ್ಪು ಚಂದ ಕಾಳಿ ಕಣಗಳು 1ಕ್ಕೆ ರೂ. 1–0 0, 1–2 0, 1–3–0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ. 2–4–0, 2–8–0, 2–10–0

ಡಿಟೊ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ. 1 4 0, 1–6–0, 1–8–0.

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2–10–0, 2–12–0, 3 0–0.

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ 3–6 0, 3–8–0, 3–12–0

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣಾ 1ಕ್ಕೆ ರೂ 4–12–0, 5–0 0

ಹೆಚ್. ಸಂಕಪ್ಪಾ ಬಸಪ್ಪನವರು,

ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,

ಬೆಂಗಳೂರು ಸಿಟಿ.

ವ್ಯವಸಾಯ ಕ್ರಮಬೋಧಿನಿ.

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದದ್ದು. ಜಮೀನ ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಉಂಟಾಗಿರಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು. ಕ್ರಯ ಸ್ಟಿಫ್ ಬೈಂಡು ಪ್ರತಿ ಒಂದಕ್ಕೆ ೦—೧೨—೦; ಕ್ಯಾಲಿಕೋ ಬೈಂಡು, ೧—೦—೦; ಟಪ್ಪಾಲ್ ಹಾಸಲ್ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್. ಯನ್. ರಾವ್ ಬ್ರದರ್ಸ್.

262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ.

ಮಾವಿನ ಗಿಡಗಳು ವಗ್ಯೆರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷು ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗ್ಯೆರೆ ಸಮಸ್ತ ವಿಧವಾದ ಬೀಜಗಳು, ಶೇಬು, ಕಿತ್ತಳೆ ವಗ್ಯೆರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗ್ಯೆರೆ ಹುವ್ವುಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,

ಫ್ಲೋರಿಸ್ಟ್ ಅಂಡ್ ಸೀಡ್ಸ್‌ಮೆನ್,

[illegible]

ಜಾಹಿರಾತು.

ನಾಗಸ್ವಾಮಿ ಯಾ ತೇಗಿನ ಮರಗಳು ಮಾರಾಟಕ್ಕೆ ಸುಲಭ ದರದಲ್ಲಿ ದೊರೆಯುವವು. ಮರಗಳನ್ನು ವರ್ಗಸ್ಥಳದಿಂದಲೇ ಮಸ್ಕುಬಹುದಾದ್ದರಿಂದ ವರ್ಗ ದಹದಾರಿ ಹೊರತು ಇತರ ಖರ್ಚುಗಳ ತೊಂದರೆಗಳಿಲ್ಲ. ಕುಂಬಳೆ ರೈಲ್ವೆ ಸ್ಟೇಶನ್ ಸಮೀಪವಿರುವ ಅಳ್ಸಿಸ್ಕಾರ್ ಕಟ್ಟೆಯ ಹತ್ತಿರ ಮರಗಳನ್ನು ದಾಸ್ತಾನು ಇಟ್ಟಿರುವೆವು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

Upendra Shrinivas Nayak

Cloth Merchant, Kumble

POCKET DIARIES FOR 1910.

1910ನೇ ಇಸವಿಯ ಡೈರಿಗಳು

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಆವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಬೂಕು ಸ್ಯಾಯ್ ಕ್ರಯ ೮ ಆಣೆ

ಸಣ್ಣ ಸ್ಯಾಯ್ ,, ೬ ಆಣೆ

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಶನ್ ದೊರಕುವುದು

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು

ವಿಳಾಸ —

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ. ಕ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 7ನೇ ಜನವರಿ 1910

ಲಾಹೋರ ಕಾಂಗ್ರೆಸ್.

ಅಧ್ಯಕ್ಷರ ಭಾಷಣದಲ್ಲಿಯೂ ಕೋಂಗ್ರೆಸ್ ನಿರ್ಣಯಗಳಲ್ಲಿಯೂ ಅಗ್ರಸ್ಥಾನವು ಸಹಜವಾಗಿಯೇ ಹೊಸ ಏರ್ಪಾಡುಗಳಿಗೆ ಕೊಟ್ಟಿದೆ. ಕೌನ್ಸಿಲು ರೆಗ್ಯುಲೇಷನುಗಳ ಅನೇಕ ನ್ಯೂನಾತಿರಿಕಗಳನ್ನು ಅಧ್ಯಕ್ಷರು ವಿವರವಾಗಿ ಹೇಳಿದರು. ಮುನಿಸಿಪಲ್ ಕೌನ್ಸಿಲು ಲೋಕಲ್‌ಬೋರ್ಡು ಮೆಂಬರಲ್ಲದವರು ಕೌನ್ಸಿಲಿಗೆ ಅನರ್ಹರೆಂದು ಮಾಡಿದ ನಿಬಂಧನೆಯು ದೆಸೆಯಿಂದ ಅನೇಕ ಯೋಗ್ಯ ಗೃಹಸ್ಥರು ಕೌನ್ಸಿಲು ಸೇರ ಉಪಾಯವಿಲ್ಲದಂತಾಯಿತು. ಇದನ್ನು ನಿವಾರಿಸಲಿಕ್ಕೆ ಕೆಲವು ಕಡೆಯಲ್ಲಿ ಗವರ್ನರರವರು ಅಂಥವರನ್ನು ಮುನಿಸಿಪಲ್ ಯಾ ಲೋಕಲ್ ಬೋರ್ಡುಗಳ ಮೆಂಬರರಾಗಿ ನೇಮಿಸಿದರು. ಇನ್ನೂ ಕೆಲವರ ಬಗ್ಗೆ ಅಂಥಾ ಬೋರ್ಡುಗಳ ಮೆಂಬರರು ತಮ್ಮ ಸ್ಥಾನವನ್ನು ಬಿಟ್ಟು ಕೊಟ್ಟರು. ಶ್ರೀಯುತ ಸುರೇಂದ್ರನಾಥ ಬೆನ್ನರ್ಜಿ, ಉಪೇಂದ್ರನಾಥ ಭೋಸ, ಎ. ಚೌಧುರಿಗಳಂತಹ ಯೋಗ್ಯ ಪುರುಷರನ್ನು ಪ್ರವೇಶಿಸಗೊಡದ ಸಭೆಯ ನಿಬಂಧನೆಗಳು ಅಂಥಾ ಸಭೆಗೆ ಇಂಗ್ಲೀಷು ಬಾರದ ಅಸ್ತಿವಂತನನ್ನು ಹೋಗಗೊಡಿಸುವವು. ಇಂತಹ ಸಭಿಕರಿಂದ ಸರಕಾರಕ್ಕೆ ರಾಜ್ಯಕಾರ್ಯಭಾರದಲ್ಲಿ ಎಷ್ಟು ಸಹಾಯ ದೊರಕುವದು? ಇವರು ಸರಕಾರಕ್ಕೂ ಜನರಿಗೂ ಮಧ್ಯಸ್ಥರಾಗಲರ್ಹರೇ? ಡಾ॥ ಗೋಖಲೆಯಂತಹ ಗೃಹಸ್ಥರು [illegible] ಸಂಪತ್ತನ್ನು ತ್ಯಜಿಸಿರುವರು. ಅವರ ದಾರಿದ್ರ್ಯ [illegible]

ಘಳಿಸಿಕೊಟ್ಟ ಪ್ರಜಾಸೇವೆಗಾಗಿ ಅವರು ಅಂಗೀಕರಿಸಿದ ದೀನಸ್ಥಿತಿಯೇ ಅವರನ್ನು ಅನರ್ಹರಾಗಿ ಮಾಡುವದು. ಸರಕಾರಿ ಕೆಲಸದಿಂದ ತಳ್ಳಹಾಕಲ್ಪಟ್ಟವನು ಅನರ್ಹನೆಂದು ಮಾಡಿದ್ದಾರೆ. ಆದರೆ ಅವನನ್ನು ಯಾವ ಕಾರಣದಿಂದ ಎಂತಹ ತಪ್ಪಿಗೋಸುಗ ತಳ್ಳಹಾಕಿರುವರು ಎಂಬದನ್ನು ನೋಡಿ ಅವನ ತಪ್ಪು ಅಘೋರವಾಗಿ ದುರ್ನಡತೆಯನ್ನು ಸೂಚಿಸುವಂಥಾದ್ದಾಗಿದ್ದರೆ ಅಂತಹವನನ್ನು ಮಾತ್ರ ಅಯೋಗ್ಯನೆಂದು ಮಾಡುವ ನಿಬಂಧನೆಗಳನ್ನು ರಚಿಸ ಬೇಕು. ನ್ಯಾಯವಾಗಿತ್ತು.

ಆರು ತಿಂಗಳ ಸಜಾವಿಗೆ ಗುರಿಮಾಡುವ ತಕ್ಸೀರು ಸಾಬೀತು ಆದವನು ಅನರ್ಹನೆಂದು ಮಾಡಿರುವರು. ಈ ನಿಬಂಧನೆಯು ಸಹಾ ತಕ್ಸೀರಿನ ಸ್ವಭಾವ ವಗೈರೆಯನ್ನು ಪರೀಕ್ಷಿಸದೆ ಒಬ್ಬನನ್ನು ಅಯೋಗ್ಯನೆಂತ ನಿರ್ಣಯಿಸುವದು. ಇದೇ ಬ್ರಿಟಿಷ್ ಸಾಮ್ರಾಜ್ಯದ ರಾಜ್ಯಭಾರವನ್ನು ನಿರ್ವಹಿಸುವ ಬ್ರಿಟಿಷ್ ಪಾರ್ಲಿಮೆಂಟಿನ ಮಂತ್ರಿಯು ಎಂಟು ತಿಂಗಳ ಸಜಾ ಅನುಭವಿಸಿರುವನು. ಇಂಗ್ಲೆಂಡ ಪಾರ್ಲಿಮೆಂಟ್ ಮೆಂಬರನಿಗೆ ಮರಣದಂಡನೆಯಾಗಿತ್ತು.

ಫಲಾನೆ ಒಬ್ಬ ಮೆಂಬರನ ನೇಮಕವು ಪ್ರಜಾಹಿತಕ್ಕೆ ಪ್ರತಿಕೂಲವೆಂದು ಗವರ್ನರರವರಿಗೆ ಸಮಾಧಾನ ಕಂಡರೆ ಅವರು ಅವನನ್ನು ಅನರ್ಹನೆಂದು ನಿರ್ಧರಿಸಬಹುದು ಎಂಬದಾಗಿ ಒಂದು ನಿಬಂಧನೆಯುಂಟಲ್ಲ. ಈ ಕುರಿತು ಅಧ್ಯಕ್ಷರವರು ಶ್ರೀಯುತ ಕೇಲಕರರ ದೃಷ್ಟಾಂತ ಕೊಟ್ಟು ನಿಬಂಧನೆಯು ಅನ್ಯಾಯವಾದದ್ದೆಂದು ರುಜುಪಡಿಸಿದರು. ಕೇಲಕರರು ಪ್ರಜಾಹಿತ ಕಾಂಕ್ಷಿಗಳು, ಸಚ್ಚರಿತ್ರರು, ತನ್ನ ಗೌರವಕ್ಕೆ ಪಾತ್ರರು, ಎಂದು ಈ ಗೋಖಲೆಯವರು ಸ್ವಾನುಭವದಿಂದ ಕಂಠೋಕ್ತವಾಗಿ ಹೇಳುವರು. ಇಂಥ ಕೇಲಕರರು ಪ್ರಜಾಹಿತ ವಿರೋಧಿಗಳೆಂದು ಗವರ್ನರರವರು ಪರರ ಹೇಳಿಕೆಯಿಂದ ಸಮಾಧಾನ ಹೊಂದಿ ಅವರನ್ನು ತಿರಸ್ಕರಿಸಿದ್ದಾರೆ. ಇದೇನು ನಿಬಂಧನೆಯ ಮಹಿಮೆ!

ಕೌನ್ಸಿಲ್ ಆಕ್ಟು ಪ್ರಕಾರ ಪ್ರಾಂತಿಕ ನ್ಯಾಯ ವಿಧಾಯಕ ಸಭೆಗಳಿಗೆ ಖಾಸಗಿ ಮೆಂಬರರ ಬಹುಪಕ್ಷವಿರಬೇಕೆಂದು ಕಾನೂನು ಇದೆ. ಇಂಥ ಖಾಸಗಿ ಮೆಂಬರರ ಪೈಕಿ ತಾವು ನೇಮಿಸುವ ಮೆಂಬರರನ್ನು ತಮಗೆ ಯುಕ್ತ ಕಂಡ ರೀತಿ ನೇಮಿಸಿ ಕಾನೂನಿನ ಉದ್ದಿಶ್ಯವನ್ನೇ ನಿಷ್ಫಲಮಾಡುವರು.

ಉತ್ತರಹಿಂದುಸ್ಥಾನದ ಸಂಯುಕ್ತ ಶೀಮೆಯಲ್ಲಿ ಶೇಕಡಾ ೧೪ರಂತೆ ಮುಸಲ್ಮಾನರಿರುವರು. ಅವರ ಪ್ರತಿನಿಧಿಗಳು ಶೇಕಡಾ ೩೦ರಂತೆ ಇರುವರು. ಹೀಗೆ ಮುಸಲ್ಮಾನರಿಗೆ ಸಿಕ್ಕಿದ ಹೆಚ್ಚಿನ ಪ್ರತಿನಿಧಿಗಳ ಮಟ್ಟಿಗೆ ಇತರ ಸಮಾಜದವರಿಂದ ಆ ಪ್ರಯೋಜನವನ್ನು ಸೆಳಕೊಂಡಂತಾಯಿತು. ಮುಸಲ್ಮಾನರಿಗೆ ಪ್ರತ್ಯೇಕ ಪ್ರತಿನಿಧಿಗಳನ್ನು ಕೊಟ್ಟದ್ದಲ್ಲದೆ ಲೋಕಲ್ ಬೋರ್ಡು, ಜಮೀನುದಾರ ವಗೈರೆ ಇತರ ಇಲೆಕ್ಟೋರೇಟುಗಳಲ್ಲಿಯೂ ಅವರಿಗೆ ಪ್ರವೇಶವಿದೆ. ಹೀಗೆ ಅವರಿಗೆ ಅನುಚಿತವಾದ ವಿಶೇಷತ್ವ ಕೊಟ್ಟದ್ದು ಇನ್ನೊಂದು ಸಂಕಟಕ್ಕೆ ಕಾರಣ. ಅವರಿಗೆ ಪ್ರತ್ಯೇಕ ವೋಟರ ಪಟ್ಟಿ ಮಾಡಿದ್ದು ಸಂಗದ ವೈಲಕ್ಷಣ್ಯವಿದೆ.

ಮೇಲೆ ಹೇಳಿದಂತೆ ಮುಸಲ್ಮಾನರ ವ ಇತರ ಪ್ರಜೆಗಳೊಳಗೆ ಭೇದ ನಿರ್ಮಿಸಿದ್ದಾರೆ. ನಿಜವಾಗಿ ಕೌನ್ಸಿಲ ಮೆಂಬರರಿಗೆ ಬೇಕಾದ ಯೋಗ್ಯತೆಯು ಪ್ರಜೆಗಳ ಹಿತವನ್ನು ತಿಳಿದು ಅದನ್ನು ಪ್ರೋತ್ಸಾಹಿಸಿ ರಾಜ್ಯಭಾರ ನಿರ್ವಾಹಕ್ಕೆ ಕೈಕೊಡಲು ಬೇಕಾದ ಸಾಮರ್ಥ್ಯವೇ. ಕಳೆದ ೨೫ ವರುಷಗಳಿಂದ ನಿರಂತರವಾಗಿ ಕೊಂಗ್ರೆಸ್ ವಗೈರೆ ಸಭೆಗಳ ಮೂಲಕವೂ ಇತರ ವಿಧದಿಂದಲೂ ದೇಶಸೇವೆಯನ್ನು ಮಾಡಿದ ವಿದ್ಯಾವಂತ ಗೃಹಸ್ಥರನ್ನು ಮಾತ್ರ ಹೊರಗೆ ಬಿಟ್ಟು ನಿಬಂಧನೆಗಳಿಂದ ದೇಶದಲ್ಲಿ ಸಂತುಷ್ಟಿಯಾದೀತೇ? ವಿದ್ಯೆಯೂ ಜನರ ವಿಶ್ವಾಸವೂ ಯೋಗ್ಯತೆಯಾಗಿರುವುದು. ಪಿತರಾರ್ಜಿತ ಭೂಮಿಯೊಡನೆ ಯೋಗ್ಯತೆ ಬರುವದೆಂತು?

ಬಂಗಾಳಕ್ಕೆ ಎಕ್ಸಿಕ್ಯೂಟಿವ್ ಕೌನ್ಸಿಲುಗಳನ್ನು ಕೊಟ್ಟಂತೆ ಸಂಯುಕ್ತ ಸೀಮೆಯಂತಹ ಇತರ [illegible] ಸೀಮೆಗಳಿಗೂ ಕೌನ್ಸಿಲುಗಳನ್ನು ದಯಪಾಲಿಸಬೇಕೆಂದು ಅಧ್ಯಕ್ಷರು ಒಪ್ಪಿಸಿಕೊಂಡಿದರು.

ಈಗಿನ ಅಸಂತುಷ್ಟಿಗೆ ಅಧ್ಯಕ್ಷರು ಎರಡು ಪ್ರಬಲ ಕಾರಣಗಳನ್ನು ಕೊಟ್ಟರು. ದಾರಿದ್ರ್ಯವು ಮತ್ತು ಅಜ್ಞಾನವು. ದಾರಿದ್ರ್ಯದಿಂದ, ದೇಹ ದೌರ್ಬಲ್ಯದಿಂದ, ರೋಗಗಳುಂಟಾಗಿ ಜನರು ಪ್ಲೇಗು ಮಲೆಜ್ವರಗಳಿಗೆ ಆಹುತಿಯಾಗುವರು. ವಿದ್ಯೆಯೆಂಬದು ಬಡಜನರ ಕೈನಿಲುಕದ ಫಲವಾಗಿದ್ದರಿಂದ ಆರೋಗ್ಯ ಸೂತ್ರವರಿಯಲವಕಾಶವಿಲ್ಲದೆ ಅನೇಕರು ದುಃಖ ಸಂಕಟಗಳಲ್ಲಿ ಬೀಳುವರು. ಸರಕಾರದವರು ಮಾತುಕೊಟ್ಟಂತೆ ಈಗ ಇರುವ ವಿಪರೀತ ಬೇನಸುಧಾರಣೆಗಳನ್ನು ಕುರಿತು ವಿಮರ್ಶಿಸಬೇಕೆಂದೂ ಯುರೋಪಿಯನ್ ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿಯೂ ಜನರಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣದೊರೆಯುವಂತೆ ಏರ್ಪಾಡಾಗಬೇಕೆಂದೂ ಅಧ್ಯಕ್ಷರು ಸೂಚಿಸಿದರು. [illegible] ಯಕ್ಕ ಔದ್ಯೋಗಿಕ ಶಿಕ್ಷಣವನ್ನು ಜನರು ಕೈಸಾರಿಸುವದು ಅವಶ್ಯವೆಂದು [illegible] ಹೇಳಿದರು.

ಸುಕಾಲ ನಡಿಸುವ ಬೇರೆ ವಿಧಗಳಲ್ಲಿ ದೇಶೀಯರನ್ನು ಸಿವಿಲ್ ವ ಮಿಲಿಟರಿ ಇಲಾಖೆಯ ಉಚ್ಚಸ್ಥಾನಗಳಲ್ಲಿ ನೇಮಿಸಿದರೆ ಇವರಿಗೆ ಯುರೋಪಿಯರಿಗಿಂತ ಕಡಿಮೆ ಸಂಬಳ ಕೊಟ್ಟು ಉಳಿಯುವ ಸಿಲುಕನ್ನು ವಿದ್ಯಾಭ್ಯಾಸಕ್ಕೆ ಉಪಯೋಗಿಸಬಹುದು

ಭಾಷಣವನ್ನು ಸಮಾಪ್ತಪಡಿಸುವ ಮೊದಲು ಟ್ರಾನ್ಸವಾಲದ ಭಾರತೀಯರ ದೀನ ಸ್ಥಿತಿಯನ್ನು ಬಣ್ಣಿಸಿ ಇಂಡಿಯಾ ಗವರ್ನಮೆಂಟಿನವರು ಟ್ರಾನ್ಸವಾಲದ ಬಿಳೀ ಜನರನ್ನು ಅವರು ಭಾರತೀಯರನ್ನು ನಡಿಸುವಂತೇ ನಡಿಸಿದರೆ ಭಾರತೀಯರು ಪಡುವ ಅಘೋರ ಅನ್ಯಾಯವು ಕೊನೆಗಾಣಬಹುದೆಂದು ಸೂಚಿಸಿದರು

ಕೊಂಗ್ರೆಸ್ ಸಭೆಯಲ್ಲಿ ಸರ್ವ ಪಕ್ಷದವರು ಕೂಡುವದು ಅವಶ್ಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು ಇದಕ್ಕೆ ಅನುಸಾರವಾಗಿ ಅದರ ನಿಬಂಧನೆಗಳನ್ನು ಬದಲಾಯಿಸಲಿಕ್ಕೆ ಕೊಂಗ್ರೆಸ್ ಸಭೆಯಲ್ಲಿ ಸೂಚನೆಯು ಹೊರಡಲಿಲ್ಲ ಇದು ವಿಷಾದಕರವಾಗಿದೆ.

ಸ್ವದೇಶಿ, ವಂಗವಿಭಾಗ, ಅಶ್ವಿನೀಕುಮಾರ ವಗೈರೆಯನ್ನು ಗಡಿಪಾರು ಮಾಡಿದ್ದನ್ನು ಕುರಿತು ನಿರ್ಣಯಗಳು ಮಂಜೂರಾದವು ಆದರೆ ಕೊಂಗ್ರೆಸ್ಸಿನ ನಿರ್ಣಯಗಳಲ್ಲಿ ಬಹುಶಃ ಎಲ್ಲವೂ ಸರಕಾರಕ್ಕೆ ವಿನಂತಿಗಳಾಗಿದ್ದವಲ್ಲದೆ ಸ್ವಾವಲಂಬನವನ್ನು ಪ್ರೋತ್ಸಾಹಿಸುವ ಪ್ರಜೆಗಳ ಪ್ರಜಾಗ್ರೇಸರರಿಗೆ ಕರ್ತವ್ಯಗಳನ್ನು ಸೂಚಿಸುವವುಗಳು ಇರಲಿಲ್ಲವೆನ್ನಬಹುದು ಮತ್ತು ಈ ಕೊಂಗ್ರೆಸ್ ಪ್ರತಿನಿಧಿಗಳಿಗೆಯನ್ನಲು ಅವಕಾಶವಿಲವೆಂಬ ಸಂಗತಿಯನ್ನು ಈ ಮೊದಲೇ ವಿವರಿಸಿದ್ದೇವೆ ಇನ್ನು ಮುಂದೆಯಾದರೂ ಇತ್ತಂಡಗಳು ಕೂಡಿ ಕೊಂಗ್ರೆಸು ಮುಂಚಿನ ಖ್ಯಾತಿಯನ್ನು ಹೊಂದುವಂತೆಯೂ ಪ್ರಜಾಶಿಕ್ಷಣ ಮೂಲಕ ಸ್ವಾವಲಂಬನವನ್ನು ಶಾಶ್ವತಃ ಜನರಿಗೆ ಕಲಿಸುವಂತೆಯೂ ಏರ್ಪಾಡು ನಡೆಯುವದ್ದರೆ ಕೊಂಗ್ರೆಸು ತಪತಿಯಲ್ಲಿ ಮುಣುಗಿತೆಂತಲೇ ಭಾವಿಸಬೇಕು

ಲಾಹೋರ ಔದ್ಯೋಗಿಕ ಪರಿಷದ.

ಈ ಪರಿಷದವು ಕಳೆದ ತಿಂಗಳ ೩೦ನೇ ತಾರೀಖು ಗುರುವಾರ ಲಾಹೋರ ಕೊಂಗ್ರೆಸು ಸದನದಲ್ಲಿ ನೆರೆಯಿತು ದರ್ಭಾಂಗದ ಮಹಾರಾಜರವರು ಅಧ್ಯಕ್ಷರಾಗಿದ್ದರು ಈ ಸಲದ ಪರಿಷದದ ವಿಶೇಷ ಲಕ್ಷಣವೇನಂದರೆ—ಇದು ಸರಕಾರದ ಆಶ್ರಯದಲ್ಲಿ ಏರ್ಪಟ್ಟಿತು. ಇಂತಹ ಸಂಗತಿಯಲ್ಲಿ ಸರಕಾರದ ಔದ್ಯೋಗಿಕ ರಾಜನೀತಿಯ ಕುರಿತು ಮುಚ್ಚುಮರೆಯಿಲ್ಲದೆ ಟೀಕೆ ಮಾಡಲಿಕ್ಕೆ ಜನರಿಗೆ ಬಾಧಕವಾದರೂ ಆದರೂ ಆಮಂತ್ರಣ ಸಭೆಯ ಅಧ್ಯಕ್ಷರಾದ ಲಾಲಾ ಹರಿಕೃಷ್ಣ ಲಾಲ ಪರಿಷದದ ಅಧ್ಯಕ್ಷರು ಸರಕಾರಕ್ಕೆ ಕೆಲವು ಸೂಚನೆಗಳನ್ನು ಕೊಟ್ಟರು ಈ ಮಹಾನುಭಾವರು ವಿವೇಕಶಾಲಿಗಳೂ ಬ್ರಿಟಿಷ್ ರಾಜ್ಯ ಪಕ್ಷಪಾತಿಗಳೂ ಇಂದ್ರ ಸರಕಾರದವರು ಒಪ್ಪಿಕೊಳ್ಳಬೇಕು. ಇಂತಹರ ವಿನಂತಿಯನ್ನು ಸಭೆಯಲ್ಲಿ ಹಾಜರಿದ್ದ ಪಂಜಾಬ ಶೀಮೆಯ ಗವರ್ನರ ಸಾಹೇಬರು ಲೂಯಿಸ್ ಡೇನರವರು ಅಂಗೀಕರಿಸದಿರರೆಂದು ನಂಬಿದ್ದೇವೆ

ತನ್ನ ಸ್ವಾಗತ ಭಾಷಣದಲ್ಲಿ ಲಾಲಾ ಹರಿಕೃಷ್ಣರು ಪರಿಷದದ ಮಾರ್ಗದಲ್ಲಿ ಒಂದೆರಡು ಬದಲಾವಣೆಗಳನ್ನು ಸೂಚಿಸಿದರು ಈಗ ಈ ಪರಿಷದವು ಕೊಂಗ್ರೆಸು ತೀರಿದ ನಂತರ ಅದೇ ಸಭಾಮಂದಿರದಲ್ಲಿ ಒಂದು ದಿವಸದಲ್ಲಿ ನೆರೆದು ತೀರುವದು ಅಂದರೆ ಔದ್ಯೋಗಿಕ ಪರಿಷದಿಗೆ ಅದರ ವಿಶೇಷತ್ವಕ್ಕೆ ತಕ್ಕಂತೆ ಸ್ಥಾನ ದೊರೆಯುವದಿಲ್ಲ ಆದ ಕಾರಣ ಪರಿಷದವನ್ನು ದಶಂಬರ ರಜೆಯ ಬದಲಿಗೆ ಈಸ್ಟರ್ (ಏಪ್ರಿಲ್) ರಜೆಯಲ್ಲಿ ಜರಗಬೇಕೆಂಬದಾಗಿಯೂ ವಸ್ತುಪ್ರದರ್ಶನವನ್ನು ಕೊಂಗ್ರೆಸು ಸಭೆಯ ಬದಲಾಗಿ ಪರಿಷದದ ಅಂಗವಾಗಿ ಏರ್ಪಡಿಸಬೇಕೆಂದೂ ಅಪ್ಪಣೆಕೊಡಿಸಿದರು

ತದನಂತರ ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಕುರಿತು ಪ್ರಸ್ತಾಪಿಸಿ ದೇಶವು ಅಭಿವೃದ್ಧಿಯಾಗುತ್ತಾ ಇರುವದೆಂದು ವಾದಿಸುವ ಸರಕಾರಿಪಕ್ಷದ ಆಧಾರಗಳನ್ನೂ ದೀನದಶೆಯನ್ನೈದುತ್ತಿರುವದೆಂದು ಹೇಳುವ ಪ್ರಜಾಪಕ್ಷಪಾತಿಗಳ ಆಧಾರಗಳನ್ನೂ ಸಭೆಯ ಮುಂದಿಟ್ಟರು ದೇಶದ ಸಾಂಪತ್ತಿಕ ಸ್ಥಿತಿಯು ಸಂದಿಗ್ಧ ವಿಷಯವಾದರೂ ಒಂದು ಸಂಗತಿಯು ನಿರ್ವಿವಾದ ನಮ್ಮ ಸಾಂಪತ್ತಿಕ ವಾತಾವರಣವು ಮಾರ್ಪಟ್ಟಿದೆ ಐಗಳ ಶಾಲೆಗಳು ಕೊಲೇಜುಗಳಾಗಿವೆ ದೇವಾಲಯಗಳ ಸ್ಥಿತಿ ಬದಲಿದೆ. ಅನಾಥರು, ದುರ್ಬಲರುಗಳಿಗೆ ಮುಂಚಿನ ಆಶ್ರಯವಿಲ್ಲ ಮಕ್ಕಳಿಗೆ ವಿದ್ಯೆ ಪ್ರಿಯವಾಗಿದೆ ಧಾನ್ಯ ದವಸ, ಮುಂತಾದ ಎಲ್ಲಾ ಜೀವನದ ತಪಸೀಲುಗಳ ಕ್ರಯವೇರಿದೆ ಜನರ ಜೀವನ ರೀತಿಯೂ ಬದಲಾಗಿಯದೆ. ಈ ಮಾರ್ಪಾಟಗಳು ನಮ್ಮ ಶುಭಕ್ಕೆ ಪರಿಣಮಿಸಬೇಕಾದರೆ ನಾವು ಜಾಗರೂಕತೆಯಿಂದಲೂ ವಿಚಾರದಿಂದಲೂ ವರ್ತಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಆಣ್ಕರು ಜನರ ಸಾಂಪತ್ತಿಕ ಸ್ಥಿತಿಗೆ ಹೆಚ್ಚಿನ ತಾತ್ಪರ್ಯ ಕೊಡುವರು. ತಮ್ಮ ಆದಾಯವನ್ನು ಮುಕ್ಕಾಲುಪಾಲು ಈ ವಿಷಯಕ್ಕೆ ವಿನಿಯೋಗಿಸುವರು. ಯಾಕಂದರೆ, ಸರಕಾರದವರು ತಮ್ಮ ಪ್ರಜೆಗಳ ಔದ್ಯೋಗಿಕ ಸ್ಥಿತಿಯನ್ನು ಊರ್ಜಿತಕ್ಕೆ ತರುವಲ್ಲಿ ಪ್ರಬಲಕರ್ತೃಗಳು. ಲಾಲಾರವರು ಇನ್ನೂ ಹೇಳಿದ್ದೇನಂದರೆ:—ಸರಕಾರದ ಸಹಾನುಭೂತಿ ವಿನಹಾ ಸಾಂಪತ್ತಿಕ ವಿಷಯಗಳಲ್ಲಿ ಜನರಿಗೆ ಕಾಲಗತಿಗನುಕೂಲವಾಗಿ ವರ್ತಿಸಲಸಾಧ್ಯ. ಅಂತಹ ವರ್ತಿಸಲಸಾಧ್ಯವಾದ ಜನರು [illegible]
[illegible]

ಸಭಾಧ್ಯಕ್ಷ ದರ್ಭಾಂಗ ಮಹಾರಾಜರು ಪ್ರಥಮತಃ ಈ ದೇಶದ ಮುಖ್ಯ ಕೈಗಾರಿಕೆಗಳನ್ನು ಕುರಿತು ಪ್ರಸ್ತಾಪಿಸಿದರು. ಪ್ರಾಮುಖ್ಯವಾದ ಕೃಷಿಯ ಉತ್ಕರ್ಷೆಯ ಬಗ್ಗೆ ಸರಕಾರದವರು ಮೂಲ ಶಿಕ್ಷಣದೊಂದಿಗೆ ಕೃಷಿಯ ಮಾಹಿತಿಯನ್ನು ಮಕ್ಕಳಿಗೆ ದೃಷ್ಟಾಂತ ಮೂಲಕ ಕೊಡಿಸಬೇಕೆಂದು ಸೂಚಿಸಿದರು ಇಂತಹ ಶಿಕ್ಷಣವನ್ನು ಉಚಿತವಾಗಿ ಕೊಟ್ಟರೆ ಪ್ರಜೆಗಳಿಗೆ ಮಹಾ ವರದಾನವಾದೀತೆಂದು ನಂಬಿದ್ದೇವೆ.

ಮೂಲದ ಕೈಗಾರಿಕೆಯನ್ನು ಉತ್ಕರ್ಷಕ್ಕೆ ತಂದರೆ ಅದರೊಂದಿಗೆ ಅದಕ್ಕೆ ಸಂಬಂಧಪಟ್ಟ ವಿಧನು ಎಷ್ಟೆ ತಯ್ಯಾರಿಸುವವು. ವಿಧನುಗೊಬ್ಬರ, ಹೀಪಾಯಿ ಕೈಗಾರಿಕೆ, ಸ್ಟೀಮ್ ಬೋಲರ್ರುಗಳ ಕೈಗಾರಿಕೆ ಮೊದಲಾದ ಇತರ ಉದ್ಯೋಗ ವ್ಯಾಪಾರಗಳು ಏಳುವವು ನೇಯಿಗೆಯ ಕೈಗಾರಿಕೆಯು ಪ್ರಸರುಳ್ಳದಿರುತ್ತಿದ್ದರೂ ಅದರ ವಿಕಾಸಕ್ಕೆ ಇನ್ನೂ ಅವಕಾಶವಿದೆ ೧೮೬೦ರಲ್ಲಿ ಇಂಡ್ಯಾದಲ್ಲಿ ೮೬೦೦ ಮಗ್ಗಗಳಿದ್ದವು. ಈಗ ೩೦,೦೦೦ ಆಗಿವೆ ಆದರೆ ಇಲ್ಲಿ ಬೆಳೆಯುವ ನಾರಿನ ಅರ್ಧಾಂಶವು ಪರದೇಶಕ್ಕೆ ನೇಯದೆ ಹೋಗುವದು

ಇಂಡ್ಯಾದ ಗಣಿಗಳಲ್ಲಿ ಹೇರಳ ಕಲ್ಲಿದ್ದಲಿದೆ, ಕಬ್ಬಿಣ ಮ್ಯಾಂಗನೀಸ್, ಮಣ್ಣೆಣ್ಣೆ ಮೊದಲಾದ ಹಲವು ಖನಿಜಗಳಿವೆ ಆದರೆ ಇವು ನಮ್ಮ ಕೈಸಾರಬೇಕಾದರೆ ಇಲ್ಲಿಯ ಯುವಕರಿಗೆ ಅವಶ್ಯವಿರುವ ಶಾಸ್ತ್ರ ಶಿಕ್ಷಣವನ್ನು ಕೊಡಿಸಬೇಕು.

ಇತರ ಉದ್ಯೋಗಗಳ ಕುರಿತ ಪ್ರಸ್ತಾಪಿಸುವಾಗ ಅಧ್ಯಕ್ಷರು ಕೊಟ್ಟ ಸೂಚನೆಯು ಸರಕಾರದವರ ಲಕ್ಷ್ಯಕ್ಕೆ ತರತಕ್ಕದ್ದಾಗಿದೆ ಹಿಂದುಸ್ಥಾನದಲ್ಲಿ ಯಂತ್ರದ ಸಹಾಯವಿಲ್ಲದೆ ಕೈಯಿಂದಾಗುವ ವಿಚಿತ್ರತರ ಸಾಮಾಗ್ರಿಗಳಿವೆ ಇವುಗಳಿಗೆ ಅಮೇರಿಕ, ಯೂರೋಪ ಖಂಡಗಳಲ್ಲಿ ಬಹಳ ಗಿರಾಕಿಗಳಿರುವರು ಆದರೆ ಹಳ್ಳಿಹಳ್ಳಿಗಳ ಚಿತ್ರಿಕರಿಗೆ ಅಷ್ಟು ದೂರದ ವ್ಯಾಪಾರವು ನಿಲುಕುವದಿಲ್ಲ. ಈ ಬಗ್ಗೆ ಸರಕಾರದವರು ಪರದೇಶಗಳಲ್ಲಿರುವ ತಮ್ಮ ಬ್ರಿಟಿಷ್ ರಾಯಭಾರಿಗಳ ಕಾರ್ಯಾಲಯಕ್ಕೆ ತಾಗಿ ಒಂದು ಭಾರತೀಯ ವಸ್ತುಸಂಗ್ರಹವನ್ನು (ಮ್ಯೂಜಿಯಮ್) ಸ್ಥಾಪಿಸಿದರೆ ಅಲ್ಲಿಯ ಜನರಿಗೆ ವಸ್ತುಗಳ ಪರಿಚಯವೂ ಅವು ಎಲ್ಲಿ ದೊರಕುವವೆಂಬ ಮಾಹಿತಿಯೂ ಆಗುವದು.

ಅಧ್ಯಕ್ಷರು ಭಾಷಣಾಂತ್ಯದಲ್ಲಿ ಹೇಳಿದ ವಿಷಯವು ಸರಕಾರಕ್ಕೂ ಜನರಿಗೂ, ಹಿಂದುಗಳಿಗೂ, ಮುಸಲ್ಮಾನರಿಗೂ ಪ್ರಿಯವಾಗಿರುವದು ಪ್ರಜೆಗಳ ಸಾಂಪತ್ತಿಕಸ್ಥಿತಿಯನ್ನು ಬಲಗೊಳಿಸಿ ಪ್ರತಿಯೊಂದು ಕುಟುಂಬದಲ್ಲಿ ಸಂತುಷ್ಟಿಯನ್ನೂ ಶಾಂತಿಯನ್ನೂ ಸ್ಥಾಪಿಸುವ ತೃಪ್ತಿಗಿಂತ ಪವಿತ್ರಕರ ಪುಣ್ಯವಿಲ್ಲ ಹಿಂದುಗಳೂ ಮುಸಲ್ಮಾನರೂ ತಮ್ಮ ಮಾತೃಭೂಮಿಯ ಮೇಲಿರುವ ವಾತ್ಸಲ್ಯದಿಂದ ಉದ್ದೀಪ್ತರಾಗಿ ಈ ಕಾರ್ಯವನ್ನು ಕೈಕೊಳ್ಳತಕ್ಕದ್ದು ಇದೇ ಭಾರತೀಯ ಜನಾಂಗ ನಿರ್ಮಾಣಕ್ಕೆ ದಾರಿ. ಸರಕಾರದವರೂ ಈ ಮಹಾ ಕಾರ್ಯಕ್ಕೆ ಕೈಕೊಟ್ಟು, ಪ್ರತಿಯೊಂದು ಮನೆಯಲ್ಲಿ ತೃಪ್ತಿಯನ್ನು ಬೆಳಗಾಗಿಸಿದರೆ ರಾಜನಿಷ್ಠೆಯು ಬಲಗೊಂಡು ರಾಜ್ಯಭಾರವು ಸುಲಭವಾಗುವದಲ್ಲವೇ?

ಗ್ರಾಮ್ಯ ಬ್ಯಾಂಕುಗಳು ಯಾನೆ ಪರಸ್ಪರ ಸಹಾಯಕ ಸಂಘಗಳು.

1 ನಮ್ಮ ಸಾಹಸದಿಂದ ಜನರ ದಾರಿದ್ರ್ಯವನ್ನು ದೂರಪಡಿಸಲಿಕ್ಕೆ ಒಂದು ಮಹತ್ತಾದ ಕಾರ್ಯವು ಆಗುವಂಥಾದ್ದು ಇದೆ ಅದು ಯಾವುದೆಂದರೆ—ಬಡ ವ್ಯವಸಾಯಗಾರರು ಯಾವಾಗಲೂ ಸಾಲದಲ್ಲಿದ್ದು ಕಷ್ಟಪಡುತ್ತಿರುವರು ಅಂಥವರಿಗೆ ಈ ಅನುಚಿತ್ಯವಾದ ಸಂಕಷ್ಟದಿಂದ ತಪ್ಪಿಸಲೋಸುಗ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವದೇ ಆಗುತ್ತದೆ ಇದೇ ಸಂಸ್ಥಾನದ ಪೈಕಿ ನಮ್ಮದು ಅತೀ ಬಡ ಜಿಲ್ಲೆಯಾಗಿರುತ್ತದೆ ನಮ್ಮ ವರ್ಗದಾರರ ಪೈಕಿ ಹೆಚ್ಚು ಜನರಿಗೆ ಸರಕಾರಿ ತೀರ್ವೆ ಕಳೆದು ಉಳಿಯುವ ಹುಟ್ಟುವಳಿಯು ಜೀವನಕ್ಕೆ ಸಾಕಾಗುವದಿಲ್ಲ. ಬೇಸಾಯಗಾರರ ಸ್ಥಿತಿ ಯಾದರೋ ಒಳ ಬೆಳಸಿದರೆ ಪ್ರತಿ ವರ್ಷದಲ್ಲಿಯೂ ಕನಿಕರ ಉಂಟಾಗದೆ ಇರಲಾರದು ನಮ್ಮ ದೇಶದ ಅಭಿವೃದ್ಧಿಯು ಬೇಸಾಯಗಾರರ ಮೇಲೆಯೇ ಹೊಂದಿದೆ. ಆದುದರಿಂದ ಅವರ ದುರವಸ್ಥೆಯನ್ನು ನಿವಾರಿಸಲು ತಕ್ಕ ಉಪಾಯಗಳನ್ನು ಕಂಡು ಹಿಡಿಯುವದು ನಮ್ಮ ಕರ್ತವ್ಯವಾಗಿದೆ ತಮ್ಮ ಕಾರ್ಯವನ್ನು ಮುಂದರಿಸಲಿಕ್ಕೆ ಹೆಚ್ಚು ಕಡಿಮೆ ಎಲ್ಲಾ ಬೇಸಾಯಗಾರರಿಗೆ ಸಾಲಪಡಕೊಳ್ಳುವ ಅಗತ್ಯ ಬೀಳುತ್ತದೆ. ಆವಾಗ ಬೀಜ ಗೊಬ್ಬರ ಉಳುವದಕ್ಕೆ ಎತ್ತುಗಳು ಮುಂತಾದ್ದನ್ನು ಕೊಂಡುಕೊಳ್ಳಲಿಕ್ಕೂ ಬೇರೆ ಅನೇಕ ಕೆಲಸಗಳಿಗೂ ಹಣ ಬೇಕಾಗುತ್ತದೆ. ಹೀಗೆ ಬೇಕಾದ ಹಣವು ತಮ್ಮ ಕೈಯಲ್ಲಿಯೇ ಒದಗುವ ಜನರು ಬಹಳ ಕಡಿಮೆ; ಹೀಗಾಗಿ ಅವರು ಸಾಲಪಡಕೊಳ್ಳಬೇಕಾಗುತ್ತದೆ ಮತ್ತು ಆ ರೀತಿ ಪಡಕೊಳ್ಳುವ ಸಾಲಕ್ಕೆ ಹೆಚ್ಚಾಗಿ ಅವರು ಬಹಳ ಹೆಚ್ಚಿನ ದರದ ಬಡ್ಡಿಯನ್ನು ಕೊಡಬೇಕಾಗುತ್ತದೆ. ಬೇಸಾಯಗಾರರು ಬಡವರಾದಷ್ಟು ಹೆಚ್ಚಾಗಿ ಬಡ್ಡಿಯ ದರವು ಹೆಚ್ಚುತ್ತದೆ. [illegible]
[illegible]

ಆದರೆ, ಅವರು ಕೇಡಾಬಟ್ಟೆ ಸಾಲಮಾಡದಂತೆ ಪ್ರತಿಬಂಧಿಸಲೂ ಒಬ್ಬೊಬ್ಬನಿಗೆ ಸಾಧ್ಯವಾಗದ ಅನೇಕ ಜನರ ಒಗ್ಗಟ್ಟಿನಿಂದ ಸಿಕ್ಕುವ ಪ್ರಯೋಜನಗಳು ಅವರಲ್ಲಿ ಪ್ರತಿ ಒಬ್ಬನಿಗೂ ಸಿಕ್ಕುವಂತೆ ಈ ಪರಸ್ಪರ ಸಹಾಯಕ ಸಂಘವು ಸ್ಥಾಪಿಸುವಂಥಾದ್ದು

2 ಎಲ್ಲಾ ಬೇಸಾಯಗಾರರ ಹತ್ತರ ಹಾಸಿಗೆ ಅಡಿಯಲ್ಲಾಗಲೀ ಒಲೆಯ ಅಡಿಯಲ್ಲಾಗಲೀ ಗೋಡೆಯ ಒಳಗೆ ಆಗಲೀ ಅವರ ಮನೆಗಳಲ್ಲಿ ಯಾವದಾದರೊಂದು ಕಡೆಯಲ್ಲಿ ಕಿಂಚಿತ್ತಾದರೂ ಹಣವು ಹೂಣಿಟ್ಟದ್ದು ಇದ್ದೇ ಇರುವದು. ಆ ಹಣವು ಬೇಸಾಯದ ಅಡಚಣೆಗಳಿಗೆ ಸಾಕಾಗುವದಿಲ್ಲ ಮತ್ತು ಹ್ಯಾಗೂ ಸಾಲಪಡಕೊಳ್ಳಬೇಕೆಂತಾದ್ದರಿಂದ ಅದು ಆಪತ್ಕಾಲದಲ್ಲಿ ಬೇಕಾದೀತೆಂಬ ಗ್ರಹಿಕೆಯಿಂದ ಆ ಹಣಕ್ಕೆ ಮುಟ್ಟದೇನೇ ಇಟ್ಟುಕೊಂಡು ಸಾಕಷ್ಟು ಹಣವನ್ನು ಸಾಲವಾಗಿಯೇ ಪಡಕೊಳ್ಳುವರು ಅನೇಕ ಸಂಗತಿಗಳಲ್ಲಿ ಹಣವನ್ನು ಹೂಣಿಟ್ಟವರು ಅದು ಹೂಣಿಟ್ಟ ಜಾಗವನ್ನು ಯಾರಿಗಾದರೂ ಹೇಳದೇನೇ ಸತ್ತುಹೋಗಿ ಆ ಹಣವು ನಷ್ಟವಾಗುವದು ಇಂಥಾ ಹಣವು ನಂತರ ಸಿಕ್ಕಿದರೆ ಇದಕ್ಕೇನೇ "ಕೊಪ್ಪರಿಗೆ ಸಿಕ್ಕಿತು" ಎಂಬದಾಗಿ ಜನರು ಸರ್ವಸಾಧಾರಣವಾಗಿ ಅನ್ನುತ್ತಾರೆ

3 ಗ್ರಾಮ ಬ್ಯಾಂಕಿನ ಉದ್ದಿಶ್ಯಗಳು ಎರಡು ಮೊದಲನೇದು ಯಾವದೆಂದರೆ - ಬೇಸಾಯಗಾರನಿಗೆ ಗ್ರಾಮದಲ್ಲಿ ಸಾಹುಕಾರರು ತೆಗದುಕೊಳ್ಳುವ ಬಡ್ಡಿಗಿಂತಲೂ ಕಡಿಮೆ ದರದಲ್ಲಿ ಬಡ್ಡಿಗೆ ಹಣವು ಸುಲಭ ರೀತಿಯಲ್ಲಿ ಸಿಕ್ಕುವಂತೆ ಮಾಡುವದೇ ಆಗಿರುತ್ತದೆ ಎರಡನೇದು (ಇದು ಮುಖ್ಯವಾದ್ದೆಂತ ಹೇಳಬಹುದು) ತಮ್ಮಷ್ಟಕ್ಕೇನೇ ಸ್ವಲ್ಪ ಹಣವನ್ನಾದರೂ ಬೇಸಾಯಗಾರರು ಉಳಿಸಿಕೊಳ್ಳುವ ರೀತಿ ಯಾವದೆಂತ ಅವರಿಗೆ ಕಲಿಸುವದು ಈ ಎರಡನೇ ಉದ್ದಿಶ್ಯದ ಕುರಿತು ಶುರುವಿಗೆ ಆಲೋಚಿಸೋಣ

4 ಹೆಚ್ಚುಕಡಿಮೆ ಎಲ್ಲಾ ಬೇಸಾಯಗಾರರ ಹತ್ತರ ಸ್ವಲ್ಪ ಹಣವಾದರೂ ಹೂಣಿಟ್ಟದ್ದು ಇರುತ್ತದೆಂತ ಮೇಲೆ ಪ್ರಸ್ತಾಪಿಸಿದ್ದೇವಷ್ಟೆ ಆ ಹಣವು ಬೇಸಾಯದ ಕೆಲಸಗಳಿಗೆ ಏನೊಂದೂ ಉಪಯೋಗಕ್ಕೆ ಬಾರದೆ ಅದರಿಂದ ಏನೂ ಉತ್ಪತ್ತಿ ಇಲ್ಲದೆ ಖಾಲಿ ಇರಬೇಕಾಗುತ್ತದೆ ಆದರೆ ಒಂದೇ ಗ್ರಾಮದ ನಿವಾಸಿಕರಾದ ೧೦ಕ್ಕೆ ಕಡಿಮೆಯಾಗದಷ್ಟು ಜನರು ಒಟ್ಟು ಕೂಡಿ ಒಂದು ಗ್ರಾಮ ಬ್ಯಾಂಕು ಸ್ಥಾಪಿಸಿ ಪ್ರತಿ ಒಬ್ಬನು ಹೂಣಿಟ್ಟ ಪೂರಾಹಣ ಅಥವಾ ಅದರ ಅಂಶವಾದರೂ ಈ ಬ್ಯಾಂಕಿನಲ್ಲಿ ಠೇವಣಾತಿಯಾಗಿ ಇಟ್ಟರೆ ಹೀಗೆ ಜಮೆಯಾಗುವ ಹಣವು ಅವರ ಪೈಕಿ ಒಬ್ಬನಿಗ ಯಾ ಇಬ್ಬರಿಗೆ ಆದರೂ ಅವರಿಗೆ ಬೇಕಾದ ಪೂರಾ ಸಾಲಕೊಡಲಿಕ್ಕೆ ಸಾಕಾಗುತ್ತದೆ ಹಾಗೆ ಸಾಲ ಪಡಕೊಳ್ಳುವ ಒಬ್ಬನು ಯಾ ಇಬ್ಬರು ಅವರು ಪಡಕೊಳ್ಳುವ ಸಾಲಕ್ಕೆ ಬಡ್ಡಿಕೊಡಬೇಕಾಗುವದು ಮತ್ತು ಈ ರೀತಿ ಹಣಗಳನ್ನು ಠೇವಣಾತಿಯಾಗಿಟ್ಟವರಿಗೆ ಅವರ ಹಣಗಳ ಮೇಲೆ ಬಡ್ಡಿ ಸಿಕ್ಕುವದು

5 ಇದರ ಹೊರತು ಈ ೧೦ ಯಾ ೧೫ ಜನರು ಪ್ರತಿ ಪಸ್ಲಿಯಲ್ಲಿ ನೇಗಲು ೧ರ ೫ ರೂ ೧೦ ಶೇರು ಬತ್ತದ ಪ್ರಕಾರ ಅಥವಾ ೧ಯಾ ೨ರೂಪಾಯಿಯಂತೆ (ಇದು ಅನುಕೂಲತೆಗೆ ಸರಿಯಾಗಿ ನಿರ್ಣಯಿಸಬೇಕು) ಪ್ರತಿ ಒಬ್ಬನು ಕೊಡಬೇಕೆಂತ ನಿರ್ಣಯಿಸಿಕೊಂಡರೆ ಬ್ಯಾಂಕಿನಲ್ಲಿ ಅವರೆಲ್ಲರಿಗೂ ಬೇಕಾದಷ್ಟು ಹಣವು ಜಮೆಯಾಗುವದು ಮತ್ತು ಇತರರಿಂದ ಹೆಚ್ಚಿನ ದರದ ಬಡ್ಡಿಯಿಂದ ಅವರು ಸಾಲಪಡಕೊಳ್ಳುವ ಅಗತ್ಯ ಎಂದೆಂದಿಗೂ ಬೀಳಲಾರದು ಅವರು ಠೇವಣಾತಿಯಾಗಿ ಇಡುವ ಹಣದ ಮೇಲೆ ಹ್ಯಾಗೂ ಬಡ್ಡಿ ಸಿಕ್ಕುತ್ತದೆ ಯಾವದಾದರೂ ಸಂದರ್ಭದಲ್ಲಿ ಹಣ ಅಗತ್ಯ ಉಂಟಾದರೆ ಅದನ್ನು ಅವರು ವಾಪಸು ಪಡಿಯಬಹುದು ಆದರೆ ಪ್ರಥಮದ ೫ ವರುಷಗಳಿಗೆ ಹಣವನ್ನು ಠೇವಣಾತಿ ಕಟ್ಟುತ್ತಲೇ ಬರುವದು ಉತ್ತಮ ಯಾಕಂದರೆ, ಹಾಗೆ ಮಾಡಿದರೆ ಕಾಲಕಾಲಕ್ಕೂ ಹಣವು ಸ್ವಲ್ಪ ಸ್ವಲ್ಪವಾದರೂ ಉಳಿಸುವಂತೆ ಬೇಸಾಯಗಾರರಿಗೆ ಅಭ್ಯಾಸವಾಗುತ್ತದೆ ಆ ರೀತಿ ಠೇವಣಾತಿ ಇಟ್ಟ ಹಣವು ಬ್ಯಾಂಕಿನ ಹೊರಗೆ ವಿನಿಯೋಗಿಸಲ್ಪಡುವದಿಲ್ಲ ಅದು ಬ್ಯಾಂಕಿನ ಮೆಂಬರರಿಗೇನೇ ಅಗತ್ಯ ಬಿದ್ದಂತೆ ಖರ್ಚಿಗೆ ಸಾಲವಾಗಿ ಕೊಡುವದಕ್ಕೋಸ್ಕರ ಉಪಯೋಗಿಸಲ್ಪಡುತ್ತದೆ ಸಾಲ ಪಡಕೊಳ್ಳುವ ಮೆಂಬರನು ಬಡ್ಡಿ ಕೊಡಬೇಕೆಂಬದು ಹೇಳಬೇಕಾಗಿಲ್ಲ ಸಾಲದ ಹಣಕ್ಕೆ ರೂಪಾಯಿ ೧ಕ್ಕೆ ತಿಂಗಳು ೧ರ ೩ಪೈಗಳ ಪ್ರಕಾರ ಸೇಕಡಾ ೧೨॥ರ ದರದಲ್ಲಿ ಬಡ್ಡಿಯನ್ನು ಬ್ಯಾಂಕಿನವರು ವಸೂಲು ಮಾಡತಕ್ಕದ್ದು ಠೇವಣಾತಿ ಹಣದ ಮೇಲೆ ಬ್ಯಾಂಕಿನಿಂದ ತಿಂಗಳು ೧ರ ರೂಪಾಯಿ ೧ಕ್ಕೆ ೧ಪೈಯಂತೆ (ಸೇಕಡ ರೂ ೬-೪-೦ರ ದರದಲ್ಲಿ) ಬಡ್ಡಿಯನ್ನು ಕೊಡಬೇಕು ಈ ರೀತಿ ವರುಷ ೧ರ ರೂಪಾಯಿ ೧ರ ಮೇಲೆ ೧ಪೈಯಂತೆ ಬ್ಯಾಂಕಿಗೆ ಮುನಾಫೆ ಉಳಿಯುವದು.

6 ಈ ರೀತಿ ೧೦ ಯಾ ೧೫ ಜನರು ಕೂಡಿ ಒಂದು ಗ್ರಾಮ ಬ್ಯಾಂಕ್ ಮಾಡುವದರಿಂದ ಇನ್ನೊಂದು ಪ್ರಯೋಜನವಿದೆ. ಅದು ಯಾವದೆಂದರೆ:-ಅವರ ಪೈಕಿ ಒಬ್ಬೊಬ್ಬನೇ [illegible] ಎಲ್ಲರೂ ಒಗ್ಗಟ್ಟಾಗಿ ಕಮ್ಮಿ ದರದಲ್ಲಿ ಸಾಲವನ್ನು ಪಡೆ [illegible]

ಕೀರ್ತಿಶೇಷರಾದ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೧ ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ.

ಕವಿ ಎಂಡ್ ಸನ್ಸ್ ಮಂಗಳೂರು, ದ ಕ.

THE NEWZELAND INSURANCE CO, Ltd.

ದಿ. ನ್ಯೂಝೀಲಂಡ್ ಇನ್ಸ್ಯುರೆನ್ಸ್ ಕಂಪೆನಿ ಲಿಮಿಟೆಡ್.

ಮೇರಿನ್ ಡಿಪಾರ್ಟ್‌ಮೆಂಟ್

ಮಂಗಳೂರು ಏಜಂಟರು — ಬಿ ದತ್ತಾತ್ರೇಯ ಎಂಡ್ ಕೊ

ಪ್ರಿಟೊ ಬಿಲ್ಡಿಂಗ್ಸ್ ಮಂಗಳೂರು

ಈ ಕಂಪೆನಿಯಲ್ಲಿ ಯಾವ ಹ್ಯಾಸಿನ ಸ್ಟೀಮರುಗಳಲ್ಲಿಯಾದರೂ ಬೊಂಬಾಯಿ, ಕರಾಚಿ ಕಲ್ಲಿಕೋಟೆ ಕೊಲೊಂಬೊ ಮದ್ರಾಸ್ ಕಲಕತ್ತಾ, ರಂಗೂನ್, ವ ಇತರ ತನ್ಮಧ್ಯವಿರುವ ಬಂದರುಗಳಾಗಲಿ, ವಿಲಾಯತಿ ಬಂದರುಗಳಾಗಲಿ, ಹೋಗುವ ಮ್ಹಾಲಿನ ಮೇಲೆ ಬಹಳ ಸುಲಭವಾದ ದರಗಳಲ್ಲಿ ವಿಮೆ ಇಳಿಸಬಹುದು

ವಿಶೇಷ ಮಾಹಿತಿ ಕಂಪೆನಿಯ ಏಜಂಟರ ಕಚೇರಿಯವರಾದ ಯಲ್ಲೂರು ರಾಮರಾವ್ ಇವರ ಕೂಡೆ ವಿಚಾರಿಸಿದ್ದಲ್ಲಿ ಖಾಸಾ ಬರಕೊಂಡಲ್ಲಿ ತಿಳಿಸಲಾಗುವದು

ಗುವದಕ್ಕಿಂತಲೂ ಅಂಥಾ ಕೂಟದ ಹತ್ತರ ಲೇವಾದೇವಿ ಮಾಡುವದು ತುಂಬಾ ಅನುಕೂಲವಾಗುತ್ತದೆ ಹ್ಯಾಗಂದರೆ (೧) ಆತನು ಲಕ್ಷದಲ್ಲಿ ೧೦ ಯಾ ೧೫ ಖತ್ಯಾತಿಗಳು ಬರಿಯುವದರ ಬದಲಿಗೆ ಒಂದೇ ಖತ್ಯಾತಿಯನ್ನು ಬರದರೆ ತೀರಿತು (೨) ೧೦ ಯಾ ೧೫ ಜನರಿಂದ ಹಣ ವಸೂಲು ಮಾಡುವದರ ಬದಲಿಗ ಒಂದೇ ಕೂಟದಿಂದ ವಸೂಲು ಮಾಡುವದಾಗುತ್ತದೆ ಹೀಗಾಗಿ ವಸೂಲಿಯ ತೊಂದರೆಯೂ ಉಳಿಯುತ್ತದೆ (೩) ದೈವವಶಾತ್ ಹಣದ ಒಗ್ಗೆ ವ್ಯಾಜ್ಯ ಮಾಡುವ ಅಗತ್ಯ ಪಟ್ಟರೆ ೧೦-೧೫ ವ್ಯಾಜ್ಯಗಳು ಮಾಡುವ ಬದಲಿಗೆ ಆತನು ಒಂದೇ ವ್ಯಾಜ್ಯ ಮಾಡಿದರೆ ಸಾಕು ಈ ಎಲ್ಲಾ ಸಂಗತಿಗಳನ್ನು ಸಾಹುಕಾರರಿಗೆ ವಿವರಿಸಿ ಹೇಳಿದರೆ ಅವರು ಇಂಥಾ ಬ್ಯಾಂಕುಗಳಿಗೆ ಸಾಲಕೊಡುವರೆಂಬದಕ್ಕೆ ಸಂದೇಹವಿಲ್ಲ

7 ಈ ಬ್ಯಾಂಕಿನಿಂದ ಸಾಲವನ್ನು ಕೊಡುವದು ಸೇಕಡಾ ೧೨॥ರ ದರದಲ್ಲಿ, ಮತ್ತು ಬ್ಯಾಂಕಿನವರು ಠೇವಣಾತಿ ಹಣವನ್ನು ಪಡಕೊಳ್ಳುವದು ಸೇಕಡಾ ೬।ರ ದರದ ಬಡ್ಡಿಯಲ್ಲಿ ಎಂಬದು ಮೇಲೆ ೫ನೇ ಕಲಮಿನಲ್ಲಿ ವಿವರಿಸಿದೆಯಷ್ಟೆ ಈ ಸಂಗತಿಯು ಚನ್ನಾಗಿ ಮನವರಿಕೆ ಇರಬೇಕು ಹೀಗೆ ಮಾಡುವದರಿಂದ ಬ್ಯಾಂಕಿಗೆ ಲಾಭವಿದೆ. ಸಾಹುಕಾರನಿಂದ ಸಾಲವಾಗಿ ಪಡಕೊಂಡ ಹಣವನ್ನು ಕೂಡ ಇದೇ ರೀತಿ ವಿನಿಯೋಗಿಸಬೇಕು ಸಾಹುಕಾರನಿಂದ ಸೇಕಡಾ ೯।ರ ದರದ ಬಡ್ಡಿಯಲ್ಲಿ ಸಾಲಪಡಕೊಂಡರೆ ಆ ಐವಜನ್ನು ಮೆಂಬರರಿಗೆ ಸಾಲವಾಗಿ ಕೊಡುವಾಗ ಸೇಕಡಾ ೧೨॥ರ ದರದ ಬಡ್ಡಿಯಲ್ಲಿ ಕೊಡಬೇಕು ಈ ರೀತಿ ಬ್ಯಾಂಕಿಗೆ ಉಳಿಯುವ ಮುನಾಫೆಯಿಂದಲೇ ಕ್ರಮೇಣ ಸಾಹುಕಾರನಿಂದ ಪಡದ ಪೂರಾ ಸಾಲದ ಐವಜನ್ನೇ ಸಲ್ಲಾಯಿಸಬಹುದು. ಅದು ಹ್ಯಾಗಂದರೆ - ಬ್ಯಾಂಕಿನವರು ರೂಪಾಯಿ ೪೦೦ ಸೇಕಡಾ ೯।ರ ದರದ ಬಡ್ಡಿಯಿಂದ ಸಾಹುಕಾರನಿಂದ ಸಾಲವನ್ನು ಪಡದು ಮೆಂಬರರಿಗೆ ಸೇಕಡಾ ೧೨॥ರ ದರದ ಬಡ್ಡಿಯಲ್ಲಿ ಸಾಲವಾಗಿ ಕೊಟ್ಟಿದೆ ಎಂತ ನೆನಸುವಾ, ಹೀಗಾದರೆ ಈ ಬಾಬ್ತಿಯಿಂದ ಬ್ಯಾಂಕಿಗೆ ವರುಷ ೧ರ ರೂ ೧೫ ಏನ್ ಮುನಾಫೆ ಉಳಿಯುವದು. ಸಾಹುಕಾರನಿಗೆ ಸಲತಕ್ಕ ಹಣವು ಕಂತುಗಳಿಂದ ಕೊಡುವಂಥಾದ್ದಾದರೆ ಆ ಕಂತುಗಳನ್ನು ಪೂರಾ ಮುನಾಫೆ ಹಣದಿಂದಲೇ ಕೊಡಬಹುದು. ೧೫ ವರುಷಗಳಲ್ಲಿ [illegible] ಈ ರೀತಿ ಪೂರಾ ಸಂದಾಯವಾಗಿ ಬ್ಯಾಂಕಿಗೆ ರೂಪಾಯಿ ೪೦೦ [illegible]

ನೋಟೀಸು

—o—

ದಕ್ಷಿಣಕನ್ನಡಾ ಪುತ್ತೂರು ಡಿಸ್ತ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

1909ನೇ ಇಸವಿ ಕ್ರಮವ್ಯಾಜ್ಯದ ನಂಬ್ರ 504

1909ನೇ ಇಸವಿಯ ಆ್ಯ ಯೆ ಅರ್ಜಿ ನಂಬ್ರ 1131

1. ಶೇಕಬ್ಯಾರಿ— ಮುಗುಳ್ಯ ಹುಶೇನ್‌ಬ್ಯಾರಿ ಮಗ
2. ಸಾವುಂಞಿಬ್ಯಾರಿ— ಪಾಣೆಮಂಗಳೂರು ಅಚ್ಚು ಬ್ಯಾರಿ ಮಗ
3. ಜಕ್ರಿಬ್ಯಾರಿ— ನಾಟಬೆಟ್ಟು ಇದಿನೆಬ್ಯಾರಿ ಮಗ
4. ಅಬ್ದುಬ್ಯಾರಿ— ಬೈಕಂಡಿ ಚಯ್ಯಬ್ಯಾರಿ ಮಗ
5. ಅಬ್ದುಬ್ಯಾರಿ— ಕುಂಞ ಹಸನೆಬ್ಯಾರಿ ಮಗ
6. ಇಚ್ಚಿಬಬ್ಯಾರಿ— ಪಕ್ರೊಬ್ಬಿಬ್ಯಾರಿ ಮಗ
7. ಮೊಯಿದಿನಬ್ಯಾರಿ—ಹಂಜಿಬ್ಯಾರಿ ಮಗ

ವಾದಿರು ಅರ್ಜಿ [illegible]

1ನೆಲಾಗ್ಯಾತು 5ನಂ ವರೆಗಿನವರು [illegible] ಗ್ರಾಮದ ಮುಲರ ಪಟ್ಟಣದಲ್ಲಿ— [illegible] ಕುಳವೂರ ಗ್ರಾಮದಲ್ಲಿ— 7ನೇಯವನು [illegible] ಬೇ[illegible] ಗ್ರಾಮದಲ್ಲಿ ಸಹಾ ಇರುತ್ತಾರೆ

ಮತ್ತು

1. ಅಬ್ಬು ಬ್ಯಾರಿ—ಹುಣಶೆ ಅಡಿ ಇದಿನೆ ಬ್ಯಾರಿ ಮಗ [illegible] ಗಣೆ ಕುಳವೂರು ಗ್ರಾಮ
2. ಅಬ್ದು ಬ್ಯಾರಿ—ಮೊಯಿದಿನ ಬ್ಯಾರಿ ಮಗ—[illegible] ಬಂಬಿಲ ಗ್ರಾಮ
3. ಇದಿನೆ ಬ್ಯಾರಿ—ಮುಲರ ಪಟ್ಟಣ [illegible] ಅರ್ಳಕ್ಕೊಲ ಗ್ರಾಮ
4. ಹಮ್ಮದ ಬ್ಯಾರಿ—ಚಯ್ಯ ಬ್ಯಾರಿ ಮಗ—[illegible] ಬಡಗ ಬೆಳ್ಳೂರು ಗ್ರಾಮ

ಪ್ರತಿವಾದಿರು [illegible]

ಇದರಿಂದ ಯಾವತ್ತು ಜನರಿಗೆ ತಿಳಿಸುವುದು [illegible]

ಅರ್ಳ ಕ್ಕೊಲ, ಕುಳವೂರ—[illegible] ಗರು ಮತ್ತು ಪುತ್ತೂರು ಈ 7 [illegible] ಮಾತರು ಭಟಿಸಿ ಒರುವ [illegible] ಪಟ್ಟೆ ಅರ್ಳ ಕ್ಕೊಲ ಗ್ರಾಮದ [illegible] ಕೆಗೆ ಸದರಿ ಪ್ರತಿವಾದಿರು ಮೋಕ್ಷರಲ್ಲವೆ [illegible] ಡ ವಾದಿರು ತಂದ ಸದರಿ [illegible] ಅಪ್ಪಣೆ ಆಗಬೇಕಾಗಿ [illegible] 1101/1[illegible] [illegible] ದರಿಂದ—ಮೇಲ್ಕಂಡ ವ್ಯಾಜ್ಯದಲ್ಲಿ [illegible] ಬರುವ 1910ನೇ ಇಸವಿ [illegible] 18ನೇ [illegible] 10 ಗಂಟೆಗೆ ಈ ಕೋರ್ಟಿ [illegible] ಮಾಡಕೊಳ್ಳತಕ್ಕದ್ದು

1909ನೇ ಇಸವಿ [illegible] ನಮ್ಮ ದಸ್ಕತೊನೆ ಕೊಡೂಣ್ಣಗದ

(Sd) B Venkat Rao

[illegible] District Munsif

ಬಂಟರ ಯಾನೆ ನಾಡವರ ಸಂಘ [illegible] ಸಂಘದವರ [illegible] ಮೂಲ್ಕಿ [illegible] ದಾ [illegible] ಕೃಷ್ಣಯ ತಿಮ್ಮ ಪ್ಪ ಸೆಟ್ರು [illegible], ಕಾರ್ಯದರ್ಶಿ, ರಾ ಅತ್ತಾವರ [illegible] ಸೆಟ್ರು [illegible], ಇವರನ್ನು ಈ ರೀತಿ ನೇಮಿಸಿರುವದಲ್ಲದೆ, ಇವರೊಂದಿಗೆ ಸಂಘಕ್ಕೆ ರೂ [illegible]ಕಂತೆ ದ್ರವ್ಯ ಸಹಾಯ ಕೊಟ್ಟ 16 ಜನ ಮೆಂಬರೂ ಸಂಘದವರಿಂದ [illegible] 5 ಜನ ಮೆಂಬರೂ ಕಾರ್ಯನಿರ್ವಾಹಕ ಕಮಿಟಿಗೆ ನೇಮಕಪಟ್ಟರು ಸಂಘದ ಸ್ಥಾಪಕರಲ್ಲಿ ಒಬ್ಬರಾದ ಗತಿಸಿದ ಅತ್ತಾವರ ಸೀತಾರಾಮ ಶೆಟ್ರ ಮೆಂಬರುತನಕ್ಕೆ ಮುಲ್ಕಿ ರಾ। ರಾಮಕೃಷ್ಣ ಪೂಂಜರನ್ನು ನೇಮಿಸಿರುವರು. ಸಭೆ ವೃತ್ತಾಂತದಲ್ಲಿ ಬೇರೆ ಯಾವುದಾದರೂ ವಿಶೇಷ ವಿಷಯಗಳು ತೋರಿಬರುವದಿಲ್ಲ.

ಬಂಟರ ಯಾನೆ ನಾಡವರ ಸಂಘದವರ ವರದಿಯಲ್ಲಿ ಸಂಘದವರು ನಡಿಸುತ್ತಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವೃತ್ತಾಂತವೇ ಮುಖ್ಯವಾದದ್ದು. ಈ ವಿದ್ಯಾರ್ಥಿ ಭವನದಲ್ಲಿ [illegible]

ಕಡೆಗಳಿಂದ ಬರುವಂಥಾ ಹುಡುಗರ ಸಂಖ್ಯೆಯು ಅಧಿಕವಾಗಿ ಬರುವದರಿಂದ ವಿದ್ಯಾರ್ಥಿ ಭವನಕ್ಕೆ ಬೇಕಾದ ಕಟ್ಟೋಣಗಳನ್ನು ಕಟ್ಟಿಸಲಿಕ್ಕೆ ಸಂಘದವರಿಗೆ ಪ್ರೋತ್ಸಾಹ ಬೇಕಾಗಿರುವುದೆಂಬದಾಗಿ ವರದಿಯಲ್ಲಿ ಹೇಳಿರುವದು ಸಂಘವು ಸ್ಥಾಪಿಸಲ್ಪಟ್ಟು ಕೆಲವು ಸಮಯವಾಯಿತು ಕೊಡುವರೆ ವಾಗ್ದಾನ ಮಾಡಿದ ರೂ. 39,147-8-0 ರಲ್ಲಿ ರೂ 18,544—8—0 ವಸೂಲಾಗಿಯದೆಂತ ತೋರುತ್ತದೆ, ಅಂದರೆ ಸಮ [illegible] ಮೊಬಲಗು ಸಹ ಇಷ್ಟರ ವರೆಗೆ ವಸೂಲಾಗಲಿಲ್ಲ ಸಂಘದವರು ಕೈಕೊಂಡ ವಿದ್ಯಾಭಿವೃದ್ಧಿಯ ಕಾರ್ಯಗಳಲ್ಲಿ ಸಂಘದವರಿಗೆ ಹಣದ ಅಡಚಣೆಯು ಬಹಳವಾಗಿರುವುದರಿಂದ ವಾಗ್ದತ್ತ ಮಾಡಿ [illegible] ತಮ್ಮ ವಾಗ್ದಾನಗಳನ್ನು ಬಹಳ ಸಮಯ ತೆಗಿಯದೆ ಪೂರೈಸುವದಲ್ಲದೆ ತಮ್ಮ ಇತರ [illegible] ಸಂಘದ ಮೆಂಬರರನ್ನಾಗಿ ಮಾಡಿ ಕೊಟ್ಟು ಸಂಘಕ್ಕೆ [illegible] ಕೋರುತ್ತೇವೆ

[illegible] ರೂ 2,963—0—0 ವಸೂಲಾಗಿರುವುದು ಒಟ್ಟಿಗೆ ಈ ತನಕ ರೂ 18,806 [illegible]—2 ವಸೂಲಾಗಿ ರೂ 14,155—8—9 ಖರ್ಚಾಗಿ [illegible] ರೂ 1650—10—5 [illegible]

ಇತ್ತ ತುಸು ನೋಡಿರಿ!!!

ಪ್ರಾಸಾದಿಕ ಗ್ರಂಥವು.

ಕಲಿಯುಗದಲ್ಲಿ [illegible] ಮೊದಲಿನ ಶ್ರೀ ವೈಷ್ಣವ ಭಕ್ತರು [illegible] ಗದ್ಯರೂಪವಾಗಿ ಸುಲಭ [illegible] ಭಕ್ತಿ ಮಹಿಮೆ [illegible] ಮುದ್ರಿತವಾಗಿ [illegible] ಈ ಗ್ರಂಥದ ವಾಚನವೇ [illegible] ತಿಳಿಯಿರಿ

[illegible] ಪ್ರತಿಯ ಕ್ರಯ 12 [illegible] ಮಾತ್ರ—[illegible] ಹತ್ತು ಪ್ರತಿ [illegible] ಕೊಂಡುಕೊಳ್ಳುವವರಿಗೆ [illegible] ಚಲೋ ಕಾದಂಬರಿಯು [illegible]

ಆಪೇಕ್ಷ [illegible] ಈ ಕೆಳಗಿನ ವಿಳಾಸಕ್ಕೆ [illegible]

ಬೋಳಾರ ಬಾಬುರಾವ್,

ಮಂಗಳೂರು

BERNA WATCH COMPANY.

ಬರ್ನಾ ವಾಚು ಕಂಪೆನಿ.

[illegible] ಇದೊಂದೇ ಕಂಪೆನಿ [illegible] ಜವಾಬ್ದಾರಿಯುಳ್ಳ [illegible] ಸಮಯವನ್ನು ಸೂಚಿಸುವ [illegible] ನಮ್ಮ [illegible] ಖಂಡಿತವಾಗಿ [illegible]

ನಮ್ಮ ವೆಕ್ಸಿಮ್' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೮-೦
ನಮ್ಮ 'ನ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್'. ನಿಕಲ್ ಕೇಸಿನಲ್ಲಿ ರೂ ೧೭-೦-೦.
ಬೆಳ್ಳಿ ಕೇಸಿನಲ್ಲಿ ರೂ ೨೧-೦-೦.
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೭-೦-೦.
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸಾ[illegible] ನಲ್ಲಿರುವವು. ವಾಚುಗಳನ್ನು [illegible] ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮೂಲಕ ಕಳುಹಿಸುವೆವು. ನಮ್ಮ [illegible] ಮುಂಬಯಿ [illegible]

ಸ್ವೇಚ್ಛಾ ವ್ಯಾಯಾಮಿಯ ಟೀಕೆಗಳು.

(ನಮ್ಮ ವಾತ್ಮೀದಾರರಿಂದ).

ನಮ್ಮ ಪತ್ತನದ ಹೆಸನು ಸಾರ್ವದಾಹಕಮಾನೀಯವಾಗಿರಲು ಸರ್ವ ಪ್ರಯತ್ನವನ್ನು ಗೈಯುವದು ಈತರ ಸಮುದಾಯಕ್ಕೆ ಸರಕಾರದವರು ಕಾನೂನಿನ ಮೂಲಕ ಒಪ್ಪಿಸಿ ಕೊಟ್ಟ ಧರ್ಮವಾಗಿರುತ್ತದೆ. ಅದರನುಷ್ಠಾನವು ಚೊಕ್ಕವಾಗಿ ನಡಿಯಲು ವೇತನವು [illegible] ಅನೇಕ ಮಂದಿ ಚೇಟರು ಅನುದಿನವೂ ಸೂರ್ಯೋದಯ ಮೊದಲುಗೊಂಡು ಅಸ್ತಮಾನ ಪರಿಯಂತ ಬೀದಿಬೀದಿಗಳಲ್ಲಿ ಸಂಚರಿಸಿಕೊಂಡಿದ್ದು ಬಡವರಿಗೆ ಚನ್ನಾಗಿ ಹೆದರಿಸಿ ತಮ್ಮ ಅಧಿಕಾರದ ಮದವನ್ನು ತೋರ್ಪಡಿಸುವರು. ದೊಡ್ಡವರ ಸಂಗತಿ ಹಾಗಿರಲಿ. ಪತ್ತನದ ದಕ್ಷಿಣಭಾಗದಲ್ಲಿ ಒಹುಜನರು ಅಲೆದಾಡಿಕೊಂಡಿರುವ ದೊಡ್ಡ ಮಾರ್ಗವೂ ಅದರ ಉಭಯ ಪಾರ್ಶ್ವಗಳಲ್ಲಿ ಅನೇಕ ಮನೆಗಳೂ ವರ್ತಕಾಲಯಗಳೂ ಅವೆ. ಹ್ಯೊಗೆ ಬಜಾರ ಸಂಕದ ದಕ್ಷಿಣಕ್ಕಿರುವ ಭೂಖಂಡವು ಹಳಿಯ ಉಪ್ಪಿನಕೋಟೆಯ ವರಿವಿಗೆ ಹೆಚ್ಚಾಗಿ ಮೊಗೇರ ಪಟ್ಟಣವೆನ್ನಿಸಿಕೊಳ್ಳುತ್ತದೆ. ಈ ನಿವಾಸಿಕರ ಮನೆಗಳ ಸುತ್ತುಮುತ್ತು ಎಷ್ಟು ಸುಗಂಧವನ್ನು ನಿರೀಕ್ಷಿಸಬಹುದೆಂಬದು ಸಕಲರು ತಿಳಿದವರೇ. ಇದಕ್ಕೆ ಹೆಚ್ಚಿಗೆಯಾಗಿ ಬೀದಿಯು ಶೃಂಗಾರ ರೂಪವಾಗಿ ಶೋಭಿಸುವ ಇಕ್ಕಡೆ ಅಂಗಡಿಗಳಲ್ಲಿ ಸೂರ್ಯ ಪುಟದಿಂದ ಪವಿತ್ರವಾದ ಮತ್ಸ್ಯಗಳ ರಾಶಿಯು ಸಂಪೂರ್ಣವಾಗಿ ತುಂಬಿಕೊಂಡಿದೆ. ಮೊದಲೇ ನಾತ, ಅದಕ್ಕೆ ದುರ್ಗಂಧವೂ ಕೂಡಿದರೆ [illegible] ಯೋಗಿಸುವ ಪ್ರಯಾಣಸ್ಥರೂ ಆ ಭಾಗದಲ್ಲಿ ವಾಸಮಾಡಿಕೊಂಡಿರುವ ಇತರ ಜನರೂ ಪಡುವ ಸುಖವನ್ನು ಅನುಭವಿ[illegible] ತಿಳಿಯಬೇಕಲ್ಲದೆ, ವರ್ಣನೆಯ ಮೂಲಕ ವ್ಯಕ್ತಪಡಿಸಲು ಸಾಧ್ಯವಾಗದು. ಪತ್ತನದ ಬಹಿರಾವರಣದಲ್ಲಿ ನಿರ್ಜನ ಪ್ರದೇಶದಲ್ಲಿರತಕ್ಕ ಈ ವ್ಯಾಧಿ ರೂಪವಾದ ಪರಿಮಳ ದ್ರವ್ಯವು ಇಂತಹ ನಿಬಿಡ ನಿವೇಶಗಳ ಸ್ಥಾನದಲ್ಲಿ ಒನೇದಿನೇ ನಿವಾಸಿಕರ ಘ್ರಾಣೇಂದ್ರಿಯಗಳಿಗೂ ಅವರ ಆರೋಗ್ಯಕ್ಕೂ ಹಾನಿಯನ್ನುಂಟುಮಾಡಲು ಸ್ಥಾಪನೆಯಾಗಿರುವದು ಬಹಳ ಶೋಚನೀಯವಾಗಿದೆ. [illegible] ವರುಷಗಳ ಹಿಂದೆ ಈ ಪ್ರಶಂಸೆಯು ತಾತರ ಸಭೆಯ ಮುಂದೆ ಚರ್ಚೆಯಾಗಿ ಸಮ್ಮಂಧಪಟ್ಟ ವಾರ್ಡಿನ ತಾತರ ಬಳಿಗೆ ಅವರ ಅಭಿಪ್ರಾಯ ತಿಳಿಯುವಗೋಸ್ಕರ ಕಳುಹಿಸೋಣಾಗಿತ್ತು. ಅದು ಹ್ಯಾಗೆ ಪರಿಣಮಿಸಿತು ಎಂಬದು ಇನ್ನೂ ಜನರಿಗೆ ತಿಳಿದು ಬಂದಿಲ್ಲ. ಆ ತಾತರು ತೀರಿಕೊಂಡು ಎರಡು ವತ್ಸರಗಳಾಗುತ್ತಾ ಬಂತು. ಅವರ ಒಟ್ಟಿಗೆ ಈ ಪ್ರಸ್ತಾಪವು ಮಡಿದುಹೋಯಿತೆನ್ನಬೇಕಾಗುತ್ತದೆ. ಇಷ್ಟು ವಿಚಾರ ಶೂನ್ಯತೆಯ ಮೊಬ್ಬು ತಾತಾಲಯವನ್ನು ಮುಸುಕಿಕೊಳ್ಳಲು ಅವಕಾಶವಾದದ್ದು ಹ್ಯಾಗೆ ಎಂಬ ಪ್ರಸಕ್ತಿಯನ್ನು ತಾತಾಗ್ರೇಸರರ ತೀರ್ಮಾನಕ್ಕೆ ಬಿಡುವದರಿಂದ ಕಲಿಯುಗದಂತ್ಯದತನಕ ಅದು ಮೂಲೆ ಸೇರುವ ಗಂಡಾಂತರವುಂಟಾಗದಂತೆ ನಮ್ಮ ಮಾನ್ಯ ಕಲೆಕ್ಟರ್ ಸಾಹೇಬರು ತಮ್ಮ ಸದ್ವಿವೇಚನಕ್ಕೆ ಈ ಪ್ರಜಾಕ್ಷೇಮಹಾನಿಯ ವಿಷಯವನ್ನು ಬೇಗನೆ ಗುರಿಪಡಿಸಿ ಅನಾವಶ್ಯಕವಾದ ತಾಮಸದಿಂದ ಬರುವ ಕೇಡು ನಿವಾರಣೆಯಾಗಲು ಆಸ್ಪದ ಕೊಡುವರೆಂದು ಕೋರೋಣ. "ಹೊಳ ತನಕ ಓಟ-ಧೊರೆ ತನಕ ನೋಟ" ಎಂಬ ಗಾದೆಯು ಎಷ್ಟೋ ಸದ್ವಿವೇಕಯುಕ್ತವಾದದ್ದು! ಈ ದೊಡ್ಡ ಅಧಿಕಾರಸ್ಥರಿಗೆ ಮಿತಿಮೀರಿದ ಕೆಲಸವದೆ. ಅವರ ಗಮನಕ್ಕೆ ಆಯಾಯ ವಿಷಯಗಳನ್ನು ತರುವಗೋಸ್ಕರ ಪ್ರತ್ಯೇಕವಾಗಿ ಒಬ್ಬ ಕ್ಲಾರ್ಕರು ಅವರ ಕಾರ್ಯಾಲಯದಲ್ಲಿ ನೇಮಕವಾಗಿರುವರು. ಅವರು ಇದೆಲ್ಲ ತಮಗ್ಯಾಕೆ ತಾವು ಸಹ ಇದೇ ಪಟ್ಟಣವಾಸಿಯಾದ ದೆಸೆಯಿಂದ ತಮ್ಮ ಒಳ್ಳಿತಕ್ಕಾಗಿ ವದ್ದಾಡುತ್ತೇವೆಂದು ಧೊರೆಗಳ ಮನಸ್ಸಿನಲ್ಲಿ ತಮ್ಮ ಮೇಲ ಒಂದು ಕಲೆಯು ಬೀಳುವದೇಕೆ ಎಂಬ ಸ್ವಾಭಿಮಾನ ರಕ್ಷಣೋಪಾಯವಾಗಿ ಸ್ವಧರ್ಮಲೋಪವನ್ನೇ ನಡಿಸಿಬಿಡುವದು ಉತ್ತಮವೆಂದು ಯೋಚಿಸಲಿಕ್ಕೆ ಸಾಕು. ಇನ್ನು ಮುಂದಾದರೂ ಹಾಗೆ ತಾಟಸ್ಥ್ಯವನ್ನು ತಾಳದೆ ಪರೋಪಕಾರವು ಪುಣ್ಯವೆಂದು ತಿಳಿಯುವರೆಂದು ಭಾವಿಸುವಾ.

ಭದ್ರಕಾಳಿ

ಸ್ಕಂದಪುರಾಣದ ಬ್ರಹ್ಮೋತ್ತರಖಂಡದ ಪ್ರಕರಣಗಳಲ್ಲಿ ಒಂದಾದ ಶಿವಲೀಲಾಮೃತದ ಮೂರನೇ ಅಧ್ಯಾಯದಲ್ಲಿ ಮುಂಬಾಯಿ ಸಂಸ್ಥಾನದಲ್ಲಿರುವ ಗೋಕರ್ಣ ಮಹಾಬಲೇಶ್ವರ ಪುರಾಣಪ್ರಸಿದ್ಧ ಭದ್ರಕಾಳಿಯ ಉದ್ಭವವು ವರ್ಣಿಸಲ್ಪಟ್ಟಿರುವುದು. ಕಾಮಾಕ್ಷಿ ಕಾಳಿ ಮೊದಲಾದ ಉಮಾದೇವಿಯ ರೂಪಾಂತರಗಳಲ್ಲಿ ಗೋಕರ್ಣಮಹಾಬಲೇಶ್ವರದಲ್ಲಿಯದು ಬಹಳ ಶ್ರೇಷ್ಠವಾದದ್ದಾಗಿರುವುದು. ಯಾಕೆಂದರೆ ಇತರ ಎಲ್ಲಾ ಕಥೆಗಳಲ್ಲಿರುವ ಕಾಳಿ ಅವತಾರರೂಪಗಳು ಕಾಳಿಯ ಒಂದೊಂದಂಗದ ನಿದರ್ಶನಗಳಾಗಿರುತ್ತ, ಗೋಕರ್ಣದಲ್ಲಿ ನೆಲೆಯಾದ ಭದ್ರಕಾಳಿಯ ಪ್ರತಿಬಿಂಬವು ಜಗತ್ತಿನ ಮಹಾಮಾಯೆಯ ಪೂರ್ಣಾಂಗ ಸೂಚಿತವಾಗಿರುವುದು. ಇಲ್ಲಿಂದ ತನಗೆ ಒಲಿದಂಥಾ ಭದ್ರಕಾಳಿಯನ್ನು ರಾವಣನು ಕೋಪದಿಂದ ಅಂಗವಿಚ್ಛಿನ್ನಳಾಗಿಮಾಡಿ ಗೋಕರ್ಣದಿಂದ ದೂರವಿರುವ ಇತರ [illegible] ಒಂದೊಂದು ಅಂಗವನ್ನು ಬಿಸುಟಿರುವನು. ಭದ್ರಕಾಳಿಯು [illegible] ಮಾಡಿರುವದು. [illegible] ಸನಾದ ಗಣೇಶನು ಇಲ್ಲಿ ಶಾಶ್ವತವಾಗಿ ಪ್ರತಿಷ್ಠಿಸಿರುವನು. ಈ ಕಾರಣಗಳಿಂದ ಇಲ್ಲಿಯ ಭದ್ರಕಾಳಿಯ ಅವತಾರರೂಪ ಪೂರ್ಣವಾಗಿದ್ದು ಅತಿ ಪವಿತ್ರವಾಗಿರುವುದು.

ಭದ್ರಕಾಳಿಯು ಗೋಕರ್ಣಕ್ಷೇತ್ರಕ್ಕೆ ಅವತರಿಸಿದ ಪುರಾಣ ಕಥೆಯ ಕೆಲವಂಶವನ್ನು ಈ ಕೆಳಗೆ ಕೊಟ್ಟಿರುವೆವು:—

ರಾವಣನ ತಾಯಿಯು ತನ್ನ ಪುತ್ರನ ಅಭಿವೃದ್ಧಿಬಗ್ಗೆ ಯಾವಾಗಲೂ ಒಂದು ಶಿವಲಿಂಗವನ್ನು ಪೂಜಿಸುತ್ತಲಿದ್ದಳು. ಶಕ್ರನು ಇಂಥಾ ಪೂಜೆಗೆ ಅಭ್ಯಂತರಪಡಿಸಬೇಕೆಂಬ ಉದ್ದಿಶ್ಯದಿಂದ ಈ ಲಿಂಗವನ್ನು ಯಾರಿಗೂ ತಿಳಿಯದ ರೀತಿಯಲ್ಲಿ ಸಮುದ್ರಕ್ಕೆ ಬಿಸಾಡಿಬಿಟ್ಟನು. ರಾವಣನ ತಾಯಿಯು ತನ್ನ ಆರಾಧನೆಯು ಈ ರೀತಿ ಭಗ್ನವಾದದ್ದರಿಂದ ಅನ್ನನೀರು ಸಹಾ ಇಲ್ಲದೆ ಉಪವಾಸ ಬೀಳುವುದನ್ನು ರಾವಣನು ಅರಿತು ತಾಯಿಗೆ ಪರಮೇಶ್ವರನ ಆತ್ಮಲಿಂಗವನ್ನೇ ತಂದುಕೊಡುವೆನೆಂಬ ಭರವಸೆಕೊಟ್ಟು, ಕೈಲಾಸ ಪರ್ವತಕ್ಕೆ ಹೋಗಿ ಅಲ್ಲಿ ಶಿವನ ಕುರಿತು ಘೋರವಾದ ತಪಸ್ಸನ್ನು ಮಾಡಲು ಪ್ರಾರಂಭಿಸಿದನು. ರಾವಣನ ಸ್ವರವು ಬಹಳ ಇಂಪಾಗಿತ್ತು. ದಶಕಂಧರನು ತನ್ನ ತಲೆಯನ್ನು ಕಡಿದು ಅದರ ಚರ್ಮದಿಂದ ಸರಿಗೆಗಳುಳ್ಳ ಸಾರಂಗದೊಡನೆ ಶಿವಸ್ತುತಿಮಾಡಲು, ಪರಮೇಶ್ವರನು ಈತನ ಸ್ವರಮಾಧುರ್ಯದಿಂದಲೂ ಭಕ್ತಿವಿಶೇಷತ್ವದಿಂದಲೂ ಮನಮೆಚ್ಚಿ ಈತನಿಗೆ ಪ್ರತ್ಯಕ್ಷನಾಗಿ ಬೇಕಾದ ವರಗಳನ್ನು ಕೇಳಿಕೊಳ್ಳುವರೆ ಆಜ್ಞಾಪಿಸಿದನು. [illegible] ತನ್ನ [illegible] ಆತ್ಮಲಿಂಗವನ್ನೂ, ತನಗೆ ಮಹೇಶ್ವರ ಪತ್ನಿಯಾದ ಉಮೆಯಷ್ಟು ಸೌಂದರ್ಯವುಳ್ಳ ಕಾಂತೆಯನ್ನು [illegible]ಯಪಾಲಿಸಬೇಕೆಂತ ಬೇಡಿಕೊಂಡನು. ತನ್ನ ಹೃದಯದಲ್ಲಿ ಗರ್ಭಿತವಾಗಿದ್ದ ಕೋಟಿಸೂರ್ಯ ಪ್ರಭಾಮಯವಾದ ಲಿಂಗವನ್ನು ತೆಗೆದುಕೊಟ್ಟು ಲಿಂಗವು ಕೆಳಗಿಟ್ಟಲ್ಲಿ ತೆಗಿಯಲಿಕ್ಕಾಗದೆ ಸ್ಥಿರಸ್ಥಾಯಿಯಾಗಿ ನಿಲ್ಲುವುದರಿಂದ ಅದನ್ನು ಎಲ್ಲಿಯೂ ಕೆಳಗಿಡದೆ ತಾಯಿಯ ಬಳಿಗೇನೆ ಒಯ್ಯಬೇಕೆಂದೂ ಅಪ್ಪಣೆಯಾಯಿತು. ಸರ್ವಸೃಷ್ಟಿ ಸೌಂದರ್ಯಮಯಳಾದ ಉಮಾದೇವಿಯಷ್ಟೇ ಸೌಂದರ್ಯಳಾದವಳು ಯಾರೂ ಇಲ್ಲವೆಂತ ಹೇಳಿದರೂ ಮದಾಂಧನಾದ ರಾಕ್ಷಸಾದಮನು ಕೇಳದಿದ್ದದರಿಂದ ಪತಿವಚನವನ್ನು ಸಲ್ಲಿಸಲಿಕ್ಕೆ ಉಮೆಯು ರಾವಣನೊಡನೆ ಹೊರಡಲಿಕ್ಕೆ ಒಪ್ಪಿ ಆತನ ಬುಜದಲ್ಲಿ ಆಸೀನಳಾಗಿ ಹೋಗುವವಳಾದಳು. ಬವಾನಿ ಪುತ್ರರಾದ ಗಣಪತಿ, ವೀರಬದ್ರ ಮೊದಲಾದವರೂ ಇತರ ದೇವತೆಗಳೆಲ್ಲರೂ ಆಶ್ಚರ್ಯಪಟ್ಟು ಈಶ್ವರನನ್ನು ಕೇಳಿಕೊಳ್ಳಲು ವಿಶ್ವಮಯನಾದ ವಿಷ್ಣುವು ಭವಾನಿ ದೇವಿಯನ್ನೂ ಆತ್ಮಲಿಂಗವನ್ನೂ ರಾವಣನು ಕೊಂಡುಹೋಗದಂತೆ ಉಪಾಯ ಮಾಡುವನಾಗಿ ಅಭಯವಿತ್ತನು. ಹಾಗೆಯೇ ಲಂಕಾಧಿಪತಿಯು ಕೈಯಲ್ಲಿ ಲಿಂಗವನ್ನೂ ಭುಜದಲ್ಲಿ ಉಮೆಯನ್ನೂ ಹಿಡಿದುಕೊಂಡು ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಹೋಗುತ್ತಿರುವಾಗ ಸರ್ವಜ್ಞನಾದ ಶ್ರೀ ವಿಷ್ಣುವು ಒಬ್ಬ ಮುದಿ ಬ್ರಾಹ್ಮಣನ ರೂಪವನ್ನು ತಾಳಿ, ರಾವಣನನ್ನು ಕುರಿತು "ಎಲೇ ರಾವಣನೇ ಬಹಳ ಸೊಗಸುಳ್ಳ ಈ ಕನ್ಯೆಯನ್ನು ಎಲ್ಲಿಂದ ಪಡದಿ, ಇವಳ ರೂಪವನ್ನು ಒಂದು ಸಲ ನೋಡು! ಎಂತ ಹೇಳಿದನು. ರಾವಣನು ಈ ಬ್ರಾಹ್ಮಣನ ಮಾತಿನಿಂದ ಭ್ರಮೆಕೆಟ್ಟು ಭುಜದಲ್ಲಿದ್ದ ಭವಾನಿಯನ್ನು ಕೆಳಗಿಳಿಸಿ ನೋಡಲು ಸೌಂದರ್ಯವೆಲ್ಲವೂ ಅಡಗಿಹೋಗಿ ಬೀಕರ ರೂಪವಿರುವ ಭದ್ರಕಾಳಿಯು ಆತನನ್ನು ತೋರಿಕೊಂಡಳು. ರಾವಣನು ಈ ರೂಪವನ್ನು ನೋಡಿ ಬಿಟ್ಟು ತಿರುಗಿ ಕೈಲಾಸಕ್ಕೆ ಹೋಗಿ ಪರಮೇಶ್ವರನನ್ನು ಕೇಳಿಕೊಂಡನು. ಪರಮೇಶ್ವರನು ಈತನನ್ನು ಸಮಜಾಯಿಸಿ ನಿನಗೆ ತಕ್ಕವ[illegible] ಮಾಯಾಸುರನಲ್ಲಿ ಮಂಡೋದರಿ ಎಂಬ ಹೆಸರಿನವಳು ಜನಿಸುವಳೆಂತ ಹೇಳಿ ಕಳುಹಿಸಿಬಿಟ್ಟನು. ಹೀಗೆ ಆತ್ಮಲಿಂಗವನ್ನು ಹಿಡಕೊಂಡು ಬರುತ್ತಿರುವಾಗ ಜಯದೇವತೆಯಾದ ಗಣೇಶನು ಒಬ್ಬ ದನಮೇಯಿಸುವವನ ರೂಪವನ್ನು ತಾಳಿಕೊಂಡು ಬದ್ರಕಾಳಿಯು ಅವತರಿಸಿದ ಸ್ಥಳದಲ್ಲಿಯೇ ಇದ್ದುಕೊಂಡಿದ್ದನು. ಇಲ್ಲಿ ಬಂದೊಡನೆಯೇ ರಾವಣನಿಗೆ ಮೂತ್ರಶಂಕೆಯನ್ನು ಮಾಡಲು ಬೇಕಾದ್ದರಿಂದ ಲಿಂಗವನ್ನು ಈ ದನಮೇಯಿಸುವವನ ಹತ್ತಿರ ಕೊಟ್ಟು ಮೂತ್ರಶಂಕೆ ಮಾಡಲು ಹೋದನು. ರಾವಣನು ಗೋವಳನು ಹೇಳಿದ ಸಮಯದಲ್ಲಿ ಬರಲಾರದೆ ಹೋದನಾದ್ದರಿಂದ ಲಿಂಗವನ್ನು ಕೆಳಗಿರಿಸಿ ತನ್ನ ದನಗಳು ಉಪವಾಸವಿದ್ದಿರುವವೆಂಬ ನೆವನ ಹೇಳಿ ದನಗಳ ಅತ್ತ ಕಡೆ ಹೋದನು. ಇಷ್ಟರಲ್ಲಿ ರಾವಣನು ಬಂದು ನೋಡಲು ಗೋವಳನು ಓಡಿ ಹೋದದ್ದನ್ನು ನೋಡಿ ಆತನನ್ನು ಹಿಂಬಾಲಿಸಿ ಹೋಗಲು ಆತನು ಮಾಯಕನಾಗಿ ಆತನ ದನಗಳು ಒಂದೊಂದಾಗಿ ಭೂಮಿಯನ್ನು ಹೊಕ್ಕಿದವು. ಕಡೇ ಒಂದು ದನವು ಭೂಮಿಯೊಳಗೆ ಪ್ರವೇಶಿಸಿ ರಾವಣನು ಅಲ್ಲಿಗೆ ಬರುವಷ್ಟರೊಳಗೆ ಅದರ ಕಿವಿಗಳು ಮಾತ್ರ ಮೇಲಿದ್ದವು. ಈ ಕಿವಿಗಳನ್ನು ಹಿಡಿದು ಎಷ್ಟು ಎಳದರೂ ಅಸಾಧಾರಣ ದನವಾದ್ದರಿಂದ ಅದು ಮೇಲಕ್ಕೆ ಬಾರದೆ ಹೋಯಿತು. ಆದರಿಂದ ಗೋಕರ್ಣವೆಂಬ ಹೆಸರು ಆ ಸ್ಥಳಕ್ಕೆ ಬಂತು. ಲಿಂಗವು ಅಲ್ಲಿಯೇ ಸ್ಥಿರಸ್ಥಾಯಿ ನಿಂತಿತು. ರಾವಣನು ಇದನ್ನು ಕಿತ್ತು ತೆಗಿಯಲಿಕ್ಕೆ ಎಷ್ಟು ಪ್ರಯತ್ನಿಸಿದರೂ ಅದು ಬಾರದೆಹೋದದ್ದರಿಂದ ಅದು ಮಹಾಬಲೇಶ್ವರ ಎಂಬ ಹೆಸರಿನಿಂದ ಈ ದಿನವೂ ಗೋಕರ್ಣದಲ್ಲಿ ಶೋಭಿಸುತ್ತಿರುವುದು. ರಾವಣ, ಕುಂಭಕರ್ಣ, ವಿಭೀಷಣರು ಇದನ್ನು [illegible] ಲಂಕಾ[illegible] ಅಲ್ಲಿಗೆ ಬರುತ್ತಲಿದ್ದರು.

ವಿದೇಶ ವೃತ್ತಾಂತ

ಇಂಗ್ಲಾಂಡದಲ್ಲಿ ಒಬ್ಬ ಭಾರತೀಯನು ಮದನಲಾಲ ಢಿಂಗ್ರನ ಕೊನೆಯ ಖತ್ತ ಕರಾರಿಗಳನ್ನು ತನಗೆ ಬಿಟ್ಟುಕೊಡಬೇಕಾಗಿ ಪೋಲೀಸು ಕಮಿಶನರಿಗೆ ಸಮ್ಮನ್ಸ ಮಾಡಿ ಕೇಳಿದ್ದಲ್ಲಿ ಮೇಜಿಸ್ಟ್ರೇಟರವರು ಢಿಂಗ್ರನ ವಿಲ್‌ನಾಮೆ ಅಥವಾ ಬೇರೆ ಯಾವ ವಿಧದ ಅಧಿಕಾರ ಪತ್ರ ಹೊಂದಿರುವಿಯೋ ಎಂತ ಭಾರತೀಯನನ್ನು ವಿಚಾರಿಸಿದರು. ಭಾರತೀಯನು ಯಾವ ಅಧಿಕಾರಪತ್ರವೂ ಇಲ್ಲವೆಂತ ಹೇಳಿದ್ದಲ್ಲಿ ಮೇಜಿಸ್ಟ್ರೇಟರು ಈ ಸಮ್ಮನ್ಸನ್ನು ತೆಗೆದುಹಾಕಿರುವರು

ಸರ್ ಹೆನ್ರಿಕೋಟನರವರು ತನಗೆ ಪ್ರಾಪ್ತವಾದ ದೇಹಾಲಸ್ಯದಿಂದ ಗುಣಹೊಂದುತ್ತಿರುವರಾಗಿ ಕೇಳುತ್ತೇವೆ.

ಕ್ರ್ಯೂ ಪ್ರಭುಗಳವರು ಮಿಂಟೊ ಪ್ರಭುಗಳ ನಂತರ ಹಿಂದುಸ್ಥಾನದ ವ್ಯಾಸಪ್ರಭುಗಳಾಗಿ ನೇಮಿಸಲ್ಪಡುವರೆಂಬ ವರ್ತಮಾನವಿರುವುದು. ಇಂಗ್ಲೆಂಡಿನಲ್ಲಿ ಇವರು ೧೮೯೨ ರಿಂದ ೧೮೯೫ರ ವರೆಗೆ ಬಹಳ ಶ್ಲಾಘ್ಯನೀಯವಾದ ರೀತಿಯಲ್ಲಿ ರಾಜಾಧಿಪತ್ಯವನ್ನು ನಡಿಸಿರುವುದರಿಂದ ಆ ಸಮಯದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಯಾದ ರೋಸಬರಿ ಪ್ರಭುಗಳು ಇವರಿಗೆ ಪ್ರಭುಪದವಿಯನ್ನಿತ್ತರು. ಕೆಲವು ಸಮಯದ ನಂತರ ಕ್ರ್ಯೂ ಪ್ರಭುಗಳು ರೋಸಬರಿ ಪ್ರಭುಗಳ ದ್ವಿತೀಯ ಪುತ್ರಿಯನ್ನು ತನ್ನ ಎರಡನೇ ಹೆಂಡತಿಯಾಗಿ ಮದುವೆಮಾಡಿಕೊಂಡಿರುವರು. ಇವರಿಂದ ಮೂರು ಜನ ಪುತ್ರಿಯರು ಜನಿಸಿರುವರಲ್ಲದೆ ಪುತ್ರ ಸಂತತಿಯು ಪ್ರಭುಗಳಿಗೆ ಈ ವರೆಗೆ ಇರುವುದಿಲ್ಲ. ಮೊದಲನೇ ಪತ್ನಿಯಲ್ಲಿ ಜನಿಸಿದ ಪುತ್ರನು ಈ ಮೊದಲೇ ಮೃತಪಟ್ಟಿರುವನು

ಬ್ರಿಟಿಷ್ ಪಾರ್ಲಿಮೆಂಟಿನ ಪ್ರತಿನಿಧಿಗಳ ಚುನಾವಣೆಗಳ ಸಂದರ್ಭದಲ್ಲಿ ಬ್ರಿಟಿಷ್ ಪ್ರಜಾವರ್ಗಗಳ ಉಭಯ ತಂಡಗಳ ನಾಯಕರು ಅಲ್ಲಲ್ಲಿ ಭಾಷಣಗಳನ್ನು ಕೊಡುತ್ತಿರುವರು. ಕರ್ಜನ್ ಪ್ರಭುಗಳು ಸಹ ಇತ್ತಲಾಗೆ ಈ ಸಂದರ್ಭದಲ್ಲಿ ಒಂದು ಭಾಷಣವನ್ನು ಕೊಟ್ಟಿರುವರು. ಪಕ್ಷತ ಅಧಿಕಾರದಲ್ಲಿರುವ ಬ್ರಿಟಿಷ್ ಸರಕಾರವು ಕರ್ಜನ್ ಪ್ರಭುಗಳ ಪಂಗಡದ ವಿರೋಧ ಪಕ್ಷದವರ ಕೈಯಲ್ಲಿರುವುದರಿಂದ ಈ ಸರಕಾರದ ಅನುಚಿತ್ಯವನ್ನು ಸಭಿಕರಿಗೆ ಸೂಚಿಸಿಕೊಡಲಿಕ್ಕೆ ಹಿಂದುಸ್ಥಾನದಲ್ಲಿ ಈ ಸರಕಾರದವರು ಜಾರಿಗೆ ತಂದ ಕೌನ್ಸಿಲು ಮಾರ್ಪಾಟುಗಳ ಅಯುಕ್ತತೆಯನ್ನು ಇತರ ಹಲವು ತರದ ಇಂಡಿಯಾ ಸರಕಾರದ ಕುಂದುಕಗಳನ್ನು ವ್ಯಕ್ತಪಡಿಸಿದರು. ಹಿಂದುಸ್ಥಾನದಲ್ಲಿರುವ ಅಸಂತುಷ್ಟಿಯು ತನ್ನಿಂದಾಯಿತೆಂತ ಹೇಳುವುದು ಅತಿ ನೀಚವಾದ ಮಾತು. ಹಿಂದುಸ್ಥಾನದಲ್ಲಿ ಶಾಂತತೆಯು ಮತ್ತು ತುಷ್ಟಿಯು ಇರುತ್ತದೆಂತ ಹೇಳಿದರೆ ಅದು ಮೋರ್ಲೆ ಪ್ರಭುಗಳಿಂದೆನ್ನುವರು. ಹೌಸಾ ತ್ತರಿಗೆ ಅನುಚಿತವೆಂತ ಅನೇಕ ರಾಜತಂತ್ರವಿಶಾರದರು ಅಭಿಪ್ರಾಯಪಟ್ಟ ಭಾಷ್ಯಭಾರ ಮಾರ್ಪಾಟುಗಳನ್ನು ಜ್ಯಾರಿಗೆ ತಂದಿರುವರು. ಪ್ರಭುಗಳಿಗೆ ಹಿಂದುಸ್ಥಾನದಲ್ಲಿ ಜ್ಯಾರಿಗೆ ಬಂದ ಮಾರ್ಪಾಟುಗಳ ವಿಷಯ ಬಹಳ ನಂಬಿಕೆ ಇರುವುದು. ಇಂಡಿಯನ್ ಮ್ಯುಟಿನಿ ನಂತರ ೭ ವರುಷಗಳ ವರೆಗೆ ಹಿಂದುಸ್ಥಾನದ ವ್ಯಾಸರಾಯಪ್ರಭುತ್ವವನ್ನು ನೋಡಿದವನು ತಾನೊಬ್ಬನೇ ಎಂತಲೂ ಎರಡಾವರ್ತಿ ಈ ಪದವಿಗೆ ನೇಮಿಸಲ್ಪಡುವ ಬಹುಮಾನವುಳ್ಳ ಈ ಶತಮಾನದಲ್ಲಿ ಎರಡನೇ ಆಂಗ್ಲೇಯನು ತಾನಾಗಿರುವೆನೆಂತಲೂ, ತನ್ನ ಆಳಿಕೆಯಲ್ಲಿ ಕೊಲೆಗಳೂ, ಬೊಂಬು ಅನಾಹುತಗಳೂ, ಅನಾಯಕತ್ವವೂ ಇದ್ದಿಲ್ಲವೆಂತಲೂ, ಹಿಂದುಸ್ಥಾನದಲ್ಲಿ ನಿರ್ಭೀತನಾಗಿ ಕಾವಲುಗಾರರ ರಕ್ಷೆಯಿಲ್ಲದೆ ಎಲ್ಲೆಲ್ಲಿಯೂ ತಿರುಗಾಡುತ್ತಿದ್ದೆನೆಂತಲೂ ಸಾವಿರಾರು ಜನ ಭಾರತೀಯರ ಪ್ರೀತಿ ವಿಶ್ವಾಸಗಳಿಗೆ ತಾನು ಇನ್ನೂ ಪಾತ್ರನಾಗಿರುವೆನೆಂದೂ ಅಜ್ಞಾಪಿಸಿದರು. ತನ್ನ ಸರಕಾರದವರ ವರ್ತನೆಯನ್ನು ಚರ್ಚಿಸಲಿ, ಆದರೆ ತನ್ನ ಸರಕಾರ ಸಾಮರ್ಥ್ಯದಿಂದ ದೇಶದಲ್ಲಿ ಸಮಾಧಾನವಿತ್ತು. ಆಗಿನ ಸ್ಥಿತಿಯು [illegible]

[illegible] ಟ್ ಸಭೆಯಲ್ಲಿ ಹಿಂದುಸ್ಥಾನದಲ್ಲಿರುವ ಆಂಗ್ಲೇಯ ಅಧಿಕಾರಿಗಳನ್ನು ತುಚ್ಛೀಕರಿಸುವುದನ್ನು ನಿಲ್ಲಿಸುವರೆ ಯಾವ ಪ್ರಯತ್ನವೂ ನಡಿಯುವುದಿಲ್ಲವೆಂತಲೂ ಮೆ| ಕಿಯರ್ ಹಾರ್ಡಿಯವರಿಂದ ಹಿಂದುಸ್ಥಾನಕ್ಕೆ ಬಹಳ ಹಾನಿಯುಂಟಾಗಿರುವುದೆಂದೂ ವ್ಯಕ್ತಪಡಿಸಿದರು. ಭಾರತೀಯ ಪ್ರಜೆಗಳಲ್ಲಿ ಪ್ರಭುಗಳ ಈ ಭಾಷಣವನ್ನು ರುಜುಪಡಿಸುವವರು ಎಷ್ಟು ಮಂದಿಗಳಿರುವರೋ?

ಉತ್ತರ ಹಿಂದುಸ್ಥಾನ.

ಕಲಿಕತ್ತೆಯ ಪ್ರೆಸಿಡೆನ್ಸಿ ಕೊಲೇಜಿನ ಪಂಡಿತರಾದ ಅಜಿತೋಷ ಶಾಸ್ತ್ರಿಗಳವರ ಮನೆಯಲ್ಲಿ ಪಂಡಿತರ ಪತ್ನಿಯರು ತನ್ನ ಐದು ಜನ ಮಕ್ಕಳೊಂದಿಗೆ ಅಕಸ್ಮಾತ್ ಸುಡಲ್ಪಟ್ಟರು. ಪಂಡಿತರು ಭವಾನಿಪುರ ಎಂಬಲ್ಲಿ ತನ್ನ ಸ್ನೇಹಿತರಲ್ಲಿಗೆ ಹೋಗಿದ್ದಾಗ ಮನೆಯಲ್ಲಿ ಇವರ ಪತ್ನಿಯರು ಕೆಲವು ತಿಂಗಳ ಪ್ರಾಯದ ಕೂಸು ವ ನಾಲ್ಕು ಜನ ಪುತ್ರಿಯರೊಂದಿಗೆ ಒಂದು ಕೋಣೆಯಲ್ಲಿ ಕೋಣೆಯ [illegible] ಮಲಗಿಕೊಂಡಿದ್ದರು. ಪರದೆಯ ಸಮೀಪವೇ ಸಣ್ಣದೊಂದು ಕೈ ದೀಪವು ಉರಿಯುತ್ತಿತ್ತು. ಸುಮಾರು ರಾತ್ರೆ ೧೧ ಗಂಟೆ ಸಮಯಕ್ಕೆ ಕೈ ದೀಪದ ಜ್ಯೋತಿಯು ಪರದೆಗೆ ತಾಗಿ ಬೆಂಕಿ ಹಿಡಿದು ಉರಿಯ ಹತ್ತಿತು. ಕೋಣೆಯಲ್ಲಿ ಮಲಗಿದವರೆಲ್ಲರೂ ಗಾಢನಿದ್ರೆಯಲ್ಲಿದ್ದರು. ಎಲ್ಲಾ ಮಕ್ಕಳಿಗೂ ಬೆಂಕಿ ತಗಲಿದ್ದರಿಂದ ಕಲಿಕತ್ತೆಯ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ಕೊಂಡುಹೋಗಿದ್ದರು. ಅಲ್ಲಿ ಎರಡು ಜನ ಹೆಣ್ಣು ಮಕ್ಕಳು ತೀರಿ ಹೋಗಿರುವವು. ಬಾಕಿ ಎರಡು ಜನರು ಉಳಿಯುವುದು ಕಷ್ಟವಂತೆ

ಬಂಗಾಳದ ಲೆಫ್ಟಿನೆಂಟ್ ಗವರ್ನರರ ನ್ಯಾಯ ವಿಧಾಯಕ ಸಭೆಯು ಈ ತಿಂಗಳ ತಾ ೪ರಲ್ಲಿ ಕೂಡಿತು. ಇಂಡಿಯಾ ಕೌನ್ಸಿಲು ಮೆಂಬರರಾದ ಮೇ ಕೆ ಜಿ ಗುಪ್ತರವರೂ ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಕಮಿಟಿಯ ಮೆಂಬರರಾದ ಮೆ| ಎಸ್ ಪಿ ಸಿಂಹರವರೂ ಈ ನೂತನ ಸಭಾಸಂಭ್ರಮವನ್ನು ನೋಡುವರೆ ಬಂದಿದ್ದ ಪ್ರೇಕ್ಷಕರಾಗಿದ್ದರು

ನಾಸಿಕದಲ್ಲಿ ನಡೆದ ಕಲೆಕ್ಟರ ಜೇಕಸನರ ಕೊಲೆಯ ಪರವಾಗಿ ಪೋಲೀಸಿನವರು ಹಲವು ಮಂದಿಯರನ್ನು ಕೈದು ಮಾಡಿರುವರು. ಮುಂಬಯಿಯಲ್ಲಿಯೂ ಸಹಾ ಈ ಮೊದಲೇ ಕೆಲವರನ್ನು ಕೈದು ಮಾಡಿರುವರಲ್ಲದೆ ಈ ತಿಂಗಳ ತಾ ೪ರಲ್ಲಿ ಮುಂಬಯಿ ಗ್ರೇಂಟ್ ಮೆಡಿಕಲ್ ಕೊಲೇಜಿನಲ್ಲಿ ಕಲಿಯುತ್ತಿದ್ದ ಪಿ ಎ ಪರೀಕ್ಷೆ ಪಾಸಾಗಿದ್ದ ಗೋವಿಂದ ಬಟ್ಟ, ವಿಕ್ಟೋರಿಯಾ ಜುಬಿಲಿ ಕಲಾ ಶಾಲೆಯಲ್ಲಿ ಕಲಿಯುತ್ತಿದ್ದ ನಾಗಪುರದವರ ಒಬ್ಬನನ್ನೂ ಕೈದು ಮಾಡಿರುವರು. ಇಷ್ಟರ ತನಕ ಈ ಕೊಲೆಯ ಪರವಾಗಿ ಮುಂಬಯಿಯಲ್ಲಿ ೪ ಜನರನ್ನು ಕೈದುಮಾಡಿರುವರು

ಲಾಹೋರಿನಲ್ಲಿ ದರ್ಭಂಗದ ಮಹಾರಾಜರವರು ಐಟ್ಚಿಸನ್ ಕೊಲೇಜಿನ ಉಪಯೋಗಾರ್ಥವಾಗಿ ಕಟ್ಟಿಸಲ್ಪಡುವ ಹಿಂದೂ ದೇವಾಲಯಕ್ಕೆ ಪಾಯಕಲ್ಲನ್ನಿಡುವವರಾದರು. ಈ ಕೊಲೇಜಿನಲ್ಲಿ ಮಹಮ್ಮದಿ ಸಿಕ್, ಹಿಂದೂ ಮತಗಳ ವಿದ್ಯಾರ್ಥಿಗಳೆಲ್ಲರಿಗೂ ಪ್ರಾರ್ಥನೆ ಆರಾಧನೆಗಳ ಬಗ್ಗೆ ಅವರವರ ಮತದ ದೇವಾಲಯಗಳಿರುವವು.

ಪಂಜಾಬಿನ ಹೊಸ ನ್ಯಾಯವಿಧಾಯಕ ಸಭೆಯು ಕಳೆದ ತಾ. ೩ರಲ್ಲಿ ಕೂಡಿರುವುದು. ಬಹುಮಾನ ಪಟ್ಟ ಸರದಾರ ಪ್ರತಾಪ ಸಿಂಗರವರನ್ನು ವ್ಯಾಸರಾಯ ಪ್ರಭುಗಳ ಸಭೆಗೆ ನಾನ್ ಆಫೀಸಿಯಲ್ ಮೆಂಬರರ ಕಡೆಯಿಂದ ಪ್ರತಿನಿಧಿಯಾಗಿ ಆರಿಸುವರು.

[illegible] ಡೆಲ್ಲಿಯಲ್ಲಿ ಆಲ್ ಇಂಡಿಯಾ ಮುಸಲ್ಮಾನ್ ಲೀಗ್ ಎಂಬ ಮಹಮ್ಮದೀಯ ಸಾರ್ವಜನಿಕ ಸಂಘದವರ ಸಭೆಯು ಕೂಡುವಂತೆ ತಯಾರಿಯು ನಡಿಯುತ್ತಿರುವುದು. ಮಹಮ್ಮದೀಯರ ಈ ಸಭೆಯಲ್ಲಿ ಸಹಾ ಉಭಯ ಪಂಗಡದವರ ಪರಸ್ಪರ ಭೇದ ಬುದ್ಧಿಯು ವಿಶೇಷವಾಗಿ ತಲೆದೋರುತ್ತಿರುವುದು. ಎಲ್ಲಾ ಪಂಗಡದವರಲ್ಲಿಯೂ ಐಕ್ಯವನ್ನುಂಟು ಮಾಡುವರೆ ಸದ್ಯದಲ್ಲಿ ಕೂಡುವಂಥಾ ಮಹಾ ಸಭೆಯಲ್ಲಿ ಪ್ರಯತ್ನಿಸುವರಂತೆ.

ಲಾಹೋರಿನಲ್ಲಿ ಬ್ರಾಹ್ಮಣ ಮಹಾ ಸಭೆಯು ಜರಗಿತು. ದರ್ಭಂಗದ ಮಹಾರಾಜರವರು ಅಧ್ಯಕ್ಷರಾಗಿದ್ದರು. ಹಿಂದಿ ಭಾಷೆಯಲ್ಲಿ ಮಹಾರಾಜರವರು ಭಾಷಣ ಕೊಟ್ಟರು. ಈ ಸಭೆಯಲ್ಲಿ ದರ್ಭಂಗದ ಮಹಾರಾಜರವರು ಅಜ್ಞಾಪಿಸಿದ ಬುದ್ಧಿವಾದವು ಎಲ್ಲಾ ಕಡೆಗಳ ಬ್ರಾಹ್ಮಣರಿಂದಲೂ ಅನುಸರಿಸಲ್ಪಡತಕ್ಕದ್ದಾಗಿರುವುದು. ದೇಶದಲ್ಲಿ ಶಾಂತತೆಯು ನಿರಂತರವಾಗಿರುವಂತೆ ಬ್ರಾಹ್ಮಣರೆಲ್ಲರೂ ರಾಜದ್ರೋಹಿಗಳ ಗೊಡವೆಗೆ ಹೋಗದೆ ಅಂಥವರನ್ನು ತುಚ್ಛೀಕರಿಸಿ ಅಂಥವರನ್ನು ದೇಶದಲ್ಲಿರಗೊಡಿಸಬಾರದು. ಬ್ರಾಹ್ಮಣರೆಲ್ಲರೂ ಪರಸ್ಪರ ವೈಷಮ್ಯಗಳನ್ನು ಕಳೆದು ಪರಸ್ಪರ ಪ್ರೀತಿಯೂ ಸಹಕಾರಐಕ್ಯಗಳೂ ತಮ್ಮಲ್ಲಿ ನೆಲೆಯಾಗುವಂತೆ ವರ್ತಿಸಬೇಕು. ತಮ್ಮ ಗೋಸುಗವಾಗಿಯೂ ಇತರ ವರ್ಣದವರ ಪರವಾಗಿಯೂ ಬ್ರಾಹ್ಮಣರು ಧರ್ಮವನ್ನು ರಕ್ಷಿಸುತ್ತಿರಬೇಕು. ಸ್ವಾಭಿಮಾನವನ್ನು ಉಳಿಸಿಕೊಳ್ಳುವುದಕ್ಕೆ ಬ್ರಾಹ್ಮಣರು ತಮ್ಮ ಜೀವನಕ್ಕೋಸ್ಕರ ಪರರನ್ನವಲಂಬಿಸಿರುವುದನ್ನು ತೊರೆದು ಸ್ವತಂತ್ರ ಜೀವನವನ್ನು ಪಡಿಯುವ ಮಾರ್ಗವನ್ನನುಸರಿಸುತ್ತಲಿರಬೇಕು. ಜನರು ಹೆಚ್ಚಾಗಿ ದಾನಗಳನ್ನು ತುಚ್ಛೀಕಾರ ಭಾವದಿಂದಲೂ ಅವಿಶ್ವಾಸದಿಂದಲೂ ಕೊಡುವದರಿಂದ ದಾನಗಳನ್ನು ಅಂಗೀಕರಿಸದೆ ಸ್ವತಂತ್ರ ಜೀವನವನ್ನು ಮಾಡುವ ಉಪಾಯವನ್ನು ಕೈಕೊಳ್ಳಬೇಕೆಂಬದಾಗಿ ಸಹಾ ಸಭೆಯಲ್ಲಿ ನಿರ್ಣಯ ಮಾಡಿರುವರು. ಲಾಹೋರಿನಲ್ಲಿ ಬ್ರಾಹ್ಮಣರ ಉಪಯೋಗದ ಬಗ್ಗೆ ಒಂದು ಸಂಸ್ಕೃತ ಪುಸ್ತಕ ಶಾಲೆಯನ್ನು ರಚಿಸಬೇಕೆಂತಲೂ ಇಂಥಾ ಪುಸ್ತಕ ಶಾಲೆಗೆ ಬೇಕಾದ ಸಹಾಯವನ್ನು ಎಲ್ಲಾ ಕಡೆಯಲ್ಲಿರುವ ಬ್ರಾಹ್ಮಣರು ಮಾಡಬೇಕೆಂಬದಾಗಿಯೂ ನಿರ್ಣಯಿಸಿರುವರು. ಈ ಸಂಸ್ಥಾ ಪರಿಪಾಲನೆ ಬಗ್ಗೆ ಪಂಜಾಬು ಸರಕಾರದವರಿಂದ ಸಹಾಯವನ್ನು ಕೇಳುವರಾಗಿ ತಿಳಿಯುತ್ತೇವೆ. ದರ್ಭಂಗದ ಮಹಾರಾಜರವರು ರೂ ೧೦೦೦ನ್ನು ಈ ಸಭೆಗೆ ಸಹಾಯ ದ್ರವ್ಯವಾಗಿ ಕೊಟ್ಟಿರುವರು

ಕಳೆದ ಸರ್ತಿ ಲಾಹೋರಿನಲ್ಲಿ ಕೂಡಿದ ಕೊಂಗ್ರೆಸು ಸಭೆಯ ವೃತ್ತಾಂತವು ತೃಪ್ತಿಕರವಾಗಿರಲಿಲ್ಲವೆಂತ ತಿಳಿಯುತ್ತೇವೆ. ಸಭೆಗೆ ಬಂದ ಪ್ರತಿನಿಧಿಗಳು ಅಸಂತುಷ್ಟರಾಗಿ ಹಿಂತೆರಳಿರುವರಂತೆ. ಒಟ್ಟು ೨೩೪ ಜನ ಪ್ರತಿನಿಧಿಗಳು ಇಡೀ ಹಿಂದುಸ್ಥಾನದಿಂದ ಈ ಸಭೆಗೆ ಹೋಗಿದ್ದರು. ಇವರಲ್ಲಿ ಸಮಅರೆವಾಸಿಕ್ಕಿಂತ ಹೆಚ್ಚು ಜನರು ಪಂಜಾಬಿನವರೇ ಆಗಿದ್ದರು. ಅನುಭವಸ್ಥರೂ ಹಲವು ವರುಷಗಳಿಂದ ಕೊಂಗ್ರೆಸು ಸಭೆಯ ಕೆಲಸವೆಲ್ಲವನ್ನು ಕೈಕೊಳ್ಳುತ್ತಿದ್ದ ಪ್ರಜಾನಾಯಕರಲ್ಲಿ ಅನೇಕರೂ ಸಭೆಗೆ ಬರಲೇ ಇಲ್ಲ. ಮಹಮ್ಮದೀಯರಲ್ಲಿ ಪ್ರತಿನಿಧಿಯಾಗಿ ಆಗಲಿ, ಅಥವಾ ಬರಿಯ ಪ್ರೇಕ್ಷಕರಾಗಿಯಾಗಲಿ ಸಭೆಗೆ ಯಾರೂ ಬರಲಿಲ್ಲ. ಸಭೆ ಕೂಡುವ ಮೂರು ದಿನಗಳಲ್ಲಿಯೂ ಸಭೆಮಂದಿರವು ಸಭಿಕರಿಂದ ಪೂರ್ಣವಾಗದೆ ಮಂದಿರದ ಹೆಚ್ಚಿನ ಭಾಗವೆಲ್ಲವೂ ಖಾಲಿಯಾಗಿತ್ತು. ಅಧ್ಯಕ್ಷರಾದ ಮಾಲವೀಯರವರ [illegible] ಭಾಷಣವು ಸಭೆಯನ್ನು ಈ [illegible]

ಕಲ್ಕತ್ತೆಯಲ್ಲಿ ಮುನಿಸಿಪಲ್ ರಸ್ತೆಗಳನ್ನು [illegible] ಹಾಳಾಗದಂತೆಯೂ ಧೂಳಿನಿಂದ ತುಂಬಿರದಂತೆಯೂ ಒಂದು ನವೀನ ವಿಧದಲ್ಲಿ ರಸ್ತೆಗಳನ್ನು ದುರುಸ್ತಿಮಾಡುವ ಆಲೋಚನೆಯಲ್ಲಿರುವರು. ಈ ವಿಧಾನದಲ್ಲಿಯೇ ಲಂಡನಿನಲ್ಲಿ ರಸ್ತೆಗಳನ್ನು ತಯಾರಿಸಿರುವರಂತೆ. ರಸ್ತೆಗಳನ್ನು ಮೂರು ಇಂಚು ಆಳಕ್ಕೆ ಅಗಿದ ಮೇಲೆ ಅವುಗಳಲ್ಲಿ ಈ ಬಗ್ಗೆ ನೇ ತಯಾರಿಸಿದ ಒಂದು ಮಿಶ್ರಣ ಪದಾರ್ಥವನ್ನು ಹಾಕಿ ಜಡಿದುಬಿಡುವರು. ಇದರಿಂದ ರಸ್ತೆಗಳು ಬಹಳ ಸಮಯದವರೆಗೆ ಹಾಳಾಗದೆಯೂ ಅವುಗಳಿಂದ ಧೂಳು ಏಳದೆಯೂ ಇರುವವಲ್ಲದೆ ಸಂಕ್ರಾಮಿಕ ರೋಗದ ಅಣುಗಳನ್ನು ನಾಶಪಡಿಸುವ ಗುಣವು ಈ ರೀತಿ ತಯಾರಿಸಿದ ರಸ್ತೆಗಳಿಗೆ ಇದ್ದು ಅವು ಪಟ್ಟಣದ ಆರೋಗ್ಯಕ್ಕೆ ಹಿತಕರವಾಗಿ ಪರಿಣಮಿಸುವವಂತೆ.

ಯುನ್ಯಾಟೆಡ್ ಪ್ರೊವಿನ್ಸುಗಳ ಗವರ್ನರರಾದ ಸರ್. ಜೋನ್ ಹ್ಯೂವೆಟ್ ದೊರೆಗಳು ಬರುವ ಮಾರ್ಚಿ ತಿಂಗಳಲ್ಲಿ ಆರು ತಿಂಗಳ ರಜೆ ಮೇಲೆ ಹೋಗುವುದರಿಂದ ಬಹುಮಾನಪಟ್ಟ ಮೆ| ಲೆಸ್ಲಿ ಪೋರ್ಟರ್ ಎಂಬವರು ಇವರ ಬದಲಿಗೆ ಲೆಫ್ಟನೆಂಟ್ ಗವರ್ನರರಾಗಿ ಆರು ತಿಂಗಳ ತನಕ ಕೆಲಸ ನೋಡುವರೆಂಬದಾಗಿ ವರ್ತಮಾನವಿರುವುದು.

ಪಂಜಾಬಿನ ಲೆಫ್ಟನೆಂಟ್ ಗವರ್ನರರಾದ ಸರ್. ಲುಯಿಸ್ ಡೇನರನ್ನು ಸಂದರ್ಶಿಸುವದಕ್ಕೋಸ್ಕರ ಪಂಜಾಬ ಹಿಂದುಗಳ ಪ್ರತಿನಿಧಿಗಳು ದರ್ಭಂಗದ ಮಹಾರಾಜರೊಡನೆ ಹೋಗಿದ್ದರು.

ಮುಜ್ಫಾಯಿಲ್ ಬ್ರಾಹ್ಮಣ ಕನ್ಫರೆನ್ಸ್ ಅಮೃತಸಾರಿನಲ್ಲಿ ಕೂಡಿತು. ಸ್ತ್ರೀಯರು ಸಹಾ ಸಭೆಗೆ ಬಂದು ಸಭಾ ಕಾರ್ಯಗಳಲ್ಲಿ ಸಹಕಾರಿಗಳಾಗಬೇಕೆಂಬ ನಿರ್ಣಯವನ್ನು ಈ ಕನ್ಫರೆನ್ಸಿನವರು ಮಂಜೂರು ಮಾಡಿರುವರು.

ನವ ವರುಷದ ಬಿರುದಾವಳಿಗಳಲ್ಲಿ ಮುಂಬಯಿ ಹೈಕೋರ್ಟು ಜಡ್ಜರಾಗಿದ್ದ ಬಹುಮಾನಪಟ್ಟ ಚಂದಾವರಕಾರರವರಿಗೆ ಸರ್. ಎಂಬ ಬಿರುದು ದೊರಕಿರುವುದು.

ಕಲಿಕತ್ತೆಯಲ್ಲಿ 'ಕಂಟಿನೆಂಟಲ್ ಮೋಟರ್‌ಕಾರ್ ಕಂಪೆನಿ'ಯ ಮಾಲಿಕರಾದ ಮೆ| ಡಿಬ್ರುನ್ನರ್ ಎಂಬವರು ಆಕಾಶದಲ್ಲಿ ಹಾರಾಡುವ ಒಂದು ಯಂತ್ರವನ್ನು ರಚಿಸಿರುವರು. ಪಾಶ್ಚಾತ್ಯ ದೇಶಗಳಲ್ಲಿ ರಚಿಸಿದ ಈ ತರದ ಯಂತ್ರಗಳಿಗಿಂತ ಒಂದು ವಿಷಯದಲ್ಲಿ ಈ ಯಂತ್ರವು ಶ್ರೇಷ್ಠವಾಗಿರುವುದು. ಯಂತ್ರವು ಥಕ್ಕನೆ ಆಕಾಶದಲ್ಲಿ ಹಾರ್ಯಾಡುತ್ತಿರುವಾಗ ನಿಂತುಹೋದಲ್ಲಿ ಅದು ಜೋರಿನಿಂದ ನೆಲಕ್ಕೆ ಬಂದು ಬೀಳದೆ ಮೆಲ್ಲಮೆಲ್ಲನೆ ಏನೂ ಹಾನಿ ಸಂಭವಿಸದ ರೀತಿಯಲ್ಲಿ ಕೆಳಗೆ ಇಳಿಯುವುದು.

ಭಾರತೀಯ ಸಮಾಜ ಸಂಸ್ಕಾರ ಸಂಘದವರ ವಾರ್ಷಿಕ ಸಭೆಯು ಲಾಹೋರಿನಲ್ಲಿ ಕಳದ ದಶಂಬರ ತಿಂಗಳ ೩೧ನೇ ತಾರೀಕಿನಲ್ಲಿ ಜರಗಿತು. ನಬ್ಬಾದ ಟಿಕ್ಕಾ ಸಾಹೇಬರವರು ಅಧ್ಯಕ್ಷರಾಗಿದ್ದರು.

ಕೊಂಗ್ರೆಸು ಸಭೆಯ ಅಧ್ಯಕ್ಷರಾದ ಬಹುಮಾನಪಟ್ಟ ಮದನ ಮೋಹನ ಮಾಲವಿಯಾರವರು ಲಾಹೋರಿನ ದಯಾನಂದ ಅಂಗ್ಲೋ ವೇದಿಕ್, ಕೊಲೇಜನ್ನು ಸಂದರ್ಶಿಸುವವರಾದರು. ೫೩೦ ಜನ ಕೊಲೇಜು ವಿದ್ಯಾರ್ಥಿಗಳು ಉಳಕೊಂಡಿರುವ ಕೊಲೇಜಿನ ವಿದ್ಯಾರ್ಥಿ ಭವನವನ್ನು ಮಾಲವಿಯಾರವರಿಗೆ ತೋರಿಸಿದ್ದಲ್ಲದೆ ೫೦ ಸಾವಿರ ರೂಪಾಯಿ ಖರ್ಚು ತಗಲುವ ವಿದ್ಯಾರ್ಥಿಗಳ ಬಗ್ಗೆ ರಸಾಯನ [illegible]

[illegible] ಬಹುಮಾನಪಟ್ಟ ಪಂಡಿತ ಮದನಮೋಹನ ಮಾಲವಿಯಾರವರು ಕೊಂಗ್ರೆಸು ಸಭಾಮಂದಿರದಲ್ಲಿಯೇ ರಾಜತಂತ್ರ ಮತ್ತು ಮತ ವಿಷಯವಾಗಿ ಒಂದು ಉಪನ್ಯಾಸವನ್ನು ಕೊಟ್ಟರು. ಸಭಾ ಮಂದಿರವೆಲ್ಲಾ ಪ್ರೇಕ್ಷಕರಿಂದಯು ಮಂತ ಸಭಿಕರಿಂದ ತುಂಬಿತ್ತು. ಲಾಲಾಲಜಪತರ್ಯಯವರೂ ಇತರರನೇಕರೂ ಈ ಭಾಷಣವನ್ನು ಕೇಳುವ ಬಗ್ಗೆ ಬಂದಿದ್ದರು. ಮದನಮೋಹನರು ಕೊಂಗ್ರೆಸು ಸಭೆಯು ಲಾಹೋರಿನಲ್ಲಿ ಕೂಡುವ ಮುಂಚೆ ಈ ರೀತಿ ಭಾಷಣಗಳನ್ನು ಕೊಡುತ್ತಿದ್ದರೆ ಕೊಂಗ್ರೆಸು ಸಭೆಗೆ ಹೆಚ್ಚಿನ ಪ್ರೋತ್ಸಾಹವು ಲಾಹೋರಿನಲ್ಲಿ ದೊರಕುತ್ತಿತ್ತೆಂಬದಾಗಿ ಅಭಿಪ್ರಾಯಪಡುತ್ತಾರೆ.

ಲಾಹೋರಿನ ಸನಾತನಧರ್ಮ ಸಭಾಮಂಡಲಕ್ಕೆ ದರ್ಭಂಗದ ಮಹಾರಾಜರವರು ರೂಪಾಯಿ ೧೫ ಸಾವಿರವನ್ನು, ಬರ್ದ್ವಾನ್ ಮಹಾರಾಜರವರು ರೂಪಾಯಿ ೧೦೦೦೦ ವನ್ನು ಕೊಟ್ಟಿರುವರು.

ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯು ಈ ತಿಂಗಳ ತಾ. ೧೭ ಯಾ ೧೮ರಲ್ಲಿ ಕೂಡುವ ಸಂಭವವಿರುವುದಾಗಿ ತಿಳಿಯುತ್ತೇವೆ.

ಕಳದ ತಿಂಗಳ ೨೬ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ೭೭೩೭ ಜನರಿಗೆ ಪ್ಲೇಗು ತಗಲಿ ೬,೫೫೫ ಜನರು ಮೃತಪಟ್ಟಿರುವರು.

'ಯುಗಾಂತರ' ಪತ್ರವು ಪೋಸ್ಟು ಕಾರ್ಡುಗಳ ರೂಪದಲ್ಲಿ ಲಾಹೋರಿನಲ್ಲಿ ತಲೆದೋರಿರುವುದಂತೆ.

ಟ್ರಾನ್ಸವಾಲ ಭಾರತೀಯರಿಗೆ ದ್ರವ್ಯ ಸಹಾಯಕ್ಕಾಗಿ ಕಳದ ಕೊಂಗ್ರೆಸು ಸಭೆಯಲ್ಲಿ ಸಾವಿರಾರು ರೂಪಾಯಿಗಳನ್ನು ಕೂಡಿಸಿರುವರು. ನೋಡಲಿಕ್ಕೆ ಬಂದಂಥಾ ಸ್ತ್ರೀಯರಲ್ಲೊಬ್ಬರು ಈ ಫಂಡಿನ ಬಗ್ಗೆ ತನ್ನ ಕೈಗೆ ಇರುವ ಚಿನ್ನದ ಬಳೆಯನ್ನು ಕೊಟ್ಟಿರುವರಂತೆ. ಕೊಂಗ್ರೆಸು ಅಧ್ಯಕ್ಷರು ಎಲ್ಲಾ ಭಾರತೀಯರ ಪರವಾಗಿ ಟ್ರಾನ್ಸವಾಲ ಭಾರತೀಯರಿಗೆ ತಂತೀ ಮೂಲಕ ಅವರ ಸಂಕಷ್ಟಗಳಲ್ಲಿ ಸಹಾನುಭೂತಿಯನ್ನು ತೋರಿ ಸಭೆಯ ಪೂರ್ಣ ಆದರಣೆಯು ನಮ್ಮ ಟ್ರಾನ್ಸವಾಲ ಬಂಧುಗಳಿಗಿರುವುದೆಂದೂ ದ್ರವ್ಯ ಸಹಾಯವನ್ನು ಮಾಡುವವೆಂದೂ ಸೂಚಿಸಿರುವರು.

ಭಾರತೀಯ ಸ್ತ್ರೀಯರ ಪರಿಷದವು ಲಾಹೋರಿನಲ್ಲಿ ದಶಂಬರ ೩೧ನೇ ತಾರೀಕಿನಲ್ಲಿ ಕೂಡಿತು. ಹೆಚ್ಚು ಕಡಿಮೆ ೮೦೦ ಜನ ಸ್ತ್ರೀಯರು ಈ ಸಭೆಗೆ ಬಂದಿದ್ದರು. ಮಹಮ್ಮದೀಯ ಸ್ತ್ರೀಯರಲ್ಲಿ ಯಾರೂ ಬರಲಿಲ್ಲವಂತೆ. ಲೆಫ್ಟಿನೆಂಟ್ ಗವರ್ನರರವರ ಪತ್ನಿಯಾದ ಲೇಡಿ ಡೇನರವರು ಈ ಸಭೆಗೆ ದಯಮಾಡಿಸಿದ್ದರು.

ದಕ್ಷಿಣ ಹಿಂದುಸ್ಥಾನ.

ಮದ್ರಾಸು ಸಂಸ್ಥಾನದ ನ್ಯಾಯವಿಧಾಯಕ ಸಭೆಯು ಕಳದ ತಾರೀಕು ೪ರಲ್ಲಿ ಕೂಡಿತು. ಇನ್ನೂ ನಾಲ್ಕು ಜನ ನಾನ್ ಆಫಿಸಿಯಲ್ ಮೆಂಬರರು ಸಭೆಗೆ ಆರಿಸಲ್ಪಡಲಿಲ್ಲ. ಈ ನಾಲ್ಕು ಸ್ಥಾನಗಳಲ್ಲಿ ಎರಡಕ್ಕೆ ಸರಕಾರದವರಿಂದ ನಾನ್ ಆಫಿಸಿಯಲ್ ಮೆಂಬರರು ನೇಮಕವಾಗಬೇಕು. ಉಳಿದ ಎರಡು ಸ್ಥಾನಗಳಿಗೆ ಜನರಿಂದ ಪ್ರತಿನಿಧಿಗಳು ಆರಿಸಲ್ಪಡಬೇಕು. ಇವುಗಳಲ್ಲಿ ಒಂದಕ್ಕೆ ಮಧುರೆಯ ರಾ| ವೆಂಕಟರಮಣಯ್ಯರರವರು ಆರಿಸಲ್ಪಟ್ಟಿದ್ದರು. ಆದರೆ ಇವರು [illegible] ಇವರ ಬದಲಿಗೆ ಬ [illegible]

[illegible]ರವರು ಆರಿಸಲ್ಪಟ್ಟಿದ್ದರು. ಆದರೆ ಇವರು ಹೀಗೆ ಆರಿಸಲ್ಪಟ್ಟದ್ದು ಸರಕಾರದವರ ಪುನರಾಲೋಚನೆಯ ಮೇಲೆ ಸಿಂಧುವಾದ ಇವರು ಆರಿಸಲ್ಪಟ್ಟಲ್ಲಿ ಇನ್ನೊಬ್ಬರನ್ನು ಚುನಾಯಿಸಬೇಕು. ಗವರ್ನರ ಸಾಹೇಬರವರು ಸರಕಾರದ ಕಡೆಯಿಂದ ನೇಮಕವಾಗುವ ಎರಡು ಸ್ಥಾನಗಳಿಗೆ ಯಾರನ್ನು ನೇಮಿಸುವರೆಂಬದನ್ನು ಊಹಿಸಲು ಸಹಾ ಅಸಾಧ್ಯ.

'ದಿವಾನ್ ಬಹದೂರ್ ಆರ್. ರಘುನಾಥರಾವರವರನ್ನು ಗವರ್ನರ ದೊರೆಗಳು ನೇಮಿಸಿದ ನಾನ್ ಆಫಿಸಿಯಲು ಮೆಂಬರರಲ್ಲಿ ಒಬ್ಬರಾಗಿರುವರು. ದಕ್ಷಿಣ ಹಿಂದೂಸ್ಥಾನದ ಈ ವೃದ್ಧ ಮಹನೀಯರಿಗೆ ೮೦ ವರುಷ ಪ್ರಾಯವಾಗಿರುವದಾದರೂ ಕಾರ್ಯ ಚಟುವಟಿಕೆಯಲ್ಲಿ ೨೦ ವರುಷದ ಯೌವನಸ್ಥನಷ್ಟೇ ಸಾಮರ್ಥ್ಯವಂತರಾಗಿರುವರೆಂದು ತಿಳಿಯುತ್ತೇವೆ.

ಮದ್ರಾಸು ನ್ಯಾಯವಿಧಾಯಕ ಸಭೆಯ ನಾನ್ ಒಫಿಸಿಯಲ್ ಮೆಂಬರರವರು ಮೆ| ನವಾಬ ಸಯ್ಯದ್ ಮಹಮ್ಮದ್ ಮತ್ತು ರಾ| ಎನ್. ಸುಬ್ಬರಾವ್ ಪಂತ್ಲು ಇವರನ್ನು ವ್ಯಾಸರಾಯ ಪ್ರಭುಗಳ ಸಭೆಗೆ ಪ್ರತಿನಿಧಿಗಳಾಗಿ ಆರಿಸಿರುವರು.

ಮದ್ರಾಸಿನ ವನ್ನಿಕುಲ ಕ್ಷತ್ರಿಯ ಮಹಾಸಂಘದವರ ಪ್ರತಿನಿಧಿಗಳು ಕಳದ ಡಿಸೆಂಬರ ತಿಂಗಳಲ್ಲಿ ಸಭೆಕೂಡಿ ದಕ್ಷಿಣ ಹಿಂದೂಸ್ಥಾನದಿಂದ ದಕ್ಷಿಣ ಆಫ್ರಿಕಕ್ಕೆ ಕೆಲಸ್ಕಸಮ್ಮಂಧ ಹೋಗುವ ಬಡಜನರನ್ನು ಹೋಗದಂತೆ ಪ್ರೇರೇಪಿಸಬೇಕೆಂದೂ ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರು ಅಲ್ಲಿ ಪಡುವ ಕಷ್ಟಗಳನ್ನು ವಿವರಿಸಿ ಮೂರು ಲಕ್ಷ ಪ್ರಕಟಣಾ ಪತ್ರಗಳನ್ನು ತಮಿಳು ಭಾಷೆಯಲ್ಲಿ ಪ್ರಕಟಿಸಿ ಎಲ್ಲರಿಗೂ ಹಂಚಬೇಕೆಂದೂ ಮತ್ತು ತಮಿಳು ಮಾರ್ಗಾಳಿಮಾಸದ ೨೯ನೇ ದಿನವನ್ನು ಆಫ್ರಿಕದಲ್ಲಿ ಕಷ್ಟಪಡುವ ಭಾರತೀಯರ ಪರವಾಗಿ ದುಃಖದಿನವಾಗಿ ಆಚರಿಸಬೇಕೆಂದೂ ನಿರ್ಣೈಸಿರುವರು.

ಲಿಂಗಾಯತರ ಮಹಾಸಭೆಯು ಬಳ್ಳಾರಿಯಲ್ಲಿ ಬಹಳ ಸಂಭ್ರಮದಿಂದ ಕೂಡಿತು. ಸೋಲಾಪುರದ ಶ್ರೀಮಂತ ರಾವ್ ಬಹದೂರ್ ಅಪ್ಪಾ ಸಾಹೇಬ ಯಾನೆ ಮಲ್ಲಪ್ಪಾ ಬಸಪ್ಪಾ ವರದರವರು ಸಭಾಧ್ಯಕ್ಷರಾಗಿ ಆರಿಸಲ್ಪಟ್ಟು ಸಭಾಕಾರ್ಯಗಳು ವಿಘ್ನವಿಲ್ಲದೆ ನೆರವೇರಿದವು. ೧೨೦೦ ಪ್ರತಿನಿಧಿಗಳೂ ೬೦೦೦ಕ್ಕಿಂತ ಹೆಚ್ಚಾದ ಪ್ರೇಕ್ಷಕರೂ ಸಭೆಯಲ್ಲಿ ತುಂಬಿದ್ದರು. ಲಿಂಗಾಯತರ ಸಮಾಜಸಂಸ್ಕರಣ ಸಾಂಪತ್ತಿಕ ಅಭಿವೃದ್ಧಿ ಮತಶಿಕ್ಷಣಗಳೇ ಮೊದಲಾದವುಗಳ ಬಗ್ಗೆ ಹಲವು ನಿರ್ಣಯಗಳನ್ನು ಮಂಜೂರು ಮಾಡಿ ಇವುಗಳನ್ನು ಕಾರ್ಯತಃ ಸಾಧಿಸಲಿಕ್ಕೆ ಜಿಲ್ಲಾ ಕಮಿಟಿಗಳನ್ನೂ, ತಾಲೂಕು ಕಮಿಟಿಗಳನ್ನೂ, ಹಳ್ಳೀ ಕಮಿಟಿಗಳನ್ನೂ ಏರ್ಪಡಿಸಬೇಕಾಗಿ ಅಭಿಪ್ರಾಯಪಟ್ಟಿರುವರು. ೧೫ ಲಕ್ಷ ಭಂಡವಾಳವುಳ್ಳ ಒಂದು ವಸ್ತ್ರಕೈಗಾರಿಕೆಯ ಕಾರ್ಖಾನೆಯನ್ನು ಸ್ಥಾಪಿಸುವರೆ ನಿಶ್ಚೈಸಿರುವರು. ಲಿಂಗಾಯತರ ಮಹಾಸಭೆಯು ತೀರಿದನಂತರ ದಶಂಬರ ತಿಂಗಳ ೩೦ನೇ ತಾರೀಕಿನಲ್ಲಿ ಲಿಂಗಾಯತ ಸ್ತ್ರೀಯರ ಮಹಾಸಭೆಯು ಕೂಡಿತು. ಹೆಚ್ಚು ಕಡಿಮೆ ೫೦೦೦ ಮಂದಿ ಸ್ತ್ರೀಯರು ಈ ಸಭೆಗೆ ಬಂದಿದ್ದರು. ಈ ಸಭೆಯಲ್ಲಿ ಸ್ತ್ರೀಯರ ಅಭಿವೃದ್ಧಿಗೆ ಬೇಕಾದ ಸ್ತ್ರೀ ಶಿಕ್ಷಣ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟವು.

ಮೆ| ಆಡಿಯವರು ಮತಾಂತರ ಹೊಂದ್ದಲಿಕ್ಕೆ ಮದ್ರಾಸಿಗೆ ಕಳುಹಿಸಲ್ಪಟ್ಟಿದ್ದ ಮನ್ನಾರಗುಡಿ ಹುಡುಗರನ್ನು ತರಲಿಕ್ಕೆ ಹುಡುಗರ ಹೆತ್ತವರ ಸಂಗಡ ಇಬ್ಬರು ಶಾಲಾ ಉಪಾಧ್ಯಾಯರನ್ನು [illegible] ವಿದ್ಯಾರ್ಥಿಗಳು [illegible]

ದಕ್ಷಿಣ ಕನ್ನಡ.

ಸೂಚನೆ:—ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್ ಯಾ ಮಂಗಳೂರು ರಥಬೀದಿಯಲ್ಲಿರುವ ಮಂಗಳೂರು ವ್ಯಾಪಾರ ಸಂಘದ ಔಷಧಾಲಯದ ಡಾಕ್ಟರರಾದ ಡಾ| ವಿ. ರಾಮಕಾಮತ್‌ರವರು ಕ್ರಿಸ್ತಮಸ್ ಸಮಯದಲ್ಲಿ ಆರೋಗ್ಯದ ಬಗ್ಗೆ ಮದ್ರಾಸು, ಬೆಂಗಳೂರತ್ತಕಡೆ ಹೋಗಿರುವವರು ನಿನ್ನೆ ದಿನ ಇಲ್ಲಿಗೆ ಬಂದು ತಪ್ಪಿರುವರೆಂತಲೂ ಇವತ್ತಿನಿಂದ ಯಥಾಪ್ರಕಾರ ತಮ್ಮ ಚಿಕಿತ್ಸಾ ವೃತ್ತಿಯನ್ನು ಕೈಕೊಳ್ಳುವರಾಗಿಯೂ ವ್ಯಾಪಾರ ಸಂಘದ ಔಷಧಾಲಯದ ಗ್ರಾಹಕರಿಗೆ ನಮ್ಮ ಪತ್ರ ಮುಖಾಂತರ ತಿಳಿಸಬೇಕಾಗಿ ಸಂಘದವರು ನಮ್ಮನ್ನು ವಿಜ್ಞಾಪಿಸಿಕೊಂಡಿರುವರು

ಮಂಗಳೂರು [illegible] ವಾರ ಮುನಿಸಿಪಾಲಿಟಿಯಲ್ಲಿ [illegible] ಪ್ಲೇಗ್ ಮರಣಗಳೂ [illegible] ಸಿಡುಬುರೋಗದ ಮರಣಗಳೂ ಇದ್ದವು

[illegible] ಪ್ರಿತೊಪಿ ಯಫ್ ಎಕ್ಸ್ [illegible] ಮಾನನಷ್ಟದ ಮೊಕದ್ದಮೆಯು ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಮೆಜಿಸ್ಟ್ರೇಟರಲ್ಲಿ ತನಖಿಯಾಗಿ, ಮುದ್ದೈಯಾಲಿಗೆ ೧೦೦೦೦ ರೂಪಾಯಿ [illegible] ತಿಂಗಳ [illegible] ಯನ್ನು ವಿಧಿಸಿರುತ್ತಾರೆ [illegible] ೧೦೦೦ ರೂಪಾಯಿ [illegible] ರೂ ೫೦೦ನ್ನು ಮುದ್ದೈಯು [illegible] ಕೊಡಬೇಕೆಂದು ತೀರ್ಮಾನಿಸಿದ್ದಾರೆ

ಕುಂದಾಪುರ [illegible] ಅಕ್ರಂ [illegible] ತಹಸೀಲ್ದಾರ [illegible] ತಿಂಗಳ ರಜೆಯ [illegible] ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕರಾದ [illegible] ಅಲ್ಬುಕರ್ಕರು ಇವರ ಕಾರ್ಯವನ್ನು ನೋಡುವರು.

ಇಂಗ್ಲಿಷ್ ಹೆಡ್ ಕ್ಲಾರ್ಕರ ಕೆಲಸಕ್ಕೆ [illegible] ಮರಾಪುರದವರಿಗೆ [illegible]

[illegible] ತಿಂಗಳ ರಜೆಯು ದೊರಕಿರುವದರಿಂದ ಇಂಗ್ಲಿಷ ಎಕೌಂಟೆಂಟರಾದರಾ| [illegible] ಮಲ್ [illegible] ಟ ಕೆಲಸಕ್ಕೆ ನೇಮಿಸಲ್ಪಟ್ಟಿರುವರು

ಪುತ್ತೂರು [illegible] ನ್ಯಾಯವಾದಿ ವಿಷ್ಣುಯ್ಯನವರು [illegible] ವರ್ಷಾಂತಿಕ ಶ್ರಾದ್ಧವು [illegible] ಹಳ್ಳಿಯಿಂದ [illegible] ಬಂದವರ [illegible] ದಿನ [illegible] ಯು ಮುಡುಕಿದ [illegible] ಗಂಡೊಳಗೆ [illegible] ಅವರ [illegible] ತೈಸುವಷ್ಟರಲ್ಲಿ [illegible] ನೋಡಿದಲ್ಲಿ ಅನ್ನವು [illegible] ಹಾಗೆ ಇದ್ದದ್ದಾಗಿ ತಿಳಿದು ಬರುತ್ತದೆ

ನಮ್ಮಲ್ಲಿಯ ಅಸಿಸ್ಟೆಂಟ್ ಸರ್ಜನ್ [illegible] ರಾ| ರಾ| [illegible] ರಾಮಕಾಮತ್‌ರವರು [illegible] ರಜೆ ಮೇಲೆ ಹೋಗಿರುವರು

ಪುತ್ತೂರು ಬೆಂಚ್ [illegible] ರಾಮಚಂದ್ರ [illegible] ನಲ್ಲಿ [illegible] ಸು ಶಿವಾಯಿ ಮೇಯುತ್ತಿದ್ದ ಜಾನುವಾರುಗಳನ್ನು ದೊಡ್ಡಿಗೆ [illegible] ಜಾನುವಾರು ಮಾಲೀಕರಿಂದ ಹಣ ಪಡಕೊಂಡು [illegible] ಬಿಟ್ಟು ಕೊಟ್ಟಿದ್ದಾಗಿ [illegible] ಸ್ಪೆಷಲ್ ಮೆಜಿಸ್ಟ್ರೇಟರಲ್ಲಿ [illegible] ಇಟ್ಟಿರುವರು

ಉಡುಪಿ ವೈದಿಕ ವಿಧಾನಗಳಿಂದಲೂ ಲೌಕಿಕರೀತಿಯಿಂದಲೂ ನಾನಾವಿಧ ಸಾಧನೆಗಳಿಂದ ಭಂಡಾರಿಕೇರಿ ಮಠದ ದ್ರವ್ಯಹಕ್ಕಿನ ಸಮ್ಮಂಧವಾಗಿ ಉಡುಪಿ ಪರ್ಯಾಯ ಮಠಕ್ಕೂ ಭೀಮನಕಟ್ಟೆ ಮಠಕ್ಕೂ ಕೆಲವು ವರುಷಗಳಿಂದಲೂ ನಡಿಯುತ್ತಿದ್ದ ವ್ಯಾಜ್ಯವು ಮಂಗಳೂರು ಸಬ್ ಕೋರ್ಟಿನಲ್ಲಿ ಕಳೆದ ತಾ. ೪ರಲ್ಲು ಪರ್ಯಾಯ ಮಠಕ್ಕೆ ಅರ್ಥಾತ್ [illegible]

ಪರ್ಯಾಯೋತ್ಸವಕ್ಕಾಗಿ ಸುಮಾರು ಮೂರು ಸಹಸ್ರ ಜನರು ಕಳೆದ ತಿಂಗಳ ಅಂತ್ಯದೊಳಗಾಗಿಯೇ ಬಂದು ಸೇರಿರುವರು. ಶ್ರೀ ಕೃಷ್ಣ ಮಠದಲ್ಲಿ ಪ್ರತಿನಿತ್ಯ ವಿಶೇಷ ಸಂತರ್ಪಣೆಗಳೂ ಉತ್ಸವಾದಿಗಳೂ ನಡಿಯುತ್ತಲೇ ಇವೆ.

ದತ್ತ ಸರ್ಕಸ್ ಕಂಪೆನಿಯವರು ಸರ್ಕಸ್ ಆಟವನ್ನೂ ಶಿರಹಟ್ಟಿ ಕರ್ನಾಟಕ ಸಂಗೀತ ನಾಟಕ ಕಂಪೆನಿಯವರು ತಮ್ಮ ನಾಟಕ ಕಂಪೆನಿಯನ್ನೂ ಇಲ್ಲಿಗೆ ತೆಗದುಕೊಂಡು ಬಂದು ತಾ. ೩ರಿಂದ ಆಟಗಳನ್ನು ಆಡಲಿಕ್ಕೆ ಪ್ರಾರಂಭಿಸಿರುವರು

ವಿವಿಧ ವಿಷಯಗಳು.

ದಕ್ಷಿಣ ಅಮೇರಿಕಕ್ಕೆ ಸೇರಿದ ಪ್ರಸಿಡೆಂಟ್ ದೇಶದಲ್ಲಿ ಹಾಲು ತೆಗೆದ ಕಸ್ಬಿನ ಶಿಪ್ಪೆಯಿಂದ ಕಾಗದ ಮಾಡುತ್ತಾರಂತೆ ಅನೇಕ ತರದ ಒರಟು ಕಾಗದಗಳನ್ನು ಆಗಲೆ ಮಾಡಿರುತ್ತಾರೆ ಆದರೆ ಶುಭ್ರವಾದ ಕಾಗದವನ್ನು ಮಾಡುವದು ಇನ್ನೂ [illegible]

[illegible] ಇಸವಿ ಸಪ್ಟಂಬರ್ [illegible] ಅಕ್ಟೋಬರು [illegible] ತಿಂಗಳಲ್ಲಿ ಮದ್ರಾಸ [illegible] ಅಧಿಪತ್ಯದಿಂದ ಯುರೋಪ ರಾಜ್ಯಗಳಿಗೂ ಸಿಲೋನ್ ಮತ್ತು ಜಪಾನ್ ದ್ವೀಪಗಳಿಗೆ ಸುಮಾರು ೪ ಲಕ್ಷ ರೂಪಾಯಿ ಬಾಳುವ ಸುಮಾರು ೧ ಲಕ್ಷ ಮಣ ತಾಳೆಯ ನಾರು ಸಮುದ್ರ ಮಾರ್ಗವಾಗಿ ರಫ್ತಾಗಿರುತ್ತದೆ

ಮದ್ರಾಸ ಅಧಿಪತ್ಯದ [illegible] ಯಾನೆ ಮೀನು ಹಿಡಿಯುವ ಕಸುಬಿನ ವಿಷಯವಾಗಿ ಸರ್ ಎಫ್ ಎ ನಿಕಲ್ಸನ್‌ಯವರು ಬರೆದಿರುವ [illegible] ನದಲ್ಲಿ ಮುತ್ತಿನ ಚಿಪ್ಪು ಗುಂಡಿಗಳ ತಯಾರಿಯನ್ನು ಕುರಿತು ಅಭಿಪ್ರಾಯಪಡುವದೇನಂದರೆ - ಪ್ರತಿ ಸಾಲ್‌ನಲ್ಲಿಯೂ ಸಿಲೋನ್‌ನಿಂದ ಮುತ್ತಿನ ಚಿಪ್ಪು ವಿಶೇಷವಾಗಿ ಯುರೋಪ್ ರಾಜ್ಯಗಳಿಗೂ ಮತ್ತು ಜಪಾನಿಗೂ ರವಾನಿಸುತ್ತಿದೆ [illegible] ಸುಮಾರು [illegible] ಮುತ್ತಿನ ಚಿಪ್ಪು ಜರ್ಮನಿ, ಜಪಾನು ಮತ್ತು ಗ್ರೇಟ್ ಬ್ರಿಟನ್ ರಾಜ್ಯಗಳಿಗೆ ಸಾಗಿಹೋಗಿರುತ್ತವೆ ಆ ರಾಜ್ಯಗಳಲ್ಲಿ ಇದರಿಂದ ಗುಂಡಿಗಳನ್ನು ತಯಾರು ಮಾಡುತ್ತಾರೆ ಇಂಥಾ ಮುತ್ತಿನ ಚಿಪ್ಪಿನ ಗುಂಡಿಗಳನ್ನು ಇಲ್ಲಿ ತಯಾರು ಮಾಡಿದರೆ ಒಳ್ಳೇ ಲಾಭ [illegible] ಸಂದೇಹವಿಲ್ಲ ಈ ಕೆಲಸಕ್ಕೆ ಹೆಚ್ಚು ಸಾಮಗ್ರಿಗಳು [illegible] ಅದಕ್ಕೆ ಬಂಡವಾಳವೇ [illegible] ಅತ್ಯವಿಲ್ಲ

ಬಂಟರ ಯಾನೆ ನಾಡವರ ಸಂಘ.

ಸಂ೧೯೦೯ ನೇ ಇಸವಿ ಜೂನ್ ತಾರೀಕು 24 ರ ನಂತರ ವಂತಿಗೆ ಕೊಟ್ಟವರ ಹೆಸರು ಮತ್ತು ಮೊಬಲಗು

ಮಂಗಳೂರು ತಾಲೂಕು ತಿರುವೈಲ್ ದೇವಪ್ಪ ಶೆಟ್ಟರು, ರೂ ೨೫ ಉಳ್ಳಾಲ ಬೆಟ್ಟು ತ್ಯಾಂಪು ಶೆಟ್ಟರು, ರೂ. ೨೫ ಪಾವೂರ ಗುತ್ತು ಸುಬ್ಬಯ್ಯ ಪೂಂಜರು, ರೂ ೨೫ ಪೆರ್ಮಂಕಿ ಅಂತ ಅಡಪರು, ರೂ ೧೦ ಜುಮುಲಾ ರೂ ೮೫.

ಉಡುಪಿ ತಾಲೂಕು ಬಿಲ್ಲಾಡಿ ಸಂಕಯ್ಯ ಹೆಗ್ಗಡೇಯರು ರೂ ೫೦ ಬಿಲ್ಲಾಡಿ ಪಟೇಲ ವೆಂಕಪ್ಪ ಶೆಟ್ಟರು, ರೂ ೫೦ ವಂಡಾರ ನಂದ್ಯಪ್ಪ ಹೆಗ್ಗಡೇಯರು, ರೂ. ೧೦೦. ನೈಲಾಡಿ ನಾಗಪ್ಪ ಶೆಟ್ಟರು, ರೂ. ೫೦ ಹೆರಡ್ಡೆ ಮಂಜಯ್ಯ ಹೆಗ್ಗಡೇಯರು, ರೂ. ೫೦ ಪಳಜೆ ಹೊನ್ನಯ ಹೆಗ್ಗಡೇಯರು, ರೂ. ೫೦. ಹೆಬ್ರಿ ಗೋಪಾಲ ಬಲ್ಲಾಳರು ಮತ್ತು ವೆಂಕಮ್ಮ ಬಲ್ಲಾಳ್ತಿಯರು, ೫೦. ಕಿಲಿಯಾಣ ವೆಂಕಪ್ಪ ಹೆಗ್ಗಡೇಯರು, ರೂ. ೧೨೫. ಮುದ್ರಾಡಿ ಸಂಕಯ್ಯ ಶೆಟ್ಟರು, ರೂ. ೧೦. ಜುಮುಲಾ ರೂ. ೫೩೫.

ಉಪ್ಪಿನಂಗಡಿ ತಾಲೂಕು [illegible] ರಾಮ ಶೆಟ್ಟರು, ರೂ. ೫೦. [illegible]

ಕೋಟ [illegible] ರು, ರೂ. ೫., ಜುಮುಲಾ ರೂ. ೮೦.

ಕಾಸರಗೋಡು ತಾಲೂಕು [illegible] ಚಿಕ್ಕಪ್ಪ ಶೆಟ್ಟರು, ರೂ. ೨೫. ಜುಮುಲ್ಲಾ ರೂ. ೨೫.

ಈ ಮೊದಲು ೧೯೦೯ ನೇ ಇಸವಿ ಜುಲಾಯಿ ತಿಂಗಳ ೨ ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದಂತೆ ವಸೂಲಾದ ರೂ. ೧೮೦೬೪-೮-೦. ಒಟ್ಟು ಜುಮುಲ್ಲಾ ರೂ ೧೮೭೭೪—೮—೦.

ಮಂಗಳೂರು, 31--12--09	ಬಿ. ಮಹಾಬಲ ಹೆಗ್ಗಡೆ, ಕಾರ್ಯದರ್ಶಿ.

ಜೀವಸುಗಳ ಧಾರಣೆ, ಮಂಗಳೂರು

ಹೊಸ ಕೂಳೂರು ಮಸ್ಕತಿ ಅಕ್ಕಿ ,,	4—12-0
,, ಗುಡ್ಡು ಮಸ್ಕತಿ, ,,,,,,,	4—4—0
,, ಮಸ್ಕತಿ ,,,,,,,,,,,,	3—15-0
,, ಗುಡ್ಡು ರಾಶಿ ,,,,,,,,,,	3—11-6
,, ಚತ್ತ ,,,,,,,,,,,,,	1—10-0
,, ಮಸ್ಕತಿ ಬೆಳ್ತಿಗೆ ,,,,,,,,,	4—4—0
,, ರಂಗೂನ್ ಬೆಳ್ತಿಗೆ ಗೋಣಿ ,,,	6—14-0
,, ಹುರುಳಿ ಗೋಣಿ ೧ ಮುಡಿ ೨ರ	5—8—0
ಉಪ್ಪು ಗೋಣಿ ೧ರ ,,,,,,,	3—3—0
ಕೊಪ್ರಿ ಖಂಡಿ ೧ರ ,,,,,,,	104—0—0
ಕೊಪ್ರಿ ಎಣ್ಣೆ ಮಣ ,,,,,,,,,	6-14—0
ಕಾಪಿ ಖಂಡಿ ೧ರ ,,,,,,,	188—0—0
ಕಾಳು ಮೆಣಸು ಖಂಡಿ,,,,,	112—0—0
ಹೊಸ ಬಿಳಿ ಗೋಟು ಅಡಿಕೆ ,,,	68—0—0
ಕರಿ ಗೋಟು,,,,,,,,,,,,	64—0—0

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೆರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್ ಬೈಯಣ್ಣ ಬ್ರದರ್ಸ್
67 ಲಾಲ್‌ಬಾಗ್ ರೋಡು,
ಬೆಂಗಳೂರು ಸಿಟಿ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅದಲ್ಲ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಾಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದದಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. [illegible] ಅಂಚೆ ಹಾಸಲು ೪ ಆಣೆ. [illegible] ಕಮಲಾಬಾಯಿ [illegible]

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವು ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮಿದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಬೀಳುವದು.

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 6 ಆಣೆ

ಮನೊ ರಾ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿ ದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದು ವಾತ, ಸಂಧಿವಾತ, ಜಖಮು, ಘಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ 8 ಆಣೆ, ೬ ಬಾಟ್ಲಿಗಳಿಗೆ 2 ರೂ 10 ಆಣೆ ೧೨ ಬಾಟ್ಲಿಗಳಿಗೆ ರೂ ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,

ಠಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಸ್ಯುರೆನ್ಸ್ ಸೊಸ್ಯಾಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಪೀಸು —14 ಹೇರ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಫೀಸುಗಳು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ.

8 ಬ್ರೊಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು

ಸಂಪಾದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಿವೆ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಬೊಜಲಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುಮ್ಹಾಲಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು ವಿಮೇ ಬೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

'ಬಿ. ಬಾಬುರಾವ್ ಎಂಡ್ ಸನ್,

ಮದ್ರಾಸು ಸೆಂಸ್ಥಾನೆದೆ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಯೊಂದಿ ಗಿರುವುದು { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಿಗೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವ್ರಣಾದಿ ಬಾವುಗಳೂ, ಬಜ್ಜಿ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ಸುಬ್ರಾಯ ಮುಕುಂದ ಪ್ರಭು ಮತ್ತು ಕಂಪೆನಿ, ಮಂಗಳೂರು. ಕುಂದಾಪುರ ರಾಮ [illegible] ಮಂಗಳೂರು [illegible] ದೊರಕುವದು

ಮನೋಹರಾ ಅತ್ತರ್.



ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲಿ ಒಂದರ ಕ್ರಯ ರೂಪಾಯಿ ೧—೧೨—೦.

ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಇದು ೧೦ ಆಣೆ ಕ್ರಯಕ್ಕೆ ದೊರಕುವುದು.

ಮಂಗಳೂರು ವ್ಯಾಪಾರ ಸಂಘ [illegible] ಟ್ರೇಡಿಂಗ್ [illegible]

ಅನುಭವಸಿದ್ಧವಾದ ವನೌಷಧಗಳು

೧ ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಅಣೆ

೨ ಪ್ರಮೇಹಹರಿವು ಬಿಂದು. [illegible] ನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಲಿಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೫ ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಉತ್ಕೃಷ್ಟವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ. [illegible] ದಾರುಣವಾದ ಜ್ವರದ ಗಡ್ಡೆಯನ್ನೂ [illegible] ಗುಣಪಡಿಸುವದು. ತಿಂಗಳ ಔಷಧಕ್ಕೆ [illegible]

೭. ಜಗನ್ಮೋಹನ ದಂತಮಂಜನ. [illegible] ಗಳನ್ನು ಪರಿಹರಿಸತಕ್ಕ [illegible] ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಅಣೆ

೮ ಸರಳಭೇದಿ ಮಾತ್ರೆ. [illegible] ತೊಲೆಗೆ ೨ ರೂ.

೯ ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವಲೇಹ. ಕೆಮ್ಮು, ಗುಲ್ಮ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ [illegible] ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ [illegible] ಕೊಡುವದು. ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, [illegible] ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಅಣೆ ೩ ಬಾಟ್ಲಿಗೆ ೧ ರೂ ೬ ಅಣೆ

೧೩ ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು [illegible] ಗೆಲ್ಲುವದು. ಉರಿಯು ಇಲ್ಲ. [illegible] ೪ ಅಣೆ. ೩ ಕರಡಿಗೆಗೆ ೧೧ ಅಣೆ.

೧೪ [illegible]ರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ [illegible] ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ [illegible] ತು, ಬುದ್ಧಿ [illegible] ಸ್ಮರಣ ಶಕ್ತಿಯನ್ನು [illegible] ಕಂಠಸ್ವರವನ್ನು ಮಧುರವಾಗಿಸುವದು [illegible] ಉತ್ಕೃಷ್ಟವು. ೧೦ ತೊಲೆಗೆ ೨ ರೂ ೮ ಅಣೆ

[illegible] ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ [illegible] ದೊರೆಯುವವು. ನಮ್ಮ ದೊಡ್ಡ ಕನ್ನಡ [illegible] ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ [illegible] ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡಿಯಿಸಬಹುದು.

ನಮ್ಮ ವಿಳಾಸ — ಬಿ. ಎಮ್. ನಾಥು ಮತ್ತು ಕಂಪನಿ,

ಬಾಂದ್ರಾ (ಮುಂಬಯಿ ಹತ್ತಿರ)

Bandra (near Bombay)

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಜಖಮು, ತಲೆ ನೋವು, ಸೊಂಟದ ನೋವು, [illegible], ಘಾಯ, [illegible] ಮುಂತಾದ ಎಲ್ಲಾ ತರದ ನೋವುಗಳು [illegible] ಗುಣವಾಗುವದು. [illegible] ರಿಂದ ಗುಣ [illegible] ಹಣ ತಿರುಗಿ [illegible]

ಇಂದು ಪ್ರಕಾಶ [illegible] ಮತ್ತು ಇಂಗ್ಲಿಷ್ ಪತ್ರವು ಬರಿಯುವದೇನಂದರೆ —ಮನೋರಾ ಕಂಪನಿಯವರಿಂದ ತಯಾರಿಸಲ್ಪಟ್ಟ ರೊಯಲ್ ಇಂಡಿಯನ್ ಬಾಂ ವಾತಕ್ಕೂ, ಸಂಧಿವಾತಕ್ಕೂ, ತಲೆನೋವಿಗೂ, ಉತ್ತಮವಾದದ್ದು. ಅದಲ್ಲದೆ ಇದಕ್ಕೆ ಚಲೋ ಪರಿಮಳವು ಸಹ ಇದೆ. ಈಗ ಪ್ರಚಾರದಲ್ಲಿರುವ ಎಲ್ಲಾ ಬಾಮಿಗಿಂತಲೂ ಇದು ಶ್ರೇಷ್ಠವೆನ್ನಬಹುದು.

ಹನುಮಂತರಾವ್ ಗಂಜಾಮ್. ಇವರು ಬರಿಯುವದೇನಂದರೆ —ರೋಯಲ್ ಇಂಡಿಯನ್ ಬಾಮಿನಿಂದ ನನಗೆ ಇರುವ ವಾತದ ನೋವು ಪೂರ್ಣವಾಗಿ ಹೋಗಿರುತ್ತದೆ. ಇನ್ನು ೬ ಬಾಟ್ಲಿಗಳನ್ನು ರವಾನಿಸಿರಿ. ಬಾಟ್ಲಿ ಒಂದರ ಕಿಮ್ಮತ್ತು ೮ ಅಣೆ. ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು.

ರಾವ್ ಮುಂಬಯಿ. ಇವರು ಬರಿಯುವದೇನಂದರೆ—ಮನೋರಾ ಕಂಪನಿಯವರ ರಾಯಲ್ ಇಂಡಿಯನ್ ಬಾಂ ವಾತಾದಿಗಳ ಮೇಲೆ ಅತೀ ಉತ್ತಮವಾದ ಔಷಧಿಯಾಗಿರುತ್ತದೆ.

ಐಯರ್ ಮುಂಬಯಿ. ಇವರು ಬರಿಯುವದೇನಂದರೆ.—ಮನೋರಾ ಕಂಪನಿಯವರ ರಾಯಲ್ ಇಂಡಿಯನ್ ಬಾಂ ಎಂಬ ದಿವ್ಯವಾದ ಮುಲಾಮು ನನ್ನ ತಲೆನೋವನ್ನು ಪೂರ್ಣವಾಗಿ ತೆಗಿಯಿತು.

ನಮ್ಮ ವಿಳಾಸ:—ಮನೊರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

Agents:— N. Nowrojee, Chemist, Mangalore.

Arnon & Amian, Udipi.



ಸುರಂಗಿ ಅತ್ತರು

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ [illegible]. ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಪರಿಮಳವು ಹೆಚ್ಚು ದಿನಗಳ ವರೇಗೆ ಹೋಗುವದಿಲ್ಲ. ಬಾಟ್ಲಿ ಒಂದರ ಕ್ರಯ No I. ೧—೪—೦. No 2. ೧—೦—೦. ದಿಲ್‌ಖುಷ್ ೧—೦—೦. ದವಾನಾ ೦—೧೪—೦ ಜಾಯಿ ೦—೧೪—೦ ಚಂಬೇಲಿ ೦—೧೪—೦

ಕೇಶವರ್ಧಿನಿ ಎಣ್ಣೆ. ಹೆಂಗಸರ ಪ್ರೀತಿಕರವಾದ ಎಣ್ಣೆ. ಇದರಿಂದ ಕೂದಲುಗಳು ಕಪ್ಪಾಗುವವು, ಮತ್ತು ಬೆಳೆಯುವವು. ಬಾಟ್ಲಿ ಒಂದರ ಕಿಮ್ಮತ್ತು ೦- ೮—೦.

ಗಜಕರ್ಣದ ಮುಲಾಮು. ೦—೪—೦

ಮನೋರಾ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ. ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟುನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ. ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತ್ತು ರೂ. ೦—೮—೦, ಆರು ಬಾಟ್ಲಿಗಳಿಗೆ ರೂ. ೨—೧೦—೬.

ವಿಳಾಸ:— ರಾಮರಾವ್ ನಾನಾಭಾಯಿ ಕಾಳೆ,

ಗಿರಗಾಂ ಮುಂಬಯಿ.

"ಲಾ" ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಕೃಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ.

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ; ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ. ಪಿ, ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಕೆ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ," ಈ ವಿಳಾಸಕ್ಕೆ ಬರೆಯುವದು.

———o———

THE HINDU SOAP MANUFACTURING CO.,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

———o———

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಡಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು. ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೨—೮—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ. ವಿ ಪಿ ಖರ್ಚು ಪ್ರತ್ಯೇಕ

ಏಜಂಟರು —

ದಿ ಉಲನ್ ಮಾರ್ಟ್, ಮಂಗಳೂರು

ಟಿ ಬಾಬುರಾಯರ ಆಯುರ್ವೇದಿಕ್ ಔಷಧಾಲಯ, ಮಂಗಳೂರು, ದ ಕ

ಪ್ರಕಟಣೆ

ಬಾಲಕರು ಅಕ್ಷರಭ್ಯಾಸ ಕಲಿತ ಒಡನೆ ಪೂರ್ವ ಪದ್ಧತಿ ಪ್ರಕಾರ ಕಲಿಯಬೇಕಾದ ಹರದ ನೀತಿಯುಳ್ಳ ನೀತಿಶಾಸ್ತ್ರವನ್ನು ಮೂಡಬಿದ್ರೆ ದಿಗಂಬರ ಜೈನ ಪಾಠಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅಚ್ಚುಗನ್ನಡದಿಂದ ಬಾಲಕರಿಗೆ ಓದಲಿಕ್ಕೆ ತೊಡಕಾಗದಂತೆ ದಪ್ಪ ಕಾಗದದ ಮೇಲೆ ವಿರಳವಾದ ದೊಡ್ಡ ಅಕ್ಷರಗಳಿಂದ ಪ್ರಿಂಟು ಮಾಡಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿವೆ. ಕ್ರಯ ಬಹೀ ಕಡಿಮೆ, ಸಕಲರಿಗೂ ಅತ್ಯವಶ್ಯ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳುವದು.

ಪುಸ್ತಕದ ದರ

					ರೂ. ಆ. ಪೈ.
1 ಪ್ರತಿಗೆ ಕ್ರಯ		..	.	.	0—1—6.
10	,, ,,	..	...	...	0–13—6.
25	,, ,,	...	...	..	2—1—0.
50	,, ,,	.	..	...	4—0—0
100	,, ,,	...	...	...	7—8—0.
250	,, ,,	...	...	...	19–11–0.

ಈ ಶಿವಾಯಿ ಪೋಸ್ಟೇಜು ಬೇರೆ ಕೊಡಬೇಕಾಗುವದು.

A. Gummanna Shetty
Arla Koila
Bantwal Post, S. Canara.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು:

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಫಾಕ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ. ಮತ್ತು ಮದ್ರಾಸು

ಟ್ರಸ್ಟೀ—ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ

ಕಣ್ಣಾರೆ ನೋಡಿರಿ

ಒಂದು ಹೊಸ ವರ್ತಕಶಾಲೆಯನ್ನು ಪರೀಕ್ಷಿಸುವದರ ಉದ್ದೇಶವು ಪ್ರಾಯಶಃ ಉತ್ತಮ ತರದ ಜೀನಸುಗಳು ಅಲ್ಪವಾಗಿ ದೊರಕಿಸಿಕೊಳ್ಳುವ ಅಪೇಕ್ಷೆಯಾಗಿರುತ್ತದೆ ನೀವು ಇದುವರೆಗೆ ನಮ್ಮ ಗ್ರಾಹಕರಲ್ಲವಾಗಿರಬಹುದು ಹಾಗಾದರೆ ನಮ್ಮ ಸಲಹೆಯನ್ನು ಆಲೋಚನೆಗೆ ತೆಗದು ಕೊಳ್ಳಿರೆಂದು ಹೇಳಿಕೊಳ್ಳುತ್ತೇವೆ ಅದು ಯಾವದಂದರೆ, ನಾವು ನಿಮಗೆ ಕೆಲವು ತರದ ಉಲನ್‌ದಾರಗಳೂ, ಬನಿಯನ್‌ಗಳೂ, ಅತ್ತರ್‌ಗಳೂ, ಉಲನ್ ಸಾಮಾನು ಕೊಡಿಸಲಿಕ್ಕೆ ಸಿದ್ಧವಾಗಿರುತ್ತೇವೆ ಮೊದಲು ಎಂದಾದರೂ ಇಂಥಾ ನಮೂನೆಯು ನಿಮ್ಮ ಮೆಚ್ಚಿಕೆಯನ್ನು ಪಡೆಯಲಿಕ್ಕೆ ನಿಮ್ಮ ಮುಂದೆ ತರಲ್ಪಟ್ಟಿರಲಿಕ್ಕಿಲ್ಲ. ಅದನ್ನು ಕೊಂಡುಕೊಳ್ಳುವದು ನಿಮಗೆ ನಿಜವಾಗಿ ಲಭ್ಯಕರವಾಗಿರುವದು.

ನಮ್ಮ ಜೀನಸುಗಳನ್ನು ನೋಡಿ ಅವುಗಳ ಕ್ರಯದ ದರಗಳನ್ನು ತಿಳಿದುಕೊಂಡರೆ ಇತರ ಜನರೊಡಿಗೆ ನೀವು ನಮ್ಮ ಕುರಿತು ಶ್ಲಾಘ್ಯವಾದ ಅಭಿಪ್ರಾಯವನ್ನು ಕೊಡದೆ ಇರಲಿಕ್ಕಿಲ್ಲ.

ಸಿ. ಆರ. ಕಾಮತ್

ಊಲನ್ ಮಾರ್ಟ್.

ನಂಬ್ರ 4 ಬ್ರಿತರ ಇಮಾರತಿ ಮಂಗಳೂರು.

———o———

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ.	೪ ಸಾರಿ.	೧೨ ಸಾರಿ	೨೪ ಸಾರಿ.	೫೨ ಸಾರಿ.
ಇಡೀ ಪಾನು	ರೂ. ೧೦	ರೂ. ೩೨	ರೂ ೭೨	ರೂ ೧೧೦	ರೂ. ೧೫೦
ಅರ್ಧಪಾನು	,, ೬	,, ೧೮	,, ೩೮	,, ೬೦	,, ೮೫.
ಕಾಲು ಪಾನು	,, ೪	,, ೧೨	,, ೨೦	,, ೩೨	,, ೭೫.
ಅರೆಕಾಲು ಪಾನು,,	೨	,, ೭	,, ೧೨	,, ೧೮	,, ೩೫.

ಸೂಚನೆ:—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ಕೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೨ ರೂ. ೦ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಒಂಟೆ ವೆಚ್ಚ ಸೇರಿ ರೂ. ೧೪, ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ಖಾನೆಗಳಿದ್ದು ಗೆರೆಗಳುಳ್ಳವುಗಳು

3″ × 8¼ , 3′ × 5¼′, 8¼ × 6″ 6′ × 4 ಪ್ರಮಾಣದಲ್ಲಿದ್ದು ಸಾವುಕಾರ, ಅಂಗಡಿದಾರ, ವರ್ಗದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಪಾತ್ರವಾಗಿದ್ದು

ಬಹಳ ಸಮಯದ [illegible] ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತವೆ

ಇದೇ ಕಾಗದದ ಗಟ್ಟಿ [illegible] ಚಾಪಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾವುಕಾರರಿಗೆ ಬೇಕಾದ ಮಾಹಿತಿ:—

ಮೇಲಿನ ನಮೂನೆಯ ಪುಸ್ತಕಗಳಲ್ಲದ್ದನ್ನು ನಾವು ಇತರ [illegible] ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ [illegible] ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು- ಬೆಲೆಗೆ ತಕ್ಕ ಒಡವೆಗಳನ್ನು ಹಿಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 19 [illegible] ಇವರಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಚಾ, ಕೊಕೊವಾ ಕಾಫಿ ಪುಡಿ, ಬಿಸ್ಕುಟ್, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಸಲ್ಫೊ ಸ್ಯಾರಪ, ಕೆಮಿಕಲ್ ಫುಡ್, ಗಜಕರ್ಣದ ಮುಲಾಮು, ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟ್ರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರೆ ನಮೂನೆಯ ಫೋರ್ಮುಗಳು
ವ ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಟ್ಯಾಯ್ಲುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬೈಂಡ್ಲು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ಷಿಕೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಮಂಗಳೂರು.

Mangalore Trading Association,
Mangalore, S Canara

Printed by K. S. Kamath, at the Mangalore Trading Association's Sharada Press Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 4 | ಬೆಂಗಳೂರು, ತಾರೀಖು 14ನೇ ಶುಕ್ರವಾರ ಜನವರಿ 1910 | ಸಂಚಿಕೆ 2

William & Co. Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಭಾರ ಉದರಶೂಲೆ ಗವಾಯು, ಸೊಂಟನೋವು ಗಂಟ್ಲು ನೋವು ಜಬ್ಬು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹದು ನಾಗಪುರದ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ [illegible] ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ನಿಪ್ಪುಣ್ಯವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಹೆಮೊಯಿಸ ಕೊಕೊ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುರ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ ಆರು ಡಬ್ಬಿಗಳ ಕಿಮ್ಮತು ರೂ 2—4—0.

ಚೇಳು ಕಡಿತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತೊಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಬಹಳಬೇಗನೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡಿತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ.

ಕೇಶವರ್ಧನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವುಳ್ಳದ್ದಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಶ್ಶುದ್ಧಿಮಾಡುವದು. ಬಾಟ್ಲಿ ೧ರ ಕಿಮ್ಮತು ೧ ರೂ ಮೂರು ಬಾಟ್ಲಿಗಳಿಗೆ ರೂ 2—4—0.

ಮುಲಾಮು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0
ಕಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು.

ವಿಳಾಸ:— ವಿಲಿಯಮ್ಸ ಮತ್ತು ಕಂಪನಿ, ಫೋರ್ಟ ಮುಂಬಯಿ. ಟೆಲಿಗ್ರಾಫ ಪತ್ತೆ:— ಅಮೃತಾಂಜನ ಮುಂಬಯಿ

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಭೇದಗಳನ್ನೇ ಹೇಳುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ) ೩-೦-೦

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ. ೦-೬-೦

ಉತ್ತರ ರಾಮಚರಿತ್ರೆ ಕಥೆ ೧-೫-೦

ಟೀಕಾ ರಾಘವೇಂದ್ರ ಸ್ತೋತ್ರ ೧-೩-೦

ತೈಚಕಲ್ಪರೀತ್ಯಾ ಸೂರ್ಯ ನಮಸ್ಕಾರ .. ೦-೨-೦

ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು ೦-೨-೦

ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ ೦-೨-೦

ಬಾಲ ರಾಮಾಯಣ ಟೀಕಾ ತಾತ್ಪರ್ಯ ೦ - ೦

ಸ್ವರಸಹಿತವಾದ ನಮಕ ಚ ಮಕ ೦-೨-೦

ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಪ್ರಂ ಕೆ. ಸರಿಯಾಗಿ ಪ್ರಿಂಟುಮಾಡಿದೆ ೦-೪-೦

ಸೂರ್ಯ ಸಹಸ್ರನಾಮ ಶ್ಲೋಕ, ನಾಮ ೦ ೨ ೦

ಕೃಷ್ಣ ಕರ್ಣಾಮೃತ ಮೂಲ ೦ ೨ ೦

ದೇವರ ಸೇವೆ ಹೊಸ ಪುಸ್ತಕ ೦ ೪ ೦

ಮುಕುಂದ ಮಾಲಾ (ಗೀತಾ) ೦ ೪-೦

ಶಿವ ನಾಮಾ ೦-೦-೬

ಹನುಮನ್ನಾಮಾ ೦-೦ ೬

ಹರಿ ನಾಮಾ ೦-೦-೬

ಯಾಜುಷ ಪ್ರಯೋಗ ೦-೮ ೦

ಬೃಹತ್ಕಥಾ ಮಂಜರಿ ೦ ೮-೦

ಕೃಷ್ಣ ಬೋಧಾಮೃತ ೦ ೬-೦

೦ ೪ ೦ ಕಮ್ಮಿ ವಿ ಪಿ ರವಾನಿಸುವದಿಲ್ಲ

ಕೆಟಲಾಗು ಬೇಕಾದಲ್ಲಿ ... ತರಿಸಿಕೊಳ್ಳಬಹುದು

... — ದಿ ಆದಿನಾರಾಯಣ ಶಾಸ್ತ್ರಿ,

... ಬೆಂಗಳೂರು

ಕುಂತಳ ಕೌಮುದಿ ತೈಲ

... ಮಹಾರಾಣಿಯವರು ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

... ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ತಿಳಿದಿರುವೆನು ...

ಶ್ರೀ ಸುರೇಂದ್ರನಾಥ ಬಾನರ್ಜಿ ಯವರು ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೬ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,

216 ಕಾರನ್ ವಾಲಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ —"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು —ಎಲ್ ಎ. ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು

ಮಂಗಳೂರಿಗೆ ಏಜಂಟರು,—ಮ್ಮ ರಾ। ರಾ। ಸಿ ಆರ್. ಕಾಮತರು,

... ಮಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್‌ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ರೂ. 0—12—0.

ಸೈಜು ಇಂಚು 22×22 ವಸ್ತ್ರಾ ೧ಕ್ಕೆ „ 1—1—0.

ಸೈಜು ಇಂಚು 15×15 ಬೀಳೇ ರೇಷ್ಮೆ ಮೇಲೆ ಕಲಾಬತು ಚೌಕಳ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳ್ ದೊಡ್ಡ ಚೌಕಳೀ ಹುವ ರೇಷ್ಮೆ ವಸ್ತ್ರಾ 1ಕ್ಕೆ ರೂ 12, 13 14, 15, 16 17 ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6, 7, 8, 9, 10

ರೇಷ್ಮೆ ನಡುಕಟ್ಟುಗಳು.

ಕೆಂಪು, ... ಹಸರು, ... ರಂಗುಗಳ ಸೈಜು ಉದ್ದ 5 6 ಮೊಳ, ಅ ... ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1-4-0 1 8-0 1 10 0 1 12 0, 2 0 0 2 8 0

ಕುಪ್ಪಸದ ಕಣಗಳು.

ರೇಷ್ಮೆ ರುದ್ರಾಕ್ಷಿ ... ಹೂವಿನ ಪಟ್ಟಿಗಳ ಶೃಂಗಾರ ಪಟ್ಟಿಗಳ, ಜಗನ್ನಾಥ ಲಾಕಿಮುಂಗಿ ಹಳದಿ ಮುಂಗಿ, ಹಸರು ಅಂಜೂರ ಹಗಲ್‌ಬತ್ತಿ ಸವರನ್ ಕಲರ್ ವಗೈರೆ 1ಕೆ ರೂ 1 6 0 1-12-0

ಡಿಟೊ ಕಪ್ಪು ಚಂದಕಾಳಿ ಕಣಗಳು 1ಕ್ಕೆ ರೂ 1 0 0, 1 2 0 1-3-0

ಮೇಲ್ಕಂಡ ಎಲ್ಲಾ ರಂಗುಗಳ ಪಾಕ ರಕ್ಕೆ ಮತ್ತು ಕುಪ್ಪಸಗಳಿಗೆ ಆಗುವ ಕಣ 1ಕ್ಕೆ ರೂ 2-4 0, 2 8 0 2-10 0

ಡಿಟೊ ಒಂದು ಕಡೆ ಅಂಚಿನ ಪ್ರಕಾರದ ಕಣ 1ಕ್ಕೆ ರೂ 1 4 0, 1 6-0, 1 8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2 12 0, 3 0 0

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ 3-6 0, 3 8 0, 3-12 0

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣಾ 1ಕ್ಕೆ ರೂ 4 12-0, 5-1 0

ಹೆಚ್ ಸಂಕಪ್ಪಾ ಬನಪ್ಪನವರು,

ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,

ಬೆಂಗಳೂರು ಸಿಟಿ

ವ್ಯವಸಾಯ ಕ್ರಮಬೋಧಿನಿ.

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದ್ದು. ಜಮೀನ ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಉಂಟಾಗಿರಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು ಕ್ರಯ ಸ್ಟಿಫ್ ಬೈಂಡು ಪ್ರತಿಒಂದಕ್ಕೆ ೦—೧—೦; ಕ್ಯಾಲಿಕೋ ಬೈಂಡು, ೧—೦—೦; ಟಪ್ಪಾಲ್ ಹಾಸಲ್ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್ ಯನ್ ರಾವ್ ಬ್ರದರ್ಸ್

262 ಚಿಕ್ಕಪೇಟೆ, ಬೆಂಗಳೂರು

ಗಿಡಗಳು, ಬೀಜಗಳು, ಹಣ್ಣು, ಹುವ್ವ, ಮತ್ತು ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಶೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು, ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,

ಫ್ಲೊರಿಸ್ಟ್ ಅಂಡ್ ಸೀಡ್ಸ್‌ಮನ್,

...ಬೆಂಗಳೂರು.

ಜಾಹಿರಾತು:

ಸಾಗವಾನು ಯಾ ತೇಗಿನ ಮರಗಳು ಮಾಟ ಟಿಕ್ಕ ಸುಲಭ ದರದಲ್ಲಿ ದೊರೆಯುವವು. ನಾವು ನಮ್ಮ ವರ್ಗಸ್ಥರಿಂದಲೇ ವ್ಯಾಪಾರ ಮಾಡುವುದರಿಂದ [illegible] ಕಿಲ್ಲ. ಕುಂಬಳೆ ರೈಲ್ವೇ ಸ್ಟೇಷನ್ ಸಮೀಪವಿರುವ ಅಳ್ವೆ ಸ್ಟೋರ್ ಕಟ್ಟೆಯ ಹತ್ತಿರ ಮರಗಳನ್ನು ದಾಸ್ತಾನು ಇಟ್ಟಿರುವೆವು

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Upendra Shrinivas Nayak

Cloth Merchant, Kumbla

POCKET DIARIES FOR 1910.

1910ನೇ ಇಸವಿಯ ಡೈರಿಗಳು

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಬೂಕು ಸ್ಯಾಜ್ ಕ್ರಯ ೮ ಆಣೆ

ಸಣ್ಣ ಸ್ಯಾಜ್ .. ,, ೪ ಆಣೆ.

ಹೆಚ್ಚು ಪ್ರತಿಗಳನ್ನು ತೆಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಶನ್ ದೊರಕುವದು

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯುವದು

ವಿಳಾಸ:—

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ. ಕ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 14ನೇ ಜನವರಿ 1910

ಪರ್ಶಿಯಾದ ರಾಷ್ಟ್ರೀಯ ಕಳಕಳ

ಪರ್ಶಿಯಾ ದೇಶವು ಪ್ರಾಚೀನಕಾಲದಲ್ಲಿ ಬಹಳ ಖ್ಯಾತಿಯನ್ನು ಹೊಂದಿತ್ತು. ಆ ದೇಶದ ಅರಸರು ಹಿಂದುಸ್ಥಾನದ ವರೆಗೆ ದಂಡೆತ್ತಿ ಬಂದು ಸಿಂಧೂ ನದಿಯ ಪ್ರಾಂತ್ಯದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರು. ಗ್ರೀಸ್‌ದೇಶದ ವರೆಗೂ ಪತಾಕೆಯನ್ನು ಹೈದಿದ್ದರು. ಹಾಫಿಜ್ ಸಾದಿ ಮೊದಲಾದ ಪಾರ್ಶಿ ಕವಿಗಳ ಗ್ರಂಥಗಳನ್ನು ಯುರೋಪೀಯ ವಿದ್ವಾಂಸರು ಹೊಗಳುವರು. ಜಾರತೂಸ್ತ್ರನು ಸ್ಥಾಪಿಸಿದ ಮತವು ಲೋಕದ ಮುಖ್ಯ ಧರ್ಮಗಳಲ್ಲಿ ಒಂದಾಗಿದೆ. ಕಾಲೀಫ ಓಮರನ ಕಾಲದಲ್ಲಿ ಧರ್ಮರಕ್ಷಣಾರ್ಥ ಪರ್ಶಿಯವನ್ನು ತೊರೆದು ಹಿಂದುಸ್ಥಾನಕ್ಕೆ ಬಂದ ಪಾರಸಿಗಳು ತಮ್ಮ ಜಾಣ್ಮೆಯಿಂದಲೂ ಸಾಹಸದಿಂದಲೂ ಇಲ್ಲಿ ಸಂಪತ್ತು ಖ್ಯಾತಿಗಳನ್ನು ಪಡೆದಿರುವರು

ಅಂತಹ ದೇಶವು ದುರ್ದಶೆಯನ್ನು ಹೊಂದಿ ಕ್ಷೀಣವಾಗುತ್ತಾ ಬಂತು. ಅದನ್ನು ಒಬ್ಬ ಪ್ರಯಾಣಿಕನು ಈರೀತಿ ಬಣ್ಣಿಸಿರುವನು. ಆ ನಾಡಿನಲ್ಲಿ ಬಲುಮಟ್ಟಿಗೆ ಬಂಜರು ಮರಳುಭೂಮಿಯು ಕಂಗೊಳಿಸುವುದು. ಜನರು ದರಿದ್ರರಾಗಿ ಕಾಣುವರು. ಬಹುಕಾಲದಿಂದ ಪ್ರಭುವಿನ ಬಾಧೆಗೊಳಗಾದ ಈ ಪ್ರಜೆಗಳು ಅದೃಷ್ಟವಾದಿಗಳೂ ನಿಸ್ತೇಜರೂ ಆಗಿರುವರು; ಪ್ರಯತ್ನವನ್ನೊಲ್ಲರು. ಆದರೆ ಈ ಹೊರಗಣ ದಾರಿದ್ರ್ಯವೂ ಔದಾಸೀನ್ಯವೂ ಬಲುಮಟ್ಟಿಗೆ ಮಾಯೆಯಾಗಿದೆ. ಜನರು ಆತ್ಮರಕ್ಷಣಾರ್ಥ ಈ ಕವಚಗಳನ್ನು ತೊಟ್ಟಿದ್ದಾರೆ. ದೊಡ್ಡಗಾದ ಬಟ್ಟೆಯನ್ನುಟ್ಟು ಬಡವನಂತೆ ಕಾಣಿಸುವ ಗೃಹಸ್ಥನು ಲಕ್ಷಾಧಿಪನಾಗಿರುವನು. ಅವನು ತನ್ನ ಸ್ಥಿತಿಗೆ ತಕ್ಕಂತೆ ನಡಕೊಂಡರೆ ಶ್ಯಾಹನಾಗಲೀ ಅವನ ಗವರ್ನರನಾಗಲೀ ಅವನನ್ನು ಸುಲಿದು ಇದ್ದ ಹಣವನ್ನು ಕಸಕೊಳ್ಳುತ್ತಿದ್ದರು. ವರ್ತಕರು ಹಗಲಲ್ಲಿ ಬಹಿರಂಗವಾಗಿ ದೊಡ್ಡ ವಹಿವಾಟವನ್ನು ನೈಯುತ್ತಿರಲು, ಒಬ್ಬ ಧನಾಢ್ಯನನ್ನು ಅರಸನು ಕರೆಕಳುಹಿಸಿ ಸೆರೆಯಲ್ಲಿಟ್ಟು ಅವನನ್ನು ಬಿಡುಗಡೆ ಮಾಡಬೇಕಾದರೆ ಪರಿಹಾರ ದ್ರವ್ಯ ಕೇಳುತ್ತಿದ್ದನು. ಇದರ ದೆಸೆಯಿಂದ ಅಭಿವೃದ್ಧಿಯ ಕುತ್ತಿಗೆ ಹಿಸುಕಿದಂತಾಯಿತು. ಜನರು ಒಬ್ಬರನ್ನೊಬ್ಬರು ನಂಬರು. ಯಾಕೆಂದರೆ ಅರಸನು ಬೇಹುಗಾರರ ಮುಖಾಂತರ ಪ್ರಜೆಗಳ ಸ್ಥಿತಿಯನ್ನು ತಿಳಕೊಂಡು ಧನವಂತರ ಧನ ಕಸಕೊಳ್ಳುತ್ತಿದ್ದನು.

ವ್ಯಾಪಾರ, ಉದ್ಯೋಗಕ್ಕೆ ತಡೆಯಾಯಿತು. ಕೃಷಿ ಕಾರ್ಯವು ಅದೇ ಹಾದಿಯನ್ನು ಹೊಂದಿತು. ಕೃಷಿಕನು ಬಿತ್ತಿ ಬೆಳೆದ ಪೈರು ಅರಸನ ಖಜಾನೆಯನ್ನಾಗಲೀ ಗವರ್ನರನ ಬೊಕ್ಕಸವನ್ನಾಗಲೀ ಸೇರುವದಾದರೆ ಅವನ್ಯಾಕೆ ಗೈಯಬೇಕು? ಜನರಿಗೆ ರಾಜ್ಯಾಧಿಕಾರಿಗಳ ದುರಾಶೆಯಿಂದ ಬಡತನದಲ್ಲಿ ಆಶ್ರಯ ಸಿಕ್ಕಿತು. ಅಪಹಾರಮಾಡಲಿಕ್ಕೆ ಅಸಾಧ್ಯವಾದ ಇನ್ನೊಂದು ದ್ರವ್ಯವದೆ. ಅದಾದರೂ ಆ ದೀನರ ಕೈಸಿಲುಕಲಿಲ್ಲ. ಅವರಿಗೆ ವಿದ್ಯೆಯನ್ನು ಕಲಿಯಲಿಕ್ಕೆ ತಕ್ಕ ಅನುಕೂಲತೆಗಳೂ ಒದಗಿಸಲ್ಪಡಲಿಲ್ಲ

ಇಂಥಾ ದೀನದಶೆಯಲ್ಲಿ ಅವರಿಗೆ ಸುದಿನ ಮೂಡಿತು. ಅವರ ದೇಶೀಯರಲ್ಲಿ ಕೆಲವರು ಧನಸಂಚಯಕ್ಕಾಗಿ ಪರದೇಶಗಳನ್ನು ಸಾರಿದ್ದರು. ಅಲ್ಲಿ ಅವರು ಜನರಲ್ಲಿ ವ್ಯಾಪಿಸಿದ ಹೊಸ ಜೀವನವನ್ನು ಕಂಡು ತಮ್ಮವರನ್ನು ಉದ್ಧರಿಸುವ ನಿರ್ಧಾರವನ್ನು ಗೈದರು. ಆ ಬಗ್ಯೆ ಸ್ವದೇಶವನ್ನು ಸೇರಿ ನಾಲ್ಕು ವರುಷಗಳ ವರೆಗೆ ಬಹು ಜಾಗರೂಕತೆಯಿಂದ ನಿರಂತರ ಪ್ರಯತ್ನಗೈದರು. ಮೊದಲು ಮೊದಲು ಇವರಲ್ಲಿ ಜನರಿಗೆ ವಿಶ್ವಾಸವಿರಲಿಲ್ಲ. ಇವರು ಅಂಜುಮಾನೆಂಬ ಸಂಘಗಳನ್ನು ಅಲ್ಲಲ್ಲಿ ಸ್ಥಾಪಿಸಿದರು. ತೋರಿಕೆಗೆ ಈ ಸಂಘಗಳ ಉದ್ದಿಶ್ಯವು ವಿನೋದವಿಹಾರಗಳಾಗಿದ್ದವು. ಆದರೆ ನಿಜವಾಗಿ ಗುಪ್ತ ರೀತಿಯಲ್ಲಿ ಇವುಗಳಲ್ಲಿ ರಾಷ್ಟ್ರೀಯ ವಿಷಯಗಳು ಚರ್ಚಿಸಲ್ಪಟ್ಟವು. ವಿದ್ಯೆಯೇ ಸರ್ವಸಾಧನ ಮೂಲವೆಂದರಿತು ಇವರು ಪ್ರತಿಯೊಂದು ಅಂಜುಮಾನವಿದ್ದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿ ಅಲ್ಲಿ ಉಪಾಧ್ಯಾಯರು ಪ್ರತಿಫಲವಿಲ್ಲದೆ ಶಿಕ್ಷಣವಿತ್ತರು. ತೆಹರಾನ ಪಟ್ಟಣದಲ್ಲಿ ೫೪ ಇಂತಹ ಸಂಘಗಳಿದ್ದವು. ಈ ಶಾಲೆಗಳಲ್ಲಿ ಓದುಬರಹ ಗಣಿತದೊಡನೆ ಇಂಗ್ಲೀಷ ಫ್ರೆಂಚ ಭಾಷೆಗಳನ್ನು ಕಲಿಸಿದರು. ಈ ರಾಷ್ಟ್ರೀಯ ಪಕ್ಷದವರು ನಿರಂತರ ಪ್ರಯತ್ನದಿಂದ ತಮ್ಮ ದೇಶಬಾಂಧವರ ಔದಾಸೀನ್ಯವನ್ನು ಜೈಸಿದರು. ಅವರಲ್ಲಿ ವಿದ್ಯೆಯನ್ನು ಹರಡಿದರು. ಅವರ ಕಣ್ಣು ತೆರೆದು ಉತ್ಸಾಹವನ್ನು ನೆಟ್ಟರು. ಅಂಜುಮಾನಗಳಲ್ಲಿ ವಿದ್ಯೆಯೊಂದಿಗೆ ಜನರಿಗೆ ಪಾಶ್ಚಾತ್ಯರ ಹೊಸ ರಾಷ್ಟ್ರೀಯ ಸಿದ್ಧಾಂತಗಳೂ ಕಲಿಸಲಾದವು.

ಇಷ್ಟೆಲ್ಲಾ ಚಟುವಟಿಕೆಯಿಂದ ಗೈಯುತ್ತಿರುವಾಗ ನಾಯಕರಲ್ಲಿ ರಾಜದ್ರೋಹದ ನೆರಳು ಸಹ ಇರಲಿಲ್ಲ. ಅವರು ಜನರಲ್ಲಿ ವಿದ್ಯೆಯನ್ನು ಹರಡಿ ಅದರ ಮೂಲಕ ಅವರನ್ನು ಬಲವಂತರನ್ನಾಗಿ ಮಾಡಿ ರಾಷ್ಟ್ರೀಯ ಸ್ವಾತಂತ್ರ್ಯಗಳನ್ನು ಈಸುಕೊಳ್ಳಬೇಕೆಂದು ನೆನಸಿದ್ದರು. ರಾಜ್ಯದ ಆಡಳಿತೆಯು ಕೆಟ್ಟುಹೋಗಲಿಕ್ಕೆ ಕಾರಣವು ಅರಸನ ಸುತ್ತಲಿರುವ ಧೂರ್ತ ಮಂತ್ರಿವರ್ಗವೆಂದರಿತು ಆ ಕಂಟಕವನ್ನು ನಿವಾರಿಸಬೇಕೆಂದು ನಿಶ್ಚಯಿಸಿದ್ದರಲ್ಲದೆ ಅರಸನ ಮೇಲೆ ಬದಲೆಣಿಸಲಿಲ್ಲ.

ಈ ಸಮಯದಲ್ಲಿ ದೈವವು ರಾಷ್ಟ್ರೀಯ ಪಕ್ಷದವರಿಗೆ ಕೈನೀಡಿತು. ಯಾವದೊಂದು ಕಾರಣದಿಂದ ಪಾರ್ಸಿ ಜನರ ಗುರುಗಳಾದ "ಮುಲ್ಲ"ರಿಗೂ ಅಧಿಕಾರಿ ವರ್ಗಕ್ಕೂ ಜಗಳಬಂದು ಮುಲ್ಲರು ಮುಖ್ಯಪಟ್ಟಣವಾದ ತೆಹರಾನ್ ಬಿಟ್ಟು, ಅಲ್ಲಿಂದ ಕೆಲವು ಮೈಲು ದೂರ ಜಯರಾತ್ ಎಂಬ ಸ್ಥಳವನ್ನು ಸೇರಿದರು. ಇದರಿಂದ ಇಡೀ ಪಟ್ಟಣಕ್ಕೆ ಬಹಿಷ್ಕಾರ ಹಾಕಿದಂತಾಗಿ ಜನರು ಮುಲ್ಲರನು ಒಡಂಬಡಿಸಿ ಕರೆತರಬೇಕೆಂದು ರಾಜನನ್ನು ಪ್ರಾರ್ಥಿಸಿದರು. ಅಧಿಕಾರಿಗಳು ತಮ್ಮ ಹಟ ಬಿಡಲಿಲ್ಲ. ಆಗ್ಯೆ ಜನರು ಒಂದಾಗಿ ನಗರವನ್ನು ಬಿಟ್ಟು ನಿಯೋಗಿಗಳ ಶಿಬಿರವನ್ನು ಸೇರಿದರು. ಈ ಸಮಯವನ್ನು ಸಾಧಿಸಿ ರಾಷ್ಟ್ರೀಯ ಪಕ್ಷದ ನಾಯಕರು ಜನರಿಗೂ ಮುಲ್ಲರಿಗೂ ಪ್ರಜೆಗಳ ಹಕ್ಕುಗಳ ವಿಶೇಷತ್ವವನ್ನು ತಿಳಿಯಹೇಳಿ ಲೋಕನಿಯುಕ್ತ ರಾಜ್ಯಪದ್ಧತಿಯನ್ನು ಕೇಳಿಕೊಳ್ಳಬೇಕೆಂದು ಬೋಧಿಸಿದರು. ಮೃತ್ಯುಶಯ್ಯದಲ್ಲಿದ್ದ ನಾಸಿರುದ್ದೀನ್ ಶ್ಯಾಹನು ಇವರ ಕೋರಿಕೆಯನ್ನು ನೆರವೇರಿಸಿ ಪರ್ಶಿಯಾ ದೇಶದಲ್ಲಿ "ಮೆಜ್ಲಿಸ್" ಎಂಬ ಹೆಸರಿನಿಂದ ಪಾರ್ಲಿಮೆಂಟನ್ನು ಸ್ಥಾಪಿಸಿದನು. ಆದರೆ ಇವನ ಉತ್ತರಾಧಿಕಾರಿಯಾದ ಮಹಮ್ಮದ್ ಆಲಿ ಶ್ಯಾಹನು ಮೆಜ್ಲಿಸನ್ನು ತುಚ್ಛೀಕರಿಸಿ ಸಭೆಯನ್ನು ಮುರಿದು ಸ್ವೇಚ್ಛೆಯಿಂದ ಆಳಿದನು. ಅಂಜುಮಾನಗಳು ತನ್ನ ಇಷ್ಟು ತೊಂದರೆಗಳಿಗೆ ಕಾರಣವೆಂದು ನೆನಸಿ ಅವನ್ನು ಮುಚ್ಚಿದನು. ರಾಷ್ಟ್ರೀಯಪಕ್ಷದವರನ್ನು ಗಡಿಪಾರು ಮಾಡಿಸಿದನು. ಆದರೆ ಆ ಪಕ್ಷವು ಇನ್ನಷ್ಟು ಬಲಗೊಂಡಿತು.

ಎಷ್ಟು ಹೇಳಿದರೂ ಶ್ಯಾಹನು ತನ್ನ ಹಟವನ್ನು ಬಿಡಲಿಲ್ಲ. ಜನರು ಅರಸನ ಎದುರುನಿಂತರು. ಸರ್ದಾರ್ ಅಸಾದ್ ಸಿಫಾದಾರ್ ಎಂಬ ನಾಯಕರು ತಮ್ಮ ಸೈನ್ಯದೊಡನೆ ರಾಜಧಾನಿಗೆ ಹೋಗಿ ಶ್ಯಾಹನನ್ನು ಸಿಂಹಾಸನದಿಂದ ಇಳಿಸಿ ಅವನ ಮಗನಾದ ಸುಲ್ತಾನ್ ಅಹ್ಮದ್ ಮಿರ್ಜನಿಗೆ ಪಟ್ಟಕಟ್ಟಿ ಪಾರ್ಲಿಮೆಂಟನ್ನು ಸ್ಥಾಪಿಸಿದರು.

ಎರಡು ಸಂಗತಿಗಳು ಪಾರ್ಸಿ ಜನರಿಗೆ ಉತ್ತೇಜಕವಾದವು. ರಷ್ಯಾ ಜಪಾನ್ ಯುದ್ಧವು ಒಂದು; ಇದರಿಂದ ಇಡೀ ಏಶ್ಯಾಖಂಡದಲ್ಲಿ ಹೊಸಚೇತನವೇ ಹರಿದು ತೆರೆದಿದ್ದಿತೆನ್ನಬಹುದು. ತುರ್ಕ್ಯಾದ ಜನರು ಅಬ್ದುಲ್ ಹಾಮಿದನನ್ನು ತಳ್ಳಿ ಪಾರ್ಲಿಮೆಂಟನ್ನು ಸ್ಥಾಪಿಸಿದ್ದು ತಮ್ಮ ಸ್ವಂತ ಧರ್ಮವನ್ನು ಅವಲಂಬಿಸಿ ತಮ್ಮಂತೆ ನಿರ್ಬಂಧಗಳಿಗೊಳಗಾದ ನೆರೆ ದೇಶದ ಜನರ ದೃಷ್ಟಾಂತವು ಇವರಿಗೆ ಅಧಿಕ ಉತ್ತೇಜನ ಕೊಟ್ಟಿರಬೇಕು.

ಇಷ್ಟುಮಟ್ಟಿಗೆ ಪಾರ್ಶಿ ರಾಷ್ಟ್ರೀಯ ಪಕ್ಷದವರು ವಿವೇಕದಿಂದ ವರ್ತಿಸಿದ್ದಾರೆ. ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದ್ದಾರೆ. ಜನರಿಗೆ ಭದ್ರತೆಯನ್ನು ಕೊಟ್ಟಿದ್ದಾರೆ. ವ್ಯಾಪಾರ ಉದ್ಯೋಗಗಳಿಗೆ ಉತ್ತೇಜನಕೊಟ್ಟಿರುವರು. ರಾಷ್ಟ್ರೀಯ ಪಕ್ಷವು ಮುಂದೆ ನಂತೆ ಜಾಗರೂಕತೆಯಿಂದಲೂ ವಿವೇಕದಿಂದಲೂ ತಾಳ್ಮೆಯಿಂದಲೂ ವರ್ತಿಸಿದರೆ ಪರ್ಶಿಯಾ ದೇಶಕ್ಕೆ ಉದಯಿಸಿದ ಸುದಿನವು ಬೆಳೆಯುತ್ತಾ ಬರುವದು.

~~~~~~

ಗ್ರಾಮ ಬ್ಯಾಂಕುಗಳು ಯಾನೆ ಪರಸ್ಪರ ಸಹಾಯಕ ಸಂಘಗಳು.

ಯಾವದಾದರೂ ಗ್ರಾಮದಲ್ಲಿ ಇಂಥಾ ಬ್ಯಾಂಕನ್ನು ಸ್ಥಾಪಿಸಬೇಕೆಂತ ಬೇಸಾಯಗಾರರು ಅಪೇಕ್ಷಿಸುವದಾದರೆ ಅವರು ಪ್ರಥಮತಃ ಕೆಳಗಿನ ಈ ಸಂಗತಿಯನ್ನು ತಮ್ಮೊಳಗೇನೇ ಚರ್ಚಿಸಿ ಆಲೋಚಿಸಬೇಕು. ಕೆಳೆ ಕಾಣಿಸಿದಂತೆ ಇಂಥಾ ಬ್ಯಾಂಕಿನಿಂದ [illegible] ಬ್ಯಾಂಕಿಗೆ ಸೇರಲಿಕ್ಕೆ ಅಪೇಕ್ಷಿಸುವ ಜನರ ಹೆಸರುಗಳ ಪಟ್ಟಿಯನ್ನು ತಯಾರಿಸಬೇಕು. ಬ್ಯಾಂಕಿಗೆ ಸೇರುವ ಎಲ್ಲಾ ಜನರು ಒಟ್ಟಾಗಿಯೂ ಪ್ರತ್ಯೇಕವಾಗಿಯೂ ಬ್ಯಾಂಕಿನ ಸಾಲಕ್ಕೆ ಜವಾಬ್ದಾರರಾಗುತ್ತಾರೆಂಬುದು ಚನ್ನಾಗಿ [illegible] ಯಾವಾತನ ಪ್ರಾಮಾಣಿಕತೆಯ ಕುರಿತು ಸಂಶಯಗಳುಂಟೋ ಅಥವಾ ಯಾವಾತನು [illegible] ಜಾಗರೂಕತೆಯಿಂದ ಇರುವದಿಲ್ಲವೋ ಯಾ ಸಾಲವನ್ನು [illegible] ಮಾಡದೆ [illegible] ಅಂಥವರನ್ನು [illegible] ಸೇರಿಸಿಕೊಳ್ಳಲೇ ಬಾರದು [illegible] ಪಟ್ಟಿಯಲ್ಲಿ [illegible] ಈ ರೀತಿ ಪಟ್ಟಿಯನ್ನು ತಯಾರಿಸಿದ ನಂತರ ಆ ಪಟ್ಟಿಯಲ್ಲಿದ್ದ [illegible] ಮದರಾಸಿನಲ್ಲಿರುವ ಕೋಪರೇಟಿವ್ ಕ್ರೆಡಿಟ್ [illegible] ರಿಜಿಸ್ಟ್ರಾರರಿಗೆ [illegible] ಬರಕೊಳ್ಳಬೇಕು. ಈ ಕುರಿತು [illegible] ಇನ್ಸ್‌ಪೆಕ್ಟರ್ [illegible] ಉದ್ಯೋಗಸ್ಥರು [illegible] ಸಮಾಧಾನ ಹೊಂದಿದರೆ ಸಂಘವು [illegible] ತದನಂತರ ಆ ಉದ್ಯೋಗಸ್ಥನೇ ಪುನಃ ಆ ಗ್ರಾಮಕ್ಕೆ ಹೋಗಿ ಪಂಚಾಯತರನ್ನು ಆರಿಸುವದಕ್ಕೂ ಕೆಲಸಗಳನ್ನು ಆರಂಭಿಸುವದಕ್ಕೂ ಅನುಮತಿ ಕೊಡುವನು. ಪಂಚಾಯತರು ಎಲ್ಲ ಮೆಂಬರರ ಕಡೆಯಿಂದ ಬ್ಯಾಂಕಿನ ಕೆಲಸವನ್ನು ನಡಿಸತಕ್ಕವರಿಂದ ಆ ಪಂಚಾಯತರು ಎಲ್ಲಾ ಮೆಂಬರರ ಪೈಕಿ ಹೆಚ್ಚು [illegible] ಹೆಚ್ಚು [illegible] ಇರುವವರಾಗಬೇಕು. ಪಂಚಾಯತರನ್ನು ಆರಿಸಿದ ನಂತರ ಅವರ ಪೈಕಿ ಒಬ್ಬರನ್ನು ಅವರು ಸಭಾಪತಿಯಾಗಿ ಆರಿಸಿಕೊಳ್ಳಬೇಕು.

ಇದಾದ ನಂತರ ಮೆಂಬರರು ತಾವಾಗಿ ಎಷ್ಟು ಹಣವನ್ನು ಠೇವಣಿಯಾಗಿ ಇಡುವರೆ ಸಿದ್ಧರಿದ್ದಾರೆಂತ [illegible] ಯಬೇಕು. ಪ್ರಥಮ ವರುಷಕ್ಕೆ ಹೊರಗೆ ಸಾಲ ಕೊಡಲಿಕ್ಕೆ ಸುಮಾರು ಎಷ್ಟು ಹಣಬೇಕೆಂದು ಗೊತ್ತುಮಾಡಿಕೊಳ್ಳಬೇಕು. ಸುಮಾರು ೨೦ ಜನ ಮೆಂಬರರು ಇದ್ದಾರೆಂತಲೂ ಅವರು [illegible] ಠೇವಣಿ ಹಣವು ರೂ ೧೦೦ ಎಂತಲೂ ಆಲೋಚಿಸಿಕೊಳ್ಳುವಾ. ಬಹುಶಃ ಈ ೨೦ ಜನರು ಪ್ರಥಮ ವರುಷದ ಕೆಲಸವನ್ನು ನಡಿಸುವರೆ ಅವರಿಗೆ ರೂ ೪೦೦ ಬೇಕಾಗುವದು, ಹಾಗಾದರೆ ಅವರಿಗೆ ಶುರುವಿನ ವರುಷದ ಕೆಲಸಕ್ಕೆ ಸಾಕಾಗಲಿಕ್ಕೆ ಇನ್ನೂ ಜಾಸ್ತಿಯಾಗಿ ರೂ. ೩೦೦ ಪಡಿಯಬೇಕಾಗುವದು. ಅವರು ತಮ್ಮ ಸ್ಥಳೀಯ ಸಾಲ ಕೊಡುವ ಸಾಹುಕಾರನ ಒಳಗೆ ಹೋಗಿ ತಮ್ಮ ಒಟ್ಟು ಜವಾಬ್ದಾರಿಯಿಂದ ಆ ಹಣವನ್ನು ಸಾಧಾರಣ ದರದ ಬಡ್ಡಿಯಲ್ಲಿ ಅಂದರೆ ಶೇಕಡಾ ೫ ಯಾ ೬ ರಂತೆ ಸಾಲವಾಗಿ ಕೊಡುವನೋ ಎಂದು ತಿಳಿಯಬೇಕು. ಬಹುಶಾ ಆ ಸಾಹುಕಾರನು ಸಮ್ಮತಿಸುವನು. ಆತ ಸಮ್ಮತಿಸಿದರೆ ಆ ಹಣವನ್ನು ಪಡದು ತ್ವರ್ಯದಲ್ಲಿ ಸಾಲವಾಗಿ ಕೊಡಬೇಕು. ಆತನು ತಿರಸ್ಕರಿಸಿದರೆ ಸಂಘದವರು ಆ ವರೇಗೆ ಏನು ಕೆಲಸ ನಡಿಸಿದ್ದಾರೆ ಎಂಬದರ ತಪಸೀಲು ಕಾಣಿಸಿ ಎಷ್ಟು ಹಣ ಬೇಕಾಗಿದೆ ಮತ್ತು ಹಣ ಶೇಕಡಾ $7\frac{1}{2}$ ಬಡ್ಡಿಯಲ್ಲಿ ಬೇಕೆಂತ ಕಾಣಿಸಿ ಮದ್ರಾಸ್ ಕೊವೊಪರೇಟಿವ್ ಕ್ರೆಡಿಟ್ ಸಂಘಗಳ ರಿಜಿಸ್ಟ್ರಾರರವರಿಗೆ ಬರಕೊಳ್ಳಬೇಕು. ಆ ರಿಜಿಸ್ಟ್ರಾರರವರು ಬ್ಯಾಂಕಿಗೆ ಹಣ ಅಗತ್ಯವಾದರೆ ಅದನ್ನು ಪಡಿಯಲಿಕ್ಕೆ ಸಹಾಯ ಮಾಡುವರಲ್ಲದೆ ಲೆಖ್ಖಗಳನ್ನು ಹ್ಯಾಗೆ ಇಡಬೇಕೆಂತಲೂ ಕೆಲಸಗಳನ್ನು ಹ್ಯಾಗೆ ನಡಿಸಬೇಕೆಂತಲೂ ಸಹಾಯ ಬೇಕಾಗುವ ಇತರ ಸಂಗತಿಗಳಲ್ಲಿ ಸಹಾ ಅವಶ್ಯವುಳ್ಳ ಸಕಲ ಅನುಜ್ಞೆಗಳನ್ನು ಕೊಡುವರು.

ಇಂಥಾ ಸಂಘದ ಹಣಗಳು ನಷ್ಟವಾಗದಂತೆ ಅನೇಕ ತರದ ಕಾಪುಗಳಿರುವವು. ಅವು ಯಾವವೆಂದರೆ (೧) ಸಂಘಕ್ಕೆ ಸೇರಿದವರಿಗೇನೇ ಸಾಲ ಕೊಡುವದು; ಇತರ ಮಿಕ್ಕವರಿಗೆ ಸಿಕ್ಕದು. ಸಂಘದ ಮೆಂಬರರು ಒಂದೇ ಗ್ರಾಮಸ್ಥರಾದುದರಿಂದ ಪ್ರತಿ ಒಬ್ಬನ ಸ್ಥಿತಿಗತಿಯು ಇನ್ನೊಬ್ಬನಿಗೆ ಗೊತ್ತಿದ್ದೇ ಇರುವದು (೨) ಸಾಲವನ್ನಪೇಕ್ಷಿಸುವ ಮೆಂಬರನು ಅದರ ಉದ್ದಿಶ್ಯವನ್ನು ಮಿಕ್ಕ ಮೆಂಬರರಿಗೆ ಹೇಳಿ ಸಮಾಧಾನ ಪಡಿಸದ ವಿನಹಾ ಆತಗೆ ಸಾಲ ದೊರಕದು. (೩) ಆ ರೀತಿ ಸಾಲ ಪಡದವನು ಆ ಉದ್ದಿಶ್ಯದ ಸಲುವಾಗಿಯೇ ಅದನ್ನು ಉಪಯೋಗಿಸಿಕೊಳ್ಳಬೇಕಲ್ಲದೆ ಅನ್ಯಥಾ ವಿನಿಯೋಗಿಸಿದರೆ ಸಂಘದವರು ಕೂಡಲೇ ಹಣವನ್ನು ವಸೂಲು ಮಾಡುವರು. (೪) ಸಾಲ ಕೇಳುವ ಮೆಂಬರನು ಮಿಕ್ಕ ಮೆಂಬರರಲ್ಲಿ ಇಬ್ಬರ ಜಾಮೀನು ಕೊಡತಕ್ಕದ್ದು. (೫) ಈ ಸಂಘಕ್ಕೆ ಸೇರುವ ಪ್ರತಿ ಒಬ್ಬ ಮೆಂಬರನು ಅದರ ಲಾಭ ನಷ್ಟಕ್ಕೆ ಬಾಧ್ಯನಾಗುವದರಿಂದ ಅದು ತನದೇ ಎಂಬ ವಾತ್ಸಲ್ಯದಿಂದ ನಡಕೊಳ್ಳುವನು. (೬) ಇದಲ್ಲದೆ ಈ ಸಂಘದ ಲೆಖ್ಖ ಪತ್ರಗಳನ್ನು ಮೇಲೆ ಸ್ಥಾಪಿಸಿದ ಸರಕಾರಿ ಇಲಾಖಾ ಉದ್ಯೋಗಸ್ಥರು ಆಗಾಗ್ಗೆ ಪರಿಶೋಧಿಸುವದಲ್ಲದೆ ಸಂಘದ ಕಾರ್ಯ ಸುಧಾರಣೆಯ ಕುರಿತು ಅಗತ್ಯವಿರುವ ಅನುಭವಗಳನ್ನೂ ಜಾಗರೂಕತೆಯನ್ನೂ ಆಗಾಗ್ಗೆ ಹೇಳಿಕೊಡುತ್ತಿರುವರು. ಇವೆಲ್ಲ ಪ್ರತಿಬಂಧಗಳಿರುವುದರಿಂದ ಇಂಥಾ ಸಂಘಗಳಿಗೆ ಸಾಲಕೊಡಲಿಕ್ಕೆ ಏನೂ ಭಯವಿರುವದಿಲ್ಲ. ಇಂಥ ಸಂಘಗಳ ಪೈಕಿ ಒಂದರಲ್ಲಾದರೂ ಒಂದೇ ಪೈ ಸಹಾ ಈ ವರೆಗೆ ನಷ್ಟವಾಗುದಿಲ್ಲ. ಆದ್ದರಿಂದ ಕೂಡಾ ಇಂಥಾ ಸಂಘಗಳು ಎಂದೆಂದಿಗೂ ಅಳಿದು ಹೋಗಲಿಕ್ಕೆ ಕಾರಣವಿಲ.

ಇಂಥಾ ಸಂಘಗಳನ್ನು ಎಲ್ಲಾ ಊರುಗಳಲ್ಲಿ ಸ್ಥಾಪಿಸಿ, ಜನರ ವೃದ್ಧಿಯನ್ನು ಬೆಳೆಸಬೇಕೆಂತ ಸರಕಾರದವರು ಹೆಚ್ಚು ಆತುರದಿಂದಿರುವರು, ಮಾತ್ರವಲ್ಲ, ಆ ಕುರಿತು ಅಗತ್ಯವಿರುವ ಎಲ್ಲಾ ಸಹಾಯ ಮಾಡಲು ಸಿದ್ಧರಾಗಿರುವರು. ಈ ಕುರಿತು ಪ್ರತ್ಯೇಕ ಕಾನೂನು ಸಹಾ ಏರ್ಪಡಿಸಿರುತ್ತಾರೆ. ಜಿಲ್ಲಾ ಕಲೆಕ್ಟರರವರಿಗೆ ಗೌರವದ ಒಬ್ಬ ಅಧಿಕಾರಿಯನ್ನು ಈ ಸಂಘಗಳ ಮೇಲ್ವಿಚಾರವನ್ನು ನೋಡುವುದಕ್ಕೋಸ್ಕರವೇ ನೇಮಿಸಿರುತ್ತಾರೆ. ಅವರ ಕೈಕೆಳಗೆ ಒಬ್ಬರು ಡಿಪ್ಯುಟಿ ಕಲೆಕ್ಟರರೂ ಕೆಲವು ಇನ್ಸ್‌ಪೆಕ್ಟರರೂ ಮೊದಲಾದ ಹುದ್ದೆದಾರರು ಸಹಾ ಇರುವರು. ಇಂಥ ಸಂಘ ಯಾನೆ ಬ್ಯಾಂಕ್ ರಿಜಿಸ್ಟ್ರು ಮಾಡುವದರಿಂದ ಅನೇಕ ಪ್ರಯೋಜನಗಳಿವೆ. ಆ ಪೈಕಿ ಕೆಲವು ಯಾವವೆಂದರೆ (೧) ಈ ಸಂಘದ ಕಡೆಯಿಂದ ಯಾ ಸಂಘಕ್ಕೆ ಬರಕೊಡುವ ದಸ್ತೈವಜುಗಳು ರಸ್ಸೈಯ ಮೇಲೆ ಬರತಕ್ಕ ಅಗತ್ಯವಿರುವದಿಲ್ಲ. ಅವುಗಳು ಖಾಲಿ ಕಾಗದದ ಮೇಲೆಯೇ ಬರಿಯಬಹುದು. (೨) ಮೆಂಬರರು ಪಡದ ಸಾಲಕ್ಕೋಸ್ಕರ ಸಂಘಕ್ಕೆ ಬರಕೊಡುವ ದಸ್ತಾವೇಜುಗಳು ಖಾಲಿ ಕಾಗದದ ಮೇಲೆ ಬರದು ಸಬ್ ರಿಜಿಸ್ಟ್ರಾರರವರ ಮುಂದೆ ಹಾಜರು ಪಡಿಸಿದರೆ ಏನೊಂದೂ ರಿಜಿಸ್ಟ್ರಿ ಫೀಸ್ ಪಡಕೊಳ್ಳದೇನೇ ರಿಜಿಸ್ಟ್ರಿ ಮಾಡಿಕೊಡುವನು. (೩) ಈ ಸಂಘಕ್ಕೆ ಜಿಲ್ಲಾ ಗಜೇಟಿನ ಒಂದು ಪ್ರತಿಯು ಧರ್ಮಾರ್ಥವಾಗಿ ಸಿಕ್ಕುವದು. (೪) ಈ ಸಂಘದಿಂದ ಪಡದ ಸಾಲವನ್ನು ಮೆಂಬರನು ನಿರ್ಣಯಿಸಿದ ವಾಯಿದೆ ಒಳಗೆ ತನಗೆ ಅನುಕೂಲವಿದ್ದಂತೆ ಸಾಲವನ್ನು ಕಂತುಗಳಿಂದ ಪಾವತಿಮಾಡಬಹುದು.

ಪ್ರಿಯ ವಾಚಕರೇ? ಇಂಥಾ ಒಂದು ಸಂಘವು ಪುತ್ತೂರಿನಲ್ಲಿ ಸ್ಥಾಪನೆಯಾಗಿ ಕೆಲಸ ನಡಿಯುತ್ತಿದೆ. ದೇಶಾಭಿಮಾನಿಗಳಾದ ನೀವುಗಳೆಲ್ಲರೂ ಈ ವಿಷಯದಲ್ಲಿ ಮನಃಪೂರ್ವಕವಾಗಿ ಮನಸ್ಸು ಕೊಟ್ಟು ಇಂಥಾ ಸಂಘಗಳನ್ನು ಅಲ್ಲಲ್ಲಿ ಸ್ಥಾಪಿಸುವಿರಾಗಿ ನಂಬುತ್ತೇವೆ.

ಮೊಳಹಳ್ಳಿ ಶಿವರಾವ್.
ಕಾರ್ಯದರ್ಶಿ,
ಪುತ್ತೂರು ವರ್ಗದಾರರ ಸಂಘ.

~~~~~~

ಸಂಯುಕ್ತ ಸಂಸ್ಥಾನಗಳಲ್ಲಿಯ ಸಕ್ಕರೆ ಕೈಗಾರಿಕೆಯು. ನಮ್ಮ ಜಿಲ್ಲೆಯಿಂದ ಸಂಯುಕ್ತ ಸಂಸ್ಥಾನದ ಸುಲ್ತಾನಪುರ ಜಿಲ್ಲೆಗೆ ಸಕ್ಕರೆ ಕೈಗಾರಿಕೆಯನ್ನು ಕಲಿಯಲಿಕ್ಕೆ ಹೋಗಿದ್ದ ರಾ। ಕೆ. ವಿ ಕಾಮತರವರು ನಮ್ಮ ಜಿಲ್ಲೆಯವರ ತಿಳುವಳಿಕೆ ಜಗ್ಗೆ ಈ ಕೆಳಗಿನ ಲೇಖವನ್ನು ಪ್ರಕಟಣೆ ಒಗ್ಗೆ ಕಳುಹಿಸಿಕೊಟ್ಟಿರುವರು.

ಲಕ್ನೋ ಪಟ್ಟಣದಲ್ಲಿ ಕಳದ ದಶಂಬರ ತಿಂಗಳ ತಾ. ೨೬ರಿಂದ ೩೧ರ ವರೇಗೆ ಕೂಡಿದ ಪ್ರಿಯಾ ಪರಿಷದಿನಲ್ಲಿ ಅಲ್ಲಿಯ ಲೆಂಡ್‌ರಿಕಾರ್ಡ್ ಮತ್ತು ವ್ಯವಸಾಯದ ಅಸಿಸ್ಟಾಂಟ್ ಡಿರೆಕ್ಟರರಾದ ಖಾನ್‌ಬಹದೂರ ಸಯ್ಯದ್ ಮಹಮ್ಮದ್ ಹಾದಿಯವರು ಪ್ರದರ್ಶಿಸಿದ ಸಕ್ಕರೆ ತಯ್ಯಾರಿಸುವಿಕೆಯ ವಿಧಾನಗಳನ್ನು ನಮ್ಮಲ್ಲಿಯ ರೈತರೂ ಭೂಮಾಲಿಕರೂ ತಿಳಿಯುವರೆ ಸಂತೋಷ ಪಡುವರೆಂಬ ಭಾವನೆಯಿಂದ ಅವುಗಳನ್ನು ಈ ಕೆಳಗೆ ಸಂಕ್ಷೇಪವಾಗಿ ವಿವರಿಸಿರುವೆನು.

ಕಬ್ಬುಗಳನ್ನು ಚಿನ್ನಾಗಿ ತೊಳದಬಳಿಕ ಮೇಲೆ ಎತ್ತು ಯಾ ಕೋಣಗಳಿಂದ ನಡಿಸಲ್ಪಡುವಂಥಾ ಮೂರು ರೋಲರುಗಳುಳ್ಳ ಕಬ್ಬಿಣದ ಗಾಣಗಳಲ್ಲಿ ಹಾಕಿ ಕಬ್ಬಿನ ರಸವನ್ನು ಹಿಂಡಿ ತೆಗೆಯುವರು. ಹೀಗೆ ಹಿಂಡಿ ತೆಗೆದ ರಸವನ್ನು ಕಬ್ಬಿಣದ (ಗೆಲ್ವನೈಜ್‌) ಪಾತ್ರೆಗಳಲ್ಲಿ [illegible] ಸ್ವಚ್ಛ ಮಾಡುವರು. ಸ್ವಚ್ಛ ಮಾಡುವರೆ [illegible]

[illegible]ಗಳನ್ನು ಸುಣ್ಣದ ನೀರನ್ನು ಉಪಯೋಗಿಸುವರಲ್ಲದೆ, ಸೋಡಾ (Soda Bi-carb) ಮತ್ತು ಸೋಡಿಯಂ ಫಾಸ್ಫೇಟ್ ಯಾ ಸೋಡಾ ಹೈಡ್ರೋಸಲ್ಫೈಟ್ ಈ ಪದಾರ್ಥಗಳನ್ನು ಸಹಾ ಪ್ರಯೋಗಿಸುವರು. ಈ ಪದಾರ್ಥಗಳನ್ನು ಕಬ್ಬಿಣದ ಪಾತ್ರೆಗಳಲ್ಲಿರುವ ಕಬ್ಬಿನ ರಸಕ್ಕೆ ಕೂಡಿಸಿ ಅದರ ನಂತರ ಬಿಸಿಮಾಡಿ ರಸವು ಸಾಧಾರಣ ದಪ್ಪವಾಗುವ ತನಕ ಅದನ್ನು ಕುದಿಸುವರು. ಹೀಗೆ ಕುದಿಸಿ ತೀರಿದ ನಂತರ, ಮಣ್ಣಿನ ಗಡಿಗೆಗಳಲ್ಲಿ ಈ ರಸವನ್ನು ಹೊಯ್ದು ಏಳು ಯಾ ಎಂಟು ದಿವಸಗಳ ತನಕ ಇಟ್ಟ ನಂತರ ರಸವು ಅಲ್ಲಿಯೇ ಗಟ್ಟಿಯಾಗುವದು. ಹೀಗೆ ಗಟ್ಟಿಯಾದ ಕಬ್ಬಿನ ರಸವನ್ನು ಯಂತ್ರಗಳಿಗೆ ಕೊಟ್ಟು ಇದರಿಂದ ಶುದ್ಧವಾದ ಸಕ್ಕರೆಯನ್ನು ತಯ್ಯಾರಿಸುವರು. ಯಂತ್ರದಲ್ಲಿ ಸಕ್ಕರೆಯು ತಯ್ಯಾರಿಸಲ್ಪಡುವದಲ್ಲದೆ ಯಂತ್ರದಿಂದ ಹೊರಗೆ ಬರುವ ಕಾಕಂಬಿಯಿಂದ ಬೆಲ್ಲವನ್ನು ತಯ್ಯಾರಿಸಿ ಈ ಬೆಲ್ಲವನ್ನು ಪೇಟೆಯ ದಾರಣೆಗೆ ಮಾರಬಹುದು.

ಈ ವಿಧಾನಗಳಲ್ಲಿ ಸಕ್ಕರೆಯನ್ನು ತಯ್ಯಾರಿಸುವದಕ್ಕೆ ಹೇರಳ ದ್ರವ್ಯವು ಬೇಕಾಗಿರುವದಿಲ್ಲ. ಈ ಒಗ್ಗೆ ಬೇಕಾದ ಎಲ್ಲಾ ಸಾಹಿತ್ಯಗಳಿಗೂ ರೂ ೬೦೦ ಯಾ ರೂಪಾಯಿ ೭೦೦ ಬೇಕಾಗುವದರಿಂದ ಸ್ವಲ್ಪ ಹಣವಿರುವ ಸಾಧಾರಣದ ತರದ ರೈತ ಯಾ ಭೂಮಾಲಿಕರು ಈ ವಿಧಾನಗಳಲ್ಲಿ ಸಕ್ಕರೆಯನ್ನು ತಯ್ಯಾರಿಸಲು ಪ್ರಯತ್ನಿಸಬಹುದು. ಈ ರೀತಿಯಲ್ಲಿ ತಯ್ಯಾರಿಸಿದ ಸಕ್ಕರೆಯು ಪೇಟೆಯಲ್ಲಿ ವಿಕ್ರಯಿಸಲ್ಪಡುವ ಜಾವಾ ಸಕ್ಕರೆಯಷ್ಟೇ ಒಳ್ಳೇದಾಗಿರುವದು. ಪರಸ್ಪರ ಸಹಾಯಕ ಸಂಘಗಳಿಂದ ಕೈಕೊಳ್ಳಬೇಕಾಗಿರುವ ಹೆಚ್ಚಿನ ಹಣ ತಗಲುವಂಥಾ ಸಕ್ಕರೆ ತಯಾರಿಸುವ ರೀತಿಯನ್ನು ಮೆ| ಹಾಡಿಯವರು ಈ ಮೊದಲು ರಚಿಸಿದ್ದರು. ಆದರೆ ಮೇಲೆ ಸೂಚಿಸಿದ ರೀತಿಯು ಇವರಿಂದ ಶೋಧಿಸಲ್ಪಟ್ಟು ಆಗ್ರಾದಲ್ಲಿ ಪ್ರಥಮತಃ ಪ್ರದರ್ಶಿಸಲ್ಪಟ್ಟದ್ದಾಗಿರುವದು. ಸಕ್ಕರೆ ಕೈಗಾರಿಕೆಯು ಮೆ| ಹಾಡಿಯವರು ನಿರಂತರ ಪ್ರಯತ್ನಪಟ್ಟು ಕೈಗಾರಿಕೆಯು ಅಭಿವೃದ್ಧಿ ಪಡುವಂತೆ ತಕ್ಕ ವಿಧಾನಗಳನ್ನು ರಚಿಸಿರುವದರಿಂದ ದೇಶಾಭಿವೃದ್ಧಿಯನ್ನು ನೆರವೇರಿಸಿದ ಹಲವು ಮಹನೀಯರಲ್ಲಿ ಇವರ ಕೀರ್ತಿಯು ದೇಶದಲ್ಲಿ ಸ್ಥಿರಸ್ಥಾಯಿಯಾಗಿ ನೆಲೆಗೊಳ್ಳುವದು.

ಮೆ| ಹಾಡಿಯವರು ಪರಿಶೋಧಿಸಿದ ಈ ನವೀನ ಸಕ್ಕರೆ ತಯ್ಯಾರಿಸುವ ಕ್ರಮವನ್ನು ನಾಗುವಳಿಗಾರರೂ ಭೂಮಾಲಿಕರೂ ಕೈಕೊಳ್ಳುವರೆಂಬದಾಗಿ ಕೋರುತ್ತೇನೆ. ಸಕ್ಕರೆಯನ್ನು ಈ ರೀತಿ ತಯ್ಯಾರಿಸಿದರೆ ಸೇಕಡಾ ೫೦ರಷ್ಟು ನಫೆಯು ಸಿಕ್ಕಬಹುದೆಂಬದಾಗಿ ಮೆ| ಹಾಡಿಯವರು ರುಜುಪಡಿಸಿರುವರು. ನೀರಾಶ್ರಯವು ಹೇರಳವಿರುವ ದಕ್ಷಿಣಕನ್ನಡದಂಥಾ ಜಿಲ್ಲೆಗಳಲ್ಲಿ ಕಬ್ಬನ್ನು ನಾಗವಳಿ ಮಾಡಿ ಸಕ್ಕರೆಯನ್ನು ಹೇರಳವಾಗಿ ತಯ್ಯಾರಿಸಬಹುದು. ಇದಕ್ಕೆ ಮುಖ್ಯವಾಗಿ ಬೇಕಾದ್ದೇನೆಂದರೆ ಹಣವು. ಮೇಲಾಟವು ಬಹಳವಾಗಿರುವ ವಕೀಲ, ಸರಕಾರಿ ನೌಕರಿ ಮೊದಲಾದ ವೃತ್ತಿಗಳನ್ನು ಪಡಿಯುವರೆ ಪ್ರಯತ್ನಿಸುವ ತರುಣರನೇಕರು ತಮ್ಮ ಈ ನಿಷ್ಫಲವಾದ ಪ್ರಯತ್ನಗಳ ಬದಲಾಗಿ ಕೈಗಾರಿಕೆಗಳನ್ನು ಕಲಿತರೆ ತಮ್ಮ ಒಳ್ಳೇದನ್ನು ತಾವೇ ಸಾಧಿಸುವರಲ್ಲದೆ ಸಭೆಗಳಲ್ಲಿ ಅನೇಕ ಬರಿಯ ಮಾತು ಪ್ರಸಂಗಗಳನ್ನು ಮಾಡುತ್ತಿರುವ ದೇಶಸೇವಕರಕ್ಕಿಂತಲೂ ಲೇಸಾದ ತರದಲ್ಲಿ ದೇಶಾಭಿವೃದ್ಧಿಯನ್ನು ಕಾರ್ಯತಃ ಪ್ರಯತ್ನಿಸಿದಂತಾಗುವದು. ಸಕ್ಕರೆ ಕಾರ್ಖಾನೆಗಳನ್ನು ಇಲ್ಲಿ ಸ್ಥಾಪಿಸಿ ಇವುಗಳಲ್ಲಿ ತಯ್ಯಾರಿಸಿದ ಸಕ್ಕರೆಯನ್ನು ವಿದೇಶಿ ಸಕ್ಕರೆಯ ದರದಲ್ಲಿಯೇ ಮಾರುವದು ಅಸಾಧ್ಯವೆಂತ ಕೆಲವರ ಅಭಿಪ್ರಾಯವಾಗಿರುತ್ತದೆ. ಆದರೆ ಕಾರ್ಖಾನೆಯು ಒಳ್ಳೆ ತರಬೇತಾದವರಿಂದ ನಡಿಸಲ್ಪಟ್ಟು ನವೀನ ಯಂತ್ರಸಾಹಿತ್ಯಗಳೆಲ್ಲವುಗಳಿಂದ ಪೂರ್ಣವಾಗಿದ್ದರೆ ವಿದೇಶ ಸಕ್ಕರೆಯ ಮೇಲಾಟವಿದ್ದರೂ ನಷ್ಟವಿಲ್ಲದೆ ಈ ಕೈಗಾರಿಕೆಯನ್ನು ನಡಿಸಲು ಸಾಧ್ಯವಾಗುವದು.

ಸಕ್ಕರೆ ತಯ್ಯಾರಿಯ ಈ ನವೀನ ವಿಧಾನದ ಕುರಿತು ಬೇಕಾದ ಮಾಹಿತಿಯನ್ನು ಮತ್ತು ಯಂತ್ರಗಳ ಅನುಭವವನ್ನು ಬೇಕಾದವರು ಮೆ| ಹಾಡಿಯವರಿಗೆ ಯಾ ಈ ಕೆಳಗೆ ದಸ್ಕತು ಮಾಡಿದವರಿಗೆ ಬರಕೊಂಡು ತಿಳಿಯಬಹುದು.

Gauri gunj D R Ry
Sultanpur Dt U P
1st January 1910

ಕೆ ವಿ ಕಾಮತ್
Sugar Student

ಸ್ವೇಚ್ಛಾವ್ಯಾಯಾಮಿಕ ಟೀಕೆಗಳು.

ಗ್ರಹಗತಿ.

(ನಮ್ಮ ಬಾತ್ಮೀದಾರರಿಂದ)

ಪ್ರಪಂಚದಲ್ಲಿ ಮನುಜ ಸಂಕುಲಕ್ಕೆ ಒಂದಲ್ಲ ಮತ್ತೊಂದು ಆಶಾಭಂಗ, ಸಂಕಷ್ಟ ಅಥವಾ ನಿರುತ್ಸಾಹಕರವಾದ ಯಾವದೊಂದು ದುರಿತವು ಸಂಭವಿಸಿತೆಂದರೆ ಗ್ರಹಗತಿ, ಗ್ರಹಚಾರ ದೋಷವೆಂದು ನಿಟ್ಟುಸುರುಬಿಡುವ ವಾಡಿಕೆಯು ಸರ್ವರಿಗೂ ತಿಳಿದೇ ಇದೆ. ನವಗ್ರಹಗಳಿಗೆ ಮಾನುಷಿಕ ತಾಪತ್ರಯಗಳ ಮೇಲೆ ಯಾವದೊಂದು ಅಧಿಕಾರವು ಇಲ್ಲವೆಂದು ಅನ್ಯಮತಸ್ಥರು ಪ್ರತಿಪಾದಿಸುವದುಂಟು. ಭಗವಂತನ ಇಚ್ಛೆಯು ಹೊರತು ಯಾವದೊಂದು ಶುಭಾಶುಭ ಜರಗುವದುಂಟೇ? ಅವನಿಂದ ನಿರ್ಮಿತವಾದ ನವಗ್ರಹಗಳಿಗೆ ಮನುಷ್ಯನ ಅದೃಷ್ಟದ ಮೇಲೆ ಸ್ವಾತಂತ್ರ್ಯವಿರುವದೆಂದು ಊಹಿಸುವದ[illegible]ರದೆ ದೈವಿಕ ಮಹತ್ವವನ್ನು ನಿಂದಿಸಿದಂತಾಗುವದೆಂದು ಹೀಯಾಳಿಸುವವರು ಬಹು ಜನರು ಇರುವರು. ಇರಲಿ, ಇದು ಭ್ರಷ್ಟವಾದುದೇ ಸರಿ. ಹೋರಾ ಎಂಬ ಜ್ಯೋತಿಷ ಗ್ರಂಥಕರ್ತನು ಹೀಗನ್ನುತ್ತಾನೆ— ಅಹೋರಾತ್ರಿ ಎಂಬ ಎರಡು ಪದಗಳಲ್ಲಿ ಮೊದಲನೆಯದರ ಪೂರ್ವಾಕ್ಷರವನ್ನೂ ಎರಡನೆಯದರ ಪರವರ್ಣವನ್ನೂ ಲೋಪಿಸುವದರ ಮೂಲಕ ಹೋರಾ ಎಂಬಭಿಧಾನವು ದೊರಕಿತು. ಪೂರ್ವಾರ್ಜಿತ ಕರ್ಮಾನುಸಾರವಾಗಿ ಅನುಭವಿಸಬೇಕಾದ ಫಲಾಫಲಗಳನ್ನು ಆಯಾಯ ಕಾಲದಲ್ಲಿ ಆಯಾಯ ನರಪ್ರಾಣಿಗಳಿಗೆ ಒದಗಿಸಲು ಅವಕಾಶವಾಗುವಂತೆ ಶುಭಾಶುಭ ಸ್ಥಾನಗಳನ್ನು ಗ್ರಹಗಳು ಜನ್ಮಕಾಲದಲ್ಲಿ ಅಲಂಕರಿಸುವವು. ಜಗತ್ಕಾರಣ ದೇವನಿಗೆ ಇರತಕ್ಕ ಅಧಿಕಾರವನ್ನು ನವಗ್ರಹಗಳು ಅತಿಕ್ರಮಿಸಲು ಶಕ್ತಿಯುಳ್ಳವೆಂಬದಾಗಿ ಯಾ ನವಗ್ರಹಗಳಿಗೆ ಶುಭಾಶುಭದಾಯಕ ಸ್ವತಂತ್ರವೇ ಇಲ್ಲವೆಂಬದಾಗಿ ಬರೆಯುವದು ಕೇವಲ ತಪ್ಪು. ದೇವರು ಗ್ರಹಗಳಿಗೆ ನೇಮಿಸಿದಂತೆ ಅವರು ಆಯಾಯ ಜಾತನು ಪೂರ್ವಕರ್ಮಾನುಗುಣವಾಗಿ ಅನುಭವಿಸಲುಳ್ಳ ಒಳಿತನ್ನೂ ಕೆಟ್ಟದನ್ನೂ ಯಥೋಚಿತ ಕಾಲದಲ್ಲಿ ಕೂಡುವ ಧರ್ಮವು ದೇವರ ಆಜ್ಞಾನುಸಾರವಾಗಿ ಅವುಗಳು ನೆರವೇರಿಸುತ್ತವೆ. ಈ ಮತಕ್ಕೆ ವ್ಯತಿರಿಕ್ತವಾಗಿ ತಿಳಿಯುವದು ಮೌಢ್ಯವೇ ಸರಿ.

ಒಬ್ಬನು ಕೇವಲ ದರಿದ್ರಾವಸ್ಥೆಯಿಂದ ಫಕ್ಕನೆ ಪ್ರಕಾಶಕ್ಕೆ ಬಂದು ಭಾಗ್ಯಶೀಲನಾದರೆ ಆಹಾ! ಅವನ ಅದೃಷ್ಟ ಬಹಳ ಒಳ್ಳೆಯದು ಎಂದು ಹಲವರು ಹೇಳುವ ರೂಢಿಯಿದೆ. ಅದೃಷ್ಟವೆಂಬ ಮಾತು ಕಾಣಲಿಕ್ಕೆ ಅಸಾಧ್ಯವಾದದ್ದು ಎಂಬ ಅರ್ಥವುಳ್ಳದ್ದು, ಇದರ ತಾತ್ಪರ್ಯವು ಗ್ರಹಗಳ ಚರ್ಯವೆಂದೇ ತಿಳಿಸಬೇಕು. ಕಾರ್ಯತಃ ದೇವರಿಂದ ನೇಮಿಸಲ್ಪಟ್ಟ ಆಯಾಯ ಅಧಿಕಾರಿಗಳು ತಂತಮ್ಮ ಉದ್ಯೋಗಕ್ಕೆ ತಗಲಿಕೊಂಡಿರುವ ಸ್ವಾತಂತ್ರ್ಯವನ್ನು ನಡಿಸಿಕೆ [illegible] ಯಾವದೊಂದು ವಿಪರೀತ ಗ್ರಹಿಕೆಗೆ ಅವಕಾಶಕೊಡತಕ್ಕ ಪ್ರಸಕ್ತಿಯಿಲ್ಲವಾಗಿ [illegible] ಪರಿಹಾರ ಮೂಲಕ ಗ್ರಹಗತಿ ದೋಷ ನಿವಾರಣೆಯಾಗುವದೆಂದು ನಮ್ಮ ಜ್ಯೋತಿಷ್ಕರು ಕೊಡುವ ಪಟ್ಟಿಯು ಹುಸಿಯಾಗಿಯು ಉಪಾಯವೆಂದು ಇನ್ನೊಂದು ಆಕ್ಷೇಪವು ಮಹಜನರು ಹೇಳುವದುಂಟು. ಈ ಆಕ್ಷೇಪವು ನಿಜವಾದರೆ ಜ್ಯೋತಿಷ್ಕರ ವೈಶಿಷ್ಟ್ಯ ವೈಕಲ್ಯವನ್ನು ಅದು ಸೂಚಿಸುವದಲ್ಲದೆ ಗ್ರಹಗಳ ಅಧಿಕಾರ ಪ್ರಭುತ್ವಗಳನ್ನು ದೂಷಣೆಗೆ ಗುರಿಮಾಡಲು ಸಾಕಾಗುವದಿಲ್ಲ. ನಿವಾರಣೆಯಾಗಲಿಕ್ಕೆ ಸಂಭವವಿರುವ ಆಪತ್ತುಗಳು ಪರಿಹಾರ ಮೂಲಕ ನಿರ್ಗತವಾಗುತ್ತವೆ. ಅನಿವಾರ್ಯ ಕಠಿಣವಾದ ಸಂಗತಿಗಳಲ್ಲಿ ಪರಿಹಾರಗಳು ನಿಷ್ಪ್ರಯೋಜನವಾದರೂ ದೂಷಣೆಗರ್ಹರಾಗುವದಿಲ್ಲ. 'ಉದರ ನಿಮಿತ್ತಂ ಬಹುಕೃತವೇಷಂ' ಎಂಬ ಮಾತು ಪ್ರಾಪಂಚಿಕ ವ್ಯವಹಾರಗಳಲ್ಲಿ ದ್ರವ್ಯಾರ್ಜನೆಯ ಆಸೆಯುಳ್ಳವರಿಗೆಲ್ಲಾ ಅನ್ವಯಿಸುತ್ತದೆ.

ಪತ್ರವ್ಯವಹಾರ.

ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

(ನಮ್ಮ ಉಡುಪಿ ಬಾತ್ಮಿದಾರರಿಂದ)

ಈ ತಾರೀಕು ಇಲ್ಲಿ ಅನಂತೇಶ್ವರ ದೇವಸ್ಥಾನದಲ್ಲಿ ಒಂದು ಮಹಾಸಭೆಯು ಸೇರಿತು. ಇದಕ್ಕೆ ಶ್ರೀ ಸೋದೇ ಶ್ರೀಪಾದಂಗಳವರೊಬ್ಬರ ವಿನಹಾ ಆ ದಿವಸ ಇಲ್ಲಿದ್ದ ಮಿಕ್ಕ ಎಲ್ಲಾ ಶ್ರೀಪಾದಂಗಳವರೂ, ಸ್ಥಳದ ಮತ್ತು ಪರಸ್ಥಳದಿಂದ ಒದಗಿದ್ದ ಬಹುಮಂದಿ ವಿದ್ವಾಂಸರೂ, ಇತರ ವೈದಿಕ ಲೌಕಿಕ ಗೃಹಸ್ಥರುಗಳೂ ಕೂಡ ಸುಮಾರು ಒಂದು ಸಹಸ್ರ ಜನರಿಗಿಂತಲೂ ಹೆಚ್ಚಾಗಿ ಸೇರಿದ್ದರು. ಮಂಗಳೂರು ಡಿ. ಕೊ. ವಕೀಲರು, ಮ. ರಾ. ಹಳ್ಳಿಗೇರಿ ಕೃಷ್ಣರಾಯರು ರಚಿಸಿದ "ಅಧ್ಯಾತ್ಮವಿಚಾರ"ವೆಂಬ ಗ್ರಂಥದ ವಿಮರ್ಶೆಯೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಈ ಗ್ರಂಥದಲ್ಲಿ ಛಾಂದೋಗ್ಯ ಉಪನಿಷತ್ತಿಗೆ ಅದ್ವೈತಪರವಾದ ಶಾಂಕರಭಾಷ್ಯಕ್ಕೆ ಸ್ತುತಿರೂಪಗಳಾಗಿಯೂ ದ್ವೈತಪರವಾದ ಮಾಧ್ವಭಾಷ್ಯಕ್ಕೆ ನಿಂದಾಪರವಾಗಿಯೂ ಇರುವ ಅನೇಕ ಮಾತುಗಳನ್ನೂ, ಗ್ರಂಥಕರ್ತರು ಮಾಧ್ವಭಾಷ್ಯಕ್ಕೆ ಕಲ್ಪಿಸಿರುವ ಅಪಾರ್ಥಗಳನ್ನೂ ವಿದ್ವಾಂಸರಾದ ವೆ. ಮ. ಸಂ. ಕರಂಬಳ್ಳಿ ಪದ್ಮನಾಭಾಚಾರ್ಯರವರು ಎಲ್ಲರಿಗೂ ತಿಳಿಯುವಂತೆ ಓದಿ ಅವೆಲ್ಲವುಗಳನ್ನೂ ಅನೇಕ ಪ್ರಮಾಣಗಳಿಂದಲೂ ದೃಷ್ಟಾಂತಗಳಿಂದಲೂ ಖಂಡಿಸಿದರು. ಮತ್ತು ಈ ಅಧ್ಯಾತ್ಮವಿಚಾರ ಗ್ರಂಥದ ಖಂಡನೆಯಾಗಿ ತಾನು ಪ್ರತ್ಯೇಕ ಒಂದು ಗ್ರಂಥವನ್ನು ಬರಿಯುವದಕ್ಕೆ ಉಪಕ್ರಮಿಸಿರುವದಾಗಿಯೂ ಹೇಳಿದರು. ಮಂಗಳೂರು ಗವರ್ನಮೆಂಟ್ ಶಾಲೆಯ ಪಂಡಿತರಾದ ವೆ. ಮ. ಸಂ. ಸಾಬಾಜಿ ರಾಮಾಚಾರ್ಯರು ಈ ಸಭೆಯಲ್ಲಿ ಹೇಳಿದ ಮಾತುಗಳ ಅಭಿಪ್ರಾಯವೇನಂದರೆ — ಈ ಗ್ರಂಥದಲ್ಲಿ ಮನುಷ್ಯನ ದೇಹಕ್ಕೆ ನಾಶವಿದ್ದ ಹಾಗೆಯೇ ಜೀವಕ್ಕೂ ನಾಶವಿರುವದಾಗಿ ಮಾಧ್ವರ ಅಭಿಪ್ರಾಯವಿರುವದಾಗಿ ಇದ್ದಂತೆ ಇದೆ. ಪುರುಷಾರ್ಥಚತುಷ್ಟಯಗಳಲ್ಲಿ ಮೋಕ್ಷವು ನಿತ್ಯವಾಗಿರತಕ್ಕ ಪುರುಷಾರ್ಥವು. ಇದನ್ನು ಜೀವನು ಬಹು ಜನ್ಮಸಾಧನೆಗಳಿಂದ ಪಡೆದು ನಿತ್ಯ ಸುಖಿಯಾಗಿರುತ್ತಾನೆಂತ ಹೇಳುವ ಮಾಧ್ವರು ಜೀವನು ಅನಿತ್ಯನೆಂತ ಹ್ಯಾಗೆ ತಾನೆ ಹೇಳುವರು? ಜೀವನಾಶ ಹೇಳುವವರಿಗೆ ಪ್ರತ್ಯೇಕ ಒಂದು ಮುಕ್ತಿ ಎಲ್ಲಿ ಬಂದೀತು? [illegible]

[illegible] ಶಾಸ್ತ್ರಾಭ್ಯಾಸಮಾಡದೆ ಕೆಲವು ಭಾಷ್ಯಗಳನ್ನೂ, ಇಂಗ್ಲಿಷ್ ಭಾಷಾಂತರಗ ಳನ್ನು ಮಾತ್ರ ಓದಿ ಶಾಸ್ತ್ರಾಭ್ಯಾಸ ಮಾಡಿದುದರ ಫಲವೇ ಈ ಅಪಾ ರ್ಥಗಳಿಗೆ ಕಾರಣವಾಗಿಯೂ ಈ ತರದ ಅಭ್ಯಾಸವು ಅನರ್ಥಕ್ಕೆ ಕಾರಣವೆಂಬದಾಗಿ ಈ ಗ್ರಂಥವೇ ಒಂದು ದೃಷ್ಟಾಂತವೆಂಬದಾಗಿಯೂ ಹೇಳುವವರಾದರು

ಜೀವೇಶ್ವರೈಕ್ಯ, ಅಭೇದ, ಇವೇ ಮೊದಲಾದ ಅದ್ವೈತಸಿದ್ಧಾಂತಗಳನ್ನು ನ್ಯಾಯಾಮೃತ, ತರ್ಕತಾಂಡವ, ಯುಕ್ತಿಮಲ್ಲಿಕಾ ಇವೇ ಮೊದಲಾದ ಉದ್ಗ್ರಂಥಗಳ ಆಧಾರಗಳಿಂದಲೂ ಅನೇಕ ಲೌಕಿಕ ದೃಷ್ಟಾಂತಗಳಿಂದಲೂ ಖಂಡಿಸಿ ಬಹಳ ಹೊತ್ತಿನವರೆಗ "ವೇದಾಂತರತ್ನಾಕರ" ಎಂಬ ಬಿರುದನ್ನು ಪಡೆದಿರುವ ಬೆಂಗಳೂರಿನ ಬೆಟ್ಟದ ವೆಂಕಟರಮಣಾಚಾರ್ಯರವರು ಬಹು ರಸವತ್ತಾಗಿ ಮಾತಾಡಿದರು

ಈ ಉಪನ್ಯಾಸಗಳನ್ನು ಕೇಳಿ ಮಹಾಜನರೆಲ್ಲರೂ "ಈ ಗ್ರಂಥಕ್ಕೆ ಧಿಕ್ಕಾರವಿರಲಿ" ಎಂಬದಾಗಿ ಏಕಕಂಠದಿಂದ ಉದ್ಘೋಷಿಸುವವರಾದರು ಶ್ರೀಗಳವರು ಗಂಧ ಪುಷ್ಪ ಮಂತ್ರಾಕ್ಷತಾದಿಗಳನ್ನು ಕೊಡಿಸಿ ಸಭೆಯನ್ನು ಮುಕ್ತಾಯಮಾಡುವವರಾದರು.

[illegible]

ಸ್ವದೇಶಾಭಿಮಾನಿ ಪತ್ರಿಕರ್ತರಿಗ —

ಈ ನಮ್ಮ ಜಿಲ್ಲೆಯ ಮೂಡು ಪ್ರಾಂತ್ಯಗಳ ಬೇಸಾಯದ ಸ್ಥಳಗಳಲ್ಲಿ ಬೆಳಸುವ ಬೆಳೆಗಳನ್ನು ಕಾಡು ಮೃಗಗಳ ಹಾವಳಿಯಿಂದ ಕಾಪಾಡುವ ಉದ್ದೇಶ್ಯ ಮುಖ್ಯವಾಗಿ ಅಂಥಾ ಸ್ಥಳಗಳ ಹತ್ತರವೇ ಸಂಧಂಣವಾಗಿ ಗದ್ದೆಗಳ ಅಂಚಿನಲ್ಲಿಯೇ ಬಿದುರುಗಳ ಹಿಂಡ್ಲುಗಳನ್ನು ಬೆಳಸುವ ಕ್ರಮ ಇದೆ. ಈ ಪ್ರಕಾರ ಬಿದುರುಗಳ ಹಿಂಡ್ಲುಗಳು [illegible] ಸ್ತ್ರಿಯಾಗಿ ಅದರ ಬೇರುಗಳು ಗದ್ದೆಗಳ ಪೂರಾ [illegible] ಎಳಕೊಳ್ಳುವದಲ್ಲದೆ, ಆ ಹಿಂಡ್ಲುಗಳಿಂದ ಇಳಿದು ಕೆಳಗೆ ಗದ್ದೆಗಳಿಗೆ ಮಳೆ ನೀರು ಬರುವದರಿಂದಲೂ ಬಿದುರಿನ ಎಲೆಗಳು ಗದ್ದೆಯಲ್ಲಿ ಬೀಳುವದರಿಂದಲೂ ಬಿದುರಿನ ಎಲೆಗಳನ್ನೂ ಬಿದುರುಗಳನ್ನೂ ಸುಟ್ಟು ತಯಾರಿಸಿದ ಬೂದಿಯನ್ನು ಗದ್ದೆಗಳಿಗೆ ಹಾಕುವದರಿಂದ ಸಹಾ ಅಂಥಾ ಗದ್ದೆಗಳಿಂದ ಹೆಚ್ಚು ಬೆಳೆ ಸಿಗುವದಿಲ್ಲೆಂಬದಾಗಿ ಬೇಸಾಯಗಾರರು ಅಭಿಪ್ರಾಯ ಪಡುತ್ತಾರೆ. ಇದು ತಪ್ಪು ಎಂಬದಾಗಿ ವಾದಿಸಲಿಕ್ಕೆ ಕಾರಣಗಳು ತೋರುವದಿಲ್ಲ ಪರಂತು ಕಾಡುಮೃಗಗಳ ಬಾಧೆಯನ್ನು ತಪ್ಪಿಸಲಿಕ್ಕೆ ಬೇರೆ ಯಾವದೂ ಮುಳ್ಳು ಇರುವ ಮರ ಕಾಣಬರುವದಿಲ್ಲ. ಆದಕಾರಣ ಬೇಸಾಯಗಾರರು ಬಿದುರುಗಳ ಹಿಂಡ್ಲುಗಳನ್ನು ಗದ್ದೆಗಳ ಅಂಚಿನಲ್ಲಿಯೇ ಬೆಳಸುವ ಕ್ರಮವನ್ನು ಬಿಡಲಿಲ್ಲ

ಶ್ರೀ ತಿರುಪತಿ, ರಾಮೇಶ್ವರ ಕಂಚಿ ವಗೈರೆ ಕ್ಷೇತ್ರಗಳಿಗೆ ಯಾತ್ರಸ್ಥರಾಗಿ ಹೋಗಿ ಬಂದ ಈ ಊರು ಜನರು ಅಲ್ಲಿಯ ಬೇಸಾಯಗಾರರು ತಮ್ಮ ತೋಟ ಹಿತ್ಲು ಮನೆಗಳಿಗ ನಮ್ಮ ಹಾಗ ಮಣ್ಣಿನ ಯಾ ಕಲ್ಲಿನ ಗೋಡೆಗಳನ್ನು ಹಾಕದೆ ಕೊರಕಪಳ್ಳಿ ಎಂಬ ಹೆಚ್ಚು ಮುಳ್ಳು ಇರುವ ಮರದ ಬೀಜಗಳನ್ನು ಹಾಕಿ ಸಸಿ ಬೆಳೆಸಿ ಬೇಲಿ ಮಾಡುತ್ತಾರಲ್ಲದೆ ಅವುಗಳು ಉದ್ದವಾಗಿ ಬೆಳಯದ ಹಾಗ ಅವುಗಳನ್ನು ಒಂದೇ ಅಳತೆಗೆ ಸರಿಯಾಗಿ ಕತ್ತರಿಸಿ ಇಡುತ್ತಾರೆ ಆದಕಾರಣ ಈ ಗಿಡಗಳು ಹೆಚ್ಚು ಎತ್ತರಕ್ಕೆ ಹೋಗದೆ

ನೋಟೀಸು.

ದಕ್ಷಿಣ ಕನ್ನಡ ಪುತ್ತೂರು ಡಿಸ್ತ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

1909ನೇ ಇಸವಿ ಕ್ರಮವ್ಯತ್ಯದ ನಂಬ್ರ 504

1909ನೇ ಇಸವಿಯ ಐ ಯೆ ಅರ್ಜಿ ನಂಬ್ರ 1131

ವಾದಿರು, ಅರ್ಜಿದಾರರು —

1 ಶೇಕಬ್ಯಾರಿ—ಮುಗಳ್ಳ ಹುಸೇನ್‌ಬ್ಯಾರಿ ಮಗ 2 ಸಾವುಂಞಬ್ಯಾರಿ ಪಾಣೆಮಂಗಳೂರು ಅಚ್ಚುಬ್ಯಾರಿ ಮಗ 3 ಒಕ್ರಿಬ್ಯಾರಿ—ನಾಟಬೆಟ್ಟು ಇದಿನಬ್ಯಾರಿ ಮಗ, 4 ಅಬ್ದುಬ್ಯಾರಿ—ಬೈಕಂತಿ ಚಪ್ಪಬ್ಯಾರಿ ಮಗ 5 ಅಬ್ದುಬ್ಯಾರಿ—ಕುಂಞಹಸನಬ್ಯಾರಿ ಮಗ, 6 ಇಬ್ರಾಯಿಬ್ಯಾರಿ—ಪಕೀರಬ್ಬಬ್ಯಾರಿ ಮಗ 7 ಮೊಯಿದಿನಬ್ಯಾರಿ—ಹಾಜಿಬ್ಯಾರಿ ಮಗ

1ನೇ ಲಂಗ್ಯಾತು 5ನೇ ವರೆಗಿನವರು ಕಾಪು ಮಾಗಣ ಅರ್ಕ ಕ್ಯೊಲ ಗ್ರಾಮದ ಮುಲರ ಪಟ್ಟಣದಲ್ಲಿ-6ನೇಯವನು ಮುಳಿ ಮಾಗಣೆ ಕುಳವೂರ ಗ್ರಾಮದಲ್ಲಿ, 7ನೇಯವನು ಪಂಜಿಕಲ ಮಾಗಣೆ ಪಿಲ್ಯರ ಗ್ರಾಮದಲ್ಲಿ ಸಹಾ ಇರುತ್ತಾರ

ಪ್ರತಿವಾದಿರು ಎದ್ರಿರು —

1 ಅಬ್ದುಬ್ಯಾರಿ—ಹುಣಸೆ ಅಡಿ ಇದಿನಬ್ಯಾರಿ ಮಗ—ಮಳಲಿ ಮಾಗಣೆ ಕುಳವೂರು ಗ್ರಾಮ, 2 ಅಬ್ದುಬ್ಯಾರಿ —ಮೊಯಿದಿನಬ್ಯಾರಿ ಮಗ- ಬೆಳ್ಳಾರೆ ಮಾಗಣೆ ಬಂಬಿಲ ಗ್ರಾಮ, 3 ಇದಿನಬ್ಯಾರಿ—ಮುಲರ ಪಟ್ಟಣ ಉಂಞಬ್ಯಾರಿ ಮಗ—ಸದರಿ ಅರ್ಕಕ್ಯೊಲ ಗ್ರಾಮ 4 ಹಮ್ಮದಬ್ಯಾರಿ—ಚಯ್ಯಬ್ಯಾರಿ ಮಗ—ಪಂಜಕಲ್ ಮಾಗಣೆ ಬಡಗ ಬೆಳ್ಳೂರು ಗ್ರಾಮ

ಇದರಿಂದ ಯಾವತ್ತು ಜನರಿಗ ತಿಳಿಯಪಡಿಸುವದೇನೆಂದರೆ —

ಅರ್ಕಕ್ಯೊಲ—ಕುಳವೂರು—ಕಿಲಿಂಜಾರು—ಬೆಳ್ಳೂರು —ಕುರಿಯಾಲ—ಪಿಲಿಮೊಗರು ಮತ್ತು ಮುತ್ತೂರು ಈ 7 ಗ್ರಾಮಗಳ ನಿವಾಸಿಕರಾದ ಸುಮಾರು 800ರಷ್ಟು ಜಮಾತರು ಬಜಿಸಿ ಬರುವ ಬಾಬ್ತು ಸದರಿ ವಾದಿರು ವಗೈರೆ ಜಮಾತರ ಅಧಿಕಾರಕ್ಕೆ ಒಳಪಟ್ಟ ಅರ್ಕಕ್ಯೊಲ ಗ್ರಾಮದ ಮುಲರ ಪಟ್ಟಣ ಮಹಜೀದಿಯ ಆಡಳಿತೆ ಮೊಕ್ತೇಸರಿಕೆಗೆ ಸದರಿ ಪ್ರತಿವಾದಿರು ಯೋಗ್ಯರಲ್ಲವೆಂತ ಡಿಕ್ಲರೇಶನ್ ವಗೈರೆ ಅಪೇಕ್ಷಿಸಿ ಮೇಲ್ಕಂಡ ವಾದಿರು ತಂದ ಸದರಿ ವ್ಯಾಜ್ಯವನ್ನು ಎಲ್ಲಾ ಜಮಾತರಗೋಸ್ಕರ ನಡಿಸಲಿಕ್ಕೆ ತಮಗೆ ಅಪ್ಪಣೆ ಆಗಬೇಕಾಗಿ ಸದರಿ ವಾದಿರು I. A. ನಂಬ್ರ $\frac{1131}{1909}$ ನೇ ಅರ್ಜಿಕೊಟ್ಟಿರುವದರಿಂದ—ಮೇಲ್ಕಂಡ ವ್ಯಾಜ್ಯದಲ್ಲಿ ಕಕ್ಷಿಗಾರರಾಗಿ ಕೂಡಲಿಕ್ಕೆ ಅಪೇಕ್ಷೆವುಳ್ಳವರು ಬರುವ ೧೯೧೦ನೇ ಇಸವಿ ಜನವರಿ ತಿಂಗಳ ೧೮ನೇ ತಾರೀಕಿನಲ್ಲು ಪೂರ್ವಾಹ್ನ ೧೦ ಗಂಟೆಗೆ ಈ ಕೋರ್ಟು ಮುಂದೆ ಸ್ವತಹಾ ಹಾಜರಾಗಿ ಬರಹಮೂಲಕ ಜಾಹೀರು ಮಾಡಿಕೊಳ್ಳತಕ್ಕದ್ದು.

೧೯೦೯ನೇ ಇಸವಿ ದಶಂಬರ ೮ನೇ ತಾರೀಕಿನಲ್ಲು ಕೋರ್ಟಿನ ಮೊಹರು ನಿಶೀ ನಮ್ಮ ದಸ್ಕತೊಡನೆ ಕೊಡೋಣಾಗಿದೆ

(Sd) **B. Venkat Rau,**

Ag. District Munsif.

ಇತ್ತ ತುಸ ನೋಡಿರಿ!!!

ಪ್ರಾಸಾದಿಕ ಗ್ರಂಥವು.

ಕಲಿಯುಗದಲ್ಲಿ ತುಳಸೀದಾಸ ಕಬೀರ ಮೊದಲಾದ ೫೧ ವೈಷ್ಣವ ಭಕ್ತರು ಗೈದ ಅದ್ಭುತಕರಲೀಲೆಗಳ ಸುರಸ ಕಥನವು (ಬಿಂಬಿನಿಪತ್ರಿದಿ) ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಿಮಹಿಮೆ ಎಂಬಭಿಧಾನದಿಂದ ಕನಡುಭಾಷೆಯಲ್ಲಿ ಮುದ್ರಿತವಾಗಿಯದೆ ಪ್ಲೇಗನಂಥಹ ದುರ್ವ್ಯಾಧಿಗಳ ಪೀಡೆ ನಿರ್ಗತವಾಗಲು ಈ ಗ್ರಂಥದ ವಾಚನವೇ ಮುಖ್ಯ ಆಯುದವಾಗಿದೆಯೆಂದು ಸುಜನರು ತಿಳಿಯಲಿ

ಒಂದು ಪ್ರತಿಯ ಕ್ರಯ 12 ಆಣೆ ಮಾತ್ರ—ಅಂಚೆವೆಚ್ಚ ವಿನಹ ಹತ್ತು ಪ್ರತಿಗಳನ್ನು ಒಮ್ಮೆಲೆ ಕೊಂಡುಕೊಳ್ಳುವವರಿಗ ವಾಗ್ದೇವಿ ಎಂಬ ಚಲೋ ಕಾದಂಬರಿಯು ಉಚಿತವಾಗಿ ಸಿಗುವದು

ಅಪೇಕ್ಷಕರು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳಿ.

ಬೋಳಾರ ಬಾಬುರಾವ್,

ಮಂಗಳೂರು.

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವದು ಗ್ಯಾರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾಗ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು



ನಮ್ಮ 'ವೆಕ್ಸಿವ' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ

ನಿಕಲ್ ಕೇಸಿನಲ್ಲಿ ರೂ ೧೦-೦-೦

ಬೆಳ್ಳಿ ಕೇಸಿನಲ್ಲಿ ರೂ ೧೪-೮-೦

ನಮ್ಮ 'ನ್ಯೂ ಡಿ ಪಿ'

ನಿಕಲ್ ಕೇಸಿನಲ್ಲಿ ರೂ ೧೪-೦-೦

ಬೆಳ್ಳಿ ಕೇಸಿನಲ್ಲಿ ರೂ ೧೮-೮-೦

ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.

ನಮ್ಮ 'ಚಾರ್ಮರ್'

ನಿಕಲ್ ಕೇಸಿನಲ್ಲಿ ರೂ ೧೭-೦-೦

ಬೆಳ್ಳಿ ಕೇಸಿನಲ್ಲಿ ರೂ ೨೧-೦-೦.

ನಮ್ಮ 'ವರ್ಡಲಿ.'

ನಿಕಲ್ ಕೇಸಿನಲ್ಲಿ ರೂ ೧೮-೦-೦.

ಸಿಲ್ವರ್ ಕೇಸಿನಲ್ಲಿ ರೂ ೨೩-೦-೦.

ನಮ್ಮ 'ಬೆಸ್ಟ್'

ನಿಕಲ್ ಕೇಸಿನಲ್ಲಿ ರೂ. ೨೧-೦-೦.

ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸಾಯಿಜಿನಲ್ಲಿರುವವು. ವಾಚುಗಳನ್ನು ೪ ಆಣೆ ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮೂಲಕ ಕಳುಹಿಸುವೆವು. ನಮ್ಮ 59 ಎಸ್ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ [illegible] ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರಕುವವು.

[illegible]

[illegible] ಇದರ ಮರಗಳನ್ನು ಈ ಜಿಲ್ಲೆಯಲ್ಲಿ ಬೆಳಸಿದರೆ ಹೆಚ್ಚು ಗಾತ್ರವಾಗಿಯೂ, ಉದ್ದವಾಗಿಯೂ ಮಾವಿನ ಮರಗಳಂತೆ ಬೆಳೆಯುತ್ತವೆ. ಹಾಗೆ ಬೆಳದರೆ ಅದರ ಗೆಲ್ಲುಗಳನ್ನು ಬಿದುರು ಮುಳ್ಳುಗಳನ್ನು ಬೇಲಿ ಬಗ್ಗೆ ಉಪಯೋಗಿಸುವ ರೀತಿಯಲ್ಲಿಯೇ ಉಪಯೋಗಿಸಬಹುದು. ಮತ್ತು ಮರವನ್ನು ಸೌದೆ ಬಗ್ಗೆ ಉಪಯೋಗಿಸಲೂ ಬಹುದು. ಈ ಜಿಲ್ಲೆಯಲ್ಲಿ ಮಳೆ ಹೆಚ್ಚಾದದರಿಂದ ಇದರ ಗಿಡಗಳು ದೊಡ್ಡ ಮರಗಳಾಗಿ ಬೇಗನೇ ಬೆಳೆಯುವವು. ಇವುಗಳ ಸಸಿಗಳನ್ನು ಗದ್ದೆಗಳ ಅಂಚಿನಲ್ಲಿ ಬಿದುರು ಬೆಳಸುವದರ ಬದಲಿಗೆ ಬೆಳಸಲೂ ಬಹುದು. ಮತ್ತು ಇದು ಸುಟ್ಟು ಬೂದಿ ಮಾಡಿದರೆ ಗದ್ದೆಗೆ ಬಿದುರಿನ ಬೂದಿಯು ಹಾಗೆ ಕೆಟ್ಟದ್ದಲ್ಲ; ಬಹು ಒಳ್ಳೇದೇ ಸರಿ. ಆದಕಾರಣ ನಮ್ಮ ಜಿಲ್ಲೆಯ ವ್ಯವಸಾಯ ಸಂಘದವರು ಇದರ ಬೆಳವಳಿಕೆಗೆ ಉತ್ತೇಜನ ಕೊಡಬಾರದೇ.

ಇಂತಿ ತಮ್ಮ ಆಜ್ಞೇದಾರ.

ಎಲ್ಲೂರು ಸುಬ್ಬ ರಾವ್.

ಪ್ರಯತ್ನವೇ ಬೇಕು.

"ಅತಿ ಕಷ್ಟವಾದ ಕೆಲಸವಾವುದು? ಏನೂ ಕೆಲಸವಿಲ್ಲದಿರುವುದು."

"ಅನುದ್ಯೋಗೇನತೈಲಾನಿ—ತಿಲೇಭ್ಯೋನಾಪ್ನುವಂತಿ"

"ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ"

ಪ್ರಪಂಚದ ಮನುಷ್ಯರ ಬಯಕೆಗಳೆಲ್ಲವೂ ಸುಖವನ್ನೇ ಮುಂದುಮಾಡಿರುವಾಗ ಲೋಕದ ಜನರು ಕಷ್ಟಪಡುತ್ತಿರುವುದಕ್ಕೆ ಕಾರಣವೇನು? ಎಲ್ಲರೂ ಏಕೆ ಸುಖಿಗಳಾಗಿಲ್ಲ? ಸ್ವಲ್ಪಕಾಲ ಮಳೆಯು ಹಿಂದಾದಮಾತ್ರದಿಂದಲೇ ಲೋಕವೆಲ್ಲ ಕ್ಷಾಮಗ್ರಸ್ತವಾಗಿ ಭಯಂಕರದಲ್ಲಿ ಪರಿಣಮಿಸುವದೇತಕ್ಕೆ? ಇದನ್ನು ನಾವು ಯೋಚಿಸುವುದಕ್ಕೆ ಪ್ರತಿಯಾಗಿ "ಎಲ್ಲವೂ ದೈವೇಚ್ಛೆ" ಎಂದು ಸುಮ್ಮನಿರುವುದೇ ಮೇಲೆಂದು ಅನೇಕರು ಭಾವಿಸಬಹುದು. ಹಾಗಾದರೆ ಮನುಷ್ಯರೆಲ್ಲರೂ ಕೈಕಟ್ಟಿಕೊಂಡು ಯಾವ ಕೆಲಸವನ್ನೂ ಮಾಡದೆ ಕುಳ್ಳಿರಬೇಕಾಯಿತು. ರೈತನು ಹೊಲವನ್ನು ಉಳದೇ ಇರಲಿ. ತಾಯಿಯು ಮಗುವಿಗೆ ಆಹಾರವನ್ನು ಕೊಡದೇ ಇರಲಿ. ತಾನು ತನ್ನ ಹೊಟ್ಟೆಗೆ ಆಹಾರವನ್ನು ತೆಗೆದುಕೊಳ್ಳದೇ ಇರಲಿ. ನೆಯಿಗೆಯವನು ಬಟ್ಟೆಗಳನ್ನು ನೇಯದಿರಲಿ. ಕುಂಬಾರನು ಗಡಿಗೆಗಳನ್ನೂ, ಕಂಚುಗಾರನು ಪಾತ್ರೆಗಳನ್ನೂ ಮಾಡದೇ ಇರಲಿ. ಆಗ ಪ್ರಪಂಚವು ಯಾರ ಇಚ್ಛೆಗೆ ಒಳಪಟ್ಟಿರುವುದೆಂಬುದು ಗೊತ್ತಾಗುವುದು! ನೇಗಿಲ ಭಾರವನ್ನು ಮನುಷ್ಯನು ಹೊತ್ತರೆ ಮಳೆಯನ್ನು ಹೊತ್ತು ಸುರಿಸುವ ಭಾರವನ್ನು ದೇವರು ಹೊರುವನು. ತಾಯಿಯು ಮಗುವಿಗೆ ಆಹಾರವನ್ನು ಕೊಡಲು ಪ್ರಯತ್ನಶೀಲಳಾದರೆ ಸ್ತನ್ಯವನ್ನು ಸಿದ್ಧಪಡಿಸುವ ಕೆಲಸವನ್ನು ದೇವರು ಮಾಡುವನು. ತಾನು ತನ್ನ ಆಹಾರ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಅಡಿಗೆ ಮಾಡಲು ಪ್ರಯತ್ನಪಟ್ಟರೆ ಪಕ್ವವಾಗುವುದಕ್ಕೆ ತಕ್ಕ ಅಗ್ನಿಗೆ ಶಾಖವನ್ನು ಕೊಡುವ ಶಕ್ತಿಯನ್ನು ದೇವರು ಉಪಯೋಗಿಸುವನು. ಹೀಗೆಯೇ ಮನುಷ್ಯನು ತನ್ನ ಶಕ್ತಿಗೆ ತಕ್ಕಂತೆ ಕೆಲಸವನ್ನು ಮಾಡಿದರೆ ದೇವರೂ ತನ್ನ ಶಕ್ತಿಗೆ ತಕ್ಕಂತೆ ಫಲವನ್ನು ತೋರಿಸುವನು. ಮನುಷ್ಯನು ಸುಮ್ಮಗೆ ಕುಳಿತರೆ ದೇವರೂ ಸುಮ್ಮನೆ ಕುಳಿತಿರುವುದರಲ್ಲಿ ಆಶ್ಚರ್ಯವೇನು? ಒಬ್ಬನ ಕಷ್ಟಕ್ಕೆ ಹತ್ತು ಜನಗಳ ಸುಖವನ್ನು ಆಶಿಸುವುದು ಅಸಂಭಾವ್ಯವಲ್ಲವೆ? ಎಲ್ಲರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಕೆಲಸವನ್ನು ಮಾಡಿದರೆ ಪ್ರತಿಯೊಬ್ಬನಿಗೂ ದೇವರು ಸಹಾಯಕನಾಗಿರುವನು. ನಮ್ಮ ಭರತಖಂಡದಲ್ಲಿ ಈ ರೀತಿಯಿಲ್ಲದೆ ಕಷ್ಟಪಡುವರು ಸ್ವಲ್ಪಮಂದಿಯಾಗಿಯೂ ಸೋಮಾರಿಗಳು ಹೆಚ್ಚಾಗಿಯೂ ಇರುವುದರಿಂದಲೇ ನಮ್ಮ ಬಯಕೆಗಳು ವ್ಯತಿರಿಕ್ತಫಲಕಾರಿಗಳಾಗಿವೆ. ಸ್ವಲ್ಪಕಾಲದ ಕ್ಷಾಮವನ್ನೂ ಸಹಿಸಲಾರದ ಅಶಕ್ತತೆಯಿಂದಿರುವವರಾಗಿರುವೆವು.

ಕೆಲಸವನ್ನು ಮಾಡದೆ ಸೋಮಾರಿಯಾಗಿ ಸುಖವನ್ನು ಬಯಸುವವನ ನಡವಳಿಕೆಯು ಕೇವಲ ಲಜ್ಜಾಸ್ಪದವಾದುದು. ಚಂದ್ರ ಸೂರ್ಯಾದಿಗ್ರಹಗಳು ತಪ್ಪದೆ ಆ [illegible] ವೆ? ಜೇನುಹುಳುಗಳು ತಮ್ಮ ಆಹಾರಕ್ಕೋಸ್ಕರ ಅನೇಕ ಪುಷ್ಪಗಳನ್ನು ಹುಡುಕಿ ಆ [illegible] ಮಕರಂದವನ್ನು ಸಂಗ್ರಹಿಸುವುದಿಲ್ಲವೆ? ಇರುವೆಗಳು ತಮ್ಮ ಅನಾನುಕೂಲವಾದ ಕಾಲದ ಆಹಾರಕ್ಕೋಸುಗನೇ ಅನುಕೂಲವಾದ ಬೇಸಿಗೆಯಲ್ಲಿ ಆಹಾರವನ್ನು ಸಂಗ್ರಹಿಸಿ ಸುಖಿಸುತ್ತಿರುವುದನ್ನು ನೋಡುವುದಿಲ್ಲವೆ? ಪಕ್ಷಿಗಳೂ ತಮ್ಮ ಆಹಾರಕ್ಕೋಸುಗ ಕ್ಲುಪ್ತ ಕಾಲದಲ್ಲಿ ಎದ್ದು ಆಹಾರವನ್ನು ಸಂಗ್ರಹಿಸಿ ಕ್ಲುಪ್ತ ಕಾಲದಲ್ಲಿ ತಮ್ಮ ತಮ್ಮ ನೆಲೆಯನ್ನು ಸೇರುವುದಿಲ್ಲವೆ? ಹಾಗಾದರೆ ಮನುಷ್ಯರಿಗೆ ಕುಳಿತಲ್ಲಿಯೇ ಫಲವಾಗುವುದೋ? ಎಂದಿಗೂ ಇಲ್ಲ.

ಹೊಲವನ್ನು ಹಸನು ಮಾಡದೇ ಇದ್ದರೆ ಕಳೆಗಳು ಹೇಗೆ ಹೆಚ್ಚುವುವೊ, ಬೆಂಕಿಗೆ ಕಟ್ಟಿಗೆ ಮೊದಲಾದುವನ್ನು ಒದಗಿಸದೇ ಇದ್ದರೆ ತನ್ನನ್ನೇ ತಾನು ಹೇಗೆ ದಹಿಸಿ ಶಾಂತವಾಗುವುದೋ, ಹಾಗೆಯೇ ಮನುಷ್ಯನು ತಕ್ಕ ಪ್ರಯತ್ನದಲ್ಲಿ ತನ್ನ ಮನಸ್ಸನ್ನು ನಿಲ್ಲಿಸದಿದ್ದರೆ ಅಂತಹ ಮನಸ್ಸು ಅತ್ಯಂತಕಲುಷಿತವಾಗಿ ಕೊನೆ ಕೊನೆಗೆ ಯಾವ ವಿಷಯಕ್ಕೂ ಪ್ರಯತ್ನಿಸಲಾರದಷ್ಟು ಬಲಹೀನವಾಗುವುದು. ಮನುಷ್ಯದೇಹದ ಯಂತ್ರನಿರ್ಮಾಣವು ಕೆಲಸಕ್ಕೋಸುಗವಾಗಿಯೇ ನಿರ್ಮಿಸಲ್ಪಟ್ಟಿದೆ. ಪ್ರತಿಯೊಂದು ಅವಯವದ ಚಲನೆಯೂ ಕೆಲಸಮಾಡುವುದಕ್ಕಾಗಿಯೇ ದೇವರಿಂದ ಕೊಡಲ್ಪಟ್ಟಿರುವುದು. ಆದುದರಿಂದ ನಾವು ಪ್ರತಿಯೊಂದು ಅವಯವದ ಪ್ರಯೋಜನವನ್ನು ಕೆಲಸದಲ್ಲಿ ನಿಲ್ಲಿಸಿದರೆ ನಮ್ಮ ಸುಖಗಳು ಸ್ಥಾಯಿಯಾಗುವುವು.

ನಾವು ಮಾಡುವ ಕೆಲಸಗಳು ಎಂತಹುಗಳಾಗಿರಬೇಕೆಂಬುದನ್ನು ವಿಮರ್ಶಿಸಲು ತಕ್ಕ ಬುದ್ಧಿಯನ್ನು ದೇವರು ಕೊಟ್ಟಿರುವನು. ಇದನ್ನು ಕೆಲಸಕ್ಕೆ ಹಚ್ಚಿದರೆ ನಮಗೆ ಎರಡು ಬಗೆಯಾದ ಕೆಲಸವುಂಟೆಂದು ಆ ಬುದ್ಧಿಯು ಬೋಧಿಸುವುದು. ಮೊದಲನೆಯದು ಇಹಲೋಕದ ಸುಖಕ್ಕೆ ತಕ್ಕದ್ದು; ಎರಡನೆಯದು ಪಾರಲೌಕಿಕವಾದುದು.

ಇಹಲೋಕದ ಸುಖದ ವಿಷಯವಾಗಿ ನಾವು ವಿಶೇಷವಾಗಿ ಹೇಳಬೇಕಾಗಿದ್ದರೂ ಲೇಖನವಿಸ್ತರಭಯದಿಂದ ಸ್ವಲ್ಪದರದಲ್ಲಿ ಮುಗಿಸಿರುವೆವು. ನಮ್ಮ ಅವಯವಗಳನ್ನು ನಾವು ಉಪಯೋಗಿಸಿ ಸ್ವಂತವಾಗಿ ಆರ್ಜಿಸದೆ ಪರರಿಂದ ಜೀವಿಸುತ್ತಿದ್ದರೆ ಪರಸ್ವಾಪಹಾರ ಮಾಡಿದ ಪಾಪಕ್ಕೂ ದೇವರ ಆಜ್ಞೆಗೆ ವಿರೋಧವಾಗಿ ಆಚರಿಸಿದ ದೋಷಕ್ಕೂ ಪಾತ್ರರಾಗುವೆವು. ಎರಡನೆಯವನ ಸ್ವತ್ತನ್ನು ಅನುಭವಿಸುವುದೂ, ಅವನ ರಕ್ತವನ್ನು ಹೀರುವುದೂ, ಎರಡೂ ಒಂದೇ! ಕಬ್ಬಿಣವನ್ನು ಕಯ್ಯಾಡದೇ ಬಿಟ್ಟರೆ ಹೇಗೆ ತುಕ್ಕು ಹಿಡಿಯುವುದೋ, ಮರವನ್ನು ಉಪಯೋಗಿಸದಿದ್ದರೆ ಹುಳುಗಳು ಹೇಗೆ ಕೊರೆಯುವುವೋ ಹಾಗೆಯೇ ಮನುಷ್ಯನು ಕೆಲಸಮಾಡದೇ ಇದ್ದರೆ ತನ್ನ ಅವಯವಗಳನ್ನು ತಾನೇ ಕುಂದಿಸಿ ತನ್ನ ಆಯುಷ್ಯವನ್ನು ತಾನೇ ಕ್ಷೀಣಿಸಿಕೊಂಡು ಆತ್ಮದ್ರೋಹಿಯಾಗುವನು. ಆದುದರಿಂದ ಸೋಮಾರಿಯಾದವನು ಪರದ್ರೋಹಿ ದೈವದ್ರೋಹಿ-ಆತ್ಮದ್ರೋಹಿ ಎಂಬೀ ಮೂರು ಬಿರುದಿಗೆ ಅರ್ಹನಾಗುವನಾದುದರಿಂದ ಅಂತಹರು ನಮ್ಮಲ್ಲಿ ಕಡಮೆಯಾಗುವವರೆಗೂ ನಮ್ಮ ದೇಶದಲ್ಲಿ ಸುಖಗಳು ಹೆಚ್ಚುವುದಿಲ್ಲ. ಸುಖಾಪೇಕ್ಷೆಯಿದ್ದ ಮಾತ್ರದಿಂದಲೇ ಸುಖವು ಬರುವುದಿಲ್ಲ. ಸುಖಕ್ಕೆ ತಕ್ಕ ಪ್ರಯತ್ನವೇ ಬೇಕು.

ಇದರಂತೆಯೇ ಪರಲೋಕ ಸಂಬಂಧವಾದ ವಿಷಯಕ್ಕೂ ಪ್ರಯತ್ನವೇ ಅತ್ಯಾವಶ್ಯಕವಾಗಿದೆ. ಅತ್ಯಲ್ಪವಾದ ಪ್ರಯೋಜನಾಪೇಕ್ಷೆಗೋಸುಗವೇ ಜನರಲ್ಲಿ ನಾವು ಎಷ್ಟು ವಿಧೇಯತೆಯಿಂದ ವರ್ತಿಸಬೇಕೆಂಬುದು ಗೊತ್ತಾಗಿರುವಾಗ ಶಾಶ್ವತ ಸುಖಪದವಿಯು ಅಲ್ಪ ಸ್ವಲ್ಪ ಪ್ರಯತ್ನದಿಂದ ಲಭ್ಯವಾಗುವುದಿಲ್ಲ. ಬಿತ್ತಿದಂತಹ ಬೀಜವೇ ಫಲದಲ್ಲಿ ತೋರುವುದಲ್ಲದೆ ಬಿತ್ತಿದಷ್ಟಕ್ಕೆ ತಕ್ಕಷ್ಟೇ ಫಲವು ಸ್ವತಸ್ಸಿದ್ಧವಾಗಿರುವಲ್ಲಿ ಸ್ವಲ್ಪ ಪ್ರಯತ್ನದಿಂದ ಅಗಾಧವಾದ ಫಲವನ್ನು ಕೋರುವುದು ಹುಚ್ಚುತನವೇ ಸರಿ. ಶರೀರದ ಶ್ರಮದಿಂದ ಇಹದಲ್ಲಿ ಫಲಾಧಿಕ್ಯವು ಹೇಗೋ ಹಾಗೆಯೇ ಮನಸ್ಸಿನ ಶ್ರಮವು ಪರಿಪಕ್ವವಾದ ಹೊರತು ಪರಲೋಕ ಫಲವು ದುರ್ಲಭವೇ. ಮನಸ್ಸನ್ನು ಉತ್ತಮಸ್ಥಿತಿಗೆ ತಂದು ಸ್ಥಿರತ್ವದಲ್ಲಿ ನಿಲ್ಲಿಸಿದ ಹೊರತು ಆ ಫಲವು ದೊರೆಯುವುದಿಲ್ಲ. ಮನಸ್ಸು ಉತ್ತಮಸ್ಥಿತಿಯಲ್ಲಿರಬೇಕಾದರೆ ಬಾಲ್ಯದಿಂದಲೂ ಅದಕ್ಕೆ ಸತ್ಸಂಸ್ಕಾರವೇ ಬೇಕು. ಪಾಪಕಾರ್ಯ ವಿಮುಖತೆಯೂ, ಸದ್ಧರ್ಮಕಾರ್ಯಾತುರವೂ, ಅಚಲವಾದ ಭಕ್ತಿಯೂ ಮೊದಲಿನಿಂದಲೂ ಅಭ್ಯಾಸವಾಗಿರಬೇಕು. ಹೀಗಿರಬೇಕಾದರೆ ಇಹದಲ್ಲಿ ಆಚರಿಸುವ ಕಾರ್ಯಗಳು ನ್ಯಾಯವಾಗಿಯೇ ಇರಬೇಕೆಂಬುದು ಸ್ಪಷ್ಟವಾಗಿದೆ.

ವಿವೇಕೋದಯ.

ವಿದೇಶ ವೃತ್ತಾಂತ

'ಪಾಯೊನಿಯರ್' ಎಂಬ ಆಂಗ್ಲೇಯ ಪತ್ರದ ಲಂಡನ್ ವಾತ್ತಾ೯ಹಾರರು ಈ ಕೆಳಗಿನ ವರ್ತಮಾನವನ್ನು ತಂತೀಮೂಲಕ ತಿಳಿಸಿರುವರು. ದಕ್ಷಿಣ ಮಹಾರಾಷ್ಟ್ರದಲ್ಲಿ ಅನ್ನ ಸರಕಾರದ ಕೂಡೆ ಕಠಿಣವಾದ ಯುದ್ಧ ನಡಿಸುವರೆ [illegible] ಆಹಾರಗಳನ್ನು ದೇವಸ್ಥಾನದಲ್ಲಿ ನಡಿಸುತ್ತಿ [illegible]

ಕೆಗೆ ಬರೆದಿರುವರಂತೆ. ಈ ವರ್ತಮಾನವು ನಿಜವಾದ್ದಲ್ಲಿ ೧೫೦ ವರುಷಗಳಿಂದ ಶಾಂತತೆಯಿಂದ ಆಳಲಿಕ್ಕೆ ಅತಿ ಸುಲಭವಾದ ಈ ದೇಶದಲ್ಲಿ ಪ್ರಕೃತವಿರುವ ಅಸಂತುಷ್ಟಿಯು ರೂಪಾಂತರಗೊಂಡು ಇದರ ಶಮನಕ್ಕೆ ಬಲತ್ಕಾರದ ವಿಧಾನವು ಬೇಕಾದೀತೆಂಬ ಸಂಗತಿಯು ಬ್ರಿಟಿಷ ರಾಜತಂತ್ರಕ್ಕೆ ಅಪಮಾನಕರವಾಗಿರುವುದೆಂದು ಬರ್ಕನ್‌ಹೆಡರವರು ಅಭಿಪ್ರಾಯಪಡುತ್ತಾರಂತೆ.

ಬ್ರಿಟಿಷ ಸಾಮ್ರಾಜ್ಯದ [illegible] ಮಂತ್ರಿ [illegible]

[illegible] ಮೆಂಟ ಸಭೆಯ ಮೆಂಬರರ ಚುನಾವಣೆ ಸಂದರ್ಭಗಳಲ್ಲಿ ತನ್ನ ಪಕ್ಷದವರಾದ ಲಿಬರಲ್ ತಂಡಿನವರ ಸಭೆಯಲ್ಲಿ ಭಾಷಣಗಳನ್ನು ಕೊಡುತ್ತಿರುವರಲ್ಲದೆ, ೨೦ ವರುಷ ಪ್ರಾಯದ ಕೇಂಬ್ರಿಜಿನಲ್ಲಿ ಕಲಿಯುತ್ತಲಿದ್ದ ಇವರ ಪುತ್ರನೂ, ಇವರ ಪತ್ನಿಯರೂ ಮಿ| ಲೋಯಿಡ್ ಜೋರ್ಜರವರ ಪರವಾಗಿ ಭಾಷಣಗಳನ್ನು ಅಲ್ಲಲ್ಲಿ ಕೊಡುತ್ತಿರುವರಂತೆ.

[illegible]

ಯು ಅಂಗೀಕರಿಸಿರುವುದೂ ಅಲ್ಲ. ವರ್ತಮಾನವೂ ಅದರ ಮೇಲೆ ಮೆಕತೋನಲ್ಡ್ ಪ್ರಭುಗಳು ತನ್ನ ನೇಮಕದ ವಿಷಯ ಯಾವ ಪ್ರಸ್ತಾಪವೂ ತನಗೆ ಗೊತ್ತಿರುವುದಿಲ್ಲ ವೆಂಬುದಾಗಿ ಹೇಳಿರುವರಂತೆ

ಕಲಿಕತ್ತೆಯುಳ್ಳ ಗವರ್ನಮೆಂಟ ಮಂದಿರದಲ್ಲಿ ಮೆಕ ಡೊನಲ್ಡ್ ಪ್ರಭುಗಳು ಮಿಂಟೋ ಪ್ರಭುಗಳ ವ್ಯಾಸರಾಯ ಪದವಿಯ ಉತ್ತರಾಧಿಕಾರಿಗಳಾಗುವ ಯಾವ ವರ್ತಮಾನ ವಿಲ್ಲದಿರುವುದಂತಲೂ ಮಿಂಟೋ ಪ್ರಭುಗಳು ಜ್ಯಾರಿಗೆ ಬಂದ ಕೌನ್ಸಿಲು ಮಾರ್ಪಾಟುಗಳ ಪರಿಣಾಮವನ್ನು ಒಂದು ವರ್ಷ ತನಕ ನೋಡಿ ತಮ್ಮ ಕೆಲಸದ ಅವಧಿಯನ್ನು ಪೂರ್ಣ ಮಾಡಿಯೇ ಹಿಂದುಸ್ಥಾನದಿಂದ ತೆರಳುವರೆಂತಲೂ ತಿಳಿದುಬರು ತ್ತದೆ.

~~~~~

ರಾಜದ್ರೋಹಸಂಬಂಧ ಕೈದಿಗಳ ಹೆಸರು ಪಟ್ಟಿಯು ಬಂಗಾಳದಲ್ಲಿ ಪ್ರಕಟಿಸಲ್ಪಟ್ಟಿರುವುದು. ಪಟ್ಟಿ ಯಲ್ಲಿ ೨೬ ಜನ ಕೈದಿಗಳ ಹೆಸರುಗಳೂ ಅವರು ಮಾಡಿದ ಅಪರಾಧ ಮತ್ತು ಇರುವ ಸ್ಥಳ ... ಪ್ರಕಟಿಸಲ್ಪಟ್ಟಿ ಗಿವೆ. ಇದರಲ್ಲಿ ಬಂಗಾಳ ... ಮಾಡಲ್ಪಟ್ಟ ... ಜನರ ಹೆಸರು ಕಾಣಿಸಿರುವುದು ... ಮಾಡ ಲ್ಪಟ್ಟ ಕಾರಣಗಳು ... ೧೮೧೮ನೇ ... ಲೇಶನುಗಳಲ್ಲಿ ನಮೂದಿಸಿ ... ಸೂಚಿಸ ಲ್ಪಟ್ಟಿರುವುದು

~~~~~

ಇದೇ ಫೆಬ್ರುವರಿ ತಿಂಗಳ ... ತಾರೀಕಿನಲ್ಲಿ ... ಮೆಂಟ ಸಭೆಯು ಕೂಡಬೇಕೆಂಬ ... ಚಕ್ರವರ್ತಿಯವರ ... ಪ್ರಕಟಿಸಲ್ಪಟ್ಟಿರುವುದು

~~~~~

ಉತ್ತರ ಹಿಂದುಸ್ಥಾನ.

~~~~~

ಸಾವಿರ ಗ್ರಾಮದಲ್ಲಿ ಮಲ್ಲಪ್ಪನೆಂಬ ರೈತನಿದ್ದನು. ಈತನಿಗೆ ಪ್ರಾಯವು [illegible] ವರುಷ ಮಿಕ್ಕಿಹೋಗಿತ್ತು ರೈತರಲ್ಲಿ ಬಹಳ ಸಾಹಸಿಕನಾಗಿದ್ದದರಿಂದ ಈತನ ಕುಟುಂಬ ಪೋಷಣೆಯು ಬಹಳ ಚೊಕ್ಕದಾದ ರೀತಿಯಲ್ಲಿ ಸಾಗುತ್ತಿತ್ತು. ಈತನಿಗೆ ಮೂರು ಜನ ಗಂಡು ಮಕ್ಕಳಿದ್ದರು ಇವರೂ ಸಹಾ ತಂದೆಯಂತೆಯೇ ಪ್ರಯತ್ನಶಾಲಿಗಳಾಗಿದ್ದರು ಇವರಲ್ಲಿ ಹಿರೇಯವನಿಗೆ ಮದುವೆಯಾಗಿತ್ತು. ಎರಡನೇಯವನಿಗೆ ನಾಲ್ಕುಕಡೆಗಳಿಂದಲೂ ಸಂಬಂಧಿಕರು ಬರುತ್ತಲಿದ್ದವು. ಮೂರನೇಯವನು ಮನೆಯ ಎತ್ತು ಕೋಣಗಳನ್ನು ಮೇಯಿಸಲು ಜಾಣನಾಗಿದ್ದನಲ್ಲದೆ ಗದ್ದೆಗಳನ್ನು ಹೂಡಲು ಸಹಾ ಶಕ್ತನಾಗಿದ್ದನು ಮಲ್ಲಪ್ಪನ ಹೆಂಡತಿಯು ಸಹಾ ಮನೇವಾರ್ತೆಯನ್ನು ಮಿತಿಯಿಂದ ಚನ್ನಾಗಿ ಸಾಗಿಸುವದರಲ್ಲಿ ಶ್ರೇಷ್ಠಳಾಗಿದ್ದಳು ಮಲ್ಲಪ್ಪನ ಪುಣ್ಯ ವಿಶೇಷತ್ವದಿಂದ ಹಿರೇ ಮಗನ ಪತ್ನಿಯಾದ ಸೊಸೆಯು ಸಹಾ ಸಜ್ಜನಳೂ ಯಾವಾಗಲೂ ಕೆಲಸ ಮಾಡುವ ಶೀಲವುಳ್ಳವಳೂ ಆಗಿದ್ದಳು ಸಂಸಾರ ಸುಖವನ್ನನುಭವಿಸಲಿಕ್ಕೆ ಹೀಗೆ ಮಲ್ಲಪ್ಪನಿಗೆ ಸಾಧ್ಯವಾಗಿತ್ತು ಮನೆಯಲ್ಲಿ ಕೆಲಸ ಮಾಡಲೊಲ್ಲದ ಉಬ್ಬಸದಿಂದ ಕೆಮ್ಮುತ್ತಿದ್ದ ಮುದಿ ತಂದೆಯನ್ನು ಮಾತ್ರ ಮಲ್ಲಪ್ಪನು ಸಾಕಬೇಕಿತ್ತು ವಿನಹಾ ಮಿಕ್ಕ ಮನೆಯವರೆಲ್ಲರೂ ಕೆಲಸ ಮಾಡುತ್ತಲಿದ್ದರು ಸಾಲಗಳೇನಾದರೂ ಇಲ್ಲದೆ ಜಮೀನಿನ ಕಂದಾಯವನ್ನು ಸರಕಾರಕ್ಕೆ ಕ್ಲಪ್ತ ಸಮಯದಲ್ಲಿ ಕೊಟ್ಟು ಯಾವಾಗಲೂ ಮನೆ ಒಳಗೆ ತುಷ್ಟಿಯಿದ್ದದರಿಂದ ಬಹಳ ಸಂತೋಷವಾದ ರೀತಿಯಲ್ಲಿ ಯೋಚನೆ ಇಲ್ಲದೆ ತನ್ನ ಜೀವನವನ್ನು ನಡಿಸಬಹುದಿತ್ತು ಆದರೆ ತನ್ನ ನೆರೆಮನೆಯ ರುದ್ರಪ್ಪನಿಗೂ ಮಲ್ಲಪ್ಪನಿಗೂ ನಿರಂತರ ಜಗಳವಿದ್ದದರಿಂದ ಇಂಥಾ ಜೀವನವು ಸಾಧ್ಯವಾಗಲಿಲ್ಲ

ರುದ್ರಪ್ಪನ ತಂದೆ ಶಾಂತಪ್ಪನ ಕಾಲದಲ್ಲಿ ಮಲ್ಲಪ್ಪನ ತಂದೆಯು ತನ್ನ ಮನೆಯ ಯಜಮಾನತನವನ್ನು ತಾನೇ ನೋಡಿಕೊಂಡಿರುವಾಗ, ಈ ನೆರೆಹೊರೆಯ ಎರಡು ಮನೆಗಳವರೂ ಬಹಳ ಮೈತ್ರಿಯಲ್ಲಿದ್ದರು ಒಂದು ಮನೆಯು ಹೆಂಗಸರಿಗೆ, ಗುಡಾಣ ಗಡಿಗೆ ಅಥವಾ ಬೇರೇನಾದರೂ ಪಾತ್ರೆಗಳು ಬೇಕಾದರೂ, ಅಥವಾ ಗದ್ದೆ ಹೂಡುವ ಕಾಲದಲ್ಲಿ ಒಂದು ಮನೆಯ ಎತ್ತು ಯಾ ಕೋಣವು ಅಸ್ವಸ್ಥ ತಗಲಿದ್ದರೂ ಮತ್ತೊಂದು ಮನೆಯವರು ಅಂಥವರ ಸಹಾಯವಮಾಡುತ್ತಲಿದ್ದರು ಒಬ್ಬರ ಆಕಳ ಕರುವು ಒಂದಾವರ್ತಿ ಇನ್ನೊಬ್ಬರ ಗದ್ದೆಗಳಿಗೆ ಹೋಗಿ ಪೈರು ಮೊದಲಾದ್ದನ್ನು ತಿಂದರೂ ಅದನ್ನವರು ಕೊರಗಿ ಹಿಡಿಸಿಬಿಟ್ಟು ಕರುವನ್ನು ಇನ್ನು ಮುಂದಕ್ಕೆ ಹೀಗೆ ಗದ್ದೆಗಳಿಗೆ ಹೋಗಲಿಕ್ಕೆ ಬಿಡಬೇಡಿರಿ, ಎಂತ ಹೇಳುತ್ತಿದ್ದರು ವಿನಹಾ ಈ ವಿಷಯ ಯಾವ ಕಲಹಗಳೂ ಹುಟ್ಟುತ್ತಿರಲಿಲ್ಲ ಹೀಗೆ ರುದ್ರಪ್ಪ ಮಲ್ಲಪ್ಪರವರ ತಂದೆಗಳ ಕಾಲದಲ್ಲಿ ಈ ನೆರೆಹೊರೆಯ ಮನೆಗಳವರೂ ಹಿಂದೆಂದೂ ಬೈದುಕೊಳ್ಳುವುದಾಗಲೀ ಚಾಡೀ ಮಾತುಗಳಾಗಲೀ ಅಥವಾ ಕಲಹ ಕಾರಣವಾದ ಮತ್ತಾವ ಪ್ರಸ್ತಾಪಗಳೂ ಏಳದೆ ಪರಸ್ಪರ ಹಿತ ಸಾಧನೆಯಲ್ಲಿ ನಿರತರಾಗಿದ್ದರು

ಆದರೆ ಈ ಸಮಾಚಾರವೆಲ್ಲವೂ ತಂದೆಗಳ ಕಾಲದ್ದಾಗಿತ್ತು ರುದ್ರಪ್ಪ ಮಲ್ಲಪ್ಪನವರು ತಮ್ಮ ತಮ್ಮ ಸಂಸಾರಗಳನ್ನು ಸಾಗಿಸುತ್ತಿರುವಾಗ್ಯೆ ಇಂತಹ ಸಮಾಚಾರವು ಅಸ್ಥಿರವಾಗಿ ಇವರೆಡೆಯಲ್ಲಿ ನಿರಂತರವಾಗ ಪರಸ್ಪರ ಜಗಳಗಳು ಪ್ರಾರಂಭವಾದವು.

ಜಗಳಗಳ ಮೂಲವಾದರೋ ಬಹಳ ಅಲ್ಪವಾದ ಸಂಗತಿ ಮಲ್ಲಪ್ಪನ ಸೊಸೆಯು ಒಂದು ಶಾಂತಸ್ವಭಾವದ ಪಶುವನ್ನು ಸಾಕಿದ್ದಳು ಮುಂಜಾನೆ ಅದರ ಹಾಲು ತೆಗೆದಾದ ಕೂಡಲೇ ಹಸುವನ್ನು ಕರು ಸಮೇತ ತಮ್ಮ ಮನೆಯ ಹಿಂದೆ ಇರುವ ಗುಡ್ಡೆಯ ಮೇಲೆ ಮೈಯ್ಯಲು ಬಿಡುತಿದ್ದಳು ಕರುವು ದನದ ಕೆಚ್ಚಲನ್ನು ಮುಟ್ಟದಂತೆ ಕರುವಿನ ಮುಖದ ಸುತ್ತಲೂ ಮುಳ್ಳಿನ ಬಳ್ಳಿ ಕಟ್ಟಲ್ಪಡುತ್ತಿತ್ತು ಒಂದು ದಿನ ಹಸುವು ಕರು ಸಮೇತ ಯಾರಿಂದಲೋ ಓಡಿಸಲ್ಪಟ್ಟು ಮಲ್ಲಪ್ಪನ ಗುಡ್ಡೆ ಕೆಳಭಾಗದಲ್ಲಿರುವ ರುದ್ರಪ್ಪನ ಗದ್ದೆಗಳ ಬೇಲಿ ಹತ್ತಿರ ಮೈಯುವುದನ್ನು ಮಲ್ಲಪ್ಪನ ಕಿರೇ ಮಗನು ನೋಡಿದ್ದನು ಆ ದಿನವೇ ಸಾಯಂಕಾಲ ದನದ ಹಾಲು ಕರೆಯ ಹೋಗಲು ಹಾಲೇನೂ ಸಿಕ್ಕಲಿಲ್ಲ ಕೆಚ್ಚಲಲ್ಲಿ ಸಹಾ ಹಾಲಿರಲಿಲ್ಲ ಕರು ಮುಸುಡಿನ ಮುಳ್ಳುಗಳು ಇದ್ದ ಹಾಗೆ ಇರುತ್ತಾ ಮೈಯುತ್ತಿರುವಾಗ್ಯೆ ಕರುವನ್ನು ಹಾಲು ಕುಡಿಯಲು ದನ ಬಿಡದು. ಯಾರಾದರೂ ಬೇಕಂತಲೇ ಹಾಲು ತೆಗದಿರಬೇಕೆಂದು ಅನುಮಾನಪಟ್ಟು ಈ ವೃತ್ತಾಂತವನ್ನು ತನ್ನ ಅತ್ತೆಗೆ ಮಲ್ಲಪ್ಪನ ಸೊಸೆಯು ತಿಳಿಸುವವಳಾದಳು ತಾಯಿಯ ಹತ್ತಿರ ಎದ್ದ ಮಲ್ಲಪ್ಪನ ಕಿರಿ ಮಗನು ಇದನ್ನು ಕೇಳಿ ರುದ್ರಪ್ಪನ ಮನೆಯವರೇ ಬೇಕಂತಲೇ ಹಾಲು ತೆಗದಿರಲಿಕ್ಕೆ ಸಾಕೆಂತ ಗ್ರಹಿಸಿ ಇದನ್ನು ರುಜು ಪಡಿಸಲಿಕ್ಕೆ ಕರು ಸಮೇತ ದನವನ್ನು ತಾನು ರುದ್ರಪ್ಪನವರ ಗದ್ದೆ ಬಳಿಯಲ್ಲಿ ನೋಡಿರುವೆನಾಗಿ ಹೇಳಿದನು. ಇಷ್ಟ್ಟ್ಹಾ ಕೇಳುತ್ತಲೇ ಮಲ್ಲಪ್ಪನ ಸೊಸೆಯು ಸಿಟ್ಟಿನಿಂದ ಆವೇಶಗೊಂಡು ವಿಚಾರಿಸಿ ಬರುವೆನೆಂತ ಕೂಡಲೇ ರುದ್ರಪ್ಪನ ಮನೆ ಕಡೆಗೆ ಹೋದಳು. ಮಲ್ಲಪ್ಪನ ಸೊಸೆಯು ಬರುವದನ್ನು ನೋಡಿ ರುದ್ರಪ್ಪನ ತಾಯಿಯು ಮನೆಯ ಒಳಗಿನಿಂದ ಬಂದು ಗದ್ದೆಗಳ [illegible]

"ಯಾಕೆ ಗೊತ್ತಿಲ್ಲ; ಏನು, ನಮ್ಮ ಮನೆ ಹಸು ಇಲ್ಲಿ ತನಕ ಬಂದಿತ್ತಲ್ಲ; ನೀವಾರಾದರೂ ಕರೆದು ಬಿಟ್ಟಿರಾ? ರಾತ್ರೆ ಉಟಕೆ ಹಾಲಿಲ್ಲ ಮಕ್ಕಳು ಮರಿ ಉಪ್ವಾಸ!"

"ನಿಮ್ಮ ಹಸು! ಯಾರು ತಾನೆ ಕಂಡಿದ್ದಾರೆ? ನಮ್ಮಲ್ಲಿ ಹಟ್ಟಿ ತುಂಬ ಆಕಳಿವೆ ಹಾಲೇನೂ ಕಡಿಮೆ ಇಲ್ಲ, ಅನ್ಯರ ಆಕಳ ಹಾಲು ನಮಗ್ಯಾಕೆ? ಬಾಯಿಗೆ ಬಂದಂತೆ ಮಾತಾಡುತ್ತಿಯಾ".

ಇವರಿಬ್ಬರು, ಮಾತುಗಳ ಬದಲಿಗೆ ಕ್ರಮೇಣ ಒಬ್ಬೊರನ್ನೊಬ್ಬರು ಬೈಯಲಿಕ್ಕೆ ಪ್ರಾರಂಭಿಸಿದರು. ಸಿಟ್ಟಿನಿಂದ ಇಬ್ಬರೂ ರೇಗುತ್ತಾ ಯುಕ್ತಾಯುಕ್ತತೆಯನ್ನು ಮರೆತು ಬಿಟ್ಟರು ಉಚ್ಚರಿಸಲಸಹ್ಯವಾದ ಮಾತುಗಳೆಲ್ಲವೂ ಒಂದಾಗಿಯೇ ಇವರ ಬಾಯಿಯಿಂದ ಹೊರಡಿದವು ಇಷ್ಟರಲ್ಲಿ ನೀರನ್ನು ತರಲಿಕ್ಕೆ ಹೋದ ಮಲ್ಲಪ್ಪನ ಹೆಂಡತಿಯು ತನ್ನ ಸೊಸೆ ಸಹಾಯಕ್ಕೆ ಬಂದು ಸೇರಿದಳು ಮನೆಯಲ್ಲಿದ್ದ ರುದ್ರಪ್ಪನ ಹೆಂಡತಿಯು-ಈ ಗದ್ದಲವೆಲ್ಲವನ್ನು ಕೇಳಿ ಓಡಿಬಂದು ತನ್ನ ಅತ್ತೆಯಪರವಾಗಿ ಮಲ್ಲಪ್ಪನ ಸೊಸೆಯನ್ನು ಹೀಯಾಳಿಸಲು ತೊಡಗಿದಳು ಎರಡು ಮನೆಗಳಲ್ಲಿಯೂ ನಡಿಯದೆ ಇದ್ದ ದುರಾಚಾರಗಳು ನಡಿದಿದ್ದವುಗಳ ಸಮೇತ ಉಭಯಕಡೆಯವರಿಂದಲೂ ಬೆಳಕಿಗೆ ತರಲ್ಪಟ್ಟವು. ಒಂದೇ ರೀತಿ ಈ ನಾಲ್ವರ ಬೊಬ್ಬಾಟವು ಸುರುವಾಯಿತು

"ನೀನು ಅಂಥವಳು—ನೀನು ಇಂಥವಳು—ನೀನೊಂದು ಶುರುವಾನಪಿ ನೀನು ಶಿಖಂಡಿ—ನೀನೊಂದು ಕತ್ತೆ—ನೀನೊಂದು ಕಾಗೆ ನೀನು ನಿನ್ನ ಮುದಿಮಾವನನ್ನು ಅನ್ನ ಹಾಕದೆ ಕೊಲ್ಲುತ್ತಿ ನಾನು ನಿನಗೆ ಎರವಿಗೆ ಕೊಟ್ಟ ಸೀರೆಯಲ್ಲಿ ಬೇಕೆಂತಲೇ ತೂತು ಮಾಡಿರುವಿ—ಏ ಹಾಸರ ಕತ್ತೆ—ನಮ್ಮಿಂದ ಕೊಂಡುಹೋದ ನೇಗಿಲನ್ನು ಈಗಲೇ ಕೊಟ್ಟುಬಿಡು"

ಈ ರೀತಿ ಮಾತುಗಳು ಅವರ ಜಗಳಾಟದಿಂದ ಕೇಳುತ್ತಲಿದ್ದವು ತುಚ್ಛವಚನದಿಂದ ನಾನಾವಿಧದ ಬೈಗಳೂ ದೂರುಗಳೂ ಇವೆಲ್ಲೆಲ್ಲಾ ಅದಿ ಮುಗಿದರೂ ಏಳುವ ಇದಗಳಿಂದ ಮುಗಿಯದೆ ಒಬ್ಬೊರನ್ನೊಬ್ಬರು ರಟ್ಟೆ ಹಿಡಿದು ಎಳೆಯುವದೆ ಪ್ರಾರಂಭಿಸಿದರು ಗದ್ದೆಗಳಿಂದ ಕೆಲಸ ತೀರಿಸಿ ಮನೆಗೆ ಬರುತ್ತಲಿದ್ದ ರುದ್ರಪ್ಪನು ತನ್ನ ಹೆಂಡತಿಯ ಕಡೆಯಿಂದ ಈ ಜಗಳಕ್ಕೆ ಸೇರಬೇಕಾಯಿತು ರುದ್ರಪ್ಪನು ಹೀಗ ಈ ಕಲಹ ಪ್ರವೇಶಿಸಿದ್ದನ್ನು ನೋಡಿ ಮಲ್ಲಪ್ಪನೂ ಆತನ ಹಿರೆ ಮಗನೂ ಓಡಿಬಂದರು ಮಲ್ಲಪ್ಪನು ರುದ್ರಪ್ಪನಕ್ಕಿಂತ ಬಲಾಢ್ಯನಾಗಿದ್ದನು ನಾಚಿಕೆ ಇಲ್ಲದೆ ಹೆಂಗಸರ ಒಳಗದಲ್ಲಿ ಪ್ರವೇಶಿಸಿದ ರುದ್ರಪ್ಪನ ಮೀಸೆಗಳಿರಕೂಡದೆಂದು ಹೇಳಿ ರುದ್ರಪ್ಪನ ಮೀಸೆಗಳನು ಕೈಯಿಂದ ಕಿತ್ತು ಬಿಸಾಡಿ ತನ್ನ ಬಾಹುಬಲದಿಂದ ಸರ್ವರೂ ಮನೆ ಸೇರುವಂತೆ ಮಾಡಿಬಿಟ್ಟನು

ಈ ಎರಡು ನೆರೆಮನೆಯವರಿಗೂ ಇದೇ ಅವರ ಪರಸ್ಪರ ಕಲಹದ ಮೂಲ ಕಾರಣವಾಗಿತ್ತು

ರುದ್ರಪ್ಪನು, ಹರಿದುಬಿಟ್ಟ ತನ್ನ ಮೀಸೆಗಳನ್ನು ಒಂದು ಕಾಗದದಲ್ಲಿ ಕಟ್ಟಿಕೊಂಡು ಮಲ್ಲಪ್ಪನನ್ನು ಮುಯ್ಯಿಗೆ ಮುಯ್ಯಿ ತೀರಿಸದೆ ಬಿಡಬಾರದೆಂತ ಈ ಮೀಸೆಗಳನ್ನು ತಾಲೂಕು ಮೇಜಿಸ್ಟ್ರೇಟರಲ್ಲಿ ಹಾಜರು ಪಡಿಸಿ ಫಿರ್ಯಾದು ದಾಖಿಲು ಮಾಡಿದನು ರುದ್ರಪ್ಪನ ಹೆಂಡತಿಯು ಮಲ್ಲಪ್ಪನಿಗೆ ಇನ್ನು ಸ್ವಲ್ಪದಲ್ಲಿಯೇ ಜೆಲು ಪ್ರಾಪ್ತವಾಗುವುದೆಂತ ಗ್ರಾಮದಲ್ಲೆಲ್ಲಾ ತಾನು ಹೋದ ಕಡೆಯಲ್ಲಿ ಸಾರಲು ಪ್ರಾರಂಭಿಸಿದಳು ಕಲಹವು ಕ್ರಮವಾಗಿ ಬೆಳೆಯುತ್ತಾ ಬಂತು ರುದ್ರಪ್ಪನ ಮೀಸೆಯನ್ನು ಹರಿದು ಬಿಸಾಡಿದ್ದು ತಾನಲ್ಲೆಂದುಕೊಂಡು, ಆತನು ತಾನು ಉಟ್ಟುಕೊಂಡಿದ್ದ ವಸ್ತ್ರವನ್ನು ಎಳದು ಹರಿದು ಹಾಕಿರುವನೆಂದು ಮಲ್ಲಪ್ಪನೂ ಸಹಾ ತಾಲೂಕು ಮೇಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಿಲುಮಾಡಿದನು ಈ ಎರಡು ಮೊಕದಮೆಗಳ ತನಖಿಯು ನಡಿಯುತ್ತಿರುವಾಗ ರುದ್ರಪ್ಪನ ಮನೆ ಗಾಡಿಯ ನುಗವು ಕಳವಾಗಿತ್ತು ರುದ್ರಪ್ಪನ ಮನೆ ಹೆಂಗಸರೆಲ್ಲರೂ ರಾತ್ರಿ ಸಮಯ ಮಲ್ಲಪ್ಪನ ಮಗನು ಬಂದು ಅದನ್ನು ಕೊಂಡುಹೋಗಿದ್ದನ್ನು ತಾವು ಕಂಡಿರುವೆವು ಎಂತ ಹೇಳಿಬಿಟ್ಟರು. ಮಲ್ಲಪ್ಪನ ಮಗನ ಮೇಲೆ ಕಳವಿನ ಫಿರ್ಯಾದು ಇನ್ನೊಂದು ದಾಖಲಾಯಿತು. ಪದೇ ಪದೇ ಕ್ರಿಮಿನಲ್ ವ್ಯವಹಾರಣೆಗಳೂ ಪ್ರತಿನಿತ್ಯ ತಂತಮ್ಮ ವಟಾರಗಳಲ್ಲಿ ಜಗಳಾಡುವುದೂ ಹೊಡಕೊಳ್ಳುವುದೂ ಹೀಗೆ ಅಧಿಕವಾಗುತ್ತ ಬಂದವು. ಹೆತ್ತವರನ್ನನುಸರಿಸಿಕೊಂಡು ನೆರೆಮನೆಗಳೆರಡರ ಮಕ್ಕಳೂ ಸಹಾ ಬೈದುಕೊಳ್ಳಲೂ ಜಗಳಾಡಲೂ ಉಪಕ್ರಮಿಸುತ್ತಲಿದ್ದವು.. ವಸ್ತ್ರ ಒಗಿಯುವರೆ ಇತ್ತಂಡದ ಹೆಂಗಸರು ನದೀ ಕಿನಾರೆಗೆ ಹೋದರೆ ಅಲ್ಲಿ ಸಹಾ ವಸ್ತ್ರ ಒಗಿಯುವುದಕ್ಕಿಂತಲೂ ಹೆಚ್ಚು ಸಮಯ ಕಲಹಗಳಲ್ಲಿಯೇ ನಿರತರಾಗಿದ್ದರು.

ದಾಖಿಲುಮಾಡಲ್ಪಟ್ಟ ಫಿರ್ಯಾದುಗಳಲ್ಲಿ ಯಥಾರೀತಿ ಶಿಕ್ಷೆ ವಿಧಿಸೋಣಾಯಿತು. ಆದರೆ ಎಂಥಾ ಶಿಕ್ಷೆಯಾದರೂ ಇವರ ಕ್ರಿಮಿನಲ್ ಮೊಕದಮೆಗಳು ಇನ್ನಷ್ಟು ಹೆಚ್ಚಿ ಮೇಜಿಸ್ಟ್ರೇಟ್ ಇದ್ದರು ಸಹಾ ಬೇಜಾರ ಪಟ್ಟರು. ಆದರೂ ಇವರ ವೈರ [illegible]

[illegible]

ಇತ್ತ ತುಸು ನೋಡಿರಿ!!!

ಪ್ರಾಸಾದಿಕ ಗ್ರಂಥವು.

ಕಲಿಯುಗದಲ್ಲಿ ತುಳಸಿದಾಸ ಕಬೀರ ಮೊದಲಾದ ೫೫ ವೈಷ್ಣವ ಭಕ್ತರು ಗೈದ ಅದ್ಭುತಕರಣಿಗಳ ಸುರಸ ಕಥನವು (ಭಾಮಿನಿಷಟ್ಪದಿ) ಪದ್ಯರೂಪವಾಗಿ **ಸುಲಭ ಶೈಲಿಯಲ್ಲಿ** **ಭಕ್ತಿಮಹಿಮೆ** ಎಂಬಭಿಧಾನದಿಂದ ಕನಡುಬಾಷೆಯಲ್ಲಿ **ಮುದ್ರಿತವಾಗಿಯದೆ** ಪ್ಲೇಗಿನಂಥಹ ದುರ್ವ್ಯಾಧಿಗಳ ಪೀಡೆ ನಿರ್ಗತವಾಗಲು ಈ ಗ್ರಂಥದ ವಾಚನವೇ ಮುಖ್ಯ ಉಪಾಯವಾಗಿದೆಯೆಂದು ಸುಜನರು ತಿಳಿಯಲಿ

ಒಂದು ಪ್ರತಿಯ ಕ್ರಯ 12 ಆಣೆ ಮಾತ್ರ—ಅಂಚೆವೆಚ್ಚ ವಿನಹ ಹತ್ತು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ವಾಗ್ದೇವಿ ಎಂಬ ಚಲೋ ಕಾದಂಬರಿಯು ಉಚಿತವಾಗಿ ಸಿಗುವುದು

ಈ ಪುಸ್ತಕದ ಕುರಿತು ಒಬ್ಬ ವಿದ್ವಾಂಸ ಮಹಾಶಯರ ಅಭಿಪ್ರಾಯ —

Please accept my best thanks for the present of your new book about Vaishnava Saints. It ... that though there are considerable differences of idiom between the language as spoken here and as spoken in your part of the country the language should be almost the same when put in verse. The style is easy and flowing and I am sure that the book will be read with pleasure and profit by Kannada speaking people.

Sd) H V Nanjundayya

ಅಪೇಕ್ಷಕರು ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ।

ದಿ ಉಲನ ಮಾರ್ಟ ಅಥವಾ ಬೋಳಾರ ಬಾಬುರಾವ್.
ಮಂಗಳೂರು ಮಂಗಳೂರು,

ಅಧ್ಯಾತ್ಮ ವಿಚಾರ.

ಸೃಷ್ಟಿಯ ಕುರಿತು, ಪ್ರಾಣಿಗಳು ಹುಟ್ಟುವ ರೀತಿ ಯಾನೆ ಪಂಚಾಗ್ನಿ ವಿದ್ಯ, ಪುರುಷನ ಶರೀರ ವರ್ಣನೆ ಯಾ ಗಾಯತ್ರಿವಿದ್ಯ, ವೈಶ್ವಾನರವಿದ್ಯ ಯಾನೆ ಪ್ರಾಣಾಗ್ನಿಹೋತ್ರದ ಕುರಿತು ಜಾಗ್ರದವಸ್ಥೆ, ನಿದ್ರಾವಸ್ಥೆ, ಹೃದಯಪುಂಡರೀಕ ವಿಚಾರ ಬ್ರಹ್ಮವಿದ್ಯ ಮರಣದ ಕುರಿತು ಗತಿ (ಮಾರ್ಗಗಳ) ಕುರಿತು, ಪ್ರತ್ಯಗಾತ್ಮವಿದ್ಯ, ಮೊದಲಾದ ವಿಷಯಗಳುಳ್ಳ ವಾರಗಳನ್ನು ಒಳಕೊಂಡಿರುವ,

ಛಾಂದೊಗ್ಯೋಪನಿಷತ್ ಮೊದಲಾದ ಕೆಲವು ವೈದಿಕ ಗ್ರಂಥಗಳ ಆಧಾರದ ಮೇಲೆ, ಮಂಗಳೂರು ಗಿನೇ ಗ್ರೇಡ್ ಪ್ಲೀಡರ್ ಹಳಗೇರಿ ಕೃಷ್ಣರಾಯರವರಿಂದ ರಚಿಸಲ್ಪಟ್ಟಿರುವುದು

ಕ್ರಯ ಟಪ್ಪಾಲು ಹಾಸಲು ಹೊರತು ರೂ ೨—೨—೦ ಈ ಪುಸ್ತಕದ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವದು

ಎಚ್ ಕೃಷ್ಣರಾವ್ I ಗ್ರೇಡ್ ಪ್ಲೀಡರ್,
ಮಂಗಳೂರು

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಶೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಎಮ್. ದ್ಯಾವಪ್ಪ ಅಂಡ್ ಸನ್,
ಫ್ಲಾರಿಸ್ಟ್ ಅಂಡ್ ಸೀಡ್ಸ್‌ಮೆನ್.
[illegible]

[illegible]

ಸ್ವಾಮಿ ನಡತೆಯಿಂದು ಬಬ್ಬರಿಗೊಬ್ಬರು ಸ್ನೇಹಾಯಮಾಡುತ್ತಲಿದ್ದೆವು. ' ಅಲ್ಪ ಒಂದು ಸಂಗತಿಗೋಸ್ಕರ ಈ ಕಲಹಗಳೆಲ್ಲವೂ ಉಂಟಾದವು ಹಾಲನ್ನು ಯಾರು ತೆಗದಿದ್ದ ರೋ ಏನೋ, ಅವರು ತೆಗದಿರುವುದನ್ನು ಯಾರಾದರೂ ಕಂಡದ್ದುಂಟೋ? ಒಂದು ವೇಳ್ಯೆ ನಮ್ಮ ಸೇವಕರಲ್ಲಿ ಯಾರಾದರೂ ತೆಗೆದಿರಲಿಕ್ಕೂ ಸಾಕು ಹ್ಯಾಗೆ ಹೇಳಲಿ ಆದರೇನಾಯಿತು ಐದಾರು ಕುಡ್ತೆಗಳ ಹಾಲಿನ ಕ್ರಯವೇನಾದೀತು! ನಿಮ್ಮ ಕ್ರಿಮಿನಲ್ 'ಮೊಕದಮೆಗಳು ಮೊದಲಾದವುಗಳ ಖರ್ಚು ಏನಾಗಿರುವುದೆಂದು ನೋಡಿರುವಿರಾ? ಒಂದು ವೇಳ್ಯ ನೆರೆಯವನು ಒಂದು ಕಠಿಣ ಮಾತನ್ನಾಡಿದರೂ, ಅವನನ್ನು ತಿದ್ದಲು ಪ್ರಯತ್ನಿಸಬೇಕು ನಯನುಡಿಗಳನ್ನಾಡಿ ಅವನಿಗೆ ತೋರಿಸಲು ಬೇಕು ಈ ವರೇಗೆ ನಿಮ್ಮೊಳಗೆ ಬಹಳ ಕಲಹಗಳಾದವು ಆದರೆ ಇನ್ನಾದರೂ ನೀವು ಇವೆನ್ನೆಲ್ಲಾ ಮರೆತು ಬಿಟ್ಟು ಐಕ್ಯವನ್ನು ಸಾಧಿಸಬಹುದು ನಾವೆಲ್ಲಾ ಮನುಷ್ಯರು ಒಂದೆರಡು ಸತಿ ತಪ್ಪಿ ಬೀಳುವೆವು ಇದರಿಂದ ಜನ್ಮಾಂತ್ಯ ತನಕ ತಪ್ಪುಮಾಡಬೇಕೆಂದಿಲ್ಲ ನರೆಯವನಾದ ರುದ್ರಪ್ಪನಲ್ಲಿಗೆ ಹೋಗಿ ಅವನ ಕೂಡೆ ಸ್ನೇಹವನ್ನ ಬೆಳಸ ತ್ತಿರುವವನಾಗು ನಿನ್ನ ಶಿಟ್ಟನ್ನು ವೃದ್ಧಿಯಾಗಲಿಕ್ಕೆ ಬಿಟ್ಟರೆ ಅವರಿಂದ ನಿನಗೇನೇ ಅಪಾಯ ಉಂಟಾಗುವುದು "

ಆದರೆ ಈ ಮುದುಕನ ಮಾತನ್ನು ಯಾರು ಕೇಳುವರು? ಮಲ್ಲಪ್ಪ ರುದ್ರಪ್ಪರ ಕಲಹಗಳು ಹೆಚ್ಚುತ್ತಾ ಬಂದವು ಐದಾರು ವರುಷ ಈ ರೀತಿ ಸಂದುಹೋಗವು

ಏಳನೇ ವರುಷದಲ್ಲಿ ಮಲ್ಲಪ್ಪನ ಸೊಸೆಯು ಒಂದು ಮದುವೆಗೆ ಹೋಗಿದ್ದಳು ರುದ್ರಪ್ಪನು ಸಹಾ ಆ ಮದಿವೆಯು ಚಪ್ಪರದ... ತನ್ನ ... ಇತಲ... ರುದ್ರಪ್ಪನು ಒಂದು ಕೆಟ್ಟ ... ಎಂತ ಹೇಳಿ ರುದ್ರಪ್ಪನನ್ನು ... ರುದ್ರಪ್ಪನು ಇದನ್ನು ಕೇಳಿಕೊಂಡು ... ಪಿಸಲಾರದೆ ಮಲ್ಲಪ್ಪನ ಸೊಸೆಯು ಇದ್ದೆಡೆ ಒಂದು ಧವಡೆಗೆ ಒಂದು ಏಟನ್ನು ಹೊಡೆದು ಬಿಟ್ಟನು ದವಡೆಗೆ ... ತಿ ತಪ್ಪಿ ನೆಲಕ್ಕೆ ಬಿದ್ದಳು ಈಕೆಯು ... ಗಿದ್ದಳು

(ಇನ್ನೂ ಇರುವುದು

ಮಕ್ಕಳನ್ನು ಶಿಕ್ಷಿಸುವುದರ ಕುರಿತು.

ನಮ್ಮ ಮುಂದಿನ ತಲೆಮಾರಿನವರು ... ಹಲವು ... ಮಾಡುತ್ತಿರುವರು ಅನೇಕ ವಿದ್ಯಾರ್ಥಿಗಳು ... ಮೊದಲಾದವುಗಳನ್ನು ... ನಮ್ಮ ದೇಶದಲ್ಲಿ ಸ್ಥಾಪಿಸುವರೆ ... ಹೋಗುತ್ತಿರುವರು ವಿದ್ಯಾ... ಮಾತ್ರ ... ವುದು ಯುಕ್ತವಲ್ಲವೆಂತ ... ಶಿಕ್ಷಣವನ್ನು ... ಶಿಕ್ಷಣಕ್ಕೆ ಜನ ಸಾಮಾನ್ಯರಲ್ಲಿ ... ದೊಂದು ... ನಮ್ಮ ಮುಂದಿನ ... ಮಕ್ಕಳು ... ರೀತಿ ಅವುಗಳನ್ನ ತಿದ್ದಬೇಕೆಂಬದನ್ನ ... ಶಿಕ್ಷಿಸುವುದರ ಕುರಿತು ಕೆಲವು ಸೂಚನೆಗಳನ್ನು ಕೊಡುವೆವು

ಬೆಳಿಗ್ಯೆ ಒಂಬತ್ತು ಘಂಟೆ ಸಮಯ ತಾಯಿಯು ತನ್ನ ನಾಲ್ಕುವರುಷದ ಮಗನಿಗೆ ಬಟ್ಟಲಲ್ಲಿ ಗಂಜಿಯನ್ನು ಹಾಕಿ ಅದೆ... ಸ್ವಲ್ಪ ತುಪ್ಪವನ್ನು ಬೆರಸಿ ಮಗನ ಹೆಸರು ತೆಗದು ಕರೆಯುತ್ತಿರುವಳು ... ಮೊದಲಾದವುಗಳನ್ನು ಮಕ್ಕಳು ಕುಡಿಯುವ ಪದ್ಧತಿಯು ಈ ಮನೆಯಲ್ಲಿಲ್ಲ ಎಷ್ಟು ಸರ್ತಿ ಕರದರೂ ಹುಡುಗನ ಉತ್ತರವಿಲ್ಲ ಕೆಲಸದವಸರದಲ್ಲಿ ತಾಯಿಯು ಇದ್ದದ್ದರಿಂದ ಮಗುವು ಬಾರದಿದ್ದನ್ನು ನೋಡಿ ಕೋಪಗೊಂಡು ಅದು ಎಲ್ಲಿರುವುದೆಂತ ಹುಡುಕಿ ಬರುತ್ತಿರುವಳು ಮಾಳಿಗೆಯ ಮೆಟ್ಲುಗಳ ಹತ್ತಿರ ಅದು ತಾಯಿಗೆ ಶಿಟ್ಟಾದದ್ದು ತಿಳಿಯದೆ ಇತರ ಯಾವ ಯೋಚನೆಯೂ ಸಹಾ ಇಲ್ಲದೆ ಆಡುತ್ತಲಿತ್ತು ಎಷ್ಟು ಸರ್ತಿ ಕರದರೂ ನಿನ್ನ ಉತ್ತರ ಸಹಾ ಇಲ್ಲ, ಬಟ್ಟಲಲ್ಲಿ ಹಾಕಿದ ಗಂಜಿಯು ಬಿಸಿ ಆರಿ ತಣ್ಣಗಾಗಿ ಹೋಯಿತು, ಇಲ್ಲಿ ಏನು ಮಣ್ಣು ತಿನ್ನುತ್ತಾ ಇರುವೆಯೋ—ಈ ಮೊದಲಾದ ಕಟು ಠೋಕ್ತಿಗಳಿಂದ ಮಗುವನ್ನು ಎತ್ತಿ ಕೈಗಳಿಂದ ಗಟ್ಟಿಯಾಗಿ ಅದನ್ನು ನಡುಗುವಂತೆ ಮಾಡಿ ಗಂಜೀ ಬಟ್ಲ ಹತ್ತಿರ ಅದನ್ನು 'ಘುಡ್ಡ' ಎಂತ ಕೂತುಕೊಳ್ಳಿಸುವಳು ಮಗುವು ಇಡೀ ಹೊತ್ತು ಅಳುತ್ತಾ ಗಂಜಿಯನ್ನುಣ್ಣುವುದು. ಗಂಜಿ ಊಟ ತೀರಿದ ಮೇಲೆ ತಾಯಿಗೆ, ಮಗುವಿನ ಮೇಲೆ ಅಂತೇಕರ್ರುಶ ತ್ರುಟ್ಟು ತಾನು ಮಾಡಿದ್ದು ಉಚಿತವೋ ಎಂತ ಮನಸ್ಸಿನಲ್ಲಿಯೇ ಯೋಚಿಸುತ್ತಿರುವಳು. ವಾಚಕರೇ ಇಂಥಾ ತಾಯಿಗೆ ಯಾವ ಉತ್ತರವನ್ನು ಕೊಡಬಹುದು!

ಮಾತೆಯು ಮಗುವನ್ನು ... ಗಂಜಿ ಊಟ ...

ಇತರ ಉಪಾಯಗಳಿರುವವು. ಪ್ರಥಮದಲ್ಲಿ ಗಂಜಿ ಊಟವು ನಿತ್ಯದಲ್ಲಿಯೂ ಕ್ಲಪ್ತ ಸಮಯದಲ್ಲಿಯೇ ತಯ್ಯಾರಾಗುತ್ತದೋ ಎಂಬದಕ್ಕೆ ನಿಗಾ ಕೊಡತಕ್ಕದ್ದು. ಮನೆಯಲ್ಲಿ ಗಂಜಿ ಊಟಮಾಡುವ ಇತರರು ಒಂದೇ ಸರ್ತಿ ಊಟಕ್ಕೆ ಬರುತ್ತಿರುವರೋ ಎಂಬ ಸಂಗತಿಯನ್ನು ಸಹಾ ಲಕ್ಷ್ಯದಲ್ಲಿಡತಕ್ಕದ್ದು. ತದನಂತರ ಮಗುವು ಒಮ್ಮೆ ಕರದರೆ ಬಾರದಿದ್ದರ ಇನ್ನೊಂದಾವರ್ತಿ ಅದನ್ನು ಕರೆಯಬೇಕಾಗಿರುವುದು. ಇನ್ನೊಂದಾವರ್ತಿಯು ಸಹಾ ತಾಯಿಯ ಅನುಜ್ಞೆಗೆ ವಿಧೇಯವಾಗಿ ನಡಿಯದಿದ್ದರೆ ಸುಮ್ಮಗಿದ್ದು ಭೋಜನ ಶಾಲಯಲ್ಲಿಟ್ಟಿದ್ದ ಅದರ ಗಂಜೀ ಬಟ್ಲನ್ನು ತೆಗದುಬಿಟ್ಟು ಇತರರೆಲ್ಲರೂ ತಮ್ಮ ಗಂಜಿ ಊಟವನ್ನು ಮುಗಿಸಿಬಿಡತಕ್ಕದ್ದು ಗಂಜೀ ಊಟಕ್ಕೆ ಕ್ಲಪ್ತ ಸಮಯದಲ್ಲಿ ಬಾರದಿದ್ದಕ್ಕೆ ಗಂಜೀ ಊಟವನ್ನು ಕೊಡದಿರುವುದೇ ತಕ್ಕದಾದ ಶಿಕ್ಷೆ. ಈ ವಿಷಯ ಮನೆಯಲ್ಲೆಲ್ಲಾ ಬೊಬ್ಬಾಟ ಬೇಡ, ಕೆಟ್ಟ ವಚನಗಳು ಆಗತ್ಯವಿಲ್ಲ, ಗದರಿಕೆಯು ಅನಾವಶ್ಯಕ ಊಟಕ್ಕೆ ಬಾರದಿದ್ದರಸ್ವಾಭಾವಿಕ ಫಲವು ಉಪವಾಸವೇ ಆಗಿರುತ್ತದೆ ಮಗುವನ್ನು ಹೊಡಿಯುವುದು ಅಥವಾ ಇನ್ನ್ಯಾವ ವಿಧಾನದಲ್ಲಿಯಾದರೂ ಶಿಕ್ಷಿಸುವುದು ಊಟಕ್ಕೆ ಗೈರುಹಾಜರಾದದ್ದಕ್ಕೆ ನ್ಯಾಯವಾದ ಫಲವಲ್ಲ ಇದು ನ್ಯಾಯವಿರುದ್ಧ ... ಸ್ವಾಭಾವಿಕವಾಗಿರುವ ನ್ಯಾಯ ವಿಚಾರದ ಭಾವನೆಯು ದೇವರಿಂದ ಇಂಥಾ ಶಿಕ್ಷೆಗಳಿಗೆ ಅದು ಗಮನಕೊಡದು

ಆದರೆ ಮಗುವನ್ನು ಮಧ್ಯಾಹ್ನ ಊಟದ ಪರಿಯಂತ ಊಟವಿಲ್ಲದಂತೆ ಮಾಡುವುದು ಕ್ಷೇಮಕರವೆ ? ಮಗುವು ದೇಹದಲ್ಲಿ ಕ್ಷೀಣವಾಗಿದ್ದರೆ ಈ ವಿಧಾನದ ಶಿಕ್ಷೆಯು ಯುಕ್ತವೋ? ಎಂಬ ಅನುಮಾನವು ಹಲವರಲ್ಲಿ ಉಂಟಾಗಬಹುದು ಮಗುವು ಬಹಳ ಬಲಹೀನವಿದ್ದಲ್ಲಿ ತಾಯಿಯು ಮಧ್ಯಾಹ್ನ ಊಟದ ಮೊದಲು ಒಂದಿಷ್ಟು ಹಾಲು ಕುಡಿಯಲು ಕೊಡಬಹುದು ಆದರೆ ಹೀಗೆ ಹಾಲನ್ನು ಕೊಡುವುದು ಮಗುವು ಕೇಳಿದ್ದಕ್ಕೆ ಕೊಡುವುದಲ್ಲ ತಾಯಿಯು ಆವಶ್ಯವೆಂತ ಭಾವಿಸಿದರೆನೇ ಕೊಡತಕ್ಕದ್ದು ಹಾಲು ಕೊಡುವಾಗಲೂ ಊಟಕ್ಕೆ ಕ್ಲಪ್ತ ಸಮಯದಲ್ಲಿ ಬಾರದಿದ್ದಕ್ಕೆ ಉಪವಾಸವಿರಬೇಕಾಯಿತ ಎಂಬದನ್ನು ಮಗುವಿನ ಲಕ್ಷ್ಯಕ್ಕೆ ತರುವಂತೆ ಅದನ್ನು ಕೊಡಬೇಕಾಗಿರುವುದು ಆರೋಗ್ಯದಲ್ಲಿರುವ ಮಕ್ಕಳಿಗೆ ಒಂದು ಊಟ ಬಿಟ್ಟದ್ದರಿಂದ ಆರೋಗ್ಯ ಕೆಡುವುದೆಂಬದು ತಪ್ಪು ಗ್ರಹಿಕೆ ಅನೇಕ ಸರ್ತಿ ಮಕ್ಕಳು ಹೀಗೆ ಊಟ ಬಿಟ್ಟಲ್ಲಿ ಇನ್ನಷ್ಟು ಆರೋಗ್ಯಹಿತರಾಗುವರು

* * * * * * * * * * * * * * *

ಮಕ್ಕಳು ತಪ್ಪಿ ನಡದ್ದಲ್ಲಿ ಅಂಥಾ ನಡತೆಯಿಂದ ಉಂಟಾಗಬಹುದಾದ ಅನಾನುಕೂಲತೆಗಳನ್ನು ಅವುಗಳು ಅನುಭವಿಸುವಂತೆ ಮಾಡುವುದು ಯಾವಾಗಲೂ ತಕ್ಕದಾದ ಉಪಾಯ ಉದಾಹರಣೆಯಾಗಿ ಇನ್ನು ಒಂದೆರಡು ದೃಷ್ಟಾಂತಗಳನ್ನು ಕೊಡುವೆವು ಒಳ್ಳೇ ಶುಚಿಯಾದ ಒಸ್ತ್ರಗಳನ್ನು ತೊಡಿಸಿದ ಅರ್ಧತಾಸಿನಲ್ಲಿಯೇ ಮಗುವು ಅದನ್ನೆಲ್ಲಾ

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು

ನಮ್ಮ 'ಮೆಕ್ಸಿಮ್' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦ ೦ ೦
ಬೆಳ್ಳಿ ಕೇಸಿನಲ್ಲಿ ರೂ ೧೪ ೮ ೦
ನಮ್ಮ 'ನ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ ೧೪ ೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ ೧೬ ೦ ೦
ಬೆಳ್ಳಿ ಕೇಸಿನಲ್ಲಿ ರೂ. ೨೧ ೦-೦
ನಮ್ಮ 'ವರ್ದಲಿ.' ನಿಕಲ್ ಕೇಸಿನಲ್ಲಿ ರೂ. ೧೮-೦-೦
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೩೦-೦-೦
ಬೆಳ್ಳಿ ಕೇಸಿನಲ್ಲಿ ರೂ. ೩೭-೦-೦

ಎಲ್ಲಾ ಗಡಿಯಾರುಗಳು ... [illegible]

ಮರೀನ ಪ್ಪಾಡಿಕೊಂಡ್ಡು ಹರಿದು ಹಾಕುವದೂ ಸಹಾ ಉಂಟು. ಈ ತಪ್ಪಿಗೆ ಮಕ್ಕಳಿಗೆ ಯಾವ ಶಿಕ್ಷೆಯನ್ನು ಕೊಡಬಹುದು?

ಮಗುವನ್ನು ಸಿಟ್ಟಿನಿಂದ ಈ ಬಗ್ಗೆ ಹೊಡಿಯುವದು ಎಂದಿಗೂ ಕೂಡದು. ಈ ಬಗ್ಗೆ ಅದನ್ನು ಉಪವಾಸ ಹಾಕಲೂ ಕೂಡದು ಯಾಕಂದರೆ ತೊಡಿಗೆಗಳನ್ನು ಹಾಳು ಮಾಡಿದ ತಪ್ಪಿನ ನೈಸರ್ಗಿಕ ಫಲವು ಪೆಟ್ಟುಗಳೂ ಅಲ್ಲ, ಉಪವಾಸವೂ ಅಲ್ಲ ಆ ತೊಡಿಗೆಯ ಉಪಯೋಗದಿಂದಲೇ ಎಷ್ಟು ಸಮಯದಲ್ಲಿ ಅದು ಮಲೀನವಾಗುತ್ತಿತ್ತೋ ಅಷ್ಟರ ತನಕ ಅದಕ್ಕೆ ಬಟ್ಟೆಗಳನ್ನು ತೊಡಿಸಲು ಕೂಡದು ಆಗ್ಯೆ ಮನೆಯ ಇತರರೆಲ್ಲರೂ ತೊಡಿಗೆಗಳನ್ನು ಹಾಕಿಕೊಂಡಿರುತ್ತಾ ಅದಕ್ಕೆ ಬಟ್ಟೆಗಳಿಲ್ಲದೆ ಮನೆಯ ಹೊರಗೆ ಬರಲಿಕ್ಕೆ ನಾಚಿಕೆಯಾಗುವದು ಅವರೆ ಈ ಸಂದರ್ಭದಲ್ಲಿ ಮನೆಯವರೆಲ್ಲರೂ ತಕ್ಕದಾದ ರೀತಿಗಳಲ್ಲಿ ನಿರ್ಮಲ ವಸ್ತ್ರಗಳನ್ನು ಹಾಕಿಕೊಳ್ಳುವ ಅಭ್ಯಾಸವಿದ್ದವರೋ ಎಂಬದನ್ನು ನಾವು ಲಕ್ಷ್ಯಕ್ಕೆ ತರಬೇಕಾಗಿರುವದು

ಮಗುವು ಅದರಿಕ್ಕೆ ಕೊಟ್ಟ ನಾವ [illegible] ಕಳಕೊಂಡರೆ ಮಗುವಿನ ಮೇಲಿನ ಪ್ರೀತಿಯಿಂದ ಅಂಥಾ ಸಾಮಗ್ರಿಯನ್ನು ತಿರಿಗಿ ತಂದುಕೊಡುವದು ಉಚಿತವೋ ಅಥವಾ ಈ ಸಾಮಗ್ರಿಯನ್ನು ಎಸೆದ ಸಂದರ್ಭಕ್ಕೆ ಅದನ್ನು ಮನಸ್ಸು ಬಂದ ರೀತಿ ಹೊಡಿಯುವದೋ? ಈ ಎರಡು ವಿಧಾನಗಳೂ ಯುಕ್ತವಲ್ಲ ಕಳೆದು ಹೋದದ್ದು ಸಿಕ್ಕುವ ವರೇಗ ಅದಕ್ಕೆ ಕಳೆದು ಹೋದದ್ದರ ಬದಲಾಗಿ ಆಡುವ ಯಾವ ವಸ್ತುವನ್ನಾದರೂ ತಂದು ಕೊಡಕ್ಕೆ ಕೂಡದು ಮಗುವೇ ಅಂಥಾ ವಸ್ತುವನ್ನು ಹುಡುಕಿ ತೆಗಿಯುವಂತೆ ಮಾಡಬೇಕು

ಅಯುಕ್ತ ವಚನಗಳನ್ನಾಡಿದರೆ ಮಗುವನ್ನು ತಿದ್ದಲು ಉಪಾಯವೇನು? ಈ ಅಯುಕ್ತ ವಚನಗಳನ್ನು ಅದು ಯಾರಿಂದ ಕಲಿತಿರುವದೆಂಬದನ್ನು ಅರಿತುಕೊಳ್ಳಬೇಕು ಒಂದೊಂದು ಸಲ ಮಗುವನ್ನೇ ಈ ವಿಷಯ ವಿಚಾರಿಸಿದರೆ ಅದೇ ಯಾರಿಂದ ಕಲಿತಿರುವದೆಂಬದಾಗಿ ಹೇಳುವದು ಕೆಲವರಿಂದಾಗಲೀ ಅಥವಾ ಮನೆಯಲಿರುವ ಇತರ ಯಾರಿಂದಲಾದರೂ ಕೆಟ್ಟ ಮಾತುಗಳನ್ನಾಡಲಿಕ್ಕೆ ಕಲಿತಿರುವದೆಂಬದಾಗಿ ತಿಳಿದು ಬರುವದು ಅಥವಾ ಬೀದಿಗಳಲ್ಲಿ ಹೋಗುವವರ ಬಾಯಿಂದಲೂ ಇಂಥಾ ವಚನಗಳನ್ನು ಅದನ್ನು ಕೇಳಿ ಕಲಿತಿರಲೂ ಬಹುದು ಹ್ಯಾಗೂ ಕೆಟ್ಟ ಮಾತುಗಳು ಯಾವವು ಒಳ್ಳೇ ಮಾತುಗಳು ಯಾವವೆಂಬದನ್ನು ಮಕ್ಕಳಿಗೆ ಹೇಳಿಕೊಡುವದು ಕಷ್ಟಸಾಧ್ಯವಾದ್ದರಿಂದ ಕೆಟ್ಟ ಮಾತುಗಳನ್ನು ಮಕ್ಕಳು ಮುಂದೆ ಆಡದಿರುವದೇ ಒಳ್ಳೇದು ಪ್ರಥಮದಲ್ಲಿ ಬಾಲಕರು ದುರ್ನುಡಿಗಳನ್ನು ಆಡಿದರೂ ಅದಕ್ಕೆ ವಿಶೇಷ ಲಕ್ಷ್ಯಕೊಡುತ್ತೇವೆಂತ ತೋರಿಸಿಕೊಳ್ಳದೆ ಅವರು [illegible] ನಾವು ವರ್ತಿಸತಕ್ಕದ್ದು

ಹೀಗೆ ಮಕ್ಕಳ ತಪ್ಪನ್ನು ಒಂದೇರೀತಿಯಾಗಿಯೇ ಪರಿಹರಿಸಬಹುದು ಯಾವ ತಪ್ಪಿತವಾದರೂ ಅದು ಯಾವ ಸ್ವಭಾವದ್ದು ಆ ತಪ್ಪಿತವನ್ನು ಮಕ್ಕಳು ಮಾಡುವರೆ ಕಾರಣವೇನು? ಈ ಮೊದಲಾದ ವಿವರವನ್ನು ತಿಳಿಯಬೇಕು ತಪ್ಪಿತದ ನೈಸರ್ಗಿಕ ಫಲವೇನೆಂದು ತಿಳಕೊಂಡು ಈ ಫಲಾನುಭವದಿಂದಲೇ ಇಂಥಾ ತಪ್ಪಿತಗಳನ್ನು ಮಾಡದಂತೆ ಮಕ್ಕಳನ್ನು ತಿದ್ದಬೇಕಾಗಿರುತ್ತದೆ ಮಾತೆಯರಿಗೆ ಈ ಶಿಕ್ಷೆಯ ವಿಧಾನಗಳು ಬಹಳ ಕಠಿಣವಾದವುಗಳೆಂತ ತೋರಬಹುದು ತಮ್ಮ ಅಂತಃಕರಣದಲ್ಲಿ ಈ ವಿಧಾನಗಳಲ್ಲವೂ ಸಲ್ಪವೆಂತ ಭಾವಿಸಲೂ ಬಹುದು ಆದರೂ ಎಲ್ಲಾ ಪ್ರಕೃತಿಯು ಸ್ವಾಭಾವಿಕವಾದ ಕೆಲವು ನಿಯಮಗಳನ್ನನುಸರಿಸುವದರಿಂದ ಮಕ್ಕಳ ಶಿಕ್ಷೆ ಎಲ್ಲವೂ ಈ ನಿಯಮಗಳನ್ನು ಒಳಕೊಂಡಿರುವದು ಅತ್ಯಗತ್ಯ

ಯಾವಾಗಲೂ ನಮ್ಮ ಮಕ್ಕಳಿಗೆ ನಾವೇ ಒಳ್ಳೇ ಮಾದರಿಯಾಗುವ ರೀತಿಯಲ್ಲಿ ವರ್ತಿಸಿ ಮನೆವಾರ್ತೆ ಕೆಲಸವೆಲ್ಲವನ್ನೂ ನಿಯಮಪ್ರಕಾರ ನಡಿಸಿಕೊಂಡು ತಪ್ಪಿಲ್ಲದೆ ನಡಕೊಳ್ಳಬೇಕಾದ ರೀತಿಯನ್ನೂ ಅದರ ಪ್ರಯೋಜನವನ್ನೂ ಬಾಲಕರಿಗೆ ಉದಹರಿಸುವಾ ಪೆಟ್ಟುಗಳನ್ನು ಹೊಡಿಯುವದು, ಬೈಯ್ಯುವದು, ಗದರಿಸುವದು, ಬೇಸೆಯನ್ನುಂಟುಮಾಡುವ ಮಾತುಗಳನ್ನಾಡುವದು, ಹೀಯಾಳಿಸುವದು, ಈ ಯಾವ ವಿಧಾನಗಳಲ್ಲಿಯಾದರೂ ಬಾಲಕರನ್ನು ನೋಯಿಸಬಾರದು ಅವರನ್ನು ವಿಪರೀತ ಉಪದೇಶಿಸುವದಾಗಲೀ, ನಾವು ಎಂದೂ ತಪ್ಪುಮಾಡಿದವರಲ್ಲವೆಂತ ಅವರಮುಂದೆ ನಟಿಸುವದಾಗಲೀ, ನೀನೊಬ್ಬ ಕೆಟ್ಟ ಹುಡುಗ, ಯಾ ನೀನೊಬ್ಬಳು ಕೆಟ್ಟ ಹುಡುಗಿ, ಎಂತ ಅವರನ್ನು ಕರಿಯುವದಾಗಲೀ ಅನುಚಿತ ಮುಂದಕ್ಕೆ ನೀನು ಬರಿಯ ಕೆಟ್ಟವನಾಗುವಿ, ಅಥವಾ ಒಳ್ಳೆಯವನಾಗುವಿ ಎಂಬ ಭವಿಷ್ಯವನ್ನು ಹೇಳಿ ಧೈರ್ಯಕೆಡಿಸಲೂ, ಪ್ರೋತ್ಸಾಹಿಸಲೂ ಕೂಡದು. ಅವುಗಳ ಆಶೆ ಕೋರಿಕೆಗಳನ್ನು ತಿಳಿದುಕೊಂಡು ಅವುಗಳ ಕಡೆ ವಿಶೇಷ ಸಹಾನುಭೂತಿಯುಳ್ಳವರಾಗಬೇಕು ನಮಗೆ ಇಷ್ಟತೋರುವ ಕೆಲವು ನಿಯಮಗಳನ್ನು ಮಾಡಿ ಬಾಲಕರು ಈ ನಿಯಮಗಳಿಗೆ ಅನುಸಾರವಾಗಿ ನಡಿಯಬೇಕೆಂಬ ಕಟ್ಟಳೆಗೆ ಅವುಗಳು [illegible] ನಡಿಯುವಂತೆ ಅವರನ್ನು ನಿರ್ಬಂಧ[illegible]ಬಾರದು ಮಕ್ಕಳ ಶಿಕ್ಷಾ ವಿಷಯಗಳಲ್ಲಿ ನಾವು ಸಹಾ ಒಂದುಸಲ ನಮ್ಮ ಮಕ್ಕಳ[illegible] ಅಥವಾ [illegible] [illegible]

ಕಡೇಮಾತೇನಂದರೆ ಎಲ್ಲಾ ಪ್ರಕೃತಿಯ ನಿಯಾಮಕನು ದೇವರಾಗಿರುವನು. ಈ ನಿಯಮಗಳನ್ನನುಸರಿಸಿ ಸಾಧ್ಯವಿದ್ದಷ್ಟು ಮಟ್ಟಿಗೆ ವಿವೇಕದಿಂದ ಮಕ್ಕಳ ಶಿಕ್ಷೆಯನ್ನನುಗೊಳಿಸಿದ್ದಲ್ಲಿ ದೇವರಿಗೆ ವಿಧೇಯರಾಗಿ ನಡದಂತಾಗುವದು.

M. T.

ಸ್ವೇಚ್ಛಾ ವ್ಯಾಖ್ಯಾಮಿಯ ಟೀಕೆಗಳು.

ಸ್ವರಾಜ್ಯ ಪ್ರವರ್ತನೆ

ಈ ಶಿರನಾಮದಿಂದ ವಿದಿತವಾಗುವ ಸ್ವಾತಂತ್ರ್ಯವನ್ನು ಹಿಂದುಸ್ಥಾನದ ಜನರಿಗೆ ಪಾಲಿಸಲು ಕೃಪಾನಿಧಿಗಳಾಗಿದ್ದ ಕೀರ್ತಿಶೇಷ ರಿಪನಪ್ರಭುಗಳು ವ್ಯಕ್ತಪಡಿಸಿದ ಸೌಶೀಲ್ಯವು ಅವರ ಸಚ್ಚರಿತೆಯ ಮುಖ್ಯಾಂಗವಾಗಿ ಅವರ ಕಾರಭಾರಿನ ಕಾಲದಲ್ಲಿ ತಲೆದೋರಿತು ಈ ಪ್ರವೃತ್ತಿಗಳು ಭಾರತೀಯರ ಅಭಿವೃದ್ಧಿಗೆ ಕೊಟ್ಟ ತಾತ್ಪರ್ಯವು ಸಾಮಾನ್ಯವಾದ್ದಲ್ಲವೆಂದು ಸಮ್ಮೂಹ ಒಲ್ಲ ವಿಷಯವೇ ಡಿಸ್ಟ್ರಿಕ್ಟ್ ಬೋರ್ಡು, ಲೋಕಲ್ ಬೋರ್ಡು, ಮುನಿಸಿಪಲ್ ಬೋರ್ಡು ಎಂಬ ವಿಧಾನಗಳಿಂದ ಸ್ಥಾಪಿತವಾದ ಸಭೆಗಳು ಸ್ವರಾಜ್ಯ ಪ್ರವರ್ತನೆಯ ಮೂಲಾಂಕುರಗಳಾಗಿರುತ್ತವೆ ಇವುಗಳ ಪೌಷ್ಟವು ಆ ವಾವ ಸಭೆಯವರ ಕಾರ್ಯ ನಿರ್ವಾಹಕ ಶಕ್ತಿಯ ಮೇಲೆ ಪೂರ್ಣವಾಗಿ ಹೊಂದಿಕೊಂಡಿದೆ ಈ ವಿಶಿಷ್ಟ ಸಭೆಗಳನ್ನು ಅಲಂಕರಿಸುವ ಮುಂದಾಳುಗಳಲ್ಲಿ ಜನ ಸಮುದಾಯದಿಂದ ಆರಿಸಲ್ಪಟ್ಟವರೇ ಅವುಗಳ ಜೀವಾಳವೆನ್ನಬೇಕು ಇವರ ಪ್ರವರ್ತನೆಗಳು ಅನೇಯ ಸಿರ [illegible] ಕರ್ತೃಗಳಂತೆ [illegible] ಸರಕಾರದ ಕಡೆಯಿಂದ ಯೋಗ್ಯವಾದ ಗೃಹಸ್ಥರನ್ನೂ ಉದ್ಯೋಗಸ್ಥರನ್ನೂ ಮುಖಂಡರ ಸಂಖ್ಯೆಯಲ್ಲಿ ಸೇರಿಸಲಾಗುತ್ತದೆ. ಇವರಲ್ಲದ ಮೇಲೆ [illegible] ಡಿಸ್ಟ್ರಿಕ್ಟ್ ಬೋರ್ಡಿಗೆ ಜಿಲ್ಲಾ ಕಲ್ಲೆಕ್ಟರ್ ಸಾಹೇಬರೂ ತಾಲೂಕು ಬೋರ್ಡುಗಳಿಗೆ ಡಿವಿಜನಲ್ ಆಫೀಸರರೂ ಇದ್ದು ಸಭೆಗಳ ಪ್ರವರ್ತನೆಗಳು ಮೀರಿ ತಪ್ಪದಂತೆ ಜಾಗ್ರತೆಯನ್ನು ತೆಗೆದುಕೊಳ್ಳುವರು ಮುನಿಸಿಪಲ್ ಸಭೆಯಲ್ಲಿ ಜನರಿಂದ ಆರಿಸೋಣಾದ ಗೃಹಸ್ಥರೂ ಸರಕಾರದಿಂದ ನೇಮಕವಾದ ಗೃಹಸ್ಥರೂ ಹ್ಯಾಗೂ ಇರುವದರಕ್ಕಿಂತ ಹೆಚ್ಚಿನ ಶಕ್ತಿಯು ಅವರ ಅಧ್ಯಕ್ಷರನ್ನು ಅವರೇ ಆರಿಸುವಂತೆ ಅವರಿಗೆ ಪಾಲಿಸಿರುವ ಸ್ವಾತಂತ್ರ್ಯವಾಗಿರುತ್ತದೆ ಈ ಸಂಸ್ಥೆಗಳ [illegible]ಗಳನ್ನು ಪರ್ಯಾಲೋಚಿಸಿದರ ಪತ್ರ [illegible] ಸಮಯೋಚಿತವಾದದ್ದೆಂಬದು ವಿಶದವಾಗುತ್ತದ ಮತ್ತು ಈ ಸಕಲ ಸ್ವರಾಜ್ಯ ಪ್ರವರ್ತಕ ಸಭೆಗಳು ತಮ್ಮ ಪರ್ಮವನ್ನು ಸರಿಯಾಗಿ [illegible] ಪರಿಮಿತಿಯು ವಿಸ್ತರಿಸುವದೆಂದು ಯಾರೂ ನಿರೀಕ್ಷಿಸ [illegible] ಈ ಪ್ರಸಕ್ತಿಯಲ್ಲಿ ಅಂತರ್ಭೂತವಾಗಿರುವ ಚಿಕ್ಕದೊಂದು ಪರಿಗಣನೀಯವಾದ ಯೋಚನೆಯು ಇದೆ ಅದನ್ನು ಒತ್ತಿಟ್ಟು ಮುಂದಿನ ಪ್ರಸಂಗವನ್ನು ಎತ್ತುವದ ಯೋಗ್ಯವಲ್ಲ ಯುಕ್ತಿಯುಕ್ತ ಮುಪಾದೇಯಂ ವಚನಂ ಬಾಲಕಾದಪಿ ಎಂಬ ಮಾತನ್ನು ಈ ಭಾಗದಲ್ಲಿ ನೆನಪಿಗೆ ತರಬೇಕಾಗುವದು ನಮ್ಮ ಪ್ರತೀಕ್ಷೆಗಳು ನಮ್ಮ ಚರ್ಯಗಳ ಗೌರವಕ್ಕೆ ಅನುರೂಪವಾಗಿರಬೇಕು ಆಗ ನಮ್ಮಲ್ಲಿರುವ ಸದಿಚ್ಛೆಗಳ ಪ್ರಮಾಣವು ಪ್ರತ್ಯಕ್ಷವಾಗುವದರ ಮೂಲಕ ನಮ್ಮ ಆಶೆಗಳನ್ನು ಪೂರೈಸುವ ಅಧಿಕಾರವುಳ್ಳವರು ನಮ್ಮ ಯಶೋಭಿವೃದ್ಧಿಯ ಉಪಾಯಗಳನ್ನು ಸಂತೋಷಚಿತ್ತದಿಂದ ವರ್ತಿಸಲು ಎಡೆಯು ದೊರಕುವದು ಈ ಪ್ರಸ್ತಾಪವು ಇದೇ ಸಂಚಿಕೆಯಲ್ಲಿ ಕೊನೆಗಾಣಿಸುವಷ್ಟು ಸಣ್ಣದಲ್ಲವಾದುದರಿಂದ ಪ್ರಿಯ ಪತ್ರ ಸಂಪಾದಕರೇ, ತಮ್ಮ ಇಡೀ ಪತ್ರದಲ್ಲಿ ಒಂದೇ ಪ್ರಸಕ್ತಿಯ ಚರ್ಚೆಯನ್ನು ತುಂಬಿ ಬಿಟ್ಟರೆ ಚಂದಾದಾರರ ಆಗ್ರಹಕ್ಕೆ ತಾವು ಪಾತ್ರರಾಗಬೇಕಾಗುವದು ಕಾಲೋಚಿತವಾಗಿ ಕೊಂಚ ಕೊಂಚ ಪ್ರಾಸಂಗಿಕವಾದವನ್ನು ತೊಡಗುವದರಿಂದಲೇ ಸರ್ವರ ಮನಸ್ಸು ನಮ್ಮ ಕಡೆಗೆ ಆಕರ್ಷಿತವಾಗುವದು

ಪತ್ರವ್ಯವಹಾರ

ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

ಅಧ್ಯಾತ್ಮ ವಿಚಾರ

ಪತ್ರಿಕಾ ಕರ್ತರೇ,

ಕಳೆದ ತಿಂಗಳ ತಾ ೧೪ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಲ್ಪಟ್ಟ ತಮ್ಮ ಉಡುಪಿ ಬಾತ್ಮೀದಾರರ ಅನಂತೇಶ್ವರ ದೇವಸ್ಥಾನದಲ್ಲಿ ನಡದ ವೃತ್ತಾಂತವು ಯಾವ ಉದ್ದಿಶ್ಯಗಳಿಂದ ತಮ್ಮಲ್ಲಿಗೆ ತಮ್ಮ ಬಾತ್ಮೀದಾರರು ಕಳುಹಿಸಿಕೊಟ್ಟರೆಂಬದು ಸ್ಪಷ್ಟವಾಗಿ ತಿಳಿದು ಬರುವದಿಲ್ಲ. ಬಾತ್ಮೀಯಲ್ಲಿ ಯಾದರೋ ಮಂಗಳೂರು ಡಿ [illegible] ವಕೀಲರು ರಾ. ಹಳ್ಳೇರಿ ಕೃಷ್ಣರಾಯರು ರಚಿಸಿದ ಅಧ್ಯಾತ್ಮವಿಚಾರವೆಂಬ ಗ್ರಂಥದ ವಿಮರ್ಶೆಯ ಉದ್ದಿಶ್ಯ ಸಭೆ ಕೂಡಿತು ಎಂತ ಬರೆದಿರುವರು. [illegible]

ನಿಂದಾಪರವಾಗಿಯೂ ಇರುವ ಅನೇಕ ಮಾತುಗಳನ್ನೂ, ಗ್ರಂಥಕರ್ತರು ಮಾಧ್ವ ಭಾಷ್ಯಕ್ಕೆ ಕಲ್ಪಿಸಿರುವ [illegible]ಗಳನ್ನು ವಿದ್ವಾಂಸರಾದ ಸ| ಮ| ಸಂ| ಕರಂಬಳ್ಳಿ ಪದ್ಮನಾಭಾಚಾರ್ಯರು ಎಲ್ಲರಿಗೂ [illegible] ತಿಳಿಯುವಂತೆ ಓದಿ ಹೇಳಿ ಅವೆಲ್ಲವುಗಳನ್ನೂ ಅನೇಕ ಪ್ರಮಾಣಗಳಿಂದಲೂ ದೃಷ್ಟಾಂತಗಳಿಂದಲೂ, ಖಂಡಿಸಿದರು" ಎಂತ ಬರೆದಿರುವರು ತಮ್ಮ ಬಾತ್ಮೀದಾರರು ಸಭೆಯ ಉದ್ದೇಶ್ಯವೇ ಈ ಗ್ರಂಥದ ವಿಮರ್ಶೆ ಎಂತ ಬರೆದಿರುವಾಗ ಪದ್ಮನಾಭಾಚಾರ್ಯರು ಮಾಡಿದ ಗ್ರಂಥ ವಿಮರ್ಶೆಯನ್ನು ಲೋಪಿಸಿ ಅನೇಕ ಪ್ರಮಾಣಗಳಿಂದ ಖಂಡಿಸಿದರೆಂದು ಬರದರೆ ಗ್ರಂಥ ವಿಮರ್ಶೆಆಯಿತೇ? ಗ್ರಂಥ ಖಂಡನೆಯಾಗಿ ಪದ್ಮನಾಭಾಚಾರ್ಯರು ಪ್ರತ್ಯೇಕ ಒಂದು ಗ್ರಂಥ ಬರಿಯುವವೆಂತ ನಿರ್ಧರಿಸಿದರೆ ಇಂಥಾ ನಿರ್ಧಾರದಿಂದ ಅಧ್ಯಾತ್ಮ ವಿಚಾರದ ಯಾವ ವಿಮರ್ಶೆಯು ವ್ಯಕ್ತವಾಗುವುದು? ಸಭೆಯಲ್ಲಿ ಮಂಗಳೂರು ಗವರ್ನ್‌ಮೆಂಟ್ ಕೊಲೇಜಿನ ಪಂಡಿತವರ್ಯ ಸಾಬಾಜಿರಾಜಾಚಾರ್ಯರು ಹಾಜರಿದ್ದರೆಂತ ಅವರ ಮಾತುಗಳ ಅಭಿಪ್ರಾಯ ಮಾತ್ರ ಕೊಟ್ಟಿರುವುದು "ಗ್ರಂಥದಲ್ಲಿ ಮನುಷ್ಯನ ದೇಹಕ್ಕೆ ನಾಶವಿದ್ದಂತೆಯೇ ಜೀವಕ್ಕೂ ನಾಶವಿರುವದಾಗಿ ಮಾಧ್ವರ ಅಭಿಪ್ರಾಯವಿರುವದಾಗಿ ಇದ್ದಂತೆ ಇದೆ" ಎನ್ನುವರು ರಾಜಾಚಾರ್ಯರು ಗ್ರಂಥದ ಯಾವ ಭಾಗದಲ್ಲಿ ಈ ವಿಚಾರವಿರುವದೆಂತ ತೋರಿಸಿಕೊಟ್ಟು ಅಂಥಾ ವಚನಗಳ ಟೀಕೆಯು ಗ್ರಂಥ ಕರ್ತರದೋ ಅಥವಾ ಮಧ್ವಮತಸಿದ್ಧಾಂತಗಳನ್ನೇ ಅನುಸರಿಸಿದ ಯತಿವರ್ಯರದೋ ಎಂಬದನ್ನು ಸ್ವದೇಶಾಭಿಮಾನಿ ಪತ್ರ ಮುಖಾಂತರವೇ ವ್ಯಕ್ತಪಡಿಸಿದರೆ ಉಪಕಾರವಾಗುತ್ತಿತ್ತು ಇದನ್ನು ವ್ಯಕ್ತಪಡಿಸಿದ ನಂತರ ಗ್ರಂಥಕರ್ತರ ಪಾಂಡಿತ್ಯದ ವಿಷಯ ತಮ್ಮ ಅಮೂಲ್ಯ ಅಭಿಪ್ರಾಯವನ್ನು ಪ್ರಕಟಿಸಿದ್ದಲ್ಲಿ ಈ ಅಭಿಪ್ರಾಯವು ಸರ್ವಸಮ್ಮತವಾಗುತ್ತಿತ್ತು ಸರಕಾರಿ ಶಾಲೆಯಲ್ಲಿ ಸಂಸ್ಕೃತ ಪಂಡಿತರು, ತಮ್ಮ ಶಮದಮಾದಿಗುಣಗಳಿಂದಲೂ ಪಾಂಡಿತ್ಯ ಪೂರ್ಣತೆಯಿಂದಲೂ ತಮ್ಮ ಗುರು ಪದವಿಯನ್ನಲಂಕರಿಸುತ್ತಿದ್ದು ಎರಡೇ ಮಾತುಗಳಿಂದ ಅಧ್ಯಾತ್ಮವಿಚಾರದ ಟೀಕೆಯನ್ನು ಉತ್ತಾವಳಿಯಿಂದ ಮಾಡಿದರೆಂದರೆ ನಂಬಕೂಡದ ಸಂಗತಿ' ಬಾತ್ಮೀದಾರರು ಆಚಾರ್ಯರವರ ಟೀಕೆಯ ಅಭಿಪ್ರಾಯದಲ್ಲಿ ಬಹುತರ ಹೆಚ್ಚಿನಂಶವನ್ನು ಲೋಪಿಸಿರಬಹುದಾಗಿ ಕಾಣುತ್ತದೆ

"ನಾನು ಈ ಮೊದಲು ಇಂಥಾ ಸಂಸ್ಕೃತ ಗ್ರಂಥಗಳನ್ನು ಭಾಷಾಂತರ ಮಾಡಿದವನಲ್ಲ ಆದ್ದರಿಂದ ಈ ಕೆಲಸದಲ್ಲಿ ನಾನು ಕೇಳಿದ ಕಾಣಿಸಿದ ಪುಸ್ತಕಗಳ ಸಹಾಯವನ್ನು ಪಡೆದಿರುವದಾದರೂ, ಪ್ರಮಾದದಿಂದಾಗಲಿ, ತಪ್ಪು ತಿಳಿಕೆಯಿಂದಾಗಲೀ ಉಂಟಾದ ತಪ್ಪುಗಳು ಇರಬಹುದಾದ ಪ್ರಯುಕ್ತ, ಓದುವವರು ಅಂಥಾ ತಪ್ಪುಗಳನ್ನು ನನ್ನ ತಿಳುವಳಿಕೆಗೆ ತಂದರೆ ಇನ್ನೊಮ್ಮೆ ಈ ಪುಸ್ತಕವನ್ನು ಛಾಪಿಸುವ ಕಾಲದಲ್ಲಿ ಅವುಗಳನ್ನು ತಿದ್ದಲಿಕ್ಕೆ ಸಂತೋಷಪಡುತ್ತೇನೆ" ಈ ರೀತಿ ರಾ| ಹಳ್ಳಿಗೇರಿ ಕೃಷ್ಣರಾಯರು ತಮ್ಮ ಗ್ರಂಥದ ಉಪೋದ್ಘಾತದಲ್ಲಿಯೇ ವಿಜ್ಞಾಪಿಸಿಕೊಂಡಿರುತ್ತಾ ಪಂಡಿತ ರಾಜಾಚಾರ್ಯರ ಅಭಿಪ್ರಾಯವೆಂತ—"ಗುರುಗಳ ಮುಖೇನ ಶಾಸ್ತ್ರಭ್ಯಾಸ ಮಾಡದೆ ಕೆಲವು ಭಾಷ್ಯಗಳನ್ನೂ, ಇಂಗ್ಲಿಷ್ ಭಾಷಾಂತರಗಳನ್ನೂ ಇಟ್ಟುಕೊಂಡು ತಾವಾಗಿಯೇ ಶಾಸ್ತ್ರಭ್ಯಾಸ ಮಾಡಿದುದರ ಫಲವೇ ಈ ಆಚಾರ ಕಲ್ಪನೆಗೆ ಕಾರಣವಾಗಿಯೂ ಈ ತರದ ಅಭ್ಯಾಸವು ಅನರ್ಥಕ್ಕೆ ಕಾರಣವೆಂಬದಾಗಿಯೂ"—ಬಾತ್ಮೀದಾರರು ಬರೆದಿರುವರು ಪಂಡಿತರು ಈ ಮಾತುಗಳನ್ನು ಆಡಿದ್ದು ನಿಜವಾದ್ದಲ್ಲಿ ಪಂಡಿತವರ್ಯರ ಈ ಮಾತುಗಳು ಗ್ರಂಥದ ಟೀಕೆಯೋ ಅಥವಾ ಗ್ರಂಥಕರ್ತರ ನಿಂದೆಯೋ? ಆಚಾರ್ಯರು ತನ್ನ ವಿದ್ಯಾರ್ಥಿಗಳಿಗೆ ಟೀಕೆ ಮಾಡಲು ಕಲಿಸುವ ವಿಧಾನವು ಇದೋ? ಇಂಥಾ ಗುರುಗಳ ಮುಖೇನ ಶಾಸ್ತ್ರಾಭ್ಯಾಸ ಮಾಡುವುದು ಉಚಿತವೋ? ಅಥವಾ ಕೆಲವು ಭಾಷ್ಯಗಳನ್ನೂ, ಇಂಗ್ಲಿಷ್ ಭಾಷಾಂತರಗಳನ್ನೂ ಇಟ್ಟುಕೊಂಡು ತಾವಾಗಿಯೇ ಶಾಸ್ತ್ರಭ್ಯಾಸ ಮಾಡುವುದು ಉಚಿತವೋ? ವಾಚಕರೇ ತೀರ್ಮಾನಿಸಲಿ! ಪಂಡಿತನ್ಯಾರು? ಬರೇ ವಿದ್ಯವನ್ನು ಕಲಿತಿರುವವನೇ. ಅಥವಾ ವಿನಯಯುಕ್ತವಾದ ವಿದ್ಯಾಪೂರ್ಣನೇ? ಸಂಸ್ಕೃತ ಪಂಡಿತ ರಾಜಾಚಾರ್ಯರವರನ್ನು ನಾನು ಪೂರ್ಣ ಅರಿತಿರುವೆನು. ಅವರು ಸಭೆಯಲ್ಲಿ ಮಾಡಿದ ಭಾಷಣದ ಮುಖ್ಯ ಅಭಿಪ್ರಾಯವನ್ನು ಕೊಟ್ಟ ನಿಮ್ಮ ಬಾತ್ಮೀದಾರರು ತಮ್ಮ ಊಹನೆಯಿಂದಲೇ ಈ ಅಭಿಪ್ರಾಯವನ್ನು ಕೊಟ್ಟಿರುವರೆಂದು ಗ್ರಹಿಸುವೆನು ವಿನಹಾ ರಾ| ರಾಜಾಚಾರ್ಯರ ಭಾಷಣದ ಅಭಿಪ್ರಾಯವು ಈ ರೀತಿಯಾಗಿರುವುದೆಂಬದನ್ನು ನಾನೆಂದೂ ನಂಬೆನು.

ಪತ್ರಿಕಾ ಕರ್ತರೇ ಹಿಂದೂ ಸಮಾಜದ ಈಗಿನ ಅವ್ಯವಸ್ಥಿತ ಸ್ಥಿತಿಯನ್ನು ತಾವು ಅರಿತಿರುವಿರಿ. ಧರ್ಮಸಂಸ್ಥಾಪನೆ ಬಗ್ಗೆ ಸ್ಥಾಪಿಸಲ್ಪಟ್ಟ ಗುರು ಮಠಗಳೂ, ದೇವಸ್ಥಾನಗಳೂ, ಮೊದಲಾದವುಗಳು ಶಿಷ್ಯವರ್ಗಗಳಿಂದಲೂ ಭಜಕ ಮಹಾ ಜನಗಳಿಂದಲೂ ಸಂಗ್ರಹಿಸಲ್ಪಟ್ಟ ದ್ರವ್ಯವನ್ನು ಸಮಾಜೋನ್ನತಿ ಬಗ್ಗೆ ವಿನಿಯೋಗಿಸದೆ ತಮಗೆ ಇಷ್ಟವಿದ್ದಂತೆ ನಿಷ್ಪ್ರಯೋಜಕವಾದ ಕಾರ್ಯಗಳಿಗೋಸ್ಕರ ವ್ಯಯಮಾಡಿ ತಮ್ಮ ಕರ್ತವ್ಯಗಳನ್ನು ಮರೆತು ಬಿಟ್ಟು ಸಮಾಜಅಭಿವೃದ್ಧಿ ಸಾಧನೆಯಲ್ಲಿ ಪೂರ್ಣ ಅಭಾವವಿರುವವುಗಳು ಆಗಿರುತ್ತಾ, ರಾ| ಹಳ್ಳಿಗೇರಿ ಕೃಷ್ಣರಾಯರಂಥಾ ವೃದ್ಧ ಮಹನೀಯರು, ಬಹು ಕಾಲದ ತಮ್ಮ ಲೋಕಾನುಭವದೊಂದಿಗೆ ತಾವು ಓದಿದ ಶಾಸ್ತ್ರ ಗ್ರಂಥಗಳ ಅನುಭವವನ್ನು ಸರ್ವಜನ ಪ್ರಯೋಜನಾರ್ಥವಾಗಿ ಪುಸ್ತಕರೂಪಗೊಳಿಸಿ ಅದನ್ನು ಪ್ರಕಟಿಸಿದರೆ ಅನಂತೇಶ್ವರ ದೇವಸ್ಥಾನದಲ್ಲಿ ಮಹಾ ಜನರೆಲ್ಲರೂ ಸಭೆ ಕೂಡಿ ಶಾಪರೂಪವಾದ ಧಿಕ್ಕಾರವನ್ನೀಯುತ್ತಿರುವರು ಅಲ್ಲಿ ಕೂಡಿದ ಮಹಾ ಜನರಲ್ಲಿ ದಿನಂಪ್ರತಿಯೂ ಶ್ರೀಕೃಷ್ಣ ಮಠದಲ್ಲಿ ಆಗುವ ಸಹಸ್ರಭೋಜನಕ್ಕೆ ಸ್ವಆಮಂತ್ರಣದಿಂದ ಬರಮಾಡಲ್ಪಟ್ಟು ಮಠಾನ್ನವನ್ನೇ ಭುಂಜಿಸಿ, ತಮ್ಮ ಜೀವಮಾನಗಳಲ್ಲಿ ಯಾವ ಉದ್ದೇಶ್ಯವನ್ನೂ ಕಲ್ಪಿಸಿಕೊಂಡಿರದ ಪರಾನ್ನಪುಷ್ಟರೂ ನಿರಕ್ಷರಕುಕ್ಷಿಗಳೂ ಆದ ಬ್ರಾಹ್ಮಣರು ಎಷ್ಟು, ಕನ್ನಡದಿಂದ 'ಸಿರಿಕಾರ' ಮಾತ್ರ ಹಾಕಬಲ್ಲವರ ಸಂಖ್ಯೆ ಎಷ್ಟು, ಕನ್ನಡ ಭಾಷೆ ಅರಿತವರೆಷ್ಟು, ಸಂಸ್ಕೃತ ಪುಸ್ತಕಗಳನ್ನು ಓದಿದವರೆಷ್ಟು, ಕೃಷ್ಣರಾಯರವರ ಗ್ರಂಥಗಳನ್ನೋದಿದವರ್ಯಾರ್ಯಾರು, ಟೀಕೆ, ಮಾಡಿ ಸಭೆಯಲ್ಲಿ ಭಾಷಣ ಮಾಡಿದವರಲ್ಲಿ ಗ್ರಂಥವನ್ನು ಪೂರ್ಣವಾಗಿ ಓದಿದವರು ಎಷ್ಟು ಮಂದಿ ಈ ಸಂಖ್ಯೆಗಳನ್ನು ಸರಿಯಾಗಿ ನಿರ್ಣಯಿಸಲಿಕ್ಕೆ ಅಸಾಧ್ಯವಾಗಿದ್ದರೂ ತಮ್ಮ ಬಾತ್ಮಿದಾರರು ಸಂಖ್ಯೆಗಳ ಸಾಧಾರಣ ಅಂದಾಜುಗಳನ್ನು ಕೊಟ್ಟರೂ ಬಹಳ ಉಪಕಾರವಾಗುತ್ತಿತ್ತು ಮಹಾಸಭೆಕೂಡಿ ಅನಂತೇಶ್ವರ ದೇವಸ್ಥಾನದಲ್ಲಿ ಶಾಪಕೊಟ್ಟ ಈ ಸಭಾವೃತ್ತಾಂತವನ್ನು ಓದುತ್ತಿರುವಾಗ ಬೂತಾಳಪಾಂಡ್ಯಕಟ್ಟಿನಲ್ಲಿ ಓದಿದ ಒಂದು ವೃತ್ತಾಂತವು ನನ್ನ ನೆನವರಿಕೆಗೆ ಬಂದಿರುವುದು ಅದೇನಂದರೆ—"ಹದಿನಾರು ಕಟ್ಟಳೆ ಸಹಾ ಜಗತ್ತಿನ ನರಸಿಂಹ ದೇವರ ಮಧ್ಯಮಂಟಪದಲ್ಲಿ ಬರಸಿ, ಜಗತ್ತಿನ ಅನಂತೇಶ್ವರ ದೇವರ ಮಧ್ಯ ಮಂಟಪದಲ್ಲಿ ಸ್ಥಾಪನೆಯಂ ಮಾಡಿ, ಈ ಕಟ್ಟು, ಕಟ್ಟಳೆ ಮೀರಿ ನಡದವನ ಸಂತಾನ ನಿಸ್ಸಂತಾನವಾಗಿ ಹೋಗಲಿ ಎಂತಾ ಕಟ್ಟು ಕೈ ಹಿಡಿದು

* * * * * * * * * * * * * * *

ನಿಷ್ಪಕ್ಷಪಾತಿ

ವಿದೇಶ ವೃತ್ತಾಂತ

ಚೀನಾದೇಶದಿಂದ ಭರತಖಂಡಕ್ಕೆ ಕೃತ್ರಿಮದ ನಾಣ್ಯಗಳು ವಿಶೇಷವಾಗಿ ಚಲಾವಣೆ ಆಗ್ಯ ಬರುತ್ತಿರುವವಂತೆ

ಭರತಖಂಡಕ್ಕೆ ಅನ್ಯದೇಶಗಳಿಂದ ಬರುವ ಬಟ್ಟೆಗಳಲ್ಲಿ ೧೦೦ಕ್ಕೆ ೭ ಅಥವಾ ೭ ಭಾಗದಷ್ಟು ಉಣ್ಣೆಯ ಬಟ್ಟೆಗಳು ಬರುತ್ತವೆ. ಈಚೀಚೆಗೆ ಅವು ಜರ್ಮನಿಯಿಂದ ಬರುವುದು ಹೆಚ್ಚುತ್ತಿದೆ. ಕಳದ ವರ್ಷ ಇಂಗ್ಲಂಡಿನಿಂದ ೧೮೭೭೬೫೦೦ ರೂಪಾಯಿಗಳ ಬೆಲೆಯ ಉಣ್ಣೆಯ ಪದಾರ್ಥಗಳು ಬಂದುವು. ಅದರ ಹಿಂದಣವರ್ಷದಲ್ಲಿ ೧೯೩೪, ೭೦೦೦ ರೂ. ಬೆಲೆಯ ಪದಾರ್ಥಗಳು ಬಂದಿದ್ದವು. ಎಂದರೆ ಒಂದು ವರ್ಷದಲ್ಲಿಯೆ ೫೫೭೫೦೦ ರೂ. ನಷ್ಟು ಕಡಿಮೆಯಾದಂತಾಯಿತು. ಜರ್ಮನಿಯದಾದರೋ ಹೊನ್ನೆಯ ವರ್ಷದಲ್ಲಿ ೩೨೫೫೦೦ ರೂ. ನ ಬೆಲೆಯದು ಬಂದಿದ್ದಿತು. ಕಳೆದ ವರ್ಷದಲ್ಲಾದರೋ ೪೦೫೨೦೦೦ ರೂ. ಬೆಲೆಯಷ್ಟು ಬಂದಿರುತ್ತದೆ. ಉಣ್ಣೆಯ ಶಾಲುಗಳು ೧೦೦ಕ್ಕೆ [illegible] ರಷ್ಟು ಜರ್ಮನಿಯಿಂದಲೇ ಬರುತ್ತವೆ.

ಫ್ರಾನ್ಸ್ ದೇಶದಲ್ಲಿ ಸಂಭವಿಸಿದ ನೆರೆಯ ಸಂಕಷ್ಟಗಳನ್ನು ನಿವಾರಿಸುವರೆ ಸರ್ ಅರ್ನೆಸ್ಟ್ ಕೆಸ್ಸಲ್ ಎಂಬವರು ೪ ಸಾವಿರ ಪವನುಗಳನ್ನು ಕೊಟ್ಟಿರುವರು ಪಿ. ಮತ್ತು ಓ. ಸ್ಟೀಮರ್ ಕಂಪೆನಿಯವರು ೫೦೦ ಗಿನ್ನಿಗಳ ಸಹಾಯವನ್ನು ಮಾಡಿರುವರು

ಎಡ್ವರ್ಡ್ ಸಾರ್ವಭೌಮರ ಪ್ರಿವಿ ಕೌನ್ಸಿಲಿನ ಜಡ್ಜರಾಗಿ ನೇಮಕ ಪಟ್ಟ ಭಾರತೀಯ ಬಹುಮಾನ ಪಟ್ಟ ಅಮೀರ್ ಅಲಿಯವರ ಬಹುಮಾನಾರ್ಥವಾಗಿ ಇತ್ತಲಾಗೆ ಅಂಗ್ಲಾಂಡದಲ್ಲಿ ಔತಣವು ಕೊಡಲ್ಪಟ್ಟಿತು.

ಹೆಂಕೌ ಪಟ್ಟಣದಲ್ಲಿ ಚ್ಯಾನೀಸ್ ಯುನಿವರ್ಸಿಟಿ ಅಥವಾ ಸರ್ವ ವಿದ್ಯಾನಿಲಯವನ್ನು ಸ್ಥಾಪಿಸುವ ವಿಷಯವನ್ನು ಆಲೋಚಿಸುವರೆ ಆಕ್ಸ್ ಫರ್ಡಿನಲ್ಲಿಯೂ ಕೆಂಬ್ರಿಡ್ಜಿನಲ್ಲಿಯೂ ಸಭೆಗಳು ಕೂಡುತ್ತಿರುವವು. [illegible] ಸಾವಿರ ಪವನುಗಳು ಈ ಬಗ್ಗೆ [illegible]

ಉತ್ತರ ಹಿಂದುಸ್ಥಾನ.

ಬರೋಡಾ ಮಹಾರಾಜರವರು ಅಸ್ವಸ್ಥರಾದ ತಮ್ಮ ಪತ್ನಿಯವರಿಗೆ ಕಲಕತ್ತಾದಲ್ಲಿ ಪ್ರಸಿದ್ಧರಾದ ಹಕೀಂ (ವೈದ್ಯರು) ನಾಜಿನ್‌ಹುಸೇನ್‌ಖಾನ್ ಖಾನ್‌ಬಹದ್ದೂರ್‌ರವರಿಂದ ಔಷಧವನ್ನು ಕೊಡಿಸಲು ಇಷ್ಟರಲ್ಲೇ ಕಲಕತ್ತಾಕ್ಕೆ ಹೊರಡುವರು.

ವರ್ತಮಾನ ಪತ್ರಗಳನ್ನು ಮತ್ತು ಮುದ್ರಣಾಲಯಗಳನ್ನು ಅಟೋಪಿಸುವರೆ ಜ್ಯಾರಿಗೆ ಬರುವ ಶಾಸನವು ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ಸಲ್ಪಡುತ್ತಿರುವುದು. ಪ್ರಜಾನಾಯಕರೆಲ್ಲರೂ ಅನಾಯಕತ್ವವನ್ನು ಹೋಗಗೊಳಿಸುವರೆ ಶಾಸನವು ಅವಶ್ಯವಿರುವದೆಂತ ಒಪ್ಪಿದ್ದರೂ ಈ ಶಾಸನದಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿರುವರು. ಪಂಡಿತ ಮಾಲವಿಯಾರವರು ವರ್ತಮಾನ ಪತ್ರಿಕೆಗಳಿಗೆ ಎಂತ ಪ್ರತ್ಯೇಕ ಕಾನೂನನ್ನು [illegible]

ಚಿತ್ತಿಂಬದಾಗಿರುವ ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ಕೊಟ್ಟಿರುವರು.

ಗೈಕ್ವಾರರವರ ಮಂತ್ರಿ ಪದವಿಗೆ ಮಿ| ಬಿ. ಎಲ್. ಗುಪ್ತರವರು ನೇಮಕಪಡುವರೆಂಬ ವರ್ತಮಾನವಿರುವುದು. ಮಿ| ಸರೋದ ಚರಣರವರು ಅಲ್ಲಿ ಡಿಪ್ಯುಟಿ ದಿವಾನರಾಗಿರುವರು

ಲಾಹೋರಿನಲ್ಲಿ ಕೆಲವು ಯೂರೋಪಿಯ ಸೋಲ್ಜರರು ಕೂಡಿ ಅಲ್ಲಿಯ ನೇಟಿವ್ ಪಾಳ್ಯದ ಹಾಸರ ಕತ್ತೆಗಳನ್ನು ಹೊಡಕೊಂಡು ಹೋಗುವ ಒಬ್ಬ ಮಹಮ್ಮದೀಯನನ್ನು ಕೊಂದಿರುವರಂತೆ ಈ ಸೋಲ್ಜರರು ಮದ್ಯವನ್ನು ವಿಶೇಷವಾಗಿ ಕುಡಿದು ಅಮಲಿನಿಂದ ಹಾದಿಯಲ್ಲಿ ಬರುತ್ತಿರುವಾಗ ಒಂದು ಮಂಗನನ್ನು ಹಿಡಕೊಂಡು ಹೋಗುವವನನ್ನು ಕಂಡು ಆತನನ್ನು ಓಡಿಸಿಕೊಂಡು ಹೋಗುತ್ತಿದ್ದರು. ಮಂಗನನ್ನು ಹಿಡಿದು ಹೋಗುವವನು ತಪ್ಪಿಸಿ ಹೋದ್ದರಿಂದ ಅದೇ ಮಾರ್ಗವಾಗಿ ತಮ್ಮ ಎದುರಿನಲ್ಲಿ ಬರುತ್ತಿರುವ ಈ ಮಹಮ್ಮದೀಯನನ್ನು ಮಂಗವನ್ನು ಹಿಡಿದು ಹೋದವನೊಬ್ಬನನ್ನು ಕಂಡಿರುವಿಯಾ ಎಂದಾಗಿ ವಿಚಾರಿಸಿದರು. ಆತನು ತಾನರಿಯೆ ಎಂತ ಉತ್ತರ ವಿತ್ತಾಕ್ಷಣವೇ ಸೋಲ್ಜರರು ಈತನನ್ನು ನೆಲಕ್ಕೆ ಕೆಡವಿ ಆತನು ಪ್ರಾಣಬಿಡುವ ತನಕ ತಮ್ಮ ಬೂಟೀಸುಗಳ ಕಾಲುಗಳಿಂದ ತಲೆ ಮುಖವನ್ನೆಲ್ಲಾ ತುಳಿದರಂತೆ ಮಿಲಿಟರಿ ಪೋಲೀಸಿನವರು ಈ ಸೋಲ್ಜರುಗಳ ನಂಬರು ಹೆಸರು ಮೊದಲಾದವುಗಳನ್ನು ಬರೆದು ತಕ್ಕೊಂಡಿರುವರಂತೆ

ವರ್ತಮಾನಪತ್ರಗಳ ಶಾಸನವು ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರು ಮಾಡಲ್ಪಟ್ಟಿತು

ಲಾಹೋರು ವಸ್ತುಪ್ರದರ್ಶನವು ಈ ತಿಂಗಳ ತಾ ೭ಕ್ಕೆ ಮುಗಿಯಿತು ವಸ್ತುಪ್ರದರ್ಶನವನ್ನು ಏರ್ಪಡಿಸಿದ ಕಮಿಟಿಯವರಿಗೆ ಪ್ರದರ್ಶನದಿಂದ ಖರ್ಚು ಕಳೆದು ೬೦,೦೦೦ ರೂಪಾಯಿ ಉಳಿದಿರುವುದು. ಗವರ್ನಮೆಂಟಿನವರು ವಸ್ತು ಪ್ರದರ್ಶನದ ಖರ್ಚಿಗಾಗಿ ಕೊಟ್ಟ ಮುಂಗಡ ಹಣ ಸಂದಾಯದ ಬಗ್ಗೆ ಈ ಹಣವನ್ನು ಕೊಡುವರಾಗಿ ಕೇಳುತ್ತೇವೆ

ಯುರೋಪಿಗೆ ವಿದ್ಯಾಭ್ಯಾಸದ ಬಗ್ಗೆ ಕಳುಹಿಸಿದ ಪುತ್ರನ ಶಾಹಿಲೆ ನಿಮಿತ್ಯ ಲಾಲಾಲಾಜಪತರೈಗಳವರು ಬರುವ ವಾರದಲ್ಲಿ ವಿಲಾಯತಿಗೆ ತೆರಳುವರಂತೆ

ಲಾಹೋರಿನಲ್ಲಿ ಪ್ರಕಟವಾಗುತ್ತಲಿದ್ದ ಪಂಜಾಬಿ ಎಂಬ ಆಂಗ್ಲ ಪತ್ರದ ಮೂಲಿಕತ್ವವನ್ನು ಲಾಲಾಜಪತರೈಗಳವರಿಂದ ಲಾಹೋರಿನ ಪ್ರಜಾ ನಾಯಕರಲ್ಲಿ ಕೆಲವರು ಕೊಂಡುಕೊಂಡಿರುವರು.

ಫರಿದಪುರದಲ್ಲಿಯ ಈ ವರುಷದ ಜಿಲ್ಲಾ ಕೊನ್ಫರೆನ್ಸು ಸಭೆಯು ಇದೇ ಮಾರ್ಚಿ ತಿಂಗಳ ೯ ಮತ್ತು ೧೦ನೇ ತಾರೀಕುಗಳಲ್ಲಿ ಪಾಂಗಷಾ ಎಂಬಲ್ಲಿ ಜರಗುವದು. ಸಿಟಿ ಕೊಲೇಜಿನ ಹಿರಂಬಾಚಂದ್ರ ಮಿತ್ರರವರು ಸಭಾಧ್ಯಕ್ಷರಾಗುವರು. ಸುರೇಂದ್ರನಾಥ ಬೆನರ್ಜಿ, ಗೋಖಲೆ, ಚೌದುರಿ ಮೊದಲಾದ ಪ್ರಜಾನಾಯಕರನ್ನು ಈ ಸಭೆಗೆ ಆಮಂತ್ರಿಸಿರುವರು.

ಮುಂಬಯಿ ಹೈ ಕೋರ್ಟ್ ಜಡ್ಜರಾದ ಬಹುಮಾನಪಟ್ಟ ಮಿ| ರಸ್ಸೆಲರವರು ರಜಾ ತಕ್ಕೊಂಡಿರುವುದರಿಂದ ಇವರ ಬದಲಿಗೆ ಬ್ಯಾರಿಸ್ಟರ್ ಮಿ| ಎನ್. [illegible] ಎಂಬವರು ಈ ಆಕ್ಟಿಂಗ್ ಜಡ್ಜಿಗೆ ನೇಮಿಸಿರುವರು.

[illegible]

ಮುಂಬಯಿ ಯುನಿವರ್ಸಿಟಿಯ ಸೆನೇಟ್ ಸಭೆಯಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ತೆಗೆದುಹಾಕಬೇಕಾದ್ದಾಗಿ ನಿರ್ಣಯಿಸಲಾಯಿತು.

ಟ್ರಾನ್ಸವಾಲ ಭಾರತೀಯರ ಪರವಾಗಿ ಲಾಹೋರಿನಲ್ಲಿ ಒಂದು ಮಹಾ ಸಭೆಯು ಜರಗುವುದು.

ಲಾಹೋರಿನ ಒಬ್ಬ ಸರಕಾರಿ ಉದ್ಯೋಗಸ್ಥರು ದೇಶದಲ್ಲಿ ರಾಜದ್ರೋಹವನ್ನು ನಿವಾರಿಸಲಿಕ್ಕೆ ಒಂದು ಉಪಾಯವನ್ನು ಸೂಚಿಸಿರುವರು. ಸರಕಾರಿ ಆಫೀಸರರು ಕೂಡಿ ಒಂದು ಸಂಘವನ್ನು ಏರ್ಪಡಿಸಿ ರಾಜದ್ರೋಹಪರವಾದ ಅನಾಯಕತ್ವವನ್ನು ಪ್ರತಿಪಾದಿಸುವವರ ಸಿದ್ಧಾಂತಗಳು ದೇಶದಲ್ಲೆಲ್ಲಿಯೂ ಹರಡದಂತೆ ಜಾಗ್ರತೆಯನ್ನು ತಕೊಳ್ಳುವಂತೆ ತಕ್ಕ ಏರ್ಪಾಡನ್ನು ಮಾಡಬೇಕೆಂಬದೇ ಇವರ ಸೂಚನೆಯಾಗಿರುವುದು

ವೈಸರಾಯ ಪ್ರಭುಗಳು ನ್ಯಾಯನಿರ್ಮಾಣ ಸಭೆಯಲ್ಲಿ ವರ್ತಮಾನಪತ್ರ ಮತ್ತು ಮುದ್ರಣಾಲಯಗಳ ಶಾಸನವು ಸಭಿಕರಿಂದ ಅಂಗೀಕರಿಸಲ್ಪಟ್ಟ ನಂತರ ತಮ್ಮ ಭಾಷಣದಲ್ಲಿ [illegible] ಮಾಡಲ್ಪಟ್ಟ ಪ್ರಜಾನಾಯಕರ [illegible] ವಿಮೋಚನೆಯನ್ನು [illegible] ವರೆ ಇಂಡಿಯಾ ಸರಕಾರದವರು ನಿರ್ಣಯಿಸಿರುವರೆಂತ ಅಪ್ಪಣೆ ಕೊಟ್ಟಿರುವರು

'ಇಂಗ್ಲಿಷಮನ್' ಎಂಬ ಕಲ್ಕತ್ತೆಯ ಆಂಗ್ಲೇಯ ವರ್ತಮಾನಪತ್ರದ ಮೇಲೆ ಲಾಲಾ ಲಾಜಪತರೈಯವರು ಹಾಕಿದ ಮಾನನಷ್ಟದ ಡಿಕ್ರಿಯ ಅಪೀಲು ಕಲ್ಕತ್ತೆಯ ಹೈಕೋರ್ಟಿನಲ್ಲಿ ನಡೆಯುತ್ತಿರುವುದು ಇಂಗ್ಲಿಷಮನ್ ಪತ್ರದ ಕಡೆಯಿಂದ [illegible] ವ್ಯವಹರಿಸುತ್ತಿರುವರು

ದಕ್ಷಿಣ ಹಿಂದುಸ್ಥಾನ.

ನಮ್ಮ ಚಿಲ್ಲೆಯಿಂದ ಮದ್ರಾಸು ಗವರ್ನರ ದೊರೆಗಳವರ ನ್ಯಾಯ ನಿರ್ಮಾಣ ಸಭೆಗೆ ನೇಮಿಸಲ್ಪಟ್ಟ ಬಹುಮಾನಪಟ್ಟ ಪಿ. ಎಸ್. [illegible] ಸಾಲ್ಡಾನಾರವರ ಬಹುಮಾನಾರ್ಥವಾಗಿ ಇಂಡೀ ಸಂಸ್ಥಾನದ ರೋಮನ ಕೆಥೋಲಿಕರ ಪರವಾಗಿ ಮದ್ರಾಸಿನಲ್ಲಿ ಒಂದು ಸಭೆ ಕೂಡಿತು ಈ ಸಭೆಯ ಅಧ್ಯಕ್ಷರು [illegible]ಬಿಷೋಪರವರಾಗಿದ್ದರು ಸಭೆಯಲ್ಲಿ ಅನೇಕ ವಂದನೋಕ್ತಿಗಳಿಂದ ಸಭೆಗೆ ದಯಮಾಡಿ ಬಂದ ಮಿ| ಸಾಲ್ಡಾನರವರನ್ನು ಸತ್ಕರಿಸಿದ್ದಲ್ಲದೆ ರೋಮನ್ ಕೆಥೋಲಿಕ್ ಕ್ರೈಸ್ತ ಸಮಾಜಕ್ಕೆ ಕೊಟ್ಟ ಈ ಬಹುಮಾನ ಕ್ಕೋಸ್ಕರ ಗವರ್ನರ ದೊರೆಗಳವರ ಉಪಕಾರಸ್ಮರಣೆಯನ್ನು ಸರ್ವರೂ ಮಾಡಿದರು ಮಿ| ಸಾಲ್ಡಾನರವರು ಯುಕ್ತವಾದ ವಚನಗಳಿಂದ ಸಭಿಕರನ್ನು ವಂದಿಸಿದರು.

ದಕ್ಷಿಣ ಕನ್ನಡ.

ನೋಟೀಸು.

ಬಸ್ತಿ ಸಾಂತಯ್ಯ ಕೇಶವ ಶೆಣಯಿ ಕುಳೂರ ಅಣ್ಣಪ್ಪ ವಿಟ್ಠಳ ನ್ಯಾಕ ಕಂಪೆನಿಯವರ ಕಡೆಯಿಂದ ಪ್ರಕೃತ ಈ ಕಂಪೆನಿಯ ಪೂರ್ಣ ಮಾಲಿಕರಾದ ಕುಳೂರು ಅಣ್ಣಪ್ಪ ವಿಟ್ಠಳ ನ್ಯಾಕರವರು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ಈ ತನಕ ಸದರಿ ಕಂಪೆನಿಯ ಪಾಲುಗಾರರಾಗಿದ್ದ ರಾ| ಬಸ್ತಿ ಸಾಂತಯ್ಯ ಕೇಶವ ಶೆಣಯ ಇವರಿಂದ ಬರಿಸಿಕೊಳ್ಳತಕ್ಕಾದ ರಿಲೀಜ ಪತ್ರದ ಮೇರೆಗೆ ಸದರಿ ಸಾಂತಯ್ಯ ಕೇಶವ ಶೆಣಯಿಯವರಿಗೆ ಈ ಕಂಪೆನಿಯಲ್ಲಿರುವ [illegible] ಯಾವತ್ತು ವ್ಯಾಪಾರ ವೈವಾಟಗಳನ್ನು ನಡಿಸುವರೆಯಾಗಲೀ ಕಂಪೆನಿಗೆ ಬರತಕ್ಕ [illegible] ಮೊದಲಾದವುಗಳನ್ನು ವಸೂಲು ಮಾಡುವರೆಯಾಗಲಿ [illegible] ಈ ಕಂಪೆನಿಯ ಪರವಾದ ಯಾವತ್ತು ಕೆಲಸಗಳನ್ನು ನಡಿಸುವರ್ಕೆ ಸದ್ರಿ ಬಸ್ತಿ ಸಾಂತಯ್ಯ ಶೆಣಯಿಯವರು ಅರ್ಹರಲ್ಲ. ಸದರಿ ಶೆಣಯಿಯವರು ನಡಿಸಬಹುದಾದ ವ್ಯಾಪಾರ ವೈವಾಟಗಳಿಗೂ ಸಾಲ ಮೂಲಗಳಿಗೂ ಈ ಕೆಳಗೆ ದಸ್ಕತು ಮಾಡಿದವರು ಜವಾಬ್ದಾರರಲ್ಲ.

ತಾ ೧೦-೨-೦೯ ರುಜು ಕುಳೂರು ಅಣ್ಣಪ್ಪ ವಿಟ್ಠಳ ನ್ಯಾಕ.

ಆಂಗ್ಲಭಾಷಾಪ್ರವೇಶದಾಯಿನಿ.

ಎಂಬ ತಾನಾಗಿಯೇ ಇಂಗ್ಲೀಷನ್ನು ಕಲಿಯುವ (The self English study Vol I. ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ವಾಲ್ಯುಂ ೧) ಮೊದಲನೆಯ ಪುಸ್ತಕ ಮೂರನೆಯ ಮುದ್ರಣ ಬೋಧಕರ ಸಹಾಯವಿಲ್ಲದೆ ಕನ್ನಡಿಗರಿಗೆ ಇಂಗ್ಲೀಷ್ ಭಾಷೆಯ ಓದುಬರಹ ಮಾತಾಡುವುದನ್ನು ಸುಲಭವಾಗಿ ತಿಳಿಸುವ ಸಹಕಾರಿ ಕ್ರಯ ಒಂದು ರೂಪಾಯಿ ಅಂಚೆ

ಭಾರತಿ ಕಂಪೆನಿರೂಮ್,
ಪೋಸ್ಟು ಮೊಗಲ್ಪೇಟೆ [illegible], ಬೆಂಗಳೂರು
ಈ ವಿಳಾಸಕ್ಕೆ ಬರೆಯುವದು

ಮಂಗಳೂರು [illegible] ಪಾಲಿಟಿಯಲ್ಲಿ ೬ ಪ್ಲೇಗುಮರಣಗಳೂ ೨೭ ಸಿಡುಬು ರೋಗದ ಮರಣಗಳೂ ಇದ್ದವು

ಪಜೂರು ಕಚೇರಿಯ ಹೆಡ್ ಎಕೌಂಟರಾದ ಮ| ರಾ| ರಾ| ಪಿ| ಮಂಗೇಶರಾಯರಿಗೆ ೬ ತಿಂಗಳ ರಜೆಯು ಸಂಕ್ಷನ್ ಆಗಿರುವುದರಿಂದ ಇವರ ಕೆಲಸಕ್ಕೆ ಮದ್ರಾಸಿನಿಂದ ಮ| ರಾ| ರಾ| ರಾಜ ಗೋಪಾಲ ಚಾರ್ಯ ಬಿ| ಎ| ಇವರು ನೇಮಕ ಪಟ್ಟಿರುವರು

ಕಲೈಕರ್ ಧೊರೆಗಳವರು ಮೂಡಬಿದ್ರೆ ಮೊಕ್ಕಾಂನಿಂದ ನಿನ್ನೆ ದಿವಸ ಇಲ್ಲಿಗೆ ತಲ್ಪಿರುವರು

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯನ್ನು ಕಳೆದ ತಾ ೪ರಲ್ಲು ಯುರೋಪಿಯನ್ ಮತ್ತು ಟ್ರೈನಿಂಗ್ ಶಾಲೆಗಳ ಆಕ್ಟಿಂಗ್ ಇನ್ಸ್‌ಪೆಕ್ಟರರಾದ ಮಿಸ್ತರ್ ಎಚ್| ಎಸ್| ಡನ್ಕನ್ ಧೊರೆಗಳು ಸಂದರ್ಶಿಸಿದರು

ಸದರಿ ಶಾಲೆಯ ಕಾಯಂ ೧ನೇ ಅಸಿಸ್ಟಾಂಟ್ ಉಪಾಧ್ಯಾಯರಾದ ರಾ| ಕೆ| ವೆಂಕಟ್ರಾಯರವರು ಎಲ್| ಟಿ| ಪರೀಕ್ಷೆಯ 'ಥಿಯೋರಿಯಲ್ಲಿ' ತೇರ್ಗಡೆ ಪಟ್ಟು ಪ್ರೆಕ್ಟಿಕಲ್ ಪರೀಕ್ಷೆಯ ಬಗ್ಗೆ ೫ ದಿವಸಗಳ ಕೆಜ್ಯುಯಲ್ ರಜೆಯ ಮೇಲೆ ಮದ್ರಾಸಿಗೆ ತೆರಳಿರುವರು

ಇವರ ಕೆಲಸವನ್ನು ಸದರಿ ಶಾಲೆಗೆ ಸಮ್ಮಂದ ಪಟ್ಟ ಮೊಡೆಲ್ ಶಾಲೆಯ ಹೆಡ್ ಮಾಸ್ತರರೂ, ಇವರ ಬದಲಿಯನ್ನು ಮೊಡೆಲ್ ಶಾಲೆಯ ೧ನೇ ಅಸಿಸ್ಟಾಂಟರೂ ಇವರ ಕೆಲಸವನ್ನು ೩ನೇ ಅಸಿಸ್ಟಾಂಟರೂ ೩ನೇ ಅಸಿಸ್ಟಾಂಟರ ಬದಲಿಯನ್ನು ೪ನೇ ಅಸಿಸ್ಟಾಂಟರೂ ನೋಡುವರು.

ಮೆಸ್ಸರ್ಸ್ ಪಟವರ್ಧನ ಬ್ರದರ್ಸರವರ ಸರ್ಕಸು ನಿನ್ನೆ ದಿವಸ ಇಲ್ಲಿಂದ ಕಣ್ಣಾನೂರಿಗೆ ತೆರಳಿರುವದು.

ಪ್ರೊಫೆಸರ್ ದೇವಲರವರ ಸರ್ಕಸು ಸದ್ಯದಲ್ಲಿಯೇ ಇಲ್ಲಿಗೆ ತಲಪುವದು.

ಈ ತಿಂಗಳ ತಾ ೧೯ರಲ್ಲಿ [illegible] ವರ್ಗದಾರರ ಸಂಘದ ವಾರ್ಷಿಕ ಮಹಾ ಸಭೆಯ ಅಧ್ಯಕ್ಷರಾದ ಬಹುಮಾನಪಟ್ಟ [illegible]

[illegible]

[illegible]ರಲ್ಲಿ [illegible] ಜನರೂ, ಸ್ಯೆಂಟ್ ಅಲೂಸಿಯುಸ್ ಕೊಲೇಜಿನಲ್ಲಿ [illegible] ಮಂದಿಯಲ್ಲಿ ೭ ಮಂದಿಯೂ ಕೆನರಾ ಹ್ಯಾಸ್ಕೂಲಿನಲ್ಲಿ [illegible]ರಲ್ಲಿ ೧೨ ಜನರೂ, ಮಂಗಳೂರು ಮಿಶನ್ ಹ್ಯಾಸ್ಕೂಲಿನಲ್ಲಿ ೧೮ರಲ್ಲಿ ೩ ಜನರೂ, ಉಡುಪಿ ಮಿಶನ್ ಹ್ಯಾಸ್ಕೂಲಿನಲ್ಲಿ ೧೧ರಲ್ಲಿ ಒಬ್ಬನೂ, ಕುಂದಾಪುರ ಹ್ಯಾಸ್ಕೂಲಿನಲ್ಲಿ ೨೬ರಲ್ಲಿ ೩ ಮಂದಿಯೂ ಮಂಗಳೂರು ಸ್ಯೆಂಟ್ ಏನ್ಸ್ ಹ್ಯಾಸ್ಕೂಲಿನಲ್ಲಿ ೧೫ ಜನ ಬಾಲಿಕೆಯರಲ್ಲಿ ಒಬ್ಬಳೂ, ಈ ರೀತಿ ಉತ್ತೀರ್ಣರಾಗಿರುವರು ಇದೇ ಜಿಲ್ಲೆಯ ಪೈಕಿ ಕೆನರಾ ಹ್ಯಾಸ್ಕೂಲಿನಲ್ಲಿ ಒಬ್ಬನೇ ಒಂದನೇ ತರಗತಿಯಲ್ಲಿ ಪಾಸಾದವನಿರುವನು

ಕಾಸರಗೋಡು ನಮ್ಮ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಈಚೆಗೆ ಕೆಲಸದ ಅಡಚಣೆ ಹೆಚ್ಚು ಸಂಭವಿಸುವರಿಂದ ಒಬ್ಬ ಅಮೀನ ಇಸಮಿನ ಕ್ಲಾರ್ಕರು ಪುತ್ತೂರು ಮುನ್ಸಿಫ್ ಕೋರ್ಟಿನಿಂದ [illegible] ನಿನ್ನೆ [illegible] ಬಂದ ತಲಪಿರುತ್ತಾರೆ

ಇದುವರೇಗೆ ನಮ್ಮ ಮುನ್ಸಿಫ್ ಕೋರ್ಟಿನಲ್ಲಿ ಸಾಕ್ಷಿಗಾರರಾಗಿ ಒಂದವರಿಗೆ [illegible] ತನಸಿ [illegible] ಅವರಿಗೆ ಕೂತುಕೊಳ್ಳುವರೆ ಪ್ರತ್ಯೇಕ ಸ್ಥಳವಿಲ್ಲದೆ ಕೋರ್ಟಿನೊಳಗೆನೇ ಕೂತುಕೊಳ್ಳಿಸುವ [illegible] ಇತ್ತು ಇದರಿಂದ ನಂಬ್ರದ ರುಜುವಾತಿಗೆ ಅಲ್ಪಸ್ವಲ್ಪ [illegible]ರುವದರಿಂದ ಈಗ ಕೋರ್ಟಿನ ಮುಂಭಾಗದಲ್ಲಿಯೇ ಸಾಕ್ಷಿಗಾರರಿಗ ಕೂತುಕೊಳ್ಳುವರ ಒಂದು [illegible] ಸರಕಾರದವರಿಂದ ಸೆಂಕ್ಷನ್ [illegible] ಸುರುವ ಆದಿವ್ಯಾತೆ

ಜಮಾಬಂದಿ [illegible] ತಹಸಿಲ್ದಾರರೂ ಮತ್ತು ಶಿರಸ್ತೇದಾರರೂ ಇದೇ [illegible] ಜಮಾಬಂದಿಯನ್ನು ಗ್ರಾಮ ನೌಕರರ ಮೇಲ ಹೆಚ್ಚಿನ [illegible] ಸಿಕೊಂಡು [illegible] ದರು [illegible] ಲ್ಲಿ ಜಮಾಬಂದಿ [illegible]

ಮುಲ್ಕಿ [illegible] ರಿಗೆ [illegible] ಎಷ್ಟು ಪಂಚರು [illegible] ಕಾಲೆ ಕಟ್ಟಿಸುವದೆ [illegible] ದೆಂಬದಾಗಿಯೂ [illegible] ಕಮ್ಮಿಟಿ ಮೆಂಬರರ [illegible] ಕೇಳಿ ತುಂಬಾ [illegible]ತೋಷಪಡುತ್ತೇವೆ [illegible] ರವರು [illegible] ಯನ್ನು ಮೇಲ್ತರ [illegible] ಸಹಾಯಕರಾಗಿರ [illegible]

ಇಲ್ಲಿಯ [illegible] ಯಲ್ಲಿದ್ದು ಜೀವ [illegible] ಷ್ಟವಂಥಾದ್ದಾಗಿರುವದೆಂ[illegible]ನ್ನು [illegible] ಪಕ್ಷಕ್ಕೆ ದಿನಕ್ಕೊಂದಾವರ್ತಿಯಾದರೂ ದಾಟಿ ಹೋಗುವ ಗ್ರಾಮದ [illegible] ಪಟೇಲರು ತಿಳಿಯದೆ ಹೋದದ್ದು ಯಾವ ಕಾರಣವೋ ಹೇಳಲು ಅನಾನುಕೂಲವಾಗಿರುವುದು

ಸೇಂದಿ ಸರಾಯಿ [illegible] ಕೆಲವು [illegible] ಇಲಾಖೆಯ ನೌಕರರೇ ಹೋಗಿ ಕುಡಿಯುವರಂತೆ ಇದರಿಂದ ಗುತ್ತೆದಾರರಿಗೆ ನಷ್ಟವೂ ಇಲಾಖೆಗೆ ಮಾನಹಾನಿಯೂ ಆಗಿರುವುದರಿಂದ ಸದರಿ ಇಲಾಖೆಯ ಮೇಲುದ್ಯೋಗಸ್ಥರು ಇಂಥಾ ನೌಕರರನ್ನು ಕಂಡುಹಿಡಿದು ಶಿಕ್ಷಿಸುವುದು ವಿಹಿತ[illegible]

ವಿವಿಧ ವಿಷಯಗಳು:

ನಮ್ಮ ದೇಶದಲ್ಲಿ ಜ್ವರ, ತಲೆನೋವು, ಪ್ಲೇಗು ಮುಂತಾದುವು ಹೇಗೋ ಹಾಗೆ ಆಸ್ಟ್ರೇಲಿಯಾ ದೇಶದಲ್ಲಿ ಹಾವಿನಿಂದ ಕಚ್ಚಲ್ಪಡುವುದು ಅಷ್ಟು ಸಾಮಾನ್ಯವಾಗಿರುವುದು. ಅದಕ್ಕೆ ಕಾರಣವೇನೆಂದರೆ, ನಮ್ಮ ದೇಶಗಳಲ್ಲಿ ಅನೇಕ ಹಾವುಗಳಿದ್ದರೂ ಕಡಿಯುವುದು ಹೆಚ್ಚಾಗಿಲ್ಲ. ಆಸ್ಟ್ರೇಲಿಯಾದಲ್ಲಿ ನಮ್ಮ ದೇಶಕ್ಕಿಂತಲೂ ಹೆಚ್ಚಾಗಿರುವುದಲ್ಲದೆ ಕಡಿಯುವುದು ಕೂಡಾ ಹೆಚ್ಚು. ಆ ದೇಶದಲ್ಲಿ ಹಾವು ಕಡಿದು ಸಾಯುವವರ [illegible] ಸರ್ಕಾರದವರು [illegible] ಮು ಕೊಡುವುದಾಗಿ ಹೇಳಿ ಆ ಮೂಲಕ ೧೯೦೮ನೆಯ ಇಸವಿಯಲ್ಲಿ ೨೭,೦೦೦ ಹಾವುಗಳಿಗೆ ಕಡಿಮೆಯಿಲ್ಲದೆ ಕೊಂದು ಹಾಕಿಸಿದರು. ಆದರೂ ಕೂಡ ಅವುಗಳ ಭಾಧೆಯು ಶಮನವಾಗಲಿಲ್ಲ ಈಗ ಸರ್ಕಾರದವರು ಇನ್ನೊಂದು ವಿಧಾನವನ್ನು ಕಂಡುಹಿಡಿದಿರುವರು ೧೯೦೮ನೆಯ ಇಸವಿಯ ಅಂತ್ಯಭಾಗದಲ್ಲಿ ೧೪೦ ಜನ ಹಾವು ಕಡಿದವರನ್ನು ನವೀನ ವಿಧಾನದಲ್ಲಿ ಚಿಕಿತ್ಸೆ ಮಾಡಿದರು ಅವರ ಪೈಕಿ ಆರು ಜನಕ್ಕೆ ಮಾತ್ರ ಪ್ರಯೋಜನವಾಗಲಿಲ್ಲ ಮಿಕ್ಕ ೧೩೪ ಜನರು ಬದುಕಿಕೊಂಡರು ಈ ವಿಧಾನವೇನೆಂದರೆ—ಹಾವು ಕಡಿದ ಜಾಗದಲ್ಲಿ ಹರಿತವಾದ ಚಾಕಿನಿಂದ ಸ್ವಲ್ಪ ಅಗಲವಾದ ಗಾಯವನ್ನು ಮಾಡಿ ಆ ಗಾಯಕ್ಕೆ ಪರ್ಮಾಂಗನೇಟ್ ಆಫ್ ಪೊಟಾಸಿಯಂ ಎಂಬ ಔಷಧಿಯ ಸಾರ (concentrated solution of permanganate of potassium) ವನ್ನು ಸ್ವಲ್ಪ [illegible] ಹಾಕುವುದು ಹೀಗೆ ಹಾಕಿದ ಸ್ವಲ್ಪ ಹೊತ್ತಿನ [illegible] ಈ ಔಷಧಿಯನ್ನು ಹಾಕಬೇಕು ಈ ಪ್ರಕಾರ ಎರಡು ಮೂರಾವರ್ತಿ ಮಾಡುವುದರಲ್ಲಿ ರೋಗಿಯು ಸ್ವಸ್ಥನಾಗುವನು ಮೇಲ್ಕಂಡ ಔಷಧವು ಬಹಳ ಸಾಮಾನ್ಯವಾದದ್ದು ನಂಬಿಕೆಯುಳ್ಳ ಎಲ್ಲಾ ಔಷಧದ ಅಂಗಡಿಗಳಲ್ಲೂ ಸಿಕ್ಕುವುದು

ಬನಾರಸಿನಲ್ಲಿ ಬ್ರಹ್ಮಚಾರ್ಯೋದ್ಧಾರಿಣೀ ಸಭೆ ಎಂಬ [illegible] ಸಭೆಯು ಸ್ಥಾಪಿಸಲ್ಪಟ್ಟಿರುವುದು ಈ ಸಭೆಯವರ ಉದ್ದೇಶ್ಯಗಳನ್ನು ಕಾರ್ಯರೂಪಕ್ಕೆ ತರುವ [illegible] ಹಿತ್ತವರ ಸಮಾಜವೆಂಬ [illegible] ಸಭೆಯು ಏರ್ಪಡಿಸಲ್ಪಟ್ಟು ಬಾಲವಿವಾಹ ಪದ್ಧತಿಯನ್ನು [illegible] ಸಭೆಯ ಪರವಾಗಿ [illegible] ಪತ್ರವೂ ಪ್ರಕಟಿಸಲ್ಪಡುತ್ತಿರುವುದು

ಬ್ರಹ್ಮ[illegible] ಸಭೆಗೆ ಮೆಂಬರನಾಗಿ [illegible] ಕೆಂದು [illegible] ಸಭೆಯವರಿ[illegible] ಪತ್ರವೂ [illegible] ಪತ್ರದಲ್ಲಿ ಪ್ರಕೆ [illegible] ಈ ಪತ್ರವನ್ನು [illegible] ಸಂಚಿಕೆ [illegible] ದಿಕ್ಕು [illegible] ಸಮಾಜ [illegible] ಕಂಡುಬರುತ್ತದೆ ದಕ್ಷಿಣ ಹಿಂದು [illegible] ಯಲ್ಲಿನಲ್ಲಿ [illegible] ಬಿಸ್ಕೆ [illegible] ಪಡೆದು [illegible] ಕ್ರಿ. ಶ. ೨೦೦ ವರುಷದ ಗ್ರೀಕ ತಂತ್ರಕರ್ತರು [illegible] ಹೇಳಿದ ಪ್ರಮಾಣವನ್ನು ರುಜುಪಡಿಸುವ [illegible] ದೇಶದಲ್ಲಿಯಾದ ಒಂದು ಬಾಲವಿವಾಹದ ವೃತ್ತಾಂತವನ್ನು ಈ ಸದ್ಗೃಹಸ್ಥರು ತಮ್ಮ [illegible] ಈ ವಿವಾಹದ ವಧುವಿಗೆ ಮೂರು ವರುಷ ಪ್ರಾಯವಾಗಿತ್ತು ವರನ ಪ್ರಾಯವು ೫ ವರುಷ ವರನನ್ನು [illegible] ಯಾವ ಬಗ್ಗೆ ಇಷ್ಟು ಸಣ್ಣ ಪ್ರಾಯದಲ್ಲಿ ವಿವಾಹವಾಗುವಿ ಎಂತ ಕೇಳಿದ್ದಲ್ಲಿ ವರನು ನನ್ನ ತಂದೆಗೆ ಒಬ್ಬ ಹೆಂಡತಿ ಇರುವುದರಿಂದ ನನಗೂ ಒಂದು ಹೆಂಡತಿ ಬೇಕು ನನ್ನ ಹೆಂಡತಿಯಾದರೋ ಪತಂಗದೋಪಾದಿಯಲ್ಲಿ ಸುಂದರಳಾಗಿದ್ದು ನನಗೆ ಆಡಲಿಕ್ಕೆ ದೊರಕಿದ ಅಪರೂಪ 'ಸಾಮಗ್ರಿ'ಯಾಗಿರುವಳು—ಎಂತ ಉತ್ತರ ಕೊಟ್ಟನು ಮದಿವೆಯ ಗಂಭೀರವಾದ ಉದ್ದಿಶ್ಯವು ಆ ಐದು ವರುಷ ಪ್ರಾಯದ ಮಗುವಿಗೆ ಹ್ಯಾಗೆ ತಿಳಿಯಲು ಸಾಧ್ಯ? ಆದರೆ ಆನಾರ್ಯರ ವಿವಾಹ ಪದ್ಧತಿಯನುಸರಣೆಯು ಇದಾಗಿರುವುದೆಂತ ಈ ಸದ್ಗೃಹಸ್ಥರಿಗೆ ತಿಳಿಯಲು ಸಾಧ್ಯವಾಯಿತಲ್ಲದೆ ಈ ಅನುಸರಣೆಯನ್ನು ಹಿಂದೂ ಸಮಾಜವು ಸಮರ್ಥಿಸುವ ರೀತಿಯು ಸಹಾ ಇವರಿಗೆ ವ್ಯಕ್ತವಾಯಿತು ಹಣ್ಣು ಪೂರ್ಣ ಪಕ್ವವಾದ ಮೇಲೆ ಮನೆಯಲ್ಲಿ ಉಳಕೊಂಡರೆ ಹ್ಯಾಗೆ ಕೊಳತು ಹಾಳಾಗುವುದೋ ಹೆಣ್ಣಿನ ಗುಣವು ಸಹಾ ಅದೇ ರೀತಿಯಾಗಿರುವುದು. ಇದೇ ಈ ಹಿಂದೂ ಸಮಾಜದವರ ವಾದ. [illegible]

ಹಿಂದುಸ್ಥಾನದಲ್ಲಿ ಹಿಂದೂ ದರ್ಮ [illegible] ಸ್ಥಿತಿಯಲ್ಲಿರುವಾಗ ವಿವಾಹವು ಪ್ರಾಯ ಭರಿತರಾದ ನಂತರವೇ ಆಗುತ್ತಿತ್ತು ಎಂಬದಕ್ಕೆ ಆದಾರಗಳನ್ನು ಕೊಟ್ಟು ಸಭೆಯವರ ಉದ್ದೇಶ್ಯಗಳನ್ನು ಶ್ಲಾಘಿಸಿ ತನ್ನನ್ನು ಮೆಂಬರನಾಗಿ ಸೇರಿಸಿಕೊಳ್ಳಬೇಕೆಂತ ವಿಜ್ಞಾಪಿಸಿಕೊಂಡಿರುವರು.

ಜೀವಸುಗಳ ಧಾರಣೆ, ಮಂಗಳೂರು.

ಹೊಸ ಕುಳೂರು ಮಸ್ವತಿ ಅಕ್ಕಿ ,,	4—6—0
,, ಗುಡ್ಡು ಮಸ್ವತಿ ,,,,,	3—13—0
,, ಮಸ್ವತಿ ,,,,,,,,,,,,,	3—12—0
,, ಗುಡ್ಡು ರಾಶಿ ,,,,,,,,,,	3—10—0
,, ಚತ್ತ ,,,,,,,,,,,,,,	1—9—0
,, ಮಸ್ವತಿ ಬೆಳ್ತಿಗೆ ,,,,,,,,,	4—1—0
,, ರಂಗೂನ್ ಬೆಳ್ತಿಗೆ ಗೋಣಿ ,,	6—15—0
,, ಹುರುಳಿ ಗೋಣಿ ೧ ಮುಡಿ 2ರ	5—14—0
ಉಪ್ಪು ಗೋಣಿ ೧ರ ,,,,,,,	3—3—0
ಕೊಪ್ರಿ ಖಂಡಿ ೧ರ ,,,,,,,	100—0—0
ಕೊಪ್ರಿ ಎಣ್ಣೆ ಮಣ ,,,,,,,,	6—14—0
ಕಾಫಿ ಖಂಡಿ ೧ರ ,,,,,,,	195—0—0
ಕಾಳು ಮೆಣಸು ಖಂಡಿ ,,,,,	110—0—0
ಹೊಸ ಬಿಳಿ ಗೋಟು ಅಡಿಕೆ ,,,	75—0—0
ಕರಿ ಗೋಟು ,,,,,,,,,,,	60—0—0
ಏಲಕ್ಕಿ ಮಣ ೧ರ ,,,,,,,	30—0—0

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಫಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಸ್ಸಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು. ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್ ಬೈಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು,
ಬೆಂಗಳೂರು ಸಿಟಿ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಮಾಡುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟದೆ ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸುವವರು ಅವುಗಳ ಬಗ್ಗೆ ಶಿಫಾರಸು ಮಾಡುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. [illegible]
[illegible]

"ಲಾ" ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮ್ಮದೀ ದಾಗಳು, ೨೫ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟರ್—ಮಾಸಪತ್ರಿಕೆ, ಪ್ರಿವಿಕೌಂಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ಎಂ ವ ಲಾರಿಪೋರ್ಟ್ ಆಫೀಸ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವದು.

THE HINDU SOAP MANUFACTURING CO,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ದಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ ಬಕ್ಕೆನೋವು, ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು, ಗಂಟ್ಲುನೋವು ಜ್ವರ, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ ೦ ೪ ೦

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೩—೧—೦
ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗ್ ನೋಡಿರಿ ವಿ ಪಿ ಖರ್ಚು ಪ್ರತ್ಯೇಕ

ಟಿ ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ ಕ

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು

ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ [illegible]

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ
ಕವಿ ಎಂಡ್ ಸನ್ಸ್ ಮಂಗಳೂರು ದ ಕ

THE NEWZEELAND INSURANCE CO, Ltd.
ದಿ. ನ್ಯೂಝೀಲಂಡ್ ಇನ್ಸ್ಯುರೆನ್ಸ್ ಕಂಪೆನಿ ಲಿಮಿಟೆಡ್.

ಮೇರಿನ್ ಡಿಪಾರ್ಟ್‌ಮೆಂಟ್.

ಮಂಗಳೂರು ಏಜಂಟರು:— ಡಿ. ದತ್ತಾರಾವ್ ಎಂಡ್ ಕೊ.
ಬ್ರಿಟೊ ಬಿಲ್ಡಿಂಗ್ಸ್ ಮಂಗಳೂರು.

ಈ ಕಂಪೆನಿಯಲ್ಲಿ ಯಾವ ಲೈನಿನ ಸ್ಟೀಮರುಗಳಲ್ಲಿಯಾದರೂ, ಬೊಂಬಾಯಿ, ಕರಾಚಿ, ಕಲ್ಲಿಕೋಟೆ, ಕೊಲಂಬೊ, ಮದ್ರಾಸ್, ಕಲ್ಕತ್ತಾ, ರಂಗೂನ್, ವಗೈರೆ [illegible] ಬಂದರುಗಳಿಗಾಗಲಿ, ವಿಲಾಯತಿ ಬಂದರುಗಳಿಗಾಗಲಿ, [illegible] ಸುಲಭವಾದ ದರಗಳಲ್ಲಿ [illegible] [illegible] ಯವರಾದ [illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವಸ್ತ್ರವಾದ ಮಾಡುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. [illegible] ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಜಾಯಿಕಾಯಿ [illegible] ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರದ [illegible] ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳಿ) ಚೇಷ್ಟೆಗೆ ಸಂ[illegible]ವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ ಮತ್ತು ಮದ್ರಾಸು
ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಜನ್ಯವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯು ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು

ಹೆಂಗಸರೂ ಜೀವವಿಮೆ ಉತ್ತರಾಯಿಸಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಲಾದೀತು

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು ದ ಕನ್ನಡ

ಪ್ರಸಿದ್ಧಿಯನ್ನು ಹೊಂದಿದ ಅಮೇರಿಕಾ ಖಂಡದ ಯೋಗವು

ಪ್ರೊಫೆಸರ್ ಜೇಂಸ್‌ರವರ ವಿದ್ಯುಚ್ಛಕ್ತಿಯ ಮಾತ್ರೆಗಳು.

ಈ ಮಾತ್ರೆಗಳ ಸಂಸ್ಕಾರ ರೀತಿಯಾಗಿ ಪ್ರತಿ ಅಣುವಿನಲ್ಲಿ ಕೆಲಸ ಮಾಡುವಂತೆ ವಿದ್ಯುಚ್ಛಕ್ತಿಯಿಂದ ತುಂಬಲ್ಪಟ್ಟಿರುವವು ಇದರಿಂದ ಮಾನವ ದೇಹದಲ್ಲಿ ವಿದ್ಯುಚ್ಛಕ್ತಿಯು ಪ್ರಬಲವಾಗಿ ಸಕಲ ರೋಗಗಳೂ ನಶಿಸುವಂತೆ ಆಗುವವು ಈ ವಿದ್ಯುಚ್ಛಕ್ತಿಯ ಮಾತ್ರೆಗಳು ಕೆಟ್ಟುಹೋದ ರಕ್ತವನ್ನು ಶುದ್ಧಮಾಡುವದು ಹೊಸರಕ್ತವನ್ನುಂಟುಮಾಡುವದು, ಕ್ಷಯಿಸಿದ ದೇಹವನ್ನು ಪುಷ್ಟಿಯಾಗುವಂತೆ ಮಾಡುವದು ಸ್ವಪ್ನದಲ್ಲಿಯೂ ಜಾಗ್ರತದಲ್ಲಿಯೂ ವೀರ್ಯವು ಹೋಗದಂತೆ [illegible] ಶಕ್ತಿಯನ್ನುಂಟು ಮಾಡುವವು ನರಗಳಲ್ಲಿ ಬಲವಿಲ್ಲದೇ ಹೋಗುವದು ಶುಕ್ಲನಷ್ಟವೂ, ಅಜೀರ್ಣವೂ ಊಟ ಆಹಾರವು ಆಗದೇ ಇರುವದೂ ಕಾಲುಗಳ ಶಳತ, ತಲೆತಿರುಗುವದು, ಕಣ್ಣುಗಳ ಕತ್ತಲೆಗಟ್ಟಿಕೊಳ್ಳುವದು ಮನೋಚಿಂತೆ ಕೆಲಸ ಮಾಡುವದರಲ್ಲಿ ಮುಂದೆ ತೋರದೇ ಇರುವದು, ನರಗಳಲ್ಲಿ ಶಾಂತವಿಲ್ಲದೇ ಇರುವದರಿಂದ ಶಿರೋವೇದನೆ, ಎದೆಯ ನೋವು ಉಪಕಾಸವು ತಗ್ಗುವದು ಇಂದ್ರಿಯ ಪುಷ್ಟಿತ್ವವು ಇಲ್ಲದೇ ಹೋಗುವದು ಇವುಗಳನ್ನೆಲ್ಲಾ ನಾಶಮಾಡಿ ಆರೋಗ್ಯವನ್ನುಂಟು ಮಾಡುವದು ಸ್ತ್ರೀಯರು ಕಾಲಕ್ಕೆ ಸರಿಯಾಗಿ ಮುಟ್ಟಾಗದೇ ಇರುವದರಿಂದ ಉಂಟಾಗತಕ್ಕ ದೌರ್ಬಲ್ಯ ಜಲೋದರ, ನಡುವಿನ ನೋವು, ಹಸಿವೆ ಇಲ್ಲದೇ ಹೋಗುವದು ಇವೇ ಮೊದಲಾದವುಗಳಿಗೆ ಈ ಮಾತ್ರೆಗಳು ದಿವ್ಯೌಷಧಗಳು ಎಂಟ್ಟು ವಾರಗಳಾದರೂ ಅಥವಾ ಆರೋಗ್ಯವುಂಟಾಗುವವರೆಗಾದರೂ ಈ ಮಾತ್ರೆಗಳನ್ನು ಸೇವಿಸಬೇಕು.

ಕ್ರಯ ೨೫ ಮಾತ್ರೆಗಳಿಗೆ ರೂಪಾಯಿ ೧—೪—೦ ೪೦ ಮಾತ್ರೆಗಳಿಗೆ ೨ ರೂಪಾಯಿ ವಿ. ಪಿ ಖರ್ಚು ೧ ಶೀಸೆ ಮೊದಲು ೩ ಶೀಸೆವರೆಗೂ ೫ ಆಣೆ ಕೆಲವು ಪ್ರಶಂಸಾ ಪತ್ರಗಳ ಮುಖ್ಯ ಅಭಿಪ್ರಾಯಗಳ ರಾಜಾ ವಿಜಯ ಚಂದ ವಿಲಾಸಪೂರ ಮಹಾರಾಜ — ಕೂಡಲೇ ಇನ್ನು ಮೂರು ವಿದ್ಯುಚ್ಛಕ್ತಿ ಮಾತ್ರೆಗಳನ್ನು ವಿ ಪಿ ಮೂಲಕ ಕಳುಹಿಸಿಕೊಡಬೇಕು ರಾಜ ಶೀಮಾನ್ನು [illegible] ಹಜ ಕರ್ಣಸಿಂಹಜ ರಾಜಾಪುರಂ ಜಾರ್ಡ್ಲೋಕುದಾರ ರಾಜಾಪುರಂ — ಇದುವರೆಗೂ ತರಿಸಿಕೊಂಡ ವಿದ್ಯುಚ್ಛಕ್ತಿಯ ಮಾತ್ರೆಗಳು ತುಂಬಾ ಕೆಲಸ ಮಾಡಿವೆ. ಕೂಡಲೇ ಇನ್ನು ನಾಲ್ಕು ಶೀಸೆ ಮಾತ್ರೆಗಳನ್ನು ಕಳುಹಿಸಿ ಕೊಡಬೇಕು.

ಏಜೆಂಟರು— ದಿ ಊಲನ್ ಮಾರ್ಟ್
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟನೆಗಳನ್ನು ಪ್ರಕಟಿಸುವ [illegible] ದರ.

	೧ ಸಾರಿ	೪ ಸಾರಿ.	೧೨ ಸಾರಿ.	೨೪ ಸಾರಿ.	[illegible] ಸಾರಿ.
ಇಡೀ ಪಾನು	ರೂ. ೧೦	ರೂ ೩೨	ರೂ. ೭೨	ರೂ. ೧೨೦	ರೂ. [illegible]
ಅರ್ಧಪಾನು	,, ೬	,, ೧೮	,, [illegible]	,, ೬೦	[illegible]
ಕಾಲು ಪಾನು	,, ೪	,, ೧೨	,, ೩೦	,, [illegible]	[illegible]
ಅರೆಕಾಲು ಪಾನು,,	೨	,, [illegible]	,, ೧೨	[illegible]	[illegible]

ಸೂಚನೆ:—ಸಣ್ಣ ಪ್ರಕಟನೆಗಳಿಗೂ ಒಂದು ವರುಷದ ಮೇಲಿನ ಪ್ರಕಟನೆಗ[illegible] ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ [illegible] ಮಂಗಳೂರು ದಕ್ಷಿಣ ಕನ್ನಡ ಎಂಬ ವಿಳಾಸಕ್ಕೆ ಬರೆಯುವದು. [illegible] ಗಳ [illegible] ಮುಂದಾಗಿ [illegible] [illegible]

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್ (ಪಕ್ಕೆಗೆ ಮಾ[illegible]ಲ್ ಬೆನ್ನಿಗೆ ಕೆಲಿಕೊ) | **ಹಾವ್‌ಬೈಂಡ್** (ಪಕ್ಕೆಗ ಮಾ[illegible]ಲ್ ಬೆನ್ನು ವ ಮೂ[illegible]ಳಿಗೆ ಚರ್ಮ) | **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು [illegible] [illegible] [illegible] ರ್ಗಳುಳ್ಳವುಗಳು

[illegible] × 8¼, 3 × [illegible], 8¼ × [illegible] × [illegible] [illegible] ಸಾವುಕಾರ [illegible] ವರ್ಗದಾರ ವ ಆಫೀಸರರುಗಳಿಗೆ **ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿ[illegible]ವವು

[illegible] ಉಪಯೋಗಕ್ಕೆ [illegible]

[illegible] ಫುಲ್‌ಸ್ಕ್ಯಾ[illegible] [illegible] ತಯ್ಯಾರಿಸಲ್ಪಟ್ಟಿರುತ್ತವೆ
[illegible] ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ [illegible] ಪುಸ್ತಕ[illegible] [illegible] ಮಾ[illegible]ಲ್, ಚರ್ಮ, ಕೆಲಿಕೊ **ಮೊದಲಾದವುಗಳಿಂದ** ಗಿರಾಕಿಗಳಿಗೆ ಬೇಕಾ[illegible] [illegible]

ನಮ್ಮ [illegible] ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು

ಹಣವಿನ [illegible] ವಿನಿಯೋಗವು [illegible]ವುದು ಬೆಲೆಗೆ ತಕ್ಕ ಒಡವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ
ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾ[illegible] [illegible]ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾ[illegible] [illegible] ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಕೊ[illegible]' ಯಾ ಆಹಾರ ಸಂಗ್ರಹ,

(ಆರಾರೋಟ್, [illegible] [illegible] ಇನ್ನು [illegible] ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಉಪಯೋಗಕ್ಕಾಗುವ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್ [illegible], ಕೆಮಿಕಲ [illegible] ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ **ದೊರಕುವದಲ್ಲದೆ,** ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವ ಶಾಲಿಗಳೂ [illegible] ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಮಂಗಳೂರು.

Mangalore Trading Association,
Mangalore, S. Canara.

Printed by V. S. Kamath, at the Mangalore Trading Association's Sharada Press Mangalore

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 4. ಮಂಗಳೂರು, ತಾರೀಕು 18ನೇ ಶುಕ್ರವಾರ ಫೆಬ್ರವರಿ 1910 ಸಂಚಿಕೆ 7

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನಿನಾಗೆ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಮುಟಾಣಿ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ದೂರಗಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ಒಂದರ ಕಿಮ್ಮತು 3 ಆಣೆ.

ಸುಂದರೀ ಮುಲಾಮು.

ಈ ಮುಲಾಮುವನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಾಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ. ಡಬ್ಬಿ ಒಂದರ ಕಿಮ್ಮತು 8 ಆಣೆ. ಆರು ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ಕಪ್ಪಾಗಿಯೂ, ... ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ... ಮನಶುದ್ಧಿ ಮಾಡುವದು. ಬಾಟ್ಲಿ ಒಂದರ ಕಿಮ್ಮತು ... ರೂ. ... ಡಬ್ಬಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE ★ POWDERS ★ OINTMENTS ★ PILLS ★ WILLIAM & Co. BOMBAY

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರ ಪದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ದೂರವಾಗುವದು. ಡಬ್ಬಿ ಒಂದರ ಕಿಮ್ಮತು 6 ಆಣೆ. ಗ್ರೋ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನದ ಸ್ರಾವ ಆಗುವದು ನಿಲ್ಲಿಸುತ್ತದೆ. ನಿರ್ಬಲವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಪೆಪೆಯಿನ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತು ರೂ 1.

ಚೇಳು ಕಡಿತದ ಮೇಲಿನ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮೆಗೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆಗಳು	ರೂ. 0—8—0.
ತಾಂಬೂಲ ಗುಟಿಕೆ 50ಕ್ಕೆ	„ 0—8—0.
ಕಸ್ತೂರಿ ಮಾತ್ರೆ 30ಕ್ಕೆ	„ 0—10—0.
ಖಜ್ಜಿ ಮುಲಾಮು	„ 0—2—0.
ನೇತ್ರಾಂಜನ	„ 0—4—0.

ಈ ಔಷಧಗಳು ... ಎಲ್ಲಾ ಕಡೆಗಳಲ್ಲಿ ಸಿಕ್ಕುವವು.

... ವಿಲಿಯಂ ಮತ್ತು ಕಂಪೆನಿ ... ಮುಂಬಯಿ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷ್ಯಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) — **ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) — **ಫುಲ್‌ಬೈಂಡ್** (ಪೂರ್ಣ ಚರ್ಮ.)

ಈ ಮೂರು ಬದವೆಗಳ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

13'×8¼', 13'×7¼', 8¼'×6 [illegible] ಪ್ರಮಾಣಗಳಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಫೀಸರರುಗಳಿಗೆ **ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಒಳ್ಳೇ ಸಮಾನ ತರದ ಹಾಳೆಗಳ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ [illegible] ಎಲ್ಲಾ ಸ್ಟೈಜುಗಳ [illegible] ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ **ಮೊದಲಾದವುಗಳಿಂದ** ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಿಯಾಯತಿ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು.

ಹಣವಿನ ಒಳ್ಳೇ ವಿನಿಯೋಗವು ಯಾವುದು – ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧[illegible] ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರದಿಂದ [illegible] 1919ನೇ ಇಸವಿಯಿಂದ ಪ್ರತ್ಯೇಕ ಶಾರದಾ [illegible] ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಚಾಹ, ಕೆಂಡೆನ್ಸ್ಡ್ ಮಿಲ್ಕ್, [illegible], ಕೋಕೋವಾ ಕಾಫಿ ಹುಡಿ, ಬಿಸ್ಕೂಟು, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೆಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಫೆಲ್ಲೋಸ್ ಸಿರಪ್, ಕೆಮಿಕಲ್ ಫುಡ್, [illegible] ಮುಲಾಮು, ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ **ದೊರಕುವದಲ್ಲದೆ,** ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವ ಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು **ಹೊಂದಬಹುದು.** ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡೆಯಲು ಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು).

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಟೈಜುಗಳಲ್ಲಿ ಅಚ್ಚು ಹಾಕುವುದು. ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್.
ಮಂಗಳೂರು.

Mangalore Trading Association,
Mangalore S. Canara.

Printed by V. S. Kamath, at the Mangalore Trading Association's Sharada Press, Mangalore.

Registered No. M. 402

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 4. ಮಂಗಳೂರು, ತಾರೀಕು 18ನೇ ಶುಕ್ರವಾರ ಫೆಬ್ರವರಿ 1910 ಸಂಚಿಕೆ 7.

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ. ಡಬ್ಬಿ ೧ರ ಕಿಮ್ಮತು 8 ಆಣೆ. ಆರು ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, [illegible]ಯವಾಗಿಯೂ, [illegible] ಸೌಂದರ್ಯವಾಗಿಯೂ ಬೆಳೆಯುವದು. [illegible] ಮೆದುಳನ್ನು [illegible] ಮನಃಶುದ್ಧಿ ಮಾಡುವದು. ಬಾಟ್ಲಿ ೧ರ [illegible] ರೂ. [illegible] ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ	SAFE ★ EFFICACIOUS ★ SURE — WILLIAM & Co. BOMBAY — PILLS ★ OINTMENTS ★ POWDERS	ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಚೇಳು ಕಡಿತದ ಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಕಿಮ್ಮಿಗೆಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗು[illegible] 50ಕ್ಕೆ	,,	0—8—0.
ಕಸ್ತೂರಿ ಮ[illegible]	,,	0—10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

[illegible]

[illegible] ವಿಲಿಯಂ ಮತ್ತು [illegible] ಮುಂಬಯಿ.

ವ್ಯವಸಾಯ ಕ್ರಮಬೋಧಿನಿ

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದ್ದು. ಜಮೀನ್‌ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಉಂಟಾಗಿರಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು ಕ್ಲಾಯ ಸ್ಟಿಚ್ ಬೈಂಡು ಪ್ರತಿ ಒಂದಕ್ಕೆ ೦—೧೨—೦; ಕ್ಯಾಲಿಕೋ ಬೈಂಡು, ೧—೦—೦; ಟಪ್ಪಾಲ್ ಹಾಸಲ್ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್ ಯನ್ ರಾವ್ ಬ್ರದರ್ಸ್

262 ಚಿಕ್ಕಪೇಟೆ, ಬೆಂಗಳೂರು

ಮುಫತ್ತು ೧೯೧೦ನೇ ವರುಷದ ಕ್ಯಾಲೆಂಡರು ಮುಫತ್ತು

ಕಾನಪೂರ ಉಲನ್ ಚೌಕಗಳು.

ಸೈಜು 40×40, ಹಳದಿ, ಗುಲಾಬಿ ಊದ, ಹಸರು, ಕಪ್ಪು, ಕೇಸರಿ, ಬಿಳಿಪು, ಚ್ಯಾಸ್ ಮತ್ತು ಇತರ ರಂಗಗಳುಳ್ಳವು 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಹನ್ನೆರಡು 0—1—0

ಶಹಲುಗಳು.

ಉದ್ದ 6 ಮೊ. ಅಗಲ 3 ಮೊ. ಎಲ್ಲಾ ರಂಗಗಳುಳ್ಳವು 1ನೇ ನಂಬರು 1ಕ್ಕೆ ರೂ 1-4-0 2ನೇ ನಂಬರು ರೂ 1—12—0 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಹನ್ನೆರಡು 0 1—0

ಸಂಚಾ ಒಳ್ಳೇ ಕಲಾಪತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು 0—10—0 1—1—0.

2ನೇ ನಂಬರು 0—14—0, 1—8—0, 2—4—0

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೊಪಾ, ... ಮುಂತಾದ ರಂಗಗಳದ್ದು ಸೈಜು ಉದ್ದ 5-6 ಮೊಳ, ಅಗಲ ... ಇಂಚು 1ಕ್ಕೆ ರೂ 1 4-0, 1 8 0, 2 4 0, 2-8-0, 3-0 0

ಚಿತ್ರಾಪನ 3 0-0, 4 0 ... 6 0 0

ಡಿಪ್ಲೊ ಗಜ 1ಕ್ಕೆ 1 8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2 ... 1

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ... ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6 0, 2 8 0, 3 0 0

ದಾರದ ಬನೀನುಗಳು 1ಕ್ಕೆ ಆಣೆ 4 5, 6, 7, 8.

ಉಲನ್ ಬನೀನುಗಳು 1ಕ್ಕೆ ರೂ 2 4 0, 2 8 0, 3-0-0, 3-8-0

ಫಿಲ್ಟ ಕ್ಯಾಪ್‌ಗಳೂ ಕ್ರಿಸ್ಟಿಸ್ 1ಕ್ಕೆ ರೂ 1 12 0, 2-4 0, 2-8-0 2-12-0.

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12 0 1 0-0, 1-4 0, 1-8-0

ಹಾಸನದ ಜೋಪಿಗಳು ಡಜನ್ 1ಕ್ಕೆ ರೂ. 4 0-0, 4-4 0, 4 8-0, 5—8-0, 6-0 0, 7-0 0, 8-0-0, 9 0 0, 10-0 0, 12-0 0.

ಪೇಟ ಕಟ್ಟುವ ತರಹವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲಿ 1ಕ್ಕೆ ರೂ. 0—11—0.
ಕುಂತಳ ಕೌಮುದಿ ತೈಲ ,, ,, 0—12—0.
ಕಮೋಲಿನಿಯಾ ಓಯಿಲ್ ,, ,, 1—0—0.
ಭೃಂಗಾಮಲಕ ತೈಲ ಸೀಸೆ ,, 0—4—0, 0-8-0, 1-0-0.
ಕಸ್ತೂರಿ ಮಾತ್ರೆ ಸೀಸೆ 1ಕ್ಕೆ 0—4—0.

ಎಸ್. ಎ. ಫ್ಲೋರುವಾಲ್

ಅಂಚೆಪೇಟೆ ಬೆಂಗಳೂರು ಸಿಟಿ.

ಗಿಡಗಳು, ಬೀಜಗಳು, ಹಣ್ಣು, ಹುವ್ವು ಮತ್ತು ತರಕಾರಿ.

ಮಾವಿನ ಗಿಡಗಳು, ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಶೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ಕಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ, ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ತಾತ್ಪರ್ಯ, ವ್ಯಾಕರಣ ವಿಷಯ ವಿಶೇಷ ಟಿಪ್ಪಣಿಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಪೆಟ್ಟು ... ಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹ. ಮುದ್ರಿತ ಬೆಲೆ 0—4—0

ವಿಳಾಸ ಮ್ಯಾನೇಜರ್.

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ರೆವ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈಶಿಷ್ಟ್ಯಗಳುಳ್ಳ ತೈಲವೆಂದು ಶಿಫಾರಸು ಮಾಡಿರುವರು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಇದನ್ನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ, ತಲೆ ಬಾಚಿಕೊಳ್ಳುವದಕ್ಕೂ, ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು 2 ಔನ್ಸುಗಳುಳ್ಳ ಸೀಸೆ ಒಂದಕ್ಕೆ 12 ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.,

216 ಕಾರನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಸ್. ಎ. ಫ್ಲೋರುವಾಲ್ ಎಂಡ್ ಕೊ.,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮ. ರಾ. ರಾ. ಸಿ. ಆರ್. ಕಾಮತರು,

ಉಳಸ ಬಜಾರ್, ಮಂಗಳೂರು.

SMALL-POX BALM.

ಸ್ಮೋಲ ಪೋಕ್ಸ್ ಬಾಂ

ಎಂಬ

ಸಿಡುಬುರೋಗಕ್ಕೆ ಮುಲಾಮು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಸೈಲೆಯು ಒಣಗುತ್ತಾ ಒಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಬೀಜಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಸೈಲೆಯು ದುರ್ವಾಸನೆಯನ್ನು ರೋಗಿಗೋಸ್ಕರ, ಸಿಡುಬಿನ ಕಲೆಗಳು ವಿಕಾರ ಹೊಂದದಂತೆ ಮಾಡಿ, ಸಿಡುಬಿನಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವ ರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೊಪತಿಕ್, ಬಿಸ್ಕುಕೆಮಿಕ್, ಆಯುರ್ವೇದಿಕ್ ಅಥವಾ ಎಲೊಪತಿಕ್, ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗ ತಗಲಿದ ಒನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು. ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ

ದೊಡ್ಡದು ೮ ಆಣೆ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

(ಮಂಗಳೂರು ವ್ಯಾಪಾರ ಸಂಘ)

ಬಂದರು ಮಂಗಳೂರು

ಇವರಲ್ಲಿ ದೊರೆಯುವುದು

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 18ನೇ ಫೆಬ್ರವರಿ 1910

ಆಂಗ್ಲ ವಿದ್ಯಾಭ್ಯಾಸ.

ಈಗ ದೇಶದಲ್ಲಿ ಹರಡಿದ ಅಸಂತುಷ್ಟಿಯ ವ ರಾಜದ್ರೋಹದ ಒಂದು ಕಾರಣವು ಜನರಿಗೆ ಇಂಗ್ಲಿಷ ವಿದ್ಯಾಭ್ಯಾಸವನ್ನು ಕೊಟ್ಟದ್ದೆಂದು ಕೆಲವು ಆಂಗ್ಲೋ ಇಂಡಿಯನ್ ಪತ್ರಕರ್ತರು ವಾದಿಸುವದುಂಟು. ಸ್ವಾತಂತ್ರ್ಯವನ್ನು ಶ್ಲಾಘಿಸಿ ಬರೆದ ಆಂಗ್ಲೇಯ ಗ್ರಂಥಗಳನ್ನೂ ಕಾವ್ಯಗಳನ್ನೂ ಓದಿ ಸ್ವಾತಂತ್ರ್ಯಕ್ಕಾಗಿ ಇಂಗ್ಲೀಷರು ಮಾಡಿದ ಸಾಹಸಗಳನ್ನು ಅವರ ಚರಿತ್ರೆಯಿಂದ ಪರಿಶೀಲಿಸಿ ಅವರಂತೆ ಸ್ವಾತಂತ್ರ್ಯಗಳನ್ನು ಹೊಂದಬೇಕೆಂದೂ ಸ್ವರಾಜ್ಯ ಪದ್ಧತಿಯನ್ನು ಸ್ಥಾಪಿಸಬೇಕೆಂದೂ ಭಾರತೀಯರಲ್ಲಿ ಆಸೆಹುಟ್ಟಿದೆ ಎಂದು ಸದರಿ ಪತ್ರಕರ್ತರು ಹೇಳುವರು. ಆಂಗ್ಲ ವಿದ್ಯಾಭ್ಯಾಸವು ಇಲ್ಲಿ ಹ್ಯಾಗೆ ಸ್ಥಾಪಿಸಲ್ಪಟ್ಟಿತೆಂಬದನ್ನು ನೋಡಿದರೆ ರಾಜನಿಷ್ಠೆಯನ್ನು ಸಾಧಿಸಲೋಸುಗವೇ ಅಧಿಕಾರಿಗಳು ವಿದ್ಯಾಭ್ಯಾಸವನ್ನು ನಮಗಿತ್ತರೆಂಬದು ಸ್ಪಷ್ಟವಾಗುವದು.

ಕಳೆದ ೧೯ನೇ ಶತಮಾನದ ಆರಂಭದಲ್ಲಿ ಹಿಂದುಸ್ಥಾನದಲ್ಲಿ ಯುನಿವರ್ಸಿಟಿ (ಸರ್ವ ವಿದ್ಯಾಶಾಲೆ)ಗಳಿರಲಿಲ್ಲ. ಮುಂಚಿನ ಅರಸರು ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಇಟ್ಟ ಹಣವನ್ನು ಇಂಗ್ಲಿಷ ಸರಕಾರದವರು ಹಿಂದುಗಳಿಗೆ ಸಂಸ್ಕೃತ ವಿದ್ಯಾಲಯಗಳನ್ನೂ ಮುಸಲ್ಮಾನರಿಗೆ ಮದ್ರಸಾ ವಿದ್ಯಾಶಾಲೆಗಳನ್ನೂ ಸ್ಥಾಪಿಸ ವಿನಿಯೋಗಿಸಿದರು. ೧೮೨೩ರಲ್ಲಿ ವಿದ್ಯಾಭ್ಯಾಸದ ಮೇಲ್ವಿಚಾರಣೆಗಾಗಿ ಕಮಿಟಿ ಆಫ್ ಜನರಲ್ ಇನ್ಸ್‌ಟ್ರಕ್ಷನ್ (Committee of general Instruction) ಎಂಬ ಸಂಸ್ಥೆಯು ಏರ್ಪಟ್ಟಿತು. ಆಗ್ಯೆ ಭಾರತೀಯರಿಗೆ ಅರಬಿಯ, ಸಂಸ್ಕೃತ ವಿದ್ಯಾಭ್ಯಾಸ ಕೊಡತಕ್ಕದ್ದೋ ಯಾ ಇಂಗ್ಲಿಷ್ ವಿದ್ಯಾಭ್ಯಾಸ ಕೊಡತಕ್ಕದ್ದೋ ಎಂಬ ಕುರಿತು ಪ್ರಶ್ನೆ ಹುಟ್ಟಿತು. ಈ ವಿಷಯವು ೧೨ ವರುಷಗಳ ವರೆಗೆ ಚರ್ಚಿಸಲ್ಪಟ್ಟು ೧೮೩೫ರಲ್ಲಿ ಗವರ್ನರ್ ಜನರಲ್ ಲೋರ್ಡ್ ವಿಲ್ಲಿಯಂ ಬೆಂಟಿಂಕರಿಂದ ತೀರ್ಮಾನಿಸಲ್ಪಟ್ಟಿತು.

ಕಮ್ಮಿಟಿಯ ಸೆಕ್ರೆಟರಿಯಾದ ಮಿ ಹೋರೇಸ್ ಹೇಮನ್ ವಿಲ್ಸನ್ (Horace Hayman Wilson)ರೇ ಮೊದಲಾದ ಒಂದು ಪಕ್ಷವು ದೇಶೀಯ ವಿದ್ಯಾಭ್ಯಾಸವನ್ನು ಪ್ರತಿಪಾದಿಸಿದರು. ಇವರ ಕಾರಣಗಳು ಯಾವವೆಂದರೆ (೧) ಭಾರತೀಯರಿಗೆ ಇಂಗ್ಲಿಷ ವಿದ್ಯೆಗಳ ಅರ್ಥವು ಸರಿಯಾಗಿ ತಿಳಿಯಲಾರದು. ಬಿ. ಎ. ಎಮ್. ಎ. ಮೊದಲಾದ ಪದವಿಗಳನ್ನು ಹೊಂದಿ ಇಂಗ್ಲಿಷ ಉದ್ಯೋಗಸ್ಥರಂತೆ ಉಚ್ಚಸ್ಥಾನವನ್ನೊಂದಿದರೆ ಇಂಗ್ಲಿಷರ ಸ್ವಭಾವ ಸಹಾ ಬಾರದು. ಆದನ್ನು ಸಹಿಸಲಾರರು.

(೨) ದೇಶೀಯ ಭಾಷೆಯಲ್ಲಿ ಭಾರತೀಯರ ರಾಷ್ಟ್ರೀಯ ಕಾವ್ಯಗಳು, ಚರಿತ್ರವು, ದರ್ಶನ ವೇದಗಳು ಇರುವಾಗ ಅವನ್ನು ಬಿಟ್ಟು ಇಂಗ್ಲಿಷ ಶಿಕ್ಷಣವನ್ನು ಉಪಕ್ರಮಿಸಿದರೆ ಅವರ ರಾಷ್ಟ್ರೀಯ ಭಾವ (National Spirit)ಕ್ಕೆ ಹಾನಿಯಾಗುವದು.

ಇಂಗ್ಲಿಷ್ ವಿದ್ಯಾಭ್ಯಾಸ ಮೂಲಕ ಸ್ವಲ್ಪ ಸಂಖ್ಯೆಯ ಜನರು ಇಂಗ್ಲಿಷ್ ವಾಙ್ಮಯವನ್ನೋದಿ ಅವರು ನಡೆನುಡಿಗಳಲ್ಲಿ ಇಂಗ್ಲಿಷರನ್ನನುಸರಿಸುವರು. ಅವರ ಚಿತ್ತವೃತ್ತಿ ಸಮಾನಜಾತಿಗಳ ಇಂಗ್ಲಿಷ್ ಮಾರ್ಗದಿಯನ್ನು ಹಿಂಬಾಲಿಸುವವು. ಆದ್ದರಿಂದ ಈ ಅಂಗಕ್ಕೂ ಬಹುಜನ ಸಮುದಾಯಕ್ಕೂ ನಡುವೆ ಇದೊಂದು ಅಗಾಧವಾದ ಅಗಳು ನಿರ್ಮಿಸಿದಂತಾಗುವದು.

ಪಾಶ್ಚಾತ್ಯರ ಶಾಸ್ತ್ರಗಳು ಬೀಜಗಣಿತ, ಕ್ಷೇತ್ರಗಣಿತ ಮೊದಲಾದವು ಭಾರತೀಯರಲ್ಲಿವೆ. ತತ್ವಜ್ಞಾನದಲ್ಲಿ ಭಾರತೀಯ ಗ್ರಂಥಗಳು ಅಪ್ರತಿಮವಾಗಿವೆ.

ಯಾವ ಪ್ರಯತ್ನಗಳಿಂದಾದರೂ ಇಂಗ್ಲಿಷ್ ವಿದ್ಯಾಭ್ಯಾಸವು ಜನಸಾಮಾನ್ಯರಿಗೆ ಸಿಲುಕದು. ಆದ್ದರಿಂದ ದೇಶಭಾಷೆಗಳ ಪ್ರೋತ್ಸಾಹದಿಂದಲ್ಲದೆ ಸಾಧಾರಣರ ಶಿಕ್ಷಣ ಸಾಗದು. ಈ ಪಕ್ಷದಲ್ಲಿ ಕೆಲವರು ಇಂಗ್ಲಿಷ್ ವಿದ್ಯಾಭ್ಯಾಸದಿಂದ ಜನರು ಆಡಳಿತೆಯ ಬಳಕೆಗಳನ್ನು ತು ಮೆಚ್ಚಿನ ಸ್ವಾತಂತ್ರ್ಯಗಳನ್ನು ಕೇಳುವರೆಂದು ಸಹಾ ಊಹಿಸಿದರು.

ಪರಪಕ್ಷದಲ್ಲಿ ಸಹಾ ಸರ್ ಚಾರ್ಲ್ಸ್ ಮೆಟ್‌ಕಾಫ್ (Sir Charles Metcalfe) ರಂತಹ ಸಮರ್ಥ ಪುರುಷರಿದ್ದರು. ಇವರ ಸಮಕಾಲೀನರಾದ ಪ್ರಖ್ಯಾತ ಗುರುರಾಜ ರಾಮಮೋಹನ ರಾಯರೂ ಈ ಪಕ್ಷದವರು. ಇವರು ಇಂಗ್ಲಿಷ್ ಶಾಸ್ತ್ರ ವಗ್ಯೆರೆಯನ್ನು ಭಾರತೀಯರಿಗೆ ಕಲಿಸತಕ್ಕದ್ದೆಂದು ಗವರ್ನರ್ ಜನರಲರಿಗೆ ಮನವಿ ಮಾಡಿಕೊಂಡರು. ಈ ಪಕ್ಷದವರ ಮುಖ್ಯವಾದವೇನಂದರೆ —

ಮುಸಲ್ಮಾನರು ಇಂಗ್ಲಿಷರನ್ನು ಕಾಫರರೆಂದೂ ತಮ್ಮ ರಾಜ್ಯವನ್ನು ಅಪಹರಿಸಿದವರೆಂದೂ ಅವರಿಂದ ತಾವು ಸಿಂಹಾಸನವನ್ನು ಕಸಕೊಳ್ಳುವದು ಧರ್ಮವೆಂದೂ ಎಣಿಸುವರು. ಹಿಂದೂಗಳು ಇಂಗ್ಲಿಷರನ್ನು ಮ್ಲೇಚ್ಛರೆಂದೂ ಜಾತಿಬಾಹಿರರೆಂದೂ ಎಣಿಸುವರು. ಈ ಅಭಿಪ್ರಾಯಗಳನ್ನು ಇನ್ನಷ್ಟು ಬಲಪಡಿಸುವ ಗ್ರಂಥಗಳನ್ನು ಇವರಿಗೆ ಬೋಧಿಸಿದರೆ ತಾವೇ ತಮಗೆ ಪ್ರತಿಕೂಲವಾದ ಕೆಲಸ ಗೈದಂತಾಗುವದು. ಇಂತಹ ಜನರು ಬಲತ್ಕಾರದಿಂದ ರಾಜ್ಯವನ್ನು ಕಸಕೊಳ್ಳ ನೋಡುವರು.

ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕಲಿತರೆ ದೇಶೀಯರು ಇಂಗ್ಲಿಷರ ರಾಜ್ಯಪದ್ಧತಿಯನ್ನು ತಿಳಿದು ಇಂಗ್ಲಿಷ್ ರಾಜ್ಯಭಾರದ ಮೂಲಕವೇ ತಾವು ಸಹಾ ಆ ಪದ್ಧತಿಯನ್ನು ಕಲಿಯಬೇಕೆಂಬ ಇಚ್ಛೆಯು ಅವರಲ್ಲಿ ಹುಟ್ಟಿ ತಮ್ಮ ಬೆಂಬಲವನ್ನು ಅವರು ಬಿಡರು. ಹಾಗೆ ಕ್ರಮೇಣ ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕ ಅವರು ಸ್ವರಾಜ್ಯಕ್ಕೆ ಅರ್ಹರಾದರೆ ಕಲಹವಿಲ್ಲದೆ ಮಿತ್ರಭಾವದಿಂದ ಔತ್ತರಲ್ಯಕ್ಕೆ ಕೊಡೋಣಾದಂತೆ ಅವರಿಗೆ ಸ್ವರಾಜ್ಯ ಸಿಕ್ಕುವದು, ಪರಸ್ಪರ ಪ್ರೀತಿ ಬಾಳುವದು.

ಜನರಿಗೆ ಇಂಗ್ಲಿಷ್ ಕಲಿಸಿದರೆ ರಾಜ್ಯ ಕಾರ್ಯನಿರ್ವಾಹವು ಸುಲಭವಾಗುವದು.

ಯೂರೋಪೀಯ ಶಾಸ್ತ್ರವಾಙ್ಮಯಗಳು ಅತ್ಯುತ್ಕೃಷ್ಟವಾಗಿರುವದರಿಂದ ಅವನ್ನು ಜನರಿಗೆ ಕಲಿಸತಕ್ಕದ್ದು, ಆಗ್ಯೆ ಅವರು ಇಂಗ್ಲೀಷ್ ಸರಕಾರದ ಕಡೆಗೆ ಶ್ರದ್ಧೆಯಿಂದ ನಡೆಯುವರು. ಹಿಂದಿನ ರೋಮ ಸಾಮ್ರಾಜ್ಯದಲ್ಲಿ ಇದೇ ರೀತಿ ನಡೆಯುತ್ತಿತ್ತು.

ಇಂಗ್ಲಿಷ ವಿದ್ಯಾಭ್ಯಾಸದ ಪರಿಣಾಮವು ತಮಗೆ ಪ್ರತಿಕೂಲವೇ ಆದರೂ ಜನರಿಗೆ ವಿದ್ಯೆಯನ್ನು ಕೊಡದಿರಬಾರದು. ... ಕರ್ತವ್ಯ ... ನದಿ ... ಲೋರ್ಡ್ ... ಲೋರ್ಡ್ ಮೆಕಾಲೆಯವರನ್ನು ಕಮಿಟಿಯ ಅಧ್ಯಕ್ಷರನ್ನಾಗಿ ನೇಮಿಸಿದಾಗ ಅವರು ತಮ್ಮ ... ಇಂಗ್ಲಿಷ್

ವಿದ್ಯಾಭ್ಯಾಸದ ಮಹಿಮೆಯನ್ನು ಪ್ರತಿಪಾದಿಸಿ ರಿಪೋರ್ಟು ಬರಕೊಂಡರು. ಗವರ್ನರ್ ಜನರಲರು ಇದನ್ನು ಒಪ್ಪಿ ಇಂಗ್ಲಿಷ್ ಪದ್ಧತಿಯನ್ನು ಜ್ಯಾರಿಗೆ ತರುವಂತೆ ಶಾಸನ ಮಾಡಿದರು.

ಇಂಗ್ಲಿಷ್ ವಿದ್ಯೆ, ಇಂಗ್ಲಿಷ್ ಚರಿತ್ರೆಗಳನ್ನು ಪರಿಶೀಲಿಸಿ ವ ಇಂಗ್ಲಿಷರ ಸಂಪರ್ಕವನ್ನು ಬೆಳೆಸಿದ್ದರಿಂದ ಹೊಂದಿದ ತಮ್ಮ ಯೋಗ್ಯತೆಗೆ ಅನುಸಾರವಾಗಿ ಸ್ವತಂತ್ರಗಳು ಸಿಕ್ಕಬೇಕೆಂದು ನಿಯಮಾನುಸಾರ ಸರಕಾರವನ್ನು ಕೇಳಿಕೊಳ್ಳುವ ಅಸಂತುಷ್ಟ ಭಾವವು ತಿರಸ್ಕರಣೀಯವೆಂದು ಯಾರು ಹೇಳಲಾಪರು? ರಾಜದ್ರೋಹದ ಮಾತು ಬೇರೆ. ಇಂಗ್ಲಿಷ್ ವಾಙ್ಮಯದಿಂದ ರಾಜದ್ರೋಹ ಹುಟ್ಟುವದು ಅಸಂಬದ್ಧ. ಭಗವದ್ಗೀತೆಯು ರಾಜದ್ರೋಹವನ್ನು ಕಲಿಸುವದೇ? ಆದರೂ ರಾಜದ್ರೋಹಿಗಳು ತಮ್ಮ ಸಿದ್ಧಾಂತಗಳನ್ನು ಗೀತೆಯ ಮೇಲೆ ಆದರಿಸಿರುವರೆಂದು ಸರ್ [illegible] ಸ್ಪಷ್ಟ ಕೊಡಿಸಿದರಲ್ಲ? ಆರೋಗ್ಯಕ್ಕೆ ಸಹಕಾರಿಯಾದ ದ್ರಾಕ್ಷೆಯನ್ನು ದುರುಪಯೋಗಕ್ಕೆ ಹಾಕಿ ಅದರ ಸಾರಾಯಿ ಕುಡಿದು ಒಬ್ಬನು ಮತಿ ಭ್ರಷ್ಟನಾದರೆ ದ್ರಾಕ್ಷೆಯನ್ನು ದೂರುವರೇ?

ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪರಿಪಕ್ವರಾದ ಭಾರತೀಯರು ಸಂದೇಹವಿಲ್ಲ ಪ್ರೀತಿಪರರಾಗಿ ಅವಲಂಬಿಸಿದೆ. ಆದರೆ ಇಂಗ್ಲಿಷ್ ವಿದ್ಯಾಭ್ಯಾಸವು ಸಾಧಾರಣರಿಗೆ [illegible] ಸಾಧಾರಣರಿಗೆ ಮೂಲಶಿಕ್ಷಣವನ್ನಾದರೂ ಉಚಿತವಾಗಿ ಕೊಟ್ಟ ವಿನಹ ದೇಶದ ಅಭಿವೃದ್ಧಿಗೆ ತೊಡಕಾಗುವದೆಂದು ನಮಗೆ ತೋರುವದು.

ಮಂಗಳೂರು ಶ್ರೀ ಉಮಾಮಹೇಶ್ವರ ದೇವಸ್ಥಾನದ ವರದಿ

ರಿಜಿಸ್ಟ್ರಿ ಮಾಡಲ್ಪಟ್ಟ ನಿಯಮಿತ ವ್ಯಾಪಾರ ಸಂಘಗಳ ವರದಿ, ಬೆಂಕುಗಳ ವರದಿ, ಶಾಲೆಗಳ ವರದಿ, ಈ ರೀತಿ ಬೇರೆ ಬೇರೆ ವಿಧ್ಯಾಭ್ಯಾಸವನ್ನು [illegible] ಹಲವು ಸಂಸ್ಥೆಗಳ ಸ್ಥಿತಿಗತಿಯನ್ನು ಜನ ಸಮುದಾಯಕ್ಕೆ ತಿಳಿಸುವ ವರದಿಗಳ ಪ್ರಕಟಣೆಗಳನ್ನು ನಾವು ನೋಡಿದ್ದೇವೆ. [illegible] ದೇವಸ್ಥಾನಗಳ ವರದಿ [illegible] ನೂತನವಾದ ವಿಷಯವು. ದೇವಸ್ಥಾನಗಳ ಲೆಕ್ಕಗಳನ್ನು ಪರಿಶೋಧಿಸಿ ಅವುಗಳ [illegible] ರವನ್ನು ನಿರ್ಣಯಿಸುವದು ಶಾಸ್ತ್ರ ವಿರುದ್ಧ [illegible] ತಿಳಿಯುವದು ಮೊಕ್ತೇಸರರಲ್ಲದ ಸಾಧಾರಣ [illegible] ಅವನ್ನು [illegible] ಪ್ರಕಟಿಸುವದೆಂದರೆ ಮಹಾ ದೊಡ್ಡ ದೋಷ. ಇಂಥ [illegible] ಜನಸಾಮಾನ್ಯರಲ್ಲಿದ್ದು ಮೊಕ್ತೇಸರರ [illegible] ಯಾವ ರೀತಿ ದೇವಸ್ಥಾನಗಳನ್ನು ನಡಿಸುವರೆಂಬ ಈ [illegible] ವಾದಿಸುವದು ಯುಕ್ತವಲ್ಲ. ದೇವಸ್ಥಾನಗಳ [illegible] ವಾಗಿ ಪಸ್ಥಾಪಿಸಿರುವೆವು. ಕೆಲವರು [illegible] ವರ್ತಿಗಳು, ಕೆಲವರು [illegible] ಕೆಲವರು ಇಂಗ್ಲಿಷ್ ವಿದ್ಯಾಭ್ಯಾಸವನ್ನು [illegible] ಪಕ್ಷತ ತುಂಬಿರುವ ರಾಷ್ಟ್ರೀಯ ಭಾವ ಪೇಟರು [illegible] ಕೂಡಿದ್ದ ಈ ಸಂದಿಗ್ಧ ಸಮಯದಲ್ಲಿ [illegible] ದೆಯೂ ಸಭೆಕೂಡಿ ಏಕಮನಸ್ಸಿನಿಂದ ಮಂಗಳೂರಿನ ಸಾರಸ್ವತ ಬ್ರಾಹ್ಮಣರು ತಮ್ಮ ದೇವಸ್ಥಾನದ ಲೆಕ್ಕಗಳನ್ನು ಪರಿಶೋಧಿಸಿ ಅವನ್ನು [illegible] ವಾಗಿ ಪ್ರಕಟಿಸಿದ್ದರಿಂದ ಸಮಾಜ ಅಭಿವೃದ್ಧಿ [illegible] ಉಂಟುಮಾಡದಿರದು. ಪ್ರೌಢವಿದ್ಯಾವ್ಯಾಸಂಗ [illegible] ರುವ ಸಾರಸ್ವತರ ಈ ವರ್ತನೆಯು [illegible] ಜೋಯವೂ ಆಗಿದೆ. ಈ ದೇವಸ್ಥಾನದ ವರದಿಯಿಂದ [illegible] ವಿದ್ಯಾಭ್ಯಾಸ [illegible] ಪಡೆದ ಗೃಹಸ್ಥರು ದೇವಸ್ಥಾನದ ಮೊಕ್ತೇಸರಿಕೆಗೆ ನೇಮಕವಾಗುವರೆಂತ ತೋರುತ್ತದೆ. ವಿದ್ಯಾಲಾಭವನ್ನು ಪಡೆದಿರುವ ಮಾಜಿ ಸಬ್ ಜಡ್ಜರಾಗಿದ್ದ ಮ॥ ರಾ॥ ರಾ॥ ಸುಜೀರ ರಘುನಾಥಯ್ಯನವರೂ ವಕೀಲ ಮ॥ ರಾ॥ ರಾ॥ ಗಂಗೊಳ್ಳಿ ಕೃಷ್ಣರಾಯರೂ ಮೊದಲಾದವರು ಹಿಂದೂ ಸಮಾಜದ ಸರ್ವ ಅಭಿವೃದ್ಧಿಯ ಸಾಧನೆಗಳಿಗೆ ಮೂಲವಾದ ದೇವಸ್ಥಾನಗಳ ಕಾರ್ಯನಿರ್ವಾಹವನ್ನು ಕೈಕೊಂಡಿರುವುದರಿಂದ ದೇವಸ್ಥಾನವು ಅಭಿವೃದ್ಧಿಗೊಂಡು ಎಲ್ಲಾ ವಿಷಯಗಳಲ್ಲಿಯೂ ಇತರ ಜಾತಿಯವರಿಗೆ ಒಳ್ಳೇ ಮಾದರಿಯಾಗುವಂತೆ ಸಾಧಿಸುವರಾಗಿ ಕೋರುತ್ತೇವೆ.

ಮಂಗಳೂರು ಶ್ರೀ ಉಮಾಮಹೇಶ್ವರ ದೇವಸ್ಥಾನದ ವರದಿಯು, ಜನವರಿ ತಾರೀಕು ೨ರಲ್ಲಿ ದೇವಸ್ಥಾನದಲ್ಲಿ ಕೂಡಿದ ಸಭಾ ವೃತ್ತಾಂತವನ್ನೂ, ೧೮೮[illegible]ನೇಯಿಂದ ೧೯೦[illegible]ನೇ ವರೇಗಿನ ವರುಷಗಳ ಲೆಕ್ಕ ಪರಿಶೋಧನೆಯನ್ನೂ, ದೇವಸ್ಥಾನದ ಸಂಕ್ಷಿಪ್ತ ಚರಿತ್ರವನ್ನೂ ಒಳಕೊಂಡಿರುವುದು. ಜನವರಿ ತಾರೀಕು ೨ರಲ್ಲಿ ಈ ದೇವಸ್ಥಾನದಲ್ಲಿ ನೆರದ ಸಭೆಗೆ ಮ. ರಾ. ರಾ. ಮಾಜಿ ಡೆಪ್ಯುಟಿ ಕಲೆಕ್ಟರ್ ಕಬಾಡ ರಾಮರಾಯರವರು ಅಧ್ಯಕ್ಷರಾಗಿದ್ದರು. ಮ॥ ರಾ॥ ರಾ॥ ಭಾರದ್ವಜ ಶಿವರಾವ್, ಉಳ್ಳಾಲ ಸವೂರ ರಾಘವೇಂದ್ರರಾವ್, ನಾಗರಮಠ ರಾಮಪ್ಪಯ್ಯ, ತ್ರಾಶಿ ಸುಬ್ಬರಾವ್, ಗುಲ್ವಾಡಿ ನಾರಾಯಣ ಭಟಜೀ, ಉಳ್ಳಾಲ ಕೃಷ್ಣರಾವ್, ಪಂಜೆ ಮಂಗೇಶರಾವ್, ಅಡೂರ ಶಿವರಾವ್, ಉದ್ಯಾವರ ಆನಂದರಾವ್, ಸುಜೀರ ರಘುನಾಥಯ್ಯ, ನಾಗ್ರಾಮಿ ಕೃಷ್ಣರಾವ್ ಮೊದಲಾದ ಗೃಹಸ್ಥರು ಸಭೆಯಲ್ಲಿ ಹಾಜರಾಗಿದ್ದರು. ಸಾರಸ್ವತ ಬ್ರಾಹ್ಮಣ [illegible] ಮೆಂಬರರು ನೇಮಿಸಿದ ಸಬ್ ಕಮಿಟಿಯವರು ಮಾಡಿದ್ದ ಲೆಕ್ಕ ಪರಿಶೋಧನೆಯು ಸಭೆಯಲ್ಲಿ ಮಂಜೂರು ಮಾಡಲಾಯಿತು. ದೇವಸ್ಥಾನದ ಭಂಡಾರವನ್ನು ಭದ್ರವಾದ ಸ್ಥಿರಾಸ್ತಿಗಳ ಜವಾಬ್ದಾರಿ ಮೇಲೆ ರೇವಣಾತಿಯಾಗಿಡಬೇಕೆಂತ ನಿರ್ಣಯಿಸಿದ ನಂತರ ಮೊಕ್ತೇಸರರು ಇನ್ನುಮುಂದೆ ಪ್ರತಿ ವರುಷ ಫಾಲ್ಗುಣ ಬಹುಳ ೩೦ಯ ವರೇಗಿನ ಲೆಕ್ಕಗಳನ್ನು ತಯ್ಯಾರಿಸಿ ತನಖಿ ಮಾಡಿಸಿ ಮಾರಣೆ ದಿವಸ ಚೈತ್ರ ಶು [illegible] ಗದ ದಿವಸ ಸಭೆಯ ಮಂಜೂರಾತಿ ಬಗ್ಗೆ ಹಾಜರುಪಡಿಸಬೇಕೆಂತ ನಿಶ್ಚಯಿಸಿದರು. ಚಾಲ್ತಿ ಸಂವತ್ಸರದ ಲೆಕ್ಕ ಪರಿಶೋಧನೆಯನ್ನು ರಾ॥ ಅಡೂರ ಶಿವರಾಯರು ಕೈಕೊಂಡಿರುವರು. ಶ್ರೀ ದೇವಸ್ಥಾನಕ್ಕೆ ಈ ಮೊದಲು ಮೊಕ್ತೇಸರರು ಮ॥ ರಾ॥ ರಾ॥ ತ್ರಾಶಿ ಸುಬ್ಬರಾವ್ ಮತ್ತು ನಾಗರಮಠ ರಾಮಪ್ಪಯ್ಯ ಇವರಿಬ್ಬರೇ ಇದ್ದದರಿಂದ ಮುಕ್ತು ಮೊಕ್ತೇಸರರ ಸಂಖ್ಯೆಯು ಮೊದಲಿನಂತೆ [illegible] ಆಗಬೇಕಾದ್ದರಿಂದ ಮ॥ ರಾ॥ ರಾ॥ ಸುಜೀರ ರಘುನಾಥಯ್ಯ, ಉಳ್ಳಾಲ ಕೃಷ್ಣರಾವ್, ಗಂಗೊಳ್ಳಿ ಕೃಷ್ಣರಾವ್, ಎಲ್ಲೂರು ವೆಂಕಟರಾವ್ ಮತ್ತು ಉ[illegible] ಕೃಷ್ಣರಾವ್ ಈ ಗೃಹಸ್ಥರನ್ನು ಮೊಕ್ತೇಸರರಾಗಿ ನೇಮಿಸುವ ಬಗ್ಗೆ ಠರಾವು ಮಾಡಿದರು. ದೇವಸ್ಥಾನದ ಆಡಳಿತೆ ಬಗ್ಗೆ ಅವಶ್ಯವಿರುವ ಕ್ರಮಗಳನ್ನು ಮೊಕ್ತೇಸರರು [illegible] ಮಂಜೂರಾತಿ ಬಗ್ಗೆ ಇದೇ ಬರುವ ಸಾಧಾರಣ ಸಂವತ್ಸರದ ಚೈತ್ರ ಶುದ್ಧ [illegible] ದಿವಸ [illegible] ಕೂಡುವ ಸಭೆಯ ಮುಂದೆ ಹಾಜರುಪಡಿಸುವರು. ಮ॥ ರಾ॥ ರಾ॥ [illegible] ಸುಬ್ಬರಾಯರು ಈವರೆಗಿನಂತೆಯೇ ಖಜಾನ್‌ಜೀಯವರಾಗಿಯೂ ಮೆನೆಜಿಂಗ್ ಮೊಕ್ತೇಸರರಾಗಿಯೂ ಇರುವರಲ್ಲದೆ ಮ॥ ರಾ॥ ರಾ॥ ಸುಜೀರ ರಘುನಾಥಯ್ಯನವರು [illegible] ಸಹಾಯಕ ಮೊಕ್ತೇಸರರಾಗಿರುವರು. ಮ॥ ರಾ॥ ರಾ॥ ನಾಗರಮಠ ರಾಮಪ್ಪಯ್ಯನವರು ಈವರೆಗಿನಂತೆಯೇ ಲೆಕ್ಕಪತ್ರಗಳನ್ನು ಇಡತಕ್ಕದೆಂತಲೂ, [illegible] ಉಳ್ಳಾಲ ಕೃಷ್ಣರಾಯರು ಸೆಕ್ರೆಟರಿ ಯಾನೆ ಕಾರ್ಯದರ್ಶಿಗಳಾಗಿರಬೇಕೆಂ[illegible]ಯಿಸಲಾಯಿತು.

ಸಾರಸ್ವತ ಬ್ರಾಹ್ಮಣರ ಸಮುದಾಯವು ಇಲ್ಲಿ ಬಹಳ ಅಧಿಕವಾಗಿಲ್ಲವಾದ್ದರಿಂದ ದೇವಸ್ಥಾನದ ಪಂತೂ ಹೇರಳವಾಗಿರುವದಿಲ್ಲ. ವರದಿಯಲ್ಲಿ ಕಳೆದ ಇಪ್ಪತ್ತೆಂಟು ವರುಷಗಳ ಆದಾಯವೆತ್ತವ ಪಟ್ಟಿಯಿಂದ ಶ್ರೀ ದೇವರ ಬೆಂಡಾರಕ್ಕೆ ಆದಾಯವಾಗಿ [illegible]—[illegible]—೦ ಹೊರತು ದೇವರ ಫಂಡಿನಿಂದ ರೂ ೨,೮೯೦—೧೫—೬ ವಿಕಾಸ ರುವುದಾಗಿ ತೋರುತ್ತದೆ. ದೇವಸ್ಥಾನದಲ್ಲಿ ನಡಿಯಬೇಕಾಗಿದ್ದ ನಿತ್ಯಕಟ್ಟಳೆಯ ವಿಧಿಗಳಿಗೂ ಇತರ ಉತ್ಸವಾದಿ ವಿಧಿಗಳಿಗೂ ಸಾಕಷ್ಟು ಹಣವನ್ನು ಸಂಗ್ರಹಿಸಿಕೊಂಡು ದೇವಸ್ಥಾನದ ಪಂತನ್ನು ವೃದ್ಧಿಯಾಗಲು ವಿಡಬೇಕಾಗಿರುವುದು. ದೇವಸ್ಥಾನಕ್ಕೆ ಯಮುನಾ ವರುಷ ಒಂದಕ್ಕೆ ಎರತಕ್ಕ ರೂ [illegible] ಹುಟ್ಟುವಳಿ ಇರುವುದಾಗಿ ಕಾಣುತ್ತದೆ. ವನ ಶ್ರೀ ಉಮಾಮಹೇಶ್ವರ ಫಂಡಿನ ಬಾಬತು ರೂಪಾಯಿ [illegible]—[illegible]—೦ ಇರುವುದು.

ಈ ದೇವಸ್ಥಾನವು ಶಾಲಿವಾಹನ ಶಕವರುಷ ೧೬೬೬ನೇ ರಕ್ತಾಕ್ಷಿ ಸಂವತ್ಸರದಲ್ಲಿ ಸಾರಸ್ವತ ಬ್ರಾಹ್ಮಣರಲ್ಲಿ ಪ್ರಮುಖರಾದ ಬೋಕಡಿ ವೆಂಕಟೇಶಯ್ಯನವರಿಂದ ಸ್ಥಾಪಿಸಲ್ಪಟ್ಟಿತು. [illegible] ಇದಕ್ಕೆ ಬೋಕಡಿಮಠವೆಂಬ ಹೆಸರಿತ್ತೆಂಬದಾಗಿ ತಿಳಿದುಬರುತ್ತದೆ. ಸರಕಾರ ತಸ್ತೀಕು ಇತ್ಯಾದಿ ವಿನಿಯೋಗಗಳನ್ನು ನಡಿಸಲಿಕ್ಕೆ ತಕ್ಕದಾದ ಹುಟ್ಟುವಳಿ ಇಲ್ಲದೆ ಕ್ರಮೇಣ ಸಾರಸ್ವತ ಜಾತಿ ಗೃಹಸ್ಥರು ಬೋಕಡಿ ಮನೆತನದವರಿಂದ ಇದನ್ನು ವಹಿಸಿಕೊಂಡು ಶ್ರೀ ಉಮಾಮಹೇಶ್ವರ ದೇವಸ್ಥಾನವೆಂತ ಹೆಸರಿಟ್ಟು ವಿನಿಯೋಗ ಮೊದಲಾದವುಗಳನ್ನು ನಡಿಸುವದೆ ಹಣ ಸಂಗ್ರಹಿಸಿದರು. ಇದಕ್ಕೆ ದೊರೆತನದ ತಸ್ತೀಕು ಸಹಾ ಏರ್ಪಟ್ಟು ಪ್ರಕೃತ ವರುಷ ಒಂದಕ್ಕೆ ರೂ 96 ಪ್ರಕಾರ ಈ ದೇವಸ್ಥಾನಕ್ಕೆ ತಸ್ತೀಕು ದೊರಿಯುತ್ತಿರುವದು. ಮೊದಲು ದೇವಸ್ಥಾನಕ್ಕೆ ಏಳು ಜನ ಮೊಕ್ತೇಸರರಿದ್ದು ನಂತರದಲ್ಲಿ ಕ್ರಮೇಣ ದೇವಸ್ಥಾನದ ಆಡಳಿತೆಯು ರಾ॥ ತ್ರಾಶಿ ಸುಬ್ಬರಾಯರ ಮತ್ತು ನಾಗರಮಠ ರಾಮಪ್ಪಯ್ಯನವರ ಕೈಸೇರಿತೆಂತಲೂ ಇವರ ಆಡಳಿತೆಯಲ್ಲಿ ವೇದಮೂರ್ತಿ ಸಾವಕಾರ ನಾರಾಯಣ ಭಟ್ಟರು ದತ್ತಾತ್ರಯ ದೇವಸ್ಥಾನವನ್ನು ಸ್ಥಾಪಿಸಿದರೆಂತಲೂ ತಿಳಿಯುತ್ತೇವೆ. ಪ್ರಕೃತ ನೇಮಿಸಲ್ಪಟ್ಟ 7 ಜನ ಮೊಕ್ತೇಸರರ ಆಡಳಿತೆಯಲ್ಲಿ ದೇವಸ್ಥಾನದ ವೃದ್ಧಿಯನ್ನೂ ಇದರೊಂದಿಗೆ ಸಾರಸ್ವತ ಬ್ರಾಹ್ಮಣ ಸಮಾಜದ ಅಭಿವೃದ್ಧಿಯನ್ನೂ ಎದುರುನೋಡುತ್ತಿರುವೆವು.

ಮಲ್ಲಪ್ಪನೂ ರುದ್ರಪ್ಪನೂ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು).

ರುದ್ರಪ್ಪನಿಗೆ ಕಡಿಮೆಯಾದರೆ, ಆರು ವರುಷಗಳ ಕಾರಾಗೃಹವಾಸದ ಶಿಕ್ಷೆಯು ಪ್ರಾಪ್ತವಾಗುವದರಲ್ಲಿ ಅನುಮಾನವಿಲ್ಲ—ಪಾಪ! ಎಂಥಾ ಮಾತು ಆಡಿದರೂ ಅವಳು ಹೆಂಗಸ್ಸು—ಏಳು ತಿಂಗಳು ತುಂಬಿದ ಗರ್ಭಿಣಿ—ಅವಳನ್ನು ಹೊಡಿಯುವುದೇ— ಈ ರೀತಿ ಸಾವಿರ ಗ್ರಾಮದಲ್ಲಿ ಎಲ್ಲೆಲ್ಲಿಯೂ ಮಾತಾಡುತ್ತಿದ್ದರು. ಮಲ್ಲಪ್ಪನ ಮನೆಯವರು ತಮ್ಮ ಈ ತಂಟೆಯೋರ [illegible] ದಿನಗಳು [illegible] [illegible]

ಮಲ್ಲಪ್ಪನ ಸೊಸೆಯು ಚೆನ್ನಾಗಿ ಹೊಡದ ಪೆಟ್ಟಿನಿಂದ ಒಂದೆರಡು ಗಳಿಗೆ ಸ್ಮೃತಿ ತಪ್ಪಿ ಬಿದ್ದದ್ದೇ ಹೊರತು ಮತ್ತ್ಯಾವ ಅಪಾಯವೂ ಆಕೆಗೆ ಇದರಿಂದ ಸಂಭವಿಸಲಿಲ್ಲ. ಪೆಟ್ಟಿನ ಗುರುತುಗಳು ಯಾವುದಾದರೂ ಸಹಾ ಆಕೆಯಲ್ಲಿ ತೋರಿಬರುತ್ತಿದ್ದಿಲ್ಲ ಮಲ್ಲಪ್ಪನು ಯಥಾರೂಢಿ ಪ್ರಕಾರ ಪಟ್ಟಣದ ಮೇಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಲು ಮಾಡಿದನು. ಈ ಸರ್ತಿಯ ಕ್ರಿಮಿನಲ್ ಮೊಕದಮೆಯಲ್ಲಿ ರುದ್ರಪ್ಪನಿಗೆ ಜೈಲು ಪ್ರಾಪ್ತವಾಗುವದೆಂಬುವುದರಲ್ಲಿ ಮಲ್ಲಪ್ಪನಿಗೆ ಸಹಾ ಏನೂ ಅನುಮಾನವಿರಲಿಲ್ಲ ಆದರೆ ಮಲ್ಲಪ್ಪನ ಈ ಕೋರಿಕೆಯು ಬಯಲಾಯಿತು ಮೊಕದಮೆಯಲ್ಲಿ ತಕ್ಕದಾದ ರುಜುವಾತೂ ಪೆಟ್ಟುಹೊಡದ ಗುರುತುಗಳೂ ಕಾಣಬರುವದಿಲ್ಲವೆಂತ ಮೇಜಿಸ್ಟ್ರೇಟರು ಮೊಕದಮೆಯನ್ನು ತೆಗದುಹಾಕಿದರು! ಆಶಾಭಂಗನಾದ ಮಲ್ಲಪ್ಪನು ಮೇಲುಕೋರ್ಟು ಮೇಜಿಸ್ಟ್ರೇಟರಲ್ಲಿ ರಿವಿಜನ್ ಅರ್ಜಿ ದಾಖಲುಮಾಡಿ ಈ ಮೇಜಿಸ್ಟ್ರೇಟರ ಗುಮಾಸ್ತೆಗೆ ತನ್ನ ಮೊಕದಮೆಯ ರಿಕಾರ್ಡನ್ನು ತಕ್ಕದಾದ ರೀತಿಯಲ್ಲಿ [illegible] ವ ಬಗ್ಗೆ ರಸಬಾಳೆ ಹಣ್ಣುಗಳ ದೊಡ್ಡದೊಂದ [illegible] ಗೊಂಚಲುಗಳನ್ನೂ ನಾಲ್ಕು ಕುತ್ತಿ ದನವಿನ ತುಪ್ಪವನ್ನೂ ಇನಾಮಾಗಿ ಕೊಟ್ಟನು ಮೊಕದಮೆಯನ್ನು ಪುನಹಾ ಬೆಂಚು ಮೇಜಿಸ್ಟ್ರೇಟರುಗಳಲ್ಲಿ ತನಖಿಯಾಗುವಂತೆ ಮೇಲುಕೋರ್ಟಿ [illegible] ಗಿ ಬೆಂಚ್ ಮೇಜಿಸ್ಟ್ರೇಟರು ರುದ್ರಪ್ಪನಿಗೆ [illegible] ಕೋರ್ಟು ಗುಮಾಸ್ತನು ಬಹಿರಂಗವಾಗಿ ಶಿಕ್ಷೆಯ ಈ ತೀರ್ಮಾನವನ್ನು [illegible] ವಾಗ ರುದ್ರಪ್ಪನ ಮುಖವು ಇದನ್ನು ಕೇಳಿ [illegible] ವದೆಂ [illegible] ಮಲ್ಲಪ್ಪನು ನೋಡುತ್ತಲಿದ್ದನು ಇಪ್ಪತ್ತೆನಾಲ್ಕು ಚಡಿಗಳ ಶಿಕ್ಷೆಯಲ್ಲವೇ? ಇದನ್ನು ಕೇಳಿ ರುದ್ರಪ್ಪನ ಮುಖಛಾಯೆಯು ಕುಂದಿತು, ತಲೆ ತಗ್ಗಿತು "ಅನ್ಯಾಯವಾಗಿ ನನ್ನನ್ನು ಶಿಕ್ಷಿಸುತ್ತಾರಲ್ಲಾ, ಎಂಬ ಮನೋವ್ಯಥೆಯಿಂದ ಕಣ್ಣೀರು ತುಂಬಿ [illegible] ದತ್ತಕಡೆಯಿಂದ ಮುಖ ತಿರುಗಿಸಿ ಕೋರ್ಟು [illegible] ಶಿಕ್ಷೆಯ [illegible] ವಾಗ ಕೋರ್ಟುಬಾಗಲಲ್ಲಿಯೇ ಕಣ್ಣುಗಳನ್ನು [illegible] ಈ [illegible] ಮಲ್ಲಪ್ಪನು ಸಾಹಸಪಟ್ಟು ನನ್ನ ಬೆನ್ನಿಗೆ ಕೊರಡೆಗಳನ್ನು ಹೊಡಿಯುವಂತೆ ಮಾಡಿಸಿದನು ಕೊರಡೆಗಳ ಪೆಟ್ಟಿನಿಂದ ಬೆನ್ನುರಿಯುವದು! [illegible] ಈ [illegible] ಬೇನೆಕ್ಕಿಂತಲೂ ಹತ್ತಮ್ಮು ಅಧಿಕವಾದ [illegible] ಮಾಡುವಂತೆ ಸಾಧಿಸುವೆನು—ಎಂತ [illegible] ತನನ್ನು [illegible] ಹೋಗಿದ್ದ ಮಲ್ಲಪ್ಪನು ಕೇಳಿ ಕೂಡಲೇ ಕೋರ್ಟು ಮುಂದೆ ಹೋಗಿ ನ್ಯಾಯಾಧಿ [illegible] ನ್ನು ಕುರಿತು— ಸ್ವಾಮಿ ನನ್ನ ಮನೆಗೆ ಬೆಂಕಿ ಇಡುವನೆಂತ [illegible] ಕೂಡಲೇ ವಿಚಾರಣೆಯಾಗತಕ್ಕದ್ದು ಕೇಳಿದ [illegible] ಇದ [illegible] ವನೆಂತ ವಿಜ್ಞಾಪಿಸಿಕೊಂಡನು

ಮಲ್ಲಪ್ಪನ ಬಿನ್ನಪವನ್ನು ಕೋರ್ಟಿನವರು ಕೇಳಿ [illegible] ಸಿದರು ರುದ್ರಪ್ಪನಿಗೆ ವಿಚಾರಣೆಯಾಯಿತು

"ಮಲ್ಲಪ್ಪನ ಮನೆಗೆ ಬೆಂಕಿ ಕೊಡ ತ್ತೇನೆಂತ [illegible]

"ನಾನೇನೂ ಹೇಳಲಿಲ್ಲ ನಿಮಗಂತೂ [illegible] ಇನ್ನಷ್ಟು ಬೇಕಾದರೆ ಶಿಕ್ಷಿಸಿರಿ! ನನ್ನದೇನೂ ಅನ್ಯಾಯವಿಲ್ಲದಿದರೂ [illegible] ಗುರಿಮಾಡಲ್ಪಟ್ಟಿರುವೆನು! ಅವನಿಗಾದರೋ [illegible] ಬಿಡುವಿರಿ!"

ರುದ್ರಪ್ಪನಿಗೆ ಇನ್ನಷ್ಟು ಮಾತಾಡಲು [illegible] ಯಿಂದಲೂ ಶಿಟ್ಟಿನಿಂದಲೂ ತುಟಿ [illegible] ಕೈಕಾಲೆಲ್ಲಾ ಕಂಪಿಸಿದವು ಮಾತಾಡಲಿಕ್ಕಾಗದೆ ಸ್ವರವು ಗದ್ಗದಿಸಿತು [illegible] ತಿರುಗಿಸಿದನು ನ್ಯಾಯಾಧಿಕಾರಿಗಳು ಆತನ ವೃತ್ತಿಯನ್ನು [illegible] ಆಪಾಯ ತರುವವನೇ ಎಂತ ಬಾವಿಸಿದರು

"ಏನಯ್ಯಾ, ರುದ್ರಪ್ಪ ಮಲ್ಲಪ್ಪನವರೇ, ನೀವು ಯಾಕೆ ರಾಜಿಯಾಗಕೂಡದು? ರುದ್ರಪ್ಪಾ, ಇತ್ತ ಕೇಳು, ಗರ್ಭಿಣಿ ಹೆಂಗಸನ್ನು ಹೊಡೆದ ನಿನ್ನ ಕೃತ್ಯವು ಅನುಚಿತವಲ್ಲವೇ? ಸುದೈವವಶಾತ್, ಆ ಹೆಂಗಸಿಗೇನೂ ಅಪಾಯ ಉಂಟಾಗಲಿಲ್ಲ ಹಾಗೇನಾದರೂ ಉಂಟಾದ್ದಲ್ಲಿ ಬಹಳ ಅನರ್ಥಕ್ಕೆ ಕಾರಣವಾಗುತ್ತಿತ್ತಲ್ಲ ಮಲ್ಲಪ್ಪನ ಕ್ಷಮೆಯನ್ನು ಕೇಳಿ ಇಬ್ಬರೂ ರಾಜಿಯಾಗಿರಿ ನಮ್ಮ ತೀರ್ಮಾನವನ್ನು ಸಹಾ ಬದಲಾಯಿಸುವೆವು."

ಬೆಂಚು ಮೇಜಿಸ್ಟ್ರೇಟರು ಈ ರೀತಿ ಹೇಳಿದ್ದನ್ನು ಕೇಳಿ ಕೋರ್ಟು ಗುಮಾಸ್ತನು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿಗೆ ಈ ಅನುಸರಣೆಯು ವಿರೋಧವೆಂತ ಸೂಚಿಸಿದರೂ—"ಗುಮಾಸ್ತರೇ, ಒಂದಿಷ್ಟು ತಮ್ಮ ಪುಸ್ತಕವನ್ನೂ ಬಾಯಿಯನ್ನೂ ಮುಚ್ಚಿಬಿಡಿ ಎಲ್ಲಾ ನ್ಯಾಯನಿಯಮಗಳ ಕರ್ತನು ದೇವರಾಗಿರುವನು. ಶಾಂತಾಕಾರನಾಗಿದ್ದು ಆತನು ಶಾಂತಿಪ್ರಿಯನಾಗಿರುವನು. ಶಾಂತಿಯನ್ನುಂಟುಮಾಡುವುದರಿಂದ ಆತನಿಗೆ ವಿಧೇಯವಾಗಿ ನಡೆಯುವೆವು. ಇದೇ ಪ್ರಥಮ ಕಾನೂನು ಎಲ್ಲಾ ಕಾನೂನುಗಳ ಮೂಲತತ್ವವು ಆಗಿರುವದು."

ಆದರೆ ರುದ್ರಪ್ಪನಂಥಾ ಮೂರ್ಖನಿಗೆ ಎಷ್ಟು ಬುದ್ಧಿ ಹೇಳಿದರೂ ಅದು ಧೂರ್ತ [illegible] ಮೇಲೆ ಸುರಿದ ಮಳೆನೀರಿನಂತೆ ವ್ಯರ್ಥವಾಯಿತು.

ಮಲ್ಲಪ್ಪನಾದರೋ ಕೋರ್ಟಿನಿಂದ ಮನೆಗೆ ತೆರಳಿದನು. ಮನೆಗೆ ಬಂದು ತಲ್ಪುವಾಗ ಸೂರ್ಯನು ಅಂತರಿಕ್ಷದಲ್ಲಿ ಒಂದೆರಡು ಗಳಿಗೆ ಸಮಯವಿತ್ತು! ಮನೆಯಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಗದ್ದೆ ಕೆಲಸದ ಬಗ್ಗೆ ಹೊರಗಿದ್ದರು. ಮಲ್ಲಪ್ಪನು ಕೈಕಾಲುಗಳನ್ನೆಲ್ಲಾ ತೊಳಕೊಂಡು ಚಾಪಡಿಯ ಎದುರು ಕೋಣೆಯಲ್ಲಿ ಕುಳಿತುಕೊಂಡನು ಕೋರ್ಟಿನಲ್ಲಿ ನಡದ ವೃತ್ತಾಂತವೆಲ್ಲವನ್ನೂ ಆತನು ಒಂದೊಂದಾಗಿಯೇ ಯೋಚಿಸುತ್ತಿದ್ದನು ಮೊಕದಮೆಯ ತೀರ್ಮಾನವನ್ನು ಕೇಳಿ ಛಾಯೆಗುಂದಿದ ರುದ್ರಪ್ಪನ ಮುಖವು ಆತನ ಕಣ್ಣೆದುರು ಬರುತ್ತಿದ್ದಂತೆ ಕಾಣುತ್ತಿತ್ತು ರುದ್ರಪ್ಪನ ಮನಸ್ತಾಪದ

ಇತ್ತ ತುಸು ನೋಡಿರಿ!!!

ಪ್ರಾಸಾದಿಕ ಗ್ರಂಥವು

ಕಲಿಯುಗದಲ್ಲಿ ತುಳಸಿದಾಸ ಕಬೀರ ಮೊದಲಾದ [illegible] ವೈಷ್ಣವ ಭಕ್ತರು ಗೈದ ಅದ್ಭುತಕರಣೆಗಳ ಸರಸ ಕವನವು (ಭಾಮಿನಿಷಟ್ಪದಿ) ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಿಮಹಿಮೆ [illegible] ವಿಧಾನದಿಂದ ಕನ್ನಡಭಾಷೆಯಲ್ಲಿ ಮುದ್ರಿತವಾಗಿಯದೆ ಪ್ಲೇಗಿನಂಥಹ ದುರ್ವ್ಯಾಧಿಗಳ ಪೀಡನಿ [illegible] ಈ ಗ್ರಂಥದ ವಾಚನವೇ ಮುಖ್ಯ [illegible] ವಾಗಿದೆಯೆಂದು [illegible] ತಿಳಿಯಲಿ

ಒಂದು ಪ್ರತಿಯ ಕ್ರಯ 12 [illegible] ಮಾತ್ರ—[illegible] ಹತ್ತು ಪ್ರತಿಗಳನ್ನು ಒಮ್ಮೆಯೇ ಕೊಂಡು ಕೊಳ್ಳುವವರಿಗೆ [illegible] ಎಂಬ ಚಲೋ ಕಾದಂಬರಿಯು ಉಚಿತವಾಗಿ ಶಿಗುವದು

ಈ ಪುಸ್ತಕದ ಕುರಿತು ಒಬ್ಬ ವಿದ್ವಾಂಸ ಮಹಾಶಯರ ಅಭಿಪ್ರಾಯ —

P[illegible]se acc[illegible] [illegible] thanks for the present of your new book about [illegible] Saints. It [illegible] that [illegible] there are [illegible] differences [illegible] the language spoken here and [illegible] part of the country [illegible] language should be [illegible] the same [illegible] The [illegible] and I am [illegible] that the book will [illegible] Kannada speaking people.

(Sd) H V Nanjundayya

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಲಿ

ಡಿ ಊಲನ್ ಮಾರ್ಟ್ ಅಥವಾ ಬೋಳಾರ ಬಾಬುರಾವ್

ಮಂಗಳೂರು ಮಂಗಳೂರು,

ಅಧ್ಯಾತ್ಮ ವಿಚಾರ.

ಸೃಷ್ಟಿಯ ಕುರಿತು, ಪ್ರಾಣಿಗಳು ಹುಟ್ಟುವ ರೀತಿ ಯಾನೆ ಪಂಚಾಗ್ನಿ ವಿದ್ಯ, ಪುರುಷನ ಶರೀರ ವರ್ಣನೆ ಯಾ ಗಾಯತ್ರಿವಿದ್ಯ, ವೈಶ್ವಾನರವಿದ್ಯ ಯಾನೆ ಪ್ರಾಣಾಗ್ನಿಹೋತ್ರದ ಕುರಿತು ಜಾಗ್ರದವಸ್ಥೆ, ನಿದ್ರಾವಸ್ಥೆ ಹೃದಯಪುಂಡರೀಕ ವಿಚಾರ ಬ್ರಹ್ಮವಿದ್ಯ ಮರಣದ ಕುರಿತು ಗತಿ (ಮಾರ್ಗಗಳ) ಕುರಿತು, ಪ್ರತ್ಯಗಾತ್ಮವಿದ್ಯ, ಮೊದಲಾದ ವಿಷಯಗಳುಳ್ಳ ವಾರಗಳನ್ನು ಒಳಕೊಂಡಿರುವ,

ಛಾಂದೋಗ್ಯೋಪನಿಷತ್ ಮೊದಲಾದ ಕೆಲವು ವೈದಿಕ ಗ್ರಂಥಗಳ ಆಧಾರದ ಮೇಲೆ, ಮಂಗಳೂರು ೧ನೇ ಗ್ರೇಡ್ ಪ್ಲೀಡರ್ ಹಳಗೇರಿ ಕೃಷ್ಣರಾಯರವರಿಂದ ರಚಿಸಲ್ಪಟ್ಟಿರುವದು

ಕ್ರಯ ಟಪ್ಪಾಲು ಹಾಸಲು ಹೊರತು ರೂ ೨—೨—೦ ಈ ಪುಸ್ತಕದ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವದು

ಎಚ್ ಕೃಷ್ಣರಾವ್ I ಗ್ರೇಡ್ ಪ್ಲೀಡರ್,
ಮಂಗಳೂರು

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಲೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ [illegible]

ಎಸ್ [illegible]

[illegible]

ಮಾತುಗಳು! ಅಶ್ರುಧಾರೆಗಳು! ಕೋರ್ಟಿನಲ್ಲಿ ನ್ಯಾಯಾಧಿಕಾರಿಗಳು ಆಡಿದ ಮಾತುಗಳು! ಆತನ ಗದ್ಗದ ಸ್ವರ! ಒಂದೊಂದೇಯಾಗಿ ಮಲ್ಲಪ್ಪನ ಯೋಚನೆಗೆ ಬರುತ್ತಿದ್ದವು. ರುದ್ರಪ್ಪನಂತೆಯೇ ತಾನೂ ಶಿಕ್ಷಿಸಲ್ಪಟ್ಟಲ್ಲಿ ತನ್ನ ಮನೋಭಾವನೆಗಳು ಯಾವ ರೀತಿ ಇರುವದಿತ್ತು! ಈ ವಿಚಾರವು ಆತನ ಹೃದಯದಲ್ಲಿ ಮೂಡಿತು. ಅಷ್ಟರಲ್ಲಿಯೇ ಅದೇ ಕೋಣೆಯಲ್ಲಿ ಮಲಗಿದ್ದ ಮಲ್ಲಪ್ಪನ ತಂದೆಯು ರುದ್ರಪ್ಪನಿಗೆ ಶಿಕ್ಷೆ ವಿಧಿಸಿದರೊ ಎಂತ ಕೇಳಿದನು.

ಹೌದು ಇಪ್ಪತ್ತನಾಲ್ಕು ಛಡಿಗಳ ಶಿಕ್ಷೆಯನ್ನು ವಿಧಿಸಿರುವರು"

"ದುಸ್ಸಾಧನೆ—ಸಾಧನೆಯ ಹದ ಮೀರಿತು ಆಪತ್ಕರವಾದ ಸಂಗತಿ—ಮಲ್ಲಪ್ಪನೇ, ಅವನಿಗಿಂತಲೂ ನಿನಗೇನೇ ಇದು ಹೆಚ್ಚು ಅಪತ್ಕರ ರುದ್ರಪ್ಪನಿಗೆ ಛಡಿ ಹೊಡಿಯುವರು. ಆದರೆ ಅದರಿಂದ ನಿನಗೇನು ಪ್ರಯೋಜನ ದೊರಕುವುದು?"

"ಅಪ್ಪಯ್ಯಾ, ಆತನು ಇಂಥಾ ನೀಚ ಕೆಲಸಗಳನ್ನು ಇನ್ನುಮುಂದೆ ಮಾಡನು"

"ನೀಚ ಕೆಲಸ! ನೀನು ಮಾಡಿದಕ್ಕಿಂತಲೂ ನೀಚವಾದ ಯಾವ ಕೆಲಸವನ್ನು ಆತನು ಮಾಡಿರುವನು?"

"ಯಾಕೆ, ಗರ್ಭಿಣಿಯಾದ ನನ್ನ ಸೊಸೆಯನ್ನು ಸಾಯುಹೊಡೆದಿರುವನಲ್ಲದೆ, ಈಗ ನಮ್ಮ ಮನೆಗೆ ಬೆಂಕಿ ಕೊಡುವೆನೆಂದು ಪ್ರತಿಜ್ಞೆಮಾಡಿಕೊಂಡಿರುವನು ಈ ಒಗ್ಗೆ ಆತನನ್ನು ವಂದಿಸಬೇಕೇ?" ಮಲ್ಲಪ್ಪನ ಈ ಮಾತುಗಳನ್ನು ಕೇಳಿ ಮುದುಕನು ಪಶ್ಚಾತ್ತಾಪ ಪಟ್ಟು ಉಬ್ಬಸದಿಂದ ಬಹಿಯಾಗಿ ಮಾತಾಡಲಿಕ್ಕಾಗದಿದ್ದರೂ ದೀರ್ಘಶ್ವಾಸಗಳನ್ನು ಬಿಡುತ್ತಾ ಇಂತೆಂದನು

"ಹಲವು ವರುಷಗಳಿಂದ ನಾನು ಅಸ್ವಸ್ಥನಿದ್ದು ಹೊರಗೆ ಹೋಗಲಿಕ್ಕಾಗದೆ ಇಲ್ಲಿ ಬಿದ್ದುಕೊಂಡಿರುವಾಗ, ಎಲ್ಲಕ್ಕಿಂತಲೂ ನೀನು ಹೊಂದಲು ಶಕ್ತನಾಗಿರುವಿ ನಿನ್ನ ಭಾವನೆ ಏನು? ಯಾವುದೂ ನನ್ನ ಲಕ್ಷ್ಯಕ್ಕೆ ಬರುವುದಿಲ್ಲವೆಂತ ಭಾವಿಸುತ್ತಿಯೋ? ಹೊರಗೆ ಹೋಗದೆ ಈ ಮಂಚದಲ್ಲಿಯೇ ಮಲಗಿಕೊಂಡಿದ್ದರೂ ನಿನ್ನ ಅನುಭವಕ್ಕೆ ಬರುವ ಸಂಗತಿಗಳಿಗಿಂತ ಹೆಚ್ಚು ಸಂಗತಿಗಳು ನನಗೆ ಕಾಣುತ್ತಿರುವವು ನಿನ್ನಲ್ಲಿದ್ದ ಅಸೂಯೆಯೂ ಪರರ ದ್ವೇಷವೂ ನಿನ್ನನ್ನು ಕುರುಡಾಗಿ ಮಾಡುವವು ಪರರ ತಪ್ಪುಗಳು ನಿನ್ನ ಕಣ್ಣೆದುರು ಇರುತ್ತಿರುವಾಗ ನಿನ್ನವು ನಿನಗೆ ಕಾಣದಿರುವವು 'ಆತನು ನೀಚ ಕೆಲಸಗಳನ್ನು ಮಾಡಿದನು' ಎಂದೆನ್ನುವಿ, ಇದರಿಂದ ಪರಸ್ಪರ ಕಲಹಗಳುಂಟಾಗುವುದೆಂತ? ನೀನು ಸಹಾ ಅಂತಹ ನೀಚ ಕೆಲಸಗಳನ್ನು ಮಾಡಿದ್ದರಿಂದಲ್ಲವೇ ಜಗಳ ಹತ್ತುವುದು? ಕಲಹಕ್ಕೆ ನೀಚತನ ಮಾಡುವರಿಬ್ಬರ ಬೇಕಾಗುವರು ವಿನಹಾ ಒಬ್ಬನಿಂದಲೇ ಎಂಥಾ ನೀಚನಾದರೂ ಜಗಳ ಸಾಧ್ಯವೇ? ಆತನ ಕೆಟ್ಟದ್ದನ್ನು ಮಾಡಿದ್ದಲ್ಲಿ ನೀನು ಒಳ್ಳೇದು ಮಾಡಿದರೆ ಕಲಹವು ಹ್ಯಾಗೆ ಸಾಧ್ಯ? ನಮ್ಮ ಕಾಲದಲ್ಲಿ ರುದ್ರಪ್ಪನ ತಂದೆಯೂ ನಾನೂ ಒಬ್ಬರನ್ನೊಬ್ಬರು ಪ್ರೀತಿಸಿ ಪರಸ್ಪರ ಸಹಕಾರಿಗಳಾಗಿದ್ದೆವು. ನಿಮ್ಮೊಳಗಾದರೋ ಕುರುಕ್ಷೇತ್ರ ಮಹಾ ಯುದ್ಧದಂತೆ ಯುದ್ಧವು ನಡಿಯುತ್ತಿರುವುದು ನಿಮ್ಮ ಮಕ್ಕಳು ನಿಮ್ಮನ್ನನುಸರಿಸಿ ಕಲಹಪ್ರಿಯರಾಗಿ ಬೆಳೆಯುತ್ತಿರುವರು. ಸರ್ವ ಅನರ್ಥಗಳೂ ಇದರಿಂದ ಪ್ರಾಪ್ತವಾಗುತ್ತಿರುವವು ಇದಕ್ಕೆ ಹೊಣೆ ಯಾರು? ಈ ಕಮ ಯಾತನೆಗಳನ್ನು ನಿನ್ನ ಪಿತ್ರಾಂತರಗಳು ಸಹ ಅನುಭವಿಸುವರ್‍ಯಾರು? ನೀತಿ ಶಾಸ್ತ್ರವೇನು? ಪವಿತ್ರ ಮತ ಪ್ರ ಮಾಣವೇನು? ಹಿರಿಯರ ಮಾತುಗಳೇನು? ಒಬ್ಬನು ಕೆಟ್ಟ ಮಾತನ್ನಾಡಿದರೆ ಆತನಿಗೆ ಬದಲಾಗಿ ಒಂದಕ್ಕೆ ಎರಡನ್ನಾಡುವುದೇ? ಒಂದು ಪೆಟ್ಟನ್ನು ಹೊಡದರೆ ಅದಕ್ಕೆ ಬದಲಾಗಿ ಎರಡಷ್ಟು ಹೊಡಿಯುವುದೇ? ಸನ್ಮಾರ್ಗಗಾಮಿಗಳ ವರ್ತನೆಯು ಇದಲ್ಲ ಮುಯ್ಯಿಗೆ ಮುಯ್ಯಿ ತೀರುಸುವುದು ಧರ್ಮವಲ್ಲ ಬೈದರೂ ಹೊಡದರೂ ಅವನ್ನು ಸಹಿಸಿಕೊಂಡು ಪ್ರತಿಕ್ರಿಯೆಯನ್ನು ಮಾಡಲಿಕ್ಕೆ ಹೋಗದೆ ಸುಮ್ಮನಿದ್ದರೆ ಆಪಾದಿತನು ಪಶ್ಚಾತ್ತಾಪ ಪಟ್ಟು ಆತನ ತಪ್ಪನ್ನು ಸೂಚಿಸಿಕೊಡುವುದು ಇದೇ ಧರ್ಮ ಮಾರ್ಗ"

ಮುದುಕನ ಬುದ್ಧಿವಾದವು ಇಷ್ಟರಲ್ಲಿ ತೀರಲಿಲ್ಲ ಪ್ರೇಮಗಾಢದ ಮಲ್ಲಪ್ಪನು ಆತನು ಕೈಕೊಂಡಿರುವಂಥಾ ದುರ್ಮಾರ್ಗ ಪ್ರವರ್ತನೆಯಿಂದ ಉಂಟಾಗುವ ನಷ್ಟವನ್ನು ಸಹಾ ವ್ಯಕ್ತಪಡಿಸಿದನು

"ನಿನ್ನ ಮುದಿ ತಂದೆಯ ಮಾತನ್ನು ಇತ್ತ ಕೇಳು, ಈ ಎಲ್ಲ ವ್ಯವಹರಣೆಗಳಿಗೆ ಇಷ್ಟರತನಕ ನಿನಗೇನು ಖರ್ಚಾಗಿರುವುದು? ಗಾಡಿಗಳ ಖರ್ಚು ಎಷ್ಟು, ಊಟದ ಖರ್ಚು ಎಷ್ಟು, ಸಾಕ್ಷಿಗಾರರ ಖರ್ಚೆಷ್ಟು? ನಿನ್ನ ಮಗಂದಿಯರ ಗುಣಗಳೆಷ್ಟು ವಿಕಾರ ಹೊಂದಿರುವವು? ನಿನಗೆ ತಿನ್ನಲಿಕ್ಕೆ ಸಾಕಷ್ಟು ಇತ್ತು ಆದರೆ ಇತ್ತಲಾಗೆ ನಿನಗೆ ಅಲ್ಪಸ್ವಲ್ಪ ಸಾಲವೂ ಆಗಿಯದೆ ಇದಕ್ಕೆಲ್ಲಾ ಕಾರಣವೇನು? ನಿನ್ನ ಅಹಂಕಾರ ನಿನ್ನ ಮಗಂದಿಯರೊಡನೆ ನೀನೇ ಗದ್ದೆಗಳನ್ನು ಹೂಡಬೇಕಿತ್ತು ಆದರೆ ನಿನಗೆ ಸಮಯವಿಲ್ಲ ಈ ಹೊತ್ತು ಆ ಮೇಜಿಸ್ಟ್ರೇಟರಲ್ಲಿ ವ್ಯಾಜ್ಯ, ನಾಳೆ ಮತ್ತೊಂದು ಸಿವಿಲ್ ವ್ಯಹವರಣೆ ಇನ್ನೊಂದು ದಿನ ವಕೀಲರು ಹೇಳಿ ಕಳುಹಿಸುವರು. ಮತ್ತೊಂದು ದಿನ ಸಾಕ್ಷಿಗಾರರಿಗೆ ಭತ್ತೆ ಕಟ್ಟಬೇಕು. ಇನ್ನೂ ಸಾವಿರಾರು ಈ ವಿಧಾನದ ಕೆಲಸಗಳಿಗೆ ನೀನು ಹೋಗುತ್ತಿರಬೇಕು. ಹುಡುವುದಾಗಲೀ, ಬಿತ್ತುವುದಾಗಲೀ, ತಕ್ಕ ರೀತಿಯಲ್ಲಿಯೂ ತಕ್ಕ ಸಮಯದಲ್ಲಿಯೂ ಆಗದೆ ಬೆಳೆ ಕೆಡುತ್ತಿರುವುದು. ಮಗನೇ, ನಿನ್ನ ಸ್ಥಿತಿಯನ್ನು ಪೂರ್ಣವಾಗಿ ಆಲೋಚಿಸಿಕೊ. ನಿನ್ನ ಮಕ್ಕಳೊಂದಿಗೆ ಗದ್ದೆಗಳನ್ನು ಹುಡುತಿರು ಯಾರಾದರೂ ನಿನ್ನನ್ನು ಸಿಟ್ಟಿಗೆಬ್ಬಿಸಿದರೆ ಅವರನ್ನು ಕ್ಷಮಿಸು, ಆವಾಗ್ಗೆ ಶಾಂತಿಯು ನಿನ್ನಲ್ಲಿ ನೆಲಸಿ ನೀನು ಸುಖಿಯಾಗಿರುವಿ."

ಮಲ್ಲಪ್ಪನು ಸ್ತಬ್ಧನಾಗಿ ತಂದೆಯ ಮಾತುಗಳನ್ನೆಲ್ಲಾ ಕೇಳಿದನು.

"ಮಲ್ಲಪ್ಪನೇ ರುದ್ರಪ್ಪನೊಂದಿಗೆ ಸ್ನೇಹಾಚಾರವನ್ನು ಬೆಳಸಲಿಕ್ಕೆ ಇನ್ನೂ ಅವಕಾಶವಿರುವುದು. ಕೂಡಲೇ ಕೋರ್ಟಿಗೆ ಹೋಗಿ ಆತನ ಶಿಕ್ಷೆಯನ್ನು ವಜಾವಾಗುವಂತೆ ಮಾಡಿ ನಾಳೆ ಮಧ್ಯಾಹ್ನ ಊಟಕ್ಕೆ ಆತನಿಗೆ ನಮ್ಮಲ್ಲಿಗೆ ಬರುವಂತೆ ಆಮಂತ್ರಣ ಕೊಡು

ತಂದೆಯು ಹೇಳಿದ್ದೆಲ್ಲಾ ನಿಜವೆಂತ ಮಲ್ಲಪ್ಪನಿಗೆ ತೋರಿತು. ಆದರೆ ಈ ಬುದ್ಧಿವಾದವೆಲ್ಲವನ್ನನುಸರಿಸುವ ರೀತಿ ಯಾವುದೆಂದು ಯೋಚಿಸುತ್ತಿದ್ದದ್ದನ್ನು ಮಲ್ಲಪ್ಪನ ತಂದೆಯು ಕಂಡು—ಮಲ್ಲಪ್ಪನೇ ಈಗಲೇ ಹೋಗು, (ದ್ವೇಷದ) ಜ್ವಾಲೆಯು ಪೂರ್ಣವಾಗಿ ಉಜ್ವಲಿಸಿ ಸರ್ವಸ್ವವನ್ನೂ ಸುಟ್ಟು ಬಿಡುವ ಮುಂಚೆಯೇ ಅದನ್ನುನೊಂದಿಸಿ ಬಿಡು.

(ಮುಂದೆ ಸಾಗುವುದು)

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಸ್ವರಾಜ್ಯ

ಪ್ರಿಯ ಪತ್ರಸಂಪಾದಕರೇ,

ತಮ್ಮ ಕಳೆದ ಸಂಚಿಕೆಯಲ್ಲಿ ಮುದ್ರಿತವಾದ ನನ್ನ ಪತ್ರದ ಅಂತ್ಯಭಾಗದಲ್ಲಿ ಮುದ್ರಣಾಲಯದ ದೈವದ ಉಪಹತಿಯಿಂದ ಪ್ರಾಸಂಗಿಕ ಪದದ ಬದಲಾಗಿ ಪ್ರಾಸನ್ನಿಕವೆಂಬ ಶಬ್ದವು ಸೇರಿ ಹೋದ್ದರ ಕುರಿತು ಪಶ್ಚಾತಾಪ ಪಡುತ್ತೇನೆ ಈ ಪ್ರಸ್ತಾಪವು ವಾಚಕರ ಸಮಾಧಾನದಗೋಸ್ಕರ ಅಗತ್ಯವಾದುದರಿಂದ ಅದರ ಲೋಪವನ್ನು ನನ್ನಿಂದ ಸಹಿಸಲಾಗಲಿಲ್ಲ ಸ್ವರಾಜ್ಯವಂದರೆ ಸ್ವದೇಶೀಯರು ರಾಜಕರಣೆಯಲ್ಲಿ ಪ್ರಧಾನ ಪುರುಷರಾಗಿ ತಮ್ಮ ಮನೋಭಾವವನ್ನು ರಾಜ್ಯಾಧಿಪತಿಗಳಿಗೆ ಶ್ರುತಪಡಿಸುವದರ ಮೂಲಕ ರಾಜಾಧಿಕಾರವು ನ್ಯಾಯಾನುಗುಣವಾಗಿ ನಡಿಯಲು ಸೌಕರ್ಯಗಳನ್ನು ಒದಗಿಸಿ ಕೊಡುವ ಸ್ವಾತಂತ್ರ್ಯವಾಗಿರುತ್ತದೆ. ಹೊರತು ಅರಸುಗಳು ಒಂದು ಹೇಳಿದರೆ ಅದಕ್ಕೆ ತೀರಾ ವಿರೋಧವಾಗಿ ಹಟಸಾಧಿಸಿ ತದ್ವಿಪರೀತ ಕೃತ್ಯಗಳನ್ನು ಸಾಗುವದರ ಮೂಲಕ ಗಲಬೆಯನ್ನು ಉಂಟುಮಾಡುವ ದುರ್ಬುದ್ಧಿಯಲ್ಲ ಈ ಸೂತ್ರವನ್ನು ಪ್ರಥಮತಾ ಮನಸ್ಸಿನಲ್ಲಿ ಇಟ್ಟು ಕೊಳ್ಳದಿದ್ದರೆ ಸ್ವರಾಜ್ಯವೆಂಬ ಘನ ಪ್ರಶಂಸೆಯಲ್ಲಿ ಯಾರೊಬ್ಬರೂ ಸೇರುವದೇ ನಿರರ್ಥಕವೆನ್ನಬೇಕು ಒಬ್ಬ ನೃಪತಿಯು ತನ್ನ ಮಂತ್ರಿಗಳ ಸಲಹಾಮಸಲತು ಯಥೋಚಿತವಾಗಿ ಪರ್ಯಾಲೋಚಿಸಿ ಒಂದು ಕಾರ್ಯವನ್ನು ಜರಗಿಸಲು ಆಜ್ಞೆಯನ್ನು ಕೊಟ್ಟರೆ ಅದಕ್ಕೆ ವಿರೋಧವಾದ ಅಭಿಪ್ರಾಯವುಳ್ಳವರನೇಕರು ಪ್ರಜಾಸಂಕುಲದಲ್ಲಿ

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿರಿ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಲಘುವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು

ನಮ್ಮ 'ಮೆಕ್ಸಿಮ' ವಾಚನ್ನು ಬರವಸೆಯಿಂದ ಕೊಂಡು ಕೊಳ್ಳಿರಿ

ನಿಕಲ್ ಕೇಸಿನಲ್ಲಿ ರೂ ೧೦-೦-೦

ಬೆಳ್ಳಿ ಕೇಸಿನಲ್ಲಿ ರೂ ೧೪-೮-೦

ನಮ್ಮ 'ಪ್ಯೂ ಡಿ ಪಿ'

ನಿಕಲ್ ಕೇಸಿನಲ್ಲಿ ರೂ ೧೪-೦-೦

ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦

ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು



ನಮ್ಮ 'ಚಾರ್ಮರ್'

ನಿಕಲ್ ಕೇಸಿನಲ್ಲಿ ರೂ. ೧೩-೦-೦.

ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.

ನಮ್ಮ 'ವರ್ಡಲಿ.'

ನಿಕಲ್ ಕೇಸಿನಲ್ಲಿ ರೂ ೧೮-೦-೦.

ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.

ನಮ್ಮ 'ಬೆಸ್ಟ'

ನಿಕಲ್ ಕೇಸಿನಲ್ಲಿ ರೂ. ೨೧-೦-೦.

ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು ೪ ಆಣೆ ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ನಮ್ಮ ೫೩ ಎಸ್ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದುಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರಕುವವು.

ಇರುವ ಪಕ್ಷದಲ್ಲಿ ವಿನಯಪೂರ್ವಕವಾಗಿ ಮಕ್ಕಳು ತಂದೆಯ ಸನ್ನಿಧಿಯಲ್ಲಿ ತಕ್ಕ ರೀತಿಯಲ್ಲಿ ತಮ್ಮ ಭಾವನೆಗಳನ್ನು ಬಿನ್ನೈಸಿಕೊಳ್ಳುವ ಕ್ರಮವನ್ನನುಸರಿಸಿ ಕಾಲೋಚಿತ ಭಾಷಣದ ಮುಖಾಂತರ ರಾಜರ ಮನಸ್ಸನ್ನು ತಮ್ಮ ಕಡೆಗೆ ಆಕರ್ಷಿಸುವ ಸದುಪಾಯವನ್ನು ಅವರು ವರ್ತಿಸಬೇಕಲ್ಲದೆ ತೆಗಿ, ಕಡಿ, ಹುಗಿ ಎಂದು ಮದೋನ್ಮತ್ತತೆ ಮತ್ತು ಮದೋದ್ಧತೆಯ ಪರವಶತೆಯನ್ನು ವಹಿಸಿಕೊಳ್ಳುವವರು ರಾಜದ್ರೋಹಿಗಳೆಂಬ ದುರ್ನಾಮವನ್ನು ಗಳಿಸಿಕೊಂಡು ರಾಜಕಂಟಕರ ಪಂಗ್ತಿಗೆ ಅರ್ಹರಾಗುತ್ತಾರೆ ಇಂತಹ ಪಂಗ್ತಿ ಭೋಜನದ ಸುಖವು ಗಲ್ಲಿನಮರಕ್ಕೆ ಪ್ರಾಣಾಹುತಿಯನ್ನು ಕೊಡುವದೇ ಯಾರೂ ಆಶಿಸಲಾರದ ಈ ಸುಖವನ್ನು ಈಗೀಗ ಬರತ ವರ್ಷದಲ್ಲಿ ಕೆಲವು ಯುವಕರು ಅನುಭವಿಸಿ ದೇಶೋನ್ನತಿಯ ಸದುದ್ದೇಶವೆಂಬ ಫಲ ಮರದ ಬುಡಕ್ಕೆ ಕೊಡಲಿಯನ್ನಿಟ್ಟು ಹೆಚ್ಚು ಕಡಿಮೆ ಸಕಲ ಭಾರತೀಯರ ತಲೆಕೆಳಗೆ ರಾಜದ್ರೋಹಿಗಳೆಂಬ ದುರಭಿಧಾನ ದೊರಕುವ ಅನಿಷ್ಟ ಸಂಭವಕ್ಕೆ ಸರಾಗವಾದ ದಾರಿಯನ್ನು ಸಿದ್ಧಪಡಿಸಿರುವರು ವಿದ್ಯಾಭ್ಯಾಸ ಮಾಡಿ ನಾನಾ ಪರೀಕ್ಷೆಗಳನ್ನು ತೇರಿದ ಮಾತ್ರದಿಂದ ವೈದುಷ್ಯವು ಪೂರ್ಣತೆಯನ್ನು ಹೊಂದಿತು ಎನ್ನುವದು ಕೇವಲ ಹುಚ್ಚುತನವೇ ವಿದ್ಯೆಯಿಂದ ದೊರಕದ ಶಕ್ತಿಯು ಉಪಯೋಗಕ್ಕೆ ಸಾಕಾಗಬೇಕಾದರೆ ಅದರಲ್ಲಿ ಕೂಡಿರುವ ಕಲ್ಮಷವು ಮೊತ್ತ ಮೊದಲು ದೂರವಾಗಬೇಕು ಇಲ್ಲವಾದರೆ ಅದರ ಮೌಲ್ಯವು ಕಡಿಮೆಯಾಗುವದು ಹಾಗೆಯೇ ಯಾವ ವಸ್ತುವಾಗಲೀ ಯಾವ ಲಕ್ಷಣವಾಗಲೀ ಅದರಲ್ಲಿ ಕೂಡಿರುವ ಮಿಶ್ರವನ್ನು ತೆಗದು ಶುದ್ಧ ಮಾಡುವ ಮೊದಲು ಬೆಳಕಿಗೆ ಬರಲಾರದು ಹಾಗೆಯೇ ಸಾಭ್ಯಸ್ಥನೆನ್ನಿಸಿಕೊಳ್ಳುವದು ವಿದ್ಯೆಯ ರಂಜಕ ಗುಣವನ್ನು ಎದುರಿಗ ತರುವ ಗುಣವಾಗಿರುತ್ತದೆ ವಾಗಾಡಂಬರವೂ ಒರಿಯುವ ಸೌಲಭ್ಯವೂ ಉಳ್ಳ ವಿದ್ಯಾವಂತನು ರಾಜಕರಣದಲ್ಲಿ ಅಗತ್ಯವಿರುವ ರಾಜತಂತ್ರಜ್ಞತೆಯುಳ್ಳವನೆಂದು ತಿಳಿಯುವದು ಅವನ ಸುಲಕ್ಷಣಗಳಲ್ಲಿ ಒಂದೆನ್ನುವುದರ ಮೊದಲು ಸ್ವರಾಜ್ಯ ಪ್ರವರ್ತನೆಯ ಪೂರ್ವಾಪರ ಜ್ಞಾನವುಳ್ಳವನೋ ಎಂಬ ಪ್ರಸಕ್ತಿಯನ್ನು ನಿರ್ಧರಿಸುವದೇ ಅತ್ಯಗತ್ಯವೆಂಬದು ನೆನಪಿನಲ್ಲಿಟ್ಟುಕೊಳ್ಳಬೇಕು ಹೊಳೆಯುವ ಪದಾರ್ಥಗಳೆಲ್ಲವೂ ಬಂಗಾರವೆನ್ನಬಾರದು ಎಂಬದೊಂದು ಗಾದೆಯು ಈ ಸಂದರ್ಭದಲ್ಲಿ ಸಮಂಜಸವಾದದ್ದು

ಸ॥ ಬೇಗಾರವರು

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಬೂತಗಳ ಪ್ರತಾಪ

ಕುಂದಾಪುರ ತಾಲೂಕು ಬಿಜೂರು ಗ್ರಾಮದಲ್ಲಿ ಅಭೂತಪೂರ್ವವಾದ್ದೊಂದು ಆಶ್ಚರ್ಯಕರವಾದ ಸಂಗತಿಯು ಕೆಲವು ದಿವಸಗಳಿಂದ ಈ ಪ್ರಾಂತ್ಯದ ಅನೇಕ ಜನಗಳನ್ನು ಅತಿ ಕುತೂಹಲಗೊಳಿಸುತ್ತಿತ್ತು ಅದೇನಂದರೆ

ಅನಾದಿಕಾಲದಿಂದಲೂ ಧಾರ್ಮಿಕರೂ, ಕುಲೀನರೂ ಆದ ಕೋಟಬ್ರಾಹ್ಮಣರಾದ ದೊಡ್ಡ ಮನೆತನದವರು ದುರ್ದೈವವಶಾತ್, ಸ್ವಲ್ಪ ಋಣಬಾಧೆಯಿಂದಲೂ, ಕುಟುಂಬದ ಪರಸ್ಪರ ಕಲಹಾದಿಗಳಿಂದಲೂ, ವಿಪನ್ನಸ್ಥಿತಿಯಲ್ಲಿದ್ದರೆಂಬುದು ಅತ್ರತ್ಯ ಸಜ್ಜನರಿಗೆಲ್ಲಾ ತುಂಬಾ ವ್ಯಸನಕರ ಸಂಗತಿಯಾಗಿತ್ತು

ಹೀಗಿರುವಲ್ಲಿ ಬಿಜೂರಿನಲ್ಲಿರುವ ಒಂದು ದೇವಸ್ಥಾನದ ಪಟ್ಟೆರ ಹುಡುಗನೊಬ್ಬನು ಕಲ್ಲುಕುಟಿಕ, ಯಕ್ಷಿ, ಬ್ರಹ್ಮ, ಹ್ಯಾಗುಳಿ, ನಾಗ ಸ್ಮಶಾನಮಹಾಕಾಳಿ, ಕನ್ಯಾಕುಮಾರಿ ಮುಂತಾದ (ಬೂತ)ಗಣಗಳು ತನ್ನ ಮೇಲೆ ಬರುತ್ತವೆಂದು ಕುಣಿದಾಡುತ್ತಿದ್ದನು.

ಇವನ ಈ ಕೃತಿಗೆ ಇವನ ಬಾವನಾದ ಇನ್ನೊಬ್ಬ ಬ್ರಾಹ್ಮಣನು ಬಕ್ತನಾಗಿ ಈ ಬೂತಗಣಗಳನ್ನು ಸ್ತೋತ್ರ ಮಾಡತೊಡಗಿದನು ಸ್ವಲ್ಪ ಕಾಲದಲ್ಲಿಯೇ ಇವರ ಸಹಾಯಕ್ಕೆ ಮತ್ತೊಬ್ಬ ಬ್ರಾಹ್ಮಣ ಭಕ್ತಶಿಖಾಮಣಿಗಳೂ ಸೇರಿಕೊಂಡರು ಇವರಾದರೋ ತಮ್ಮ ಬಕ್ತಿ ಪ್ರಕಾಶಾರ್ಥವಾಗಿ, ಮೇಲೆ ಹೇಳಿದ ಬೂತಗಣಂಗಳಿಗೆ ಬಣ್ಣದ ವಿಗ್ರಹಗಳನ್ನು ರಚಿಸಿ ಅವುಗಳನ್ನು ತಮ್ಮ ಮನೆಯ ಸಮೀಪ ಸಂಸ್ಥಾಪಿಸಿಕೊಂಡದ್ದಲ್ಲದೆ, ಭೂತದ ಪಾತ್ರಿಯನ್ನು ಸಂಗಡ ಕಟ್ಟಿಕೊಂಡು ಹಳ್ಳಿಪಳ್ಳಿಗಳಲ್ಲೆಲ್ಲಾ ಸಂಚಾರ ಮಾಡಿ, ಕಲ್ಲುಕುಟಿಗಾದಿಗಳ ಪ್ರಭಾವವನ್ನು ಊರಲ್ಲೆಲ್ಲಾ ಹಬ್ಬಿಸಿದರು ಇದರಿಂದ ಭಕ್ತರ ಸಂಖ್ಯೆಯು ಬಹಳಮಟ್ಟಿಗೆ ಅಭಿವೃದ್ಧಿಯಾಗುತ್ತಾ ಬಂತು

ಇದಾದ ಬಳಿಕ ಭೂತಗಳು ತಮ್ಮ ಪ್ರಥಮ ಬಕ್ತರಾದ ದುರ್ದೈವವಶಾತ್ ವಿಪನ್ನಸ್ಥಿತಿಗೆ ಬಂದಿದ್ದವರ ಮನೆತನದ ಸಾಲವನ್ನು ಪರಿಹರಿಸುತ್ತೇವೆಂತಲೂ, ಅದಕ್ಕಾಗಿಯೇ ತಾವು ಆಳಿಬರುವೆವೆಂತಲೂ, ಹೇಳತೊಡಗಿದವು ಭೂತಗಳ ಭಕ್ತ ಪಾತ್ರಿಯ ಭಾವರಾದವರ ಪ್ರೇರಣೆಯಿಂದ ಈ ಮನೆಯವರಲ್ಲಿ ಕೆಲವರು ಇದಕ್ಕೆ ಮನಸ್ಸುಕೊಟ್ಟರು. ಅಷ್ಟರಲ್ಲಿ ಭೂತವು ಅವರಿಗೆ ಈ ರೀತಿ ಅಪ್ಪಣೆಮಾಡಿತು ಏನಂದರೆ:—ನೀವುಗಳು ವಿಭಾಗಮಾಡಿಕೊಳ್ಳಕೂಡದು ಆಸ್ತಿಗಳನ್ನು ಎಲ್ಲಾ ಕುಟುಂಬದವರೂ ಸೇರಿ ಧರ್ಮಕ್ಕೆಂದು ಗ್ರಹದೇವತೆಯಾದ ಅನಂತಪದ್ಮನಾಭನ ಹೆಸರಲ್ಲಿ ಬರದಿಡಬೇಕು ಸಾಲದ ಸಲುವಾಗಿ ಯೋಚನೆಬೇಡ! ನಾನು ಹಣಕೊಟ್ಟು ತೀರಿಸುತ್ತೇನೆಂದು ವಾಗ್ದಾನ ಮಾಡಿ, ಇದೇ ತಿಂಗಳ ತಾ. ೩ನೇ ಗುರುವಾರ ಮಾನ್ಯ ಗೃಹಸ್ಥರ ಸಮಕ್ಷಮ ಹಣವನ್ನು ತಂದು ಹರಿವಾಣದಲ್ಲಿ ಸುರಿಯುತ್ತೇನೆ ಸಾಲಗಾರರು ಹಾಜರಿರಬೇಕೆಂದು ವಿಜೃಂಭಣೆ ಮಾಡಿ ಆ ಮಹಾನೀಯರನ್ನು ಕರಿಸಿತು. ಅವರೆಲ್ಲರೂ ಈ ಮನೆತನದ ಹಿತಚಿಂತಕರಾದ ಕಾರಣ ಅತ್ಯಾದರದಿಂದ ಚಿತ್ತೈಸಿದರು ಮುಖ್ಯರಾದ ಭಕ್ತರೂ ಬಂದರು. ಬ್ರಹ್ಮ, ನಾಗ ಮೊದಲಾದ ಗಣಂಗಳೂ ಒಂದು (ವಾದ್ಯದವರ) ತಾಳಕ್ಕೆ ಸರಿಯಾಗಿ ಹೆಜ್ಜೆಯಿಟ್ಟು ಅಕಟವಿಕಟ ಭಾವಗಳನ್ನು ಅಬಿನೈಸುತ್ತಾ ಅತ್ಯಾನಂದದಿಂದ ಕುಣಿದವು. ಈ ಮನೆಯವರ ಸರ್ವನಾಶದ ಪಟ್ಟಿಯನ್ನೂ ಕೇಳಿ ಮನುಷ್ಯದೇಹದಲ್ಲಿ ಬಂದು ನಲಿದಾಡುತ್ತಿದ್ದ, ಬ್ರಹ್ಮ ಮಹಾಕಾಳಿಗಳು ಪಡಕೊಂಡು ಆಸ್ತಿಯನ್ನೆಲ್ಲಾ ಗ್ರಹದೇವತೆಗೆ ಶಾಸನ ರೂಪವಾಗಿ ದಾನಮಾಡಬೇಕೆಂದು ಆಗ್ರಹ ಪೂರ್ವಕ ಅಪ್ಪಣೆ ಮಾಡಿದವು. ಇದಕ್ಕೆ ಮುಂಚೆ ಬಕ್ತರಾದ ಪಾತ್ರಿಗಳ ಭಾವಯ್ಯನವರು ಪಾತ್ರಿಗೂ ಒಂದಂಶವನ್ನು ದಾನಮಾಡಬೇಕೆಂದು ಮನೆ ಯಜಮಾನರನ್ನು ಕೇಳಿದ್ದರು

ಆದರೆ ಕಾರ್ಯವೇನೂ ಸಾಧ್ಯವಾಗದೆ ಪಾತ್ರಿಗೆ ಬೂದಾನ ಮಾಡಲಿಕ್ಕೆ ಯಾರೂ ಸಮ್ಮತಿಸಲಿಲ್ಲ! ಬೂತದ ದರ್ಬಾರು ಮುಂದರಿಯಿತು! ತುಂಬಿದ ಸಭೆಯ ಮುಂದೆ ದೊಡ್ಡ ಹರಿವಾಣದಲ್ಲಿ ಹಣಗಳನ್ನು ರಾಶಿರಾಶಿಯಾಗಿ ಸುರಿಯುತ್ತೇನೆಂದು ಹಿಂದೆಯೇ ಬೂತದ ಪ್ರತಿಜ್ಞೆಯಾಗಿತ್ತು! ಅದಕ್ಕಾಗಿ ಈ ದಿನ ಸಭೆಯೂ ನೆರೆಯಿತು! ಭೂತಗಳು ಹಣ ತರುವದೆಲ್ಲಿಂದ? ಬೂತದ ಸ್ವರೂಪವಿಕ್ರಯವಾಗುವ ಕಾಲ ಬಂತು! ತಡವಿಲ್ಲ! ಕಡೆಗೆ ರಾತ್ರೆ ಸುಮಾರು ೧೦ ಘಂಟೆ ಸಮಯ ಅಲ್ಲಿಂದ ಸುಮಾರು ೩ ಮೈಲು ದೂರ ಇರುವ ಹಳ್ಳಿ ಹೊಸೂರಿಗೆ ಹೋಗಿ ನಿಧಿಯನ್ನು (ಗಂಟು) ಅಗಿದು ಕೊಡುವದಾಗಿ ಬೂತವು ಹೇಳಿತು ಇದರ ಮಾತಿನ ಪೂರ್ಣ ಸಂಗತಿ ಪರೀಕ್ಷಿಸಿ ಅಸ್ತಿನಾಸ್ತಿಗಳನ್ನು ನಿರ್ಧರಿಸಬೇಕೆಂಬ ಲವಲವಿಕೆಯಿಂದ ಕೂಡಿದ ಮಾನ್ಯಗೃಹಸ್ಥರು ಅದಕ್ಕೆ ಒಪ್ಪಿದರು ಒಡನೆಯೇ ಪಾತ್ರಿಗಳನ್ನು ಗೋರಥದಲ್ಲಿ (ಬಂಡಿ) ಕುಳ್ಳಿರಿಸಿ ವಾದ್ಯಾದಿ ರಭಸಗಳೊಡನೆ, ಹೊರಟು ರಾತ್ರೆ ಸುಮಾರು ೨೦ ಘಳಿಗೆ ಸಮಯ ಹಳ್ಳಿ ಹೊಸೂರಿಗೆ ತಲಪಿದರು ಅಲ್ಲಿ ಪುನಃ ಕನ್ಯಾಕುಮಾರಿ ಮಹಾಕಾಳಿಗಳು ಬಂದವು ತಡವಿಲ್ಲದೆ ಅಲ್ಲೇ ಸಮೀಪ ಇರುವ ಒಂದು ಕೆರೆಯ ಒಳಗೆ ಸವಾರಿಯು ತೆರಳಿತು! ಕರೆಯಲ್ಲಿ ಬಲ್ಲುಹಾಕಿ ನೋಡಿ, ಕೆರೆಯಲ್ಲಿ ದ್ರವ್ಯವುಂಟು! ತುಂಬಿದ ನೀರನ್ನು ಒತ್ತಿಸಿದರೆ ದ್ರವ್ಯವನ್ನು ತಂದುಕೊಡುವದಾಗಿ ದೈವದ ಅಪ್ಪಣೆಯಾಯಿತು! (ನೀರು ಎಂದೂ ಒತ್ತುವದಲ್ಲ! ನಿಧಿಯಂತೂ ಸಿಕ್ಕುವದಲ್ಲ) ಈ ದಕ್ಕಿನ ಮಾತನ್ನು ಕೇಳಿ ಗೃಹಸ್ಥರೆಲ್ಲರೂ ಸಿಟ್ಟಾಗಿ ಕೆರೆಯಲ್ಲಿ ನೀರುಂಟೆಂದು ಇಲ್ಲಿ ಒಂದು ಹೇಳಬೇಕೆ? ಅಲ್ಲಿಯೇ ಹೇಳಬಿಟ್ಟಿದ್ದರೆ ಈ ರಾತ್ರಿ ಎಲ್ಲರೂ ಪ್ರಯಾಸಪಟ್ಟು ಇಲ್ಲಿಯ ಪರಿಯಂತರ ಬರುತ್ತಿರಲಿಲ್ಲ! ಈ ಅನಾಥಬೂತಿ ವಿದ್ಯೆಯಾಕೆಂದು ಪ್ರಶ್ನೆಮಾಡಿದರು ದೈವದ ಗಂಟಲು ಕಟ್ಟಿತು! ಬಕ್ತರ ತಲೆ ತಗ್ಗಿತು! ದೈವಕ್ಕೆ ಸಿಟ್ಟು ಬಂತು! ಹೆದರಿಸುವ ಇರಾಧೆಯಿಂದ ಕೆರೆ ಹಾರಿ ಬೀಳುತ್ತೇನೆಂದು ಹೇಳಿತು! ಅದಕ್ಕೆ ಯಾರೂ ಸಮ್ಮತಿಸಲಿಲ್ಲ! ವಾಪಸು ಮನೆಗೆ ಕರತಂದರು! ಕೂಡಲೇ ಕಾಳಿಯು ಸೇರಿಕೊಂಡಿತು ಹ್ಯಾಗುಳಿಯು ಬಂದು ಕುಣಿತೊಡಗಿತು ಒಂದು ಚೂರಿಯನ್ನು ಕೊಡಬೇಕೆಂತಲೂ, ರಕ್ತವನ್ನು ಚೆಲ್ಲಿ ನೀರನ್ನು ಅರಿಸಿ ನಿಕ್ಷೇಪವನ್ನು ತರುತ್ತೇನೆಂತಲೂ ಹರಟೆ ಹೊರಡಿತು! ಇಷ್ಟಾದರೂ ನೋಡಲೇ ಬೇಕೆಂದು ಎಷ್ಟೋ ಜನರಿಗೆ ಕುತೂಹಲವಿದ್ದಿತ್ತು ಆದರೆ ಪಾತ್ರಿಯ ಜನನಿ ಮತ್ತು ಬಕ್ತರು, ಹಾ! ಹಾ! ಕಾರಮಾಡಿದ್ದರಿಂದ ಎಲ್ಲರೂ ಸುಮ್ಮನಿದ್ದರು! ಹ್ಯಾಗುಳಿಯು ಓಡಿ ಹೋಯಿತು ಹಾಗೂ ಹೀಗೂ ಭೋಜನವಾಗುವಾಗ ಬೆಳಗಾಯಿತು ಮಾನ್ಯ ಗೃಹಸ್ಥರ ಮುಂದೆ ದೈವಗಳ ಗುಟ್ಟೆಲ್ಲಾ ರಟ್ಟಾಯಿತು! ಪಾತ್ರಿಯು ಪಿಟ್ಟೆಂದು ಮಾತಾಡದೆ ಬೆಳಗಾಗುವಷ್ಟರಲ್ಲಿಯೇ ಮನೆಗೆ ಬಂದುಮುಟ್ಟಿದನು

ಆ ಪಾರಣೇ ದಿನ ಮತ್ತೊಂದು ಗುಟ್ಟು ಹೊರಗೆ ಬಿದ್ದಿತು ಮೊದಲೊಂದು ಹಿತ್ತಾಳೆಯ ಹೂಜಿಯನ್ನು ಈ ಬೂತವು ಈ ಮನೆತನದವರಿಗೆ ಕೊಟ್ಟು, ಅದನ್ನು ಪೂಜಿಸಬೇಕೆಂದು ಅಪ್ಪಣೆ ಕೊಟ್ಟಿತು ಇದೆಲ್ಲಾ ಠಕ್ಕೆಂದು ತಿಳಿದ ಮೇಲೆ ಅದನ್ನು ಒಡೆದು ನೋಡಿತು! ಅದರಲ್ಲಿ ಬರೇ ಕಲ್ಲುಮಣ್ಣುಗಳಲ್ಲದೆ ಮತ್ತೇನೂ ಇರಲಿಲ್ಲ! ಇದು ಸಹಾ ಪಾತ್ರಿಯ ತಂತ್ರ!

ಆಹಾ! ಏನನ್ಯಾಯ? ಮರ್ಯಾದಸ್ಥರಾದವರು ಈ ಅಂತರ ಪಿಶಾಚಿಯ ಮಾತಿಗೆ ಮೋಸ ಹೋದರು! ಈ ಪಿಶಾಚಿಯು ಹೀಗೆಲ್ಲಾ ಹರಟೆಮಾಡದಿದ್ದರೆ, ಆ ಮನೆಯವರು ಸಾಲದ ಸಲುವಾಗಿ ಬೇರೆ ವಿಲೇವಾರಿಮಾಡಿಕೊಳ್ಳುತ್ತಿದ್ದರು. ಅದಕ್ಕೆ ಸಹಾ ಬಿಡದೆ, ನಿಷ್ಕಾರಣವಾಗಿ ಮಾನ್ಯರನ್ನು ವ್ಯಥೆಗೊಳಿಸಿದ ಈ ಕುತಂತ್ರಿಯಾದ ಪಾತ್ರಿಯ ಮೇಲೆ ಮಾನ್ಯರಾದ ಮನೆತನದವರು ಮಾನನಷ್ಟದ ದಾವಾಮಾಡಬಾರದೇ? ನಿಷ್ಕಾರಣವಾಗಿ ಕಷ್ಟನಷ್ಟವ್ಯವಸ್ಥೆಯನ್ನುಂಟುಮಾಡುವ ಈ ಠಕ್ಕುಗಾರರನ್ನು ಸರಕಾರದವರು ಸರ್ವವಿಧದಿಂದಲೂ ಶಿಕ್ಷಿಸಬೇಕಾಗಿರುವುದು. ತುಂಬಿದ ಸಭೆಯಲ್ಲಿ ಸ್ವರೂಪವಿಕ್ರಯವಾದರೂ ಭಕ್ತರೇನೋ ಇನ್ನೂ ತಮಗೆ ಗಂಟುಸಿಕ್ಕುತ್ತದೆಂತ ನಂಬಿಕೊಂಡು ಜನಗಳೊಂದಿಗೆ—ಕೇಳಿದಿರಾ? ಭೂತಗಳು ಎಂಥೆಂತಹ ಸಾಧ್ಯವಾದ ಮಾತುಗಳನ್ನಾಡುತ್ತವೆ ಎಂಬದಾಗಿ, ಮತ್ತೂ ಮತ್ತೂ ಭೂತಗಳ ಪ್ರತಾಪವನ್ನೇ ಹೇಳಿ [illegible] ತಿರುಗುತ್ತಿರುವದನ್ನು ಕೇಳಿದರೆ ತುಂಬಾ [illegible]

[illegible] ಮರುಳರೋ? ಎಂಬ ಮಾತು ಇನ್ನೊಮ್ಮೆ ಇದರಿಂದ ಸಿದ್ಧಾಂತವಾಗುತ್ತದೆ. [illegible] ಲೋಕದಲ್ಲಿ ಇನ್ನೆಂಥಹ ಭ್ರಾಂತಭಾವನೆಗಳು ತುಂಬಿಕೊಂಡಿರುವವೋ? ಅಂಬು ಜಾಕ್ಷನೇ ಬಲ್ಲ.

ಇತಿ ಪ್ರತ್ಯಕ್ಷದರ್ಶಿ.

ಎಲಿಮೆಂಟರಿ ಶಾಲೆಯ ಉಪಾಧ್ಯಾಯರೊಬ್ಬರು ಶಾಲಾ ಬಾಲಕರುಗಳಿಂದ ಪ್ರತಿನಿತ್ಯವೂ ಪಾಠಾರಂಭದಲ್ಲಿ ಹಾಡಲುಪಯುಕ್ತವಾದ ಈ ಕೆಳಗಿನ ಪದವನ್ನು ಪ್ರಕಟಣೆ ಬಗ್ಗೆ ಕಳುಹಿಸಿಕೊಟ್ಟಿರುವರು

ಪದ ರಾಗ ಕಲ್ಯಾಣಿ ಅಷ್ಟತಾಳ

ದೇವಾಧಿದೇವಾ । ದಿವ್ಯಪ್ರಭಾವಾ । ನೀನೆ ಮಹಾನುಭಾವಾ । [illegible] ವಾ ॥ ಪಲ್ಲ ॥

ಹೃದಯದಿ ನಿನ್ನಯ । ಪದವನು ನೆನೆವ ।
ಮುದದಿಂದ ನುತಿಪೆವು । ಪದುಳದಿ ಪೊರೆಯೊ [illegible]

ಹೆಗ್ಗಲಿರುಳುರುಚಿರ । [illegible] ಪೊಗಳುವ ಭಕ್ತರ ।
ಹಗರಣ ಬಗೆದ ಶ್ರೀ । ನಿಗಮವಂದಿತನೆ ॥ ೨ ॥

ಚಿಕ್ಕಮಕ್ಕಳು ನಾವು । ವಕ್ಕಣಿಸುವ ರಾವು ॥
ಧಿಕ್ಕರಿಸದೆ ನೀವು । ದಕ್ಕರ ಲೆಖ್ಖವು ॥ ೩ ॥

ವಿದ್ಯೆ ಬುದ್ಧಿ ಬಲ । ಶುದ್ಧ ಭಾವವೆಲ್ಲ ॥
ಒದ್ದದಿಯುವುಗಿಲ್ಲ । ತಿದ್ದಬೇಕಲ್ಲ ॥ ೪ ॥

ಕರಗಳ ಜೋಡಿಸಿ । ಶಿರಗಳ ಬಾಗಿಸಿ ॥
ಸ್ಮರಿಸುವ ಬಾಲರ । ಶರಗವ ಪಿಡಿಯೈ ॥ ೫ ॥

ನೇಮಿಸವೆಮ್ಮೊಳು ದರ್ಮ । ಸ್ವಾಮಿ ಕಲ್ಪದ್ರುಮ ॥
ನಾವುರಯಿವು [illegible] । ದಾವು ನಿಸ್ಸೀಮಾ ॥ ೬ ॥

ಜೀಯಾ ನೀನಲ್ಲದೆ । ಸಾಯಕರ್‍ಯಾರಿನ್ನು ॥
ಮಾಯಕವಿಯೊ ದೇವ । ರಾಯವಿಶ್ವೇಷಾ ॥ ೭ ॥

M. D. R.

ವಿದೇಶವೃತ್ತಾಂತ

ಕ್ರ್ಯೂಪ್ರಭುಗಳವರು, ಹಿಂದ ಸ್ಟೇಟಿನ ಸ್ಕ್ರೆಟರಿಯ ಪದವಿಯನ್ನು ಪ್ರಕೃತ ಅಂಗೀಕರಿಸುವರೆ ಸಮ್ಮತಿಸುವುದಿಲ್ಲ ವಂತೆ. ರಾಜ್ಯಾಧಿಕಾರವು [illegible] ಪ್ರಭುಗಳ ಕೈಸೇರಿದ್ದಲ್ಲಿ ಮಿಂಟೋ ಪ್ರಭುಗಳ ಕೆಲಸಕ್ಕೆ ಕಿಚನರ ಪ್ರಭುಗಳು ಬರುವರೆಂಬ ವರ್ತಮಾನವಿರುವುದು

ಮಹಂತಲ್ [illegible] ಹಿಂದುಸ್ಥಾನದಲ್ಲಿ ರಾಜದ್ರೋಹವನ್ನು ಪಸರಿಸುವ ಉದ್ದಿಶ್ಯ, ಪ್ರಕಟಿಸುವ ಪತ್ರವು [illegible] ಪಟ್ಟಣದಲ್ಲಿ ಮುದ್ರಿಸಿದ್ದಾಗಿ ವರ್ತಮಾನವಿತ್ತು [illegible] ನಲ್ಲಿಯ ಪೋಲಿಸಿನವರು, ಈ ವರ್ತಮಾನದ [illegible] ಸಂಪೂರ್ಣವಾಗಿ ಪರಿಶೋಧಿಸಿ, ಈ ಪತ್ರವು [illegible] ಪ್ರಕಟಿಸಿದ್ದಲ್ಲವಾಗಿ [illegible] ಈ ಪತ್ರವನ್ನು ಮುದ್ರಿಸುವರೆ [illegible] ವಿಲಾಯತಿ [illegible] ಪತ್ರವ [illegible] ಉಪಯೋಗಿಸಿದ [illegible] ತೋರುತ್ತಿರುವದಾದರೂ, [illegible] ಗಳಾಗಿರುತ್ತವೆಂತ ಈ ಪೋಲಿಸಿನವರು [illegible] ವರು ಬರ್ಲಿನ್ನಲ್ಲಿರುವ [illegible] ಭಾರತೀಯರ ಮೇಲೆ [illegible] ಮಾತ್ರವೂ ಇಲ್ಲವೆಂತಲೂ [illegible]

ಫ್ರಾನ್ಸಿನಲ್ಲಿಯ ಸೇನ್ ನದಿಯಲ್ಲಿ ಇನ್ನೂ ನೆರೆ [illegible] ಬುತ್ತಲಿದೆ. ನೆರೆಯಿಂದುಂಟಾಗ [illegible] ಹಾವಳಿ [illegible] ಹಾರ್ಥವಾಗಿ, ಫ್ರೆಂಚ್ ಸರಕಾರದವರು [illegible] ಫ್ರೆಂಕ್ಸುಗಳನ್ನು ಕೊಡುವರೆ ನಿರ್ಣಯಿಸಿರುವರು

ಹಿಂದುಸ್ಥಾನದ ವ್ಯಾಸರಾಯ ಪ್ರಭುಗಳಾಗಿ ಕಿಚ್ನರ್ ಪ್ರಭುಗಳು ಬರುವರೆಂಬ ವರ್ತಮಾನವು [illegible] ವಿಲ್ಲದ್ದೆಂತ ಬಂಗಾಳದ ಡೈಲಿನ್ಯೂಸ್ ಎಂಬ ಪತ್ರದಿಂದ ತೋರಿಬರುವದು. ಹಿಂದುಸ್ಥಾನದಲ್ಲಿ ಅನಾಯಕ ಸ್ಥಿತಿಯು ಹೆಚ್ಚಾದ್ದಲ್ಲಿ ಕಿಚ್ನರ್ ಪ್ರಭುಗಳನ್ನು ಈ ಕೆಲಸಕ್ಕೆ ನೇಮಿಸುವದೆಂತ ಬ್ರಿಟಿಷ್ ಮಂತ್ರಿಗಳು ಆಲೋಚನೆ ಮಾತ್ರ ಮಾಡಿದ್ದರಂತೆ.

ಉತ್ತರ ಹಿಂದುಸ್ಥಾನ.

ಭಾಯಿ ಪರಮಾನಂದರ ಮೊಕದಮೆಯ ಕುರಿತು ಲಾಹೋರಿನ ಸ್ಪೆಶ್ಯಲ್ ಮೇಜಿಸ್ಟ್ರೇಟರು ಅವರ ಬಂಗ್ಲೆಯಲ್ಲಿ ಮಿ। ಪೋಲೋಕರನ್ನು ವಿಚಾರಿಸಿದ್ದಲ್ಲಿ ಅವರು ಭಾಯಿ ಪರಮಾನಂದರು [illegible] ಇಸವಿಯಲ್ಲಿ ಜೊಹೆನ್ಸ್ ಬರ್ಗ ಎಂಬಲ್ಲಿಗೆ ಹೋದಪ್ಪರು ತನ್ನ ಸಂಗಡ ಬಂದೇ ಮನೆಯಲ್ಲಿ ಒಂದು ತಿಂಗಳವರೇಗ್ಗೆ ವಾಸವಾಗಿದ್ದರೆಂತಲೂ, ಮತ ಸಮ್ಮಂಧವಾದ ವಿಷಯಗಳ ಕುರಿತು ಮಾತ್ರ ನಾಲ್ಕು ಭಾಷಣೆಗಳನ್ನು ಮಾಡಿದರೆಂತಲೂ [illegible]

[illegible] ಕಾಣಲಿಲ್ಲವೆಂತಲೂ, ದರ್ಬಾರ [illegible] ಇದ್ದರಂತೆ ಇವರನ್ನು ಕೈದುಮಾಡಿದ ವರ್ತಮಾನ [illegible] ಪತ್ರಿಕೆಗಳನ್ನು ಸಂಗ್ರಹಿಸಿದರೆಂತಲೂ, [illegible] ಇಲ್ಲ ಈ ಯೌವನಸ್ಥರು ತಮ್ಮ ಮೋರೆಗಳಿಗೆ ಬಣ್ಣ [illegible] ಇವರು [illegible] ಹಾಕಿ ವೇಷ ಪಲ್ಲಟಿಸಿದ್ದರಂತೆ [illegible] ಸ್ವೀಕರಿಸಿರುವರು

[illegible] ಬಂಗಾಳ [illegible] ನಾಗೇಂದ್ರನಾಥ [illegible] ವರು ಹಿಂದುಸ್ಥಾನದ [illegible] ಕಥೆಗಳನ್ನು [illegible] ಪ್ರಿನ್ಸ್ ಆಫ್ ಇಂಡಿಯನ್ [illegible] ಗಳನ್ನು ಸಂಗ್ರಹಿಸಿರುವರು ನಮ್ಮಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತೀಯರಿಗಾಗಿ ಯಾವ ಪ್ರಸ್ತಾಪವಿಲ್ಲ [illegible] ಕಥೆಗಳಲ್ಲಿ ಸ್ತ್ರೀಯರೂ [illegible] ಪ್ರಿನ್ಸ್ ಆಫ್ [illegible] ಸಂಕಟ [illegible] ವಾಗಿ [illegible] ಸತ್ಯವಲ್ಲವೇ?

[illegible] ಬಿಡುಗಡೆ ಮಾಡಲ್ಪಟ್ಟವರ ಪೈಕಿ [illegible] ಕುಮಾರದತ್ತರವರು ತಾ [illegible] ಕಲ್ಕತ್ತೆ [illegible] ಬಿಡಿಸಲಾಗ [illegible] ವರು [illegible] ಕೃಷ್ಣಕುಮಾರ ಮಿತ್ರ ಪ [illegible] ವಿಲಾ [illegible] ತಾ [illegible] ಬಂದಿರುವರು ಕೃಷ್ಣ ಕ [illegible] ದುರುಗೊಳ್ಳುವದಕ್ಕಾಗಿ ಹೌರಾ [illegible] ಸಭೆ [illegible] ಕೂಡಿತು ವೈಟ್ ಪ್ಲೇಟ್ [illegible] ಹಿರಾಂಬಿ ಚಂದರ್ ಮೈತ್ರರು ಈ [illegible] ಕೃಷ್ಣ [illegible] ಮಿತ್ರರಿಗೆ ಹೂವಿನ ಮಾಲೆಯನ್ನು [illegible] ನಂತರ ಇವರನ್ನು [illegible] 'ವಂದೇ ಮಾತರಂ' ಎಂಬ ಘೋಷದೊಡನೆ ಕರಕೊಂಡು ಹೋದರು. [illegible] ಇವರನ್ನು [illegible] ಸಾದ [illegible] ವರು ಅತೀ ಸಂಭ್ರಮದಿಂದ ಎದುರುಗೊಂಡರು

[illegible] ಬಿಡುಗಡೆ ಹೊಂದಿದ ಮಿಸ್ಟರ್ [illegible] ಚಂದ್ರ [illegible] ತಾ [illegible] ಪಟ್ಟಣಕ್ಕೆ [illegible]

ಸರ್ ಹರ್ಬರ್ಟ್ ರಿಸ್ಲೇಯವರು ಮತ್ತು ಕರ್ನಲ್ ಸರ್ ಜೇಮ್ಸ್ ಡನ್‌ಲೋಪ್ ಸ್ಮೀತ್‌ರವರು ತಾ [illegible] ರಲ್ಲು ಮುಂಬಾಯಿಗೆ ತಲ್ಪಿ ವಿಲಾಯತಿಗೆ ಹೊರಟಿರುವರು. ಕರ್ನಲ್ ಸರ್ ಜೇಮ್ಸ್‌ಡನ್‌ಲೋಪ್ ಸ್ಮೀತರು ಇಂಡಿಯಾ ಆಫೀಸಿನಲ್ಲಿಯ ತನ್ನ ಪೊಲಿಟಿಕಲ್ ಎ। ಡಿ। ಕೊಂಪ್ ಹುದ್ದೆಯನ್ನು ಸ್ವೀಕರಿಸಲು ಹೋಗಿರುವರು

ಡುಮಾರಿಯಾ ಹತ್ತಿರದ ಸೋಲ್ ಗಂಜಿ ಎಂಬಲ್ಲಿಯ ಒಂದು ಮನೆಯನ್ನು [illegible] ಮಂದಿ ಬಂಗಾಳ ಯೌವನಸ್ಥರು ಖಡ್ಗ ಮತ್ತು ರಿವೊಲ್ವರುಗಳ ಸಮೇತ ಬಲತ್ಕಾರದಿಂದ ಹೊಕ್ಕು, ಮನೆಯವರನ್ನು [illegible] ಸುಲಿಗೆ ಮಾಡಿ, [illegible] ಮತ್ತು [illegible] ಗಳನ್ನು ಆ ಮನೆಯಲ್ಲಿ [illegible]

ಮಿಸ್ಟರ್ ಕೆ ಜಿ ಗುಪ್ತರ ದೇಹಾಲಸ್ಯದ ದೆಸೆಯಿಂದ ಅವರ [illegible] ವಾಗಿ ನಿಶ್ಚೈಯಿಸಿದ ಟೌನ್ ಹೋ [illegible] ನಲ್ಲಿಯ [illegible] ವೂ ತಾ [illegible] ರ ವಿನೋದ ಪಾರ್ಟಿಯೂ ಸಹಾ ಮುಂದರಿಸಲ್ಪಟ್ಟವು ಮಿಸ್ಟರ್ ಗುಪ್ತರವರು, ಕಳೆದ ಶುಕ್ರವಾರ ಹೌರಾ ಪಟ್ಟಣವನ್ನು ಬಿಟ್ಟು ತಾ [illegible] ರ ವರೇಗೆ ಬಲಸೋರ್ ಎಂಬಲ್ಲಿ ಮೊಕ್ಕಾಂ ಮಾಡುವರು ತಾ [illegible] ಕ್ಕೆ ಮದ್ರಾಸಿಗೆ ಬಂದು, ಅಲ್ಲಿಂದ ಕೊಚ್ಚಿ ಮತ್ತು ತಿರುವಾಂಕೋಡು ಸಂಸ್ಥಾನಗಳನ್ನು ಸಂದರ್ಶಿಸಿ ಮಾರ್ಚಿ ತಾ [illegible] ಕ್ಕೆ ಲಂಡನ್ ಪಟ್ಟಣಕ್ಕೆ ತಲ್ಪುವಂತೆ ಮಾರ್ಚಿ ತಾ [illegible] ಕೊಲೊಂಬೊ ಪಟ್ಟಣದಿಂದ ವಿಲಾಯತಿಗೆ ಪ್ರಯಾಣ ಮಾಡುವರು

ಮೋರ್ಲೆ ಪ್ರಭುಗಳು ಇಂಡಿಯಾ ಆಫೀಸಿನಿಂದ ವಿಶ್ರಾಂತಿ ಹೊಂದುವರೆಂಬ ಸಂಭವವಿರುವುದೆಂತ "ದಿ ಡೈಲ್‌ಮೈಲ್" ಎಂಬ ವರ್ತಮಾನ ಪತ್ರದಿಂದ ತೋರುತ್ತದೆ.

ಅನಾಯಕತ್ವವನ್ನು ನಿಲ್ಲಿಸಿಬಿಡುವರೆ ಬಂಗ್ಲಾಳದಲ್ಲಿ ಸೌಮ್ಯ ಪಕ್ಷದ ಪ್ರಜಾನಾಯಕರ ಸಭೆ ಕೂಡಿತು. ಮೋತಿ [illegible] ಘೋಷರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಲ್ಲಲ್ಲಿ ಚಿಕ್ಕ ಚಿಕ್ಕ ಕಮಿಟಿಗಳನ್ನು ಸಭಾ ಉದ್ದಿಶ್ಯಗಳನ್ನು ಕಾರ್ಯಗತ ಸಾಧಿಸುವರೆ ನೇಮಿಸಿರುವರು

[illegible] ಬಿಡುಗಡೆ ಮಾಡಲ್ಪಟ್ಟ ಬಾಬು ಅಶ್ವಿನಿಕುಮಾರದತ್ತರವರು ಈ ತಿಂಗಳ ತಾ [illegible] ಕ್ಕೆ ಬರಿಸಾಲಿಗೆ ಬಂದು ತಲ್ಪಿರುವರು ಇಲ್ಲಿ ಇವರನ್ನು ಭಾರೀ ಸಂಭ್ರಮದಿಂದ ಎದುರುಗೊಂಡರು ಇವರನ್ನು ಬಿಡುಗಡೆ ಮಾಡಿದ ಸಂತೋಷ ಪ್ರದರ್ಶನಾರ್ಥವಾಗಿ ಪಟ್ಟಣದಲ್ಲೆಲ್ಲಾ ಸಹಸ್ರ ದೀಪಗಳನ್ನು ಬೆಳಗಿಸಿದ್ದರು ಅಲ್ಲಲ್ಲಿ ಸಭೆಗಳು ಕೂಡಿ ದೇವ ಪ್ರಾರ್ಥನೆಗಳನ್ನು ಮಾಡಿದ್ದಲ್ಲದೆ ಸರಕಾರದವರಿಗೆ ಕೃತಜ್ಞತೆಯನ್ನು ಸೂಚಿಸುವ ನಿರ್ಣಯಗಳು ಮಾಡೋಣಾದವು ಈ ಸಂಭ್ರಮೋತ್ಸವದಲ್ಲಿ ಪೋಲಿಸಿನವರ ಪ್ರವೇಶವಿರಲಿಲ್ಲ. ಸರಕಾರಿ ಉದ್ಯೋಗಸ್ಥರು ಸಹಾ ಅಶ್ವಿನಿ ಬಾಬುರವರನ್ನು ಎದುರುಗಾಣಿಸಲಿಕ್ಕೆ ಹೋಗಿದ್ದರು.

ಯುರೋಪಿಯರ ಮತ್ತು ಭಾರತೀಯರೊಳಗೆ ಪರಸ್ಪರ ಮೈತ್ರಿಯನ್ನೂ ಸಹಾಕಾರವನ್ನೂ ಉಂಟುಮಾಡುವ ಬಗ್ಗೆ ಒಂದು ಕಮ್ಮಿಟಿಯನ್ನು ಬಂಗಾಳದಲ್ಲಿ ನಿರ್ಮಾಣಿಸುವರೆ ನಿರ್ಣಯಿಸಲ್ಪಟ್ಟಿರುವುದು. ಬಂಗಾಳ ಚೇಂಬರ್ ಒಫ್ ಕಾಮರ್ಸ್ ಎಂಬ ಯುರೋಪಿಯ ವರ್ತಕರ ಸಂಘದವರು [illegible] ಇತರ [illegible] ಆಲೋಚಿಸಿ [illegible] ಯ ನಿರ್ಮಾಣಕ್ಕೆ [illegible] ರುವರು

ಮಿಂಟೋಪ್ರಭುಗಳ ನಂತರ ಹಿಂದೂಸ್ಥಾನದ ವ್ಯಾಸರಾಯ ಪದವಿಗೆ ಯಾರು ನೇಮಕವಾಗುವರೆಂಬದಾಗಿ ಹಲವು ಆಂಗ್ಲ ಪತ್ರಗಳು ಸಮಯೋಚಿತ ಊಹೆಗಳನ್ನು ಸೂಚಿಸಿ ಈ ವಿಷಯವನ್ನು ವಾದಿಸುತ್ತಿರುವರು. ಕ್ರೂ್ಯ ಪ್ರಭುಗಳ ಹೆಸರು ಈ ಮೊದಲು ಈ ಪದವಿಗೆ ಸೂಚಿಸೋಣಾದರೂ ಹಿಂದುಸ್ಥಾನಕ್ಕೆ ಅವರು ಒಲ್ಲುವರೆ ನಿರಾಕರಿಸುವರಾಗಿ ಕೆಲವರು ಹೇಳುತ್ತಿರುವರು. ಆಸ್ಟ್ರೇಲ್ಯದಲ್ಲಿ ಪ್ರಕೃತ ಗವರ್ನರ್ ಜನರಲರಾಗಿರುವ ಡಡ್ಲೆ ಪ್ರಭುಗಳು ನಮ್ಮ ವ್ಯಾಸರಾಯ ಪ್ರಭುಗಳಾಗಿ ನೇಮಕವಾಗುವ ಸಂಭವವಿರುವುದೆಂತ ಇನ್ನು ಕೆಲವರ ಅಭಿಪ್ರಾಯ. ಯಾಕೆಂದರೆ ಆಸ್ಟ್ರೇಲ್ಯದಲ್ಲಿಯ ಗವರ್ನರ್ ಜನರಲ್‌ವರ ಪದವಿಯನ್ನು, ಹಿಂದುಸ್ಥಾನದ ಅಥವಾ ಕೆನಡಾ ದೇಶದ ವ್ಯಾಸರಾಯಗಳ ಸ್ಥಾನವು ಖಾಲಿಯಾದರೆ [illegible] ಬೇಕೆಂಬ ಶರ್ತದ ಮೇಲೆ ಡಡ್ಲೆಪ್ರಭುಗಳು ಸ್ವೀಕರಿಸಿರುವರಂತೆ. ಬ್ರಿಟಿಷ್ ಸರಕಾರದವರು ಇದಕ್ಕೆ ಒಪ್ಪಿ[illegible]ರುವುದರಿಂದ ಈ ಶರ್ತಿ ಡಡ್ಲೆ ಪ್ರಭುಗಳು ಹಿಂದುಸ್ಥಾನದ ವ್ಯಾಸರಾಯ ಪದವಿಗೆ ನೇಮಕವಾಗುವರು [illegible]ವುದು.

ಕಲಿಕತ್ತೆಯ ಬವಾನಿಪುರ [illegible] ವಾದ ವೃತ್ತಾಂತವು ಕೇಳಿಸುತ್ತಿರುವುದು. [illegible] ಪೋಲೀಸು ಆಫೀಸರರ ಮನೆಯನ್ನು ಒಬ್ಬ ಮನುಷ್ಯನು ಸ್ತ್ರೀಯ ವೇಷವನ್ನು ಧರಿಸಿ ಪ್ರವೇಶಿಸಿದನು. [illegible] ಆಫೀಸರರ ಹೆಂಡತಿ ವಿನಹಾ ಬೇರೆ ಯಾರೂ ಇರಲಿಲ್ಲ. ನೌಕರರಲ್ಲಯೂ ಮನೆಯ ಇನ್ನೊಂದು [illegible] ಆಫೀಸರರ ಪತ್ನಿಯು ಏನೋ ನಿಮಿತ್ತ ಹೊರಗೆ ಹೋಗಿದ್ದರು. ಹ್ಯಾ ಕೋರ್ಟ್ ವಕೀಲ[illegible] ಮಗನು ಕೋರ್ಟಿಗೆ ಹೋಗಿದ್ದನು. [illegible] ಗಿಳಿಗೆ [illegible] ಈತನು ಮನೆಯ ಬಾಗಿಲು ತೆಗೆಯುವರೆ ಪ್ರಾರ್ಥಿ[illegible] ಸಿದ್ಧವಾಗಲಿಲ್ಲ. ಮನೆಯ [illegible] ಸರರ ಹೆಂಡತಿಯು ತಾನು ಮೌನವಾ[illegible] ಲತ್ಕಾರದಿಂದ ಬಾಗಿಲು ತೆರೆಯ[illegible] ಉದ್ದೇಶವುಳ್ಳದೆಂತ ಗ್ರಹಿಸಿ ಬಾಗಿಲು [illegible] ನಿಂತು ಆತನೊಡನೆ ಮಾತಾಡುತ್ತಿರಲು [illegible] ನೆಯ ಸ್ತ್ರೀಯು ತಾನು ಮಾರಲಿಕ್ಕೆ [illegible] ಅನೇಕ ಒಡವೆಗಳನ್ನು ತಂದಿರುವೆನೆಂದೂ [illegible] ಕ್ರಯದಲ್ಲಿ ತನ್ನ ಸಾಮಗ್ರಿಗಳನ್ನು ವಿಕ್ರಯಿಸುವೆನೆಂದೂ ವಿಜ್ಞಾಪಿಸಿಕೊಂಡು ತನ್ನ [illegible] ಗಿಲು ತೆರೆದು ಒಂದು ಸರ್ತಿ ನೋಡೆಂದ[illegible] ಸರರ ಹೆಂಡತಿಯು ಮನೆಯ ಬಾಗಿಲು ತೆಗೆಯು[illegible] ಸಿದಳು. ವೇಷಧಾರಿಯು ತನ್ನ ಯತ್ನ[illegible] ದದ್ದನ್ನು ನೋಡಿ ಇತ್ತಲಾಗೆ ಮನೆಯವರು ವಿಶೇಷ ದ್ರವ್ಯವನ್ನೇನಾದರೂ ಪಡೆದಿರುವರೋ, ಯುಗಾಂತರ [illegible] ದೇ ಮಾತರಂ ಪತ್ರಗಳಿಗೆ ಚಂದಾದಾರರಾಗಿರುವರೋ, ಇತ್ತಲಾಗ ಹ್ಯಾಕೋರ್ಟಿನಲ್ಲಿ ಆದ ಡಿಪ್ಯುಟಿ ಪೋಲೀಸು ಇನ್ಸ್‌ಪೆಕ್ಟರರ ಕೊಲೆಯ ವಿಷಯ ಏನಾದರೂ ಗೊತ್ತಿರುವುದೋ ಈ ಮೊದಲಾದ ಪ್ರಶ್ನೆಗಳನ್ನು ಕೇಳುತ್ತಾ ಬಿರುಸಾದ ತಾಸುತನಕ ಮಾತಾಡುತ್ತಲಿದ್ದನು. ಈ ಮನುಷ್ಯನ ಹತ್ತಿರ ಒಂದು ರಿವೋಲ್ವರ್ ಜೋಡಿಯೂ, ಎರಡು ಕಠಾರಿಗಳೂ, ವಂದೇ ಮಾತರಂ ಮತ್ತು ಯುಗಾಂತರ ಪತ್ರಿಕೆಗಳ ಹಲವು ಪ್ರತಿಗಳೂ ಕೆಲವು ಮಾರಾಟದ ಸಾಮಗ್ರಿಗಳೂ ಸೀರೆಗಳೂ ಇದ್ದವಂತೆ. ಈತನು ಬೇಗುಗಾರನೋ ಏನೆಂಬದಾಗಿ ಅನುಮಾನಿಸುತ್ತಿರುವರು.

ಭಾರತೀಯ ಗನಿ ಕೆಲಸ ಮತ್ತು ಭೂರಚನಾವಿದ್ಯಾ ಅಭಿವೃದ್ಧಿ ಸಭೆಯವರಿಗೋಸ್ಕರ ಬರೆಯಲ್ಪಟ್ಟ ಉಪನ್ಯಾಸಗಳಲ್ಲಿ ಬಂಗಾಳದ ಮೇ||ಪಿ. ಘೋಷರವರಿಂದ ಬರೆಯೋಣಾದ ಉಪನ್ಯಾಸಕ್ಕೆ ಸರಕಾರದವರ ಈ ವರುಷದ [illegible] ಇನಾಮು ದೊರಕಿರುವದು. [illegible] ಗಳಲ್ಲಿ ಇದು [illegible]

ದೆ ಇಷ್ಟರ ವರೆಗೆ ಭಾರತೀಯರಾರಿಗಾದರೂ ದೊರಿಯಲಿಲ್ಲ.

ಭಾರತೀಯ ವರ್ತಮಾನ ಪತ್ರಗಳ ಮತ್ತು ಮುದ್ರಣಾಲಯಗಳ ಬದ್ರತೆಯ ಬಗ್ಗೆ ಪ್ರೆಸ್ ಎಸೋಶಿಯೇಶನ್ ಎಂಬ ಭಾರತೀಯ ಮುದ್ರಣಾಲಯಗಳ ಮಾಲಿಕರ ಸಭೆಯು ಏರ್ಪಟ್ಟಿರುವುದು. ಅಮೃತ ಬಜಾರ ಪತ್ರಿಕೆಯ ಸಂಪಾದಕರಾದ ಮೋತಿಲಾಲ್ ಘೋಷರವರು ಈ ಸಭೆಯ ಅಧ್ಯಕ್ಷರೂ, ಸುರೇಂದ್ರನಾಥ ಬೆನರ್ಜಿಯವರು ಉಪಾಧ್ಯಕ್ಷರೂ ಆಗಿ ಚುನಾಯಿಸಲ್ಪಟ್ಟಿರುವರು. ಇತ್ತಲಾಗೆ [illegible] ಸಂಜೀವಿನಿ ಪತ್ರಿಕೆಯ ಸಂಪಾದಕರಾದ ಕೃಷ್ಣಕುಮಾರ ಮಿತ್ರರವರು [illegible] ಇವರು [illegible] ಕಾರ್ಯದರ್ಶಿಗಳಾಗಿರುವರು.

[illegible]

[illegible]

[illegible]

[illegible] ಹಾಗೂ [illegible] ಈ ಸಭೆಯ ಅಧ್ಯಕ್ಷರೂ ಸರ್ [illegible] ಕಾರ್ಯದರ್ಶಿ [illegible]

ದಕ್ಷಿಣ ಹಿಂದುಸ್ಥಾನ

[illegible] ಪತ್ರಗಳ ಪರಿಷ್ಕರಣೆ ಬಗ್ಗೆ [illegible] ಜಿಲ್ಲಾ ಮೆಜಿಸ್ಟ್ರೇಟರು, ಕೂಟ್ಟ [illegible] ಪ್ರಕಾರ, ಡಿಪ್ಯುಟಿ ಸುಪರಿಂಟೆಂಡೆಂಟರಾದ [illegible] ವೆಂಕಟ[illegible]ರಾವರು, ಸ್ಥಳಿಕ ಪೋಲೀಸ್ ಇನ್ಸ್‌ಪೆಕ್ಟರುಗಳ ಪಗ್ಗೆರೆ ಇತರ ಪೋಲೀಸಿನವರೊಡನೆ ಮಹೇಂದ್ರಿಯಕ್ಕೆ ಇಂಗ್ಲಾಂಡಿನಿಂದ ವಾಪಸು ಬಂದಿರುವ ಮಾಮಿಡಿ ದೇವೆಂದ್ರು ಎಂಬ ಒಬ್ಬ ಯೌವನಸ್ಥನ ಮನೆಯನ್ನು ಜಡ್ತಿ ಮಾಡಿದರು, ಆದರೆ ಆಕ್ಷೇಪಕರವಾದ ಕಾಗದ ಪತ್ರಗಳೇನೂ ಸಿಕ್ಕಲಿಲ್ಲವಂತೆ. ಮನೆಯ ಜಡ್ತಿಯು ಮುಗಿಯುತ್ತಿದ್ದಾಗ ಈ ಮಾಮಿಡಿ ದೇವೇಂದ್ರುಡುರ ತಮ್ಮ ನಾಲ್ಕನೇ ಫೋರ್ಮಿನಲ್ಲಿ ಕಲಿಯುತ್ತಲಿರುವ, ವೆಂಕಟಾಚಲಂ ಎಂಬವನ ಕವಾಟಿನಲ್ಲಿ ಪ್ರಕಟವಾಗದ, ಸರ್ ಕರ್ಜನ್ ವಿಲ್ಲಿಯವರನ್ನು ಆಂಗ್ಲಾಳದಲ್ಲಿ ಕೊಂದ ಕೊಲೆಪಾತಕಿ, ಧಿಂಗ್ರನ, ಸಮ್ಮಂಧವಾದ ಒಂದು ಪತ್ರವು ದೊರಕಿರುವದಂತೆ. ರಾಜದ್ರೋಹಪರವಾದ ಮನೆ ಜಡ್ತಿಯು ರಾಜಮಹೇಂದ್ರಿಯಲ್ಲಿ ಇದು ಒಂದನೇದಾಗಿರುವದು.

[illegible] ಮದರಾಸು [illegible] ಎಸೋಶಿಯೇಶನ್ ಎಂಬ [illegible]

ಗಳಿ[illegible] ಗೃಹಸ್ಥರನ್ನು ಬಿಡುಗಡೆಮಾಡಿದಕ್ಕಾಗಿ ತಂತೀ ಮೂಲಕ ವ್ಯಾಸರಾಯ ಪ್ರಭುಗಳಿಗೆ ತಮ್ಮ ಕೃತಜ್ಞತೆಯನ್ನು ತಿಳಿಸಿರುವರು.

ದಕ್ಷಿಣ ಕನ್ನಡ.

ಮಂಗಳೂರು ಗವರ್ನಮೆಂಟ್ ಟ್ರೇನಿಂಗ್ ಶಾಲೆಯ ೧ನೆ ಅಸಿಸ್ಟಾಂಟರಾದ ರಾ|| ಕೆ ವೆಂಕಟರಾಯರು ಎಲ್ ಟಿ ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಪಾಸಾಗಿರುತ್ತಾರೆ.

ಸದರಿ ಶಾಲೆಯಲ್ಲಿ ಸೆಕಂಡರಿ ಗ್ರೇಡಿನ ವಿದ್ಯಾರ್ಥಿಗಳಿಗೆ ಕಲಿಸಬೇಕಾದ ಪಾಠಗಳಿಗೆ ಪ್ರಕೃತಿ ಶಾಸ್ತ್ರ (Nature study) ಎಂಬ ಪಾಠವನ್ನು ಹೊಸತಾಗಿ ಕೂಡಿಸಿಯದೆ. ಇದು ಯುರೋಪಿಯನ್ ಮತ್ತು ಟ್ರೈನಿಂಗ್ ಶಾಲೆಗಳ ಇನ್ಸ್‌ಪೆಕ್ಟರವರ ಅನುಮತಿ ಮೇರೆಗೆ ಆಗಿರುವದು.

ಪತ್ರಕರ [illegible] ವರ್ಷಂತಿಗೆ ಅಧ್ಯಕ್ಷರಾಗಿ [illegible] ಕೊಳ್ಳಿಂಗೋ[illegible] ಮೋಲ್ [illegible] ಇವರ ಬಹುಮಾನಾರ್ಥ [illegible] ಒಂದು [illegible]

[illegible] ರಾಮಕೃಷ್ಣಯ್ಯರಿಗೆ [illegible]

ಇವರ [illegible]

[illegible] ಇನ್ಸ್‌ಪೆಕ್ಟರ್ [illegible]

[illegible] ಇನ್ಸ್‌ಪೆಕ್ಟರ [illegible] ಕಲಸಕ್ಕೆ ಮೊಕ್ತೂರು ಮಾಡಿರುವರು. [illegible] ಇನ್ಸ್‌ಪೆಕ್ಟರಾಗಿದ್ದ [illegible] ಕೃಷ್ಣರಾಯರನ್ನು [illegible] ವರು.

ಇಲ್ಲಿಯ [illegible] ಶ್ರೀಮತಿ [illegible] ಪ್ರೊಫೆಸರೆಯಾಗಿ ನೇಮಿಸಿ [illegible]

ಒಂದರೆ [illegible] ಸಂಬಂಧ ಬಂಟ್ವಾಳ ಮೊಕ್ಕಾಮಿನ [illegible] ಆಗುವ [illegible] ಬಂದಿರುವರು.

ಕಳೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ವಿಪರೀತ ವಿದ್ಯಾರ್ಥಿಗಳು ಸೋತ ಸಂಬಂಧ ಪರೀಕ್ಷೆಯ ಫಲವನ್ನು ಪುನರ್ವಿಮರ್ಶಿಸಿ ಇನ್ನೂ ಕೆಲವರನ್ನು ಪಾಸ್ ಮಾಡುವರಾಗಿಯೂ ಈ ಬಗ್ಗೆ ಕಮ್ಮಿಟಿ ಏರ್ಪಡುವದೆಂದೂ ತಿಳಿದು ಬರುವದು.

ಕಳೆದ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩೭ ಸಿಡುಬು ರೋಗಗಳ ಮರಣಗಳೂ ೫ ಪ್ಲೇಗು ರೋಗದ ಮರಣಗಳೂ ಇದ್ದವು.

ಬೈಂದೂರು. ಕೆಲವು ದಿನಗಳಿಂದ ಉತ್ತರ ಪ್ರಾಂತ್ಯದಿಂದ ಬಿತ್ತೈಸಿದ, "ಪರಮೇಶ್ವರ" ಎಂಬ ಸರ್ಕಸ್ ನಾಟಕ ಕಂಪೆನಿಯವರು ತಮ್ಮ ಅದ್ಭುತವಾದ ಮತ್ತು ಆಶ್ಚರ್ಯಕರವಾದ ಅನೇಕ ಚಿತ್ರವಿಚಿತ್ರವಾದ ಸಾಧನೆಗಳನ್ನು ಮಾಡಿ ತೋರಿಸಿ ನೋಟಕರಿಗೆ ನೇತ್ರಾನಂದವನ್ನುಂಟು ಮಾಡಿದರು. ಮತ್ತು ನಾಯಿ, ಕುದುರೆ, [illegible], ಆನೆ, ಹುಲಿ ಮೊದಲಾದ ಪ್ರಾಣಿಗಳಿಂದಲೂ ಅನೇಕ ಚಿತ್ರವಾದ ಆಟಗಳನ್ನು ಮಾಡಿಸಿ ಪ್ರೇಕ್ಷಕರಿಗೆ ತಮ್ಮ ಸಾಧನ ಮತ್ತು ಸಾಹಸಗಳನ್ನು ಪ್ರದರ್ಶನಗೊಳಿಸಿದಲ್ಲದೆ, [illegible] ತ್ನಮಾಡುವವರಿಗೆ ಪ್ರಯಾಸವಾದುದು [illegible] ದೆಂಬ [illegible] ನ್ನು ತೋರಿಸಿ [illegible] ನ್ನುಂಟುಮಾಡಿದರು.

ಉಪ್ಪಿನಂಗಡಿ. ಇಲ್ಲಿ ಸುಮಾರು ಒಂದು ವಾರದ ಮೊದಲು ಕೊಲ್ಲನ ಮನೆ ರಾಮಭಟ್ಟರೆಂಬವರ ಮನೆಯಲ್ಲಿ ಒಬ್ಬ ಹೆಂಗಸು ಒಂದು ವಿಚಿತ್ರವಾದ ಮಗುವನ್ನು ಹೆತ್ತಿರುವಳು. ಮಗುವಿನ ಕಾಲುಗಳಲ್ಲಿ ಆರಾರು ಬೆರಳುಗಳಿವೆ. ಮಿಕ್ಕ ಅಂಗಗಳೆಲ್ಲಾ ನೋಡಲಿಕ್ಕೆ ಸರಿಯಾಗಿದ್ದರೂ ಮಲದ್ವಾರ ಮಾತ್ರ ಒಂದಿಲ್ಲದಿರುವದು ಪರಮಾಶ್ಚರ್ಯವಾಗಿದೆ. ಕರ್ಮವಿಪಾತವನ್ನನುಸರಿಸಿದ "ವಿಧಾತನ" ಸೃಷ್ಟಿಕರ್ಮವು ವಿಚಿತ್ರವಾಗಿದೆಂಬದು ಸಚಿತ್ರವಾಗಿ ಕಂಗೊಳಿಸುವಂತಿದೆ.

ನಾಯಕನ ಕಟ್ಟೆ ಇಲ್ಲಿಯ ಕರ್ನಾಟಕ ಮೂಲ ಪಾಠಶಾಲೆಯಲ್ಲಿ ಇತ್ತಲಾಗೆ ಹಿತವಾದಿನಿಯ ತಿಂಗಳು ಗಟ್ಟಲೆಯ ಸಭೆಯು ಎಂದಿನಂತೆ ಕುಂದಿಲ್ಲದೆ ನೆರೆಯಿತು ಸಭಿಕರ ಸಂಖ್ಯೆಯು ಕಡಿಮೆಯಾಗಿದ್ದರೂ, ಉಪನ್ಯಾಸಾದಿ ಉದ್ದಿಷ್ಟ ಕಾರ್ಯಗಳು ಯಥಾಯೋಗ್ಯವಾಗಿ ಜರಗಿದವು

~~~

ಕಾಸರಗೋಡು ಈಚೆಗೆ ನಮ್ಮ ಪಟ್ಟಣದಲ್ಲಿ ನೆರೆಗ್ರಾಮದ ಕೆಲವು ಕಡೆಗಳಲ್ಲಿಯೂ ಸಿಡುಬು ರೋಗವು ತಲೆದೋರಿಯದೆ ಆದರೆ ಹೆಚ್ಚಿನ ಭಯಂಕರ ಸ್ಥಿತಿಯಲ್ಲಿ ಇಲ್ಲ. ಬೇಗನೇ ಈ ವ್ಯಾಧಿಯು ನಮ್ಮನ್ನೆಲ್ಲರನ್ನು ತೊಲಗಿ ಹೋಗಲೆಂದು ಸರ್ವರೂ ಜಗದೀಶ್ವರನನ್ನು ಬೇಡುತ್ತಾರೆ

ಮಂಗಳೂರತ್ತಕಡೆಯಿಂದ ಫ್ರಾನ್ಸಿಸ್ [illegible] ಎಂಬ ರೋಮನ್ ಕಥೋಲಿಕ ಯುವಕನೊಬ್ಬನ ಕೆಲವು ದಿವಸಗಳ ಹಿಂದೆ ಇಲ್ಲಿಗೆ ಬಂದು ನಮ್ಮ ಸಬ್‌ಕಲೆಕ್ಟರ್ ಮೇಜಿಸ್ಟ್ರೇಟರಲ್ಲಿ ಒಂದು ದಿನ ರಾತ್ರಿ ಆಮಂತ್ರಣವಿಲ್ಲದೆ ತಾನಾಗಿ ಅತಿಥಿಯಾಗಿದ್ದು ಯೋಗ್ಯರೀತಿಯಲ್ಲಿ [illegible] ಫಲಹಾರ ಊಟ ಉಪಚಾರಗಳನ್ನೆಲ್ಲಾ ಸ್ವೀಕರಿಸಿ ರಾತ್ರಿ ಅಲ್ಲೇ ಉಳಕೊಂಡನು ಮರು ದಿನ [illegible] ಹೋಗುತ್ತೇನೆಂತ ಹೇಳಿ ಹೊರಟು ಹೋಗುವಾಗ ಮೇಜಿಸ್ಟ್ರೇಟರು ಹಾಕಿಕೊಳ್ಳುವ ಒಂದು ಕಪ್ಪು [illegible] ಕೋಟು ಯಾನೆ ನಿಲುವಂಗಿಯನ್ನೂ ಅದಕ್ಕಿರುವ ಒಂದು ಚಿನ್ನದ ಗುಂಡಿ ಸಮೇತ (ಅಲ್ಲಿಂದ ಯಾರೂ ನೋಡದಂತೆ ಜಾರಿಸಿ) ರೈಲ್ವೆ ಸ್ಟೇಶನಿಗೆ ಹೋಗಿ ಕಣ್ಣಾನೂರಿಗೆ ಟಿಕೆಟು ತಕ್ಕೊಂಡು ಹೋದನು ನಂತರ ಇದು ಮೇಜಿಸ್ಟ್ರೇಟರಿಗೆ ಕೋರ್ಟಿಗೆ ಬರುವ ಹೊತ್ತಿನಲ್ಲಿ ಕೋಟು ಹುಡುಕಿ ಶಿಕ್ಕದೆ ಇದ್ದಾಗ್ಯೆ ವಿಚಾರಿಸಿದಲ್ಲಿ ಸದರಿಯವನ ಮೇಲೆ ಊಹನೆಯಿಂದ ಪೋಲೀಸಿನವರಿಗೆ ರಿಪೋರ್ಟು ಕೊಟ್ಟು ಕಣ್ಣಾನೂರಿಗೆ ಪೋಲೀಸಿನವರು ಹೋಗಿ ತಲಾಷಿ ಮಾಡಿ, ಕೋಟು ಸಮೇತ ಕೈದು ಮಾಡಿ ಇಲ್ಲಿಗೆ ತಂದು ಆತನ ಮೇಲೆ ಚಾರ್ಜು ಮಾಡಿ ನಮ್ಮ ತಾಲೂಕು ತಹಶಿಲ್ದಾರ ಮೇಜಿಸ್ಟ್ರೇಟರ ಮುಂದೆ ನಂಬ್ರ ತನಿಖೆಯಾಗಿ ಮುದ್ದೆಯಾಳಿಯು ಕಳವು ಮಾಡಿದ್ದು ಒಪ್ಪಿದ್ದರಿಂದ ಒಂದು ತಿಂಗಳ ಸಜಾ ನಿನ್ನೆ ವಿಧಿಸಿದರು ಈ ಅಪರಾಧಿಯು ಮಂಗಳೂರಿನಿಂದ ಬರುವಾಗ್ಯೆ ಕೆಲವು ಕಡೆಯಲ್ಲಿ ಚಿಲ್ಲರೆ ಸಾಮಾನುಗಳು ಕಳವು ಮಾಡಿ ತಂದಿರುತ್ತಾನಂತೆ ಈ ವಿನಹ ಕಣ್ಣಾನೂರಿಂದ ಬರುತ್ತಿಲ್ಲ ಒಂದು ಕಿರೀ ಘಡಿಯಾರವು ಸಹ ಕಳವು ಮಾಡಿ ತಂದಿರುತ್ತಾನಂತೆ ಅಪರಾಧಿಯು ಸ್ವಯಂ ಬುದ್ಧಿ ಇಲ್ಲದ ಹುಚ್ಚನಂತೆ ನಟಿಸುತ್ತಾನೆ

ನೀಲೇಶ್ವರ ಸಮೀಪ ಒಂದು ಹಳ್ಳಿಯಲ್ಲಿ ಇವೇ ತಿಂಗಳ ಶುರುವಿನ ಒಂದು ದಿನ ರಾತ್ರಿ ನೀಲಮನೆ ಎಂಬಲ್ಲಿ ಎಂಬ ಮಲಯಾಳಿ ಬ್ರಾಹ್ಮಣನ ಮನೆಯಲ್ಲಿ ಹತ್ತಿಪ್ಪತ್ತು ಜನ ಕಳ್ಳರು ಬಂದು ಮನೆ ಯಜಮಾನನನ್ನೂ ಹೆಂಗಸರನ್ನೂ ಕಟ್ಟಿ ಹಾಕಿ ಹೊಡದು ನಿರ್ಬಂಧಿಸಿ ಒಳಗಿರುವ ಸುಮಾರು [illegible] ಸಾವಿರ ರೂಪಾಯಿ ನಗದಿ ವಗೈರೆ ಸೊತ್ತು ತೆಗದುಕೊಂಡು ಹೋದರಂತೆ. ಪೋಲೀಸಿನವರು ಥಾರೀ ತಲಾಶಿಯಲ್ಲಿದ್ದಾಗ್ಯೂ ಇದು ವರೆಗೆ ಕಳವು ಪತ್ತೆಯಾಗಲಿಲ್ಲವಂತೆ. ಮನೆ ಯಜಮಾನನು ಜಖಮಿನ ಚಿಕಿತ್ಸೆಯಲ್ಲಿರುವನು.

~~~

ಎರ್ಮಾಳ. ಮಂಗಳೂರು ಅತ್ತ ಕಡೆ [illegible] ರುವ ಸಿಡುಬು [illegible] ಶಾಂತವಾಗಿರುವದು.

ಗುಪ್ಪೆ ಬಿ. ಜಿ. ಎಮ್ ಶಾಲೆಯಲ್ಲಿ ಉಪಾಧ್ಯಾಯರುಗಳ ಥಾರ್ಲಿ ಸಭೆಯು ನೆರವೇರಿಯದೆ. ಆ ಸಭೆಗೆ ಮ. ರಾ. ರಾ. ಅಸಿಸ್ಟಾಂಟ್ ಇನ್‌ಪೆಕ್ಟರರಾದ ಯು ರಾಘವೇಂದ್ರ ರಾಯರವರು ಅಗ್ರಾಸೀನವನ್ನು ಅಲಂಕರಿಸಿದರು ಸಭೆಯಲ್ಲಿ ಪ್ರಾರಂಭ ವಿದ್ಯಾರ್ಥಿಗಳು ಸ್ನೇಹತ್ವದ ಮರ್ಮಗಳು ಸಭಿಕರಿಗೆ ಗ್ರಾಹ್ಯವಾಗುವಂತೆ ತೋರ್ಪಡಿಸುವ ಒಂದು ಚಲೋ ನಾಟಕವನ್ನು ಆಡುವವರಾದರು ನಂತರ ಉಪನ್ಯಾಸ ಪಾರ ಕೊಡುವದು ಮುಂತಾದ್ದು ಇದ್ದಿತ್ತು ಕೊನೆಗೆ ಹೆಡ್ ಮಾಸ್ಟರರು ಶಾಲೆಯ ವರದಿಯನ್ನು ಓದಿ ಅಧ್ಯಕ್ಷರಿಂದ ಬಾಲಕರಿಗೆ ಇನಾಮಾದಿಗಳನ್ನು ಕೊಡಿಸುವವಂದರು

ಮುಲ್ಕಿ ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಗೆ ಬನಾದಿ ಎಂಬ ಒಬ್ಬ ಹೊಸ ಮಿಸ್ಟ್ರೆಸ್ ಒಂದನೇ ಅಸಿಸ್ಟಾಂಟ್ ಮಾಸ್ಟರರಾಗಿ ನೇಮಕಪಟ್ಟು ಬಂದಿರುವರಷ್ಟೆ ತರಬೇತಾದ ಸಬಿಸಿನ ಮಿಸ್ಟ್ರೆಸ್‌ಗಳು ಈ ಮೊದಲೇ ಇರುವಾಗ ತರಬೇತಾಗದವರನ್ನು ಒಂದನೇ ಅಸಿಸ್ಟಾಂಟರನ್ನಾಗಿ ಮಾಡಿದ್ದು ಬೋರ್ಡಿನವರ ಯಾವ ನ್ಯಾಯವೊ ತಿಳಿಯುವದು ಕಷ್ಟತರ

ಇಲ್ಲಿಯ ರಿಜಿಸ್ಟ್ರ ಆಫೀಸಿನ ಮುಂದೆ ಗವರ್ನಮೆಂಟಿನವರು ಒಂದು ಗ್ರಾಮ ಮುನ್ಸೀಫ್ ಕೋರ್ಟನ್ನು ಕಟ್ಟಿಸುತ್ತಲಿರುವದು ಹೊಗಳತಕ್ಕ ಸಂಗತಿಯೇ ಎಂದನ್ನಬಹುದ ದರೂ ಹುಡುಗರ ಹುಡುಗಿಯರ ಬೋರ್ಡು ಶಾಲೆಗಳು ಬಲು ಹತ್ತರ ಇರುವಾಗ ಅವುಗಳ ಸಮೀಪದಲ್ಲಿ ಜನ ಸಮುದಾಯವು ಕೂಡಿ ಎಂದು ಗದ್ದಲಕ್ಕೇನೂ ಕಮ್ಮಿ ಇಲ್ಲದ ಕಚೇರಿಯನ್ನು ಕಟ್ಟಿಸುವುದು ನ್ಯಾಯವಲ್ಲವೆಂಬದಾಗಿ ತಿಳಿಸಲು ಇಚ್ಛಿಸುತ್ತೇನೆ

ಉಡುಪಿ [illegible] ಎಲ್ಲ ಸಿಡುಬು ರೋಗದಿಂದ ಮುಚ್ಚಲ್ಪಟ್ಟಿದ್ದರೂ ಮಂಗಳೂರಿನಂತೆ ಮರಣಗಳು ಈ ವರೆಗೆ ಸಂಭವಿಸಲಿಲ್ಲ ನಮ್ಮಲ್ಲಿಯ ಡಿಸ್ಟ್ರಿಕ್ಟ್ ಎವ್ [illegible] ಕುಂದಾಪುರ ಪಟ್ಟಣಕ್ಕೆ ಒಬ್ಬ ಆಫೀಸರನನ್ನೂ ಸದರಿ ಸಿಡುಬು ರೋಗದ ಉಪಶಮನದ ಬಗ್ಗೆ ಒಬ್ಬ ಡಾಕ್ಟರರನ್ನೂ ತಂದಿ ಪಟ್ಟಣ ನಿವಾಸಿಕರ ಶಾಂತಿ ಪಾತ್ರರಾಗಿ ವರ್ತಿಸ್ಸಲ್ಪಡಬೇಕೆಂಬ ವಿಜ್ಞಾಪನೆ ಮಾತ್ರವೂ ಸುಮ್ಮನಿರದೆ ಕೆಲಸ ಮಾಡ [illegible] ರೆ ಇದರ ಈ ಜುಮ ದಾರಿ ಅವರು ಸ್ವತ್ವವ ಗರುವುದು

ಉಡುಪಿ [illegible] ತಾಲೂಕು ಬೋರ್ಡು ಮೆಂಬರಿಗೆ [illegible] ಪ್ರತಿನಿಧಿಯಾಗಿ [illegible] ಪ್ರಾಂಗಣ ಸ ಕುಕ್ಕರ ಶ್ರೀನಿವಾಸ [illegible] ಸದರಿ ಮಂದಿ [illegible] ತ್ತೇನೆ ನಿವಾಸಿಕರ ಪೋಟಿಂದ ಪ್ರಥಮ ಸರ್ತಿ ತಾಲೂಕು ಬೋರ್ಡು ಮೆಂಬರರ ಚುನಾವಣೆ ಇದಾಗಿರುವುದು ವೋಟು ಕೊಡುವವರೆಲ್ಲರೂ ಉಭಯತರಲ್ಲಿ ಪ್ರಜಾರಂಜಿತರಾಗಿರುವುದೆಂಬದನ್ನು ನಿರ್ಣಯಿಸಿ ಆ [illegible] ತಮ್ಮ ಪ್ರತಿನಿಧಿಯನ್ನು ಚುನಾಯಿಸಿ ಕೊಳ್ಳಲಿ

ಇಲ್ಲಿಯ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಕೆಲವು ಮಾನ್ಯ ಆಫೀಸರರನ್ನೂ ಸಾಹುಕಾರರನ್ನೂ ಇನ್ನೂ ಒಬ್ಬಿಬ್ಬರನ್ನೂ ಕೈದುಮಾಡಿರುವರಂತೆ ಘಟಿತಾಂಶವನ್ನು ಹಿಂದಿನಿಂದ ಸೂಚಿಸುತ್ತೇನೆ

ನಮ್ಮ ತಾಲೂಕು ಬೋರ್ಡಿನವರು ಸ್ತ್ರೀ ವಿದ್ಯಾಭ್ಯಾಸದಗೋಸ್ಕರ ಒಂದು ಹುಡುಗಿಯರ ಶಾಲೆಯನ್ನು ಈ ಪಟ್ಟಣದಲ್ಲಿ ಸ್ಥಾಪಿಸುವಂತೆ ಪಟ್ಟಣ ನಿವಾಸಿಕರು ತಾಲೂಕು ಬೋರ್ಡು ಪ್ರೆಸಿಡೆಂಟರಾಗಿ ಡಿಪ್ಯುಟೇಶನ್ ಮೂಲಕ ಅರಿಕೆ ಮಾಡಿಕೊಂಡಂತೆ ಇದೇ ಬರುವ ಮಾರ್ಚಿ ಪ್ರಾರಂಭದಿಂದ ಶಾಲೆ ಪ್ರಾರಂಭವಾಗುವದಂತೆ ಹುಡುಗಿಯರ ಶಾಲೆ ಸ್ಥಾಪಿಸಬೇಕಾಗಿ ಇಲ್ಲಿಯ ಪ್ರಖ್ಯಾತಿಗೊಂಡ ವಕೀಲ [illegible] ನಾರಾಯಣ ರಾಯರು ಸ್ವತಹಾ ತಮ್ಮ ವಠಾರದಲ್ಲಿ ಕಟ್ಟಿಸುವ [illegible] ಸವ ಮುಖ್ಯವಾಗುತ್ತ [illegible]

ಇಲ್ಲಿಯ ಕೆನರಾ ಬೆಂಕಿಂಗ್ ಕೊರೊಪರೇಶನ್ ಬ್ರಾಂಚ ಫಂಡಿನ ಆಫೀಸು ಈ ವರೇಗೆ ಖಾನ್ ಸಾಹೇಬ್ ಅಬ್ದುಲ್ಲಾ ಹಾಜಿ ಕಾಸೀಮ್ ಸಾಹೇಬ ಬಹದೂರ ಇವರ ಕಟ್ಟೋಣದಲ್ಲಿತ್ತು. ಪ್ರಕೃತ ಇದೇ ಆಫೀಸನ್ನು ವಕೀಲರಾ| ಬೈಂದೂರ ನಾರಾಯಣ ರಾಯರಲ್ಲಿಗೆ ಒಯ್ದಿರುವರು ಫಂಡು ಕಳೆದ ತಾ. [illegible] ರಲ್ಲು ಜಿಲ್ಲಾ ರಿಜಿಸ್ಟ್ರಾರರಿಂದ ಪರಿಶೋಧಿಸಲ್ಪಟ್ಟಿತು.

~~~

ಜೀವಸುಗಳ ಧಾರಣೆ, ಮಂಗಳೂರು.

ಹೊಸ ಕೂಳೂರು ಮಸ್ಕತಿ ಅಕ್ಕಿ ,,	4—6—0
,, ಗುಡ್ಡು ಮಸ್ಕತಿ, ,,,,,,,	3–13—0
,, ಮಸ್ಕತಿ ,,,,,,,,,,,,,	3—12—0
,, ಗುಡ್ಡು ರಾಶಿ ,,,,,,,,,,,	3—9—0
,, ಬತ್ತ ,,,,,,,,,,,,,,	1—9-0
,, ಮಸ್ಕತಿ ಬೆಳ್ತಿಗೆ ,,,,,,,,,,	4—1—0
,, ರಂಗೂನ್ ಬೆಳ್ತಿಗೆ ಗೋಣಿ .,,	7—0—0
,, ಹುರುಳಿ ಗೋಣಿ ಗ ಮುಡಿ 2ರ	5—14-0
ಉಪ್ಪು ಗೋಣಿ ಗರ ,,,,,,,	3—8—0
ಕೊಪ್ರಿ ಖಂಡಿ ಗರ ,,,,,,,	100—0—0
ಕೊಪ್ರಿ ಎಣ್ಣೆ ಮಣ ,,,,,,,,	6—14—0
ಕಾಫಿ ಖಂಡಿ ಗರ ,,,,,,,	195—0—0
ಕಾಳು ಮೆಣಸು ಖಂಡಿ ,,,,,	110—0—0
ಹೊಸ ಬಿಳಿ ಗೋಟು ಅಡಿಕೆ ,,,	78—0—0
ಕರಿ ಗೋಟು ,,,,,,,,,,,,	60—0—0
ಏಲಕ್ಕಿ ಮಣ ಗರ ,,,,,,,	30—0—0

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೆರೆ.

ದೇಶಬಾಂಧವರೇ!

[illegible] ಗಿಯೂ, ಚಲ್ಲ ದಯಾಗಿಯೂ, ಕ್ರಯದಲ್ಲಿ ಕಡಿಮೆಯಾಗಿಯೂ ಹೆಚ್ಚಾದುದರಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ,
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ - ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯು ಮದ್ರಾಸು ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು ದ ಕನ್ನಡ

ಯುಗಾದಿಯ ಬಹುಮಾನ! ಯುಗಾದಿಯ ಬಹುಮಾನ!!

ಹ ಸ ಟೋಪಿ ಸುಪೀರಿಯರ್ ಉಲ್ಲಾದ 1 ಟೋಪಿ ದಾರಕ್ಕೆ ೦ ೮ ೦ 10 ಟೋಪಿ [illegible] 1ಕ್ಕೆ ರೂ 3 7 0 ಬಣ್ಣದಲ್ಲಿ ಎಣ್ಣೆ ಕೆಂಪು ಕಪ್ಪು ಕೇಟೆ ಕೆಂಪು ಹಳದಿ ಗುಲಾಬಿ [illegible] ಬಣ್ಣಗಳಲ್ಲಿ— ಹಾಸ್ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ [illegible] 1ಕ್ಕೆ 2 4 0 [illegible] 1ಕ್ಕೆ 0 10 0 [illegible] ಎಣ್ಣೆ ಕೆ ಪು ಕಪ್ಪು ಮತ್ತು ಕೇಟೆ ಕೆಂಪು [illegible] 1ಕ್ಕೆ 2 12 0 [illegible] ಟೋಪಿ ಆಗುವದು ಕೊಕ್ಕೆ ಸೂಜಿ 1ಕ್ಕೆ 0 1 6 ಮತ್ತು 0 1 0 [illegible] ಟೋಪಿ [illegible] 1ಕ್ಕೆ ರೂ 1 12-0.

[illegible] 1ಕ್ಕೆ 8 0 0 ಮತ್ತು 1 0 0 ತರಹೇವಾರಿ ರಂಗಿನಲ್ಲಿ [illegible] 1ಕ್ಕೆ ರೂ 3 4 0

[illegible] ತರದ [illegible] 0 8 0 ದೊಡ್ಡವರ [illegible] ಆಣೆ 0-4-0 [illegible] 1 8 0 [illegible] 0 4 0 ಮತ್ತು 0 6 0 ದೊಡ್ಡವರ [illegible] 1ಕ್ಕೆ 8ರಿಂದ 1 0 0 ದೊಡ್ಡವರ ಮುಸುಕಿನ ಟೋಪಿ 1ಕ್ಕೆ 1 0 0 [illegible] ಪಾಕೆಟ್ 1ಕ್ಕೆ 0 2 0 ಉಲ್ಲಾದ [illegible] ಪಾಕೆಟ್ 1ಕ್ಕೆ 0 2 0 ಉಲ್ಲಾದ ಕಮರ್‌ಬಂದ್ 1ಕ್ಕೆ 10 ಆಣೆಯಿಂದ 1 4 0 [illegible] 1ಕ್ಕೆ 0 1 0 0 1 6ರಿಂದ 0 4 0 ಹೊಗಿನ [illegible] 1ಕ್ಕೆ 0 2 0 [illegible] 1ಕ್ಕೆ 0 4 0 [illegible] ಡಬ್ಬಿ 1ಕ್ಕೆ 0 4 0 [illegible] 1ಕ್ಕೆ ಆಣೆ 6ರಿಂದ 0 12 0 [illegible] ರಬ್ಬರ್ [illegible] ಬಾಟ್ಲಿ 1ಕ್ಕೆ 0 4 0 [illegible] ತಾಂಬೂಲಪತ್ರಸು 300 [illegible] ಪಾಕೆಟ್ 1ಕ್ಕೆ 0 3 0 [illegible] ಡಬ್ಬಿ 1ಕ್ಕೆ 0 3 0 [illegible] ಡಬ್ಬಿ 1ಕ್ಕೆ 0 5 0 [illegible] ದಜನ್ 1ಕ್ಕೆ 1 0 0 [illegible] ದಜನ್ 1ಕ್ಕೆ 1 6 0 ಕಸ್ತೂರಿ ಮಾತ್ರೆ 1000ರ ಸೀಸೆ 1ಕ್ಕೆ 0 4 0 [illegible] ತೈಲಗಳು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಸೀಸೆ 1ಕ್ಕೆ 1 0 0 ಪರಿಮಳ [illegible] ಡಬ್ಬಿ 1ಕ್ಕೆ 0-2-0. [illegible] ಡಬ್ಬಿ 1ಕ್ಕೆ 0 6 [illegible] ಸೀಸೆ 1ಕ್ಕೆ 0 5 0 [illegible] ಅತ್ತರ್ ಸೀಸೆ 1ಕ್ಕೆ 1 8 0 [illegible] ಅತ್ತರ್ ಸೀಸೆ 1ಕ್ಕೆ 1-8 0 ರೋಜ್ ಅತ್ತರ್ ಸೀಸೆ 1ಕ್ಕೆ 2 0 0 ಇಂಗ್ಲಿಷ್ ಅಕ್ಷರದ ಪಟ್ಟಿಗೆ 1ಕ್ಕೆ 10 ಆಣೆಯಿಂದ 3 0 0 [illegible] ಕಾರ್ಡುಗಳು 100ಕ್ಕೆ 0 3 0 ರೂಲು ಹಾಕಿದ ಲೆಟರ್ ಪೇಪರ್ ಪಾಕೆಟ್ 1ಕ್ಕೆ 0 4 0 [illegible] ಕವರ್ 100ಕ್ಕೆ 0 5 0 [illegible] ಹಿಂಗು 12 ತೊಲ ಡಬ್ಬಿ 1ಕ್ಕೆ 0 14-0. ಕೆಂಪು ನೂಲಿನಿಂದ ತಯಾರಿಸಿದ ಕಮರ್‌ಬಂದ್—0 4 0, 0 7 0 ಮತ್ತು 0 9-0. [illegible] ಪಾರಿಜಾತವೆಂಬ ಹಾಡಿನ ಪುಸ್ತಕ 0 4 0

ಎಂಟಾಣೆಯಕ್ಕಿಂತಲೂ ಜಾಸ್ತಿ ಸಾಮಾನು ಕರಿದಿ ಮಾಡುವವರಿಗೆ ಒಂದು [illegible] ಬಹುಮಾನವಿದೆ ವಿ. ಪಿ. ಖರ್ಚು ಜಾಸ್ತಿ.

ವಿಳಾಸ— ದಿ. [illegible]

[illegible]

ಮಂಗಳೂರು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) — **ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) — **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು ತರಹದ ಬೈಂಡಿಂಗಿನ ಲೆಕ್ಕದ ಪುಸ್ತಕಗಳು

3"×8¼ 3"×5¼, 8¼×6 6×4 ಪರಿಮಾಣಗಳಲ್ಲಿದ್ದು ಸಾವುಕಾರ ಅಂಗಡಿಗಾರ, ವರ್ತಕರು ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಪಾತ್ರವಾಗಿದ್ದು

ಒಳಗೆ ನಮೂನೆ ಬರೆಯಲು ಹಾಳೆಗಳು ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗಂಟೆ ಇದ್ದರೆ ಬೇರೆ ಎಲ್ಲಾ ನಮೂನೆಗಳ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾವುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗ ತರಿಸಿದ ಉತ್ಕೃಷ್ಟವಾದ ಮಾರ್ಬಲ್ ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ.
ಮಂಗಳೂರು.

ಹೂವಿನ ಒಳ್ಳೇ ವಿನಿಯೋಗವು ಯಾವುದು— ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ
ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೦ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 19[illegible]ನೇ ಇಸವಿಯಿಂದ ಸ್ವಂತ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಟೀ ಕೋಕೋವಾ ಕಾಫಿ ಹುಡಿ ಬಿಸ್ಕೂಟು, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಔಷದೋಪಯೋಗದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಫೆರೊಸ್ಪಾಸ್, ಕೆಮಿಕಲ್ ಫುಡ್ ನಾನಾತರದ ಮುಲಾಮು, ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವದಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವ ಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡೆಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾವುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಚುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association,
Mangalore, S.C.

Printed by [illegible] Kamath, at the Mangalore Trading Association's [illegible] Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಮಂಗಳೂರು, ತಾರೀಕು 12ನೇ ಶನಿವಾರ ಮಾರ್ಚ 191[illegible] ಸಂಚಿಕೆ 10.

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದೂಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಜೇನಿನ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಬಾಧೆ, ಉದರಂಗವಾಯು, ನೆಂಟನೋವು ಗಂಟಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರದ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿಗೆ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ನೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಕಾಣದು. ಡಬ್ಬಿಗೆ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿಗೆ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಿಗಳಿವೆ. ೨೦ ಗುಟಿಕೆಗಳ ಡಬ್ಬಿಗೆ ಕಿಮ್ಮತು ರೂ 1

ಅಮೃತಾಂಜನ ಡಿಪೊ, ಮುಂಬಯಿ

ಇವರ

ಬ್ರೇಂಚ್ ಆಫೀಸು ಮಂಗಳೂರಲ್ಲಿ ತೆರೆಯಲ್ಪಡುವದು.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರೆದಲ್ಲಿ ರವಾನಿಸಲ್ಪಡುವದು.

ವಿಳಾಸ:- ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

ವ್ಯವಸಾಯ ಕ್ರಮಬೋಧಿನಿ

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದ್ದು. ಜಮೀನ್‌ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಉಂಟಾಗಿರಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು. ಕ್ರಯ ಸ್ಟಿಫ್ ಬೈಂಡು ಪ್ರತಿ ಒಂದಕ್ಕೆ ೦—೧—೦; ಕ್ಯಾಲಿಕೋ ಬೈಂಡು, ೧—೦—೨; ಟಪ್ಪಾಲ್ ಹಾಸಲ್ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್ ಯನ್ ರಾವ್ ಬ್ರದರ್ಸ್

262 ಚಿಕ್ಕಪೇಟೆ, ಬೆಂಗಳೂರು

ಮುಫತ್ತು ೧೯೧೨ನೇ ವರುಷದ ಕ್ಯಾಲೆಂಡರು ಮುಫತ್ತು

ಕಾನ್‌ಪೂರ ಉಲನ್ ಚೌಕಗಳು.

ಸೈಜು 40×40, ನೀಲಿ, ಗುಲಾಬಿ ಊದ, ಹಸರು, ಕರೀದು, ಕೇಸರಿ, ಬಿಳುಪು, ಚಾಕ್ಸ್ ಮತ್ತು ಇತರ ರಂಗುಗಳು ಒಂದು 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿದ ಪಕ್ಕೆ 1ಕ್ಕೆ ಹೆಚ್ಚುತ 0—1—0

ಶಾಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲೂ 1ನೇ ನಂಬರು 1ಕ್ಕೆ ರೂ 4 4 0 2ನೇ ನಂಬರು ರೂ 3—12—0 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿದ ಪಕ್ಕೆ 1ಕ್ಕೆ ಹೆಚ್ಚುತ 0—4—0

ಸಾಚಾ ಒಳ್ಳೇ ಕಲಾಪತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು,

1ನೇ ನಂಬರು 0—10—0, 1—1—0,

2ನೇ ನಂಬರು 0—14—0, 1—8 0, 2—4—0

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂಸಾ, ... , ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ ... , 1ಕ್ಕೆ ರೂ 1 4-0. 1-8 0, 2 4-0, 2-8-0, 3 0 0

ಚಿತ್ರಾಪನ 3-0-0, 4 0-0 5-0-0, 6 0 0

ಡಿಟ್ಟೊ ಗಜ 1ಕ್ಕೆ 1 8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6 0, 2 8 0, 3 0-0

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8

ಉಲನ್ ಬನೀನುಗಳು 1ಕ್ಕೆ ರೂ 2-4-0, 2-8 0, 3-0-0, 3-8 0

ಫಿಲ್ಟ್ ಕ್ಯಾಪ್‌ಗಳೂ ಕ್ರಿಷ್ಟಿಸ್ 1ಕ್ಕೆ ರೂ 1 12 0, 2-4 0, 2-8 0 2-12-0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12-0 1-0 0, 1-4-0, 1-8-0

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4-0-0, 4-4-0, 4-8-0, 5-8-0, 6-0 0, 7-0 0, 8-0 0, 9-0 0, 10-0-0, 12-0-0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0 10-0, 0-12-0

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12

ಕೇಶರಂಜನ ತೈಲ ಬಾಟ್ಲು 1ಕ್ಕೆ	ರೂ	0—11—0
ಕುಂತಳ ಕೌಮುದಿ ತೈಲ ,,	,,	0—12—0.
ಕಮೋನಿಯಾ ಓಯಿಲ್ ,,	,,	1—0—0.
ಭೃಂಗಾಮಲಕ ತೈಲ ಸೀಸೆ	,,	0—4—0, 0—8—0, 1—0—0
ಕಸ್ತೂರಿ ಮಾತ್ರೆ ಸೀಸೆ	,,	0—4—0.

ಎಲ್. ಎ. ಶೋರುವಾಲ್

ಪೇಟೆ, ಬೆಂಗಳೂರು.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ... ಗಳು, ಇಂಗ್ಲೀಷ್ ಮತ್ತು ನೇಟಿವ್ ತರಕಾರಿ ಮತ್ತು ಹೂವಿನ ಬೀಜಗಳು ವಗೈರೆ ಅನೇಕ ವಿಧವಾದ ಬೀಜಗಳು, ಲೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ, ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ತಾತ್ಪರ್ಯ, ವ್ಯಾಕರಣ ವಿಷಯ, ವಿಶೇಷ ಟಿಪ್ಪಣಿಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಪೋಸ್ಟು ಮಾರ್ಗಿಳಿಂದ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಸಿದ್ಧವಿದೆ ಬೆಲೆ 0—4—0

ವಿಳಾಸ - ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ನ್ಯೆವೆ ನ್‌ಗರ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಜಬ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈಶಿಷ್ಟ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆ ಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್ ... ಸೇನ್, ಎಲ್. ಎಮ್. ಎಸ್.,

216 ಕಾರ್ನ್‌ವಾಲಿಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ...

SMALL-POX BALM
ಸ್ಮಾಲ್ ಪೋಕ್ಸ್ ಬಾಂ
ಎಂಬ

ಸಿಡುಬುರೋಗಕ್ಕೆ ಮುಲಾಮು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಒಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಮೈಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಮೈಲೆಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇವನ್ನು ಪರೀಕ್ಷಾರ್ಥ ಉಪಯೋಗಿಸಬಹುದು

ಹೋಮಿಯೊಪೆತಿಕ್, ಟಿಸ್ಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೊಪೆತಿಕ್, ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೬ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು. ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ
ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್,
(ಮಂಗಳೂರು ವ್ಯಾಪಾರ ಸಂಘ)
ರಥವೀದಿ, ಮಂಗಳೂರು
ಇವರಲ್ಲಿ ದೊರೆಯುವುದು

ಸ್ವದೇಶಾಭಿಮಾನಿ.

ಮಂಗಳೂರು, ಶನಿವಾರ ತಾರೀಕು 12ನೇ ಮಾರ್ಚಿ 1910

ಬಜೇಟು ಯಾ ಆದಾಯವ್ಯಯಗಳ ಅಂದಾಜು ಪಟ್ಟಿಯೂ, ಹೊಸ ತೆರಿಗೆಗಳೂ.

ವ್ಯಾಪಾರಾ ... ನ್ಯಾಯನಿರ್ಮಾಣ ಸಭೆಯಲ್ಲಿ ಇಂಡಿಯಾ ಸರಕಾರದವರ ಬಜೇಟು ... ಅಂದಾಜು ಪಟ್ಟಿಯೂ ಹೊಸ ತೆರಿಗೆಗಳೂ ... [illegible] ... (೧೯೧೦-೧೯೧೧) ... ಅಂದಾಜುಗಳನ್ನೂ ... ಸಭೆಯು ಮುಂದಿಟ್ಟು ಕೆಲವು ವಿಷಯಗಳ ವಾದವು ಮುಗಿದಿರುವದು.

ಇತ್ತಲಾಗೆ ಜಾರಿಯಲ್ಲಿ ಬಂದ ಕೌನ್ಸಿಲು ಆಕ್ಟಿನ ಪ್ರಕಾರ ನ್ಯಾಯನಿರ್ಮಾಣ ಸಭೆಯಲ್ಲಿ ಹಾಜರು ಪಡಿಸಿದ ಬಜೇಟು ಯಾ ಜಮಾ ಖರ್ಚಿನ ಪಟ್ಟಿಯನ್ನು ವಾದಿಸುವ ಸ್ವತಂತ್ರವು ಗತವರುಷಗಳಿಗಿಂತ ಹೆಚ್ಚು ಪ್ರಜಾಕಡೆಯ ಮೆಂಬರರಿಗೆ ದೊರಕಿರುತ್ತದೆ ೧೮೬೦ನೇ ವರುಷದಲ್ಲಿ ಫಿನೆನ್ಸು ಮೆಂಬರರು ಹಿಂದೂಸ್ಥಾನದ ಸರಕಾರದವರ ಪ್ರಥಮ ಆದಾಯವ್ಯಯಗಳ ಪಟ್ಟಿಯನ್ನು ಆ ಕಾಲದ ನ್ಯಾಯವಿಧಾಯಕ ಸಭೆಯಲ್ಲಿ ಹಾಜರು ಪಡಿಸಿದ್ದರು ಆಗ್ಯೆ ಭರತಖಂಡದ ಆದಾಯವು ೩೮ ಮಿಲಿಯವೆಂತಲೂ ಖರ್ಚು ೪೫ ಮಿಲಿಯವೆಂತಲೂ ಅಂದಾಜು ಮಾಡಿತ್ತು ಆಗಿನ ಆಮದು ರಫ್ತು ವ್ಯಾಪಾರವು ೬೦ ಮಿಲಿಯ (ಇದು ಪ್ರಕೃತ ೨೦೦ ಮಿಲಿಯವಾಗಿರುತ್ತದೆ)ವೂ ಹಿಂದೂಸ್ಥಾನದ ಸರಕಾರ ಸಾಲವು ೯೮ ಮಿಲಿಯವೂ (ಇದು ಈಗಿನ ೨೫೦ ಮಿಲಿಯ) ಆಗಿದ್ದವು ೧೮೬೧ನೇ ವರುಷದ ಮೊದಲು ಬಜೇಟ್ ಸಮ್ಮಂಧ ಯಾವ ವಾದವೂ ಸಭೆಯಲ್ಲಿ ನಡಿಯಲಿಕ್ಕಿಲ್ಲವಿತ್ತು ೧೮೯೨ನೇ ವರುಷದಿಂದ ಸಭೆಯ ಪ್ರಜಾಕಡೆಯ ಮೆಂಬರರಿಗೆ ಬಜೇಟು ಸಮ್ಮಂಧವಾದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಅಧಿಕಾರ ಹೊರತು, ಯಾವ ಮಾರ್ಪಾಡುಗಳೇ ಆಗಲಿ, ಅಥವಾ ಹೊಸ ನಿರ್ಣಯಗಳೇ ಆಗಲಿ ಸಭೆಯ ಮುಂದೆ ತರುವುದಕ್ಕೂ ಸಭಾಭಿಪ್ರಾಯಗಳನ್ನು ತಿಳಿದು ಓಟ್ಸ್ ಮೊದಲಾದವುಗಳಿಂದ ಸಭೆಯ ಮಂಜೂರಾತಿಯನ್ನು ನಿರ್ಣಯಿಸಲಿಕ್ಕೂ ಸ್ವತಂತ್ರವಿರಲಿಲ್ಲ ಈಗ ನೋನ್ ಆಫೀಸಿಯಲ್ ಮೆಂಬರರಿಗೆ ಈ ವಿಷಯಗಳಲ್ಲಿ ಹೆಚ್ಚಿನ ಸ್ವತಂತ್ರವನ್ನು ಕೊಟ್ಟಿರುವರು ಈ ನಿಮಿತ್ಯ ಸಭೆಯು ಕಳೆದ ತಿಂಗಳ ತಾ ೨೫ರಲ್ಲಿ ಪ್ರಾರಂಭಿಸಿ ಆ ದಿನವೇ ಸಭೆಯ ಮುಂದಿಡೋಣಾದ ಬಜೇಟು ಈ ತಿಂಗಳ ೩ನೇ ತಾರೀಕಿನ ವರೇಗೆ ವಾದಿಸಲ್ಪಟ್ಟು ಅಷ್ಟರ ವರೇಗೆ ಸಭೆಯವರ ಮಂಜೂರಾತಿಯಿಂದ ಆದ ತಿದ್ದುಪಡಿಗಳನ್ನೊಳಕೊಂಡು, ತಾ ೩ನೇ ದಿನದಲ್ಲಿಯೇ ಪುನಹ ಸಭೆಯಲ್ಲಿ ಮಂಜೂರಾತಿ ಬಗ್ಗೆ ಇಡೋಣಾಗುವುದು ತಾ ೨೯ರಲ್ಲಿ ಬಜೇಟಿನ ಎಲ್ಲಾ ಚರ್ಚೆಯು ಮುಗಿಯುವುದು.

ಸರಕಾರದ ಕಾರ್ಯನಿರ್ವಾಹವೂ ಯಾವ ಯತ್ನಗಳಿಂದ ಇದನ್ನು ಸಾಗಿಸುವರೆಂಬದೂ ಬಜೇಟುಗಳ ಮುಖಾಂತರ ತಿಳಿದುಬರುವುದರಿಂದ ಇದರ ಕೆಲವಂಶವನ್ನು ಮೆಂಬರರುಗಳ ವಾದಗಳೊಂದಿಗೆ ಈ ಕೆಳಗೆ ಕೊಟ್ಟಿರುವೆವು

೧೯೦೯ ೧೯೧೦ ವರುಷದಲ್ಲಿ ಖರ್ಚು ಕಳೆದು ೩೩೦,೯೦೦ ಪವನುಗಳು ಸಿಲುಕಿನಲ್ಲಿ ಉಳಿಯುವುದೆಂತ ಅಂದಾಜು ಮಾಡಿತ್ತು ವರುಷವು ಅಂತ್ಯವಾಗುವಷ್ಟರಲ್ಲಿ ಈ ಅಂದಾಜು ಮೇರೆಗೆ ೩೯೯,೫೦೦ ಪವನುಗಳು ಸಿಲುಕಿನಲ್ಲುಳಿಯಬಹುದೆಂತ ತೋರೋಣಾಗಿಯದೆ ಚಾಲ್ತಿ ವರುಷದ ಆದಾಯವು ಅಂದಾಜುಮಾಡಿದಕ್ಕಿಂತ ೨೪೫,೯೦೦ ಪವನುಗಳಷ್ಟು ಕಡಿಮೆಯಾಗಿರುತ್ತದೆ ಖರ್ಚು ಸಹಾ ಅಂದಾಜಿನಕ್ಕಿಂತ ೨೪೪,೫೦೦ರಷ್ಟು ಕಡಿಮೆಯಾಗುವುದರಿಂದ ೧೯೦೯ ೧೯೧೦ನೇ ವರುಷದ ಆದಾಯ ವೆಚ್ಚಗಳ ಸ್ಥಿತಿಯು ತೃಪ್ತಿಕರವಾಗಿರುವುದೆಂದು ತೋರುತ್ತದೆ ಹಿಂದೂಸ್ಥಾನದಿಂದ ಚೀನಾ ದೇಶಕ್ಕೆ ರಫ್ತಾಗುತ್ತಿರುವ ಅಫೀಮಿನಿಂದ ದೊರಿಯುವ ಸುಂಕವೂ, ರೈಲ್ವೆಗಳಿಂದ ದೊರಿಯುವ ಆದಾಯವೂ, ಕಸ್ಟಮ್ಸ್, ಎಕ್ಸೈಜು ಮತ್ತು ಒಕ್ಷಿ ಇವುಗಳ ಮುನಾಫೆಗಳೇ ಮೊದಲಾದವುಗಳೂ ನಿರೀಕ್ಷಿಸಿದಕ್ಕಿಂತ ಕಡಿಮೆಯಾಗಿ ಹೋಗಿರುವುದರಿಂದ ಮೇಲೆ ಸೂಚಿಸಿದಂತೆ ಚಾಲ್ತಿ ವರುಷದ ಆದಾಯವು ಅಂದಾಜುಗಳಿಗಿಂತ ಕಡಿಮೆಯಾಯಿತು ಸರಕಾರದವರು ಖರ್ಚನ್ನು ಬಹಳ ಮಿತಿಯಿಂದ ನಡಿಸಿ ಮೇಲೆ ನಮೂದಿಸಿರುವ ಸಿಲುಕು ದೊರಿಯುವಂತೆ ಪ್ರಯತ್ನಪಟ್ಟಿರುವರು

ಚಾಲ್ತಿ ವರುಷದ ಆದಾಯವು ಕಡಿಮೆಯಾದ್ದರಿಂದ ಬರುವ ವರುಷದ (೧೯೧೦-೧೯೧೧)ಆದಾಯದ ಅಂದಾಜುಗಳನ್ನು ಬಹಳ ಜಾಗರೂಕತೆಯಿಂದಲೂ ನಿಪುಣತೆಯಿಂದಲೂ ಮಾಡಿರುವರು ಅಂದಾಜು ಮಾಡಲ್ಪಟ್ಟ ವೆಚ್ಚವನ್ನು ಕಳೆದು ಸಿಲುಕುಳಿಯಬೇಕಾದರೆ ಹೊಸ ತೆರಿಗೆಗಳ ವಿನಹಾ ಬೇರೆ ಯಾವ ಉಪಾಯವೂ ಫಿನೆನ್ಸ್ ಮೆಂಬರರಿಗೆ ತೋರುವುದಿಲ್ಲ ಚೀನಾ ದೇಶಕ್ಕೆ ಹಿಂದೂಸ್ಥಾನದಿಂದ ರಫ್ತಾಗುತ್ತಿರುವ ಅಫೀಮು ತೆರಿಗೆಯು ಬರುವ ವರುಷದಲ್ಲಿ ಮತ್ತಷ್ಟು ತಗ್ಗುವುದೆಂತ ಸರ್ ವಿಲ್ಸನರವರ ಅಂದಾಜು. ಯಾಕಂದರೆ ಇಷೀ ಒಂದು ಜನಾಂಗವನ್ನು ಅಫೀಮು ತಿನ್ನುವ ದುರ್ವ್ಯಸನಕ್ಕೆ ತುತ್ತಾಗೊಳಿಸಿ ಅದರಿಂದ ಆದಾಯವನ್ನು ಪಡಿಯುವುದು ಶ್ರೇಯಸ್ಕರವಲ್ಲವೆಂತ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯವರು ಪದೇ ಪದೇ ತಿಳಿಯಪಡಿಸುವುದರಿಂದ ಚೀನಾದೇಶದವರ ದುರ್ವ್ಯಸನವನ್ನು ಹೋಗಗೊಳಿಸುವ ನಿಮಿತ್ಯ ಹಿಂದುಸ್ಥಾನಕ್ಕಿರುವ ಚೀನಾದೇಶದ ಅಫೀಮು ವ್ಯಾಪಾರವನ್ನು ಕ್ರಮಪ್ರಕಾರ ಕಡಿಮೆಮಾಡುತ್ತಿರುವರು. ಇದರಿಂದ ಹಿಂದೂಸ್ಥಾನದ ಸರಕಾರದವರ ಆದಾಯ ಮೂಲವು ಕ್ಷಯಿಸುತ್ತ ಬರುತ್ತಿರುವುದು. ಪೂರ್ವ ಬಂಗಾಳ ಮತ್ತು ಆಸ್ಸಾಮುಗಳಲ್ಲಿ ನವೀನವಾಗಿ ... [illegible]

ಬೇಕಾದ ದ್ರವ್ಯ ಸಹಾಯವನ್ನು ಮಾಡಬೇಕಾಗಿದೆ. ಹೀಗೆ ಅಫೀಮಿನ ತೆರಿಗೆ ಕಡಿಮೆ ಯಾಗಿರುವ ಮತ್ತು ಪೂರ್ವ ಬಂಗಾಳ ಮತ್ತು ಅಸ್ಸಾಮುಗಳಿಗೆ ವಿಶೇಷ ಹಣ ಬೇಕಾಗಿರುವ ಮುಖ್ಯ ಎರಡು ಕಾರಣಗಳಿಂದ ತೆರಿಗೆಯನ್ನು ಹೆಚ್ಚಿಸಬೇಕಾಗಿ ಬಂತು.

೧೯೧೬—೧೯೧೭ ವರುಷದ ಖರ್ಚು ೭೫,೬೫,೫೦೦ ಪವನುಗಳೆಂದು ಅಂದಾಜು ಮಾಡಿರುವುದು. ಅಂದರೆ ಈ ವರುಷಕ್ಕಿಂತ ೨,೩೦೧,೮೦೦ ಪವನುಗಳಷ್ಟು ಹೆಚ್ಚು ಖರ್ಚು ಬೇಕಾಗಿರುವುದು. ಅದರ ಇದರಲ್ಲಿ ೧,೧೦೧,೦೦೦ ಪವನುಗಳು ಆಯಾ ಪ್ರಾಂತಿಕ ಸರಕಾರದವರ ಆದಾಯಗಳಿಂದ ತೆರೆದಾದದ್ದರಿಂದ ೧೨೦೦೦೦೦ ಪವನುಗಳಷ್ಟು ಖರ್ಚು ಇಂಡಿಯಾ ಸರಕಾರದವರೇ ವಹಿಸಿಕೊಳ್ಳಲು ಸಿದ್ಧರಾಗಿರಬೇಕು. ರೈಲ್ವೆ, ಟಪ್ಪಾಲು ಮತ್ತು ಟೆಲಿಗ್ರಾಫು ಇಲಾಖೆ, ಸಿವಿಲ್ ಇಲಾಖೆಗಳ ಸಂಬಳ ಮತ್ತು ಇತರ ಖರ್ಚು, ಮಿಲಿಟರಿ ಇಲಾಖೆ ಇವೆಲ್ಲವುಗಳಿಗೂ ಜಾಸ್ತಿ ವರುಷಕ್ಕಿಂತ ಅಧಿಕ ಖರ್ಚು ಬೇಕಾಗಿರುವುದು. [illegible] ಆದಾಯ ಉಳಿಯುವ [illegible] ಸರಕಾರದ ಜನಾ [illegible] ತಯಾರು ಮಾಡಬೇಕಾದ್ದರಿಂದ [illegible] ಸರಕಾರಕ್ಕೆ [illegible],೦೦೦ ಪವನುಗಳಷ್ಟು [illegible] ದೊರಕ [illegible]. ಈ ಆದಾಯವನ್ನು ಸಂಗ್ರಹಿಸುವುದಕ್ಕೆ ಹೊಸ ತೆರಿಗೆಗಳನ್ನು ವಿಧಿಸಬೇಕಾಗಿದೆ. ಹೊಸ ತೆರಿಗೆಗಳಿಂದ ೧,೧[illegible],೦೦೦ ಪವನುಗಳಷ್ಟು ಮುನಾಫೆಯು ದೊರಕುವುದು.

'ಫ್ರೋಸ್ಸಿನ್ ಟಿಕೆಟ್ಸ್' ಎಂಬ ವಿದೇಶಿ ಮಾದಕ ಪದಾರ್ಥಗಳು, ಹೊಗೆಸೊಪ್ಪಿನ ಅನ್ಯ ದೇಶಗಳಿಂದ ಬರುತ್ತಿರುವ ಸಿಗರೇಟ್ ಮೊದಲಾದವುಗಳು, ಬೆಳ್ಳಿ, ಪೆಟ್ರೋಲಿಯಮ್ ಯಾ ಸೀಮೆ ಎಣ್ಣೆ ಇವೆಲ್ಲವುಗಳ ಮೇಲೆ ಕಸ್ಟಮ್ ಸುಂಕಗಳನ್ನು ಹೆಚ್ಚಿಸಬೇಕೆಂತ ನಿರ್ಣಯಿಸಲ್ಪಟ್ಟಿರುತ್ತದೆ. ಈ ಸುಂಕಗಳನ್ನು ಕಳೆದ ತಿಂಗಳ ೧ನೇ ತಾರೀಕಿನಿಂದ ವಿದೇಶ ಬಂದರುಗಳಿಂದ ಹತ್ತಿ ಸೂಚನೆ [illegible] ಎಲ್ಲಾ ಈ ವಸ್ತುಗಳ ಮೇಲೆ ಹೊರಿಸುವಂತೆ. ಈ ತೆರಿಗೆಯಿಂದ ಈಗನಕ್ಕಿಂತ [illegible],೦೦೦ ಪವನುಗಳಷ್ಟು ಹೆಚ್ಚು ಆದಾಯವು ದೊರಕುವುದು. ವಿದೇಶಿ ಮಾದಕ ಪದಾರ್ಥಗಳೆಂತ ಎಣಿಸಲ್ಪಟ್ಟು ಹಿಂದುಸ್ಥಾನದಲ್ಲಿಯೇ ತಯಾರಾಗುತ್ತಿರುವ 'ಬೀರ್' ಮೊದಲಾದವುಗಳ ಮೇಲಿನ ಸುಂಕವನ್ನು ಹೆಚ್ಚಿಸಿ [illegible],೦೦೦ ಪವನುಗಳ ಆದಾಯವನ್ನುಂಟುಮಾಡುವರು. ಬಾಕಿ ಬೇಕಾದ ೧,[illegible],೦೦೦ ಪವನುಗಳ ಉತ್ಪತ್ತಿಯನ್ನು ರಸ್ತೆಮೌಲ್ಯವನ್ನು ಅಧಿಕವಮಾಡಿ ಬರಮಾಡಿಕೊಳ್ಳುವರು.

ಇಂಡಿಯಾ ಸರಕಾರದವರು ಬಹಳ ಯೋಚನೆ ನಂತರ ಈ ಸುಂಕಗಳನ್ನು ವಿಧಿಸಬೇಕೆಂಬ ನಿರ್ಣಯವನ್ನು ಮಾಡಿರುವರು. ಕ್ಷಾಮವು ಕಡಿಮೆಯಾಗಿ ದವಸಧಾನ್ಯಗಳೆಲ್ಲವುಗಳ ಬೆಳೆಯು ಅಧಿಕವಾಗಿರುವುದರಿಂದಲೂ, ರೈಲ್ವೆ ಮೊದಲಾದವುಗಳ ಆದಾಯವು ಹೆಚ್ಚುವ ಸಂಭವಗಳಿರುವುದರಿಂದಲೂ ಜಾಸ್ತಿ ವರುಷಕ್ಕಿಂತ ಬರುವ ವರುಷದಲ್ಲಿ ಆದಾಯ ಸಿಕ್ಕುವುದೆಂದು ನಿಜವಾಗಿರಬಹುದು. ಆದರೆ ಪ್ರತಿ ವರುಷವೂ ಅಫೀಮು ತೆರಿಗೆಯು ತಗ್ಗುತ್ತ ಬರುವುದೆಂದು ನಿಶ್ಚಯ. ಪ್ರಜಾಭಿವೃದ್ಧಿಗೆ ಬೇಕಾದ ವಿದ್ಯಾ ವಿರ್ಷ ಡು ಮೊದಲಾದವುಗಳಿಗೆ ದ್ರವ್ಯಾನುಕೂಲತೆಗಳು ಬಹಳವಾಗಿ ಬೇಕಾಗಿರುವುದರಿಂದ ಹೊಸ ತೆರಿಗೆಗಳಲ್ಲದೆ ಬೇರೆ ಉಪಾಯವಿಲ್ಲವೆಂತ ಸರಕಾರದವರ ಅಭಿಪ್ರಾಯವಾಗಿರುತ್ತದೆ. ಜನಸಾಮಾನ್ಯರಿಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಆಕ್ಷೇಪಕರವಲ್ಲದ ರೀತಿಯಲ್ಲಿ ಈ ಹೊಸ ತೆರಿಗೆಯು ವಿಧಿಸೋಣಾಗಿಯದೆ. ಸದೆಯ ಇತರ ಮೆಂಬರರುಗಳಿಗೆ ತೋರಿ ಬರಬಹುದಾದ ತೆರಿಗೆಗಳ ವಿಧಾನಗಳೆಲ್ಲ ಪರ್ಯಾಲೋಚಿಸಲ್ಪಟ್ಟು ಪ್ರಕೃತ ಸೂಚಿಸಲ್ಪಟ್ಟವುಗಳೇ ಯುಕ್ತವಾದವುಗಳೆಂತ ಸ್ಟೇಟ್ ಸಕ್ರೆಟರಿಗಳ ಅಭಿಪ್ರಾಯವಾಗಿರುವುದು.

ವಿದೇಶಿ ಮಾದಕ ಪದಾರ್ಥಗಳ ಮೇಲೆ ಸೇಕಡಾ ೩೦ರಿಂದ ೫೦ಕಸ್ಟ್ಯಾ, ಹೊಗೆ ಸೊಪ್ಪಿನ ದರವು ಸಿಗರೆಟುಗಳ ಪ್ರಕಾರ ರಾತ್ತಲಿಗೆ ೨ ರೂಪಾಯಿಗಳ ಪ್ರಕಾರವೂ, ಪೆಟ್ರೋಲಿಯಮ್ ಯಾ ಸೀಮೆ ಎಣ್ಣೆಗೆ ಗೆಲನಿಗೆ ಒಂದಾಣೆಯಿಂದ ಹತ್ತಾಣೆಗೂ ಬೆಳ್ಳಿಗೆ ಎರಡು ವರೆ ತೊಲೆಗೆ ನಾಲ್ಕಾಣೆ ಎಂತೆಯೂ ಸುಂಕವು ಹೆಚ್ಚಿಸಲ್ಪಡುವುದು. ಸ್ಟಾಂಪು ದರಗಳಲ್ಲಿ ಸೂಚಿಸೋಣಾದ ಅಧಿಕವಾಗುವ ತೆರಿಗೆಯು, ಬಾಡಿಗಚೀಟು, ಕರಾರು, ಅಡವು ದಸ್ತಾವೇಜು, ರಶೀದಿ ಮೊದಲಾದ ಸಾಮಾನ್ಯ ವಿಷಯಗಳಲ್ಲಿ ಹೆಚ್ಚಿಸಲ್ಪಡುವುದಿಲ್ಲ. [illegible], ಲಿಮಿಟೆಡ್ ಕಂಪೆನಿಗಳ ಪಾಲುಗಳ ಟ್ರೆನ್ಸಫರ ಮೊದಲಾದವುಗಳಿಗೆ ಬೇಕಾದ [illegible] ಈ ಮೊದಲಾದವುಗಳಿಗೆ ಬೇಕಾದ ರಸ್ತೆಯ ಮೌಲ್ಯವು ಹೆಚ್ಚಿಸಲ್ಪಡುವುದು.

ಸರಕಾರಿ ಕಡೆಯ ಬಜೇಟು ಯಾ ಆದಾಯವೆಚ್ಚಗಳ ಅಂದಾಜು ಪಟ್ಟಿಯ ಹೇಳಿಕೆಸಾರಾಂಶವು ಇದಾಗಿರುತ್ತದೆ. ಪ್ರಜೆಗಳ ಕಡೆಯಿಂದ ಬಹುಮಾನಪಟ್ಟ ಮಿ| ಗೋಖಲೆ ಮೊದಲಾದವರು ಮಾಡಿದ ತರ್ಕ ಮೊದಲಾದವುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಅಳಿಯಸಂತಾನ ಮತ್ತು ಮಲೆಬಾರಿನ ಮರುಮಕ್ಕತಾಯಂ ಕಾನೂನುಗಳಲ್ಲಿ ಬಹುಮಾನಪಟ್ಟ ಮಿ| ಕೃಷ್ಣನ್ನಾಯರರವರು ಸೂಚಿಸಿದ [illegible] ಮದ್ರಾಸು ನ್ಯಾಯಸಭಾ [illegible] ಮಿ| ಕೃಷ್ಣನ್ನಾಯರರವರು [illegible] [illegible]

ಅಳಿಯ ವ್ಯವಹಾರ [illegible] ಮುಸವಿದೆಯನ್ನು ಈ ಕಾನೂನುಗಳಿಗೆ ಒಳಪಟ್ಟವರ [illegible] ಪ್ರಕಟಿಸಿರುವರು. ಅಳಿಯಸಂತಾನ ಅಥವಾ ಮರುಮಕ್ಕತಾಯಂ ಕಾನೂನುಗಳನ್ನನುಸರಿಸುವವರಲ್ಲಿ ತಾವು ತಮ್ಮ ಸ್ವಂತ ಸಂಪಾದನೆಯಿಂದಲೇ ಸಂಗ್ರಹಿಸಿದ ಆಸ್ತಿಯು ಹಾಗೆ ಸಂಗ್ರಹಿಸಿದವರ ಶಾಖೆಗೆನೇ ದೊರಕಬೇಕೆಂಬದು ಈ ಹೊಸ ಕಾನೂನಿನ ಉದ್ದೇಶಗಳಲ್ಲಿ ಒಂದಾಗಿರುವುದು. ಪ್ರಕೃತ ಅಳಿಯಸಂತಾನದವರಲ್ಲಿ ಮದ್ರಾಸು ಹೈಕೋರ್ಟಿನ ತೀರ್ಮಾನದ ಪ್ರಕಾರ ಸ್ವಂತಾರ್ಜಿತದ ಆಸ್ತಿಯು ಆತನ ಶಾಖೆಯವರಿಗೆ ದೊರಕುವುದಲ್ಲದೆ ಇಡೀ ಕುಟುಂಬದ ಆಸ್ತಿ ಇದು ಸೇರಿಸಲ್ಪಡದು. ಆದರೆ ಮರುಮಕ್ಕತಾಯಂದವರಲ್ಲಿ ಇಂಥಾ ಆಸ್ತಿಯು ಕುಟುಂಬದ ಆಸ್ತಿಗಳಲ್ಲಿಯೇ ಸೇರಿಸಲ್ಪಡಬೇಕೆಂತ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ. ವಾಡಿಕೆ ಮೇರೆಗೆ ಸ್ವಾರ್ಜಿತ ಆಸ್ತಿಗಳನ್ನು ಹಾಗೆ ಸಂಪಾದನೆ ಮಾಡಿದವನ ಶಾಖೆಯವರೇ ಕುಟುಂಬದವರ ಒಪ್ಪಿಗೆಯಿಂದ ಅನುಭವಿಸುತ್ತಿರುವರು. ಕಲಹಪ್ರಿಯರಾದವರು ಮಾತ್ರ ಈ ರೂಢಿಯನ್ನು ತಪ್ಪಿ ಕುಟುಂಬದ ಇತರರ ಸ್ವಾರ್ಜಿತ ಆಸ್ತಿಗಳನ್ನು ಕುಟುಂಬದ ಆಸ್ತಿಗಳ ಕೂಡಿಸಬೇಕೆನ್ನುವರು. ಆದ್ದರಿಂದ ಈ ಲೋಕರೂಢಿಯನ್ನು ಅಂಥಾ ಕಲಹಪ್ರಿಯರು ತಪ್ಪಿಸದಂತೆಯೂ ಕೋರ್ಟಿನವರು ಸಹಾ ಇದನ್ನು ಅನುಸರಿಸುವಂತೆಯೂ ಈ ಕಾನೂನನ್ನು ವಿಧಿಸಬೇಕೆಂತ ಸೂಚಿಸೋಣಾಗಿದೆ.

ಅಳಿಯಸಂತಾನದವರ ಅಥವಾ ಮರುಮಕ್ಕತಾಯಂ ಪದ್ಧತಿಯವರ ಕುಟುಂಬದಲ್ಲಿ ಆ ಕುಟುಂಬವು ಒಂದೊಂದು ಶಾಖೆಗಳಿಗನುಗುಣವಾಗಿ ಇಡೀ ಕುಟುಂಬದ ಆಸ್ತಿಯನ್ನು ಪಾಲುಮಾಡಿಕೊಳ್ಳುವ ಹಕ್ಕು ಕರ್ತ್ರಾದುದಾಗಿ ಅಂಥಾ ಶಾಖೆಯ ಯಜಮಾನರುಗಳಿಗೆ ಇರಗೊಡಿಸುವುದು ಈ ಹೊಸ ಕಾನೂನಿನ ಎರಡನೇ ಉದ್ದೇಶವಾಗಿರುತ್ತದೆ. ಪ್ರಕೃತ ಜಾರಿಯಲ್ಲಿರುವ ಕಾನೂನು ಪ್ರಕಾರ ಕುಟುಂಬದ ಆಸ್ತಿಯ ಹಿಸೆದಾರರೆಲ್ಲರ ಅನುಮತಿ ಇದ್ದರೆ ಮಾತ್ರ ಹೀಗೆ ಹಿಸೆದಾರರು ಪಾಲುಮಾಡಿಕೊಳ್ಳಲು ಬಹುದು. ಆದರೆ ಹಿಸೆದಾರರಲ್ಲಿ ಒಬ್ಬೊಬ್ಬನು ಕುಟುಂಬದ ಆಸ್ತಿಯ ಉತ್ಪತ್ತಿಯ ಅನುಭವವನ್ನು ಕೇಳಬಹುದು ಹೊರತು ಆಸ್ತಿಯ ಪಾಲನ್ನು ಕೇಳಲಾಗದು. ಇದರಿಂದ ಅನೇಕ ಆಪತ್ತುಗಳು ಕುಟುಂಬಗಳಲ್ಲಿ ಉಂಟಾಗುತ್ತಿರುವವು. ವೃತ್ತಿ ಹೀನರಾಗಿ ಅನೇಕರು ಮಾನ್ಯ ಕುಟುಂಬದವರಾದರೂ ದುಷ್ಕೃತ್ಯಗಳಲ್ಲಿಯೇ ಮಗ್ನರಾಗಿರುವರು. ಹೆಂಡತಿ ಮಕ್ಕಳನ್ನಾಗಲಿ ತನ್ನನ್ನೇ ಆಗಲಿ ಸಾಕುವ ಜವಾಬ್ದಾರಿಯು ಇಲ್ಲದೆ ಹಳ್ಳಿಗಳಲ್ಲಿ ಇವರಿಂದ ಆಗುತ್ತಿರುವ ಹಾವಳಿಯು ವರ್ಣಿಸಲಸಾಧ್ಯ. ಆದ್ದರಿಂದ ಪಾಲುಮಾಡಿಕೊಳ್ಳುವ ಹಕ್ಕು ಕುಟುಂಬದ ಪ್ರತಿಯೊಂದು ಶಾಖೆಯ ಯಜಮಾನನಿಗಿರುವಂತೆ ಮಾಡಬೇಕೆಂತ ಈ ಹೊಸ ಕಾನೂನಿನ ಮುಸವಿದೆಯಲ್ಲಿರುತ್ತದೆ.

ಕುಟುಂಬದಲ್ಲಿ ಹೀಗೆ ಪಾಲಾಗಬಹುದೆಂದು ಈ ಹೊಸ ಕಾನೂನಿನಲ್ಲಿದ್ದರೂ ಇದರ ಪ್ರಕಾರ ಹಿಂದೂಧರ್ಮಶಾಸ್ತ್ರದಲ್ಲಿದ್ದಂತೆ ಕುಟುಂಬದಲ್ಲಿ ಪ್ರತಿಯೊಬ್ಬನು ಪಾಲಿಗೆ ಅರ್ಹನಾಗನು. ಕುಟುಂಬದಲ್ಲಿ ಎಷ್ಟು ತವಾಜಿಗಳಿರುವರೋ ಅಷ್ಟು ಪಾಲುಗಳು ಮಾತ್ರ ಮಾಡಿಕೊಳ್ಳಬಹುದು. ಆದರೆ ಒಂದೇ ತವಾಜಿಗೆ ಸಮ್ಮಂಧಪಟ್ಟ ಪ್ರತಿಯೊಬ್ಬನಿಗೆ ಪಾಲು ಮಾಡಿಕೊಳ್ಳುವ ಸ್ವತಂತ್ರವಿರುವುದಿಲ್ಲ. ಕುಟುಂಬದಿಂದ ವಿಭಾಗಿಸಲ್ಪಟ್ಟ ಒಬ್ಬ ಯಜಮಾನತಿಯ ಕುಟುಂಬವು ವೃದ್ಧಿಸಿ ಅದರಲ್ಲಿ ಸಹಾ ತವಾಜಿಗಳುಂಟಾದರೆ ಇಂಥಾ ತವಾಜಿಗಳು ತಮ್ಮ ಹಿರೆ ಯಜಮಾನತಿಯು ಅಥವಾ ಅವಳ ಗಂಡು ಮಕ್ಕಳು ಜೀವದಿಂದಿರುವ ತನಕ ಪಾಲುಮಾಡಿಕೊಳ್ಳಕೂಡದು, ನಂತರ ಪಾಲುಮಾಡಿಕೊಳ್ಳಬಹುದು.

ಈ ವಿಷಯವಾದ ಎಲ್ಲಾ ಅಭಿಪ್ರಾಯಗಳನ್ನು ಮಿ| ಕೃಷ್ಣನ್ನಾಯರರವರಿಗೆ ಬರಕೊಳ್ಳಬಹುದಾಗಿ ತೋರುತ್ತದೆ.

ಸಂಗೀತಶ್ರವಣದಿಂದ ಗೋಕ್ಷೀರ ವೃದ್ಧಿ.

"ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನರಸಂಫಣೀ" ಎಂದರೆ ಸಂಗೀತವನ್ನು ಮಗುವೂ ತಿಳಿಯುತ್ತದೆ, ಪಶುವೂ ತಿಳಿಯುತ್ತದೆ, ಸರ್ಪವೂ ತಿಳಿಯುತ್ತದೆ ಎಂದರ್ಥ. ಗಾನರಸಕ್ಕೆ ವಶವಾಗಿ ಈ ಪ್ರಾಣಿಗಳೆಲ್ಲವೂ ಆನಂದಿಸುವುವೆಂಬುದನ್ನು ಈ ಶ್ಲೋಕವು ಸೂಚಿಸುತ್ತದೆ. ಮಕ್ಕಳು ತಾವು ಅಳುತ್ತಿದ್ದರೂ ಜೋಗುಳನ್ನು ಕೇಳಿ ಸುಮ್ಮನಾಗುವುದನ್ನು ಗೃಹಸ್ಥರೆಲ್ಲರೂ ಬಲ್ಲರು. ಸರ್ಪಗಳು ನಾಗಸ್ವರವನ್ನು ಕೇಳಿದರೆ ಪ್ರಾಣಭೀತಿಯೂ ಇಲ್ಲದೆ ಬಿಲದಿಂದ ಈಚೆಗೆ ಬರುವುವೆಂಬುದನ್ನೂ-ಗಾರುಡಿಗನು ಊದುವ ವಾದ್ಯದ ಧ್ವನಿಗೆ ಅದು ಮರುಳೊಂಡು ಹೇಗೆ ತಲೆದೂಗುತ್ತಿರುವುದೆಂಬುದನ್ನೂ ಅನೇಕರು ಕಂಡಿರಬಹುದು. ಪಶುಗಳು ಶ್ರೀ ಕೃಷ್ಣನ ಮುರಲೀನಾದದಿಂದ ಪ್ರಮುಗ್ಧವಾಗಿ ಅವನನ್ನು ಸುತ್ತುವರಿದು ತಾವಾಗಿ ಹಾಲನ್ನು ಸುರಿಸಿ, ವಿಹರಿಸುತ್ತಿದ್ದುವೆಂಬುದನ್ನೂ ಈಗಲೂ ಗೊಲ್ಲರ ಹುಡುಗರ ಕೊಳಲ ಧ್ವನಿಗೆ ಗೋವುಗಳು [illegible], [illegible] ಕೊರೆದು ನಿಂತು, ಆನಂದಿಸುವುದನ್ನೂ ಹಲವರು ಕೇಳಿರಬಹುದು, ಅಥವಾ ನೋಡಿಯೂ ಇರಬಹುದು. ಇಂಥ ಶಕ್ತಿಯು ಸಂಗೀತಕ್ಕೆ [illegible] ನಮ್ಮಲ್ಲಿ [illegible] [illegible]

[illegible] ಕಲ್ಪಿಸುವುದರಿಂದ ಇದನ್ನು ಉಪೇಕ್ಷಿಸಿ ಬಿಡುವುದುಂಟೆ? ಒಬ್ಬ ಸ್ತ್ರೀಮಣಿಯು ಸಂಗೀತಶ್ರವಣದಿಂದ ಗೋವುಗಳಲ್ಲಿ ಹಾಲನ್ನು ಹೆಚ್ಚಾಗಿ ಕರೆದುಕೊಳ್ಳುವ ಉಪಾಯವನ್ನು ಸಾಧಿಸಿ, ಜಯಶೀಲಳಾಗಿರುವಳೆಂಬ ವರ್ತಮಾನವು ಈಗ ಬಂದಿರುವುದು. ಹೇಗೆಂದರೆ:—ಮಿಸೆಸ್ ಅಡ್ಡಾ ಎಸ್ ಹೋಸಿಯಸ್ ಎಂಬ ಒಬ್ಬ ಆಂಗ್ಲ ಸ್ತ್ರೀಯು ಗೊಲ್ಲರವಳು. ಈಕೆಗೆ ಪಶುಪಾಲನವೇ ವೃತ್ತಿ. ಈಕೆಯು ಗಾನಶ್ರವಣದಿಂದ ತನ್ನ ಹಸುಗಳಲ್ಲಿ ಹಾಲನ್ನು ಹೆಚ್ಚು ಹೆಚ್ಚಾಗಿ ಕರೆಯುವಂತೆ ಮಾಡಿಕೊಂಡಿದ್ದಾಳೆ. ಹಸುಗಳ ಕಿವಿಗಿಂಪಾದ ಗಾನವನ್ನು ವಾದ್ಯಗಳಿಂದ ನುಡಿಸುತ್ತ ಅದನ್ನು ಕೇಳುತ್ತಿರುವಾಗ ಹಾಲನ್ನು ಕರೆದರೆ ಅಂಥ ಹಾಲು ರುಚಿಕರವಾಗಿರುವುದು ಮಾತ್ರವೇ ಅಲ್ಲದೆ, ಹೆಚ್ಚಾಗಿಯೂ ಕರೆಯುವುದು ಎಂಬುದನ್ನು ಈಕೆಯು ತನ್ನ ಅನುಭವದಿಂದ ದೃಢಪಡಿಸಿದಳು. ಈಕೆಯ ಮನೆಯ ಹಾಲು ಜನಪ್ರಿಯವಾಗಿರುವುದು. ಆವಳು ಆ ವ್ಯಾಪಾರದಲ್ಲಿ ವಿಶೇಷ ಲಾಭವನ್ನು ಸಂಪಾದಿಸುತ್ತಿರುವಳು. ಮಾಂಡೋಲಿನ್ ಎಂಬ ಒಂದು ತರದ ವಾದ್ಯವನ್ನು ಬಾರಿಸಿ, ತನ್ನ ಹಸುಗಳನ್ನೆಲ್ಲಾ ಈಕೆಯು ಸಂತೋಷಪಡಿಸುವಳು. ಯಾವಯಾವ ರಾಗವು ಯಾವಯಾವ ಹಸುವಿಗೆ ಪ್ರೀತಿಕರವಾಗಿರುವುದೆಂಬುದನ್ನು ಈಕೆಯು ದಿನಕ್ರಮದಲ್ಲಿನ ಆ ಪಶುಗಳ ಚೇಷ್ಟೆ ಮೊದಲಾದುವುಗಳಿಂದ ತಿಳಿದುಕೊಂಡು, ಆಯಾ ರಾಗವನ್ನೇ ಅವುಗಳ ಹತ್ತಿರ ಬಾರಿಸುವಂತೆ ಮಾಡುವಳು. ಅವು ಅದನ್ನು ಕೇಳುತ್ತ ಪರವಶವಾಗಿ [illegible] ಹಾಲನ್ನು ಕರೆಯುತ್ತಿರುವುವು. ಹಾಲನ್ನು ಕರೆಯುವುದಕ್ಕೂ, ಪಾಶ್ಚಾತ್ಯರು ಯಂತ್ರವಿಶೇಷವನ್ನು ನಿರ್ಮಿಸಿಕೊಂಡಿರುವರು. ಅದನ್ನು ಕೆಚ್ಚಲಿಗೆ ತಗುಲಿಸಿ [illegible]ವನ್ನು ತಿರುಗಿಸಿದರೆ ಸ್ವಲ್ಪವೂ ಉಪದ್ರವವಿಲ್ಲದಂತೆ ನಿರ್ಮಲವಾಗಿ ಹಾಲನ್ನು ಆ ಯಂತ್ರವೇ ಕರೆಯುವುದು. ಈ ಯಂತ್ರದಲ್ಲೇ ಮಾಡಿರುವ ಒಂದು ಏರ್ಪಾಟಿನಿಂದ ವಾದ್ಯದಲ್ಲಿ ನುಡಿಯುವ ಹಾಡಿನ ಲಯಕ್ಕೆ ಅನುಗುಣವಾದ ತಾಳವು ಹಿತವಾಗಿ ಹಸುಗಳ ಮೊಲೆಯ ಮೇಲೆ ಮೆಲ್ಲನೆ ತಟ್ಟಲ್ಪಡುತ್ತಿರುವುದು. ಆ ಗಾನಶ್ರವಣಕ್ಕೂ ತದನುಗುಣವಾಗಿ ಕೆಚ್ಚಲ ಮೇಲೆ ಬೀಳುವ ತಾಳಕ್ಕೂ ಹಸುಗಳು ಆನಂದದಲ್ಲಿ ಮುಳುಗಿಹೋಗಿರುವುವು. ಆನಂದ ರಸವು ಪ್ರಾಣಿಯ ಆರೋಗ್ಯಕ್ಕೆ ಅತ್ಯಂತ ಸಾಧನವಾಗಿರುವುದರಿಂದ ಹೀಗೆ ಪ್ರತಿದಿನವೂ ಗಾನಾನಂದವನ್ನನುಭವಿಸುತ್ತಿರುವ ಹಸುಗಳು ಕೂಡ ಅತ್ಯಂತಾರೋಗ್ಯಸ್ಥಿತಿಯಲ್ಲಿರುತ್ತಿರುವುವು. ಅಂಥ ಪಶುಗಳ ಹಾಲು ಕೂಡ ಆರೋಗ್ಯಕರವಾಗಿರುವುದರಿಂದ ಹಲವರು ಹೆಚ್ಚು ಬೆಲೆಯನ್ನಾದರೂ ಕೊಟ್ಟು ಇದನ್ನೇ ತೆಗೆದುಕೊಳ್ಳಲು ಆತುರಪಡುತ್ತಿರುವರು. ಈಗ ಈಕೆಯು ನಿರ್ಮಿಸಿರುವ ಯಂತ್ರದಂಥವುಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಬಾಜಿಸುವ ರೀತಿಯಲ್ಲಿ ಮಾಡಿಕೊಡಬೇಕೆಂದು ಅನೇಕರು ಆಕೆಯನ್ನು ಪ್ರಾರ್ಥಿಸುತ್ತಿರುವರು. ಪಶುಗಳು ಕ್ರೂರತನಕ್ಕೂ ಅರ್ಭಟಕ್ಕೂ ಹೆದರಿಕೊಳ್ಳುವದರಿಂದ ಅವುಗಳ ಹಾಲು ಕಡಿಮೆಯಾಗುವುದೆಂಬುದನ್ನೂ ರುಚಿಯು ಕೂಡ ತಗ್ಗುವುದೆಂಬುದನ್ನೂ ಹಲವರು ಅನುಭವಪೂರ್ವಕ ತಿಳಿದಿರಬಹುದು. ಅವುಗಳನ್ನು ಪ್ರೀತಿಸಿ, ಮೃದುವಾದ ಮಾತುಗಳನ್ನಾಡಿ ಉಪಚರಿಸಿದರೆ ಆಂದವನಿಂದ ಹಾಲನ್ನು ಕರೆಯಿಸಿಕೊಳ್ಳುವುದಕ್ಕೆ ಅವುಗಳಿಗೆ ಬಹಳ ಪ್ರೀತಿಇರುವುದು. ಇದನ್ನು ನಮ್ಮವರು ತಿಳಿದಿದ್ದರೂ ಸರಿಯಾದ ಪ್ರೀತಿಯಿಂದ ಅವುಗಳನ್ನು ಸಾಕದೆ ಉತ್ತಮವಾದ ಹಸುಗಳನ್ನೂ ಕೆಡಿಸಿಕೊಳ್ಳುತ್ತ, ಒಬ್ಬೊಬ್ಬರ ಪುಣ್ಯದಿಂದ ಕಡಿಮೆ ಹಾಲಿನ ಹಸುವೂ ಹೆಚ್ಚಾಗಿ ಹಾಲನ್ನು ಕರೆಯುವುದೆಂದೂ, ಪುಣ್ಯಹೀನರ ಮನೆಗೆ ಬಂದರೆ ಹೆಚ್ಚು ಹಾಲಿನ ಹಸುಗಳೂ ಸ್ವಲ್ಪವೇ ಕರೆಯುವಂತಾಗುವುವೆಂದೂ ಆಡಿಕೊಳ್ಳುವರು. ಕರ್ತವ್ಯವನ್ನು ಅರಿಯದವರೆಲ್ಲಾ ಅದೃಷ್ಟದ ಮೇಲೆ ಭಾ[ರ ಹಾಕುವರು.]

ಸರ್ವ ಜನರಿಗೆ ಇದರ ಮೂಲಕ ತಿಳಿಸುವದೇನಂದರೆ,

ಮಂಗಳೂರು ತಾಲೂಕು ಮುನ್ನಾಡ ಮಾಗಣೆ ಸುರತ್ಕಲ್ ಗ್ರಾಮದ ಬಾಬಣ್ಣ ಕಮ್ತಿಯರ ಮಗ ಮಾಧವ ಕಮ್ತಿಯವರಿಗೆ ನಾನು ಕೂಡಾ ೫ ಜನ ಗಂಡುಮಕ್ಕಳಾಗಿರುತ್ತೇವೆ. ನಾನು ಮನೆತನದಲ್ಲಿ ಹುಟ್ಟಿದ ಚಿಲ್ಲರೆ ಕಲಹಗಳ ಸಮ್ಮಂಧ ಈಗ ಸುಮಾರು ೮ ತಿಂಗಳಿನಿಂದ ಪ್ರತ್ಯೇಕವಾಗಿ ಇರುತ್ತೇನೆ. ಸದರಿ ನನ್ನ ತಂದೆಯು ಕುಟುಂಬದ ಆಸ್ತಿಗಳ ಹುಟ್ಟುವಳಿಯಿಂದ ಮಾಡಿರುವಂಥಾ ಆಸ್ತಿಗಳು ಸುರತಕಲ್, ಕುಳ್ಯಾ, ಪೇಲಾರ, ಇಡ್ಯ, ವಗೈರೆ ಗ್ರಾಮಗಳಲ್ಲಿ ಇರುತ್ತವೆ. ಅವುಗಳ ಕೀರ್ವೆ ಸುಮಾರು ರೂ. ೧೫೦ ಆದೀತು. ಮೂಲಗೇಣಿ ಆಸ್ತಿಗಳು ಅಡವಿನ ಮೇಲೆ ಕೊಟ್ಟ ಸಾಲಗಳು ಸುಮಾರು ೩೫೦೦, ಸದರಿ ಆಸ್ತಿಗಳು ಯಾ ಅವುಗಳಲ್ಲಿ ಯಾವದಾದರೂ ಪರಾಧಾರೆ ಮಾಡುವ ಅನುವರತ ನೋಟಿನ ಮೇಲೆ ಹಣ ಪಡಕೊಂಡು ನನ್ನ ಹಕ್ಕಿಗೆ ಮೋಸ ಮಾಡಬೇಕೆಂತ ಆಲೋಚನೆಯು ನನ್ನ ತಂದೆ ವ ನನ್ನ ಸಹೋದರರು ಮಾಡಿರುವ ಕಾರಣ ಸದರಿ ಆಸ್ತಿಗಳು ಯಾ ಅವುಗಳ ಪೈಕಿ ಯಾವದಾದರೂ ಅಡವು ಕ್ರಯ ವಗೈರೆಯಿಂದ ನನ್ನ [illegible] ವಿನಹಾ ಪರಾಧೀನ ಮಾಡಿದ್ದಲ್ಲಿ ವ ನೋಟು ವಗೈರೆಯಿಂದ [illegible] ಅಂಥಾ ಪರಾಧೀನಗಳು ವ ಸಾಲಗಳು ಸಿಂಧಾಗಕೂಡದ್ದಾಗಿರುತ್ತವೆಂತ [illegible] ಮೂಲಕ ತಿಳಿಸಿರುತ್ತೇನೆ.

[illegible] ಮಾಧವ ಕಮ್ತಿಯರ ಮಗ [illegible] ಕಮ್ತಿ [illegible]

[illegible] 1910

[illegible] ನಮ್ಮ ದೇಶದ [illegible] ಮೇಲೆ [illegible] ತಿಳಿದ ಮೇಲಾದರೂ ನಮ್ಮ ದೇಶದ ಗೋರಕ್ಷಕರು ಅವುಗಳನ್ನು [illegible] ವ್ಯಾಧಿಗಳಿಂದ ಬಿಡಿಸುವುದನ್ನೂ ಮೈಮುರಿದು ಹೊಡೆಯುವುದನ್ನೂ ಬಿಟ್ಟು, ಮಕ್ಕಳಂತೆಯೂ ತಾಯಿಯಂತೆಯೂ ಅವುಗಳನ್ನು ಕಂಡು ಉಪಚರಿಸುತ್ತ ಬಂದರೆ, ಅದರ ಫಲವನ್ನು ಅವರೇ ಸ್ವಲ್ಪಕಾಲದಲ್ಲಿ ಕಂಡುಕೊಂಡಾರು. ಮೈ. ಸ್ಟಾ.

———o———

ಇತ್ತ ತಿರುಗಿ ನೋಡಿರಿ!!!

ಪ್ರಾಸಾದಿಕ ಗ್ರಂಥವು

ಕಲಿಯುಗದಲ್ಲಿ ತುಳಸಿದಾಸ ಕಬೀರ ಮೊದಲಾದ ೫೫ ವೈಷ್ಣವ ಭಕ್ತರು ಗೈದ ಅದ್ಭುತಕರಣಿಗಳ ಸರಸ ಕಥನವು (ಬಾಮಿನಿಷಟ್ಪದಿ) ಪದ್ಯರೂಪವಾಗಿ ಸುಲಭ ಶೈಲಿಯಲ್ಲಿ ಭಕ್ತಮಹಿಮೆ ಎಂಬ ಅಭಿಧಾನದಿಂದ ಕನ್ನಡಭಾಷೆಯಲ್ಲಿ ಮುದ್ರಿತವಾಗಿರುವದೆ. ಪ್ಲೇಗಿನಂಥ ರೋಗದ ವ್ಯಾಧಿಗಳ [illegible] ಈ ಗ್ರಂಥದ ವಾಚನವೇ ಮುಖ್ಯ ಆಯುಧವಾಗಿದೆಯೆಂದು ಸುಜನರು ತಿಳಿಯಲಿ.

ಒಂದು ಪ್ರತಿಯ ಕ್ರಯ 12 ಆಣೆ ಮಾತ್ರ—ಅಂಚೆವೆಚ್ಚ ವಿನಹ. ಹತ್ತು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ವಾಗ್ದೇವಿ ಎಂಬ ಚಲೋ ಕಾದಂಬರಿಯು ಉಚಿತವಾಗಿ ಸಿಗುವುದು.

ಈ ಪುಸ್ತಕದ ಕುರಿತು ಒಬ್ಬ ವಿದ್ವಾಂಸ ಮಹಾಶಯರ ಅಭಿಪ್ರಾಯ —

Please accept [illegible] best thanks for the present [illegible] your new book about Vaishnava Saints. It is curious that though there are [illegible] differences of idiom between the language as spoken here and as spoken [illegible] the language should be almost the same when put in verse. The style is easy and flowing and I am sure that the book will be read with pleasure and profit by Kannada speaking people.

Sd) H V Nanjundayya

ಅಪೇಕ್ಷಕರು ಈ ಕೆಳಗಣ ವಿಳಾಸಕ್ಕೆ ಬರೆಕೊಳ್ಳಿರಿ.

ದಿ ಉಲನ್ ಮಾರ್ಟ್ ಅಥವಾ ಬೋಳಾರ ಬಾಬುರಾವ್.
ಮಂಗಳೂರು ಮಂಗಳೂರು,

ಅಧ್ಯಾತ್ಮ ವಿಚಾರ.

ಸೃಷ್ಟಿಯ ಕುರಿತು, ಪ್ರಾಣಿಗಳು ಹುಟ್ಟುವ ರೀತಿ ಯಾನೆ ಪಂಚಾಗ್ನಿ ವಿದ್ಯ, ಪುರುಷನ ಶರೀರ ವರ್ಣನೆ ಯಾ ಗಾಯತ್ರಿವಿದ್ಯ, ವೈಶ್ವಾನರವಿದ್ಯ ಯಾನೆ ಪ್ರಾಣಾಗ್ನಿಹೋತ್ರದ ಕುರಿತು, ಜಾಗ್ರದವಸ್ಥೆ, ನಿದ್ರಾವಸ್ಥೆ, ಹೃದಯಪುಂಡರೀಕ ವಿಚಾರ ಬ್ರಹ್ಮವಿದ್ಯ, ಮರಣದ ಕುರಿತು, ಗತಿ (ಮಾರ್ಗಗಳ) ಕುರಿತು, ಪ್ರತ್ಯಗಾತ್ಮವಿದ್ಯ, ಮೊದಲಾದ ವಿಷಯಗಳುಳ್ಳ ಪಾಠಗಳನ್ನು ಒಳಕೊಂಡಿರುವ,

ಛಾಂದೋಗ್ಯೋಪನಿಷತ್ ಮೊದಲಾದ ಕೆಲವು ವೈದಿಕ ಗ್ರಂಥಗಳ ಆಧಾರದ ಮೇಲೆ ಮಂಗಳೂರು ೧ನೇ ಗ್ರೇಡ್ ಪ್ಲೀಡರ್ ಹಳಗೇರಿ ಕೃಷ್ಣರಾಯರವರಿಂದ ರಚಿಸಲ್ಪಟ್ಟಿರುವುದು.

ಕ್ರಯ ಟಪ್ಪಾಲು ಹಾಸಲು ಸೊರತು ರೂ ೨—೨—೦. ಈ ಪುಸ್ತಕದ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವದು,

ಎಚ್ ಕೃಷ್ಣರಾವ್ I ಗ್ರೇಡ್ ಪ್ಲೀಡರ್,
ಮಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಲೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿ ಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಎಮ್. [illegible]
[illegible]
[illegible]

ಸ್ವೇಚ್ಛಾವ್ಯಾಯಾಮದ ಟೀಕೆಗಳು.

ವಿದ್ಯಾಭಿವೃದ್ಧಿಗೆ ಈಗಿನ ರಾಜ್ಯಭಾರದಲ್ಲಿ ದೊರಕುವಷ್ಟು ಸೌಕರ್ಯಗಳು ಪೂರ್ವ ಕಾಲದಲ್ಲಿ ಆರ್ಯಸಮುದಾಯಕ್ಕೆ ಇರುತಿದ್ದವೆಂದು ಹೇಳಕೂಡದು. ಜಾತಿ ಕುಲಾದಿ ಭೇದಗಳು ಈಗ ದಿನೇ ದಿನೇ ಕಡಿಮೆಯಾಗುತ್ತಾ ಸಕಲರಿಗೂ ವಿದ್ಯಾನುಕೂಲ್ಯಗಳು ನಿರಾತಂಕವಾಗಿ ಸಿಗುವವು. ಭರತಖಂಡದಲ್ಲಿ ದೊರಿಯಲೊಲ್ಲದ ಸೌಲಭ್ಯಗಳು ವಿಲಾಯತಿಯಲ್ಲಿ ಸಿಕ್ಕುವದರಿಂದ ದ್ರವ್ಯಾನುಕೂಲವಿರುವವರು ಆ ದೇಶಕ್ಕೆ ಪ್ರಯಾಣ ಬೆಳಸಿ ಹೆಚ್ಚಿನ ನೈಪುಣ್ಯವನ್ನು ಗಳಿಸಿಕೊಂಡು ಸರ್ಕಾರ ಸಾಹೇಬರ ಕೂಡೆ ಮೇಲಾಟಕ್ಕೆ ಸಿದ್ಧರಾಗುತ್ತಾರೆ ಮತ್ತು ಅವರಂತೆಯೇ ದೊಡ್ಡ ದೊಡ್ಡ ಉದ್ಯೋಗಗಳನ್ನು ಪಡೆಯಲು ಯೋಗ್ಯರೆನ್ನಿಸಿಕೊಳ್ಳುತ್ತಾರೆ. ಭಾರತೀಯರಲ್ಲಿ ವಿದ್ಯಾಸುಬವ ಹೆಚ್ಚಿದಂತೆ ರಾಜದ್ರೋಹದ ಬೀಜಗಳು ಅಂಕುರಿಸುತ್ತವೆಂಬ ಈಗಿನ ಸರ್ವ ಸಾಧಾರಣ ಅಪವಾದವು ಮೇರೆ ವರಿಯುತ್ತಿದೆ. ಇಂತಹ ದುಸ್ಥಿತಿಯನ್ನು ಹೊರುವದಕ್ಕೆ ಅರ್ಹರಾದವರೆಂಬಲ್ಲಿ ವಿದ್ಯಾವಂತರೇ ಮುಂದಾಳುಗಳೆಂಬ ಊಹೆಯು ಪ್ರಬಲವಾಗಲು ನಿದರ್ಶನವು ಕೆಲವು ಸಂಗತಿಗಳಲ್ಲಿ ಕಂಡು ಬಂದದೆ. ಎಂದ ಭಾರತೀಯರ ವಿರೋಧಪಕ್ಷದವರು ತಿಳಕೊಳ್ಳುವರು. ಇದು ಸರಿಯಾದ ಅನುವಾದವೆಂದು ನಂಬುವವರು ಭಾರತೀಯರ ಶುಭಚಿಂತಕರೋ ದ್ವೇಷಿಕರೋ ಎಂಬ ಪರಿಶೀಲನವು ಸಂಘೋಟಿತವಾಗಿ ನಡದರೆ ಸತ್ಯವು ಯಾವ ಪಕ್ಷದ ಕಡೆಗೆ ವಾಲುವದೆಂದು ಥಕ್ಕನೆ ಮುಂದಿಟ್ಟಾಗದು. ಅದಿರಲಿ ಎದುರಿಗೆ ಬಂದ ರಾಜದ್ರೋಹದ ಮೊಕದಮೆಗಳಲ್ಲಿ ನ್ಯಾಯಾಧಿಪತಿಗಳ ಮುಂದೆ ಅನ್ಯಾಯಗಾರರೆಂದು ಶಿಕ್ಷೆಗೆ ಪಾತ್ರರಾದವರು ವಿದ್ಯಾಹೀನರಲ್ಲವೆಂದ್ಯಾರೂ ಹೇಳಲಾರರು. ವಿದ್ಯಾಭ್ಯಾಸದ ಕೊನೆಯನ್ನು ಕಂಡವರಲ್ಲ ಇವರು ಸೇರಿರಾರೆಂಬ ವಾದವು ಹ್ಯಾಗೂ ಇರಲಿ— ನ್ಯಾಯಾನ್ಯಾಯವನ್ನು ವಿವೇಚನ ಮಾಡುವದಕ್ಕೆ ಇಟ್ಟಿರುವ ಅಧಿಕಾರಿಗಳ ಸ್ವಾತಂತ್ರ್ಯಗಳನ್ನು ತಾವು ಅತಿಕ್ರಮಿಸಕೂಡದೆಂಬ ಸೂತ್ರವನ್ನು ತಿಳಿದವರೇ ಅದನ್ನು ಉಲ್ಲಂಘಿಸುವದು ಅವರ ಧರ್ಮವಲ್ಲವೆಂದು ಯಾರು ತಾನೇ ಒಪ್ಪಲಾರರು!

ರಾಜಾಪ್ರತ್ಯಕ್ಷದೇವತಾ ಎಂಬ ವಚನವು ನಾಣ್ಣುಡಿಯಲ್ಲ, ಅದು ಪರಮಾತ್ಮನ ವಿಧಿಯಾಗಿರುತ್ತದೆ. ಅದನ್ನು ಮೀರುವದು ದೊಡ್ಡ ಪಾಪವೆಂಬದನ್ನು ತಿಳುಕೊಳ್ಳುವದಕ್ಕೆ ಯಾರು ಅಶಕ್ತರೊ ಅವರು ಆಮುಷ್ಮಿಕ ವಿಚಾರಕ್ಕೆ ಮನಸ್ಸು ಕೊಡಲೇ ಇಲ್ಲವೆಂಬದು ವಿಶದವಾಗುತ್ತದೆ. ಬದುಕಿದಷ್ಟು ಕಾಲ ಚನ್ನಾಗಿ ಉಂಡು ತಿಂದು ತೇಗಿ ಬಿಡೋಣ ಸತ್ತ ಮೇಲೆ ಏನೋ ಏನೋ ಎಂಬ ಅವಿಚಾರದಲ್ಲಿ ಮಗ್ನರಾದವರು ಯಾವ ದುಷ್ಕೃತ್ಯವನ್ನಾದರೂ ಮಾಡಲಿಕ್ಕೆ ಹಿಂಜರಿಯರು. ಇವರು ಎಷ್ಟು ದೊಡ್ಡ ಪರೀಕ್ಷೆಗಳನ್ನು ತೇರಿದರೂ ವಿದ್ಯಾಪಾರಾವಾರವನ್ನು ದಾಟಿದವರೆ ಎಂದು ಗರ್ವಿಸಲಿ, ನಾಗರೀಕರೆಂದು ಕರಿಯಲ್ಪಡಲಿಕ್ಕೆ ಸರ್ವಥಾ ಯೋಗ್ಯರಾಗಲಾರರು. ವಿದ್ಯಾಭ್ಯಾಸ ಚನ್ನಾಗಿ ಗೈದು ಅಗ್ರಗಣ್ಯನೆನ್ನಿಸಿಕೊಂಡವನಾದರೂ ಆಮುಷ್ಮಿಕ ವಿಚಾರದಲ್ಲಿ ಮನಸ್ಸು ರವಷ್ಟಾದರೂ ಇಡದವನು ಕೇವಲ ಪಶುವಿನಗಿಂತಲೂ ನಿಕೃಷ್ಟನೆನ್ನಿಸಲ್ಪಡುವನು. ಇಂತಹ ಮನುಷ್ಯನು ಅನಾಯಕರ ಕೂಟದಲ್ಲಿ ಸೇರಿರುವದು ಆಶ್ಚರ್ಯವಲ್ಲ ಮತ್ತು ಅಂಥವರು ಸತ್ಪಾತ್ರರೆನ್ನಿಸಿಕೊಳ್ಳಲು ಅರ್ಹರೇ ಅಲ್ಲ. ನಡೆನುಡಿಗಳು ಸ್ವಚ್ಛವಾಗಿದ್ದು ವಿದ್ಯಾವ್ಯಾಸಂಗವನ್ನು ಚನ್ನಾಗಿ ಮಾಡಿದ ಜನರುಗಳು ನಾಗರೀಕರೆಂಬ ಹೆಸರು ಪಡೆಯಲು ಪೂರ್ಣವಾದ ಸ್ವಾತಂತ್ರ್ಯವುಳ್ಳವರಲ್ಲ, ಅಂಥವರ ಪಾರಮಾರ್ಥಿಕ ಅವಸ್ಥೆಯು ಯಾವ ಸ್ವಭಾವದ್ದು ಎಂಬದೇ ಗಮನಿಸತಕ್ಕ ಪ್ರಧಾನ ಪ್ರಸಕ್ತಿಯಾಗಿರುತ್ತದೆ. ಹಿಂದುಸ್ಥಾನದಲ್ಲಿ ಅನೇಕ ಮತಗಳಿವೆ, ನಮ್ಮನ್ನಾಳುವ ದೊರೆಗಳ ಮತವು ಮತ್ತೊಂದು ಪರಂತು ಇತರರು ಅದೇ ಮತಾವಲಂಬಿಗಳಾಗಬೇಕೆಂಬ ಪತ್ರಾಪವು ಸರ್ವಥಾ ಅವರಿಗೆ ಪುರಸ್ಕರಣೀಯವಾಗಿ ತೋರದು. ಆದಕಾರಣ ಅವರು ಸ್ಥಾಪಿಸಿದ ವಿದ್ಯಾಲಯಗಳಲ್ಲಿ ಮತ ಸಮ್ಮಂಧವಾದ ಶಿಕ್ಷಣವನ್ನು ಅವರು ಇದುವರೆಗೂ ತೊಡಗಲಿಲ್ಲ. ಇಂತಹ ತಾಟಸ್ಥ್ಯವು ಅವರು ತಾಳತಕ್ಕದ್ದು ನ್ಯಾಯವಲ್ಲವೇ? ಆ ಮಾಪು ಮತಸ್ಥರು ಅವರವರ ಶಾಸ್ತ್ರಾನುಸಾರವಾದ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಪಥೋಚಿತ ಕಾಲದಲ್ಲಿ ದೊರಕುವಂತೆ ನೋಡಿಕೊಳ್ಳದೆ ಕೇವಲ ಐಹಿಕ ವ್ಯವಹಾರಕ್ಕೆ ಉಪಯುಕ್ತವಾದ ವಿದ್ಯಾಭ್ಯಾಸಕ್ಕೆ ಮಾತ್ರ ಅವರನ್ನು ಗುರಿಪಡಿಸುವದು ಕೇವಲ ಮೌರ್ಖ್ಯವೇ ಸರಿ. ಇನ್ನಾದರೂ ಯುವಕರ ವಿದ್ಯಾಭಿವೃದ್ಧಿಯ ಮುಖ್ಯಾಂಶವು ತಕ್ಕ ಪ್ರಾಯದಲ್ಲಿ ಸದಾಚಾರ ಶೀಲವೃತ್ತಿಯ ಪ್ರಯತ್ನವೇ ಎಂಬದು ಸರ್ವರ ಮನಸಿಗೂ ಬಿಚಿತವಾದರೆ ಅದಕ್ಕೋಸ್ಕರ ಅಗತ್ಯವೆಂದು ಬುದ್ಧಿಶಾಲಿಗಳು ನಿರ್ಧರಿಸುವ ಸಾಧಕಗಳನ್ನು ಕೈಕೊಳ್ಳುವ ಮುಖ್ಯವಾದ ಕರ್ತವ್ಯಾಂಶವು ಇನ್ನಾದರೂ ನಡಿಸಲುಪಕ್ರಮಿಸುವದು ಜನಾಂಗದ ಏಳಿಗೆಯ ಬುಡವನ್ನು ಘಟ್ಟಿಮಾಡುವ ಪುಣ್ಯಕೆಲಸವಾಗಿ ಪರಿಣಮಿಸುವದು. ಇದೊಂದು ಹೊಸ ಸೂಚನೆ ಎಂದು ಯಾರು ಹಿಯ್ಯಾಳಿಸಲು ಅವಕಾಶವಿಲ್ಲ. ಎಲ್ಲರೂ ಇದನ್ನು ತಿಳಿದವರೇ, ಮುಂದೆ ನೋಡುವಾ ಮತ್ತೊಂದು ಮತಸ್ಥರು ಹ್ಯಾಗೆ ನಡಕೊಳ್ಳುವರೋ ನೋಡೋಣ ಎಂದು ಕಾಲಹರಣ ಮಾಡುವದು ನಮ್ಮ ಜನಗಳ ಸ್ವಭಾವಕ್ಕೆ ತಗಲಿದ ಬಂಧನಿಕೆಯೇ ಸರಿ. ಇದನ್ನು ಕಿತ್ತಿ ಹಾಕಲಿಕ್ಕೆ ಇದೇ ಸುಮುಹೂರ್ತವಾದ ಪ್ರಯುಕ್ತ ನಮ್ಮ ಊರವರೇ ... [illegible]

ಪಾರಮಾರ್ಥಿಕ ... [illegible] ... ಕನ್ನು ನಿರೋಧಿಸುವ ಶಕ್ತಿಯನ್ನು ಗಳಿಸಲಿ ಎಂದು ... [illegible]

ಇದನ್ನು ಓದಿದರೆ ತಿಳಿಯುತ್ತೆ ! ತರಿಸಿದರೆ ಸಿಕ್ಕುತ್ತೆ !!

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ಕ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರೀಕ್ಷೆ ಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲಿವೆಂಡರ್, ಸೋಪ್ಪ, ಅತ್ತರ್, ಪನ್ನೀರು, ಸರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್, ವಾರ್ನೀಷ್, ಮುಂತಾದ ಬಗ್ಗದ ವಿಷಯಗಳು

ಗಣನೆಗ ಮಿಗಿಲಾದ ಆಕಾಶವಾಣ ಮೊದಲಾದ ಅನೇಕ ವಿಷಯಗಳು ಮೊದಲನೇ ಬಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ. ಪಿ. ಮೂಲಕ ೧—೬—೦.

(೧) ವಿಳಾಸ—ಮ್ಯಾನೇಜರ್ ಯಸ್. ಜಿ ಯನ್. ಪ್ರೆಸ್.
೧೨೮ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

ಏಜಂಟರು—(೨) ದಿ. ಊಲನ್ ಮಾರ್ಟ್,
ನಂ॥ ೧, ಮಂಗಳೂರು. (ದ. ಕ.)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ.

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು.

ನಮ್ಮ 'ಮೆಕ್ಸಿಮ್' ವಾಚನ್ನು ಭರವಸೆಯಿಂದ ಕೊಂಡು ಕೊಳ್ಳಿರಿ.
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೭-೮-೦
ನಮ್ಮ 'ನ್ಯೂ ಡಿ. ಪಿ.'
ನಿಕಲ್ ಕೇಸಿನಲ್ಲಿ ರೂ. ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್'
ನಿಕಲ್ ಕೇಸಿನಲ್ಲಿ ರೂ ೧೬-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೮-೦.
ನಮ್ಮ 'ವರ್ಡ್ಲಿ'
ನಿಕಲ್ ಕೇಸಿನಲ್ಲಿ ರೂ. ೧೯-೦-೦.
ಸಿಲ್ವರ್ ಕೇಸಿನಲ್ಲಿ ರೂ. ೩...
ನಮ್ಮ 'ಬೆಸ್ಟ್'
ನಿಕಲ್ ಕೇಸಿನಲ್ಲಿ ರೂ. ೨೧-೦-೦
ಬೆಳ್ಳಿ ಕೇಸಿನಲ್ಲಿ ರೂ. ೩...

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು ... ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ನಮ್ಮ ... ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದ ... ವಾಚು ಮಾರಾಟಗಾರರಲ್ಲಿಯೂ ಕ್ರಯಕ್ಕೆ ದೊರೆಯುವವು.

ಸೆಕಂಡರಿ ಶಾಲೆಗಳೂ ವಿದ್ಯಾರ್ಥಿಗಳೂ

ನಮ್ಮ ಸಂಸ್ಥಾನದ ವಿದ್ಯಾಖಾತೆಯಲ್ಲಿ ಇತ್ತಲಾಗೆ ಕೆಲವು ಕಾಲದಿಂದ ಆಗುತ್ತಿರುವ ಮಾರ್ಪಾಟುಗಳಿಂದ ಸೆಕೆಂಡರಿ ಶಾಲೆಗಳ ವಿಷಯವಾಗಿ ಅಥವಾ ಅವುಗಳಲ್ಲಿ ದೊರಿಯೋಣಾಗುವ ಶಿಕ್ಷಣ ಕುರಿತು ಏನೆಂಬದನ್ನು ತಿಳಿಯುವುದು ಈ ಇಲಾಖೆಗೆ ಸಮ್ಬಂಧಪಡದವರಿಗೆ ಕಷ್ಟಸಾಧ್ಯ. ಶಾಲಾ ಉಪಾಧ್ಯಾಯರು ಸಹಾ ಕೆಲವು ಕಡೆಗಳಲ್ಲಿ ತಂತಮಗೆ ತೋಚುವ ಈ ನವೀನ ಏರ್ಪಾಡುಗಳ ವೃತ್ತಾಂತವನ್ನು ಹೇಳುವರು. ಸೆಕೆಂಡರಿ ವಿದ್ಯಾಭ್ಯಾಸದ ನಿಜಸ್ಥಿತಿಯನ್ನು ತಿಳಿಯುವುದು ಸಾಮಾನ್ಯರಿಗೆ ಹೀಗೆ ಅಸದಳವಾಗಿರುತ್ತಾ, ಈ ಶಾಲೆಗಳಲ್ಲಿ ಶಿಕ್ಷಣವನ್ನು ಹೊಂದಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಟ್ಟು ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವರ ಸಂಖ್ಯೆಯು ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ ಅವರ ಹೆತ್ತವರಲ್ಲಿ ಸಹಾ ದಿಗಿಲನ್ನೂ ಭ್ರಮೆಯನ್ನೂ ಉಂಟುಮಾಡಿರುವುದು. ಮುಂದಿನ ಯತ್ನವೇನು—ಮಗನಿಗೆ ಯಾವ ರೀತಿ ವಿದ್ಯಾವಂತನನ್ನಾಗಿ ಮಾಡಲಿ—ತಕ್ಕ ಶಿಕ್ಷಣ ಹೊಂದಿ ಮುಂದಕ್ಕೆ ಜೀವಿಸುವ ಬಗೆ ಹೇಗೆ. ಈ ವಿಚಾರಗಳಲ್ಲವುಗಳೇ ಹಾಹಾಕಾರಗಳು ಊರೆಲ್ಲಾ ಕೇಳಿಸುತ್ತಿರುವಾಗ್ಯೆ ಸೆಕೆಂಡರಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕೊಡಬೇಕಾದ ಸಂಬಳವನ್ನು ಇಮ್ಮಡಿಸುವದು ವರ್ತಮಾನವು ಸಹ ರನ್ನು ತಿವಿದು ಸಹಿಸಲಾರದ ವೇದನೆಯನ್ನುಂಟುಮಾಡಿರುವುದು. ನಿಪುಣನಾದ ಕೂಲಿಯವನಾಗಬೇಕಾದರೆ ತಕ್ಕದಾದ ಎಲಿಮೆಂಟರಿ ವಿದ್ಯಾಭ್ಯಾಸಬೇಕು. ಆದರೆ ಸರ್ವರೂ ಕೂಲಿ ಕೆಲಸವನ್ನು ಅವಲಂಬಿಸರು. ಯಾವ ಒಂದು ಉದ್ಯೋಗಿಕ ಶಿಕ್ಷಣವನ್ನಾಗಲಿ ಸಂಪಾದಿಸಿಕೊಳ್ಳಬೇಕಾದರೆ ಹಲವು ಸಂದರ್ಭಗಳಲ್ಲಿ ರಸಾಯನ ಶಾಸ್ತ್ರ ಮೊದಲಾದವುಗಳ ಜ್ಞಾನವುಳ್ಳ ಬಿ ಎ ಪರೀಕ್ಷೆ ಉತ್ತೀರ್ಣರಾದವರು ಬೇಕಾಗುತ್ತಿರುವರು. ಕರಕೌಶಲ್ಯಗಳ ಸಾಧಾರಣ ಅನುಭವಕ್ಕೆ ಪ್ರಥಮದಲ್ಲಿ ಸೆಕೆಂಡರಿ ವಿದ್ಯಾಭ್ಯಾಸ ಆವಶ್ಯ. ಹೀಗಿರುತ್ತಾ ಸೆಕಂಡರಿ ಶಾಲೆಗಳು ಸಾಧಾರಣರಿಗೆ ಅಗಮ್ಯವಾದ ಕೋಟೆಗಳಾಗಿ ಪರಿಣಮಿಸಿದ್ದಲ್ಲಿ ಪ್ರಜಾ ವರ್ಗಕ್ಕೆ ಅನೇಕ ಸಂಕಷ್ಟಗಳುಂಟಾಗದಿರವು.

ಸೆಕೆಂಡರಿ ಶಾಲೆಗಳು ಹೀಗೆ ಮಾರ್ಪಡುತ್ತಿರುವಾಗ ಅವುಗಳ ವಿಷಯ ಸ್ವಲ್ಪ ಮಾಹಿತಿಯನ್ನು ತಿಳಕೊಳ್ಳುವುದುತ್ತಮ. ೧೮೬೬ನೇ ವರುಷದ ಮೊದಲು ಹಲವು ಹ್ಯಾಸ್ಕೂಲುಗಳು ನಮ್ಮ ಸಂಸ್ಥಾನದಲ್ಲಿ ಸರಕಾರದವರಿಂದಲೇ ನಡಿಸಲ್ಪಡುತ್ತಿದ್ದವು. ಖಾಸಗಿ ಆಡಳಿತೆಯಲ್ಲಿರುವ ಇಂಥಾ ಶಾಲೆಗಳು ಬಹಳ ಸ್ವಲ್ಪವೇ ಆಗಿದ್ದವು. ಯಾಕಂದರೆ ಆ ಕಾಲದಲ್ಲಿ ಇಂಥಾ ಶಾಲೆಗಳ ವ್ಯವಸ್ಥಾ ಕ್ರಮಗಳಿಗೆ ವಿಶೇಷ ದ್ರವ್ಯ ಬೇಕಾದ್ದರಿಂದ ಖಾಸಗಿ ಜನರಿಗೆ ಇಂಥಾ ದ್ರವ್ಯ ಸಹಾಯವನ್ನು ಒದಗಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಪ್ರಜಾಶಿಕ್ಷಣವೆಲ್ಲವನ್ನು ತಮ್ಮ ಕೈವಶಮಾಡಿಕೊಳ್ಳುವ ಉದ್ದೇಶ್ಯದಿಂದ ಹ್ಯಾಸ್ಕೂಲುಗಳನ್ನು ಕೆಲವು ಕಡೆಗಳಲ್ಲಿ ಸ್ಥಾಪಿಸಿದ್ದ ಕ್ರೈಸ್ತ ಮಿಶನರಿಗಳು ೧೮೮೨ನೇ ವರುಷದಲ್ಲಿ ವಿದ್ಯಾವಿಷಯಗಳನ್ನು ಪರ್ಯಾಲೋಚಿಸುವದೆ ನೇಮಕ ಪಟ್ಟ ಕಮಿಶನಿನವರಿಗೆ ಹ್ಯಾಸ್ಕೂಲುಗಳನ್ನು ಸರಕಾರದವರು ನಡಿಸುವುದನುಚಿತವೆಂತ ತಿಳಿಯ ಹೇಳಿ ಹ್ಯಾಸ್ಕೂಲುಗಳೆಲ್ಲವುಗಳ ಆಡಳಿತೆಯನ್ನು ಖಾಸಗಿ ಜನರಿಗೆ ಬಿಟ್ಟುಕೊಡುವಂತಾಯಿತು. ಹೀಗೆ ಖಾಸಗಿ ಆಡಳಿತೆಗೆ ಶಾಲೆಗಳನ್ನು ಬಿಟ್ಟುಕೊಡುವಾಗ ಸರಕಾರದವರು ಅಂಥಾ ಶಾಲೆಗಳ ಬೆಂಬಲಕ್ಕಾಗಿ ವಿಶೇಷ ದ್ರವ್ಯಸಹಾಯವನ್ನು ಕೊಡುವದೆ ವಾಗ್ದತ್ತಮಾಡಿದರು. ಹೀಗೆ ಕೆಲವು ಸಮಯದ ವರೆಗೆ ತಮಗೆ ಸಿಕ್ಕುವ ಸರಕಾರಿ ಸಹಾಯದಿಂದಲೂ, ವಿದ್ಯಾರ್ಥಿಗಳ ಸಂಬಳಗಳಿಂದಲೂ ಪ್ರಜಾವರ್ಗದಿಂದ ದೊರಿಯುವ ಅಲ್ಪಸ್ವಲ್ಪ ದ್ರವ್ಯಾನುಕೂಲತೆಯಿಂದಲೂ ಶಾಲೆಗಳು ನಡಿಸಲ್ಪಟ್ಟವು. ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಬಳಗಳ ದರಕ್ಕೆ ನಿರ್ಣಯವಿರಲಿಲ್ಲ. ವಿದ್ಯಾರ್ಥಿಗಳಿಗೆ ಮಿಡ್ಲ್ ಸ್ಕೂಲ್ ಮತ್ತು ಮೆಟ್ರಿಕ್ಯುಲೇಶನ್ ಈ ಎರಡು ಪರೀಕ್ಷೆಗಳನ್ನು ತೇರ್ಗಡೆ ಪಡಲು ಬೇಕಾದ ಶಿಕ್ಷಣವನ್ನು ಕೊಡಲು ಸಮರ್ಥರಾದ ಶಾಲಾ ಉಪಾಧ್ಯಾಯರುಗಳನ್ನು ನೇಮಿಸುವುದಿತ್ತಲ್ಲದೆ ಶಾಲಾಉಪಾಧ್ಯಾಯರ ಸಂಬಂಧಿಯಲ್ಲಿ ಬೇರೆ ಯಾವ ನೇಮವೂ ಇದ್ದಿಲ್ಲ. ೧೯೦೧ನೇ ಇಸವಿಯಲ್ಲಿ ಗವರ್ನಮೆಂಟಿನವರು ಶಾಲಾ ಆಡಳಿತೆಗಳನ್ನು ತಾವು ಬಿಟ್ಟುಬಿಟ್ಟದ್ದು ಯುಕ್ತವಲ್ಲವೆಂತ ಕಂಡು ಎಲ್ಲಾ ಶಾಲೆಗಳು ಒಂದೇ ಕ್ರಮದಲ್ಲಿ ನಡಿಸಲ್ಪಡುವಂತೆ ಕೆಲವು ಎಡ್ಯುಕೇಶನಲ್ ರೂಲ್ಸು ಎಂಬ ಶಾಲಾಕ್ರಮಗಳನ್ನು ರಚಿಸಿದರು. ಈ ಕ್ರಮಗಳಿಗನುಗುಣವಾಗಿ ಶಾಲೆಗಳಲ್ಲಿ ವಿದ್ಯಾರ್ಥಿ ಸಂಬಳಗಳಲ್ಲಿ ದರವು ನಿರ್ಣಯಿಸಲ್ಪಟ್ಟಿತು. ವಿದ್ಯಾರ್ಥಿಗಳು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಹೋಗಿ ಅಲೆದಾಡದಂತೆ ಲಿವಿಂಗ್ ಸರ್ಟಿಫಿಕೇಟು ಕ್ರಮವು ಜಾರಿಗೆ ಬಂತು. ಉಪಾಧ್ಯಾಯರು ಯಾವ ಯಾವ ಪರೀಕ್ಷೆಗಳನ್ನು ತೇರ್ಗಡೆ ಪಟ್ಟು ಎಂಥಾ ಯೋಗ್ಯತೆಯುಳ್ಳವರಾಗಬೇಕೆಂಬುದು ನಿಷ್ಕರ್ಷಿಸಲ್ಪಟ್ಟಿತು. ಕಳದ ಇಪ್ಪತ್ತು ವರುಷಗಳಿಂದ ಈ ಶಾಲಾಕ್ರಮಗಳು ಆಗಿಂದಾಗ್ಯೆ ತಿದ್ದಲ್ಪಟ್ಟು ಜ್ಯಾರಿಯಲ್ಲಿರುವುದರಿಂದ ಶಾಲೆಗಳ ವ್ಯವಸ್ಥೆಯು ಸರಿಯಾಗಿ ಬಂದಿರುವುದು. ವಿದ್ಯಾಭಿರುಚಿಯು ಎಲ್ಲಾ ಪ್ರಜಾವರ್ಗಗಳಲ್ಲಿಯೂ ಏಕರೀತಿ ಅಧಿಕವಾಗಿ ಬಂದು ಸೆಕೆಂಡರಿ ಶಾಲೆಗಳು ಹೆಚ್ಚುತ್ತಾ ಬಂದದ್ದರಿಂದ ಸರಕಾರದವರು ಈ ಎಲ್ಲಾ ಶಾಲೆಗಳ [illegible] ಕೊಡಬೇಕಾಯಿತು. ಆದರೆ ಹೀಗೆ ದ್ರವ್ಯಸಹಾಯವನ್ನು ಈ ಶಾಲೆಗಳಿಗೆ ಕೊಡುವುದು ಹಲವು [illegible] ಯುಕ್ತವಾಗಲಿಲ್ಲ. ಸರಕಾರಿ ಸಹಾಯವು ಹೀಗೆ [illegible]

ದೊಡ್ಡ ಪಟ್ಟಣಗಳಲ್ಲಿ ಶಾಲಾ ಸಂಬಳದ ದರವು ಅಧಿಕವಾಗಿದ್ದು, ಶಾಲಾ ಉಪಾಧ್ಯಾಯರು ಕಡಿಮೆ ಸಂಬಳದಲ್ಲಿ ದೊರಕಲು ಸಾಧ್ಯವಾದ್ದರಿಂದ ಖಾಸಗಿಯಲ್ಲಿ ಶಾಲೆಗಳನ್ನು ನಡಿಸಲು ಅನುಕೂಲವಾಯಿತು. ವಿದ್ಯಾರ್ಥಿಗಳ ಸಂಖ್ಯೆಯು ಏರುತ್ತಾ ಬಂದು ೧೯೦೭ನೇ ವರುಷದಲ್ಲಿ ೧೩,೦೦೦ ವಿದ್ದ ಈ ಸಂಖ್ಯೆಯು ಹತ್ತು ವರುಷಗಳಲ್ಲಿ ೨೦೦೦೦ವಾಯಿತು. ಶಾಲೆಗಳಿಗೆ ಹೀಗೆ ಸಹಾಯವಿಲ್ಲದೆ ಇರುವಾಗ ಶಾಲಾ ವ್ಯವಸ್ಥಾ ಕ್ರಮಗಳ ಕಾಠಿಣ್ಯದಿಂದ ದ್ರವ್ಯಸಹಾಯವಿಲ್ಲದೆ ಶಾಲೆಗಳನ್ನು ನಡಿಸುವುದೇ ಅಸಾಧ್ಯವಾಗಿ ಬಂದಿದೆ. ಶಾಲಾವಿದ್ಯಾರ್ಥಿಗಳ ಸಂಬಳವು ಶಾಲಾ ಖರ್ಚಿಗೆ ಸಾಕೆಂಬ ಸರಕಾರದವರ ಅಭಿಪ್ರಾಯವು ಸರಕಾರಿ ದ್ರವ್ಯಸಹಾಯವನ್ನು ನಿರಾಕರಿಸಿದ ಕಾರಣಗಳಲ್ಲಿ ಒಂದಾಗಿರುವುದು. ಈ ಸಿದ್ಧಾಂತವನ್ನಾದರಿಸಿ ಪ್ರಕೃತ ವಿದ್ಯಾರ್ಥಿಗಳ ಸಂಬಳವನ್ನು ಹೆಚ್ಚಿಸಿದ್ದಲ್ಲಿ ಇತರ ದ್ರವ್ಯಸಹಾಯ ಒದಗಿಸಲಾಗಲ್ಲದೆ ಶಾಲೆಗಳನ್ನು ನಡಿಸಲಾಗುವುದೆಂದು ಸ್ಕೂಲ್‌ಫೀಸುಗಳ ದರವನ್ನು ಹೆಚ್ಚಿಸುವರಾಗಿ ಕೇಳುತ್ತೇವೆ. ಆದರೆ ಹೀಗೆ ಹೆಚ್ಚಿಸಿದ ಸ್ಕೂಲ್‌ಫೀಸನ್ನು ಕೊಟ್ಟು ತಮ್ಮ ಮಕ್ಕಳನ್ನು ಶಾಲೆಗಳಿಗೆ ಹೋಗಗೊಡಿಸಲು ಸಂಪನ್ನರಾದವರ ಸಂಖ್ಯೆಯು ಸಾಕಷ್ಟು ಇರುತ್ತೆಯೂ ಇಲ್ಲವೆಂತ ಹೇಳಬಹುದಾದ್ದರಿಂದ ಸ್ಕೂಲ್ ಫೀಸುಗಳನ್ನು ಹೆಚ್ಚಿಸುವ ಕ್ರಮವು ಜ್ಯಾರಿಗೆ ಬಂದಾಗ ಶಾಲೆಗಳನ್ನು ನಡಿಸುವುದು ಬಿಟ್ಟು ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚಲ್ಪಡಬೇಕಾಗುವವೋ ಏನೆಂಬದನ್ನು ಸೋರಿಕೆಗಿರುವುದು. ಸೆಕೆಂಡರಿ ಶಾಲೆಗಳು ಬಹಳ ಉತ್ಕೃಷ್ಟ ಗತಿಯಲ್ಲಿರುವಂತೆ ಸರಕಾರದವರು ಶಾಲಾಕ್ರಮಗಳನ್ನು ರಚಿಸಿರುವರೆಂಬುದು ಯಾರೂ ನಿರಾಕರಿಸಲಿಕ್ಕಿಲ್ಲ. ಆದರೆ ಸರಕಾರದ ಸಹಾಯವು ಇಲ್ಲದೆ ಈ ಕ್ರಮಗಳನ್ನು ಜ್ಯಾರಿಗೆ ತರುವುದೆ ಶಾಲೆಗಳ ಇರವು ಅಸಾಧ್ಯವಾಗಿರುವುದು. ಪ್ರತಿಗಳಲ್ಲಿ ವಿದ್ಯಾಭಿರುಚಿಯುಂಟಾಗಿದ್ದರೂ ಅದು ಸಂಪನ್ನರಾದವರಲ್ಲಿ ತ್ಯಾಗಶೀಲತೆಯನ್ನುಂಟುಮಾಡಿ ವಿದ್ಯಾರ್ಥಿಗಳಿಗೆ ದ್ರವ್ಯಸಹಾಯವನ್ನು ಮಾಡಲು ಪ್ರೇರಿಪಿಸುವಷ್ಟು ಪಕ್ವವಾಗದೆ ಇದ್ದುದರಿಂದ ಸರಕಾರದವರು ಸೆಕೆಂಡರಿ ಶಾಲೆಗಳಲ್ಲಿ ದೊರಕುವ ಪ್ರೌಢವಿದ್ಯಾಭ್ಯಾಸವೆಲ್ಲವನ್ನು ಪ್ರಜೆಗಳು ಸ್ವೀಕರಿಸಿಕೊಳ್ಳುವಂತೆ ಮಾಡುವುದು ದೇಶಕ್ಕೊದಗಿದ ಪ್ರಕೃತ ಪರಿಸ್ಥಿತಿಯಲ್ಲಿ ಯುಕ್ತವಲ್ಲ. ಈ ಪನ್ನ ಪ್ರಜಾಮುಂದಾಳುಗಳೂ ಸಹಾ ಈ ವಿಷಯಕ್ಕೆ ತಕ್ಕ ಲಕ್ಷ್ಯಕೊಟ್ಟು ತಮಗೆ ಸಾಧ್ಯವಾಗಿರುವ ವಿದ್ಯಾಲಾಭವನ್ನೂ ಧನಲಾಭವನ್ನೂ ಪ್ರಜಾಸೇವೆಗೆ ಸಮರ್ಪಿಸಲು ಸಿದ್ಧರಾಗಿ ಪ್ರಕೃತ ವಿದ್ಯಾರ್ಥಿವರ್ಗದಲ್ಲಿಯೂ ಶಾಲಾಧಿಕಾರಿಗಳಲ್ಲಿಯೂ ಉಂಟಾಗಿರುವ ನಿರಾಶೆಯ ಮೊಬ್ಬನ್ನು ತೊಲಗಿಸಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

— o —

ಪತ್ರವ್ಯವಹಾರ

(ಬಾತ್ಮೀದಾರರು ಸೂಚಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ)

ಪತ್ರಿಕರ್ತರೇ,

ನನ್ನೆರಡು ನುಡಿಗಳಿಗೆ ಇಂಬುನೀಡಬೇಕಾಗಿ ಹಂಬಲಿಸುತ್ತೇನೆ.

ಕಳದ ತಾ ೩ನೇ ಗುರುವಾರ ಸಂಧ್ಯಾಕಾಲ (೫.೩೦) ಸಮಯದಲ್ಲಿ ಸಭೆಯೊಂದು ಮಿಶ್ಯನ್ ಕಂಪೌಂಡಿನ ಅನಾಥಾಲಯದಲ್ಲಿ ಸೇರಿದ್ದಿತು. ೪೦ ವರುಷಗಳ ವರೆಗೆ ಉಡುಪಿ ಮಿಶ್ಯನ್ ಸ್ಕೂಲಿನ ಮ್ಯಾನೇಜರರಾಗಿದ್ದು, ತಮ್ಮ ತನುಮನಗಳನ್ನು ವಿದ್ಯಾರ್ಥಿಗಳ ಸಲುವಾಗಿಯೂ, ಸಂಘದ ಹಿತಕ್ಕೋಸ್ಕರವೂ ಬಲಿಯರ್ಪಿಸಿ, ಕೊನೆಗೆ ವೃದ್ಧಾಪ್ಯ ಕಾಲದಲ್ಲಿ ವಿರಾಮವನ್ನು ಪಡೆಯುವುದಕ್ಕೆ ಜನ್ಮಸ್ಥಾನವಾದ ಜರ್ಮನಿಗೆ ತೆರಳಬೇಕೆಂದಿದ್ದ ರೆವರೆಂಡ್ ಎ ಪ್ರೇಶೆಯವರನ್ನು ಸಮಯೋಚಿತವಾಗಿ ಸತ್ಕರಿಸಬೇಕೆಂಬುದೇ ಈ ಸಭೆಯ ಮುಖ್ಯೋದ್ದೇಶವಾಗಿದ್ದಿತು. ಮ॥ ರಾ॥ ಅಬ್ದುಲ್ ಹಾಜಿ ಕಾಸಿಮ್ ಸಾಹೇಬ್ ಬಹದೂರ್‌ರವರು, ವಾಸ್ತೇವ ಪೈಗಳು, ವೆಂಕಟೇಶ ಪ್ರಭುಗಳು, ವಿದ್ಯಾ ಇಲಾಖೆಯ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರು, ಅದೇ ಖಾತೆಯ ಸುಪ್ರವೈಜರವರುಗಳು, ಬೋರ್ಡು ಶಾಲೆಯ ಹೆಡ್ ಮಾಸ್ತರು, ಸೂಕ್ತಿ ಕರ್ತರು, ಅಬ್ಕಾರಿಯ ಸೇಟರು, ಅಬ್ದುಲ್ ರಜಾಕ್ ಸಾಹೇಬರು, ದಾವು ಸಾಹೇಬರು, ಸಾಹುಕಾರ ಶೇಷಗಿರಿ ಪೈಗಳು, ಗುರುರಾಯರು, ವೆಂಕಟಾಚಲಯ್ಯನವರು ಇವರೇ ಮೊದಲಾದ ಮಹನೀಯರೂ, ಅನೇಕ ಮಾನಿನಿಯರೂ, ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಇಂದಿನ ಸಂದರ್ಭವನ್ನು ಛಂದಗಾಣಿಸಿದರೂ ಜನಪ್ರೀತರಾದ ನಮ್ಮ ಮುನಿಸಿಫ್ ಮೆ॥ ಎಮ್॥ ದೇವರಾಯರು ಅಗ್ರಾಸನವನ್ನಲಂಕರಿಸಿದ್ದರು. ವಿದ್ಯಾರ್ಥಿಗಳೂ, ಉಪಾಧ್ಯಾಯರೂ ತಮ್ಮ ವಿನ್ನಹವನ್ನೊಪ್ಪಿಸಿ, ಈಗಳಿನ ವಿಯೋಗದ ವಿಷಯದಲ್ಲಿ ಸಂತಾಪವನ್ನು ಸೂಚಿಸಿದುದರ ಮೇಲೆ ನಮ್ಮ ಮ್ಯಾನೇಜರರು ಕಂಬನಿದುಂಬಿದ ಕಣ್ಣುಗಳಿಂದ ತಮ್ಮ ಪ್ರಿಯ ಶಿಷ್ಯರನ್ನೂ ಉಪಾಧ್ಯಾಯರನ್ನೂ ಬಿಟ್ಟು ಹೋಗುವ ಸಂದರ್ಭದಲ್ಲಿ ತಮಗಿರತಕ್ಕ ಅತಿಶಯ ವ್ಯಸನವನ್ನು ಪತ್ರಮುಖೇನ ಸೂಚಿಸಿ ಸುಮ್ಮನಾದರು. ಬಳಿಕ ನಮ್ಮ ಹೆಡ್ ಮಾಸ್ತರರೆದ್ದು ಚಿಕ್ಕದೊಂದು ಉಪನ್ಯಾಸದ ಮೂಲಕ ಉಡುಪಿಯಲ್ಲಿ ಹೊಸದಾಗಿ [illegible] ಕೆಂದಿದ್ದ ಪ್ರೌಢಶಾಲೆ (High School) ಅನಾವಶ್ಯಕವಾದುದೆಂತಲೂ, [illegible] ಬೋರ್ಡು [illegible] ತಮ್ಮ ಶಾಲೆಯವರು [illegible] ದಿಂದ [illegible] ವಿದ್ಯಾರ್ಥಿಗಳ ವಿಷಯದಲ್ಲಾಗಲೀ [illegible] ಶಾಲೆಗಳಲ್ಲಾಗಲೀ

ನವೀನ ಏರ್ಪಾಡುಗಳಾಗಬೇಕಾಗಿದ್ದರೆ ಮಿಶ್ಯನ್ ಸಂಘದವರು ಅಂತವುಗಳನ್ನು ಅತ್ಯಾವಶ್ಯಕವಾಗಿ ಮಾಡಲು ಸಿದ್ಧರಾಗಿರುವರೆಂತಲೂ, ಎರಡು ಹೈಸ್ಕೂಲುಗಳಿರುವುದರಿಂದ ಅನೇಕ ಅನಾನುಕೂಲಗಳುಂಟಾಗಬಹುದೆಂತಲೂ ಹೇಳಿದರು. ಸಭಿಕರೆಲ್ಲರೂ ಇವರ ಉಪನ್ಯಾಸವನ್ನು ಒಪ್ಪಿದುದು ಮಾತ್ರವಲ್ಲದೆ; ಸರಕಾರದವರೂ ಉಡುಪಿಯಲ್ಲಿ ಇನ್ನೊಂದು ಹೈಸ್ಕೂಲು ಸ್ಥಾಪಿಸಲ್ಪಡಬೇಕಾದ ಅವಶ್ಯಕವಿಲ್ಲವೆಂತ ಅಪ್ಪಣೆಯನ್ನಿತ್ತಿರುವರೆಂತ ಹೆಡ್‌ಮಾಸ್ತರರ ಭಾಷಣದ ಬಳಿಕ ತಿಳಿದುಬಂದ ಈ ವಿಷಯದಿಂದ ಅವರು ಆಡಿದ ಮಾತು ಸತ್ಯವಾದುದೆಂದೂ, ಸಹಜವಾದುದೆಂದೂ ಪ್ರತ್ಯೇಕವಾಗಿ ಹೇಳಬೇಕೆ?

ಅಂದಿನ ಸಭೆಯಲ್ಲಿ ಸೂಕ್ತಿಕರ್ತರಾದ ಕೆ| ಸುಬ್ಬರಾಯರು, ಪಿ| ವೆಂಕಟಾಚಲಯ್ಯನವರು ಇವರೇ ಮೊದಲಾದ ಕೆಲವರ ಭಾಷಣಗಳಾದ ನಂತರ ಸಭಾಧ್ಯಕ್ಷರು ಯಥೋಚಿತವಾದ ನಾಲ್ಕು ಮಾತುಗಳನ್ನಾಡಿ, ಸಭೆಯ ಸದುದ್ದಿಶ್ಯವನ್ನು ಸಾರ್ಥಕಗೊಳಿಸಿದರು. ನಡು ನಡುವೆ ಆಗುತ್ತಿದ್ದ ಗಾನದಿಂದ ಸಭಿಕರೆಲ್ಲರೂ ಸಂತೋಷಿತರಾಗಿ ಮೆ ಬ್ರೇಶಿಯವರಿಗೂ, ಮುಂದಿನ ವ್ಯಾಖ್ಯಾನಕಾರರಾದ ಮೆ| ಷ್ನೈದರರವರಿಗೂ ವಂದನೆಗಳನ್ನು [illegible] ಬಯಿಸಿ, ನನಗೆ ತೋರಿದರು. [illegible] ಗಳಿಗೆ ಬ್ರೇಶಿಯವರು ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ, [illegible] ಉಪಚಾರದಂತೆ ಫಲಹಾರವನ್ನು ಮಾಡಿಸಿ, ತತ್ಕಾಲಿಕವಾದ ಬುದ್ಧಿವಾದವನ್ನು ಹೇಳಿದರು. ಆ ಮೇಲೆ ಸೋಮವಾರ ದಿನ ಪ್ರಾತಃಕಾಲ ಮಿಶ್ಯನ್ ಶಾಲಾ ಅಧ್ಯಕ್ಷರಾದ ಮೆ| ಪಿ| ರಾಮಚಂದ್ರರಾಯರಿಂದ ಪಾಲಿಸಲ್ಪಡುತ್ತಿರುವ ಅನಾಥ ಮಕ್ಕಳನ್ನೂ, ಪಂಚಮರ ಶಾಲೆಯನ್ನೂ ಪರಾಂಬರಿಸಿ, ಸ್ವಲ್ಪ ದೂರದ ವರೇಗೆ ವಿದ್ಯಾರ್ಥಿಗಳಿಂದಲೂ, ಉಪಾಧ್ಯಾಯರಿಂದಲೂ ಹಿಂಬಾಲಿತರಾಗಿ, ಮಲ್ಪೆ ಬಂದವರನ್ನು ಸೇರಿ, ಮರುದಿನ ಹಡಗಿನಲ್ಲಿ ಜರ್ಮನಿಗೆ ಪ್ರಯಾಣವನ್ನು ಬಳೆಯಿಸಿದರು. ಭಗವಂತನವರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕೊಂಡೊಯ್ದು ಅಲ್ಲಿ ಅವರನ್ನೂ ಅವರ ಕುಟುಂಬವನ್ನೂ ಬಹುಕಾಲ ಬಾಳುವಂತಾಶೀರ್ವದಿಸಲೆಂದು ಹೇಳಿ, ಪ್ರಕೃತ ವಿರಮಿಸಿಕೊಳ್ಳಲನುಜ್ಞೆ ಬೇಡುತ್ತೇನೆ.

"ಪ್ರತ್ಯಕ್ಷದರ್ಶಿ"

ವಿದೇಶ ವೃತ್ತಾಂತ.

ಹಿಂದೂಸ್ಥಾನದ ಬಜೇಟು ವೃತ್ತಾಂತದಲ್ಲಿ ಸಿಗರೇಟು ಮೊದಲಾದ ಹೊಗೆಸೊಪ್ಪಿನಿಂದ ತಯ್ಯಾರಾಗುತ್ತಿರುವ ವಿದೇಶಿ ಜಿನಸುಗಳ ಮೇಲೆ ಸುಂಕಗಳು ವಿಧಿಸಲ್ಪಡುವುವೆಂದು ಪ್ರಸ್ತಾಪಿಸಿದ್ದೆವಷ್ಟೆ. ಈ ಸಮಾಚಾರವನ್ನು ಇಂಗ್ಲಾಂಡದಲ್ಲಿ ಸಿಗರೇಟು ಕಾರ್ಖಾನೆಯವರು ಹಲವರು ತಿಳಿದು ಇಂಡಿಯದ ಸ್ಟೇಟಸೆಕ್ರೆಟರಿಗಳಿಗೆ ಪಾರ್ಲಿಮೆಂಟಿನ ಹಲವು ಮೆಂಬರುಗಳ ಮುಖಾಂತರ ಈ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿದ್ದರು. ಮೋರ್ಲೆಪ್ರಭುಗಳು ತೆರಿಗೆಯನ್ನು ಕಡಿಮೆ ಮಾಡಲು ಸಮ್ಮತಿಸಲಿಲ್ಲವೆಂತ ಕೇಳುತ್ತೇವೆ.

ಎಡ್ವರ್ಡ್ ಮಹಾ ಚಕ್ರವರ್ತಿಗಳು ವಿಹಾರಾರ್ಥವಾಗಿ ಪ್ಯಾರಿಸ್ ನಗರದಲ್ಲಿ ಕೆಲವು ದಿನ ಇಳಕೊಳ್ಳುವರು.

ಪ್ರಿನ್ಸ್ ಆಪ್ ವೇಲ್ಸ್ ಯುವರಾಜರವರು ಪಾರ್ಲಿಮೆಂಟ್ ಸಭೆಯಲ್ಲಿ ಪ್ರತಿಪಕ್ಷಫೂ ಹಾಜರಿದ್ದು ಅಲ್ಲಿ ನಡಿಯುತ್ತಿರುವ ವೃತ್ತಾಂತವನ್ನು ಕೇಳುತ್ತಿರುವರು.

ಕೆನ್ಸಾಸ್ ಪಟ್ಟಣದಲ್ಲಿ ಡಾಕ್ಟರ್ ಕ್ಲಾರ್ಕ್ ಹ್ಯಾಡಲೆಂಬವರು ಕರ್ನಲ್ ಸ್ವೋಪ್ ಎಂಬ ಲೋಕೋಪಕಾರಿಯನ್ನು ಸ್ಟ್ರಿಕ್ನಿನ್ ಎಂಬ ವಿಷಪ್ರಯೋಗದಿಂದ ಕೊಂದಿರುವರೆಂಬದಾಗಿಯೂ ಕನೆಲರ ಕುಟುಂಬದವರಲ್ಲಿ ಇನ್ನು ಎಂಟು ಜನರಿಗೆ ಟ್ಯಾಫೈಡ್ ಫೀವರ್ ಎಂಬ ವಿಷವುಜ್ವರವು ತಗಲುವಂತೆ ಜ್ವರದ ಅಣುಗಳು ಅವರ ಶರೀರಗಳನ್ನು ಪ್ರವೇಶಿಸುವಂತೆ ಮಾಡಿರುವರೆಂಬದಾಗಿಯೂ ವರ್ತಮಾನ ಇರುವುದು.

ರುಷ್ಯ ದೇಶದಲ್ಲಿ ವಾಸಿಸಿಕೊಂಡಿರುವ ಯಹೂದ್ಯರನ್ನು ದೇಶಭ್ರಷ್ಟರನ್ನಾಗಿ ಮಾಡುವ ನಿಬಂಧನೆ ಮೇರೆಗೆ ೧೩೩೦ ಯಹೂದ್ಯ ಕುಟುಂಬಗಳಿಗೆ ವಾಸಿಸಿಕೊಳ್ಳುವ ಹಕ್ಕುಗಳು ನಿರಾಕರಿಸಲ್ಪಟ್ಟು ನಿರ್ಗತಿಕರಾಗಿರುವರೆಂತ ಕೇಳುತ್ತೇವೆ.

ಉತ್ತರ ಹಿಂದುಸ್ಥಾನ.

ಟಿಬೇಟಿನ ಸಮ್ಬಂಧವಾಗಿ ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯು ತಾ. ೯ರಲ್ಲಿ [illegible] ಕೂಡಿತು.

ಪ್ರಜಾವರ್ಗಕ್ಕೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಬೇಕೆಂಬ ಬಹುಮಾನಪಟ್ಟ ಮಿ ಗೋಖಲೆಯವರ ನಿರ್ಣಯವು ಸಭೆಯ ಮುಂದೆ ಪರ್ಯಾಲೋಚಿಸುವ ಬಗ್ಗೆ ಈ ತಿಂಗಳ ತಾ ೧೮ಕ್ಕೆ ಇಟ್ಟಿರುವದು. ಈ ಸಂದರ್ಭದಲ್ಲಿ ವಿದ್ಯಾಖಾತೆಯ ಡಿರೆಕ್ಟರ್ ಜನರಲರಾದ ಮಿ| ಒರೆಂಜರವರು ಸಭೆಯಲ್ಲಿ ಹಾಜರಿರುವರು.

ವಿಲಾಯತಿಗೆ ಹೋಗಿ ಐ ಎಮ್. ಎಸ್| ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟವರಿಗೆ ಮಾತ್ರ ಈ ವರೆಗೆ ದೊರೆಯುತ್ತಿರುವ ವೈದ್ಯ ಇಲಾಖೆಯ ಹುದ್ದೆಗಳನ್ನು ಇತರರಿಗೂ ದೊರೆಯುವಂತೆ ಒಂದು ಠರಾವನ್ನು ಬಹುಮಾನಪಟ್ಟ ಗೋಖಲೆಯವರು ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯ ಮುಂದಿಡುವರು. ಬಹುಮಾನಪಟ್ಟ ಮಿ| [illegible]ನ್ನರವರು ಅಸಿಸ್ಟಾಂಟ ಸರ್ಜನುಗಳ ಸಂಕಷ್ಟಗಳನ್ನು ಸಭೆಯ ಮುಂದೆ ಪ್ರಸ್ತಾಪಿಸುವರು.

ಮಿಂಟೊ ಪ್ರಭುಗಳ ನಂತರ ಹಿಂದೂಸ್ಥಾನದ ವ್ಯಾಸರಾಯ ಪ್ರಭುಗಳ ಪದವಿಗೆ ಕಿಚ್ನರ್ ಪ್ರಭುಗಳು ಅಥವಾ ಸೆಂಟ್ ಪಿಟರ್ಸ್‌ಬರ್ಗನಲ್ಲಿ ಬ್ರಿಟಿಷ್ ರಾಯಭಾರಿಯಾಗಿರುವ ಸರ್ ಚಾರ್ಲ್ಸ್ ಹಾರ್ಡಿಂಗರವರು ನೇಮಕಪಡುವರೆಂಬದಾಗಿ ಇಂಗ್ಲಿಷಮನ್ ಎಂಬ ಪತ್ರಿಕೆಯ ಲಂಡನ್ ಬಾತ್ಮೀದಾರನು ತಿಳಿಸಿರುತ್ತಾನೆ.

ಕಲಕತ್ತಾ ಯುನಿವರ್ಸಿಟಿಯ ಕನ್ವೊಕೇಶನ್ ಎಂಬ ಮಹಾ ಸಭೆಯು ಈ ತಿಂಗಳ ತಾ ೧೩ರಲ್ಲಿ ಜರಗುವುದು. ವ್ಯಾಸರಾಯ ಪ್ರಭುಗಳು ಯುನಿವರ್ಸಿಟಿ ಚೆನ್ಸಲರರಾಗಿ ಕಡೇ ಸರ್ತಿ ಈ ಸಭೆಗೆ ದಯಮಾಡುವರು.

ವರ್ತಮಾನ ಪತ್ರ ಮತ್ತು ಮುದ್ರಣಾಲಯಗಳ ನವ ಶಾಸನದ ಜ್ಯಾರಿಯು ಮುಂಬಯಿಯಲ್ಲಿ ನಡೆವ "ಹಿಂದೂ ಪಂಚ" ಮತ್ತು ಇನ್ನೊಂದು ಪತ್ರವು ಪ್ರಕೃತ ಪ್ರಕಟವಾಗುವದಿಲ್ಲವಂತೆ.

ಮುಂಬಯಿ ಗವರ್ನರರವರ ಕಾರ್ಯನಿರ್ವಾಹ ಸಭೆಗೆ ಗವರ್ನ್‌ಮೆಂಟ್ ಪ್ಲೀಡರರಾಗಿದ್ದ ರಾ| ಮಾಧವ ಭಾಸ್ಕರ ಚಂಬಾಲ್| ಬಿ| ಎ| ಎಲ್| ಎಲ್| ಬಿ| ಎಂಬವರನ್ನು [illegible] ಮೆಂಬರರಾಗಿ ನೇಮಿಸಿರುವರು.

ವೈದ್ಯ ಪರೀಕ್ಷೆ ಪಾಸಾದವರೇ ವೈದ್ಯವೃತ್ತಿಯನ್ನನುಸರಿಸುವಂತೆ ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟ್ ಎಂಬ ಶಾ[illegible] ಸರಕಾರದವರನ್ನು ವಿಜ್ಞಾಪಿಸಿಕೊಳ್ಳುವರೆ ಮುಂಬಯಿಯಲ್ಲಿ ನೇಟಿವ್ ವೈದ್ಯರ ಮತ್ತು ಹಕೀಮರ ಒಂದು ಸಭೆಯು ಕೂಡಿತು.

ಮುಂಬಯಿಯಲ್ಲಿಯ ಜೈನ ಸಮುದಾಯದವರು ತಮ್ಮ ಸಮುದಾಯದವರಿಗೆ ವ್ಯಾಸರಾಯಪ್ರಭುಗಳ ನ್ಯಾಯನಿರ್ಮಾಣ ಸಭೆಯಲ್ಲಿ ಪ್ರತ್ಯೇಕವಾದ ಮೆಂಬರುತನ ದೊರಕಿಸಿಕೊಡಬೇಕೆಂದು ಮನವಿಮಾಡಿಕೊಂಡಿದ್ದರು. ಈ ಮನವಿ ಪ್ರಕಾರ ಸರಕಾರದವರಿಗೆ ವರ್ತಿಸುವರೆ ಅನುಕೂಲವಿಲ್ಲವೆಂಬ ಉತ್ತರವು ದೊರಕಿರುವುದು. ಆದರೆ ವ್ಯಾಸರಾಯ ಪ್ರಭುಗಳಿಂದ ನೇಮಕ ಹೊಂದುವ ಮೆಂಬರುತನಗಳ ಪೈಕಿ ಒಂದು, ಸಮಯಾನುಸಾರ ಜೈನ ಸಮುದಾಯದವರಿಗೆ ಸಹಾ ಕೊಡಬೇಕಾದೀತೆಂದು ತಿಳಿಸಲ್ಪಟ್ಟಿರುತ್ತದೆ.

ಮುಂಬಯಿಯಲ್ಲಿ ಮಿ ಹೊರಮುಸಜೀ ಗೋರಿಮಾರ್ ಎಂಬವರು ಮಹಿಕಾಂತ ಜಿಲ್ಲೆಯಲ್ಲಿ ದೊರಕಿರುವ ಕೆಲವು ಸೀಸದ ನಾಣ್ಯಗಳನ್ನು ಪಡೆಕೊಂಡಿರುವರು. ನಾಣ್ಯಗಳ ಮೇಲಿರುವ ಬರಹ ಮೊದಲಾದವುಗಳಿಂದ ಇವು ಹಿಂದೂ ವಂಶಜರಾದ ಅರಸುಗಳಿಗೆ ಸಮ್ಬಂಧಪಟ್ಟವೆಂಬದಾಗಿ ತೋರಿಬರುತ್ತದೆ.

ಫರಿದ್‌ಕೋಟ ಎಂಬ ಸಂಸ್ಥಾನದಲ್ಲಿ ವಕೀಲರು ವ್ಯವಹರಿಸುವ ವೃತ್ತಿಯನ್ನನುಸರಿಸುವುದು ಸಂಸ್ಥಾನದ ಮತ್ತು ಸಂಸ್ಥಾನ ಪ್ರಜೆಗಳ ಕ್ಷೇಮಕ್ಕೆ ಉಚಿತವಲ್ಲವೆಂತ ವಿಕ್ರಮಶಕ ೧೯೬೬ನೇ ವರುಷದ ಪ್ರಾರಂಭದಿಂದ ವಕೀಲರಿಗೆ ವ್ಯವಹರಿಸುವರೆ ಲ್ಯಾಸೆನ್ಸು ಕೊಡಕೂಡದೆಂಬದಾಗಿ ನಿರ್ಧರಿಸಿರುವರಂತೆ.

ಡೆಲೈಲಾಮಾ ಎಂಬ ಟಿಬೇಟಿನ ಬುದ್ಧ ಸನ್ಯಾಸಿ ಪ್ರಮುಖನು ಕಲಿಕತ್ತೆಗೆ ಹೋಗುವರೆ ಈ ತಿಂಗಳ ತಾ. ೧ರಲ್ಲಿ ಕಾಲಿಂಪೋಂಗ್ ಎಂಬಲ್ಲಿಗೆ ಬಂದು ಡಾರ್ಜಲಿಂಗ್ ಮಾರ್ಗವಾಗಿ ತಾರೀಕು ೫ರಲ್ಲಿ ಅಲ್ಲಹಾಬಾದಿಗೆ ಬಂದು ತಾ. ೧೩ಕ್ಕೆ ಕಲಿಕತ್ತೆಗೆ ಬಂದು ತಲ್ಪುವನಾಗಿ ವರ್ತಮಾನವಿರುತ್ತದೆ. ಡೆಲೈಲಾಮನು ಹೋದಲ್ಲೆಲ್ಲಾ ಬೌದ್ಧಮತಸ್ಥರೂ ಇತರರೂ ಇವನನ್ನು ಬಹಳ ಸಂಭಾವಿತ ರೀತಿಯಲ್ಲಿ ಎದುರ್ಗೊಂಡರು. ಡಾರ್ಜಲಿಂಗನಲ್ಲಿಯ ಬೌದ್ಧರೆಲ್ಲರೂ ಸಭೆಕೂಡಿ ಚೀನಿಯರು ಲಾಮನನ್ನು ನಡಿಸಿದ ರೀತಿಯು ಅಯೋಗ್ಯವೆಂತಲೂ ಹಿಂದೂಸ್ಥಾನದ [illegible] ಯದಲ್ಲಿ ಲಾಮನಿಗೆ ಸಹಾಯಮಾಡಬೇಕೆಂತ [illegible] ಸಭೆಯಲ್ಲಿ [illegible]

ದಕ್ಷಿಣ ಹಿಂದುಸ್ಥಾನ

ಮದ್ರಾಸು ಗವರ್ನರರವರ ನ್ಯಾಯವಿಧಾಯಕ ಸಭೆಯು ಈ ದಿನ ಮದ್ರಾಸಿನಲ್ಲಿ ಕೂಡುವುದು. ಬಹುಮಾನಪಟ್ಟ ಧಾರಾಕೋಟೆದ ರಾಜರವರೂ, ಬಹುಮಾನಪಟ್ಟ ಮ್ಹ. ಪಿ. ಎಸ್. ಎಸ್. ಸಾಲ್ವಾನಾರವರೂ ಬಹುಮಾನಪಟ್ಟ ಸಂಬಂದ ಮುದಲಿಯರವರೂ ಮಿ ಷಣ್ಮುಗಮ್ ಪಿಳ್ಳೆಯವರೂ ಈ ಸಭೆಗೆ ಪ್ರಥಮ ಸರ್ತಿ ಹಾಜರಾಗುವರು. ಸಭೆಯಲ್ಲಿ ೧೯೧೦—೧೧ ವರುಷದ ಆದಾಯ ವೆಚ್ಚದ ಪಟ್ಟಿಯೂ ಹಾಜರು ಮಾಡಲ್ಪಡುವುದು. ಈ ಸಂದರ್ಭದಲ್ಲಿ ಬಹುಮಾನಪಟ್ಟ ಮಿ। ಕೃಷ್ಣಸ್ವಾಮಿಯರರವರು ಸರಕಾರದ ಸಿವಿಲ್ ಇಲಾಖೆಯ ಎಲ್ಲಾ ಸಿಬ್ಬಂದಿಗೆ ದವಸ ಧಾನ್ಯಗಳ ಧಾರಣೆಯು ಜಾಸ್ತಿಯಾಗಿರುವುದರ ನಿಮಿತ್ತ ಕೊಟ್ಟಿರುವ ಮುಂಗೈ ಬತ್ತೆಯನ್ನೇ ಸಂಬಳಕ್ಕೆ ಕೂಡಿಸಿ ಇಂಥಾ ಸಂಬಳವು ಕಾಯಂ ಆಗಿ ಸಿಕ್ಕುವಂತೆ ಏರ್ಪಡಿಸಬೇಕೆಂಬ ಸೂಚನೆಯನ್ನು ಸಭೆಯಲ್ಲಿ ಮಾಡುವರು. ಸಭೆಯಲ್ಲಿ ಒಟ್ಟಿಗೆ ೭೦ ಪ್ರಶ್ನೆಗಳು ಮೆಂಬರ ಕಡೆಯಿಂದ ಕೇಳಲ್ಪಡುವವು. ಬಹುಮಾನಪಟ್ಟ ಕೇಶವ ಪಿಳ್ಳೆ, ಕಾಮೇಶ್ವರ ರಾವ್ ನಾಯಡು, ಮತ್ತು ಪೆರಾಜು ಪಂತ್ಲು ಈ ಮೂರು ಜನ ಮೆಂಬರರೇ ಜಂಗ್ಲಿ ಇಲಾಖೆಗಳಿಂದಾಗುವ ಸಂಕಷ್ಟಗಳು ಇತ್ತಲಾಗಾದ ನವೀನ ಸೆಟ್ಲುಮೆಂಟುಗಳು ವಿದ್ಯಾಖಾತೆಯ ವಿಷಯ ಇವುಗಳೇ ಮೊದಲಾದ ಸರಕಾರ ಕಾರ್ಯನಿರ್ವಾಹದ ಕುರಿತು ಪ್ರಶ್ನೆಗಳನ್ನು ಕೇಳುವರು. ಮಿ ಪೆರಾಜುರವರು ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲದ ಕಾಠಿಣ್ಯವನ್ನು ಕುರಿತೂ ಮಿ। ಶೇಷಗಿರಿ ಅಯ್ಯರರವರು ಸೆಕೆಂಡರಿ ಶಾಲೆಗಳಲ್ಲಿ ಹೆಚ್ಚಿಸಲ್ಪಡುವ ವಿದ್ಯಾರ್ಥಿಗಳ ಸಂಬಳಗಳ ದರಗಳ ಕುರಿತೂ ವಾದಿಸುವರು.

ಮದ್ರಾಸು ಗವರ್ನರರವರ ಕಾರ್ಯನಿರ್ವಾಹಕ ಸಭೆಗೆ ಬೊಬ್ಬಿಲಿಯ ಮಹಾರಾಜರವರನ್ನು ಮೆಂಬರರಾಗಿ ನೇಮಿಸಿರುವರು. ಇವರು ದೊಡ್ಡ ಜಮೀನುದಾರರೂ ಯುರೋಪ ಮೊದಲಾದ ದೇಶಗಳಿಗೆ ಹೋಗಿ ತಿರುಗಿ ಬಂದವರಾದರೂ ಕಾರ್ಯನಿರ್ವಾಹಕ ಸಭೆಯ ಮೆಂಬರತನಕ್ಕೆ ಬೇಕಾದ ಶಿಕ್ಷಣವನ್ನಾಗಲೀ, ಮಾಹಿತಿಯನ್ನಾಗಲೀ ಪಡೆದಿರುವುದಿಲ್ಲವೆಂಬದಾಗಿ ಇವರ ನೇಮಕದಿಂದ ವಿದ್ಯಾವಂತರಲ್ಲಿ ತೃಪ್ತಿ ಉಂಟಾಗಲಿಲ್ಲವೆಂಬದಾಗಿ ತೋರುತ್ತದೆ.

ದಕ್ಷಿಣ ಜಿಲ್ಲೆಗಳ ಥಿಯೋಸೋಫಿಕಲ್ ಸೊಸೈಟಿಯಾ ಬ್ರಹ್ಮಜ್ಞಾನ ಸಂಘದ ಶಾಖೆಗಳ ಫೆಡರೇಶನ್ ಎಂಬ ಮಹಾ ಸಭೆಯು ಈ ತಿಂಗಳ ತಾ ೨೫ ಮತ್ತು ೨೬ರಲ್ಲಿ ಕಲಿಕೋಟೆಯ ಶ್ರೀ ಶಂಕರ ಮಂದಿರ ಎಂಬ ಸಭಾಸದನದಲ್ಲಿ ಜರಗುವದು. ಹೆಚ್ಚು ಕಡಿಮೆ ೧೫೦ ಪ್ರತಿನಿಧಿಗಳು ಈ ಸಭೆಗೆ ಬರುವರಾಗಿ ನಿರೀಕ್ಷಿಸಲ್ಪಟ್ಟಿದೆ. ಈಗ ಅದ್ಯಾರದಲ್ಲಿರುವ ನ್ಯೂಜೀಲೇಂಡಿನ ಮಿಸಿಸ್ ಕ್ರಿಸ್ಟಿ ಎಂಬ ದೊರೆಸಾನಿಯರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು. ಸಂಘದವರ ಮಹಾ ಸಭೆಯ ನಂತರ ಕಲಿಕೋಟೆಯಲ್ಲಿ ಎರಡು ಭಾಷಣಗಳನ್ನು ಮಿಸಿಸ್ ಕ್ರಿಸ್ಟಿಯವರು ಕೊಡುವರು.

ಕುಂಭಕೋಣದ ತಾಲೂಕು ಬೋರ್ಡಿನಲ್ಲಿ ಇಬ್ಬರು ಮೆಂಬರುಗಳನ್ನು ಓಟ್ಸ್ ಪ್ರಕಾರ ಆರಿಸಿ ಚುನಾವಣೆಯು ನಡೆಯುತ್ತಿರುವಾಗ ಓಟುಗಳಿಗೆ ಪ್ರತಿಯೊಂದಕ್ಕೆ ರೂಪಾಯಿ 5 ರಿಂದ 20ರ ವರೆಗೆ ಕ್ರಯ ಬಂದಿತಂತೆ ಎಂದು ಬಹುಮಾನ್ ಪಟ್ಟ ದಿವಾನ್ ಬಹದ್ದೂರ ರಘುನಾಥರಾವರವರು ಹಿಂದೂ ಎಂಬ ವರ್ತಮಾನ ಪತ್ರಿಕೆಗೆ ಬರೆದಿರುವರು.

[illegible] ನಾಯಮರವರು ಲಾಹೋರಿನ [illegible] ಹಿಂದುಸ್ಥಾನ ನವೆಂಬ ವರ್ತಮಾನ ಪತ್ರಿಕೆ[illegible] 25 ಪತ್ರಗಳನ್ನು [illegible] ದಂಡವಾಗಿ ವಿಧಿಸಿರುವರು.

ಮದ್ರಾಸು ಸಂಸ್ಥಾನದಲ್ಲಿ ಜಮೀನುದಾರಿ ಆಸ್ತಿಗಳ ಮೇಲೆ ಇರುವ ಸೆಸ್ ಎಂಬ ತೆರಿಗೆಯನ್ನು ವಜಾ ಮಾಡಬೇಕೆಂದು ಕುರುಪಂ ರಾಜರವರು ವ್ಯಾಸರಾಯಪ್ರಭುಗಳ ನ್ಯಾಯ ನಿರ್ಮಾಣ ಸಭೆಯಲ್ಲಿ ಕೇಳಿಕೊಂಡಾಗ ಪ್ರಕೃತ ಹಣದ ಅಡಚಣೆಯು ಸರಕಾರದವರಿಗೆ ಬಹಳವಾಗಿರುವುದೆಂದೂ ಮುಂದಕ್ಕೆ ಈ ಅಡಚಣೆಯು ದಾಟಿದ ಕೂಡಲೇ ಈ ತೆರಿಗೆಯನ್ನು ವಜಾ ಮಾಡುವೆವೆಂದೂ ಹೇಳಿದ್ದರಿಂದ ಕುರುಪಂ ರಾಜರವರು ತಮ್ಮ ಸೂಚನೆಯನ್ನು ಹಿಂತೆಗೆದರು.

ಕಳೆದ ವಾರದಲ್ಲಿ ಸೆನೆಟ್ ಮೀಟಿಂಗ್ ಕೂಡಿತ್ತು. ಗತವರುಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಪಾಸುಪಟ್ಟಿಯನ್ನು ಪುನರಾಲೋಚಿಸುವರೋ ಎಂಬ ಕೋರಿಕೆ ಇತ್ತು. ಆದರೆ ಈ ಕೋರಿಕೆ ಸಭಾ ವೃತ್ತಾಂತದಿಂದ ನಿಷ್ಫಲವೆಂತ ಕಂಡು ಬರುತ್ತದೆ. ಎರಡನೇ ಸರ್ತಿ ಪಾಸಾಗಿರುವರೆಂತ ಹೆಸರು ಪ್ರಕಟಿಸಲ್ಪಟ್ಟವರಿಗೆ ಪಾಸಾದ ಸರ್ಟಿಫಿಕೇಟುಗಳನ್ನು ಕೊಡತಕ್ಕದಾಗಿ ನಿರ್ಣಯಿಸಿರುವರು.

ದಕ್ಷಿಣ ಕನ್ನಡ

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೯ ಪ್ಲೇಗು ಮರಣಗಳೂ ೬೦ ಸಿಡುಬು ರೋಗದ ಮರಣಗಳೂ ಇದ್ದವು.

ಮಂಗಳೂರು ಮುನಿಸಿಪಾಲಿಟಿಯ ಮಾರ್ಕೆಟ್ ವಾರ್ಡಿಗೆ ಮುನಿಸಿಪಲ್ ಕೌನ್ಸಿಲರನ್ನಾಗಿ ಮ। ರಾ। ರಾ। ಉದಿಯಾವರ ಕೃಷ್ಣಯ್ಯನವರನ್ನು ತಿರಿಗಿ ಚುನಾಯಿಸಿರುವರು.

ಹೆಡ್ ಅಸಿಸ್ಟಾಂಟ್ ಕಲೆಕ್ಟರರವರು ಮಿ। ಹ್ಯೂಗ್ ದೊರೆಗಳಿಗೆ ಈ ತಿಂಗಳ ಆಖೈರಿನಿಂದ ೧ ವರುಷ ೬ ತಿಂಗಳ ರಜಾ ಸಂಕ್ಷನ್ ಆಗಿಯದೆಂದು ತಿಳಿದುಬರುತ್ತದೆ.

ಕುಂದಾಪುರ ಡಿವಿಜನಿನ ಚಾರ್ಜಿಗೆ ಮಿ। ಹ್ಯಾಮಿಂಗ್ ವೇಯವರನ್ನು ನೇಮಿಸಿರುತ್ತಾರೆ.

ಮಂಗಳೂರ ಟೌನ್ ಮೆಜಿಸ್ಟ್ರೇಟರು ಮಿ ಕಾಸ್ಟೆಲಿನೊರವರನ್ನು ಉಪ್ಪಿಗೂ, ಸ್ಟೇಶನರಿ ಮೆಜಿಸ್ಟ್ರೇಟರು ಮ। ರಾ। ರಾ ಪಿ ಎನ್ ಕೃಷ್ಣರಾಯರನ್ನು ಮಂಗಳೂರು ಟೌನ್ ಚಾರ್ಜಿಗೂ, ಮೊನ್ನೆ ಉಪ್ಪಿಗೆ ವರ್ಗವಾಗಿ ಹೋದ ಮ ರಾ ರಾ। ಯಂ ನಾರಾಯಣ ಕಿಣಿಯವರನ್ನು ಮಂಗಳೂರು ಸ್ಟೇಶನರಿ ಮೆಜಿಸ್ಟ್ರೇಟರನ್ನಾಗಿಯೂ ವರ್ಗ ಮಾಡಿದ್ದಾರೆ.

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ೧ನೇ ಅಸಿಸ್ಟಾಂಟ್ ರಾ। ಕೆ ವೆಂಕಟರಾಯರು ಎಲ್ ಟಿ ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಪಾಸಾಗಿರುತ್ತಾರಾಗಿ ಪ್ರಸ್ತಾಪಿಸಿದ್ದೇವಷ್ಟೆ. ಇವರು ೧ನೇ ತರಗತಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.

ಸದರಿ ಶಾಲೆಯಲ್ಲಿ ಕಳೆದ ದಶಂಬರದಲ್ಲಿ ಆದ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಸೆಕೆಂಡರಿ ಗ್ರೇಡಿನಲ್ಲಿ ೯ರಲ್ಲಿ ಪೂರಾ ಜನ ವಿದ್ಯಾರ್ಥಿಗಳೂ ಎಲಿಮೆಂಟರಿ ಗ್ರೇಡಿನಲ್ಲಿ ೩೭ರಲ್ಲಿ ೩೧ ಮಂದಿ ವಿದ್ಯಾರ್ಥಿಗಳೂ ತೇರ್ಗಡೆಪಟ್ಟಿರುತ್ತಾರಾಗಿ ತಿಳಿಸುವರೆ ತುಂಬಾ ಸಂತೋಷಪಡುತ್ತೇವೆ. ಪರೀಕ್ಷಾರ್ಥವಾಗಿಟ್ಟ ಸೆಕಂಡರಿ ಗ್ರೇಡಿನ ಫಲಿತಾಂಶವು ಶ್ಲಾಘನೀಯವಾದುದೇ ಸರಿ. ಇದಕ್ಕೆ ಕಾರಣ ಭೂತರಾದ ಹೆಡ್ ಮಾಸ್ತರರಾದ ಮ। ರಾ। ರಾ। ಕೆ ರಾಮರಾಯರಿಗೆ ಬೇಗನೇ ಬಡ್ತಿಯಾಗಲೆಂದು ಪ್ರಾರ್ಥಿಸುತ್ತೇವೆ.

ಮುಲ್ಕಿ. ಇಲ್ಲಿಯ ಆಸ್ಪತ್ರೆಗೆ ಡಾಕ್ಟರ್ ಕೆ ರಾ[illegible] ರಾಯರ ಬದಲಿಗೆ ಡಾಕ್ಟರ್ [illegible]

[illegible] ಯಲ್ಲಿ [illegible] ಕಮ್ಮಾರರಿಗೆ ಬೆಂಕಿ ಹಾಗಿ ಐದಾರು ಕಮ್ಮಾರರುಗಳು ಸುಟ್ಟು ಬೂದಿಯಾದವು. ಮಾಲಿಕರಿಗೆ ಸುಮಾರು ಸಾವಿರ ರೂಪಾಯಿ ನಷ್ಟವಾದೀತು. ಬೀಡಿ ಸೇದಿ ಅತ್ತಿತ್ತ ಬಿಸಾಡಿ ಬಿಡುವವರು ಎಚ್ಚರಿಕೆ ತಕ್ಕೊಳ್ಳಲಿ.

ವಿದ್ಯಾಖಾತೆಯ ನಮ್ಮ ಡಿವಿಜನ್ನಿನ ಇನ್ಸ್ಪೆಕ್ಟೆಸ್ ಮಿಸ್ ಜ್ಯೂ ಎಂಬವರು ಇದೇ ತಾರೀಕು ೩ನೇಗೆ ಇಲ್ಲಿಗೆ ತಲ್ಪಿ ಅಂದೇ ಬೋರ್ಡು ಹುಡುಗಿಯರ ಶಾಲೆಯನ್ನು ಸಂದರ್ಶಿಸಿ ಮಂಗಳೂರತ್ತ ಕಡೆ ಹೋಗಿರುವರು.

ಮುಲ್ಕಿ ಬಂದರದ ವ್ಯಾಪಾರಸ್ಥಿತಿಯು ಅನೇಕ ಕಾರಣಗಳಿಂದ ಕಾಳಾಗುತ್ತಾ ಬರುವುದು ಅನೇಕ ದೃಷ್ಟಾಂತಗಳಿಂದ ತೋರಿಬರುತ್ತದೆ. ಇದರಲ್ಲಿ ಒಂದು ಅಲ್ಪ ದೃಷ್ಟಾಂತವನ್ನು ಕೊಡುವೆನು. ಕಲಿಕೋಟೆ, ಕೊಚ್ಚಿ, ಕುಮುಟಾ, ಗೋವಾ, ಮುಂಬಯಿ ಬಂದರುಗಳಿಂದ ಇಲ್ಲಿಗೆ ಸಾಮಾಗ್ರಿಗಳು ಸಮುದ್ರ ಮಾರ್ಗವಾಗಿ ಬಂದು ಮುಲ್ಕಿಯ ಆಜುಬಾಜುಗಳಲ್ಲಿರುವ ಹಳ್ಳಿಗಳಿಗೆ ವ್ಯಾಪಾರವು ಇಲ್ಲಿಂದಲೇ ನಡಿಯುತ್ತಲಿತ್ತು. ಈಗಲಾದರೋ ಸಮುದ್ರ ಮಾರ್ಗವಾಗಿ ನಡಿಯುವ ವ್ಯಾಪಾರವು ಬಹಳ ಕಮ್ಮಿಯಾಗಿ ಮುಲ್ಕಿ ಬಂದರಿನ ಚಿಲ್ಲರೆ ಬಂಡಸಾಲೆ ವ್ಯಾಪಾರಸ್ಥರೂ, ಚಿಲ್ಲರೆ ಅಂಗಡಿಗಾರರೂ ಮುಲ್ಕಿ ಹತ್ತರವಿರುವ ಹಳ್ಳಿಯ ವ್ಯಾಪಾರಸ್ಥರೂ ಸಹಾ ಮಂಗಳೂರಿಂದಲೇ ಬೂಮಾರ್ಗವಾಗಿ ಸಾಮಗ್ರಿಗಳನ್ನು ತರಿಸುತ್ತಿರುವರು. ಈ ನನ್ನ ಮಾತನ್ನು ರುಜು ಪಡಿಸಲಿಕ್ಕೆ ಮಂಗಳೂರಿನಿಂದ ಮುಲ್ಕಿಗೆ ಇರುವ ಮಾರ್ಗಸ್ಥಿತಿಯನ್ನು ನೋಡಿದರೆ ತೃಪ್ತಿಯಾದೀತು. ಕೆಲವು ವರುಷಗಳ ಮೊದಲು ಈಗಿನ ಹಾಗೆ ಮುಲ್ಕಿ ಮಂಗಳೂರು ಮಾರ್ಗಕ್ಕೆ ದುರುಸ್ತಿ ಬೇಕಾಗಿ ಇದ್ದಿಲ್ಲ. ಈಗ ದಿನಂಪ್ರತಿ ನೂರಾರು ಗಾಡಿಗಳು ಮಳೆಗಾಲದಲ್ಲಿ ಸಹಾ ಸಾಮಾನು ತುಂಬಿ ಅತ್ತಿತ್ತ ಹೋಗುತ್ತಿರುವುದರಿಂದ ಮಾರ್ಗಗಳ ದುರುಸ್ತಿ ಬೇಕಾಯಿತು. ಮುಲ್ಕಿಯಲ್ಲಿ ಗಾಡಿಗಳ ಸಂಖ್ಯೆ ಸಹಾ ಹತ್ತು ವರುಷಗಳ ಮುಂಚೆ ಇದ್ದದಕ್ಕಿಂತ ಈಗ ಹತ್ತರಷ್ಟು ಹೆಚ್ಚಾಗಿದೆ. ಮುಲ್ಕಿ ವ್ಯಾಪಾರವಿಷಯವಾಗಿ ಇನ್ನು ನನ್ನ ಕೆಲವು ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಗಳಲ್ಲಿ ತಿಳಿಯಪಡಿಸುವೆನು.

ಅಗ್ರಾರ. ಇಲ್ಲಿಯ ರೋಮನ್ ಕೆಥೋಲಿಕ್ ದೇವಾಲಯದ ವಿಕಾರ್ ಆಗಿದ್ದ ರೆವೆರೆಂಡ್ ಫಾದರ್ ಸಿ. ಎಮ್ ಬಾರೆಟ್ಟೋರವರು ಸ್ವಂತ ಊರಾಗಿದ್ದ ಪೋರ್ಟುಗಾಲಿಗೆ ಹೋಗಿರುವರು. ಉಡುಪಿ ಉದ್ಯಾವರ ರೋಮನ್ ಕೆಥೋಲಿಕ್ ಚರ್ಚಿನ ಗುರುಗಳಾಗಿದ್ದ ರೆವರೆಂಡ್ ಫಾದರ್ ಆರ್ ಮಸ್ಕರೇಂಞರವರು ಅಗ್ರಾರ ಚರ್ಚಿಗೆ ನೇಮಿಸಲ್ಪಟ್ಟಿರುವರು. ಮುಲ್ಕಿಯ ಹತ್ತಿರ ಚಿಲ್ಯಾಣ್ ರೋಮನ್ ಕೆಥೋಲಿಕ್ ದೇವಾಲಯದ ಗುರುಗಳು ರೆವರೆಂಡ್ ಫಾದರ್ ವಾಸರವರು ಉದ್ಯಾವರಕ್ಕೆ ನೇಮಕ ಹೊಂದಿರುವರು.

ಕುಳೂರು. ಕುಳೂರು ಕಡವಿನಲ್ಲಿ ಕಳೆದ ಶನಿವಾರ ರಾತ್ರೆ ೮ ಘಂಟೆ ಸಮಯಕ್ಕೆ ಒಂದು ಖಿಂಡಿ ಘಟ್ಟದ ಬೆಲ್ಲ ತುಂಬಿಸಿದ ಗಾಡಿಯನ್ನು ಪಾರ್ ಮಾಡುವಾಗ ದೋಣಿಗಳಲ್ಲಿ ಗಾಡಿಯನ್ನು ನಿಲ್ಲಿಸಲಿಕ್ಕೆ ಹಾಕಿದೆ ಒಂದು ಮರದ ತುಂಡು ಜಾರಿಬಿದ್ದು ಗಾಡಿ ದೋಣಿಯಿಂದ ನೀರಿಗೆ ಬಿತ್ತು. ಹೀಗೆ ಮೊದಲೊಂದು ಸರ್ತಿ ಕಲೆಕ್ಟರ ದೊರೆಗಳ ರಿಕಾರ್ಡ ಇರುವ ಗಾಡಿ ನೀರಿನಲ್ಲಿ ಬಿದ್ದು ರಿಕಾರ್ಡುಗಳು ಒದ್ದೆಯಾಗಿತ್ತು. ಬಡವರ ಗಾಡಿಗಳನ್ನು ಬೆಂಗಾಲುಗಳಿಂದ ಕೆಳಗೆ ಇಳಿಸುವಾಗ ಬಿಟ್ಟು ಬಿಟ್ಟು ಗಾಡಿಯನ್ನು ಹಾಳಾಗುವಂತೆ ಮಾಡುವುದೂ ಇರುವುದು.

[illegible]

...ಕೇಳಿ ಬರುತ್ತದೆ. ಈ ವಿಷಯದಲ್ಲಿ ಇಲ್ಲಿಯ ವಿಕಾರರಾಗಿದ್ದ ರೆವರೆಂಡ್ ಫಾದರ್ ಯಸ್. ಡಿ. ಸಿ. ಲುಯಿಸ್‌ರು ಮತ್ತು ಕ್ಷೇತ್ರ ಮುಂದಿಯವರು ಭಾರೀ ಪ್ರಯತ್ನಪಡುತ್ತಿರುವರು. ಇವರ ಪ್ರಯತ್ನಗಳು ಜಯವನ್ನು ಹೊಂದಲೆಂದು ಪ್ರಾರ್ಥಿಸುತ್ತೇವೆ.

ಉಡುಪಿ ಇಲ್ಲಿಯ ಕಾಯಂ ತಹಸೀಲದಾರರಾಗಿದ್ದ ಮ|ರಾ|ರಾ| ಅತ್ತಾವರ ದೇವಪ್ಪ ಪೂಂಜರವರು ಇದೇ ಕಳದ ಫೆಬ್ರುವರಿ ತಿಂಗಳ ಅಂತ್ಯಕ್ಕೆ ತಮ್ಮ ರಜೆಯಿಂದ ಕೆಲಸಕ್ಕೆ ಹಾಜರಾಗಬೇಕಿತ್ತು ಆದರೆ ಪುನಹ ಸ್ವಲ್ಪ ಕಾಲದ ರಜೆ ಇವರಿಗೆ ಸೆಂಕ್ಷನ್ ಆಗಿರುವುದರಿಂದ ಮಿಸ್ಟರ್ ಎಸ್ ಪಿ ಫೆರ್ನಾಂಡೀಸರವರು ಆ ವರೇಗೆ ಇಲ್ಲಿಯ ತಹಸೀಲದಾರರ ಕೆಲಸ ನೋಡುವರು

[illegible] ಸ್ವಾಮಿ ಬಾಬಾ ಪ್ರೇಮಾನಂದ ಭಾರತಿಯಂತಹ [illegible] ಭರತಭೂಮಿಯಲ್ಲಿ ಜನ್ಮವೆತ್ತುವರು. ಸ್ವಾಮಿ ಪ್ರೇಮಾನಂದರವರು [illegible] ಇಜಾರನ್ನು ಹಾಕಿಕೊಳ್ಳುವ ಯುವಕರಾಗಿದ್ದರಲ್ಲದೆ, ಇಂಗ್ಲಿಷ್ ಭಾಷಾ ಪಾಂಡಿತ್ಯವನ್ನು ಪಡೆದವರಾದ್ದರಿಂದ ಇವರ ಮನೋಭಾವನೆಯಲ್ಲಿಯೂ [illegible]ಯಲ್ಲಿಯೂ ಇಂಗ್ಲಿಷ್ ಭಾಷೆಯೇ ಪ್ರಬಲವಾಗಿತ್ತು ಹೀಗೆ ಬಾಹ್ಯರೀತಿಗಳಲ್ಲಿ ಅನಾರ್ಯರೆಂದು ಕಂಡು ಬಂದರೂ ಇವರು ಬಹುಕಾಲ ಹೀಗೆ ಇರಲಿಲ್ಲ [illegible]ದಲೇ ಇವರಲ್ಲಿ ರೂಢಮೂಲವಾಗಿದ್ದ ವೈಷ್ಣವ ಧರ್ಮವಾತ್ಸಲ್ಯವು ಕಾಲಕ್ರಮದಲ್ಲಿ ಫಲಿಸಿ ಲೌಕಿಕ ವಿಚಾರಗಳೆಲ್ಲವೂ ಒಂದೊಂದಾಗಿಯೇ ಅದೃಶವಾಗುತ್ತ ಬಂದವು. ಭಕ್ತಿಯೋಗವನ್ನು ಅಭ್ಯಾಸಿಸಿ ಶ್ರೀ ಕೃಷ್ಣ ಮೂರ್ತಿಯನ್ನು ಸದಾ ಧ್ಯಾನಿಸಿ ಆತನಿಂದ ಹರಸಲ್ಪಟ್ಟು ಆತನ ಮಹಿಮೆಯನ್ನು ಪಾಶ್ಚಾತ್ಯದೇಶವಾದ ಅಮೇರಿಕಾ ದೇಶದಲ್ಲಿ ಸಾರಿ ಭಗವತ್ ಪ್ರೇಮಾನಂದವನ್ನು ಫಳಿಸಿಕೊಂಡ ಸುಪ್ರಸಿದ್ಧ ಭಾರತೀಯರಾದ ಸ್ವಾಮಿ ಪ್ರೇಮಾನಂದ ಭಾರತಿಯವರನ್ನು ಸರ್ವರೂ ಅರಿತುಕೊಳ್ಳಬೇಕಾಗಿರುವುದು

ಸ್ವಾಮಿ ಪ್ರೇಮಾನಂದರಂತಹ ಮಹನೀಯರು ಭರತಭೂಮಿಯಲ್ಲಿ ಜನಿಸಿದ ಭಾರತೀಯರಾದರೂ ಇವರನ್ನು ಇತರ ಭಾರತೀಯರು ಅಮೇರಿಕಾ ದೇಶದ ವೃತ್ತಾಂತದಿಂದ ಅರಿತುಕೊಳ್ಳ ಬೇಕಾಗಿ ಬಂದಿರುವುದು ಹೆಚ್ಚು ಕಡಿಮೆ ಒಂದು ಶತಮಾನಾರಭ್ಯ ಹಿಂದುಸ್ಥಾನದಲ್ಲಿ ಪ್ರೌಢವಿದ್ಯಾಭ್ಯಾಸವು ಕೊಡಲ್ಪಡುತ್ತಿರುವುದಾದರೂ ತನ್ಮೂಲಕ ಉಚಿತವಾದ ಸುವಿಚಾರಗಳೊಂದಿಗೆ ವಿವೇಕವು, ಶಿಕ್ಷಣ ಪದ್ಧತಿಯಲ್ಲಿ ಮತಬೋಧೆ ಇಲ್ಲದಿರುವುದರಿಂದ, ಒನಿಸದೆ ಧರ್ಮ ತಿರಸ್ಕಾರ ಭಾವನೆಯು ಆಂಗ್ಲ ವಿದ್ಯಾಪರಿಚಿತಿಯನ್ನು ಪಡೆದ ಬಹುಪಕ್ಷದವರಲ್ಲಿ ಉಂಟಾಗಿದೆನ್ನಬಹುದು ಇದರಿಂದ ಸನಾತನಧರ್ಮ ವಿಚಾರಗಳಲ್ಲಿ ಅಶ್ರದ್ಧೆ ಇವನ್ನು ಪ್ರತಿಪಾದಿಸುವ ಗುರುವರ್ಯರಲ್ಲಿ ಅಭಾವ, ಇವೆರಡೂ ನಮ್ಮಲ್ಲಿ ಸಂಭವಿಸಿರುವವು ಪಾಶ್ಚಾತ್ಯ ಕಲ್ಪನಾರೀತಿಗಳಲ್ಲಿ ಹೇಳಲ್ಪಡುವ ಸಿದ್ಧಾಂತಗಳು ಮಾತ್ರ ನಮ್ಮಿಂದ ಮನ್ನಿಸಲ್ಪಡುವುವಾದ್ದರಿಂದ ಹಿಂದೂ ಧರ್ಮ ರಹಸ್ಯವನ್ನು ನಾವು ಅನ್ನಿಬಿಸೆಂಟ್ ಮೊದಲಾದ ಪಾಶ್ಚಾತ್ಯರಿಂದಲೂ ಇವರು ಈ ವಿಷಯವಾಗಿ ರಚಿಸಿದ ಗ್ರಂಥಗಳಿಂದಲೂ ತಿಳಕೊಳ್ಳಬೇಕಾಯಿತು. ಪಾಶ್ಚಾತ್ಯ ದ್ವಾರಾ ಬಂದ ಎಲ್ಲವೂ ನಮಗ ಗ್ರಾಹ್ಯವಾಗುವುದರಿಂದ ಅಮೇರಿಕಾಖಂಡದಿಂದ ಪ್ರತಿಧ್ವನಿಸುವ ಹಿಂದೂಧರ್ಮ ಪಸರಣೆಯು ನಮಗೆ ರುಚಿಸದಿರದು

ಅಮೇರಿಕದಲ್ಲಿ ಐದು ವರುಷಗಳಿದ್ದು ತಮ್ಮ ಮತ ಪಸರಣೆಯಿಂದ 5000 ಶಿಷ್ಯರುಗಳನ್ನು ಅಮೇರಿಕದಲ್ಲಿ ಮಾಡಿಕೊಂಡು ವಿರಾಮಕ್ಕಾಗಿ ಹಿಂದುಸ್ಥಾನಕ್ಕೆ ಬಂದಿರುವ ಸ್ವಾಮಿ ಬಾಬಾ ಪ್ರೇಮಾನಂದ ಭಾರತಿಯವರು ತಿರುಗಿ ಅಮೇರಿಕಾಖಂಡಕ್ಕೆ ಹೋಗಲಿಕ್ಕೆ ಮದ್ರಾಸು ಪಟ್ಟಣಕ್ಕೆ ಇತ್ತಲಾಗೆ ಬಂದಿರುವರು ಅಮೇರಿಕದಲ್ಲಿ ಇವರ ಶಿಷ್ಯವರ್ಗದವರ ಆರಾಧನೆಗಳಿಗಾಗಿ ರಾಧಾಕೃಷ್ಣ ಮತ್ತು ಶ್ರೀ ಚೈತನ್ಯ ಮೂರ್ತಿಗಳನ್ನು ಪ್ರತಿಷ್ಠಿಸಿ ಒಂದು ದೇವಸ್ಥಾನವನ್ನು ಸ್ಥಾಪಿಸಿರುವರು ದೇವಸ್ಥಾನಕ್ಕೆ ಪ್ರತಿನಿತ್ಯವೂ ಆರಾಧನೆ ಬಗ್ಗೆ ಸಾವಿರಾರು ಜನ ಅಮೇರಿಕನರು ಬರುತ್ತಿರುವರು. ಇಲ್ಲಿ ಪುರಾಣ ಇತಿಹಾಸಗಳು ಇವರಿಗ ಓದಿ ಹೇಳೋಣಾಗುವವಲ್ಲದೆ ಶಾಸ್ತ್ರವಿಧಿ ಪ್ರಕಾರ ಆರತಿ ಪೂಜೆ ಸಂತರ್ಪಣೆಗಳು ಮಾಡಲ್ಪಡುವವು ಈ ದೇವಸ್ಥಾನದಿಂದಲೇ ಸ್ವಾಮಿಯವರು ತಮ್ಮ ಪ್ರಸಂಗಗಳನ್ನು ಕೇಳಲಿಕ್ಕನುಕೂಲವಿಲ್ಲದ ಅಮೇರಿಕನರ ಉಪಯೋಗಾರ್ಥವಾಗಿ ಒಂದು "ಲ್ಯಾಟ್ ಒವ್ ಇಂಡಿಯಾ" ಯಾ ಭರತಖಂಡದ ಪ್ರಭೆ ಎಂಬ ಹೆಸರಿನ ಮಾಸಿಕ ಪತ್ರವನ್ನು ಪ್ರಕಟಿಸುತ್ತಿರುವರು

ಅಮೇರಿಕದಿಂದ ಬಂದನಂತರ ಪ್ರೇಮಾನಂದರವರು ಕಲ್ಕತ್ತೆಯಲ್ಲಿ 'ಇಂಡೋ ಅಮೇರಿಕನ್ ಜೆನಾನಾ ಮಿಶನ್' ಎಂಬ ಭಾರತೀಯ ಸ್ತ್ರೀಯರ ಅಭಿವೃದ್ಧಿಗಾಗಿ ಒಂದು ಅಮೇರಿಕ ಸ್ತ್ರೀಯರ ಸಂಘವನ್ನು ಏರ್ಪಡಿಸಿರುವರು ಹಿಂದೂ ಧರ್ಮಶಾಸ್ತ್ರಗಳನ್ನು ಅಧ್ಯಯನ ಮಾಡಿಕೊಂಡ ವಿದ್ಯಾವಂತರಾದ ಅಮೇರಿಕದ ಸ್ತ್ರೀಯರುಗಳು ಈ ಸಂಘಕ್ಕೆ ಸೇರಿ ಮನೆಯಿಂದ ಹೊರಗೆ ಬರಲು ಅಂಜುವ ಮದಿವೆಯಾದ್ದ ಭಾರತೀಯ ಸ್ತ್ರೀಯರಿಗೆ ಸಹಾ ಅವರವರಿಗೆ ಉಪಯುಕ್ತವಾಗಿರುವ ಕಲಾಕೌಶಲ್ಯಗಳನ್ನು ಕಲಿಸಿಕೊಟ್ಟು ವಿದ್ಯಾಭ್ಯಾಸವನ್ನು ಮಾಡಿಸುವರಲ್ಲದೆ ಪ್ರತಿನಿತ್ಯದ ಪಾಠಗಳ ನಂತರ ಹರಿಭಜನೆ ಕೀರ್ತನೆಗಳನ್ನು ನಮ್ಮ ಸ್ತ್ರೀಯರುಗಳಿಂದ ಹಾಡಿಸುತ್ತಿರುವರು. ಈ ಸಂಘಕ್ಕೆ ಕೂಡಿದ ಕೆಲವು ಅಮೇರಿಕದ ಸ್ತ್ರೀಯರು ಸ್ವಾಮಿ ಪ್ರೇಮಾನಂದರೊಡನೆ ಕಲ್ಕತ್ತೆಗೆ ಬಂದು ಸಂಘದ ಕಾರ್ಯವನ್ನು ಪ್ರಾರಂಭಿಸಿರುವರು ಹಿಂದುಸ್ಥಾನದ ಮುಖ್ಯ ಕಡೆಗಳಲ್ಲೆಲ್ಲಾ ಈ ಸಂಘದ ಶಾಖೆಗಳನ್ನು ಸ್ಥಾಪಿಸುವರೆ ಪ್ರೇಮಾನಂದರವರು ಪ್ರಯತ್ನಿಸುತ್ತಿರುವರು ಈ ಬಗ್ಗೆ ಇಷ್ಟರಲ್ಲಿಯೇ ಪ್ರೇಮಾನಂದರವರ ಶಿಷ್ಯರಲ್ಲಿ [illegible] ನೂರು ಜನ ಸ್ತ್ರೀಯರು ಈ ಸಂಘಕ್ಕೆ ಕೂಡುವರೆ ಸಮ್ಮತಿಸಿ [illegible] ದೇವಾಲಯದಲ್ಲಿ ಹಿಂದುಸ್ಥಾನದ ದೇಶಭಾಷೆಗಳನ್ನು ಕಲಿಯುತ್ತಿರುವರು [illegible]ಕ್ಕೆ ವಿಶೇಷ ದ್ರವ್ಯಸಹಾಯವು ಬೇಕಾಗಿರುವುದು. [illegible] ಸಂಗ್ರಹಿಸಿದ 40,000 [illegible]

[illegible]

ಒಂದು ಸಂಘವನ್ನು [illegible] ಪ್ರೇಮಾನಂದ ಭಾರತಿಯವರು ಸ್ಥಾಪಿಸಿದರು. [illegible] ವ್ಯವಸಾಯ ಶಾಸ್ತ್ರಜ್ಞತೆಯಲ್ಲಿಯೂ, ಕೈಗಾರಿಕೆಗಳ ಮಾಹಿತಿಯಲ್ಲಿಯೂ ಪಾಂಡಿತ್ಯವನ್ನು ಹೊಂದಿದ ಅಮೇರಿಕದ ಪ್ರೇಮಾನಂದರವರ ಶಿಷ್ಯರಲ್ಲಿ ಹಲವರು ಇಂಥಾ ಸಂಘದ ಉದ್ದೇಶಗಳನ್ನು ನೆರವೇರಿಸಿಕೊಡುವರೆ ಒಪ್ಪಿಕೊಂಡಿರುವರು. ಹಿಂದುಸ್ಥಾನದ ಯುವಕರಿಗೆ ಔದ್ಯೋಗಿಕ ಶಿಕ್ಷಣ ಮೊದಲಾದವುಗಳನ್ನು ಕೊಟ್ಟು, ಅವರನ್ನು ಧರ್ಮ ಶಿಕ್ಷಣದಿಂದ ಸಹಾ ಯಥೋಚಿತ ಯೋಗ್ಯ ನಿವಾಸಿಗಳನ್ನಾಗಿ ಮಾಡಿ ದೇಶಾಭಿವೃದ್ಧಿಯು ನೆಲೆಗೊಳ್ಳುವಂತೆ ಪ್ರೇಮಾನಂದರವರು ಪ್ರಯತ್ನಪಡುತ್ತಿರುವರು

——ಸ್ವಾಮಿಗಳವರ ಹಿಂದೂಧರ್ಮ ಪಸರಣೆ ಪ್ರಯತ್ನಗಳನ್ನೂ ದೇಶಾಭಿವೃದ್ಧಿಯ ಶ್ರಮವನ್ನೂ ಶ್ಲಾಘಿಸಿ ಮದ್ರಾಸು ಹಿಂದೂ ನಿವಾಸಿಕರೆಲ್ಲರ ಕೃತಜ್ಞತೆಯನ್ನು ಸೂಚಿಸುವುದಕ್ಕೆ, ಮದ್ರಾಸು ಹಿಂದೂ ಎಸೋಸಿಯೇಶನ್ ಸಂಘದವರು ಮದ್ರಾಸಿನಲ್ಲಿ ಇತ್ತಲಾಗೆ ಸಭೆಕೂಡಿದರು ಮದ್ರಾಸಿನ ಹಿಂದೂ ನಿವಾಸಿಕ ಪ್ರಮುಖರೆಲ್ಲರೂ ಸಭೆಗೆ ಬಂದಿದ್ದರು. ಬಹುಮಾನಪಟ್ಟ ಎಡ್ವೋಕೇಟ್ ಜನರಲ್ ಪಿ ಎಸ್ ಶಿವಸ್ವಾಮಿ ಅಯ್ಯರರವರು ಸಭಾಧ್ಯಕ್ಷರಾಗಿದ್ದರು ಹ್ಯಾಕೋರ್ಟು ಜಡ್ಜ್ ಬಹುಮಾನಪಟ್ಟ ಕೃಷ್ಣಸ್ವಾಮಿ ಅಯ್ಯರ್, ರಾ| ಹ್ಯಾಕೋರ್ಟು ವಕೀಲ ಪಿ ಆರ್ ಸುಂದರಯ್ಯರ್, ಕೊಲ್ಲಿಂಗೋಡು ರಾಜರವರೇ ಮೊದಲಾದವರ ಸಮಕ್ಷದಲ್ಲಿ ಹಾಜರಿದ್ದರು ಸಭಾ ಕಡೆಯಿಂದ ಒಂದು ಬಿನ್ನಹ ಪತ್ರವನ್ನು ನೂತನವಾಗಿ ಚಿತ್ರಗಳಿಂದ ಕೆತ್ತಲ್ಪಟ್ಟ ಗಂಧದ ಪೆಟ್ಟಿಗೆಯಲ್ಲಿಟ್ಟು ಸಭಾಧ್ಯಕ್ಷರು ಸ್ವಾಮಿಯವರಿಗೆ ಅರ್ಪಿಸುವವರಾದರು ಸಭೆಯಲ್ಲಿ ನಡದ ವೃತ್ತಾಂತದಿಂದ ಅಮೇರಿಕದಲ್ಲಿ ಸ್ವಾಮಿಯವರಿಂದ ಸ್ಥಾಪಿತವಾದ ಶ್ರೀ ರಾಧಾಕೃಷ್ಣ ದೇವಾಲಯವು ಪ್ರಕೃತ ಪೂರ್ಣ ಮರದ ಮೋಪಿನಿಂದಲೇ ಕಟ್ಟಿರುವುದಾಗಿ ತಿಳಿದುಬರುವುದು ಹಿಂದುಸ್ಥಾನದವರ ಖರ್ಚಿನಿಂದ ಈ ದೇವಾಲಯವನ್ನು ಕಲ್ಲಿನಿಂದ ಕಟ್ಟಿಸಬೇಕಾಗಿ ಸ್ವಾಮಿಯವರ ಕಾಂಕ್ಷೆಯಿರುವುದೆಂತ ವ್ಯಕ್ತವಾಗುತ್ತದೆ ಮದ್ರಾಸು ಹಿಂದೂ ಸಭೆಯವರು ಈ ಬಗ್ಗೆ ಚಂದಾದ್ರವ್ಯವನ್ನು ಶೇಖರಿಸುವರೆ ಪ್ರಾರಂಭಿಸಿರುವರು. ಬಹುಮಾನಪಟ್ಟ ಕೃಷ್ಣಸ್ವಾಮಿ ಅಯ್ಯರವರು ರೂ 500ನ್ನು ದ್ರವ್ಯ ಸಹಾಯವಾಗಿ ಕೊಟ್ಟಿರುವರು ಸ್ವಾಮಿಯವರು ಸದ್ಯದಲ್ಲಿಯೇ ಅಮೇರಿಕಕ್ಕೆ ತೆರಳಿ ಹೋಗುವರು

(ಮುಂದೆ ಸಾಗುವದು

ಆಲಸ್ಯ ಮತ್ತು ಮುಪ್ಪು

ಪಾಶ್ಚಾತ್ಯ ಡಾಕ್ಟಾರರೊಬ್ಬರು ಸ್ತ್ರೀಪುರುಷರಿಗೆ ಆಲಸ್ಯದಿಂದಲೇ ಮುಪ್ಪು ಪ್ರಾಪ್ತಿಸುವುದೆಂತ ವಾದಿಸುತ್ತಿರುವರು ಸಾಧಾರಣ ೪೫ ಯಾ ಐವತ್ತು ವರುಷ ಪ್ರಾಯವಾದಾಗ ಯೌವನದಲ್ಲಿ ಎಂಥೆಂಥಾ ಅಘಟಿತ ಕಾರ್ಯಗಳನ್ನು ಸಾಧಿಸಿದೆವೆಂತ ನಮ್ಮಪ್ಪಕ್ಕೆ ನಾವು ಹೆಚ್ಚಳ ಪಡುವುದುಂಟು ಇನ್ನು ಸಾಕು, ಯೌವನದಲ್ಲಿ ಸಾಧಿಸಲಿಕ್ಕೆ ಅನುಕೂಲವಿಲ್ಲದೆ ಬಾಕಿರುವ ಕಾರ್ಯಗಳನ್ನು ನಮ್ಮ ನಂತರದ ಯೌವನಸ್ಥರು ಸಾಧಿಸಲಿ, ಯೌವನದಲ್ಲಿ ಪಟ್ಟ ಶ್ರಮಕ್ಕೋಸ್ಕರ ಇನ್ನು ಒಂದಿಷ್ಟು ವಿರಾಮಿಸಿಕೊಳ್ಳುತ್ತಿರಬೇಕು, ಎಂತ ಹೇಳಿಕೊಳ್ಳುತ್ತಿರುವೆವು ಕಾರ್ಯಾಸಕ್ತಿ ಬದಲಾಗಿ ನಮ್ಮಲ್ಲಿ ಈ ರೀತಿ ಕ್ರಮೇಣ ಸೋಮಾರಿತನವು ತಲೆದೋರುವುದು ಇದ್ದಲ್ಲಿಂದ ಅತ್ತಿತ್ತ ಫಕ್ಕನೆ ಎದ್ದು ಹೋಗಲು ಆಗುವದಿಲ್ಲ, ಶರೀರದಲ್ಲಿ ವಿಶೇಷವಾಗಿ ಗೊಜ್ಜು ಬೆಳದು ಸ್ಥೂಲಕಾಯರಾಗಿರುವೆವು. ಚಲನೆಯಿಲ್ಲದೆ ಎಲುಬುಗಳೂ ಸಹಾ ಕ್ಷಣಭಂಗುರವಾಗಿ ಇಂದ್ರಿಯವ್ಯಾಪಾರವೆಲ್ಲವೂ ಕುಂದಿಹೋಗಿ ಇನ್ನು ಜೀವಿಸಿ ಫಲವಿಲ್ಲವೆಂತ ಹಂಬಲಿಸುತ್ತ ಅಂಜಿಕೆಯಿಂದ ಮರಣನಿರೀಕ್ಷಣೆಯಲ್ಲಿರುವೆವು. ಇದೇ ವೃದ್ಧಾಪ್ಯವೆಂತ ಸರ್ವರೂ ತಿಳಿಯುವರು ಸ್ತ್ರೀಪುರುಷರು ಇಂಥಾ ಸ್ಥಿತಿಯನ್ನು ಬರಮಾಡಿಕೊಳ್ಳುವುದು ಪೂರ್ಣ ಮೈಗಳ್ಳತನದಿಂದವೆಂತ ಈ ಡಾಕ್ಟರರ ಅಭಿಪ್ರಾಯ ತಮ್ಮ ಅಭಿಪ್ರಾಯವನ್ನು ರುಜುಪಡಿಸಲಿಕ್ಕೆ ಅವರು ಒಂದೆರಡು ದೃಷ್ಟಾಂತಗಳನ್ನು ಕೊಟ್ಟಿರುವರು

ಪ್ರಾಚೀನ ಕಾಲದಲ್ಲಿ ಹಲವು ದಿಕ್ಕು ದೇಶಗಳನ್ನು ಜಯಿಸಿ ಸವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ ರೋಮಿಯರ ರಾಜ್ಯವು ಹಾಳಾಗಲು ಕಾರಣವೇನು? ವೃದ್ಧಾಪ್ಯವೇ? ರೋಮಿಯರು ವಿಷಯಲಂಪಟರಾಗಿ ಎಲ್ಲಾ ದುರ್ವ್ಯಸನಗಳಲ್ಲಿ ಆಸಕ್ತರಾಗಿ ಶಕ್ತಿಗುಂದಿ ಸೋಮಾರಿಗಳಾಗಿ ಬಿದ್ದುಕೊಂಡಿದ್ದರಿಂದ ರಾಜ್ಯವು ಸಿಕ್ಕಿದವರ ಕೈ ವಶವಾಯಿತು — ಹೀಗೆ ರೋಮ ರಾಜ್ಯದ ನಾಶ ಕಾರಣವು ವೃದ್ಧಾಪ್ಯವಲ್ಲ, ಶುದ್ಧ ಸೋಮಾರಿತನವೆಂತ ವ್ಯಕ್ತವಾಗುವದು. ರೋಮಿಯರಂತೆ ವರ್ತಿಸುವುದರಿಂದ ಸೋಮಾರಿತನದಿಂದ ಮುಪ್ಪುಂಟಾಗುವುದಲ್ಲದೆ ಮುಪ್ಪಿನಿಂದಲೇ ಸೋಮಾರಿತನ - ಉಂಟಾಗ [illegible]

[illegible]

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ [illegible], ಭಂಗಾರ, ರತ್ನಗಳ ಪರೀಕ್ಷೆ, ಕಟವಾಯು, ಜ್ವರ, ವಾತಪಿತ್ತವಿಚಾರ, [illegible] ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಸರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಕ ತ್ಯಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

ಏಜಂಟರು —(೨) ದಿ ಊಲನ್ ಮಾರ್ಟ್,
ನಂ| ೧, ಮಂಗಳೂರು (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ನಿರಂತರ ಭಾವನೆಯಿಂದ ಪ್ರತಿಯೊಬ್ಬನೂ ಕಾರ್ಯಸಾಧನೆಯನ್ನು ಮಾಡುತ್ತಿರುವನು ವೃದ್ಧಾಪ್ಯದಲ್ಲಿ ಗೈಯ್ಯದೆ ತಿನ್ನುವ ಆಸೆಯು ಹೀಗ ಕ್ರಮೇಣ ಬಲವತ್ತಾಗಿ ಬಂದು ಆಲಸ್ಯವು ಪ್ರಾಯವೇರಿದಂತೆ ಹೆಚ್ಚಾಗಿ ಪ್ರಾಪ್ತಿಸುವುದು ಇಂಥಾ ಆಶೆಗಳನ್ನು ತ್ಯಜಿಸಿ ಸೋಮಾರಿತನದ ಯಾವ ಭಾವನೆಗಳಿಗಾದರೂ ಒಳಗಾಗದಿದ್ದ ಒಬ್ಬ ತನ್ನ ಪರಿಚಿತಿಯವನಾದ ಯಾತ್ರಿಕನ ವೃತ್ತಾಂತವನ್ನು ಡಾಕ್ಟಾರರು ತನ್ನ ಸಿದ್ಧಾಂತದ ಆಧಾರವಾಗಿ ಕೊಟ್ಟಿರುವರು ಈ ಯಾತ್ರಿಕನು ಕಾಲುನಡೆಯಿಂದ ನಾಲ್ಕು ಸಲ ಭೂಯಾತ್ರೆಯನ್ನು ಮಾಡಿದ್ದನು ಐದನೇ ಸಲ ಭೂಯಾತ್ರೆಗಾಗಿ ಹೊರಡುವಾಗ್ಯೆ ಆತನಿಗ ತೊಂಬತ್ತು ವರುಷ ಪ್ರಾಯವಾಗಿತ್ತು ವಿಶೇಷ ಯಾತನೆ ಏನನ್ನಾದರೂ ಅನುಭವಿಸದೆ ಆತನು ತನ್ನ ಐದನೇ ಯಾತ್ರೆಯನ್ನು ಕಾಲುನಡೆಯಿಂದಲೇ ಮಾಡಿ ಬಂದಿದ್ದನು

೬೦, ೭೦, ೮೦, ೯೦ ವರುಷ ಪ್ರಾಯವಾದರೆ ಮನುಷ್ಯರ ಶಾರೀರಿಕ ಮತ್ತು ಮಾನಸಿಕ ಶಕ್ತಿಯು ಕುಂದುವುದೆಂಬದನ್ನು ಈ ಡಾಕ್ಟಾರರು ನಿರಾಕರಿಸಿರುವರು ಸ್ತ್ರೀಪುರುಷರು ಕಲ್ಪನೆಗಳಿಂದಲೇ ವೃದ್ಧಾಪ್ಯದಲ್ಲಿ ಆಲಸ್ಯವನ್ನು ಬರಮಾಡಿಕೊಳ್ಳುವರು ನಮ್ಮ ಜೀವಮಾನದ ಕಡೆ ದಿನವರಿವಿಗೂ ಪ್ರತಿ ಪುರುಷನು ಯೌವನದ ಆಸಕ್ತಿಯಿಂದಲೇ ಕೆಲಸ ಗೇಯುತ್ತಿರಬೇಕೆಂದು ಹೇಳಿ ತಮ್ಮ ವಾದಕ್ಕೆ ಆಧಾರವಾಗಿ ಇನ್ನು ಒಂದೆರಡು ದೃಷ್ಟಾಂತಗಳನ್ನು ಕೊಟ್ಟಿರುವರು

ಒಂದೆಡೆಯಲ್ಲಿ ೭೦ ವರುಷ ಪ್ರಾಯ ಕಳೆದ ವಧುವರರಿಗೆ ಮದುವೆಯಾದ ವೃತ್ತಾಂತವನ್ನು ತಾನು ಬಲ್ಲೆನೆಂತ ಡಾಕ್ಟಾರರು ಹೇಳಿರುತ್ತಾರೆ ೮೫ನೇ ವರುಷದಲ್ಲಿ ಗ್ರೀಕ್ ಭಾಷೆಯನ್ನು ಕಲಿಯಲು ಪ್ರಾರಂಭಿಸಿ ೯೦ ವರುಷದಲ್ಲಿ ಗ್ರೀಕ್ ಭಾಷೆಯ ಪಾಂಡಿತ್ಯವನ್ನು ಪಡೆದ ಅಮೇರಿಕದ ನ್ಯೂಯೋರ್ಕ್ ಪಟ್ಟಣದಲ್ಲಿರುವವನೊಬ್ಬನ ಪರಿಚಿತಿಯು ಡಾಕ್ಟಾರರಿಗೆ ಇರುತ್ತದೆ

ಇನ್ನೊಬ್ಬ ಕ್ರೈಸ್ತ ಪಾದರಿಯ ಉದಾಹರಣೆಯನ್ನು ಕೊಟ್ಟು ಡಾಕ್ಟಾರರವರು ತಮ್ಮ ವಾದವನ್ನು ಮುಗಿಸಿರುವರು ಒಂದಾನೊಂದು ಹಳ್ಳಿಯಲ್ಲಿ ಈ ಪಾದರಿಯ ಮತ ಪ್ರಸಂಗಗಳನ್ನು ಕೇಳುತ್ತಿರುವವರಲ್ಲಿ ವೃದ್ಧರ ಸಂಖ್ಯೆಯೇ ಅಧಿಕವಾಗಿತ್ತು. ಪ್ರಪಂಚದಲ್ಲಿ ಇನ್ನು ಉಳಿಯುವುದಸಾಧ್ಯವೆಂದರಿತು ಲೋಕವ್ಯವಹಾರಗಳಲ್ಲಿ ಮನಸ್ಸಿಲ್ಲದವರಾಗಿ ತಮ್ಮ ನಂತರದಲ್ಲಿ ಆಗಬೇಕಾದ ವ್ಯವಸ್ಥೆಗಳೆಲ್ಲವನ್ನು ವಿಲ್‌ನಾಮೆಗಳಲ್ಲಿ ಬರದಿಟ್ಟು ಕಾಲನ ದಾರಿಯನ್ನೇ ಇವರು ನೋಡುಕೊಂಡಿದ್ದರು ಪಾದರಿಯು ಇವರ ಈ ಸ್ಥಿತಿಯನ್ನು ನೋಡಿಕೊಂಡು ಮನುಷ್ಯರು ಲೋಕದಲ್ಲಿರುವ ತನಕ ಧರ್ಮಶಾಸ್ತ್ರಗಳ ಪ್ರಕಾರ ಉದ್ಯಮಿಗಳಾಗಿರಬೇಕಾದ್ದರಿಂದಲೂ ಆಲಸ್ಯರಾಗಿರುವುದು ಮಹಾ ಪಾಪವೆಂತಲೂ ಪದೇ ಪದೇ ಉಪದೇಶಿಸಿ ಅವರು ಕೆಲಸಕ್ಕುಪಕ್ರಮಿಸುವಂತೆ ಮಾಡಿದನು. ಇವರ ಬಗ್ಗೆ ಒಂದು ಕಲಾಶಾಲೆಯನ್ನು ಸ್ಥಾಪಿಸಿ ಚಿತ್ರಗಳನ್ನು ಬಿಡಿಸುವ ವಿದ್ಯೆಯನ್ನು ಇವರು ಅಭ್ಯಾಸಿಸುವಂತೆ ಏರ್ಪಡಿಸಿದನು ಹತ್ತಿಪ್ಪತ್ತು ವರುಷಗಳಿಂದ ಮರಣ ನಿರೀಕ್ಷಣೆಯಲ್ಲಿದ್ದ ಮುದುಕಿಯರು ಬಹಳ [illegible] ವಸ್ತ್ರಗಳನ್ನು ಬಿಡಿಸಲು ಕಲಿತರು. ಇನ್ನೊಮ್ಮೆ ಕಾರ್ಯಸಾಧನೆಯಲ್ಲಿ ನಿರತ[illegible]ಲನ ಸಂದರ್ಶನೆಯು ಸಹಾ ಇನ್ನು ಐವತ್ತು ವರುಷಕ್ಕೆ ಮುಂದರಿಸಿದಲಾಯಿತು.

ಇದರಿಂದ ಮುಪ್ಪಿನಿಂದ ಆಲಸ್ಯವುಂಟಾಗುವದೋ, ಅಥವಾ ಆಲಸ್ಯದಿಂದ ಮುಪ್ಪುಂಟಾಗುವದೋ [illegible]

[illegible]

[illegible] ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿ, ಶಾಸ್ತ್ರಜ್ಞರಾದ ಮಿ|| ಸಿ. ಎ. ಬಾರಬರ ಎಂಬವರಿಂದ ಆಂಗ್ಲ ಭಾಷೆಯಲ್ಲಿ ಪ್ರಕಟಿಸಲ್ಪಟ್ಟು ಜನಸಾಮಾನ್ಯರ ಉಪಯೋಗಾರ್ಥವಾಗಿ ದೇಶಭಾಷಾ ಪತ್ರಗಳಲ್ಲಿ ಪ್ರಚುರಗೊಳಿಸಬೇಕೆಂದು ಕಳುಹಿಸಿಕೊಟ್ಟ "ಕಾಳುಮೆಣಸಿನ ಕುರಿತು" ಎಂಬ ವಿಷಯದ ಸಾರಾಂಶವನ್ನು ಈ ಕೆಳಗೆ ಮುದ್ರಿಸಿರುತ್ತದೆ.

ಕಾಳುಮೆಣಸಿನ ಕುರಿತು.

ಒಳ್ಳೆಮೆಣಸಿನ ಬಳ್ಳಿಯು ಮಲೆಬಾರ ಜಿಲ್ಲೆಗೆ ವಿಶೇಷವಾದದ್ದು. ಅದು ಮಲೆಬಾರಿನ ಉತ್ತರ ದಿಕ್ಕಿನ ಘಟ್ಟಗಳ ಬುಡಗಳಲ್ಲಿರುವ ದೊಡ್ಡ ದೊಡ್ಡ ಕಾಡುಗಳಲ್ಲಿ ಈಗಲೂ ಸಹಾ ಬೆಳೆಯುತ್ತಿರುವ ವನ್ಯ ಬಳ್ಳಿಗಳಲ್ಲಿ ಒಂದಾಗಿರುವುದು ಮತ್ತು ವೈನಾಡು, ಕೊಡಗು ಪ್ರಾಂತ್ಯಗಳಲ್ಲಿ ಇದರ ಬೆಳವಣಿಗೆಯು ಪ್ರಸರಿಸಿಕೊಂಡಿರುವುದಲ್ಲದೆ ದಕ್ಷಿಣಕ್ಕೆ ಸಮುದ್ರ ಕಿನಾರೆಗಳ ಪರಿಯಂತರ ಇರುವ ತೋಟಗಳಲ್ಲಿ ಹಲವು ಮರಗಳನ್ನು ಇದರ ಬಳ್ಳಿಯು ಆವರಿಸಿಕೊಂಡಿರುವುದ ಕಾಣಿಸುತ್ತದೆ. ಒಳ್ಳೆಮೆಣಸಿನ ಜನ್ಮಸ್ಥಾನವು ಮಲೆಬಾರಜಿಲ್ಲೆಯಾದರೂ ಇದರ ಸಾಗುವಳಿಯು ಬಹಳ ಹಿಂದಿನ ತನಕ ಇರುವ ದ್ವೀಪಗಳಲ್ಲಿಯೂ ಹರಡಿಕೊಂಡು, [illegible] ಅಲ್ಲಿ ಅದನ್ನು ಬೆಳಸುತ್ತಿರುವರು. ಹೀಗಾಗಿ ತಲಚೇರಿಯಿಂದ ರಫ್ತಾಗುವ ನೂರರಷ್ಟು ಪಾಲು ಒಳ್ಳೆಮೆಣಸು ಈಗ ಸಿಂಗಾಪುರದಿಂದ ರವಾನಿಸುವರು. "ಕಾಳುಮೆಣಸಿನ ರಫ್ತು ವ್ಯಾಪಾರವು ಈ ರೀತಿ ಪರದೇಶಗಳ [illegible] ಒಳ್ಳೆಮೆಣಸಿನ ಸಾಗುವಳಿಯು ಮಲೆಬಾರಿನಲ್ಲಿ [illegible] ನಿಕೃಷ್ಟಸ್ಥಿತಿಯನ್ನು ಹೊಂದಿರುವುದಾದರೂ ಇನ್ನೂ ತಲಚೇರಿಯ ಕಾಳುಮೆಣಸು ಲೋಕದಲ್ಲಿ ಅತ್ಯುತ್ಕೃಷ್ಟವಾದದ್ದೆಂತ ಖ್ಯಾತಿಗೊಂಡಿರುತ್ತದೆ. ಕಾಳುಮೆಣಸಿನ ಸಾಗುವಳಿಗೆ ಹಿಂದೂಸ್ಥಾನದ ಪಶ್ಚಿಮ ಕರಾವಳಿಯೇ ಉಪಯುಕ್ತವಾಗಿರುತ್ತದೆ.

ಇತರ ಎಲ್ಲಾ ಜೀನಸುಗಳಿಗಿಂತ ಒಳ್ಳೆಮೆಣಸಿನ ನಿಮಿತ್ತವಾಗಿಯೇ ಯುರೋಪಿಯ ವ್ಯಾಪಾರಸ್ಥರೂ, ನವೀನ ಭೂಖಂಡಗಳನ್ನು ಶೋಧಿಸಿ ಅಲೆದಾಡುತ್ತಿದ್ದ ನಾವಿಕರೂ ಭರತಖಂಡಕ್ಕೆ ಬಂದಿದ್ದರಿಂದ ಹಿಂದೂಸ್ಥಾನದ ಚರಿತ್ರೆಯನ್ನು ಸಹಾ ಇದು ಮಾರ್ಪಡಿಸಿ ಅದರ ಮುಂದಿನ ದೆಸೆಯನ್ನು ಪರಿವರ್ತಿಸಿ ನಿರ್ಣಯಿಸಿದ್ದರಿಂದ ಒಳ್ಳೆಮೆಣಸಿನ ಚರಿತ್ರೆಯು ಬಹಳ ವಿಶೇಷವಾಗಿರುವುದು. ಪೋರ್ತುಗೀಸ್ ಜನಾಂಗದವನಾದ ವಾಸ್ಕೋಡಿಗಾಮನೆಂಬವನು ಮೆಣಸನ್ನು ಹುಡುಕುವ [illegible] ವರೆ 'ಕೆಪ್ ಒಫ್ ಗುಡ್ ಹೋಪ್' ಎಂಬ ಭೂಶಿರದ ಸಮುದ್ರಮಾರ್ಗವಾಗಿ ಮಲೆಬಾರ ಪ್ರಾಂತ್ಯಕ್ಕೆ ಬಂದಿಳಿದಿದ್ದನು. ಈತನ ಆಗಮನವು ಹಿಂದೆ ಪಶ್ಚಿಮ ಕರಾವಳಿಯಲ್ಲಿ ಕ್ರಮೇಣ ಪೋರ್ತುಗೀಸರ ಅಧಿಕಾರವನ್ನು ಸ್ಥಾಪಿಸಿತು. ನಂತರದಲ್ಲಿ ಡಚ್ಚ ಜನಾಂಗದವರು [illegible] ಒಳ್ಳೆಮೆಣಸಿನ ಮೊದಲಾದ [illegible] ಗಳ ಯುರೋಪಿಯ ವ್ಯಾಪಾರವೆಲ್ಲವನ್ನು ತಮ್ಮ ಅಧೀನಪಡಿಸಿಕೊಂಡರು. [illegible] ಸರಕುಗಳ ಬೆಲೆಯನ್ನು [illegible] ವಿಶೇಷವಾಗಿ [illegible] ಯಲ್ಲಿ ಕೆಲವು [illegible] ಒಳ್ಳೆಮೆಣಸು ಮೊದಲಾದವುಗಳನ್ನು ಹಿಂದೂಸ್ಥಾನದಿಂದ [illegible] ಕಂಪೆನಿಯನ್ನು [illegible] ಸರಕಾರವೆಂತ ಹಿಂದೂಸ್ಥಾನವನ್ನು ಕೈವಶಮಾಡಿಕೊಂಡ "ಈಸ್ಟ್ ಇಂಡಿಯಾ ಕಂಪೆನಿ"ಗೆ ಇದೇ ಮೂಲವಾಗಿರುವುದು. ಪ್ರಾಚೀನ ಕಾಲಗಳಲ್ಲಿ [illegible] ರಾಜರುಗಳೊಳಗೆ ನಡೆಯುತ್ತಿದ್ದ ರಕ್ತಪಾತಗಳನ್ನುಂಟುಮಾಡುತ್ತಿದ್ದ ಕೊನೆಯಿಲ್ಲದ ಯುದ್ಧಗಳನ್ನು ನಿಲ್ಲಿಸಿಬಿಟ್ಟು ವಿವಿಧ [illegible] ಭಾರತೀಯ ಪ್ರಜೆಗಳೆಲ್ಲವನ್ನು ಒಂದೇ ಆಳಿಕೆಯಲ್ಲಿ ತಂದು ದೇಶದಲ್ಲಿ ಶಾಂತಿಯನ್ನೂ ಸಮಾಧಾನವನ್ನೂ ಬರಮಾಡಿರುವ ಬ್ರಿಟಿಷ್ ಆಗಮನಕ್ಕೆ ಮೂಲಕಾರಣವು ಒಳ್ಳೆಮೆಣಸಾಗಿರುವುದು.

ಒಳ್ಳೆಮೆಣಸಿನ ಬಳ್ಳಿಯನ್ನು ಬೆಳಸುವುದು ಅತಿ ಸುಲಭ, ಒಂದು ಸತಿ ಅದು ಬೆಳದು ಅದರ ಸುಳುವಿಗೆಂತ ನಟ್ಟಿರುವ ಮರವನ್ನು ಸುತ್ತಿಕೊಂಡ ಮೇಲೆ ಇದಕ್ಕೆ ಹೆಚ್ಚು ನಿಗಾ ಕೊಡಬೇಕೆಂಬುವ ಅಗತ್ಯವಿಲ್ಲ. ನಿಗಾ ಕೊಡದೆಯೂ ಅಜಾಗ್ರತೆಯಿಂದಲೂ ಇದನ್ನು ಬೆಳೆಸಿದ್ದಲ್ಲಿ ಕೂಡಾ ತಕ್ಕ ಮಟ್ಟಿಗೆ ಸಾಕಷ್ಟು ಒಳ್ಳೆಮೆಣಸು ಇಂಥಾ ಬಳ್ಳಿಗಳಿಂದ ದೊರಕಲು ಸಾಧ್ಯ. ಒಳ್ಳೆಮೆಣಸಿನ ಬಳ್ಳಿಗಳಲ್ಲಿ ಕೆಲವು ಚನ್ನಾಗಿ ಬೆಳೆಯುವವು. ಕೆಲವವುಗಳಿಗೆ ಹೆಚ್ಚು ಮೆಣಸು ಸಿಕ್ಕುವುದು. ಇನ್ನೂ ಕೆಲವವುಗಳಿಂದ ಮೆಣಸು ಸಿಕ್ಕುವುದು ಪ್ರಯಾಸ. ಈ ಮೊದಲಾದ ಒಳ್ಳೆಮೆಣಸಿನ ಸಾಗುವಳಿಯ ಕುಂದುಕಗಳನ್ನು ನಿವಾರಿಸಿ ಇದನ್ನು ಸಾಗುವಳಿ ಮಾಡುವವರಿಗೆ ತಕ್ಕ ಸಹಾಯವನ್ನು ಮಾಡುವರೆ ಸರಕಾರದವರು ತಾಲಿಪರಂಬ ಎಂಬಲ್ಲಿ ಕಾಳುಮೆಣಸು ಸಾಗುವಳಿಯ ಒಂದು ಮಾದರಿ ಹೊ[illegible]ಡಿಸಿರುವರು. ಈಗ ಈ ಮಾದರಿ ಹೊಲದಲ್ಲಿ, ಒಳ್ಳೆಮೆಣಸಿನ ಬಳ್ಳಿಗಳಲ್ಲಿ [illegible] ಜಾತಿಯವುಗಳ್ಯಾವವು ನಿಕೃಷ್ಟಜಾತಿಯವುಗಳ್ಯಾವವು ಎಂಬದನ್ನು ವಿಂಗಡಿಸಲಿಕ್ಕೆ ಸಾಧ್ಯವಾಗಿರುತ್ತದೆ. ತಾಲಿಪರಂಬದಲ್ಲಿರುವ ಮಾದರಿ ಗದ್ದೆಗಳ ಸಾಗುವಳಿ ನಡಿಸುವ ಮ್ಯಾನೇಜರರಿಗೆ ನಾವು ಬರೆದ ಮಾತ್ರದಲ್ಲಿ ಒಳ್ಳೆಮೆಣಸಿನ ಸಾಗುವಳಿಗೆ ಬೇಕಾದ ಎಲ್ಲಾ ಮಾಹಿತಿಯು ದೊರೆಯುವದು. ಒಳ್ಳೆ [illegible]

ಸಾಗುವಳಿಯು ಪ್ರಥಮದಲ್ಲಿಯೇ ನಾವು ಸ್ವಲ್ಪ ಜಾಗ್ರತೆಯನ್ನು [illegible] ಜಾಗ್ರತೆಯ ಪ್ರತಿಫಲವಾಗಿ ಪ್ರತಿ ವರುಷದ ಒಳ್ಳೆಮೆಣಸಿನ ಫಸಲಿನಲ್ಲಿ ಮೆಣಸು ಬಹಳವಾಗಿ ಸಿಕ್ಕುವರೆ ಉಪಾಯವಾಗುವದು. ಬಳ್ಳಿಯು ಸ್ವಲ್ಪ ಕಾಲದಲ್ಲಿಯೇ ಫಲಿಸದ್ದರಿಂದ ಅನೇಕರು ಇದರ ಸಾಗುವಳಿಯೇ ನಿಷ್ಪ್ರಯೋಜಕವೆಂತ ಭಾವಿಸಬಹುದು. ಆದರೆ ಹಲವು ವರುಷಗಳ ತನಕ ಫಲವನ್ನೀಯುವದಿಲ್ಲವಾದರೂ ನಿಕೃಷ್ಟಫಲಗಳಿಗಿಂತ ಒಳ್ಳೇ ಫಲಗಳನ್ನು ಬಿಡುವ ವೃಕ್ಷವನ್ನು ನಡುವುದುತ್ತಮ. ಆದ್ದರಿಂದ ನಿಮ್ಮ ಸಂತತಿಯವರಿಗೆ ಸುಫಲಗಳನ್ನು ದೊರಕುವಂತೆ ಒಳ್ಳೆಮೆಣಸಿನ ಬಳ್ಳಿಗಳಿಗೆ ಒಂದಿಷ್ಟು ಲಕ್ಷ್ಯವಿಟ್ಟಾಗಿ ಕೊಟ್ಟು ನಡುವುದಕ್ಕೆ ಅತ್ಯುತ್ಕೃಷ್ಟವಾದವುಗಳನ್ನೇ ಆರಿಸಿ ತೆಗಿಯಿರಿ. ನಟ್ಟ ಮೇಲೆ ಪ್ರತಿ ವರುಷವೂ ಅದರ ಬೇರುಗಳು ಸಮವಾಗಿ ನಾಟುವಂತೆ ಬುಡವನ್ನು ಸ್ವಲ್ಪ ಅಗಿದರೆ ಸಾಕು. ತೋಟದ ಇತರ ಕಡೆಗಳಲ್ಲಿರುವ ಸೊಪ್ಪು ಮೊದಲಾದವುಗಳನ್ನೂ ಮನೆಯ ಆಜುಬಾಜುಗಳಲ್ಲಿರುವ ಕಸವುಂತಾದ್ದನ್ನೂ ಒಟ್ಟು ಕೂಡಿಸಿ ಮೆಣಸಿನ ಬಳ್ಳಿಯು ಆವರಿಸಿಕೊಳ್ಳುತ್ತಿರುವ ಮರದ ಬುಡದಲ್ಲಿ ಹಾಕಿಸುವುದುತ್ತಮ. ಒಳ್ಳೆಮೆಣಸಿನ ಸಾಗುವಳಿ ಮಾಡುವ ಮಲಿಬಾರ ನಿವಾಸಿಗಳಿಗಿಂತ ಯುರೋಪಿಯರ ಒಳ್ಳೆಮೆಣಸಿನ ಸಾಗುವಳಿಗಾರರು ತಮ್ಮ ಸಾಗುವಳಿಯಿಂದ ಒಳ್ಳೆಮೆಣಸನ್ನು ಬಹಳವಾಗಿ ದೊರಕಿಸಿಕೊಳ್ಳುವರೆಂಬದನ್ನು ತಿಳಿಯಪಡಿಸುವುದು ಮಲಬಾರ ಜಿಲ್ಲೆಯವರಿಗೆ ಸ್ತುತ್ಯವಲ್ಲ. ಒಳ್ಳೆಮೆಣಸಿನ ಇಡೀ ಜಗಲ್ಲೋಕದ ವ್ಯಾಪಾರವು ಈ ರೀತಿ ಮಲೆಬಾರಿನಲ್ಲಿ ಕ್ಷಯಿಸುತ್ತಾ ಬಂದು ಹಿಂದೂಸ್ಥಾನದ ಈ ರಫ್ತು ವ್ಯಾಪಾರವು ಅಳಿದುಹೋಗಿ ಅದು ಪರದೇಶಗಳಲ್ಲಿ ಪ್ರಬಲಿಸಿರುವುದೆಂದರೆ ಯಾರೂ ನಂಬಕೂಡದ ಸಂಗತಿಯಾಗಿರುತ್ತದೆ.

ಸ್ವೇಚ್ಛಾವ್ಯಾಖ್ಯಾಮಿಯ ಟೀಕೆಗಳು.

ನಿನ್ನೆ ದಿನ ಪತ್ತನದ ತಾತರ ಒಂದು ವಿಶೇಷ ಸಭೆಯು ಸಾಯಾಹ್ನಕಾಲದಲ್ಲಿ ಮನೋರಂಜಕವಾಗಿ ನಡಿಯಿತು. ಶಾಸನಾನುಗುಣವಾಗಿ ಸಭೆಯ ಕಾರ್ಯಗಳನ್ನು ನೆರವೇರಿಸಲು ಸಾಕಷ್ಟು ತಾತರ ಸಂಖ್ಯೆಯು ಇತ್ತು. ಸಭೆಯು ಮುಂದೆ ಚರ್ಚೆಗೆ ಬಂದ ಹಲವು ವಿಷಯಗಳಲ್ಲಿ ಮುಖ್ಯವಾದದ್ದು ಪತ್ತನದ ನಿವಾಸಿಗಳ ರಾತ್ರಿ ಕಾಲದ ಸಂಚಾರಕ್ಕೆ ಉಪಯುಕ್ತವಾದ ದೀಪಸ್ತಂಭಗಳ ಅವಸ್ಥೆಯ ಕುರಿತಾಗಿತ್ತು. ವರುಷಾವಧಿಗೆ

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿಸೆ ಗಡಿಯಾರುಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವವರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ [illegible] ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.

ನಮ್ಮ 'ವೆಕ್ಸಿಮ್' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೮-೦
ನಮ್ಮ 'ನ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ. ೧೫-೦-೦
ಬೆಳ್ಳಿ ಕೇಸಿನಲ್ಲಿ ರೂ ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು



ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ. ೧೭-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು [illegible] ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾತ್ರಿ ಕಳುಹಿಸುವೆವು. ನಮ್ಮ ೫೮ [illegible] ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ [illegible] ಯೂ ಕ್ರಯಕ್ಕೆ ದೊರಕುವವು.

ಇಂತಿಷ್ಟು ದೀಪಗಳ ನಿರ್ಣಯವು ಇಷ್ಟು ಗುತ್ತೆದಾರನ ಪರಿಮಿತಿ ದೀವಿಗೆಗಳನ್ನು ಉರಿಸುವ ಕ್ರಮವು ಇದುವರೆಗೆ ಇದ್ದದು ಬಂದದ್ದೆ. ಪರಂತು ಈ ಕ್ರಮವು ಸರಿಯಾಗಿ ನಡೆಯುವದಿಲ್ಲವೆಂಬ ದೂರು ಪದೇ ಪದೇ ಬರುತ್ತಿತ್ತು. ಮುನಿಸಿಪಲ್ ಫಂಡಿನಿಂದ ಗುತ್ತೆದಾರನಿಗೆ ಹಣ ಸರಿಯಾಗಿ ಶಿಕ್ಕಲು ಅಡ್ಡಿಯಾಗುವದಿಲ್ಲ. ಪರಂತು ದಾರಿಗರ ಸಂಕಟವು ದೇರೆಯವರಿಗೆ ತಿಳಿಯಲಿಕ್ಕೆ ಸಂದರ್ಭವು ಈಗ ಹ್ಯಾಗಾದರೂ ದೊರಕಿತೆನ್ನಬೇಕು. ಯಾಕೆಂದರೆ ಕೆಲವು ದೀವಿಗೆಗಳಿಗೆ ಬತ್ತಿಗಳೇ ಇಲ್ಲ. ಅಂತಹ ನ್ಯೂನವಿಲ್ಲದವುಗಳಲ್ಲಿ ಕಿರೋಸಿಲೀಂ ನಾಸ್ತಿ. ಇವೆರಡೂ ಕೊರತೆಗಳು ತೋರದವುಗಳ ಸಂಗತಿಯಲ್ಲಿ ಲಾಟೆನುಗಳ ಹರಳುಗಳೇ ಎದ್ದುಹೋದ ದೆಸೆಯಿಂದ ವಾಯುವಿನ ಸಣಿಕೆಗೆ ಅಸ್ಪದವಾಗಿ ಮಿಣಿ ಮಿಣಿ ನೆಣೆಗಳು ತತ್ಕಾಲ ನಂಗಿಹೋಗುವವು. ಮುದುಕರೂ ಒಪಂಗುಲರೂ ದೀವಿಗೆಗಳ ಮೇಲೆಯೇ ದೃಷ್ಟಿ ಇಟ್ಟು ತಡವರಿಸಿ ಕೊಂಡು ಒರುವಾಗ ಪ್ರಕಾಶದ ಅಭಾವದ ಪ್ರಯುಕ್ತ ಶ್ರೀಪಸ್ತಂಭಗಳಿಗೆ ಕಾಲೆಡವಿ ಭೂಮಿ ದೇವಿಗೆ ಪತ್ತಾಯದ ಉದ್ದಂಡ ನಮಸ್ಕಾರ ಹಾಕುವ ಪುಣ್ಯಕ್ಕೆ ಭಾಗಿಗಳು ಗುತ್ತೆದಾರರೋ ಸ್ಯಾಕ್ರೆಟರಿಯೋ ಎಂಬ ಅನುಮಾನವು ಇನ್ನೂ ಪರಿಹಾರವಾಗಲೇ ಇಲ್ಲ. ಅದೆಲ್ಲ ಇರಲಿ—ಒಮಕಾಲ ಪತ್ತನವಾಸಿಗಳು ಅನುಭವಿಸಿಕೊಂಡು ಬಂದ ಪ್ರಕಾರ ಸುಖವು ಪ್ರಮುಖವೆಂದು ತಾತಾಗ್ರೇಸರ ಮನಸಿಗೆ ಮಂದಟ್ಟಾಗಿ ಇನ್ನು ಮುಂದೆ ತಿಂಗಳಿಗೆ ೬ ರೂಪಾಯಿ ವೇತನದ ದೀಪಕರನ್ನೂ ಅವರ ಮೇಲ್ವಿಚಾರಕ್ಕೆ ತಿಂಗಳಿಗೆ ೧೦ ರೂಪಾಯಿ ವೇತನ ಇರುವ ದ್ವಿಚಕ್ರಿ (Bicycle) ವೆಚ್ಚ ಕೊಟ್ಟು ಒಬ್ಬನನ್ನೂ ನೇಮಿಸುವದೆಂತ ನಿರ್ಣಯವನ್ನು ಮಾಡೋಣಾಗಿಯದೆ. ಈ ಕ್ರಮದಿಂದ ಜನರಿಗೆ ಎಷ್ಟು ಪ್ರಯೋಜನ ದೊರಕುವದೆಂಬದು ಕೆಲವು ಕಾಲ ಕಳೆದ ಮೇಲೆ ತಿಳಿಯಬರುವದು. ಒಗ್ಗ ಹೊಸ ವೈದನಕ್ಕಿಂತ ಹಳೇ ರೋಗಿಯೇ ವಾಸಿಯೋ ಹ್ಯಾಗೆ ಒಂದು ವಿಷ್ಣರ್ಷವಾಗಿ ಅವಶ್ಯವು. ಉಪಾಯವನ್ನು ವರ್ತಿಸಲು ಅವಕಾಶವಾಗುವದು. ಈಗಿನ ದೀಪಕರಲ್ಲಿ ಒಬ್ಬ ಮುಸಲ್ಮಾನ್ ಯವ್ವನಸ್ಥನು ಸಕಾಲ ಬಂದು ಏಣಿಯನ್ನು ಹಿಡುಕೊಂಡು ದೀವಿಗೆಗಳನ್ನು ಹಚ್ಚಲು ಹೋಗುವ ಸಮಯ ಚಲೋ ಹಾಡುಗಳನ್ನು ಹೇಳುತ್ತಾನೆ. ದೀಪದ ಪ್ರಕಾಶ ಸೊನ್ನೆಯಾದರೂ ಅವನ ಇಂಪಾದ ಸ್ವರದಿಂದ ಉಂಟಾಗುವ ಸಂತೋಷವು ಕತ್ತಲೆಯಲ್ಲಿ ಕಾಲುಜಾರಿ ಬೀಳುವ ವ್ಯಕ್ತಿಗಳಿಗೂ ಪಸರಿಸಿ ಅವರ ಬೇನೆಯನ್ನು ಶಮನ ಮಾಡುತ್ತದೆ. ಆದದರಿಂದ ಈ ಒಡವನಿಗೆ ಒಂದು ನೇಮಣೂಕವಾಗುವದೆಂದು ಕೋರುವದು ಯುಕ್ತವೇ ಸರಿ.

ಪತ್ರವ್ಯವಹಾರ

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಬಾಧ್ಯರಲ್ಲ.)

ಮುಲ್ಕಿ

ಮುಲ್ಕಿ ಬೋರ್ಡು ಹುಡುಗಿಯರ ಶಾಲೆಯ ಮಕ್ಕಳಿಗೆ ಇದೇ ತಿಂಗಳ ತಾ೦ಕು ೧೫ರಲ್ಲು ಅವರ ಅಭಿವೃದ್ಧಿಗನುಸಾರವಾಗಿಯೂ, ನಡತೆಗನುಸಾರವಾಗಿಯೂ ಇನಾಂ ಹಂಚುವ ಪ್ರಥಮ ಸಮಾರಂಭವು ೧ ಘಂಟೆಗರದೊಡನೆ ನಡೆಯಿತು. ಆಂದು ಊರ ಮಾನ್ಯಗೃಹಸ್ಥರೂ, ಗೃಹಸ್ಥೆಯರೂ, ಮಿಸ್ಟರ್, ಮಿಸೆಸ್ ಬ್ರೈಡೆನ್‌ಬಾಕ್ ಮೊದಲಾದವರೂ ಸುರತ್‌ಕಲ್ಲಿನ ಪಾದ್ರಿಗಳೂ ಮಾತ್ರವಲ್ಲದೆ ಕ್ಷೇತ್ರಕ್ಕೆ ಬಂದಿದ್ದ ಎಷ್ಟಿಕಲೆಕ್ಟರರವರೂ ಮಕರ ತೋರಣಗಳಿಂದ ಶೃಂಗರಿಸಲ್ಪಟ್ಟ ಕಟ್ಟಡಕ್ಕೆ ದಯಮಾಡಿಸಿದ ನಂತರ ಡಿಪ್ಯುಟಿ ಕಲೆಕ್ಟರರವರೇ ಅಗ್ರಾಸನವನ್ನು ವಹಿಸಿದ ಮೇಲೆ ಶಾಲಾ ಹೆಣ್ಮಕ್ಕಳು ವಿವಿಧ ತರದ ಮಂಜುಳವಾದ ಅಬಿನಯ ಗೀತಗಳನ್ನೂ ಕೋಲಾಟಗಳನ್ನೂ ಹಾಡಿ ಸಭಿಕರನ್ನು ಸಂತೋಷಗೊಳಿಸಿದರು.

ನಂತರ ಶಾಲಾ ಹೆಡ್ ಮಿಸ್ಟ್ರೆಸ್ ಮಿ ಸೊನ್ನರವರು ಈ ಶಾಲೆಯು ೧೯೦೬ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಖಾಸಗಿ ಆಡಳಿತೆಯನ್ನು ಬಿಟ್ಟು ಬೋರ್ಡಿನವರ ಸ್ವಾಧೀನತೆಗೆ ಬಂತೆಂಬದಾಗಿಯೂ ಈಗ ಬೋರ್ಡಿನವರು ಮಕ್ಕಳಿಗೆ ಪವಾಸಾಪೂರ್ವಕವಾಗಿಯೇ ವಿದ್ಯಾದಾನವನ್ನು ಮಾಡುತ್ತಿರುವರಲ್ಲದೆ ವಿದ್ಯಾಖಾತೆಯ ಕ್ರಮಕ್ಕನುಸಾರವಾಗಿ ತರ್ಬೇತಾದ ಮೂರು, ಮತ್ತು ಒರುವ ವರುಷ ತರ್ಬೇತಿಗೆ ಕಳುಹಿಸಲ್ಪಡುವ ಇಬ್ಬರು ಉಪಾಧ್ಯಾಯನಿಯರು ಸದ್ಯ ಈ ಶಾಲೆಯಲ್ಲಿ ಕೆಲಸಮಾಡುತ್ತಿರುವರೆಂಬದಾಗಿಯೂ, ೧೯೦೬ನೇ ಇಸವಿಯಲ್ಲಿ ೮೮ ಮಕ್ಕಳು ಮಾತ್ರವೇ ಇದ್ದು ಈಗ ೧೧೦ ಮಕ್ಕಳಿಂದ ಈ ಶಾಲೆಯು ಕಂಗೊಳಿಸುತ್ತಿದೆ ಎಂಬದಾಗಿಯೂ ಇನ್ನು ಸೇರಲಿಕ್ಕಿರುವ ಕೆಲವು ಮಕ್ಕಳಿಗೆ ಸ್ಥಳ ಸಂಕೋಚದ ಕಾರಣ ಅಸ್ಪದವಿಲ್ಲದಿರುವದರಿಂದ ಬೋರ್ಡಿನವರು ಇದನ್ನು ಚಿತ್ತಕ್ಕೆ ತಂದು ಹೊಸ ಕಟ್ಟೋಣವನ್ನು ಕಟ್ಟಿಸಬೇಕೆಂಬದಾಗಿಯೂ ತಿಳಿಸಿದರು.

ತೆರುವಾಯ ಮಿಸೆಸ್ ಬ್ರೈಡೆನ್‌ಬಾಕ್‌ರವರು ಮಕ್ಕಳಿಗೆ ಕ್ರಮಪ್ರಕಾರವಾಗಿ ಇನಾಮುಗಳನ್ನು ಹಂಚಿದರು. ಬಳಿಕ ಅಧ್ಯಕ್ಷರು ಮಾತಾಡಿ, ಸದರಿ ಶಾಲೆಯು ಬೋರ್ಡಿನವರ ಕೈಗೆ ಸೇರ ಕಾರಣಭೂತರಾದ ಶಾಲಾ ಇನ್ಸ್‌ಪೆಕ್ಟ್ರೆಸ್ ಲಿಂಚ್ ಅವರಿಗೂ, ಏನೂ ಅಡ್ಡಿಸಲ್ಲಿಸಲ್ಲದೆ ಶಾಲೆಯನ್ನು ಬೋರ್ಡಿನವರಿಗೆ ಬಿಟ್ಟುಕೊಟ್ಟ ಶಾಲಾ ಮೆನೇಜರರಿಗೂ ಉಪಕಾರ ಸ್ಮರಣೆ ಹೇಳಿದ್ದು ಅಲ್ಲದೆ ಖಾಸಗಿ ಆಡಳಿತೆಯಲ್ಲಿ ರುವಾಗ ಈ ಶಾಲೆಯು ಇದ್ದ ಗರೀಬಸ್ಥಿತಿಯನ್ನೂ ಈಗ ಇರುವ ಉಚ್ಚಸ್ಥಿತಿಯನ್ನೂ ಹೇಳಿ ತಮ್ಮ ತನುಮನವನ್ನೇ ಒಪ್ಪಿಸಿ ಸದರಿ ಶಾಲೆಯನ್ನು ದಿನೇ ದಿನೇ ಅಭಿವೃದ್ಧಿಗೆ ತರುತ್ತಿರುವ ಹೆಡ್ ಮಿಸ್ಟ್ರೆಸನ್ನೂ, ಆಸಿಸ್ಟಾಂತ ಮಿಸ್ಟ್ರೆಸುಗಳನ್ನೂ ಕೊಂಡಾಡಿ, ಹೊಸ ಕಟ್ಟೋಣವನ್ನು ಕಟ್ಟಿಸಲು ಬೋರ್ಡಿನವರು ಈ ಮೊದಲೇ ೫೦೦೦ ರೂಪಾಯಿ ಸೆಂಕ್ಷನ್ ಮಾಡಿರುತ್ತಾರೆಂಬದಾಗಿಯೂ ಒರುವ ವರುಷ ಈ ಸಮಯದೊಳಗೆ ಅದು ತಯಾರಾಗುವದೆಂಬದಾಗಿಯೂ ತಿಳಿಸಿ, ಕೂಡಿಬಂದವರನ್ನೂ, ಉಪಾಧ್ಯಾಯನಿಯರನ್ನೂ ಉತ್ತೇಜನಗೊಳಿಸಿದರು. ಕಡೇಗೆ ಬ್ರೈಡೆನ್‌ಬಾಕ್‌ದೊರೆಗಳವರು ಈ ಶಾಲಾ ಅಭಿವೃದ್ಧಿಯನ್ನು ಕುರಿತು ನಾನಾ ಮಾತುಗಳಿಂದ ಕೊಂಡಾಡಿ ಇನ್ನುಮುಂದಕ್ಕೂ ಹೀಗೆಯೇ ಅಭಿವೃದ್ಧಿಯಾಗಿ ಪೆಚ್ಚಿ ಫಲಭರಿಸಲಿ ಎಂಬ ಆಶೀರ್ವಾದ ವಚನವನ್ನಿತ್ತು ಕೂಡಿದ ಸ್ತ್ರೀಪುರುಷರಿಗೆ ತಾಂಬೂಲಾದಿಗಳನ್ನೂ ಮಕ್ಕಳಿಗೆ ಪಣ್ಣು ಸಿಹಿಯಾಗಿಗಳನ್ನೂ ಕೊಟ್ಟ ನಂತರ ಸಭೆಯು ಮುಕ್ತಾಯವಾಯಿತು. ಬೋರ್ಡಿನವರು ಕೈಕೊಂಡ ಹೆಣ್ಮಕ್ಕಳ ವಿದ್ಯಾಭ್ಯಾಸಕ್ಕೆ ನಾವೆಲ್ಲರೂ ಕೈಕೊಡಬೇಕೆಂಬದಾಗಿ ನನ್ನ ಅರಿಕೆ.

ಪ್ರತ್ಯಕ್ಷದರ್ಶಿ

ಶಿರೋವೇಷ್ಟನ ನಿಬಂಧನೆಗಳ ಆವಶ್ಯಕತೆ

ಹಿರಿಯರು ಮಾಡಿದ ವಿಹಿತ ಕಟ್ಟಳೆಗಳಲ್ಲಿ ತಲೆಸುತ್ತಿಗೆ ಅಷ್ಟು ಶ್ರೇಷ್ಠತ್ವವನ್ನು ಕೊಟ್ಟಿಂದಾದ್ದು ಒಹಳ ಶ್ಲಾಘನೀಯವಾಗುತ್ತದೆ. ಈ ಪಾತ್ರದಿಂದಲೇ ಅವರು ನಮಗಿಂತ ಎಷ್ಟೋ ಎಷ್ಟು ಹಿರಿಯರೆಂತ ಹೇಳಬಹುದು. "ಸಿರೋಲೋಜಿ" ಶಾಸ್ತ್ರ ಹೇಳುವ ಮೇರೆಗಾಗಲಿ, ಅಥವಾ ಬೇರೆ ಕೆಲವು "ಓಜಿ"ಗಳು ಹೇಳುವ ಮೇರೆಗಾಗಲಿ ಈ ರೀತಿಯಲ್ಲಿ ಶಿರವನ್ನು ರಕ್ಷಣೆ ಮಾಡುವಂದಾದ್ದು ಆರೋಗ್ಯಕ್ಕೆ ಒಹಳ ಒಳ್ಳೇದಾಗಿರುತ್ತದೆ. ವಿದ್ಯಾ ಇಲಾಖೆಯವರಿಗೆ ಈ ಸಂಗತಿಯು ಎಷ್ಟು ಮುಖ್ಯವಾಗಿ ತೋರುವದೆಂದರೆ ಅವರು ಯೋಗ್ಯವಾದ ತಲೆಸುತ್ತಿನ ವಿನಾ ಹುಡುಗರಾಗಲಿ, ಉಪಾಧ್ಯಾಯರಾಗಲಿ ದರ್ಜೆಯ ಒಳಕ್ಕೆ ಹೋಗಕೂಡದಾಗಿ ಆಜ್ಞೆಯನ್ನು ಮಾಡಿರುತ್ತಾರೆ. ಈ ನಿಬಂಧನೆಯನ್ನು ಜಾರಿ ನಡಿಸುವರೆ ಮನಃಪೂರ್ವಕವಾಗಿ ಕೆಲಸವನ್ನು ಸಾಗಿಸುವ ಆ ಆಫೀಸರರು ಒಹಳವಾಗಿ ಪ್ರಯತ್ನಮಾಡುತ್ತಾರೆ. ಮಾತ್ರವಲ್ಲ ಯಾರಾದರೂ ಮುಂಡಾಸು ರಹಿತರಾಗಿ ಕ್ಲಾಸಿಗೆ ಹೋದರೆ ಒಳ್ಳೆ ಧೈರ್ಯದಿಂದ ಕೆಲಸ ಮಾಡಿದರೆ ಉದ್ಭವಿಸುವ ರೋಷಕ್ಕಿಂತಲೂ ಆಧಿಕವಾದ ಜಾರಿ ಶಿಟ್ಟಿನಿಂದ ಪ್ರಳಯಾಂತ ಬೈರವನ ಬೈರವವನ್ನು ಧರಿಸಿ ಸಿಡಿಲಾಟೋಪದಿಂದ ಘರ್ಜಿಸಿ ವಿಲಯ ಜಲಧಿಯ ಕೋಲಾಹಲದಂತೆ ಕೋಲಾಹಲವನ್ನು ಮಾಡುತಾರೆ. ಹೀಗೆ ರಾಜಭಕ್ತಿಯಿಂದಲೂ, ಮನಃಪೂರ್ವಕವಾಗಿಯೂ, ಮರ್ಯಾದೆಯಿಂದಲೂ, ಭಕ್ತಿಯಿಂದಲೂ ಮಾಡುವ ಕೆಲಸದ ಆಂದವು ಅತೀ ಶ್ಲಾಘನೀಯವಾದದ್ದು. ಆದರೆ ಶಿರೋವೇಷ್ಟನದ ಪ್ರಯೋಜನಗಳು ಹೊರಡಬೇಕಾದರೆ ಅದು ಶಿರಕ್ಕೇ ಇಡಬೇಕಾಗಿ ಅಭಿಪ್ರಾಯ ಪಡುತ್ತೇನೆ. ಆದರೆ ಕೆಲವು ಮಾದರಿಯಾಗಿರತಕ್ಕ ಶಾಲೆಗಳಲ್ಲಿ ಶಿಕ್ಷಣಾಕಾಲದಲ್ಲಿ ಗುರುಗಳು ಕುರ್ಚಿಯಲ್ಲಿ ಪವಡಿಸಿ ತೊಡೆಯ ಮೇಲೆ ರುಮಾಲಿಟ್ಟಿದ್ದೂ ಎಲ್ಲಾ ಪ್ರಯೋಜನಗಳು ದೊರಕುವವೆಂತ ಕೆಲವರು ವಾದಿಸುತ್ತಾರೆ. ಇದರಲ್ಲಿ ನನಗೆ ಹೆಚ್ಚು ಚರವಸವಿಲ್ಲ. ಮತ್ತು ಅಂಥಾ ಸಂಗತಿಗಳು ಶಾಲೆಯಲ್ಲಿ ನಡಿಯುವದು ಕೂಡಾ ಮೇಲು ಉದ್ಯೋಗಸ್ಥರ ಮೇಲು ತನಿಖಿ (over-looking) ಕಮ್ಮಿ ಆಗಿ ಎಂತ ಭಾವಿಸುತ್ತೇನೆ. ವಿನಹಾ ಬಂಚಿಯ ಮೇಲೆ ಪಕ್ಕೆಯಲ್ಲಿಟ್ಟದ್ದರಿಂದ ಹೊರಡುವ ಪ್ರಯೋಜನಗಳಂತ ನೆನಸುವದಿಲ್ಲ. ಮುಂದಕ್ಕಾದರೂ ಅಂಥಾ ಆಫೀಸರರು ತೊಡೆಯನ್ನು ಅಲಂಕರಿಸುವ ಆಂದಗಳಿಂದ ಲಬ್ಧವಾಗುವ ಪ್ರಯೋಜನಗಳನ್ನು ಲೋಕಕ್ಕೆ ಉಪನ್ಯಾಸರೂಪವಾಗಿ ಪ್ರಕಟಿಸಬೇಕು ಅಥವಾ ಮೇಲು ತನಿಖಿಯನ್ನು ಸಲ್ಪ ಬಕ್ತಿಯಿಂದ ನಡಿಸಿ ಬೀಭತ್ಸ್ಯಕರ ದುರಭ್ಯಾಸವನ್ನು ನಿಲ್ಲಿಸುವರಾಗಬೇಕು.

ಶಿರೋವೇಷ್ಟನ ಶಿರಕ್ಕೆಂತ ಅಭಿಪ್ರಾಯ ಪಡುವವ.

ವಿದೇಶ ವೃತ್ತಾಂತ.

ಇಂಗ್ಲೆಂಡಿನ ಸ್ಥಾನದ ಅಮೀರರವರು ಒಂದು ಚರ್ಮದ ಕಾರ್ಖಾನೆಯನ್ನು ಕಾಬೂಲಿನಲ್ಲಿ ಸ್ಥಾಪಿಸುವುದಕ್ಕಾಗಿ ಯುರೋಪಿನಲ್ಲಿ ಈ ಕೈಗಾರಿಕೆಯಲ್ಲಿ ತರಬೇತಿ ಹೊಂದಿರುವ ಒಬ್ಬ ಪಂಡಿತರನ್ನು ನೇಮಿಸಿದರು.

ಜೀನಾದೇಶದ ಸೇನೆಯಲ್ಲಿ ಬೇಕಾದ ನವೀನ ಮಾರ್ಪಾಟಗಳನ್ನು ಮಾಡುವುದಕ್ಕೆ ಮಾಹೀತಿಯನ್ನು ಪಡಿಯಲು ಪ್ರಿನ್ಸ್ ಟಸಿಯಟೊ ಮೊದಲಾದವರು ಜಪಾನ್ ಅಮೇರಿಕಾ ಮತ್ತು ಯುರೋಪ ದೇಶಗಳಿಗೆ ಹೊರಟಿರುವರು.

ಎಲ[redacted]ದುಮಾಡಲ್ಪಟ್ಟ ಸರ್ದಾರನು ರಿಮಾಂಡಿನ[redacted] ಈತನ ಮೇಲೆ ನಡೆಸಲ್ಪಡುವ ವ್ಯವಹರಣೆಗೆ ಅಗತ್ಯವಾಗಿರುವ ರಿಕಾರ್ಡು ಇಂಡಿಯದಿಂದ ಬರುವ ತಿಂಗಳ ೫ನೇ ತಾ ಎಲ್ಲಿ ಹೋಗಿ ತಲ್ಪುವವು.

ಮೊದಲು ಕಲಿಕತ್ತೆಯಲ್ಲಿ ವಾಸಮಾಡಿಕೊಂಡಿದ್ದ ಅಶ್ವಿನೀಕುಮಾರದತ್ತ ಅವರ ಪತ್ರಾಗಾರನ ವಿಳಾಸವಿರುವ ಟಪ್ಪಾಲ ಲಕೋಟೆ ಮೊದಲಾದವುಗಳು ಅವು ಆತನಿಗೆ ತಲ್ಪುವ ಮುಂಚೆ ಹಿಂದುಸ್ಥಾನದಲ್ಲಿ ತೆರಿಯೋಣಾಗುತ್ತವೆಂಬದಾಗಿ ಸ್ಟೇಟ್ ಸೆಕ್ರಿಟರಿಗಳಾದ ಮೋರ್ಲೆ ಪ್ರಬುಗಳಿಗೆ ಖುದ್ದಾಗಿ ದೂರು ಕೊಟ್ಟಿರುವನು ಮೋರ್ಲೆ ಪ್ರಬುಗಳು ಈ ವಿಷಯ ತನಖಿ ನಡಿಸುತ್ತಿರುವರಾಗಿ ತಿಳಿಯುತ್ತೇವೆ

ಹಂಗೇರಿಯನ್ ಸರಕಾರದ ಆಲೋಚನಾಸಭೆ ಕೂಡಿದಾಗ ಸಭಾಮೆಂಬರರಲ್ಲಿ ಕಲಹವೆದ್ದು ಮಂತ್ರಿಗಳೇ ಮೊದಲಾದ ಪ್ರಮುಖ ಅಧಿಕಾರಿಗಳಿಗೆ ಶಾಯಿದವತಿ ಮತ್ತು ಪುಸ್ತಕಗಳಿಂದ ಇತರರು ಹೊಡದುದಾಗಿ ಕೇಳುತ್ತೇವೆ

~~~~~

ಪೌರ್ವಾತ್ಯ ದೇಶಭಾಷೆಗಳ ಒಂದು ಶಾಲೆಯನ್ನು ಸ್ಥಾಪಿಸಲಿಕ್ಕೆ ಬೇಕಾದ ಉಪಾಯಗಳನ್ನು ಆಲೋಚಿಸಲಿಕ್ಕೆ ಮೋರ್ಲೆ ಪ್ರಬುಗಳು ಒಂದು ಆಲೋಚನಾಸಭೆಯನ್ನು ನೇಮಿಸಿರುವರು ಕ್ರೆವಿನ್ ಪ್ರಬುಗಳು ಈ ಸಭೆಯ ಅಧ್ಯಕ್ಷರೂ ಕರ್ಜನ್ ಪ್ರಭು ಸರ್ ಚಾರ್ಲ್ಸ್ ಲಯಲ್ ಮೊದಲಾದವರು ಇದರ ಮೆಂಬರರೂ ಆಗಿರುವರು

~~~~~

೫೫೧೦೦೦ ಪವನುಗಳ ಬೆಲೆಯುಳ್ಳ ಚಿನ್ನವು ವಿಲಾಯ ತಿಯಿಂದ ಹಿಂದುಸ್ಥಾನಕ್ಕೆ ರವಾನೆಯಾಗುತ್ತಿರುವುದ ಹಿಂದುಸ್ಥಾನದ ಸರಕಾರದವರ ಖಜಾನೆ ಹೆಚ್ಚು ಹಣ ಚಿನ್ನವು ಬಹಳ ಹೆಚ್ಚಾಗಿ ಬರುತ್ತಿರುವುದರಿಂದಲೂ ಹಿಂದುಸ್ಥಾನದ ನಾಣ್ಯ ಚಲಾವಣೆಯು ಅತಿಶಯ ಅಧಿಕವಾಗಿರುವುದರಿಂದಲೂ ಬೆಳ್ಳಿ ನಾಣ್ಯಗಳನ್ನು ತಯಾರಿಸಲಿಕ್ಕೆ ಇಂಡಿಯಾ ಸರಕಾರವು ಬೆಳ್ಳಿಯನ್ನು ತಕೊಳ್ಳಕೂಡದಾಗಿ ಅಂಡರ್ ಸೆಕ್ರಿಟರಿಗಳಾದ ಮಿ ಮೊಂಟೆಗ್ಯುರವರು ಸೂಚಿಸಿರುವರು ಇದರಿಂದ ಅಲ್ಪಸ್ವಲ್ಪ ಬೆಳ್ಳಿಯ ಧಾರಣೆಯು ಬೀಳಬಹುದೆಂತ ಕೆಲವರು ನಿರೀಕ್ಷಿಸುತ್ತಿದ್ದಾರೆ

~~~~~

ಜಪಾನ್ ಮತ್ತು ಅಮೇರಿಕದ ಸಂಯುಕ್ತಸಂಸ್ಥಾನಗಳ ಸರಕಾರದವರು ಪೌರ್ವಾತ್ಯ ರಾಜ್ಯಗಳಲ್ಲಿ ಎರಡು ರಾಷ್ಟ್ರಗಳಿಗೂ ಏಕರೀತಿ ವ್ಯಾಪಾರ ಸೌಕರ್ಯಗಳು ದೊರಕುವಂತೆ ಸಾಧಿಸುವ ಬಗ್ಗೆ ಒಪ್ಪಂದ ಮಾಡಿಕೊಳ್ಳುವರಂತೆ

ಮೋರ್ಲೆ ಪ್ರಭುಗಳು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯ ಮಂತ್ರಿಪದವಿಯನ್ನು ವಹಿಸಿ ಐದು ವರುಷಗಳಾಗುವಷ್ಟರಲ್ಲಿ ಇವರ ಕೈಕೆಳಗೆ ಐದು ಜನ ಅಂಡರ್ ಸೆಕ್ರೆಟರಿಗಳು ಕೆಲಸ ನೋಡುವವರಾದರು ಇತ್ತಲಾ ಮೊಕ್ಕೂರಿದವರು ಬಹುಮಾನಪಟ್ಟ ಇ ಎಸ್ ಮೊಂಟೆಗ್ಯು ಎಂಬವರಾಗಿರುವರು

~~~~~

ಕಿಚ್ನರ್ ಪ್ರಭುಗಳು ತಹತಿ ಮತ್ತು ಅಮೇರಿಕಾ ಮಾರ್ಗವಾಗಿ ಅಂಗ್ಲಾಂಡಕ್ಕೆ ತೆರಳಿರುವರಂತ ವೆಲ್ಲಿಂಗ್ಟನ್ ತಂತೀ ವರ್ತಮಾನಗಳಿಂದ ತಿಳಿದುಬರುವುದು

~~~~~

ಉತ್ತರ ಹಿಂದುಸ್ಥಾನ

~~~~~

ರವಿ ನದೀತೀರದಲ್ಲಿರುವ ಸಾಹಾದ್ರಾ ಎಂಬಲ್ಲಿರುವ ಮೊಗಲಾಯಿ ಚಕ್ರವರ್ತಿಗಳಿಂದ ಜಹಂಗೀರರವರ ಸಮಾಧಿಯಲ್ಲಿ ಬೆಳಗಿಸುವ ಬಗ್ಗೆ ಕೋರಾ ಮಹಾರಾಜರವರು ಒಂದು ವಿಚಿತ್ರವಾದ ಕಂಚಿನ ತೂಗುದೀಪವನ್ನು ಕೊಟ್ಟಿರುವರು

ಟಿಬೇತಿನ ಡೆಲೈಲಾಮಾ [illegible]ರಾಯ ಪ್ರಬುಗಳ ಮತ್ತು ಬಂಗಾಳದ ಲೆಪ್ಟಿನೆಂಟ್ ಗವರ್ನರರವರ ಭೇಟಿ ನಂತರ ಡಾರ್ಜಲಿಂಗ್ ಪಟ್ಟಣಕ್ಕೆ ತೆರಳುವರು.

~~~~~

ಬಾಬು ಅರವಿಂದ ಘೋಷರವರು ಕೆಲವು ದಿವಸಗಳಿಂದ ಕಲ್ಕತ್ತಾ ಪಟ್ಟಣದಿಂದ ಅದೃಶ್ಯರಾಗಿರುವರು. ಊರಿನವರೆಲ್ಲರೂ ಇವರು ಎಲ್ಲಿರುವರೆಂಬುದನ್ನು ನಿರ್ಣಯಿಸಲಾರದೆ ತಂತಮಗೆ ಯುಕ್ತಕಂಡಂತೆ ಊಹಿಸುತ್ತಿರುವರು. ಕೆಲವರು ಇವರ ಮೇಲೆ ರಾಜದ್ರೋಹಪರವಾದ ವ್ಯವಹರಣೆಯು ನಡಿಸಲ್ಪಡುವುದರಿಂದ ಇವರು ಕಾಣೆಯಾಗಿರುವರೆಂತಲೂ ಇನ್ನು ಕೆಲವರು ಯೋಗಭ್ಯಾಸದಕ್ಕೋಸ್ಕರ ಹಿಮಾಚಲಪರ್ವತದತ್ತಕಡೆಗೆ ಹೋಗಿರುವರೆಂತಲೂ ಇನ್ನು ನಾನಾ ವಿಧವಾಗಿ ಊಹನೆಗಳನ್ನು ಮಾಡುತ್ತಿರುವರು

ಆದರೆ ಈ ವರ್ತಮಾನವು ಹಬ್ಬಿದ ಕೆಲವು ದಿನಗಳಲ್ಲಿ ಪ್ರಕಟವಾದ ಕರ್ಮಯೋಗಿನ್ ಎಂಬ ಪತ್ರದಲ್ಲಿ ಜನರೆಲ್ಲರ ಈ ಊಹನೆಗಳಿಗೆ ಆಧಾರವಿಲ್ಲವೆಂತ ಅರವಿಂದ ಘೋಷರವರು ಪ್ರಕಟಿಸುತ್ತಾರೆ ಘೋಷರವರಿಗೆ ಪೂರ್ಣ ವಿಶ್ರಾಂತಿಯು ಬೇಕಾಗಿರುವುದರಿಂದ ಯಾರೂ ಬಂದು ಇವರನ್ನು ಕೆಲಸ ವಿಷಯಕ್ಕೆ ತೊಂದರೆಗೊಳಿಸದಂತೆ ತನ್ನ ಪತ್ತೆಯನ್ನು ಯಾರಿಗಾದರೂ ಹೇಳಕೂಡದೆಂತಲೂ ತಾವು ನಡಿಸುತ್ತಿರುವ ಪತ್ರಗಳನ್ನು ಸಹಾ ಈ ಉದ್ದೇಶ್ಯದಿಂದ ಬೇರೆಯವರು ನಡಿಸುವಂತೆ ಮಾಡಿರುವರೆಂದಾಗಿಯೂ ತಿಳಿಸಿರುವರು

~~~~~

ಹಿಂದುಸ್ಥಾನದ ಮಾಜಿ ಸರ್ವಸೇನಾಪತಿಗಳಾಗಿದ್ದ ಲಾರ್ಡ ಸರ್ ಪ್ರಭುಗಳ ಸ್ಮರಣಾರ್ಥವಾಗಿ ಅವರ ಪ್ರತಿಮೆಯನ್ನು ಕಲ್ಕತ್ತೆಯಲ್ಲಿ ಸ್ಥಾಪಿಸುವರೆ ಏರ್ಪಡಿಸಿದ ಫಂಡಿನ ಮೊಬಲಗು ಈ ವರೆಗೆ ೬೩೦೦೦ ಸಾವಿರ ರೂ ಜಮಾಯಿಸಲಾಗಿರುವುದು

~~~~~

ಫರೀದಪುರ ಮೈಮಾನಸಿಂಗ ಮತ್ತು ಬ್ಯಾರಿಸಾಲ್ ಜಿಲ್ಲೆಗಳಲ್ಲಿ ರಾಜದ್ರೋಹಪರವಾದ ಸಭೆಗಳ ಕಾನೂನು ಜಾರಿಯಲ್ಲಿರುವುದೆಂದು ಪ್ರಕಟಿಸೋಣಾದ್ದರಿಂದ ಈ ಜಿಲ್ಲೆಗಳಲ್ಲಿ ನಡೆತಕ್ಕಿರುವ ಡಿಸ್ಟ್ರಿಕ್ಟ ಕಾನಫರೆನ್ಸಗಳ ಕಾರ್ಯನಿರ್ವಾಹಕರಿಗೆ ಇದರಿಂದ ಬಹಳ ವಿಷಾದ ಉಂಟಾಗಿರುವುದು ಕಾನ್ಫರನ್ಸಿನ ಅಧಿಕಾರಿಗಳು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿರುವರು

~~~~~

ಮುಂಬಯಿಯಲ್ಲಿ ಇದ್ದ ದೊಡ್ಡ ಮಹಮ್ಮದೀಯ ಸಾಹುಕಾರರು ತೋಪಖಾನೆ ... ಸ್ತ್ರೀಗಳ ಗಾಡಿಗಳನ್ನು ಅವರ ಕರಕರೆ ಹುಟ್ಟಿಸುವ ರೀತಿಯಲ್ಲಿ ಹಿಂಬಾಲಿಸುತ್ತಿರುವುದರಿಂದ ಯೋಪಣಿ ಮೇಲೆ ನಮ್ಮೂರಿಗೆ ಬಂದವರಂತಾದಂತೆ ಇವರಿಂದ ಜಾಮೀನು ಪಡಿಯುವ ವ್ಯವಹರಣೆಯನ್ನು ಇವರ ಮೇಲೆ ನಡಿಸಲಿಕ್ಕೆ ಈ ಮಹಮ್ಮದೀಯ ಸಾಹುಕಾರರು ಮುಂಬಯಿಯ ನಾಲ್ಕನೇ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರವರು ತಮ್ಮ ಮುಂದೆ ಹಾಜರಾಗುವರೆ ನೋಟೀಸು ಕಳುಹಿಸಿದ್ದಾರೆ

~~~~~

ಪೂನೆಯ ಎಂದಿನ ಜಗದ್ಗುರು ಶ್ರೀ ಸ್ವಾಮಿಗಳವರು ಮಹಮ್ಮದೀಯರ ನಾಯಕರಿಂದ ಆಗಾಖಾನರವರ ವಿನಂತಿ ಪತ್ರಣೆಯಾಗಿ ಶ್ರೀ ಸ್ವಾಮಿಗಳವರು ಪೂನೆಯಲ್ಲಿ ಮಹಮ್ಮದೀಯರ ಮಹಾಸಭೆಯಲ್ಲಿ ಕೂಡಿರುವ ಪ್ರಜಾಮುಂದಾಳುಗಳನ್ನು ಆಶೀರ್ವದಿಸಿ ಹಿಂದೂ ಮಹಮ್ಮದೀಯರೊಳಗ ಪರಸ್ಪರ ಮೈತ್ರಿಯನ್ನು ಬಯಸಿ ಮಹಮ್ಮದೀಯರ ವಿದ್ಯಾವ್ಯಾಸಂಗದಲ್ಲಿ ಸಹಕಾರವನ್ನೀಯುವ ಭರವಸೆ ಕೊಟ್ಟರು

~~~~~

ಮೈಮಾನಸಿಂಗ್, ಫರಿದಪುರ ಮತ್ತು ಬ್ಯಾರಿಸಾಲ್ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಕೊನ್ಫರೆನ್ಸ್ ಸಭೆಗಳಿಗೆ ಪ್ರಾಪ್ತವಾದ ಅಭ್ಯಂತರವನ್ನು ಕುರಿತು ಪ್ರಸ್ತಾಪಿಸಿದೆವಲ್ಲ. ಈ ಡಿಸ್ಟ್ರಿಕ್ಟ್ ಸಭೆಗಳಲ್ಲಿ, ಮೈಮಾನಸಿಂಗದಲ್ಲಿ ನೆರೆಯವಂಥಾದಕ್ಕೆ ಬಾಬುಕೃಷ್ಣ ಕುಮಾರಮಿತ್ರರವರೂ, ಬ್ಯಾರಿಸಲ್‌ನಲ್ಲಿ [illegible]

[illegible] ದತ್ತ ಮತ್ತು ಕೃಷ್ಣಕುಮಾರಮಿತ್ರರವರು [illegible] ಗಡಿಪಾರು ಬಂದದ್ದರಿಂದ [illegible]

~~~~~

ಈ ತಿಂಗಳ ತಾರೀಕು ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ೨೪,೫೦೦ ಜನರಿಗೆ ಪ್ಲೇಗು ತಗಲಿ ೨೦,೯೨೬ ಜನರು ಮೃತಪಟ್ಟಿರುವರು. ಇದರಲ್ಲಿ ಮುಂಬಯಿ ಸಂಸ್ಥಾನದಲ್ಲಿ ೧೧೦೦೫, ಬಂಗಾಳದಲ್ಲಿ ೩೦೭೭, ಮದ್ರಾಸು ಸಂಸ್ಥಾನದಲ್ಲಿ ೧೮, ಯುನೈಟೆಡ್ ಪ್ರೊವಿನ್ಸುಗಳಲ್ಲಿ ೮೭೯೨, ಪಂಜಾಬಿನಲ್ಲಿ ೬೫೦೨, ಬರ್ಮದಲ್ಲಿ ೩೦೭, ಮಧ್ಯಸಂಸ್ಥಾನಗಳಲ್ಲಿ ೧೦೯೫. ಈ ರೀತಿ ಮರಣಗಳು ಸಂಭವಿಸಿರುವವು

~~~~~

ಪೇಷಾವರ ಬಳಿ ಬುದ್ಧನ ಅಸ್ತಿಗಳು ಸಿಕ್ಕಿದ ಸ್ಥಳವು ಮಹಮ್ಮದೀಯರ ಅನುಭೋಗದಲ್ಲಿರುವುದು. ಇಲ್ಲಿ ಸಿಕ್ಕಿದ ಅಸ್ತಿಗಳಲ್ಲಿ ಸಮ ಅರ್ಧಪಾಲು ತಮಗೆ ದೊರಕಬೇಕೆಂದು ಪೇಷಾವರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಈ ಮಹಮ್ಮದೀಯರು ದಾವೆ ತಂದಿದ್ದರು ಆದರೆ ಇವರ ದಾವೆಯು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಂದ ನಿರಾಕರಿಸಲ್ಪಟ್ಟಿರುವುದು ಹೈಕೋರ್ಟಿಗೆ ಈ ಬಗ್ಗೆ ಅಪೀಲು ನಡಿಯುವುದಂತೆ ತಮ್ಮ ಸ್ವಂತ ಖರ್ಚಿನಿಂದಲೇ ಈ ಮಹಮ್ಮದೀಯ ಗೃಹಸ್ಥರು ಈ ಅಸ್ತಿಗಳು ಸಿಕ್ಕಿದಂಥಾ ಸ್ಥಳದಲ್ಲಿ ಒಂದು ಸಣ್ಣ ದೇವಸ್ಥಾನವನ್ನು ಕಟ್ಟಿಸುವ ಇರಾಧೆಯಲ್ಲಿರುವರಾಗಿ ತಿಳಿದುಬರುತ್ತದೆ

~~~~~

ವ್ಯಾಸರಾಯ ಪ್ರಬುಗಳ ಸಭೆಯಲ್ಲಿ ಬಾಬು ಭುಪೇಂದ ನಾಥ ಬೋಸರವರು ಪೇಷಾವರ ಬಳಿ ಸಿಕ್ಕಿರುವ ಬುದ್ಧನ ಅಸ್ತಿಗಳನ್ನು ಬರ್ಮಾ ಸರಕಾರದವರಿಗೆ ಕೊಡುವರೆ ಇಂಡಿಯಾ ಗವರ್ನಮೆಂಟಿನವರ ನಿರ್ಣಯದ ಕುರಿತು ಸರಕಾರದವರನ್ನು ಕೇಳುವವರಾದರು ಈ ಅಸ್ತಿಗಳನ್ನು ಹಿಂದುಸ್ಥಾನದಲ್ಲಿಯೇ ಇರಿಸಬೇಕಾಗಿ ಪ್ರಜಾಅಭಿಪ್ರಾಯವಿತ್ತು ಬರ್ಮಾ ಸರಕಾರಕ್ಕಲ್ಲ, ಬರ್ಮಾ ದೇಶದಿಂದ ಬಂದಿರುವ ಬುದ್ಧಮತ ಪ್ರತಿನಿಧಿಗಳಿಗೆ ಇವುಗಳು ಕೊಡೋಣಾಗುವವೆಂದು ಸರಕಾರದವರು ತಿಳಿಸುವವರಾದರು ಬರ್ಮಾ ದೇಶವು ಬುದ್ಧಮತಸ್ಥರ ದೇಶವಾಗಿರುವುದರಿಂದ ಸರಕಾರದವರು ಈ ಅಸ್ತಿಗಳನ್ನು ಬರ್ಮೀಯರಿಗೆ ಕೊಡಬೇಕೆಂದು ನಿರ್ಣಯಿಸಿರುವರು

~~~~~

ಮುಂಬಯಿ ಗವರ್ನರರವರ ಕಾರ್ಯನಿರ್ವಾಹ ಸಭೆಗೆ ಬಹುಮಾನಪಟ್ಟ ಮಿ ಎಮ್ ಬಿ ಚೌಬಾಲ್ ಎಂಬವರನ್ನು ನೇಮಿಸಿದ್ದರಿಂದ ಉಂಟಾದ ಪ್ರಜಾಸಂತುಷ್ಟಿಯನ್ನು ಯಾವ ರೀತಿಯಲ್ಲಿ ಪ್ರದರ್ಶಿಸಬೇಕೆಂದನ್ನು ಆಲೋಚಿಸಲಿಕ್ಕೆ ಸರ್ ಜಾಮಸೇಟಜಿ, ಸರ್ ಆದಾಮಜಿ, ಸರ್ ವಿಠಲದಾಸ, ಸರ್ ಡೋರಾಬ ಟಾಟಾ, ಸರ್ ಕರೀಮ್ ಭಾಯಿ ಮೊದಲಾದ ಪ್ರಜಾನಾಯಕರ ಸಭೆ ಕೂಡಿತು

~~~~~

ಹಿಂದುಸ್ಥಾನದ ಕೆಲವು ಪ್ರಾಂತ್ಯಗಳಲ್ಲಿ 'ರೈಲ್ವೆ'ಗಳನ್ನು ನಡಿಸುತ್ತಿರುವ ನೊರ್ತ್‌ವೆಸ್ಟ್ ರೈಲ್ವೆ ಕಂಪೆನಿಯವರು ಕೆಲವು ವರ್ತಮಾನಪತ್ರಗಳನ್ನು ರೈಲ್ವೆಬಂಡಿಗಳಲ್ಲಿ ತಕ್ಕೊಳ್ಳಕೂಡದೆಂಬದಾಗಿ ತಮ್ಮ ನೌಕರರೆಲ್ಲರಿಗೂ ಆಜ್ಞಾಪಿಸಿರುವರು ಕಂಪೆನಿಯವರು ಬಹಿಷ್ಕರಿಸಿದ ಪತ್ರಗಳು ಬಹಳ ಆಗಿರುತ್ತವೆ ಅವುಗಳಲ್ಲಿ ಅಮೃತಬಜಾರ ಪತ್ರಿಕಾ, ಬಂಗಬಾಸಿ, ಹಿತವಾದಿ, ಈ ಮೂರರ ಹೊರತು ಬಾಕಿ ಎಲ್ಲವುಗಳು ಗುಜರಾತಿ ಮತ್ತು ಮರಾಠಿ ಪತ್ರಗಳಾಗಿರುತ್ತವೆ

~~~~~

ಲಾಹೋರಿನಲ್ಲಿ ಮಹಮ್ಮದೀಯ ಮತವನ್ನು ಬಿಟ್ಟು ಹಿಂದೂ ಮತವನ್ನು ಸೇರಿದವನೊಬ್ಬನು ಮುಖ್ಯವಾಗಿ ಮತ ಸಮ್ಮಂಧವಾದ ವಿಷಯಗಳನ್ನೇ ಪ್ರಸ್ತಾಪಿಸಿ [illegible] ಒಂದು [illegible]

[illegible] ಮುದ್ರಣಾಲಯದಲ್ಲಿ [illegible] ತನ್ನ ಪತ್ರದ ಬಗ್ಗೆ ಸ್ವಂತ ಒಂದು ಛಾಪಖಾನೆಯನ್ನಿಡಲಿಕ್ಕೆ ಅನುಜ್ಞೆಯನ್ನು ಕೇಳಿ ಸ್ಥಳೀಕ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಅರ್ಜಿ ಮಾಡಿದ್ದಲ್ಲಿ ಇಂಥಾ ಛಾಪಖಾನೆಗಳಿಗೆ ಸಹಾ ನವೀನ ಮುದ್ರಣಾಲಯಗಳ ಶಾಸನ ಪ್ರಕಾರ ರೂ. ೫೦೦ ರೇವಣಾತಿಯನ್ನು ಜಾಮೀನ್ದಾರಿಯಾಗಿಡಬೇಕಾಗಿ ಆಜ್ಞಾಪಿಸಿರುವರಂತೆ. ಬಂಗಾಳಿ ಚಿತ್ರಿಕನೊಬ್ಬನಿಗೆ ಒಂದು ಚಿತ್ರಗಳನ್ನು ಛಾಪಿಸುವ ಛಾಪಾಯಂತ್ರವನ್ನಿಡಲಿಕ್ಕೆ ಸಹಾ ೧೦೦೦ ರೂಪಾಯಿಗಳ ಜಾಮೀನು ಕೊಡಬೇಕಾಯಿತಂತೆ.

ವರ್ತಮಾನ ಪತ್ರಗಳ ನವೀನ ಕಾನೂನುಗಳ ಪ್ರಕಾರ ಮುಂಬಯಿಯಲ್ಲಿ ಪ್ರಕಟವಾಗುತ್ತಿರುವ 'ರಾಷ್ಟ್ರಮತ್' ಎಂಬ ಮರಾಟಿ ವರ್ತಮಾನ ಪತ್ರಿಕೆಯಿಂದ ರೂಪಾಯಿ ೫೦೦೦ದ ಜಾಮೀನನ್ನು ಮುಂಬಯಿ ಸರಕಾರದವರು ಕೇಳಿರುವರು.

ಕಳೆದ ದಶಂಬರ ತಿಂಗಳ ಯಾವದೊ ಒಂದು ಸಂಚಿಕೆಯಲ್ಲಿ ದಶಾವತಾರದ ಆಟಗಳ ಕುರಿತು ಯಾರೋ [illegible] ವಿರೋಧಗಳನ್ನು ಬರೆದಿದ್ದಂತೆ ನೆನಪಾಗುತ್ತದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಈ ದಶಾವತಾರದ ಆಟಗಳು ಉತ್ತರ ಹಿಂದುಸ್ಥಾನ, ಪಂಜಾಬು ಪ್ರಾಂತ್ಯಗಳಲ್ಲಿ ಸಹಾ ಬೈಲುಗಳಲ್ಲಿ ಬಹಿರಂಗವಾಗಿ ರಂಗಸ್ಥಳವನ್ನು ಅಲಂಕರಿಸಿ ಸುತ್ತುಮುತ್ತಲೂ ಜನರು ಕೂಡಿರುವಂತೆ ಅನುಕೂಲಿಸಿ ದಶಾವತಾರದ ಲೀಲೆಗಳನ್ನು ವರ್ಣಿಸಿ ಜನರ ಮನಸ್ಸನ್ನೂ ಪಾಪಕ್ಕೆ ದೂರವಾಗುವಂತೆಯೂ ನೀತಿಯಿಂದ ಯುಕ್ತ ಮಾರ್ಗವನ್ನನುಸರಿಸುವಂತೆಯೂ ಮಾಡುವ ಉದ್ದೇಶದ ಆಟಗಳು ಆಗುತ್ತವೆ ಕನ್ನಡ ಜಿಲ್ಲೆಯಲ್ಲಿ ಆಗುವಂತೆಯೇ ಇವರು ಸಹ ಹಿಂದಿ ಭಾಷೆಯಲ್ಲಿ ಪದಗಳನ್ನು ಹಾಡಿ ಅದರ ಅರ್ಥವನ್ನು ಸಹಾ ವೇಷಧಾರಿಗಳು ಹಿಂದೀ ಭಾಷೆಯಲ್ಲಿಯೇ ಆಡುತ್ತಾರೆ ದಿನಾಲೂ ಸಾವಿರಾರು ಜನರು ಈ ಆಟವನ್ನು ನೋಡಲಿಕ್ಕೆ ಬರುತ್ತಾರೆ. *B S R*

ಸ್ವದೇಶಿ ಕಂಪೆನಿಯ ಸ್ಟೀಮರು (ಉಗಿ ಹಡಗು) ಪ್ರಕೃತ ಇಲ್ಲಿಂದ ಗೋವೆಯ ತನಕ ಹಪ್ತೆಗೆ ಎರಡಾವರ್ತಿ ಹೋಗಲಿಕ್ಕೆ ಮತ್ತು ತಿರಿಗಿ ಬರಲಿಕ್ಕೆ ಪ್ರಾರಂಭವಾಗಿಯದೆ. ಒಟ್ಟಿಗೆ ೩ ಕಂಪೆನಿಯವರು ಇಲ್ಲಿಂದ ಗೋವೆಯ ವರೆಗೆ ಸ್ಟೀಮರುಗಳನ್ನು ನಡಿಸುತ್ತಾರೆ ೧ ಮುಂಬಯಿ ಸ್ಟೀಮ್ ನೆವಿಗೆಶನ್ ಕಂಪೆನಿ ೨ ವಾರ್ಡನ್ ಸ್ಟೀಮ್ ನೆವಿಗೇಶನ್ ಕಂಪೆನಿ ೩ ಈಗಲೇ ಕೆಲಸ ನಡಿಸಲಿಕ್ಕೆ ಶುರುಮಾಡಿದ ದಿ ಇಂಡಿಯನ್ ಕೋಆಪರೇಟಿವ್ ಸ್ಟೀಮ್ ನೆವಿಗೇಶನ್ ಎಂಡ್ ಟ್ರೇಡಿಂಗ್ ಕಂಪನಿ ಲಿಮಿಟೆಡ್ ಇದೇ ಕಂಪೆನಿಯವರು ಸದ್ಯದಲ್ಲಿ ಬೇರೆ ೩ ಸ್ಟೀಮರುಗಳನ್ನು ತರಿಸಿ ಮಂಗಳೂರು ತನಕ ನಡಿಸುವ ಆಲೋಚನೆಯಲ್ಲಿದ್ದಾರಾಗಿ ನಿಜವಾಗಿ ತಿಳಿಯುತ್ತದೆ ಪ್ರಯಾಣಿಕರಿಗೆ ಬಹಳ ಅನುಕೂಲತೆಗಳು ಇಟ್ಟಿರುತ್ತಾರೆ. ಸ್ವದೇಶಿ ಸ್ಟೀಮರು ವಿಪಾರ್ಟುಗಳಲ್ಲಿ ಈ ಪಶ್ಚಿಮ ಕಿನಾರೆಯಲ್ಲಿ ಇದೊಂದೇ ಪ್ರಥಮ ಪ್ರಯತ್ನವು. *B S R*

ನಾಸಿಕ ಕಲ್ಲೆಕ್ಟರರ ಕೊಲೆಯ ಮೊಕದಮೆಯು ೩ ಜನ ನ್ಯಾಯಾಧಿಪತಿಗಳು ತನಖಿಮಾಡುತ್ತಾರೆ. ಇತರ ಮೊಕದ್ದಮೆಗಳಂತೆ ಇದನ್ನು ನೋಡಲಿಕ್ಕೆ ಅನಾವಶ್ಯಕ ಜನರಿಗೆ ಎಡೆ ಇಲ್ಲ. ಹ್ಯಾಕೋರ್ಟಿನ ಸುತ್ತಲೂ ಕಠಿಣ ಬಂದೋಬಸ್ತು ಅದೆ. ಬಂದಿವಾನರನ್ನು ತರುವಾಗಲೂ ಕೊಂಡು ಹೋಗುವಾಗಲೂ ಹ್ಯಾಕೋರ್ಟಿನ ಎದುರಿರುವ ರಸ್ತೆಯಲ್ಲಿ ಯಾರಾ ಅಡ್ಡಾಡಲಿಕ್ಕೆ ಬಿಡುವದಿಲ್ಲ. *B.S.R.*

[illegible]

[illegible] ಯೇ ಮೃತಪಟ್ಟಿರುವರಾಗಿ ತಿಳಿಯುತ್ತೇವೆ.

ಮುಂಬಯಿಯಲ್ಲಿ ಈ ತಿಂಗಳ ತಾ. ೨೧ರಲ್ಲಿ ದಾಮೋದರದಾಸ ಲಕ್ಷ್ಮೀದಾಸ ಖೀಮ್ಜಿಯವರ ವಿಧವೆಯಾದ ಬಾಯಿ ಜಮುನಾಬಾಯಿಯವರನ್ನು ಅವರ ಬಂಗ್ಲೆಯಲ್ಲಿಯೇ ಕುತ್ತಿಗೆ ಹಿಸಕಿ ಕೊಂದಿರುವರು ಅಪರಾಧಿಗಳು ಯಾರೆಂತ ತಿಳಿಯಲಿಲ್ಲ. ಪೊಲೀಸು ತನಖಿಯು ನಡಿಯುತ್ತಿರುವುದು

ಹಿಂದೂ ಬೌದ್ಧರ ಮಧ್ಯದಲ್ಲಿ ವಿಶ್ವಾಸಸಾಧನ.

ಹಂಪೆಯ ಶ್ರೀ ಶಂಕರಾಚಾರ್ಯ ಮಠದ ಈಗಿನ ಸ್ವಾಮಿಗಳು ಶ್ರೀಮತ್ ವ್ಯಾಸರಾಯರಿಗೆ ತಂತೀ ವಾರ್ತೆಯನ್ನು ಕೊಟ್ಟು, ಈಗ ಭರತ ಖಂಡಕ್ಕೆ ಒಂದಿರುವ ಬೌದ್ಧ ಜಗದ್ಗುರುವಾದ ದಲಾಯಿಲಾಮಾರವರೊಡನೆ ತಾವು ಮತ ವಿಷಯವಾಗಿ ಪ್ರಸ್ತಾಪಿಸಬೇಕಾಗಿರುವುದೆಂದೂ, ಬೌದ್ಧರಿಗೂ ಹಿಂದುಗಳಿಗೂ ಮತವಿಷಯಕವಾಗಿ ಇರುವ ಮನಸ್ತಾಪವನ್ನು ಶಾಂತಿಗೊಳಿಸುವ ಉದ್ದೇಶವು ತಮಗಿರುವುದೆಂದೂ ರಾಜಕೀಯ ವಿಷಯವಾವುದೂ ಪ್ರಸ್ತಾಪಿಸಲ್ಪಡುವುದಿಲ್ಲವೆಂದೂ, ಆದಕ್ಕಾಗಿ ಅವರೊಡನೆ ಸಂಭಾಷಿಸುವುದಕ್ಕೆ ತಮಗೆ ಅವಕಾಶವನ್ನುಂಟುಮಾಡಿಕೊಡಬೇಕೆಂದೂ ಇವರು ಅವರಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ ಈ ಉದ್ದೇಶವು ಪ್ರಶಸ್ತವಾದುದೇ ಸರಿ ಆದರೆ ಬೌದ್ಧಮತದ ಗುರುವನ್ನು ಕಂಡು ಮಾತನಾಡುವದರಿಂದ, ಈ ಉದ್ದೇಶ ಸಾಧನವು ಹೇಗಾಗುವುದೆಂಬದು ತಿಳಿಯದಿಲ್ಲ ಅಲ್ಲದೆ ಈಗ ಆ ಈ ಮತಗಳ ಮಧ್ಯೆ ಮನಸ್ತಾಪದ ವಿಘಾತಗಳು ಸಂಭವಿಸುತ್ತಿರುವುದು ಕೂಡ ಎಲ್ಲಾ ದೃಷ್ಟಿಗೋಚರವಾಗಿಲ್ಲ ಮತ್ತೇನೆಂದರೆ—ಬೌದ್ಧಮತದ ಉದಾತ್ತ ತತ್ವಗಳು ಈಚೆಗೆ ಜಗತ್ತಿಗೆಲ್ಲಾ ಗೋಚರವಾಗುತ್ತ ಅದರ ವಿಷಯದಲ್ಲಿ ಇತರ ಮತಸ್ಥರಿಗೆಲ್ಲಾ ಶ್ರದ್ಧೆಯು ಒಲಗೊಳ್ಳುತ್ತಲಿದೆ ಬೌದ್ಧಮತವು ದ್ವೇಷಿಸಲ್ಪಡತಕ್ಕದ್ದಾಗಿಲ್ಲವೆಂಬುದು ಈ ಸ್ವಾಮಿಗಳ ಅಭಿಪ್ರಾಯವಾಗಿದ್ದರೆ, ಅದರ ಸಮೀಚೀನತೆಯನ್ನು ಕುರಿತು ತಮ್ಮ ಮತದ ಜನರಲ್ಲೇ ಬೋಧಿಸಿ, ಆ ಬೌದ್ಧಮತದ ವಿಷಯದಲ್ಲಿ ಅವಿಚಾರದಿಂದ ಹುಟ್ಟಿರುವ ದ್ವೇಷಬುದ್ಧಿಯನ್ನು ಕುಗ್ಗಿಸಿದರೆ, ಇವರ ಉದ್ದೇಶವು ಸಫಲವಾಗಬಹುದು ಮೈ. ಸ್ಟಾ

ದಕ್ಷಿಣ ಹಿಂದುಸ್ಥಾನ.

ಮದ್ರಾಸು ಗವರ್ನರ ದೊರೆಗಳವರು ತಮಗೆ ಕೆಲವು ದಿನಗಳ ಹಿಂದೆ ತಗಲಿರುವ ದೇಹಜಾಡ್ಯದಿಂದ ಆರೋಗ್ಯ ಹೊಂದುತ್ತಿರುವರೆಂಬದನ್ನು ತಿಳಿಸಲು ಸಂತೋಷಪಡುತ್ತೇವೆ

ಮದ್ರಾಸು ಬೇಂಕಿಗೆ ಸೆಕ್ರೆಟರಿ ಮತ್ತು ಟ್ರೆಜರರರಾಗಿದ್ದ ಬಹುಮಾನಪಟ್ಟ ಮೆ ಡಬ್ಲ್ಯು ಬಿ ಹಂಟರರವರು ಒಂದು ವರುಷದ ರಜೆ ಪಡಕೊಂಡು ಈ ತಿಂಗಳ ೨೮ನೇ ತಾರೀಕಿನಲ್ಲಿ ವಿಲಾಯತಿಗೆ ತೆರಳಿ ಹೋಗುವರು ಇವರ ಬದಲಿಗೆ ಸೆಕ್ರೆಟರಿಯಾಗಿ ಮೆ ಜಿ. ಡಬ್ಲ್ಯು ಬ್ಲೇಕರವರು ನೇಮಕಪಟ್ಟಿರುವರು. ಮದ್ರಾಸು ನ್ಯಾಯವಿಧಾಯಕ ಸಭೆಗೆ ಇವರು ಮದ್ರಾಸು ಚೇಂಬರಿನ ಪ್ರತಿನಿಧಿಗಳಾಗಿರುವುದರಿಂದಲೂ ಇವರು ಈ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವುದರಿಂದಲೂ ಮದ್ರಾಸು ಚೇಂಬರಿನವರು ಇನ್ನು ಸದ್ಯದಲ್ಲಿಯೇ ತಮ್ಮ ಪೈಕಿ ಒಬ್ಬರನ್ನು ನ್ಯಾಯವಿಧಾಯಕ ಸಭೆಯ ಮೆಂಬರನಾಗಿ ಆರಿಸಬೇಕಾಗಿರುತ್ತದೆ.

ಬರುವ ಎಪ್ರಿಲ್ ತಿಂಗಳ ತಾ. ೫ರಲ್ಲಿ ಕೂಡುವ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಈ ಕೆಳಗಿನ ಎರಡು [illegible]

[illegible] ಇದ್ದಂತೆಯೇ [illegible] ಅವುಗಳನ್ನು ಹೆಚ್ಚಿಸಕೂಡದೆಂತಲೂ, (೨) ಮುನಿಸಿಪಾಲಿಟಿಗಳಿಗೆ ಶೇಂದಿ ಮತ್ತು ಸರಾಯಿ ಮಾರಾಟದ ಅಂಗಡಿಗಳ [illegible] ಸ್ಥಾನ್ಯಗಳನ್ನು ನಿರ್ಣಯಿಸುವ ಅಧಿಕಾರವನ್ನು ಮುನಿಸಿಪಲ್ ಕೌನ್ಸಿಲುಗಳಿಗೆ ಕೊಡಬೇಕೆಂತಲೂ, ಸಂತೆಗಳು ಕೂಡುವಲ್ಲಿಯೂ, ಜಾತ್ರೆಗಳ ಸಮಯದಲ್ಲಿಯೂ ಸ್ಪೆಶ್ಯಲ್ ಲೈಸನ್ಸುಗಳನ್ನು ಕೊಡಬಾರದೆಂದೀ ಎರಡು ನಿರ್ಣಯಗಳು ಸಭೆ ಮುಂದಿಡಲಾಗುವವು.

ಮದ್ರಾಸಿನಲ್ಲಿ ಇತ್ತಲಾಗೆ ಸ್ಥಾಪಿಸಲ್ಪಟ್ಟ ಗಾಜಿನ ಕಾರಖಾನೆಯ ಸಹಾಯಾರ್ಥವಾಗಿ ಮದ್ರಾಸು ಸರಕಾರದವರು ೭,೫೦೦ ಟನ್‌ಗಳಿಗೆ ಮೀರದ ಸೌದೆಯನ್ನು ಎರಡು ವರುಷಗಳ ತನಕ ಕಡಪಾಜಿಲ್ಲೆಯ ಕೋಡೂರಿನ ಹತ್ತರವಿರುವ ಸುರಕ್ಷಿತ ಕಾಡಿನಿಂದ ಕಡಿಸಿ ವಯ್ಯಬಹುದಾಗಿ ಅಪ್ಪಣೆಕೊಟ್ಟಿರುವರು. ಸ್ವದೇಶಿ ಕೈಕಾರಿಕೆಗಳಿಗೆ ಸರಕಾರದವರು ಹೀಗೆ ಸಹಾಯಮಾಡುವಂಥಾದ್ದು ಬಹಳ ಸ್ತುತ್ಯವಾಗಿರುವುದು

ಹಾಸನ ಡಿ ಶ್ರವಣಬೆಳಗುಳದಲ್ಲಿ ಸುಪ್ರಸಿದ್ಧವಾಗಿರುವ ಶ್ರೀ ಗೋಮಟೇಶ್ವರಸ್ವಾಮಿಯ ಮಹಾ ಮಸ್ತಕಾಭಿಷೇಕ ಮಹೋತ್ಸವ ಸಂಬಂದವಾದ ಕಾರ್ಯಗಳೂ ತದಿತರಕಾರ್ಯಗಳೂ ತಾ. ೧೦ರಿಂದ ಆರಂಭಗೊಂಡು ಈ ತಾ. ೩೦ರಲ್ಲಿ ಗೋಮಟೇಶ್ವರಸ್ವಾಮಿಯವರಿಗೆ ೧೦೮ರ ಕುಂಭಾಭಿಷೇಕವು ನಡೆಯುವುದು ಇದೇ ಸಮಯದಲ್ಲಿ "೧೫ನೇ ಶ್ರೀಮತ್ ಭಾರತವರ್ಷೀಯ ದಿಗಂಬರ ಜೈನ ಮಹಾಸಭೆಯು" ಈ ತಾ ೨೭, ೨೮, ೨೯ ಮತ್ತು ೩೦ರಲ್ಲಿ ಮುಂಬಾಯಿಯ ಪ್ರಸಿದ್ಧ ವರ್ತಕರಾದ ದಾನವೀರ ಜೈನ ಕುಲ ಭೂಷಣ ಜವೇರಿ ಮಾಣಿಕ ಚಂದ್ ಹೀರಾಚಂದ್ ಸೇಟ್ಜಿ ಜೆ ಪಿ ಯವರ ಅಧ್ಯಕ್ಷತೆಯಲ್ಲಿ ಕೂಡುವುದು. ಈ ಸಭೆಯ ಸತ್ಕಾರಕ ಸಂಘಾಧ್ಯಕ್ಷರಾದ ಮ ರಾ. ಶ್ರೀಮಂತ ಮೋತಿಖಾನೆ ಅನಂತರಾಜಯ್ಯನವರು ನಿಮಂತ್ರಣ ಪತ್ರಿಕೆಗಳನ್ನು ಸರಕಾರಿ ಅಧಿಕಾರಿಗಳಿಗೂ, ಅರಸು ಮಕ್ಕಳಿಗೂ ಇತರ ದೊಡ್ಡ ಮನುಷ್ಯರಿಗೂ ಕಳುಹಿಸಿಕೊಟ್ಟಿರುವರು ಕಲ್ಕತ್ತಾ, ಕಾಶಿ, ಮುಂಬಯಿ, ಅಯೋಧ್ಯ ಮೊದಲಾದ ದೂರ ದೇಶಗಳಿಂದ ಸಾವಿರಾರು ಜನ ಶ್ರೀಮಂತರು ಮೊದಲಾದವರು ಬರುತ್ತಾರಾದುದರಿಂದ ಇವರುಗಳ ಅಶನವಸತಿಗಳಿಗೆ ಸತ್ಕಾರಕ ಸಂಘದವರು ತಕ್ಕ ಏರ್ಪಾಟನ್ನಿಟ್ಟಿರುವರು ಈ ಸತ್ಕಾರಕ ಸಂಘಕ್ಕೆ ಮೆ. ಅನಂತರಾಜಯ್ಯನವರು ಅಧ್ಯಕ್ಷರಾಗಿಯೂ, ಇವರ ಅಣ್ಣನವರ ಮಕ್ಕಳಾದ ಮ ರಾ ಎಂ. ಎಲ್ ವರ್ಧಮಾನಯ್ಯನವರು ಸೆಕ್ರೆಟೆರಿಗಳಾಗಿಯೂ ಇವರೀರ್ವರೂ ಕಾರ್ಯದಕ್ಷರೂ ಪೂರ್ಣಾಭಿಮಾನಿಗಳೂ ಆಗಿರುವುದರಿಂದ ಮಹಾಸಭಾಕಾರ್ಯವೆಲ್ಲವೂ ಸಮರ್ಪಕವಾಗಿ ನಡೆಯುವದೆಂಬಲ್ಲಿ ಸಂದೇಹವಿಲ್ಲವು. ಈ ಮಹೋತ್ಸವವನ್ನೂ, ಸಭೆಯನ್ನೂ ನೋಡಲು ಲೆ ಕರ್ನಲ್ ದೇಶರಾಜ ಅರಸಿನವರು ಪ್ರೊ. ಇ ಜನರಲ್ ಮೆ. ದೇವರಾಜ ಅರಸಿನವರು ಮತ್ತು ಕೆಲ್ಲ ಅರಸು ಮಕ್ಕಳು ದಯಮಾಡಿಸುವುದಾಗಿ ಕೇಳುತ್ತೇವೆ. ಈ ಉತ್ಸವ ಕಾಲದಲ್ಲಿ ಯಾವುದೊಂದು ಗದ್ದಲವೂ ನಡೆಯದಂತೆ ನೋಡಿಕೊಳ್ಳುವುದಕ್ಕಾಗಿ ಹಾಸನ ಡಿ. ಡ. ಕಮಿಷನರು, ಪೊ ಸುಪರಿಂಟೆಂಡೆಂಟರು, ಪೊ. ಇ. ಮೆ. ಉಥಾರ್ಟೆಯವರ ಕೈಕೆಳಗೆ ರಿಜರ್ವ ಪೊಲೀಸಿನವರೂ, ಆರೋಗ್ಯ ಕೆಡದಂತೆ ನೋಡಿಕೊಳ್ಳಲು ಡಾಕ್ಟರರೂ ಹೋಗಿರುವರು.

ಶ್ರವಣಬೆಳಗುಳದಲ್ಲಿ ತಂತೀಆಫೀಸು ಇಲ್ಲದೆಯೂ ಇದು ತಂತಿಆಫೀಸಿರುವ ಸ್ಥಳಕ್ಕೆ ೩೦ ಮೈಲಿ ದೂರದಲ್ಲಿರುವುದರಿಂದಲೂ, ರಿಜರ್ವ ಪೊಲೀಸು ಇನ್ಸ್‌ಪೆಕ್ಟರ್ ಮೆ. ಎಡ್ವರ್ಡ್ಸರವರು ಕಾಗದಗಳನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯಲು ಕಲಿಸಿರುವ ಪಾರಿವಾಳದ ಪಕ್ಷಿಗಳು ಪೊಲೀಸಿನವರು [illegible] ಹಲ್ಪಟ್ಟಿದ್ದುವು. ಪರೀಕ್ಷಾರ್ಥವಾಗಿ ಶ್ರವಣಬೆ[redacted] ಘಂಟೆಯಲ್ಲಿ [illegible] ಲ್ಪಡಲು ಅ[redacted] ಮೈಲಿ ದೂರದಲ್ಲಿರುವ ಬೆಂಗ[redacted] [illegible] ಶ್ರವಣಬೆಳಗುಳದ[redacted] [illegible]

ದಕ್ಷಿಣ ಕನ್ನಡ.

ಮಂಗಳೂರು. ಈ ತಿಂಗಳ ತಾ. ೨೦ರಲ್ಲಿ ಮಂಗಳೂರು ಗೌಡಸಾರಸ್ವತ ಬ್ರಾಹ್ಮಣ ಪಂಚಾಯತರು ಪ್ರತಿ ತಿಂಗಳಲ್ಲಿ ಕೂಡುವಂತೆ ಸಭೆಕೂಡಿ ಇದ್ದರು ಸಭಾ ವೃತ್ತಾಂತವನ್ನು ಪರಿಶೀಲಿಸಿದ್ದಲ್ಲಿ ಹೆಚ್ಚು ಕಡಿಮೆ ೪೨ಜನ ಪಂಚಾಯಿತರಲ್ಲಿ ಅಧ್ಯಕ್ಷರು ಕೂಡಿ ೮ಜನ ಪಂಚಾಯಿತರು ಸಭೆಗೆ ಬಂದಿದ್ದರಾಗಿ ಕಂಡುಬರುತ್ತದೆ ಈ ಸಭೆಯಲ್ಲಿ ಮಾಡಿದ ಹಲವು ನಿರ್ಣಯಗಳಲ್ಲಿ ಈ ಕೆಳಗಿನದ್ದನ್ನು ಮಂಗಳೂರ ನಿವಾಸಿಕರಾದ ಗೌಡಸಾರಸ್ವತರೆಲ್ಲರ ಲಕ್ಷ್ಯಕ್ಕೆ ಈ ಮೂಲಕ ಬಹಳ ವಿಷಾದಿಂದ ತರಬೇಕಾಗಿರುವುದು. ವೃತ್ತಿಯಲ್ಲಿರುವ ಪ್ರತಿ ಒಬ್ಬ ಗೌಡಸಾರಸ್ವತನು ತನ್ನ ಆದಾಯದನುಸಾರ ಪಂಚಾಯತ ಸಭೆಗೆ ಆದಾಯ ತೆರಿಗೆಯನ್ನು ಕೊಡುವುದುಂಟು. ಪಂಚಾಯತರ ಸಭೆಯು ಜನ್ಮವೆತ್ತುವ ಮೊದಲು ಈ ಆದಾಯ ತೆರಿಗೆಯನ್ನು ವ್ಯಾಪಾರಸ್ಥರು ಮಾತ್ರ ದೇವಸ್ಥಾನಕ್ಕೆ ಕೊಡುವ ವಾಡಿಕೆ ಇತ್ತು. ದೇವಸ್ಥಾನಗಳ ಇತರ ವಾಡಿಕೆಗಳು ನಡೆದು ಬರುತ್ತಿರುವ ರೀತಿಯಲ್ಲಿಯೇ ಈ ವಾಡಿಕೆಯು ಸಹಾ ಚ್ಯಾರಿಯಲ್ಲಿತ್ತೆಂಬದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ನಂತರ ಪಂಚಾಯಿತರು ಈ ಆದಾಯ ತೆರಿಗೆಗಳನ್ನು ಸಾವಕಾರರಿಂದಲೂ ಇತರ ವೃತ್ತಿಗಳನ್ನನುಸರಿಸುವವರಿಂದಲೂ ವಸೂಲು ಮಾಡಿಕೊಂಡು ಸಂಸ್ಕೃತ ವಿದ್ಯಾಶಾಲಾ, ಕೆನರಾ ಬಾಲಿಕಾ ಪಾಠಶಾಲಾ, ಇವುಗಳನ್ನು ನಡಿಸಿ ಅತಿ ಬಡವರಿಗೆ ಪ್ರೈವೇಟ್ ಕ್ಲಾಸುಗಳಿಗೆ ಬೇಕಾದ ವಿದ್ಯಾರ್ಥಿವೇತನ ಮೊದಲಾದವುಗಳನ್ನು ಸಹಾ ಕೊಡುತ್ತಿದ್ದರು ಕೆಲವು ಸಂದರ್ಭಗಳಲ್ಲಿ ಅನಾಥಪ್ರೇತ ಸಂಸ್ಕಾರದ ಬಗ್ಗೆ ಇತರ ಸಾರ್ವಜನಿಕ ಧರ್ಮಕಾರ್ಯಗಳಿಗೂ ಹೀಗೆ ಪಂಚಾಯತ ಸಭೆಯು ತನ್ನಿಂದಾಗುವ ಸಹಾಯವನ್ನು ಕೊಡುತ್ತಿರುವುದು. ಆದರೆ ಚಂದಾಹಣವು ಕ್ರಮವಾಗಿ ವಸೂಲಾಗುವುದಿಲ್ಲವಾದ್ದರಿಂದ ಸಭೆಯವರ ತಾವು ವಹಿಸಿಕೊಂಡಿರುವ ಕಾರ್ಯಗಳನ್ನು ನಡಿಸುವುದು ಅಸಾಧ್ಯವೆಂತ ತಿಳಿದು, ದೇವಸ್ಥಾನದ ಮೊಕ್ತೇಸರರು ಮೊದಲಿನಂತೆಯೇ ಆದಾಯ ತೆರಿಗೆಗಳನ್ನು ವಸೂಲು ಮಾಡಿ ಪ್ರಥಮತಃ ಸಂಸ್ಕೃತ ಶಾಲೆಯನ್ನು ನಂತರದಲ್ಲಿ ಬಾಲಿಕಾ ಪಾಠಶಾಲೆ ಮೊದಲಾದವುಗಳನ್ನು ನಡಿಸಬೇಕಾಗಿ ತಾವು ಅಪೇಕ್ಷಿಸುತ್ತೇವೆ [illegible] ವನ್ನು ಪಂಚಾಯತರು ಮಾಡಿರುವರಂತೆ ಕಾಣುತ್ತದೆ ಈ [illegible] ವು ಜ್ಯಾರಿಗೆ ಬರುವ [illegible] ವಿಲ್ಲವೆಂತ ನಮಗೆ ತೋರುವುದರಿಂದ ಈ ಜಾತಿ [illegible] ಕ್ಕೆ ತಕ್ಕ ಗಮನ ಕೊಡುವುದು [illegible]

ಈ ತಿಂಗಳ ತಾ ೧೮ರಲ್ಲಿ ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜಾದ ಮೆ! ಹಾಡ್ಜಿಂಗರವರು ತಾವು ಈ ಸ್ಥಳದಿಂದ ಇನ್ನು ಸ್ವಲ್ಪ ಕಾಲದಲ್ಲಿಯೇ ವರ್ಗವಾಗಿ ಹೋಗುವುದರಿಂದ ತನ್ನ ಇಷ್ಟಮಿತ್ರರೆಲ್ಲರಿಗೂ ವಿನೋದಾರ್ಥವಾಗಿ ಒಂದು ಗಾರ್ಡನ್ ಪಾರ್ಟಿಯನ್ನು ಕೊಟ್ಟರು

ಮಂಗಳೂರು ಗವರ್ನಮೆಂಟ್ ಕಾಲೇಜಿನ ವಾರ್ಷಿಕ ವರ್ಧಂತಿಯು ಈ ತಿಂಗಳ ತಾ ೧೮ರಲ್ಲಿ ಆಚರಿಸಲ್ಪಟ್ಟಿತು. ಇಲ್ಲಿಯ ಸ್ಯೆಂಟ್ ಎಲೋಸಿಯುಸ್ ಕೊಲೇಜಿನ ಪ್ರಿನ್ಸಿಪಲರಾದ ಘನ ಹೊಂದಿರ ಫಾದರ್ ಪೆರಿನಿ. ಎಸ್ ಜೆ. ಎಫ್. ಎಮ್. ಯು ದೊರೆಗಳವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು

ಮಂಗಳೂರು ತಾಲೂಕು ತಹಸಿಲ್‌ದಾರರ ಕೆಲಸ ನೋಡುತ್ತಿದ್ದ ಮ! ರಾ! ರಾ! ಪಾಂಡುರಂಗ ಕಿಣಿಯವರು ಮಲೆಬಾರಿನ ಜನರಲ್ [illegible] ಲೆಕ್ಟರರವರ ಚೆಕ್ಕಿಂಗ್ ಹುದ್ದೆಗೆ ನೇಮಕ [illegible]. ಇವರ ಬದಲಿಗೆ ಮಂಗಳೂರು ತಹಸಿಲ [illegible] ಗಿ ಮ! ರಾ! ರಾ! ಎಕ್ಕಾರ ರಾಮಕೃಷ್ಣಯ್ಯನ [illegible] ಇವರ ಕಾಸರಗೋಡು ತಹಸಿಲ್‌ದಾರ ಹುದ್ದೆಗೆ [illegible] ಇಂಗ್ಲಿಷ ಹೆಡ್‌ಕ್ಲಾರ್ಕರಾಗಿದ್ದ ಮ! [illegible]

ರಾ. ಬಂಧತ್ಕೂರಿ ರಾಮಚಾರ್ಯರವರು ನೇಮಕವಾಗಿರುವರು. ರಾಮರಾಯರ ಮೇಜಿಸ್ಟ್ರೇಟ್ ಫಡ್ ಮುನ್ಷಿ ಚಾರ್ಜನ್ನು ಮೆ! ಸುಲ್ತಾನ್ ಮೊಹಿದ್ದೀನ್ ಸಾಹೇಬರು ನೋಡುತ್ತಿರುವರು

ಕಾಸರಗೋಡು ಸಬ್‌ಮೆಜಿಸ್ಟ್ರೇಟರಾಗಿದ್ದ ಮೆ! ಎಸ್. ಎಸ್ ಎಸ್ ಸಾಲ್ದಾನರವರಿಗೆ ಕುಂದಾಪುರಕ್ಕೂ ರಾ! ಕೃಷ್ಣಯ್ಯನವರಿಗೆ ಪುತ್ತೂರು ಸಬ್‌ಮೆಜಿಸ್ಟ್ರೇಟ್ ಕೆಲಸಕ್ಕೂ ಪುತ್ತೂರು ಸಬ್‌ಮೆಜಿಸ್ಟ್ರೇಟರಾಗಿದ್ದ ರಾ! ಅಚ್ಯುತಯ್ಯನವರಿಗೆ ಕಾಸರಗೋಡಿಗೂ ವರ್ಗವಾಗಿರುತ್ತದೆ.

ಕುಂದಾಪುರ ಡಿವಿಜನಿನ ಹೆಡ್ ಅಸಿಸ್ಟಾಂಟ್ ಕಲೆಕ್ಟರಾಗಿದ್ದ ಮೆ ಷ್ಟ್ಯಾರ್ ದೊರೆಯವರು ತಮ್ಮ ಚಾರ್ಜನ್ನು ಮಂಗಳೂರು ಡಿವಿಜನಲ್ ಆಫೀಸರ್ ಮ ರಾ ರಾ ನಾರಾಯಣ ಮೇನನರಿಗೆ ನಿನ್ನೆ ದಿನ ಕೊಟ್ಟಿರುವರು ಮೆ ಹೆಮ್ಮಿಂಗ್‌ವೇಯವರು ಬಂದು ಇದನ್ನು ವಹಿಸಿ ಕೊಳ್ಳುವವರೆಗೆ ನಾರಾಯಣ ಮೇನನರೇ ಈ ಕೆಲಸವನ್ನು ನೋಡುತ್ತಿರುವರು

ಮಂಗಳೂರು ಮುನಿಸಿಪಾಲಿಟಿಯಲ್ಲಿ ೩೩ ಸಿಡುಬು ರೋಗದ ಮರಣಗಳೂ ೬ ಪ್ಲೇಗ್ ಮರಣಗಳೂ ಕಳದ ವಾರದಲ್ಲಿದ್ದವು

ಬಡಕಬೈಲು ಇದೇ ತಾ ೧೬ನೇ ಬುಧವಾರ ರಾತ್ರೆ ಮಂಗಳೂರು ತಾಲೂಕಿಗೆ ಸೇರಿದ ಪುಚ್ಚೇರು ಗ್ರಾಮದ ಪಟೇಲ ಇರುವೈಲ್ ಅಪ್ಪ ಶೆಟ್ಟಿ ಯೆಂಬವರನ್ನು ಬಡ ಪುಚ್ಚೇರು ಗ್ರಾಮದ ಗ್ರಾಮಚಾವಡಿಯಾಗಿ ಕಟ್ಟಿದ ತನ್ನ ಸ್ವಂತ ಮನೆಯಲ್ಲಿ ಮಲಗಿಕೊಂಡಿದ್ದಲ್ಲಿಂದ ಕಳ್ಳರು ಕೊಂದು, ಸರಕಾರಕ್ಕೆ ಕೊಡುವದಕ್ಕೋಸ್ಕರ ರೈತರಿಂದ ವಸೂಲು ಮಾಡಿದ ಹಣವನ್ನು ಕೂಡಾ ಸ್ವಾಧೀನ ಮಾಡಿಕೊಂಡಿದ್ದಾರಾಗಿಯೂ ಪೋಲೀಸಿನವರು ವಗೈರೆ ತನಿಕ ನಡಿಸುತ್ತಿದ್ದರಾದರೂ ಈ ವರೇಗೆ ಏನ ಪಕ್ಕೆಯಿಲ್ಲವೆಂತಲೂ ಕೇಳುತ್ತೇವೆ

ಪೂಳ್ ಮಲ್ಲ ಬಗನತಿ ಸೋಮ ಯೆಂಬವಳ ಮನೆಗೆ ಇದೇ ತಾ ೧೪ನೇ ದಿವಸ ಮಧ್ಯಾಹ್ನ ಕಾಲದಲ್ಲಿ ಒಬ್ಬ ಯುವಕನು [illegible] ಮುರಿದು ಒಳಹೊಕ್ಕು ಸೋಮು ಇತ್ತಲಾಗೆ ಕೆಲವು ದಿವಸಗಳ ಮುಂಚೆ ರೂಪಾಯಿ ೧೬ ಕ್ರಯ ಕೊಟ್ಟು ಪಡದ ಗಟ್ಟಿಅಟ್ಟಿಗೆಯನ್ನೂ ಮತ್ತು 2 ಚಿನ್ನದ [illegible] ಯನ್ನೂ ಎತ್ತಿ ಹಾಕಿದನು. ಕೆಲಸಕ್ಕೆ ಹೋಗಿ [illegible] ಬಂದು ನೋಡಿ ಪೆಟ್ಟಿ ಹಾಕಿದ್ದನ್ನು ನೆರಕರೆಯ [illegible] ಸಮೇತ ಪೋಲೀಸ [illegible] ನ ಮೊಕ್ತೇಸರರ [illegible] ಕೊಟ್ಟಿದ್ದ ತನ್ನ [illegible] ಯನ್ನು ತಿಳಿದು ಅವನನ್ನು ವಿಚಾರಿಸ [illegible] ಮರುದಿನ [illegible] ಈ ನಗಗಳನ್ನು [illegible] ತಿಳಿದುದಂತೆ [illegible] ಮನೆಗೆ ತಾರಬೇಕೆಂತ ಕೊಟ್ಟು ಪರಾರಿಯಾಗಿದ್ದಾನೆ ಈ [illegible] ನಗಗಳನ್ನು ಮೊಕ್ತೇಸರರ [illegible] ನಗಗಳನ್ನು ಸೋಮುಗೆ ಕೊಡಬೇಕಾದರೆ 10 ರೂಪಾಯಿ ದೇವರಿಗೆ ಹಾಕಬೇಕೆಂತ ತೀರ್ಮಾನಿಸಿ ಅವಳ ಮಾಲು ಅವಳಿಗೆ ಕೊಟ್ಟಿತು ಕಳ್ಳನ ಪತ್ತೆ ಮಾತ್ರವಿಲ್ಲ

B S P

ಕಾಸರಗೋಡು ಕಳೆದ ವಾರದಿಂದ ನಿನ್ನೆ ವರೇಗೆ ನಮ್ಮ ಗ್ರಾಮದೇವಸ್ಥಾನದಲ್ಲಿ ವ ಸುತ್ತುಮುತ್ತು ಸಹ ಜಾತ್ರೆ ಸಮ್ಮಂಧ ನಿತ್ಯವೂ ಬಹು ಜನರು ಕೂಡಿ ಅತ್ಯಾನಂದದಿಂದ ಉತ್ಸಹವು ಕಳೆಯಿತು ಮೊನ್ನೆ ಸೋಮವಾರ ರಾತ್ರಿಯಲ್ಲಿ ಗುಡುಗು ವ ಅಲ್ಪಸ್ವಲ್ಪ ಮಳೆಯ ಹನಿ ಬಿತ್ತು. ಇದೊಂದು ಗ್ರಾಮಕ್ಕೆ ದೇವರು ಶುಭಚಿನ್ಹೆಯನ್ನು ತೋರಿಸಿದ್ದಾಗಿ ಅನೇಕರೆನ್ನುತ್ತಾರೆ.

ಈಚೇಗೆ ಇಲ್ಲಿ ತಹಸಿಲ್ದಾರರಾಗಿ ಬಂದಿರುವ ಮ. ರಾ. [illegible] ರಾಮಕೃಷ್ಣಯ್ಯನವರಿಗೆ [illegible]

[illegible] ಗಳೂರಿಗೆ ವರ್ಗವಾದರು [illegible] ಅಲ್ಲ [illegible] ಕಟ್ಟಿನ ಮೇಲೆ ಹೋಗಿದ್ದಾರಂತೆ.

ಇಲ್ಲಿಯ ಸ್ಪೇಶನರಿ ಮೇಜಿಸ್ಟ್ರೇಟ ಮ. ಎಸ್. ಎಸ್. ಎಸ್. ಸಾಲ್ಡಾಂಞಾರಿಗೂ ಕುಂದಾಪುರಕ್ಕೆ ವರ್ಗವಾಗಿದ್ದಾಗಿ ಹುಕುಂ ತಲ್ಪಿರುತ್ತದೆ. ಸದ್ಯದಲ್ಲಿಯೇ ಇಲ್ಲಿ ಇವರ ಬದಲಿಗೆ ಮ. ರಾ. ಅಚ್ಚುತ್ತಯ್ಯನವರು ಪುತ್ತೂರಿನಿಂದ ಬರುವರಂತೆ

ನಿನ್ನೆ ಇಲ್ಲಿಯ ಗ್ರಾಮದೇವಸ್ಥಾನದ ಕಡೇ ದಿನ ಉತ್ಸವಕ್ಕೆ ಶ್ರೀ ಯಡನೀರ ಮಠ ಸ್ವಾಮಿಯು ಮಠಧಿಕಾರಿ ಜನ ಪರಿವಾರ ಸಮೇತ ಚಿತ್ತೈಸಿದ್ದರು. ಮ. ರಾ. ಕಂ. ವಿಟ್ಲಕಮ್ಮಿರ ಕಡೆಯಿಂದ ಅತಿ ಆದರದಿಂದಲೂ ವಾದ್ಯಘೋಷದಿಂದಲೂ ಎದುರುಗೊಂಡು ದೇವಸ್ಥಾನಕ್ಕೆ ಶ್ರೀ ಸವಾರಿಯನ್ನು ಕರಕೊಂಡು ಪಾದಪೂಜೆ ಇತ್ಯಾದಿಗಳಿಂದ ಮನ್ನಿಸಿದ ವಾರ್ತೆಯು ಕೇಳಿ ಸಂತೋಷಪಡುತ್ತೇವೆ.

ಸಿಡುಬುರೋಗದ ಹಾವಳಿಯು ಸ್ವಲ್ಪ ಶಾಂತವಾಗಿದ್ದಾಗಿ ತೋರುತ್ತದೆ

ಜೀವಸುಗಳ ಧಾರಣೆ, ಮಂಗಳೂರು.

ಕೂಳೂರು ಮಸ್ತತಿ ಅಕ್ಕಿ ,,,,,,,	4—6—0
ಗುಡ್ಡು ಮಸ್ತತಿ ,,,,,,,,,,	3—13—0
ಮಸ್ತತಿ ,,,,,,,,,,,,,,	3—12—0
ಗುಡ್ಡು ರಾಶಿ ,,,,,,,,,,,,	3—10—0
ಪಕ್ಲ ಸುಗ್ಗಿ ,,,,,,,,,,,,	3—11—0
ಮಸ್ತತಿ ಬೆಳ್ತಿಗೆ ,,,,,,,,,	4—8—0
ರಂಗೂನ್ ಬೆಳ್ತಿಗೆ ಗೋಣಿ ,,,,	7—4—0
ಹುರುಳಿ ಗೋಣಿ ೧ ಮುಡಿ 2ರ ,,,	6—8—0
ಉಪ್ಪು ಗೋಣಿ ೧ರ ,,,,,,,	3—7—0
ಕೊಪ್ರಿ ಖಂಡಿ ೧ರ ,,,,,,,	105—0—0
ಕೊಪ್ರಿ ಎಣ್ಣೆ ಮಣ ,,,,,,,,	6—14—0
ಕಾಪಿ ಖಂಡಿ ೧ರ ,,,,,,,	185—0—0
ಕಾಳು ಮೆಣಸು ಖಂಡಿ ,,,,,	115—0—0
ಹೊಸ ಬಿಳಿ ಗೋಟು ಅಡಿಕೆ ,,,	77—8—0
ಕರಿ ಗೋಟು ,,,,,,,,,,,	65—0—0
ಏಲಕ್ಕಿ ಮಣ ೧ರ ,,,,,,,	28—0—0

ಅಬಲಾ ಸಂಜೀವಿನೀ ಗುಳಿಗೆಗಳು.

ಇವು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ನಿಗೋಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ [illegible] ವೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತು [illegible] ಕೊಂಚವಾಗಿದ್ದರೂ, ನೋವುಳ್ಳದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸ [illegible] ಗರ್ಭ ಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲವನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮ [illegible] ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ನಿವಾರಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು [illegible] ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು [illegible] ಮಿತವಾಗಿದೆ. ವಿಶೇಷ ಮಾಹಿತಿಯು [illegible] ತವಾಗಿ ಕಳುಹಿಸುವೆವು. ಔಷಧ ಕ್ರಯ [illegible] ಅಂಚೆ ಹಾಸಲು [illegible]

[illegible] ರೋಡ್, [illegible]

K. R. PATAK & CO

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋ ಹರವಾಗಿಯೂ ಇದೆ

ಬಾಟ್ಲಿ ಒಂದರ 9 ಆಣೆ

ಕುಂತಲವಿಹಾರ ಎಣ್ಣೆ.

ಇದು ಗಿಡಮೂಲಿಕೆಗಳಿಂದ [illegible] ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ [illegible]ಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸ [illegible]ವದಿಲ್ಲ

ಬಾಟ್ಲಿ ಒಂದರ 9 ಆಣೆ

ಶಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ [illegible] ಇದನ್ನು ಹಚ್ಚಿಕೊಂಡರೆ ತಲೆಯು ಮೆದುಳು ತಂ[illegible]ವದು, ಮತ್ತು ಸುಖಕರವಾಗಿ ನಿದ್ರೆ[illegible]ವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳ ಪುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ. ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದ 6 ಆಣೆ

ಮಾಲತಿ ಅತ್ತರು.

ಇದ[illegible] ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು [illegible] ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿ [illegible] ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲಿ ಒಂದರ ಕ್ರಯ 0—12—0

[illegible]

[illegible] ಗೋಪಾಲ್ ರಾವ

[illegible] ಮುಂಬಯಿ

ಹಿಂದುಸ್ಥಾನ ಕೊಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —14 ಪೇರ್ ಸ್ಟ್ರೀಟ್ ಕಲ್ಕತ್ತ

ಬ್ರಾಂಚ್ ಆಫೀಸುಗಳು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ

8 ಬ್ರೋಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು.

[illegible] ನಿಯಮಿತ ಬಂಡವಾಳ ಒಂದು ಕೋಟಿ ರೂಪಾಯಿ

ಕಂತು [illegible] ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟ[illegible]

ಪಾಲುಗಳ [illegible] ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯ[illegible] ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು ಕಂಪೆನಿಯು ಪಾಲುಮ್ದಾರಿಕೆಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊದಲುಗು ವಿಮೇ ಹಕ್ಕಿನ ಪತ್ರ[illegible] ವಿಮೋದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ [illegible] ಬಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ [illegible] ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ಬಿ. ಬಾಬುರಾವ್ ಎಂಡ್ ಸನ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಭವಪತ್ರ ಬಾಟ್ಲಿಯೊಂದಿಗಿರುವುದು. { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಿಗಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳು [illegible] ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ [illegible]ಗಳೂ, ಬಿಚ್ಚಿ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತ ಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

[illegible]

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧ[illegible] ಗಳು. ಲೇಬು, ಕಿತ್ತಳೆ ವಗೈರೆ ಹಣ್ಣು[illegible] ಮತ್ತು ನೇಟೀವ್ [illegible] ಪಲ್ಯಗಳೂ (ತರಕಾರಿ) ತುರಾಯಿ, [illegible] ದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ [illegible]

ಅನುಭವಸಿದ್ಧವಾದ ವನೌಷಧಗಳು.

ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ.

೨. ಪ್ರಮೇಹರಿಪು ಬಿಂದು. [illegible] ನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ

೬. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೬ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟು [illegible] ಗಳನ್ನೂ ಬಂಜೆತನವನ್ನೂ ತಪ್ಪದೆ [illegible] ರಾತಲಿಗೆ [illegible]

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. [illegible] ಕವಾಗಿದೆ. ರಾತಲಿಗೆ [illegible]

೬. **ಪ್ಲೀಹೋದರಾರಿ ಚೂರ್ಣ.** [illegible] ಯಿಲ್ಲದೆ ದಾರುಣವಾದ ಜ್ವರದ [illegible] ಕಷ್ಟ [illegible] ವಾದ ಇತರ [illegible] ಪಡಿಸುವದು. ತಿಂಗಳ ಔಷಧಕ್ಕೆ [illegible] ರೂ [illegible]

೭. **ಜಗನ್ಮೋಹನ ದಂತಮಂಜನ.** [illegible] ಗಳನ್ನು ಪರಿಹರಿಸತಕ್ಕ [illegible] ಅನೇಕ ವನೌಷಧಗಳಿಂದ ತಯಾರಿಸಿದೆ. ೧೦ ತೊಲೆಗೆ ೧೦ ಆಣೆ

೮. **ಸರಳಭೇದಿ ಮಾತ್ರೆ.** [illegible] ತೊಲೆಗೆ ೨ ರೂ

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. **ವಾಸಾವ ಲೇಹ.** ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ

೧೧ **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨ **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, [illegible], ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ ೭ ಆಣೆ

೧೩ **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ [illegible] ವ್ಯಾಧಿಗಳನ್ನು [illegible] ಲೇಪನದೊಳಗಾಗಿ ಗೆಲ್ಲುವದು. ಉರಿಯು ಇಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ **ಸಮೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು [illegible] ವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ.

ಟಿಪ್ಪಣಿ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ — **ಬಿ. ಎಸ್. ನಾಥು ಮತ್ತು ಕಂಪೆನಿ,**
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ರೊಯಲ್ ಇಂಡಿಯನ ಬಾಂ.

ವಾತ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿಯದೆ

[illegible] ಪತ್ರ [illegible] ವನ್ನು ಪ್ರದರ್ಶಿಸುತ್ತಾರೆ [illegible] ಮನೋರಮಾ ಕಂಪೆನಿಯ ರೋಯಲ್ ಇಂಡಿಯನ್ ಬಾಮನ್ನು ವಾತದ ನೋವುಗಳ [illegible] ಹೋಗಿಸಿದ್ದಲ್ಲಿ ಪೂರ್ಣವಾಗಿ [illegible] ದೆ. ಈ [illegible] ಮೂಲ್ಯವಾದ [illegible] ಲೂ ಶ್ರೇಷ್ಠವಾದ್ದು

ರೋಯಲ್ ಇಂಡಿಯನ್ ಬಾಂ

ತಲೆ ನೋವು, ಸಂಧಿವಾತ [illegible] ಲೇಪನಗಳಿಂದ ಗುಣವಾದದ್ದು

ಇಂದು ಪ್ರಕಾಶ [illegible] ಇಂಗ್ಲಿಷ ಪತ್ರ [illegible] ವದೇನಂದರೆ — ಮನೋರಮಾ ಕಂಪೆನಿಯವರ ರೋಯಲ್ ಇಂಡಿಯನ್ ಬಾಂ ತಲೆನೋವಿಗೂ ಸಂಧಿವಾತಕ್ಕೂ ಉಳುಕಿಗೂ ಬಹಳ ಉತ್ತಮವಾದದ್ದೆ. ಇದನ್ನು ಲೂತಿ [illegible] ಮೇಲೂ [illegible] ಕಡತದ ಮೇಲೂ ಸುಖಕರವಾಗಿ ಉಪಯೋಗಿಸಬಹುದು

ರೋಯಲ್ ಇಂಡಿಯನ್ ಬಾಂ.

ಇದರಿಂದ ವಾತ, ಸಂಧಿವಾತ, ತಲೆನೋವು, ಜಖಮು, ಗಾಯ, ಉರಿ, ಸೊಂಟದ ನೋವು, ಉಳುಕು ಮುಂತಾದ ಎಲ್ಲಾ ತರದ ನೋವುಗಳು ಖ್ಯಾತಿಯಿಂದ ನಿಲ್ಲುವವು

ಬಾಟ್ಲಿ ಒಂದರ ಕಿಮ್ಮತ್ತು 0-8-0 6 ಬಾಟ್ಲಗಳಿಗೆ 2-10-0 12 ಬಾಟ್ಲಗಳಿಗೆ 5-0-0

ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕಿರುವದು.

ಅಥವಾ,

ವಿಳಾಸ:— ಮನೋರಮಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.
ಪರ್ರ ಎಂಡ್ ಸನ್ಸ್ ಮಂಗಳೂರು
[illegible]

ರಾಮರಾವ್ ನಾನಾಭಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು ಸುರಂಗಿ ಹೂಗಳಿಂದಲೇ ತಯಾರಿಸಲ್ಪಟ್ಟ ಅತೀ ಸುವಾಸಿಕ ಮತ್ತು ಮನೋಹರವಾದ ಅತ್ತರು. ಇನ್ನು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದು ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೆಗೆ ಹೋಗುವದಿಲ್ಲ. ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು. ಬಾಟ್ಲಿ ಒಂದರ ಕಿಮ್ಮತ್ತು ೧—೪—೦.

ಏಲ್ ಫುಲ್. ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು ಒಂದು ಸಾರಿ ತರಿಸಿ ನೋಡಿರಿ. ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೧—೦—೦

ಜುಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ. ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೆಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೧೪—೦

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ ಕ್ವಾಟ [illegible] ಒಟ್ಟಿ ಇಟ್ಟು ತೆಗದದ್ದಾಗಿರುತ್ತದೆ

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ [illegible] ವದು.

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ
[illegible]

ಹೊಸ ಪ್ರಕಟನೆಗಳು

1. ವ್ಯವಹಾರ ನಿರ್ಣಯ—ಪ್ರಕಟಗಳು ೫೪೬ ಹಿಂದೂ ಮಹಮದೀ ಲಾಗಳು, ೫೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಹೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ, ಇವುಗಳನ್ನು ಅಪೇಕ್ಷಿಸುವವರು ಎಂ ವಲ್ಲಭಾಚಾರ್ಯ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯ ಬಹುದು

THE HINDU SOAP MANUFACTURING CO,
ಹಿಂದೂ ಸೋಪ ಮೆನ್ಯುಫೆಕ್ಚರಿಂಗ್ ಕಂಪನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸಹ ಬಹಳ ಕಡಿಮೆ ವಿಧಿಹಿತವಾದದ್ದು. ಮಾದರಿಗಳೂ, ವಿಶೇಷ ಮಾಹಿತಿಯೂ ಮ್ಯಾನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರನ್ನು ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನೋವು ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು ಬಾವು, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0 ೬ 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೨—೬—0
ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.
ವಿ. ಪಿ. ಖರ್ಚು ಪ್ರತ್ಯೇಕ ಟಿ ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಪೆಟ್ಟಪ್ಪ ಮಾರ್ಕೆಟ್ ರಸ್ತೆ ಮಂಗಳೂರು, ದ ಕ.

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೧೫

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ
ಕವಿ ಎಂಡ್ ಸನ್ಸ್, ಮಂಗಳೂರು ದ ಕ.

ಡಾಕ್ಟರ್ ವಾಮನ ಗೋಪಾಲರವರ
ಏರೋಡ್ಯಾಡಿನಿಂದ ಕೂಡಿರುವ

ಸರ್ವಪರಿಲ್ಲಾ.

ರಕ್ತಶುದ್ಧಿಗೆ ಅತ್ಯುತ್ಕೃಷ್ಟವಾದ ಔಷಧಿಯು. ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ... ಉಪಕಾರವೆಂದು ಕೊಂಡಾಡಿರುವರು. ಬಹುಕಾಲದ ವಾತ, ಚರ್ಮರೋಗಗಳು, ... ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ... ಔಷಧಿಯಿಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ... ಕೀರ್ತಿಗೊಂಡಿರುವುದು. ... ಆರೋಗ್ಯನಾಶಕ್ಕೆ ... [illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಅಗ್ಗವಾಗಿಯೂ, ಚಿಲ್ಲರೆಯಾಗಿಯೂ, ಕ್ರಯಸ್ವಾತ್ಯದಿಂದ ಮಾರುವ ಅಗರ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೪ ರೂ. ೩ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸೆ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಲ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ ಎಲ್. ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ ಸೆಕ್ಯೂರಿಟಿ

ಲೈಫ್ ಎಶೂರೆನ್ಸ್ ಕಂಪೆನಿ.

ಲಿಮಿಟೆಡ್

ಆಪೀಸು ವಿಶಾಖಪಟ್ಣ, ಮತ್ತು ಮದ್ರಾಸು
ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಡಿಮೆಯಾದರೂ ಬದ್ಧವಾದ ವಿಮೆ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೆ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಿಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ಧತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೆ ಉತ್ತರಾಯಿಸಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ.—ಪ್ರಖ್ಯಾತಿಗೊಂಡ ಶ್ರೀಕೃಷ್ಣ ... ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್ ಮಂಗಳೂರು, ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಸಿಗೆಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಸಿಗಳ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ಮತ್ತು ಹೂವುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್. ಬೈಯಣ್ಣ ಬ್ರದರ್ಸ್.
67 ಲಾಲ್‌ಬಾಗ್ ರೋಡು, ಬೆಂಗಳೂರುಸಿಟಿ.

ಯುಗಾದಿಯ ಬಹುಮಾನ! ಯುಗಾದಿಯ ಬಹುಮಾನ!!

ಹಾಸನ್ ಟೋಪಿಯ ಸುಪೀರಿಯರ್ ಉಲ್ ದಾರ 1 ಟೋಪಿ ದಾರಕ್ಕೆ 0-8-0. 10 ಟೋಪಿ ರ್ಯಾಗುವ ಬಂಡಲ್ 1ಕ್ಕೆ ರೂ 3 7 0 ಬಣ್ಣದಲ್ಲಿ ಎಣ್ಣೆ ಕೆಂಪು ಕಪ್ಪು ತೇಟ ಕೆಂಪು ಹಳದಿ ಗುಲಾಬಿ ಪಚ್ಚೆ ನೀಲಿ ಮತ್ತು ಕಾಫಿ ಬಣ್ಣಗಳಲ್ಲಿ— ಹಾಸನ್ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ ಪೌಂಡು 1ಕ್ಕೆ 2 4-0, ಲಡಿ 1ಕ್ಕೆ 0-10 0; ರಂಗಿನಲ್ಲಿ ಎಣ್ಣೆ ಕೆಂಪು ಕಪ್ಪು ಮತ್ತು ತೇಟ ಕೆಂಪು ಮಿಶ್ರ ಉಲ್ ಪೌಂಡು 1ಕ್ಕೆ 2-12 0. ಆರು ಟೋಪಿ ಆಗುವದು, ಕೊಕ್ಕೆ ಸೂಜಿ 1ಕ್ಕೆ 0-1-6 ಮತ್ತು 0 3-0 ಹಾಸನ್ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1ಕ್ಕೆ ರೂ. 1-12-0.

ಹಾಸನ್ ಟೋಪಿಗಳು ಡಜನ್ 1ಕ್ಕೆ 8-0-0 ಮತ್ತು 13 0-0. ತರಹೇವಾರಿನ ರಂಗಿನಲ್ಲಿ ಕಸೂತಿಕೆಲಸದ ಉಲನ್ ದಾರಗಳು ಪೌಂಡು 1ಕ್ಕೆ ರೂ. 3-4 0

ಕೆಟಿಟೋಪಿ ಬಾಂ ಎಲ್ಲಾ ತರದ ವಾತಕ್ಕೆ 0-8 0, ದೊಡ್ಡವರ ಕಾಲುಚೀಲಗಳು ಆಣೆ 0-4-0 ರಿಂದ 1-8 0 ಎಳೇ ಮಕ್ಕಳ ಕಾಲುಚೀಲಗಳು 0-4 0 ಮತ್ತು 0 6-0. ದೊಡ್ಡವರ ಕಾಟನ್ ಬನಿಯನ್ 1ಕ್ಕೆ 8ಆಣೆಯಿಂದ 1-0-0. ದೊಡ್ಡವರ ಮುಸುಕಿನ ಟೋಪಿ 1ಕ್ಕೆ 1-0-0. ... ಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1ಕ್ಕೆ 0-2-0. ಉಲ್‌ದಾರದ ವಾಡ್ ಪಾಕೆಟ್ 1ಕ್ಕೆ 0-2-0 ಉಲ್‌ದಾರದ ಕಮರ್‌ಬಂದ್ 1ಕ್ಕೆ 10 ಆಣೆಯಿಂದ 1 4-0. ಬಾಚಣಿಗೆಗಳು 1ಕ್ಕೆ 0-1 0, 0 1 6ರಿಂದ 0 4-0 ಪುಗಾಗಿನ ಕಡ್ಡಿ ತೊಲೆ 1ಕ್ಕೆ 0-2-0 ದಶಾಂಗ ತೊಲೆ 1ಕ್ಕೆ 0-4-0. ಓಡಿಕಲಾ ಡಬ್ಬಿ 1ಕ್ಕೆ 0-4 0. ಬಾಚು ಸರಪಣಿ 1ಕ್ಕೆ ಆಣೆ 6ರಿಂದ 0-12-0 ವರೆಗೆ. ರಬ್ಬರ್ ಸ್ಟ್ಯಾಂಪಿ ಶಾಯಿ ಬಾಟ್ಲಿ 1ಕ್ಕೆ 0-4-0. ಸೇನ್ ಸೇನ್ ತಾಂಬೂಲಮಿತ್ರನು 300 ಮಾತ್ರೆಗಳಿರುವ ಪಾಕೆಟ್ 1ಕ್ಕೆ 0-3-0. ಮೆಂಕ್ಯಾಲ್ ಡಬ್ಬಿ 1ಕ್ಕೆ 0-3-0. ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0-5-0. ದೇಶಿ ಕೈವಸ್ತ್ರಗಳು ಡಜನ್ 1ಕ್ಕೆ 1-0-0. ಲಿನನ್ ಕೈವಸ್ತ್ರಗಳು ಡಜನ್ 1ಕ್ಕೆ 1-6 0. ಕಸ್ತೂರಿ ಮಾತ್ರೆ 200ರ ಶೀಸೆ 1ಕ್ಕೆ 0-4-0. ಕಾಮಿನಿಯ ... ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಶೀಸೆ 1ಕ್ಕೆ 1-0-0. ಪರಿಮಳ ... 1ಕ್ಕೆ ... ದಂತಮಂಜನ ಡಬ್ಬಿ 1ಕ್ಕೆ 0-1 6. ಪೊಮೆಟ ಶೀಸೆ ... -0. ... ಲ್ಯವಿಂಡ ಅತ್ತರ್ ಶೀಸೆ 1ಕ್ಕೆ 1-8-0. ಕಾಮಿನಿ ... ಶೀಸೆ 1ಕ್ಕೆ 2-0-0. ಇಂಗ್ಲಿಷ್ ಅಕ್ಷರದ ಪೆಟ್ಟಿಗೆ ... ಕಾರ್ಡುಗಳು 100ಕ್ಕೆ 0-3-0. ರೋಲು ಹಾಕಿದ ... ಕಾಗದ ... 100ಕ್ಕೆ 0-5-0. ... [illegible]

SMALL-POX BALM

ಅತ್ಯಲ್ಪ ಕಾಲದಲ್ಲಿಯೇ ಜಲದ ರಿಂದೆ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು

ಸಿಡುಬು ರೋಗಕ್ಕೆ ಮುಲಾಮು.

ಸಿಡುಬು ರೋಗಕ್ಕೆ ... ನುವ ... ಔಷಧ ಎಂದು ...

ಮೈಲಿಯಲ್ಲಿ ತೀವ್ರ ತುಂಬುತ್ತಿರುವಾಗ ಬರುವ ಜ್ವರವನ್ನು ಶಮನ ಮಾಡುವುದು

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ತೀವ್ರ ತುಂಬಿರುವ ಮೈಲೆಯು ಒಣಗುತ್ತ ಒಂದು ಪೊರೆಪೊರೆಯುಳ್ಳದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ನಾನಾ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗಾಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯು ದುರ್ವಾಸನೆಯನ್ನು ... ಕಲೆಗಳು ... ಹೋದವಂತ ಮಾಡಿ, ತುರಿಯಿಂದ ಶರೀರದಲ್ಲಿ ಉಂಟಾಗುವ ಬಾಧೆಯನ್ನು ... ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ... ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದು ... ಇದನ್ನು ... ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಬ್ಬಿಯಾ, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ... ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಅಕ್ಷೇಪಕರವಲ್ಲ.

ಮುಲಾಮನ್ನು ರೋಗಿಗೆ ... ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವದಕ್ಕೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಮಾಡಿಟ್ಟಿರುತ್ತೇವೆ.

ಕ್ರಯ ದಬ್ಬಿ ಒಂದಕ್ಕೆ ... ಆಣೆ ... ಅಂಚೆ ... ಆಣೆ

ಮಂಗಳೂರ ಟ್ರೇಡಿಂಗ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ)

... ಮಂಗಳೂರು ಇವರಲ್ಲಿ ದೊರೆಯುವುದು

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್	ಹಾಪ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ... ಚರ್ಮ)	(ಪೂರಾ ಚರ್ಮ)

ಈ ಮೂರು ವಿಧವಾಗಿ ... ಬೈಂಡು ಮಾಡಲ್ಪಟ್ಟವುಗಳು

3 × 8¼ 3 × 1¼ 8¼ × 6 6 ″ × 4 ... ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇ ... ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ... ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮೆನೇಜರ್,

ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಬುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇನ್ನೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್, ... ಮಂಗಳೂರು.

Printed by ... Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷಕ್ಕೆ ರೂ 1-4-0 ಟಪ್ಪಾಲು ಹಾಸಲು ಸೇರಿ ರೂ 2 1 0

ಪುಸ್ತಕ 4 ಮಂಗಳೂರು, ತಾರೀಕು 1ನೇ ಶುಕ್ರವಾರ ಎಪ್ರಿಲ್ 1910 ಸಂಚಿಕೆ 1

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿಗೆ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE ★ POWDERS ★ OINTMENTS ★ PILLS ★ WILLIAM & Co. BOMBAY

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿಗೆ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣ ತಿಳಿದುಬರುವದು. ಡಬ್ಬಿಗೆ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಹೆಮೋಯಿಸ ಕೊಕೊ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. ೩೦ ಗುಟಿಕೆಗಳ ಡಬ್ಬಿಗೆ ಕಿಮ್ಮತು ರೂ 1

AMRUTANJAN.

BEST INDIAN PAIN BALM.

The best and Purest medicine ever made

Amrutanjan Cures All Kind of Pains

TRY A BOTTLE TO-DAY. PRICE ANS 0—8—0 ONLY.

ವಿಳಾಸ: — ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ವಿಳಾಸ: — "ಅಮೃತಾಂಜನ", ಮುಂಬಯಿ

[illegible] ದ್ರವ್ಯಗಳು.

[illegible] ಯಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಸೇರು 1ಕ್ಕೆ

	ರೂ. ಆ. ಪೈ.	ರೂ. ಆ. ಪೈ.
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
1 ಉತ್ತಮವಾದ ದಶಾಂಗ...	0—12—0	

ಗಂಧದ ಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1 ಪುದುಕೋಟೆ ಬಿಲ್ಲೆ... ..	3--0--0	1--8--0	0-12-0
2 ಕಸ್ತೂರಿ ಬಿಲ್ಲೆಗಳು... ...	1--8--0	0-12-0	0-6-0
3 { 1 ಕೇಸರಿ ಬಿಲ್ಲೆ	0--8--0	0-4-0	0-2-0
2 ಖಿಟ್ಟೊ	0--4-0	0-2-0	0-1-0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ -5ರೂ.

4 ಅವಲ್ ಹಸೀ ಬಿಲ್ಲೆ	0--8--0	0-4--0	0-2-0
ಎರಡನೇ ರಖಂ	0--4--0	0-2--0	0-1-0

ಕಾಲು ತೊಲೆ ತೂಕ ಉಳ್ಳ ಹಸೀ ಬಿಲ್ಲೆ 100ಕ್ಕೆ 8ರೂ -5ರೂ

5 ಅರಗಜ ಅಥವಾ ಜವ್ವಾಜಿ ಗಂಧ ತೊಲಾ 1ಕ್ಕೆ . 1-0-0

ಪರಸ್ಥಳದವರಿಗೆ ಟಪ್ಪಾಲ್ ಹಾಸಲು ಮತ್ತು ಪ್ಯಾಕಿಂಗ್ ಖರ್ಚು ಅಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು ಅಬಮಾಯಿಷೆಯಿಂದ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ

ಯಂ ನರಸಿಂಹ ಶಾಸ್ತ್ರಿ, ಸುಗಂಧಕಾರಿ,
ಶಂಕರಪುರ, ಬೆಂಗಳೂರು ಸಿಟಿ

ಮುಹೂರ್ತ ೧೯೧೧ನೇ ವರುಷದ ಕ್ಯಾಲೆಂಡರು ಮುಹೂರ್ತ

ಕಾನ್ಪೂರ ಉಲನ್ ಚೌಕಗಳು.

ಸೈಜು 40×40, ಹಳದಿ, ಗುಲಾಬಿ ಊದ, ಹಸುರು, ಕರೀದು, ಕೇಸರಿ, ಬಿಳುಪು, ಚ್ಯಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0—4—0

ಶಹಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ. 4-4-0. 2ನೇ ನಂಬರು ರೂ. 3—12—0 3ನೇ ನಂಬರು 3—8—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0—4—0

ಸಾಚಾ ಒಳ್ಳೇ ಕಲಾಪತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು 0—10—0, 1—4—0,

2ನೇ ನಂಬರು 0—14—0, 1—8—0, 2—4—0

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂವಾ, [illegible], ರೋಜಾ, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ 3 ಇಂಚು, 1ಕ್ಕೆ ರೂ 1-4-0, 1-8-0, 2-4-0, 2-8-0 3-0-0

ಚಿತ್ರಾಪಟ 3-0-0, 4-0-0, 5-0-0, 6-0-0

ಖಿಟ್ಟೊ ಗಜ 1ಕ್ಕೆ 1-8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 1 . . 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ, ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6-0, 2-8-0, 3-0-0

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8

ಉಲನ್ ಬನೀನುಗಳು 1ಕ್ಕೆ ರೂ 2-4-0, 2-8-0, 3-0-0, 3-8-0.

ಫಿಲ್ಡ್ ಕ್ಯಾಪ್‌ಗಳೂ ಕ್ರಿಸ್ಟಿನ್ 1ಕ್ಕೆ ರೂ 1-12-0, 2-4-0, 2-8-0 2-12-0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12-0, 1-0-0, 1-4-0, 1-8-0

ಹಾಸನದ ಬೋಪಿಗಳು ಜತೆ 1ಕ್ಕೆ ರೂ 4-0-0, 4-4-0, 4-8-0, 5-8-0, 6-0-0, 7-0-0, 8-0-0, 9-0-0, 10-0-0, 12-0-0,

ಪೇಟ ಕಟ್ಟುವ ತರಹೇವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲು 1ಕ್ಕೆ ರೂ	0—11—0
ಕುಂತಳ ಕೌಮುದಿ ತೈಲ ,, ,,	0—12—0.
ಕಮೋನಿಯಾ ಓಯಿಲ್ ,, ,,	1—0—0.
ಭೃಂಗಾಮಲಕ ತೈಲ ಸೀಸೆ ,, ,,	0—4—0, 0-8-0, 1-0-0
ಕಸ್ತೂರಿ ಮಾತ್ರೆ ಸೀಸೆ ,,	0—4—0.

ಎಲ್ ಎ. ಫೋರುವಾಲ್
[illegible] ಬೆಂಗಳೂರು ಸಿಟಿ

ಗಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಸೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್ ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು.

'ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

[illegible] ಸಂಸ್ಕೃತವನ್ನು ಕಲಿತ ಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಶ್ಲೋಕ, ಪದ, ಶಬ್ದ, ಅನ್ವಯ [illegible] ಆಕಾಂಕ್ಷೆ, ವಿಗ್ರಹ ಗಾತು ರೂಪ, ತಾತ್ಪರ್ಯ, ವ್ಯಾಕರಣ ವಿಷಯ, [illegible] ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

[illegible] ಪ್ರತಿ ಪದ ಅರ್ಥ, ಅನುವಾದ, ತಾತ್ಪರ್ಯ [illegible] ಸಿದ್ಧವಾಗಿದೆ ಬೆಲೆ 0—4—0

ವಿಳಾಸ ಮ್ಯಾನೇಜರ್,
ವಿದ್ಯಾನಂದಾಫೀಸು,
ಚಿಕ್ಕ ಬೆಂಗಳೂರು ಸಿಟಿ.

ಕುಂತಳ ಕೌಮುದೀ ತೈಲ.

ಕು[illegible] ರಾಣಿಯವರು—ಅವರು ಉಪಯೋಗಿಸಿದ ಕೇಶ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದು

ಮೈಸೂರಿನ [illegible] ರಾಣಿಯವರು—ಅವರು ಇದನ್ನು ಪ್ರತಿನಿತ್ಯ ಉಪಯೋಗಿಸುತ್ತಾರೆ.

[illegible] ಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

[illegible] ತಿಲಕರವರು—ಇದು ಅನೇಕ [illegible] ಮಾಡ[illegible]

[illegible] ರಾಣಿಯವರು—ನಾನು ಉಪಯೋಗಿಸಿ[illegible] ಇದನ್ನು ಉಪಯೋಗಿಸ[illegible]

ಕುಂತಳ [illegible] ತೈಲವೂ ಸ್ನಾನ ಮಾಡುವುದಕ್ಕೆ ಇದರಲ್ಲಿ ಅತ್ಯಾಶ್ಚರ್ಯ [illegible] ಬೇಕಾಗುವ ಗುಣಗಳಿರುವದಲ್ಲದೆ ಕರವಾಗಿ [illegible] ಮನಸ್ಸಿಗೆ ಆಹ್ಲಾದವನ್ನೂ ಇದು [illegible] ಮನೋಹರವಾದ ಸುಗಂಧವುಳ್ಳ ಕೊಡುತ್ತ [illegible] ಮಾಡುವುದು. [illegible]ದುವರಿಗೆ ದಾದುದರಿಂದ ಉಪಯೋಗಿಸುವವರಿಗೆ ತ್ಯಂತ ಸುಲಭ ಕ್ರಯವುಳ್ಳ ಮತ್ತು ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ [illegible] ಒಂದಕ್ಕೆ 12 ಆಣೆಗಳು. ಉತ್ತಮೋತ್ತಮವಾದುದು. [illegible] ಸೆನ್, ಎಲ್ ಎಮ್. ಎಸ್.,
ಕವಿರಾಜ [illegible] ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—ಎ. ಫೋರುವಾಲ್ ಎಂಡ್ ಕೋ,
ಮೈಸೂರು ದೇಶಕ್ಕೆ ಏಜಂಟರು. [illegible]
[illegible]
ಮಂಗಳೂರಿಗೆ ಏಜಂಟರು [illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 1ನೇ ಏಪ್ರಿಲ್ 1910

ಕೈಗಾರಿಕೆಗಳ ಅಭಿವೃದ್ಧಿ

ತಕ್ಕಷ್ಟು ಸರಕಾರಿ ಪ್ರೋತ್ಸಾಹವೂ ಪ್ರಜಾ ಮುಖಂಡರಲ್ಲಿ ಕೆಲವರು ಪ್ರಯತ್ನಪಟ್ಟರೂ ಹಿಂದುಸ್ಥಾನದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯು ಮುಂದುವರಿಯುವುದಕ್ಕೆ ಇನ್ನೂ ಅನೇಕ ತೊಡಕುಗಳಿರುವವು. ಕೈಗಾರಿಕೆ ಕಾರಖಾನೆಗಳಿಂದ ದೊರೆಯುವ ಅಲ್ಪ ಲಾಭದಿಂದ ದೇಶೀಯ ಕಾರಖಾನೆಗಳಲ್ಲಿ [illegible] ರಲ್ಲಿ ಇನ್ನೂ ಪೂರ್ಣ ವಿಶ್ವಾಸವುಂಟಾಗಿರುವುದಿಲ್ಲ. ಕಾರಖಾನೆಗಳ [illegible] ಒಡವೆಗಳಿಗೆ ವಿದೇಶಗಳಲ್ಲಿ ಗಿರಾಕಿ [illegible] ದಾಣೆಗಳ ವಸ್ತುಗಳನ್ನು ಮಾತ್ರ [illegible] ಇದರಕ್ಕಿಂತ ಹೆಚ್ಚಿನ ವಸ್ತುಗಳ ಸಾಮಾಗ್ರಿಗಳಿಗೆ [illegible] ಖಾನೆಯವರು ತಯ್ಯಾರಿಸಿದ [illegible] ಮಾರಿಕೊಳ್ಳದೆ [illegible] ಕಾರಖಾನೆಗಳಲ್ಲಿ ಎಷ್ಟು ಲಾಭವುಂಟಾಗುವುದು? ಅವುಗಳ ಅಭಿವೃದ್ಧಿಯಾಗುವದು ಹೇಗೆ? ಹೀಗೆ ಪ್ರಜಾ ದಾರಿದ್ರ್ಯವೇ ಎಲ್ಲಾ ಆಪತ್ತುಗಳಿಗೆ ಕಾರಣವೆಂದರೂ ಸರಿ. ಹಿಂದುಸ್ಥಾನದಲ್ಲಿ ಸಾಂಪತ್ತಿಕ ಅಭಿವೃದ್ಧಿಗೆ ಕೈಗಾರಿಕೆಗಳು ಬೇಕು, ಕೈಗಾರಿಕೆಗಳಿಗೆ ಸಂಪತ್ತು ಬೇಕೆಂದರೆ ಇವೆರಡೂ ಏಕ ಕಾಲದಲ್ಲಿ [illegible] ದೇಶವು [illegible] ಹೊರಹೊಮ್ಮುವದೆಂತು?

ವ್ಯವಸಾಯ ಉದ್ಧರಣೆಯು ಕೈಗಾರಿಕೆಯ ಅಭಿವೃದ್ಧಿಯ ಪ್ರಥಮ ಸಾಧನವಾಗಿರುವುದು. ಯಾಕೆಂದರೆ ರೈತರು ತಮ್ಮ [illegible] ವಾಗುವ [illegible] ಪಾಯವನ್ನು ಕಲ್ಪಿಸಿದೊಡನೆ ಪ್ರತಿಸಿಕ್ಕವೂ ತಮಗೆ [illegible] ವಸ್ತುಗಳನ್ನು ಅವರು ಅನುಕೂಲಿಸಿಕೊಳ್ಳುವುದರಿಂದ ದೇಶೀಯ ವಸ್ತುಗಳಿಗೆ ಗಿರಾಕಿಯು ದೇಶದಲ್ಲಿಯೇ ಸಿಕ್ಕುವುದು. ಬೇಸಾಯ ಕಸಬಿನಲ್ಲಿರುವ [illegible] ಜನರು ಪ್ರತಿ ವರುಷದಲ್ಲಿಯೂ ಒಂದು ಅಥವಾ ಎರಡು [illegible] ವಸ್ತ್ರ ಕೈಗಾರಿಕೆಯು ಎಷ್ಟು ಲಾಭಕರವಾಗುವುದು. ತಾವು [illegible] ಅನಾರೋಗ್ಯಕರ ಗುಡಿಸಲುಗಳನ್ನು [illegible] ಕಟ್ಟಿಸಿದರೆ [illegible] ಸಾಮಾಗ್ರಿಗನೇ ಬಹಳ ಗಿರಾಕಿಯಾಗುವುದಿಲ್ಲ?

ವ್ಯವಸಾಯವು ಹಿಂದುಸ್ಥಾನದಲ್ಲಿ ಮೂರರಲ್ಲಿ ಎರಡು ಪಾಲಷ್ಟು ಜನರ ಮುಖ್ಯ [illegible] ಪಾಯವಾಗಿರುತ್ತದೆ. ಆ ಕೈಗಾರಿಕೆಯು ಪ್ರಕೃತ [illegible] ಸ್ಥಿತಿಯಲ್ಲಿ [illegible] ವುದು. ಇದನ್ನು ಉದ್ಧರಿಸಿದರೆ ಇತರ ಎಲ್ಲಾ ಕೈಗಾರಿಕೆಗಳು ಪುಷ್ಟಿಗೊಳ್ಳುವವು. ರೈತರಲ್ಲಿ ಇದರ ಉದ್ಧರಣೆಯಿಂದ ದ್ರವ್ಯಾನುಕೂಲತೆಯುಂಟಾಗಿ ತಮಗೆ ಬೇಕಾದಂತೆ ಅವರು ಸ್ವದೇಶಿ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ಮೇಲೆ ಸೂಚಿಸಿದಂತೆ ಸಮರ್ಥರಾಗುವರು. ಕೈಗಾರಿಕೆಗಳ ಅಭಿವೃದ್ಧಿಯನ್ನು ವ್ಯವಸಾಯಕ್ಕೆ ಪರಸ್ಪರ ಸಂಬಂಧವಿಲ್ಲದ ರೀತಿಯಲ್ಲಿ ಸಾಧಿಸಲು ಯತ್ನಿಸಿದರೆ ಅಂಥಾ ಯತ್ನಗಳು ಬಹುವು ಕಷ್ಟಸಾಧ್ಯವಾಗಿರುವುದು.

ಭಾರತೀಯ ವ್ಯವಸಾಯಗಾರನು ತನ್ನ ಉದ್ದಿಮೆಯಲ್ಲಿ ಸಾಧ್ಯವಾಗುವಷ್ಟು ಶ್ರಮಪಡುವನೆಂಬದನ್ನು ಯಾರೂ ನಿರಾಕರಿಸಲಾರರು. ಆದರೆ ತಾನು ವಾಡಿಕೆ ಪ್ರಕಾರ ಅನುಸರಿಸುವ ವ್ಯವಸಾಯ ಕ್ರಮಗಳು ಯಾವ ಸಿದ್ಧಾಂತಗಳನ್ನಾದರಿಸಿರುವವೆಂಬದನ್ನು ತಿಳಿಯದೆ ತನ್ನ ಕಸಬನ್ನು ಆತನು ಇನ್ನಷ್ಟು ಯೋಗ್ಯರೀತಿಯಲ್ಲಿ ಮಾಡಲು ಬಹುದು. ತಕ್ಕಷ್ಟು ಭಂಡವಾಳವನ್ನು ಆತನಿಗೆ ಒದಗಿಸಿಕೊಟ್ಟರೆ ಜಮೀನಿಗೆ ಬೇಕಾದ ಗೊಬ್ಬರವನ್ನು ಹಾಕಿ ಈಗ ಸಿಕ್ಕುವುದಕ್ಕಿಂತಲೂ ಎರಡು ಪಾಲಷ್ಟು ಪೈರು ಆತನಿಗೆ ಲಭಿಸುವುದು. ಅಲ್ಪಸ್ವಲ್ಪ ಭೂಕಂದಾಯಗಳನ್ನು ತಗ್ಗಿಸಿದರೆ ಈ ಮೂಲಕವಾಗಿಯೂ, ಪರಸ್ಪರ ಸಹಾಯಕ ನಿಧಿಗಳಾದ ವ್ಯವಸಾಯ ಬೇಂಕುಗಳನ್ನು ಸ್ಥಾಪಿಸಿ ಕಡಿಮೆ ದರದಲ್ಲಿ ಹಣವನ್ನು [illegible] ಕೊಡುವ ಮೂಲಕವೂ ರೈತನಿಗೆ ಸಹಾಯವನ್ನು ಮಾಡಬಹುದು. ಸ್ವದೇಶಿ [illegible] ಗಳನ್ನು ಸ್ಥಾಪಿಸಬೇಕೆಂದು ಪ್ರಯತ್ನಪಡುವವರೆಲ್ಲರೂ ಇಂಥಾ ಬೇಂಕುಗ [illegible] ಸುವದರಲ್ಲಿ ಸಹಾಯಕರಾಗಿ ಇವುಗಳ ಶಾಖೆಗಳು ವ್ಯವಸಾಯಗಾರರಿರುವ [illegible] ಗಳಲ್ಲಿಯೂ ಇರುವಂತೆ ಸಾಹಸಪಟ್ಟರೆ ತಮ್ಮ ಉದ್ದೇಶಗಳ ಸಾಧನಾ [illegible] ವಾಗುವದು. ರೈತನು ತನಗೆ ಹೀಗೆ ಕೊಡಲ್ಪಡುವ [illegible]

[illegible] ಕಲ್ಪಿಸಬೇಕಾಗಿರುವುದು.

ಭಾರತೀಯ ಬಂಡವಾಳಿಕರು ಕೈಗಾರಿಕೆಗಳಲ್ಲಿ ತೋರ್ಪಡಿಸುವ ಅಭಾವವೇ ಇವುಗಳ ಅಭಿವೃದ್ಧಿಯ ಮತ್ತೊಂದು ಅಭ್ಯಂತರವಾಗಿರುವುದು. ಮುಂಬಯಿಯಲ್ಲಿ ಮಾತ್ರ ಕೆಲವು ಶ್ರೀಮಂತರು ಹೇರಳವಾಗಿ ತಮ್ಮ ದ್ರವ್ಯವನ್ನು ಕೈಗಾರಿಕೆಗಳಲ್ಲಿ ವಿನಿಯೋಗಿಸುವರು. ಹಿಕ್ಕ ಎಲ್ಲಾ ಕಡೆಗಳಲ್ಲಿ ಕೈಗಾರಿಕೆಗಳಲ್ಲಿ ವಿನಿಯೋಗಿಸಲ್ಪಟ್ಟಂಥಾ ದೇಶೀಯ ಬಂಡವಾಳವು ಮುಂಬಯಿಯಲ್ಲಿ ವಿನಿಯೋಗಿಸಲ್ಪಟ್ಟದ್ದಕ್ಕೆ ಸರಿಹೋಲಿಸಿದರೆ ಅಲ್ಪವೇ ಆಗಿರುವುದು. ಜಪಾನ ದೇಶದಲ್ಲಿಯೂ ಪಾಶ್ಚಾತ್ಯ ಸೀಮೆಗಳಲ್ಲಿಯೂ ಕೈಗಾರಿಕೆಗಳು ಮುಂದುವರಿಯಬೇಕಾದರೆ ಶ್ರೀಮಂತರೆಲ್ಲರೂ ಒಟ್ಟು ಕೂಡಿ ದೊಡ್ಡ ದೊಡ್ಡ ಹಲವು ಬೇಂಕು ಯಾ ದ್ರವ್ಯನಿಧಿಗಳನ್ನು ಸ್ಥಾಪಿಸಿ ಕಾರಖಾನೆಗಳನ್ನು ನಡಿಸಲು ಬೇಕಾದ ಬಂಡವಾಳವನ್ನು ಆ ಬೇಂಕುಗಳಿಂದ ಕೊಟ್ಟರು. ಈಗಲೂ ಈ ದೇಶಗಳಲ್ಲಿ ಸಂಪನ್ನರು ತಮ್ಮ ದ್ರವ್ಯವನ್ನು ಈ ರೀತಿಯೇ ವಿನಿಯೋಗಿಸುತ್ತಿರುವರು. ನಮ್ಮಲ್ಲಿ ಸಂಪನ್ನರ ಈ ರೀತಿ ವರ್ತನೆಯ ಹೊರತು ದೇಶದಲ್ಲಿ ಬಡವೂ ಐಶ್ವರ್ಯವಂತರ ಸಂಪತ್ತಿನ ಸಾಧಕವಾದ ವಿನಿಯೋಗವೂ ದೊರಕಲಿಕ್ಕಿಲ್ಲ.

ಬಂಡವಾಳದೊಡನೆ ಕಾರಖಾನೆಗಳನ್ನು ವ್ಯವಸ್ಥೆಯಿಂದ ಸರಿಯಾಗಿ ನಡಿಸಲಿಕ್ಕೆ ಅನುಭವವೂ ಶಿಕ್ಷಣವೂ ಅವಶ್ಯವಾಗಿರುವುದು. ಕಾರಖಾನೆಗಳಲ್ಲಿ ನಡಿಯುವ ಕೆಲಸ [illegible] ಕಾರಕೆಲಸದವರಿಗೆ ಮಾತ್ರ ಇದ್ದರೆ ಸಾಕೆಂತ ನೆನಸುವುದು ನಮ್ಮಲ್ಲಿ ವಾಡಿಕೆಯಾಗಿರುವುದು. ಇದರಿಂದ ಅನೇಕ ಅನನುಕೂಲತೆಗಳು [illegible] ಕಾರಖಾನೆಯನ್ನು ಮುಚ್ಚ [illegible] ಕಾರಖಾನೆಯ [illegible] ಕಾರಖಾನೆಯ [illegible] ನಡಿಸುವ [illegible] ಈ ಶಿಕ್ಷಣವನ್ನು [illegible] ಕೊಡಲಿಕ್ಕೆ ದೇಶದ [illegible] ಅವಶ್ಯಕತೆಯನ್ನು ತಿಳಿ [illegible] ಸಭೆಯಲ್ಲಿ [illegible] ಸ್ಥಾಪಿಸುವ ನಿರ್ಣಯವನ್ನು [illegible] ಆದರೆ ಪ್ರಕೃತಕ್ಕೆ ಈ [illegible] ಅನುಚಿತವೆಂತಲೂ ಈ ವಿಷಯಕ್ಕೆ ಲಕ್ಷ್ಯವನ್ನು ಕೊಡುವೆನೆಂತಲೂ ಸರಕಾರದ [illegible] ಕೈಗಾರಿಕೆಯ ಏರ್ಪಾಡು [illegible] ಆಗಬೇಕಾಗಿದೆ. ಸರಕಾರಿ [illegible] ವು ಬೇಂಕಿಕ್ಕೆ ಹಿಂದಿ [illegible] ಸ್ಥಾಪಿಸುವ [illegible] ಪ್ರಜಾ ಮುಂದಾಳುಗಳೂ ಸಹಾ ದೇಶ [illegible] ಕೈಗಾರಿಕೆಗಳ [illegible] ಶಿಕ್ಷಣ ವಿಹೀನತೆಯು ವಿಘ್ನವು [illegible] ಪ್ರತೀಕ್ಷಿಸುವುದು ಅಸಾಧ್ಯ. [illegible] ವಿಹೀನತೆಯನ್ನು ಕೈಗಾರಿಕೆಗಳಲ್ಲಿ [illegible] ತ್ತಿರುವವರು ಗಣನೆ [illegible] ಅಭ್ಯಂತರವಾಗಿರುವುದು.

ಇನ್ನು ಈ ವಿಧವಾದ ಹಲವು ತೊಡಕುಗಳನ್ನು ಕಳೆದು ಬಿಟ್ಟಮೇಲೆ ಕೆಲಸ ಪ್ರಾರಂಭಿಸುವ ಮೊದಲು ದೇಶದಲ್ಲಿ [illegible] ವಿಶೇಷವಾಗಿ ಖರ್ಚಾಗುವ ವಸ್ತುಗಳನ್ನು ಮಾತ್ರ ಪ್ರಾರಂಭದಲ್ಲಿ ತಯ್ಯಾರಿಸಲು ಪ್ರಯತ್ನಪಡಬೇಕಾಗಿರುವುದು. ದೇಶದಲ್ಲಿ [illegible] ಒಡವೆಗಳನ್ನು ತಯ್ಯಾರಿಸಿ ಮತ್ತು ಇವು ಎಲ್ಲಿ ಖರ್ಚಾಗುವವೆಂಬದನ್ನು ಪರಿಶೋಧಿಸುವುದು ಆವಶ್ಯಕರ. ಕೈಗಾರಿಕೆ ಉದ್ದಿಮೆಯಲ್ಲಿ ಕೈ ಹಚ್ಚುವ ಮೊದಲು ಈ ವಿಧವಾದ ಎಲ್ಲಾ ಸೂಚನೆಗಳನ್ನು ಶುರುವಿನಲ್ಲಿಯೇ ಯೋಚಿಸಿಕೊಂಡು ಸಾಧ್ಯವಿರುವ ಮಟ್ಟಿಗೆ ಎಲ್ಲಾ ಅನುಕೂಲತೆಗಳನ್ನು ಸಂಗ್ರಹಿಸಿ ಕೆಲಸ ಪ್ರಾರಂಭದ ಮೇಲೆ ಜಯವು ನಮ್ಮ ಹಸ್ತಗತವಾಗುವಂತೆ ವರ್ತಿಸಬೇಕಾಗಿರುವುದು. ಅಗ್ಯೆ ಪ್ರಥಮ ಪ್ರಯತ್ನಗಳೇ ಜಯಹೊಂದುವವು. ಇದರಿಂದ ದೇಶಬಾಂಧವರಿಗೆ ಕೈಗಾರಿಕೆಯ ವಿಶ್ವಾಸವು ಹುಟ್ಟಿ ಇವರ ಅಭಿವೃದ್ಧಿಯು ಒಡನೇಗನೇ ಮುಂದುವರಿಯುವದು.

ಕಳೆದ ಶನಿವಾರ ಗತಿಸಿದ ಇಲ್ಲಿಯ ರೋಮನ್ ಕೆಥೋಲಿಕ್ ಬಿಶೊಪರಾಗಿದ್ದ ರೈಟ್ ರೆವರೆಂಡ್ ಡಾಕ್ಟರ್ ಕವದಿನಿ ಎಸ್ ಜೆ ಯವರ ಮರಣವಾರ್ತೆಯನ್ನು ಕೇಳಿ ಬಹಳ ಸಂತಾಪ ಪಟ್ಟಿರುವೆವು. ಆರೋಗ್ಯಕ್ಕಾಗಿ ಯುರೋಪಿಗೆ ಹೋಗಿ ಅಲ್ಲಿಂದ ಇಲ್ಲಿಗೆ ಇವರು ತಿರುಗಿ ಬಂದು ಬಹಳ ಸಮಯವಾಗಲಿಲ್ಲ. ಬರುತ್ತಾ ಇವರ ಆರೋಗ್ಯವು ಸಹ ಬಹಳ ಚಲೋದಾಗಿತ್ತು. ಕೆಲವು ಸಮಯದಿಂದೀಚೆಗೆ ಇವರಿಗೆ ಪ್ರಾಪ್ತಿಸಿರುವ ರಾಜಕುರುಗಳ ಬೇನೆಯು ಈ ಸರ್ತಿ ಇಷ್ಟು ಬೇಗನೆ [illegible] ಪರಿಣಾಮವನ್ನುಂಟುಮಾಡುವುದೆಂದು ಯಾರೂ ಯೋಚಿಸಲಿಲ್ಲ. [illegible] ವ್ಯಥೆಪಡುವ ರೋಮನ್ ಕೆಥೋಲಿಕ್ ಸಮುದಾಯದೊಡನೆ [illegible]

[illegible]

ಪಸ್ತರನ್ನೂ ಇತರ ಜಾತಿಗಳ ಮುಂದಾಳುಗಳೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಮುಖ್ಯ ಸಮುದಾಯಗಳಲ್ಲೊಂದಾದ ರೋಮನ್ ಕೆಥೋಲಿಕರ ಗುರು ಶ್ರೇಷ್ಠರನ್ನು ಸನ್ಮಾನಿಸುವರೆ ಬಂದಿದ್ದರು. ದಪನ ಕಾಲದಲ್ಲಿ ದೇವಾಲಯದೊಳಗೆ ಇವರ ವಿಷಯವಾದ ಪ್ರಸಂಗವನ್ನು ಘನಹೊಂದಿದ ಉಪ್ಪಿಯ ವಿಕಾರ್‌ರಾಗಿದ್ದ ಎಮ್ ಪಿ. ಕುಲಾಸೋ ರವರು ನಡೆಸಿದರು. ಶವ ಮೆರವಣಿಗೆಯಲ್ಲಿ ಯಜಮಾನತ್ವವನ್ನು ಕೊಲೇಜು ರೆಕ್ಟರರಾದ ಘನಹೊಂದಿದ ಫಾದರ್ ಪಿರೆಸ್, ಎಸ್ ಜೆ ರವರು ವಹಿಸಿಕೊಂಡಿದ್ದರು. ಇವರ ವಿಷಯವಾದ "ಮಾಸ್" ಎಂಬ ಪೂಜಾ ಸಂಭ್ರಮವನ್ನು ವಿಕಾರ್ ಜನರಲರಾಗಿರುವ ಘನಹೊಂದಿದ ಫಾದರ್ ರೊಸ್ಸಿ ಎಸ್ ಜೆ ರವರು ಮಾಡಿದರು.

ಸ್ವಾಮಿ ಬಾಬಾ ಪ್ರೇಮಾನಂದ ಭಾರತಿಯವರು

(ಕಳೆದ ಸಂಚಿಕೆಯಿಂದ ಮುಂದರಿದುದು)

ಸ್ವಾಮಿ ಬಾಬಾ ಪ್ರೇಮಾನಂದ ಭಾರತಿಯವರು ಕಲ್ಕತ್ತೆಯ ಒಂದು ಮಾನ್ಯ ಕುಟುಂಬದಲ್ಲಿ ಜನ್ಮವೆತ್ತಿದರು. ಇವರ ಕುಟುಂಬದಲ್ಲಿ ಹ್ಯಾಕೋರ್ಟ ಜಡ್ಜಿ ಮೊದಲಾದ ಹುದ್ದೆಗಳನ್ನು ವಹಿಸಿದ್ದವರೂ, ತಮ್ಮ ವಿದ್ವತ್ತೈಶ್ವರ್ಯದಿಂದ ಕಲ್ಕತ್ತೆಯ ಪಟ್ಟವರ್ಗ ಮುಖಂಡರಾದವರೂ ಹಲವರಿರುವರು. ಬಾಲ್ಯಪ್ರಾಯದಿಂದಲೇ ವಿವಿಧ ದೇವತೆಗಳ ಪೂಜಾ ಆಸಕ್ತಿಯು ಇವರಲ್ಲಿತ್ತು. ಇವುಗಳಲ್ಲಿ ಶ್ರೀಕೃಷ್ಣ ಮೂರ್ತಿಯು ಇವರ ಪ್ರಿಯತಮದೇವತೆಯಾಗಿದ್ದು ಇದರ ಆರಾಧನೆಯನ್ನೇ ಬಹು ಅಧಿಕವಾಗಿ ಮಾಡುತ್ತಿದ್ದರು. ಪ್ರಾಯಬರಿತರಾಗುತ್ತಾ ಮನೆಯಲ್ಲಿ ಎಲ್ಲರೂ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ದೇವಪೂಜೆ ಮೊದಲಾದವುಗಳನ್ನು ಪೂರ್ಣವಾಗಿ ತ್ಯಜಿಸಿದ್ದರಿಂದ ದೇವಾರಾಧನೆಯು ಅಸಾಧ್ಯವಾಗಿದ್ದರೂ ಪರತತ್ವಶಾಸ್ತ್ರವೇ ಮನುಷ್ಯನಿಗೆ ಇವೆಲ್ಲ ಎಲ್ಲವುಗಳಿಗಿಂತ ಅವಶ್ಯಕವಾದುದೆಂಬ ವಾಸನೆಯು ಇವರಲ್ಲಿ ಸದಾ ಇತ್ತು. ವೈಷ್ಣವ ಶಿರೋಮಣಿಗಳಾಗಿದ್ದ ಇವರ ಅಜ್ಜ ಮುತ್ತಜ್ಜರವರ ಸತ್ಸಂಗದಿಂದ ಬಾಲ್ಯಪ್ರಾಯದಲ್ಲಿಯೇ ಇವರಲ್ಲಿ ಭಕ್ತಿ ವಿಶ್ವಾಸಗಳನ್ನುಂಟುಮಾಡಿದ್ದರೂ ಇವು ತತ್ಕಾಲದಲ್ಲಿಯೇ ಪೂರ್ಣ ಫಲಿಸುವುದಕ್ಕೆ ಇವರಿಗೆ ಅವಕಾಶವು ದೊರಕಲಿಲ್ಲ.

ಹತ್ತು ಹದಿನೆರಡು ವರುಷ ಪ್ರಾಯದಲ್ಲಿಯೇ ವರ್ತಮಾನಪತ್ರಗಳಲ್ಲಿಯೂ, ಇಂಗ್ಲಿಷ್ ವಾಙ್ಮಯದಲ್ಲಿಯೂ ಪ್ರೇಮಾನಂದರವರಿಗೆ ಬಹು ಅಭಿರುಚಿ ಇತ್ತು. ಇಂಗ್ಲೀಷ್ ಭಾಷಾ ಜ್ಞಾನವು ತಮ್ಮ ಪ್ರಾಯದ ಹುಡುಗರಿಗಿಂತ ಬಹು ವಿಶೇಷವಾಗಿದ್ದು ಶಾಲಾ ಪುಸ್ತಕಗಳಲ್ಲದೆ ಇವರ ವಯಸ್ಸಿನವರಿಂದ ತಿಳಕೊಳ್ಳಲು ಕಷ್ಟಸಾಧ್ಯವಾಗಿರುವ ಪುಸ್ತಕಗಳನ್ನು ಯಾವಾಗಲೂ ಓದುತ್ತಿದ್ದರು. ತಮ್ಮ ಮನೆಯವರು ತರಿಸುತ್ತಿದ್ದ 'ಇಂಡಿಯನ್ ಡೈಲಿ ನ್ಯೂಸ್' ಎಂಬ ಇಂಗ್ಲೀಷ ವರ್ತಮಾನಪತ್ರವನ್ನು ಓದುತ್ತಿದ್ದು ಅದರಲ್ಲಿ ಪ್ರಕಟಣೆ ಬಗ್ಗೆ ಆಗಿಂದಾಗ್ಗೆ ಚಿಕ್ಕ ಲೇಖನಗಳನ್ನು ಬರೆಯುತ್ತಿದ್ದರು. ಪತ್ರ ಸಂಪಾದಕರು ಈ ಲೇಖನಗಳಲ್ಲಿ ತಪ್ಪನ್ನು ಅಲ್ಪಸ್ವಲ್ಪ ತಿದ್ದಿ ಪ್ರಕಟಿಸುತ್ತಿದ್ದರು. ಹೀಗೆ ಈ ಪತ್ರದಲ್ಲಿ ಮುದ್ರಿತವಾಗುತ್ತಿದ್ದ ತಮ್ಮ ಲೇಖನಗಳನ್ನು ಅತಿ ಕುತೂಹಲದಿಂದ ಓದುತ್ತಾ ಪತ್ರಗಳಿಗೆ ಬರೆಯುವ ಆವೇಶವು ಇವರಿಗೆ ಚಿಕ್ಕಪ್ರಾಯದಲ್ಲಿ ಬಹಳವಾಗಿ ಅಭಿವೃದ್ಧಿಸಿತು. 13ನೆ ವಯಸ್ಸಿನಲ್ಲಿ ಬರೆದ ಲೇಖನಗಳನ್ನು ಇಂಡಿಯನ್ ಡೈಲಿ ನ್ಯೂಸಿನ ಸಂಪಾದಕರು ಏನೂ ತಿದ್ದುಪಡಿ ಇಲ್ಲದೆ ಪ್ರಕಟಿಸಲಿಕ್ಕಾರಂಭಿಸಿದರು. ಇಷ್ಟರಲ್ಲಿಯೇ ಪತ್ರಗಳಿಗೆ ಲೇಖನಗಳನ್ನು ಬರೆಯುವ ಇವರ ಆಸಕ್ತಿಯು ಸಂತುಷ್ಟಿಗೊಳಲಿಲ್ಲ. ಅಂಗ್ಲಾಂಡದಲ್ಲಿ ಖ್ಯಾತಿಗೊಂಡಂಥಾ ಪತ್ರಗಳ್ಯಾವವೆಂದು ತಿಳಿದು ಅವನ್ನು ಸಹಾ ಓದಿ ಅವುಗಳ ಭಾಷಾಶೈಲಿಯನ್ನೂ ವ್ಯವಸ್ಥಾಕ್ರಮಗಳನ್ನೂ ಕಲಿತುಕೊಂಡರು. 12 ವರುಷ ಪ್ರಾಯವಾದಾಗ 'ಇಂಡಿಯನ್ ಯಾ ಭಾರತೀಯ' ಎಂಬ ತಮ್ಮ ಸ್ವಂತ ಪತ್ರವನ್ನು ಪಲೀಕ್ಷಾರ್ಥವಾಗಿ ಮುದ್ರಿಸಿದರು. ಆದರೆ ಇದರ ಪತ್ರ ಸಂಪಾದಕರು ಯಾರೆಂಬ ಸಂಗತಿಯು ಯಾರಿಗೂ ಗೊತ್ತಿರಲಿಲ್ಲ. ಪತ್ರವು ಬಹಳ ಯೋಗ್ಯವಾಗಿರುವುದೆಂದು ಇಂಗ್ಲೀಷ್‌ಮೆನ್, ಪಾಯೋನೀಯರ್ ಎಂಬ 'ಅಂಗ್ಲೊ ಇಂಡಿಯನ್' ಪತ್ರಗಳು ಸಹಾ ಇದನ್ನು ಶ್ಲಾಘಿಸಿದರು. ಸ್ವಲ್ಪ ಕಾಲದಲ್ಲಿಯೇ ಪ್ರೇಮಾನಂದರವರ ಖ್ಯಾತಿಯು ಸರ್ವ ಕಡೆಗಳಲ್ಲಿಯೂ ಹಬ್ಬಿ ಪಂಜಾಬಿನಲ್ಲಿ ಪ್ರಕಟವಾಗುತ್ತಿರುವ 'ಟ್ರಿಬ್ಯೂನ್' ಎಂಬ ಪತ್ರದ ಮಾಲಿಕರಾದ ಸರದಾರ್ ಡಿಯಾಲ್ ಸಿಂಗರವರು ಪ್ರೇಮಾನಂದರವರನ್ನು 'ಟ್ರಿಬ್ಯೂನ್' ಪತ್ರದ ಸಂಪಾದಕರನ್ನಾಗಿ ನೇಮಿಸಿದರು. ಎರಡು ವರುಷಗಳ ತನಕ ಈ ಪತ್ರವನ್ನು ನಡೆಸಿ ಪತ್ರರಚನೆಯಲ್ಲಿ ತಮಗೆ ಯುಕ್ತತೋರುವ ಸ್ವಾಧೀನತಾಭಾವವನ್ನು ವ್ಯಕ್ತಪಡಿಸುವರೆ ನಿರ್ಬಂಧಿಸಲ್ಪಟ್ಟದ್ದರಿಂದ ಟ್ರಿಬ್ಯೂನ್ ಪತ್ರಿಕಾಕರ್ತೃತ್ವವನ್ನು ಬಿಟ್ಟುಬಿಡಬೇಕಾಯಿತು. ರಾವಲಪಿಂಡಿಯಲ್ಲಿ 'ಪಂಜಾಬ ಟ್ಯಾಮ್ಸ್' ಎಂಬ ಪತ್ರವನ್ನು ಸ್ವಲ್ಪಕಾಲ ನಡಿಸಿ ಕಟ್ಟಕಡೆಗೆ ಕಲ್ಕತ್ತೆಯಲ್ಲಿ 'ಗಪ್ ಮತ್ತು ಗೊಸಿಪ್' ಎಂಬ ತಮ್ಮ ಸ್ವಂತ ಪತ್ರವನ್ನೇ ಕಟಿಸಿದರು.

ಈ ಪತ್ರವು ಬಹಳವಾಗಿ ಅಭಿವೃದ್ಧಿಗೊಂಡು ಪ್ರೇಮಾನಂದರವರಿಗೆ ಇದರಿಂದ ಬೇಕಾದ ದ್ರವ್ಯ ಸಂಪಾದನೆ ಸಹಾ ಆಯಿತು. ಧನ, ಕೀರ್ತಿ, ಆರೋಗ್ಯ, ಯೌವನ ಮೊದಲಾದ ಲೌಕಿಕ ಭಾಗ್ಯಗಳೆಲ್ಲವೂ ಇವರಿಗೆ ಪ್ರಾಪ್ತವಾಗಿದ್ದುವೆ. ಮನಸ್ಸಿನಲ್ಲಿ ಸುಖ, ಶಾಂತಿ ಇವೆರಡು ಮಾತ್ರ ಇರಲಿಲ್ಲ. [illegible] ಅತ್ಯಾಶೆಯು ಇವರಲ್ಲಿ [illegible]

ಸ್ವಾಮಿ ರಾಮಕೃಷ್ಣ ಪರಮಹಂಸರಂತಹ ಯೋಗೀಶ್ವರರ [illegible] ಕೊಂಡು ನಿತ್ಯ ಸುಖವೇನೆಂಬದನ್ನು ತಿಳಿಯುವರಾದರು. [illegible] ಇದನ್ನು ಅರ್ಥ ಮಾಡಿಕೊಳ್ಳುವರೆ ಗುರು ಉಪದೇಶವು ಅಗತ್ಯವಾಗಿದ್ದದ್ದರಿಂದ ಸರ್ವಸ್ವವನ್ನೂ ಬಿಟ್ಟು ಯೋಗ್ಯ ಗುರುವು ತನಗ್ಯಾರು ಸಿಕ್ಕುವನೆಂಬ ಕಾಂಕ್ಷೆಯಿಂದ ಸಂಭಾಜು ನದಿ ತೀರವನ್ನು ಸಾರಿದರು. ಅಲ್ಲಿ ದೈವವಶಾತ್ ತಮಗೆ ಪ್ರಾಪ್ತವಾದ ಗುರುವಿನಿಂದ ಸಾಂಖ್ಯಯೋಗದ ಮಹಾತ್ಮೆಯನ್ನು ತಿಳಕೊಂಡು ಜ್ಞಾನಯೋಗವನ್ನು ಸ್ವಲ್ಪ ಕಾಲ ಅಭ್ಯಾಸಿಸಿದರು. ಜ್ಞಾನಮಾರ್ಗದಿಂದ ಮಾತ್ರ ಇವರಲ್ಲಿಯ ಆಧ್ಯಾತ್ಮ ಹಸಿವಿಗೆ ತೃಪ್ತಿಯುಂಟಾಗಲಿಲ್ಲ. ಭಕ್ತಿಯೋಗ ಅಭ್ಯಾಸ ಮಾಡಿ ಸರ್ವಸೃಷ್ಟಿಲೀಲಾಯುಕ್ತವಾದ ಪರಬ್ರಹ್ಮ ಸ್ವರೂಪವನ್ನು ಜ್ಞಾನದೃಷ್ಟಿಯಿಂದ ಕಣ್ಣಾರೆಯೆ ನೋಡಿಕೊಂಡು ಆ ಮೂಲಕ ಸುಖಶಾಂತಿಯು ಮನಸ್ಸಿನಲ್ಲಿ ನಿರಂತರವಿರಿಸುವ ಕುತೂಹಲವು ಇವರಲ್ಲಿ ತೋರಿ ಲೌಕಿಕ ವೃತ್ತಿಗಳನ್ನೆಲ್ಲಾ ತ್ಯಜಿಸಿ ಸನ್ಯಾಸವನ್ನು ತಾಳಿದರು. ಶ್ರೀಕೃಷ್ಣನ ವ್ಯಕ್ತಿಸ್ವರೂಪವೇ ಇವರ ಧ್ಯಾನದಲ್ಲಿ ಸದಾ ಇದ್ದು ಆ ಪವಿತ್ರ ಮೂರ್ತಿಯು ತನಗೆ ಯಾವಾಗ ಪ್ರತ್ಯಕ್ಷವಾಗುವುದೋ ಎಲ್ಲಿ ದೊರಕುವುದೋ ಎಂಬ ಆಶಯದಿಂದ ಕಲ್ಕತ್ತೆಯಿಂದ 811 ಮೈಲು ದೂರವಿರುವ ವೃಂದಾವನಕ್ಕೆ ಕಾಲುನಡೆಯಿಂದ ನಡದು ಹೋದರು. ಹೋಗುತ್ತಾ ಹಾದಿಯಲ್ಲಿ ವೇಣುಗೋಪಾಳನು ಅಲ್ಲಲ್ಲಿ ಅಂತರಿಕ್ಷದಲ್ಲಿ ಕ್ಷಣಕ್ಷಣಕ್ಕೆ ಕಾಣಿಸಿಕೊಂಡು ಉತ್ತರ ಕ್ಷಣದಲ್ಲಿಯೇ ಅದೃಶನಾಗುತ್ತಿದ್ದನು. ಜಗತ್ತೆಲ್ಲಾ ಸೌರಸ್ಯವನ್ನು ಬೀರುವ ಅತನ ವೇಣುನಾದದಿಂದ ಪ್ರೇಮಾನಂದರ ಹೃದಯದಲ್ಲಿ ಉಕ್ಕಿದ ಪ್ರೇಮ ರಸ ಪ್ರವಾಹವು ಇವರ ಆತ್ಮನನ್ನು ಪೂರ್ಣವಾಗಿ ಆವರಿಸಿತು. ವೃಂದಾವನವನ್ನು ಮುಟ್ಟಿದ ಕೂಡಲೆ 5000 ವರುಷಗಳ ಹಿಂದೆ ಶ್ರೀಕೃಷ್ಣನ ಅವತಾರವನ್ನು ತಾಳಿದ ಅನಾದಿ ಪುರುಷನು ಅಲ್ಲಿ ತನ್ನ ಭಕ್ತಾವಳಿಯ ಹೃದಯಗಳೆಲ್ಲಾ ಪೂರ್ಣ ಪ್ರೇಮಭರಿತವಾಗುವಂತೆ ಶ್ರೀಗೋಪಾಲಕೃಷ್ಣ ರೂಪದಲ್ಲಿ ಇನ್ನೂ ಅಮಾನುಷ ಲೀಲಾಸಕ್ತನಾಗಿದ್ದದ್ದನ್ನು ಕಣ್ಣಾರೆ ಕಂಡನು.

ಅಂದಿನಿಂದ ಪ್ರೇಮಾನಂದರವರಿಗೆ ನಿತ್ಯವಾದಂಥಾ ಆತ್ಮಸುಖವೂ ಚಿತ್ತಶಾಂತಿಯೂ ಪ್ರಾಪ್ತಿಸಿದವು. ಅಂದಿನಿಂದ ಪ್ರೇಮಾನಂದರವರು 12 ವರುಷಗಳ ತನಕ ಸಂಕೀರ್ತನೆಗಳಲ್ಲಿ ತನ್ನ ಕಾಲವನ್ನು ಕಳೆಯುತ್ತಾ ಶ್ರೀಕೃಷ್ಣ ಲೀಲಾಮೃತವು ಸರ್ವರಲ್ಲಿಯೂ ವ್ಯಾಪ್ತವಾಗುವಂತೆ ಅಲ್ಲಲ್ಲಿ ಪ್ರಸಂಗಿಸಿ ಅನೇಕ ತೀರ್ಥಯಾತ್ರೆಗಳನ್ನು ಮಾಡಿದರು. ಉಳಿದ ಸಮಯವನ್ನು ಭಕ್ತಾವಳಿಯೊಡನೆ ಕಳೆಯುವುದಕ್ಕಾಗಿ ಪರಿಶುದ್ಧಕ್ಷೇತ್ರವಾದ ವೃಂದಾವನದಲ್ಲಿ ವಾಸಿಕೊಂಡಿದ್ದರು. ಆದರೆ ದೈವಸಂಕಲ್ಪವು ಬೇರೆಯಾಗಿತ್ತು. ಒಂದು ದಿನ ವೃಂದಾವನದಲ್ಲಿ ಧ್ಯಾನದಲ್ಲಿ ಮಗ್ನರಾಗಿದ್ದಾಗ ಶ್ರೀಕೃಷ್ಣನು ಚೈತನ್ಯರೂಪದಲ್ಲಿ ಇವರಿಗೆ ಕಾಣಿಸಿಕೊಂಡಂತಾಯಿತು. 'ಅಮೇರಿಕಾ ಖಂಡಕ್ಕೆ ಹೋಗಿ ಅಲ್ಲಿ ಶ್ರೀಕೃಷ್ಣ ನಾಮಾಮೃತವನ್ನು ಪಸರಿಸು' ಎಂಬದಾಗಿ ಇವರನ್ನು ಆ ದಿವ್ಯ ಮೂರ್ತಿಯು ಆಜ್ಞಾಪಿಸಿತು. ಧ್ಯಾನಪರರಾದ ಪ್ರೇಮಾನಂದರವರು ಎಚ್ಚತ್ತಾಕ್ಷಣ ತನಗಾದ ಆಜ್ಞೆಯನ್ನು ಕಾರ್ಯರೂಪಗೊಳಿಸಬೇಕೆಂದು ಅಮೇರಿಕಾ ಖಂಡಕ್ಕೆ ಲಂಡನ್ ಮಾರ್ಗವಾಗಿ ತೆರಳಿದರು. ಲಂಡನ್ ಪರಿಯಂತರ ಪ್ರಯಾಣದ ಖರ್ಚನ್ನು ಇವರೊಬ್ಬ ಸ್ನೇಹಿತರು ವಹಿಸಿಕೊಂಡರು. ಲಂಡನ್ ಪಟ್ಟಣವನ್ನು ತಲ್ಪಿದನಂತರ ಇವರ ಹತ್ತಿರ ಬಿಡಿಗಾಸೂ ಉಪಾಯವಿಲ್ಲದಿದ್ದರೂ ದೈವಸಹಾಯವು ಇವರಿಗಿದ್ದುದರಿಂದ ಒಂದಲ್ಲ ಒಂದು ದಾರಿಯಿಂದ ಬೇಕಾದ ದ್ರವ್ಯಸಂಗ್ರಹವು ಇವರಿಗೆ ದೊರಕುತ್ತಿತ್ತು. ಲಂಡನ್ ಪಟ್ಟಣದಲ್ಲಿ ಪ್ರಕಟವಾಗುತ್ತಿರುವ 'ವೆಸ್ಟ್‌ಮಿನ್ಸ್ಟರ್ ಗೆಜೇಟು', ಮೊದಲಾದ ಪತ್ರಗಳಿಗೆ 'ಮೂರ್ತಿ ಆರಾಧನೆಯ ವಿಶೇಷತ್ವ' ಮೊದಲಾದ ಹಿಂದೂ ಧರ್ಮಶಾಸ್ತ್ರ ಮಹಿಮೆಯ ತತ್ವವಿಷಯಗಳನ್ನು ಲೇಖನಗಳಲ್ಲಿ ಬರೆದು ಇಂಥಾ ಲೇಖನಗಳಿಗೆ ಪತ್ರಗಳ ಅಧಿಪರುಗಳಿಂದ ಉಚಿತವಾದ ಪ್ರತಿಫಲವನ್ನು ಪಡಿಯುತ್ತಿದ್ದರು. ಈ ರೀತಿ ಲಂಡನ್ ಪಟ್ಟಣದಲ್ಲಿ ಸ್ವಲ್ಪ ಕಾಲವಿದ್ದು ಅಮೇರಿಕಾ ದೇಶದ ಪ್ರಯಾಣಕ್ಕೆ ಬೇಕಾದ ದ್ರವ್ಯವನ್ನು ಇಲ್ಲಿಯೇ ಸಂಗ್ರಹಿಸಿಕೊಂಡರು. ಅಮೇರಿಕಾ ದೇಶಕ್ಕೆ ಹೋಗಲಿಕ್ಕೆ ಇವರಿಗೆ ಈ ರೀತಿ ಸಾಧ್ಯವಾಯಿತು. ಅಲ್ಲಿ ಸಹಾ ಪ್ರಥಮತಃ ತಮ್ಮ ಮತ್ತ ಸಿದ್ಧಾಂತಗಳನ್ನು ವರ್ತಮಾನಪತ್ರಗಳಲ್ಲಿ ಉಪನ್ಯಾಸ ರೂಪದಲ್ಲಿ ಪ್ರಕಟಿಸಿ ಕ್ರಮೇಣ ಇವರ ಪರಿಚಿತಿಯು ಅಮೇರಿಕದಲ್ಲಿ ಸರ್ವರಿಗೂ ಆಯ್ತಿತು. ಇದಕ್ಕೆ ಮುಂದಿನ ಸ್ವಾಮಿ ಬಾಬಾ ಪ್ರೇಮಾನಂದರವರ ವೃತ್ತಾಂತವನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ದೇವಪ್ರೇರಣೆಯಿಂದ ಬಾಬಾ ಪ್ರೇಮಾನಂದ ಭಾರತಿಯವರು ಕೈಕೊಂಡ ಸುಕಾರ್ಯಗಳೆಲ್ಲವೂ ಸುಫಲಗಳನ್ನೀಯಲಿ ಎಂತ ಹೃತ್ಪೂರ್ವಕ ಬಯಸುವಾ.

ದಿವಂಗತರಾದ ಬಿಷೊಪ್ ಕವದಿನಿ ಪ್ರಭುಗಳವರು

ಮಂಗಳೂರಿನ ಬಿಶೊಪರಾಗಿದ್ದ ರೈಟ್ ರೆವೆರೆಂಡ್ ಡೊಕ್ಟರ್ [illegible] ಕವದಿನಿ ಎಸ್. ಜೆ. ಯವರು ಮೊನ್ನೆ ಶನಿವಾರ ದಿವಸ ಮಧ್ಯಾಹ್ನ ಒಂದು ಗಂಟೆಗೆ [illegible] ಕುರುವಿನಿಂದ ದೈವಾಧೀನರಾದರೆಂಬ ಶೋಕಕರವಾದ ವಾರ್ತೆಯನ್ನು [illegible]

ಮಂಗಳೂರಿನ ಸಕಲ ಕ್ರೈಸ್ತರು ಸಹಾ ಈ ದುಃಖದಲ್ಲಿ ಸಹಭಾಗಿಗಳಾಗಿರುತ್ತಾರೆ. ಹಾಗೂ ರೋಮನ್ ಕಥೋಲಿಕ ಕ್ರೈಸ್ತ ಮಂಡಲಿಯವರಿಗೆ ಉಂಟಾದ ಶೋಕವು ಅಷ್ಟಿಷ್ಟೆಂತ ಹೇಳಲಸಾಧ್ಯವು. ಇವರಿಗೆ ರೋಗಕುರುವಾಗಿ ಇವರು ಕೆಲವು ದಿವಸ ಆಸ್ಪತ್ರದಲ್ಲಿದ್ದರು. ಶಸ್ತ್ರಪ್ರಯೋಗ ಮಾಡಿಸಿದರೆ ಇದರಿಂದ ಗುಣಾಂಶವು ಶಿಕ್ಕೀತೆಂಬ ಭರವಸದಿಂದ ಇವರು ಇಲ್ಲಿಯ ಡಾಕ್ಟ್ರರವರಿಂದ ಶಸ್ತ್ರಪ್ರಯೋಗವನ್ನು ಮಾಡಿಸಿ ಆರೋಗ್ಯಕ್ಕೋಸ್ಕರ ಉದಕಮಂಡಲಕ್ಕೆ ಹೋದರು ಅಲ್ಲಿ ಅವರ ಕಾಯಿಲೆಯು ಗುಣವಾಗದೆ ಹೆಚ್ಚೆಚ್ಚಾಗಿ ಕೊನೆಯಲ್ಲಿ ಈ ಅಸ್ವಸ್ಥದಿಂದಲೇ ಅವರು ಮಾನವ ಲೋಕವನ್ನು ಬಿಟ್ಟು ಪರವಸ್ಥರಾದರು ಅವರ ಶವವನ್ನು ಒಗೆಯ ಪುಷ್ಪಗಳಿಂದಲೂ ಸುಗಂಧಾನು ಲೇಪನಗಳಿಂದಲೂ ಪರಿಮಳಿಸುವಂತೆ ಅಲಂಕರಿಸಿ ಶವಪೆಟ್ಟಿಗೆಯಲ್ಲಿಟ್ಟು ಉಗಿಬಂಡಿಯಲ್ಲಿ ನಿನ್ನೆ ಸಂಜೆಗೆ ಮಂಗಳೂರಿಗೆ ತಂದಿರುವರು ಕ್ರೈಸ್ತರಲ್ಲಿ ಆಬಾಲವೃದ್ಧರೆಲ್ಲರೂ, ಅನೇಕ ಮಂದಿ ಇತರ ಜಾತಿಗ್ರಹಸ್ಥರೂ ಇವರ ಶವವನ್ನು ನೋಡಬೇಕೆಂಬ ಆಶೆಯಿಂದ ರೈಲ್ವೇ ಪ್ಲೇಟ್ಫೋರಮ್ಮಿನಲ್ಲಿ ನೆರದಿದ್ದರು ಇವರ ಶವವನ್ನು ಮೆರವಣಿಗೆಯಾಗಿ ತರುವಾಗ್ಯೆ ಹಂಪನಕಟ್ಟೆ ರಸ್ತೆಯು ಜನಸ್ತೋಮದಿಂದ ಕಟ್ಟಿ ಹೋಗಿತ್ತು. ನಿನ್ನೆ ರಾತ್ರೆ ಇವರ ಶವಪೆಟ್ಟಿಗೆಯನ್ನು ಮಹಾ ವಿಜೃಂಭಣೆಯಿಂದ ಸೈಂಟ್ ಅಲೋಯಿಸ್ಯುಸ್ ಕೋಲೇಜಿಗೆ ತಂದರು ಈ ಹೊತ್ತು ಬೆಳಗ್ಗೆ 8 ಗಂಟೆಗೆ ಇವರ ಅಪರಕ್ರಿಯಾದಿಗಳನ್ನು ಹೆಚ್ಚು ಆಡಂಬರದಿಂದ ನಡಯಿಸಿ ಇವರ ಶವವನ್ನು ರುಸಾರಿಯೋ ದೇವಾಲಯದಲ್ಲಿ ದೊಡ್ಡ ಮೆರವಣಿಗೆಯಿಂದ ಬೂಸಾಪ್ ಮಾಡಿದರು. ಇದರ ಖರ್ಚಿನ ಬಗ್ಗೆ ಮಂಗಳೂರಿನ ಕ್ರೈಸ್ತರು ಕಥೋಲಿಕ್ ಯೂನಿಯನ್ ಕ್ಲಬ್ಬಿನಲ್ಲಿ ಸಭೆ ಕೂಡಿ 100 ರೂಪಾಯಿ ವಂತಿಗೆ ಸೇಖರಿಸಿರುತ್ತಾರೆ

ಇವರು 1846ರಲ್ಲಿ ಇತಲೀ ದೇಶದ ಬೆರ್ಗಾಮೋ ಪಟ್ಟಣದ ಕೆಸ್ಲಿನೇಟ್ ಎಂಬ ಗ್ರಾಮದಲ್ಲಿ ಜನ್ಮವನ್ನೆತ್ತಿದರು ಇವರು ಔಸ್ತ್ರಿಯಾ, ಫ್ರಾನ್ಸ್ ದೇಶಗಳಲ್ಲಿ ವಿದ್ಯಾಭ್ಯಾಸಂಗವನ್ನು ಮಾಡಿ ವಿದ್ಯೆಯಲ್ಲಿ ಸೈಪುಣ್ಯತೆಯನ್ನು ಹೊಂದಿ ಎಸ್ ಜೆ ಪದವಿಯನ್ನು ಸಂಪಾದಿಸಿ 1880ರಲ್ಲಿ ಮಂಗಳೂರಿಗೆ ಬಂದು ಜೆಪ್ಪು ಸಮಿನರಿಯಲ್ಲಿ ಥಿಯೋಲೋಜಿ ಕಲಿಸುವ ಪಂಡಿತರಾದರು ಒಂದು ವರುಷದ ನಂತರ ಸೈಂಟ್ ಅಲೋಯಿಸ್ಯುಸ್ ಕೋಲೇಜಿನಲ್ಲಿ ಗಣಿತ ರಸಾಯನ ಶಾಸ್ತ್ರಗಳನ್ನು ಹುಡುಗರಿಗೆ ಕಲಿಸುತ್ತಿದ್ದರು ಇವರಿಗೆ ಲತೀನ ಭಾಷೆಯಲ್ಲಿ ಅಸಾಧಾರಣವಾದ ಪ್ರೀತಿಯೂ, ಅಸಾಧೃಶವಾದ ವಿಚಕ್ಷಣತೆಯೂ ಇದ್ದುದರಿಂದ ಎಫ್ ಎ ಬಿ ಎ ಕ್ಲಾಸುಗಳಿಗೆ ಲತೀನ ಪಂಡಿತರಾಗಿ ಪಾಠ ಹೇಳಿಕೊಡುತ್ತಿದ್ದರು ನಂತರ ಇವರು 1887ರಿಂದ-1890ರ ವರೆಗೆ ರೆಕ್ಟರ್ ಪದವಿಯನ್ನೂ, 1890ರಿಂದ 1895ರ ವರೆಗೆ ವಿಕಾರ್ ಜನರಲ್ ಮತ್ತು ಸುಪೀರಿಯರ್ ಆಫ್ ದಿ ಮಿಶ್ಶನ್ ಎಂಬ ಪದವಿಗಳನ್ನು ಅಲಂಕರಿಸಿ ಆಗ್ಯೆ ವಿರೋಪರಾಗಿದ್ದ ಕೀರ್ತಿಶೇಷ, ಬಹುಮಾನಪಟ್ಟ ಡಾಕ್ಟರ್ ಪಾಗಾನಿ ಧೂರೆಗಳವರು ಮೃತಪಟ್ಟ ನಂತರ ಮಂಗಳೂರಿನ ಬಿಶೋಪರಾದರು

ಇವರು ತಮ್ಮ ಪ್ರಜಾಪರಿವಾರದವರನ್ನು ಅತಿಶಯವಾದ ಪ್ರೀತಿಯಿಂದಲೂ ಹೆಚ್ಚಾದ ಬುದ್ಧಿಚಾತುರ್ಯದಿಂದಲೂ ನಡಿಸುತ್ತಿದ್ದರೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಇವರು ಕೈಕೊಂಡ ಸರ್ವ ಕಾರ್ಯಗಳನ್ನು ಎಲ್ಲರ ಮನಸ್ಸಿಗೆ ತೃಪ್ತಿಯಾಗುವಂತೆ ನೆರವೇರಿಸಿ, ಎಲ್ಲವರ ಪ್ರೀತಿಗೂ ಪ್ರೇಮಕ್ಕೂ ಪಾತ್ರರಾಗಿದ್ದರು ಇವರ ಮುಖಕಮಲದಲ್ಲಿ ಶಾಂತಗುಣವೂ ದಯಾರಸವೂ ಮುದ್ರಿತವಾಗಿದ್ದವು ಇವರ ಹೃದಯವು ಪ್ರೇಮರಸದಿಂದ ತುಂಬಿ ತುಳುಕುತಲಿತ್ತು ಇವರ ಗಂಭೀರವಾದ ಮುಖಕಮಲವು ಒಂದು ಬಗೆಯ ಅಪೂರ್ವವಾದ ಮಂದಹಾಸದಿಂದ ವಿಕಸಿತವಾದಂತೆ ತೋರುತ್ತಿತ್ತು. ಕೋಲೇಜಿನ ಹುಡುಗರ ಮೇಲೆ ಇವರಿಗೆ ಅತಿಶಯವಾದ ಮಮತೆಯು ಇತ್ತು. ಗತ ವರುಷದಲ್ಲಿ ಇವರು ಕಾಯಿಲೆಯಲ್ಲಿ ಬಿದ್ದ ಸಂಬಂಧ ಕ್ಷೇಮಲಾಭಕ್ಕೋಸ್ಕರ ಯುರೋಪಿಗೆ ಹೊರಡಲು ಉದ್ಯುಕ್ತರಾದಾಗ್ಯೆ ಅವರ ಪ್ರಜಾಪರಿವಾರದವರು ತೋರ್ಪಡಿಸಿರುವ ವಿಶೇಷವಾದ ದುಃಖವನ್ನು ಇವರ ಅಸ್ವಸ್ಥವು ಗುಣವಾಗಿ ಇವರು ಹಿಂದುಸ್ಥಾನಕ್ಕೆ ಹಿಂದೆ ಬಂದಾಗ್ಯೆ ಅವರು ಪಟ್ಟ ಆನಂದವನ್ನೂ ನೋಡಿದರೆ ರೋಮನ್ ಕಥೋಲಿಕರು ಎಷ್ಟರ ಮಟ್ಟಿಗೆ ಇವರನ್ನು ಗೌರವಿಸಿ ಪ್ರೀತಿಸುತ್ತಿದ್ದರೆಂಬದು ಎಲ್ಲರಿಗೂ ಸ್ಪಷ್ಟವಾಗುವದು. ಈ ಪುಣ್ಯ ಪುರುಷರ ಅಕಾಲ ಮರಣದಿಂದ ಕ್ರೈಸ್ತರಿಗೆ ಉಂಟಾದ ನಷ್ಟವು ಇಷ್ಟು ಇಷ್ಟೆಂದು ಹೇಳಲಸಾಧ್ಯವು ಇವರ ಆತ್ಮಕ್ಕೆ ದೇವರು ಶಾಶ್ವತವಾದ ಸುಖ ಸೌಖ್ಯವನ್ನು ದಯಾಪಾಲಿಸಲಿ ಎಂತ ನಾವೆಲ್ಲರೂ ಏಕಕಂಠರಾಗಿ ಪ್ರಾರ್ಥಿಸುತ್ತೇವೆ.

Mangalore,
March 28, 1910.

M. D. S.

---o---

ದೀರ್ಘಾಯುಷ್ಯಗಳು ಯಾರು?

[illegible] ಪ್ರಪಂಚದ ಸ್ಥಿತಿಗಳನ್ನು ತಿಳಕೊಳ್ಳಲಿಕ್ಕೆ ಎಲ್ಲಾ ವಿಧದ [illegible]

[illegible]

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರ ದೊಡ್ಡವರೂ ನೋಡತಕ್ಕ, ಕ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರಿಶೀಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕಿ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲವೆಂಡರ್ ಸೋಪು, ಅತ್ತರ್, ಪನ್ನೀರು, ಪರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರ ಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦.

(೧) ವಿಳಾಸ — ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ ಬೆಂಗಳೂರು ಸಿಟಿ.

ಅಥವಾ

ಏಜಂಟರು — (೨) ದಿ ಊಲನ್ ಮಾರ್ಟ್,
ನಂ ೧, ಮಂಗಳೂರು (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಕತೆಯಿಂದ ಪುರಾ ರಿಜಿಸ್ಟ್ರಿಯನ್ನು ೨೫ ವರುಷಗಳ ತನಕ ಪರಿಶೋಧಿಸಿ ದೀರ್ಘಾಯುಷ್ಯಗಳ್ಯಾರೆಂಬದನ್ನು ಆಯಾ ವೃತ್ತಿಗಳನ್ನನುಸರಿಸುವವರ ತಾರತಮ್ಯಾನುಸಾರ ನಿರ್ಣಯಿಸಿರುತ್ತಾರೆ ವೃತ್ತಿ ವಿಧಾನಗಳು ಸರ್ವಸಾಧಾರಣವಾಗಿ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯಾಗಿರುವದರಿಂದ ನಿವಾಸಿಕರ ಆಯುಷ್ಯಕಾಲವು ಆಯಾ ದೇಶಗಳ ಹವಾಗುಣವನ್ನನುಸರಿಸಿ ಅಲ್ಪಸ್ವಲ್ಪ ಹೆಚ್ಚು ಕಡಿಮೆಯಾದರೂ ಅವರ ಸರಾಸರಿಯು ಮೆಸ್ಸಚ್ಯುಸೆಟ್ಸ್ ಸಂಸ್ಥಾನದಲ್ಲಿ ನಿರ್ಣಯಿಸಿದಂತೆ ಬಹಳ ಮಟ್ಟಿಗೆ ಒಂದೇ ರೀತಿಯಾಗಿರುವುದು ಆದಕಾರಣ ಎಲ್ಲಾ ಕಡೆಗಳ ದೇಶಸ್ಥರೂ ಇದನ್ನು ತಿಳಕೊಂಡು ತಮ್ಮಲ್ಲಿ ದೀರ್ಘಾಯುಷ್ಯಗಳ್ಯಾರೆಂಬುವುದನ್ನು ಅಂದಾಜುಮಾಡಿಕೊಳ್ಳಬಹುದು

ಮೆಸ್ಸಚ್ಯುಸೆಟ್ಸ್ ದೇಶದ ಈ ಪರಿಶೋಧನೆ ಪ್ರಕಾರ ಬೇಸಾಯ ಕಸಬನ್ನು ಮಾಡುವ ರೈತರಷ್ಟು ದೀರ್ಘಕಾಲ ಬಾಳುವವರು ಇತರರು ಯಾರೂ ಅಲ್ಲವೆಂತ ತೋರಿಬರುತ್ತದೆ ಇವರ ಆಯುಷ್ಯದ ಸರಾಸರಿಯು ೬೬ ವರುಷಗಳಿಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ ಅಂದರೆ ಇತರ ವೃತ್ತಿಗಳನ್ನನುಸರಿಸುವವರಕ್ಕಿಂತ ೧೦ ವರುಷಗಳಷ್ಟು ಹೆಚ್ಚಾಗಿರುವುದು ಇದರಿಂದ ಮನುಷ್ಯನಿಗೆ ಸ್ವಭಾವಿಕವಾದ ವೃತ್ತಿಯು ಬೇಸಾಯವೇ ಎಂತ ವ್ಯಕ್ತವಾಗುವುದು ಗಾಳಿ ಒಳ್ಳೇದಾಗಿ ಚಲಿಸುವಂಥಾ ಅಥವಾ ಪ್ರಕಾಶವು ಸಹಾ ಚನ್ನಾಗಿರುವ ಕಾರ್ಖಾನೆಗಳು ಸಹಾ ಮನುಷ್ಯನಿಗೆ ಸ್ವಾಭಾವಿಕವಾದ ಕೆಲಸ ಸ್ಥಳಗಳಲ್ಲವೆಂಬದನ್ನು ತಿಳಕೊಳ್ಳಬಹುದು

ಮಿಕೆನಿಕ್ಸ್ ಯಾ ಕೈಕೆಲಸದ ಕಸಬುಗಾರರು ಬೇಸಾಯಗಾರರ ನಂತರ ದೀರ್ಘಾಯುಷ್ಯಗಳಲ್ಲಿ ಎರಡನೇಯವರಾಗಿರುವರು. ಇವರ ಆಯುಷ್ಯಕಾಲದ ಸರಾಸರಿಯು ೫೫ ವರುಷಗಳಾಗಿರುವುದು ಕಲ್ಲುಕುಟಿಗರು, ಮತ್ತು ಸಾಧಾರಣ ಬಡಿಗೆ ಕೆಲಸದವರು, ಹಡಗಗಳಲ್ಲಿಯೂ ಯಂತ್ರ ಕಾರ್ಖಾನೆಗಳಲ್ಲಿಯೂ ಮಗದ ಕೆಲಸ ಮಾಡುವವರು ಈ ವರ್ಗವನ್ನು ಸೇರಿರುತ್ತಾರೆ ಇವರಲ್ಲಿ ಕಲ್ಲುಕುಟಿಗರ ಆಯುಷ್ಯಕಾಲವು ಕಡಿಮೆಯಾಗಿದ್ದರೂ ಸರಾಸರಿ ಮೇಲೆ ಕೈಕೆಲಸದವರ ಆಯುಷ್ಯವು ೫೫ ವರುಷಗಳಾಗಿರುತ್ತದೆ

'ಇನ್‌ಡೋರ್' ಅಥವಾ ಕಟ್ಟೋಣಗಳೊಳಗೆ ಕೆಲಸ ಮಾಡುವವರ ಆಯುಷ್ಯದ ಸರಾಸರಿಯು ೪೯ ವರುಷಗಳೆಂತ ನಿರ್ಣಯಿಸಲ್ಪಟ್ಟಿರುವುದು ಈ ವರ್ಗದವರಲ್ಲಿ ಬೇಕರ್ಸ್ ಅಥವಾ ರೊಟ್ಟಿ ತಯ್ಯಾರಿಸುವವರೂ, ಗಾಡಿಗಳನ್ನು ತಯ್ಯಾರಿಸುವವರೂ, ಅಡಿಗೆಯವರೂ, ಮೊದಲಾದ ಅನೇಕ ವೃತ್ತಿಯವರು ಸೇರಿರುತ್ತಾರೆ.

ಕಟ್ಟೋಣಗಳೊಳಗೆ ಕೆಲಸ ಮಾಡುವ ವಿವಿಧ ಕಸಬುಗಾರರಿರುವರು. ಶೇಂದಿ ಶರಾಬು ಅಂಗಡಿಗಳಲ್ಲಿ ಕುಡಿಕರಿಗೆ ಶೇಂದಿ ಶರಾಬು ಮೊದಲಾದವುಗಳನ್ನು ಕೊಡುವವರ ಆಯುಷ್ಯದ ಸರಾಸರಿಯು ೩೯ ವರುಷಗಳೆಂದೂ ಪೆಟ್ಟಿಗೆಗಳನ್ನು ತಯ್ಯಾರಿಸುವವರದು ೬೦ ವರುಷಗಳೆಂದೂ, ಬುಕ್‌ಬ್ಯಾಂಡರ್ಸ್ ಅಥವಾ ಪುಸ್ತಕಗಳನ್ನು ಕಟ್ಟುವವರು ಸರಾಸರಿಯಲ್ಲಿ ೪೩ ವರುಷ ಬಾಳುವರೆಂದೂ, ಟುರುಟುಗಳನ್ನು ತಯ್ಯಾರಿಸುವವರಿಗೆ ೩೯ ವರುಷಗಳವರೆಗೆ ಆಯುಷ್ಯವಿರುವುದೆಂದೂ, ಪ್ರಿಂಟರ್ಸ್ ಅಥವಾ ಛಾಪಖಾನೆ ಕೆಲಸದವರ ಆಯುಷ್ಯ ಸರಾಸರಿಯು ೪೧ ವರುಷಗಳಾಗಿರುವದೆಂದೂ, [illegible] ರದು ೩೭ ವರುಷಗಳೆಂತಲೂ, ದರ್ಜಿಗಳು ಸ್ವಲ್ಪ ಹೆಚ್ಚು ಕಡಿಮೆ [illegible]

[illegible]

ಮೆಸ್ಸಚ್ಯುಸೆಟ್ಸ್ ದೇಶದ ಮರಣ ರಿಜಿಸ್ತ್ರಿಯನ್ನು ಇನ್ನಷ್ಟು ಪರಿಶೀಲಿಸಿದ್ದಲ್ಲಿ ಇನ್ನು ಕೆಲವು ಚೋದ್ಯ ವಿಷಯಗಳನ್ನು ತಿಳಿಯಬಹುದು. ಕಸಾಯಿಗಳ ಸರಾಸರಿ ಜೀವಮಾನವು ೫೦ ವರುಷ, ಶವದಹನದಫನಾದಿಗಳನ್ನು ಮಾಡುವವರದು ೫೯ ವರುಷ, ಅತ್ತಿತ್ತ ಸಂಚರಿಸಿಕೊಂಡಿದ್ದು ಕಾಗದ ಮೊದಲಾದವುಗಳನ್ನು ಒಂದೂರಿಂದ ಇನ್ನೊಂದೂರಿಗೆ ಒಯ್ಯುವ ಕಸದಿನವರದು ೪೪ ವರುಷ, ಗಾಡಿ ಹೊಡಿಯುವವರದು ೪೫ ವರುಷಗಳಾಗಿರುವವೆಂದು ಅರಿತುಕೊಳ್ಳಬಹುದು. ಸಮುದ್ರದಲ್ಲಿ ನಾವೆ ಮೊದಲಾದವುಗಳಲ್ಲಿ ಗೇಯುತ್ತಿರುವವರ ಆಯುಷ್ಯಕಾಲವು ಇತರ ವೃತ್ತಿಗಾರರ ಆಯುಷ್ಯಗಳಿಗಿಂತ ಅಧಿಕವಾಗಿರುವದೆಂಬದು ಇದರಿಂದ ವ್ಯಕ್ತವಾಗುವದಿಲ್ಲ. ಇವರ ಜೀವಮಾನದ ಸರಾಸರಿಯು ೪೭ ವರುಷಗಳಾಗಿರುವದು.

ಸಾವುಕಾರರು, ಲೆಕ್ಕಗಳನ್ನು ಬರಿಯುವ ಶ್ಯಾನುಭೋಗರು ಅಥವಾ ವ್ಯಾಪಾರ ವೃತ್ತಿಗಳನ್ನನುಸರಿಸುವ ಏಜೆಂಟರು ಮೊದಲಾದವರ ಸರಾಸರಿ ಆಯುಷ್ಯಕಾಲವು ೪[illegible] ವರುಷಗಳೆಂತ ನಿಷ್ಕರ್ಷಿಸಲ್ಪಟ್ಟಿರುತ್ತದೆ. ಔಷಧಿ ವ್ಯಾಪಾರಸ್ಥರು ಮತ್ತು ವೈದ್ಯರು ಸರಾಸರಿ ೪೯ ವರುಷಗಳ ವರೆಗೆ ಜೀವಿಸುವರು. ಔಷಧಿ ವ್ಯಾಪಾರವಾಗಲಿ ವೈದ್ಯ ಉದ್ಯೋಗವಾಗಲಿ ಮೆಸ್ಸಚ್ಯುಸೆಟ್ಸ್ ದೇಶದಲ್ಲಿ ಆರೋಗ್ಯಕರವೆಂತ ತೋರುವುದಿಲ್ಲ. ಇಲ್ಲಿಯವರ ಈ ವಿಷಯದ ಅನುಭವವು ಹ್ಯಾಗಿರುವದೋ?

[illegible] ವೇದವಿದ್ಯಾ [illegible] ಸಿದ್ಧಪಡಿಸಿಕೊ[illegible] ಕೆಲಸ ನಡೆಸುತ್ತಿರುವವರು ೬೦ ವರುಷಗಳ ಆಯುಷ್ಯ [illegible] ಜೀವಿಸುವರು. [illegible] ದಲಾದ ಮುದ್ರೆ [illegible] ವರುಷ [illegible] ಕ್ರೈಸ್ತ ದೇವಾಲಯಗಳಲ್ಲಿ [illegible] ಮುದ್ದೆಯನ್ನು [illegible] ವರುಷ [illegible] ಪೂರ್ಣಾಯುಷ್ಯವು [illegible].

[illegible] ರುವುದು [illegible] ವರುಷಗಳಾಗಿರುವುದು.

ಈ ವೃತ್ತಾಂತದಿಂದ [illegible] ನಮ್ಮ ದೇಶದ [illegible] ವೃತ್ತಿಗಳಲ್ಲಿ [illegible] ಮೇಲೆ [illegible] ಆಯಾ ವೃತ್ತಿಗಳಲ್ಲಿ [illegible] ಚಿಕ್ಕ [illegible] ಮತ್ತು ವ್ಯತ್ಯಾಸ [illegible] ಆಯುಷ್ಯ [illegible] ಸರಾಸರಿಯು ನಿರ್ಣಯಿಸಲ್ಪಟ್ಟಿರುವುದು.

M. I.

[illegible] ಕಬ್ಬುಗಳು

[illegible] ಸುಮಾರಾಗಿ [illegible] ಕಬ್ಬುಗಳನ್ನು [illegible] ಸರಕಾರ [illegible] ರಬಿಂಗಳಿಗೆ [illegible] ರೈತರಿಗೆ ಕೊಡುತ್ತಾರೆ. ಈ [illegible] ಕಬ್ಬುಗಳನ್ನು [illegible] ಅನೇಕ [illegible] ಮತ್ತು [illegible] ರೈತರು ಇದೇ ವ್ಯವಸಾಯವನ್ನು ಮಾಡುತ್ತಿದ್ದರು.

[illegible] ೨೦ ವರುಷಗಳ [illegible] ವುಗಳ ಸಂತತಿಯು [illegible] ಇವು [illegible] ಕೆಟ್ಟುಹೋಗಿ [illegible] ರೋಗ ತಗಲುವದು ಹೆಚ್ಚಾಗಿದೆ. [illegible] ಕಬ್ಬಿಗೆ [illegible] ವದು ಹೆಚ್ಚಿದಕಾರಣ ತಕ್ಕ ಪರಿಹಾರವನ್ನು ಕಂಡು ಹಿಡಿಯುವದಕ್ಕಾಗಿ ಸಾಮಲಕೋಟೆಯಲ್ಲಿ ಒಂದು ಗವರ್ನಮೆಂಟ್ ವ್ಯವಸಾಯದ ಫಾರಂ ಏರ್ಪಡಿಸಲ್ಪಟ್ಟಿತು. ಮದರಾಸಿನಿಂದಲೂ ಮತ್ತು ಇಂಡಿಯಾದೇಶದ ಇತರ ಕಡೆಗಳಿಂದಲೂ ಅನೇಕ ರಬಿಂ ಕಬ್ಬುಗಳನ್ನು ಹೊಸದಾಗಿ ತರಿಸಿ, ಸ್ಥಳದ ಕಬ್ಬುಗಳ ಜೊತೆಗೆ ಫಾರಂನಲ್ಲಿ ಒಟ್ಟಿಗೆ ಬೆಳಸಿತ್ತು. ಮಾರನೇ ವರುಷ ವಿಶಾಖಪಟ್ಟಣದ ಕಲೆಕ್ಟರವರು ಮೊರಿಷಸ್‌ನಿಂದ ಹೊಸದಾಗಿ ಕಬ್ಬುಗಳನ್ನು ತರಿಸಿ ಅಲ್ಲಿ ಒಂದು ತೋಟದಲ್ಲಿ ಬೆಳಯುತ್ತಿರುವದಾಗಿ ತಿಳಿದು ಬಂತು. ಇವುಗಳನ್ನು ಪರೀಕ್ಷಿಸಲಾಗಿ ಕೆಲವು ಬಹಳ ಉತ್ತಮವೆಂದು ಕಂಡುಬಂದದ್ದರಿಂದ ಅವುಗಳನ್ನು ಸಾಮಲಕೋಟೆಗೆ ತಂದು ಬೆಳೆಸಿದರು. ಇಲ್ಲಿ ಇವುಗಳನ್ನು ಅನೇಕ ವರುಷಗಳು ಬೆಳೆದು ಆ ಪೈಕಿ ಶಾನೆ ಉತ್ತಮವೆಂದು ತೋರಿಬಂದ ರಬಿಂಗಳನ್ನು ಇತರ ಕಡೆಗಳಿಗೆ ಹಂಚುತ್ತಿದ್ದಾರೆ. ಸ್ಥಳೀಯ ರಬಿಂಗಳಿಗಿಂತ ಇವು ಚೆನ್ನಾಗಿ ಬೆಳೆದು ದೊಡ್ಡ ದೊಡ್ಡ ಬೆಲ್ಲಿಗಳನ್ನೂ ಮತ್ತು ಜಾಸ್ತಿ ಬೆಲ್ಲವನ್ನೂ ಕೊಡುತ್ತವೆ. ರಸವು ಬಹಳ ಸಿಹಿಯಾಗಿರುವದರಿಂದ ದೊಡ್ಡ ಬೆಲ್ಲದಅಚ್ಚುಗಳು ಬರುತ್ತವೆ. ನಾಟುರಬಿಂ ಬೆಲ್ಲಕ್ಕಿಂತ ಬಣ್ಣ ಚೆನ್ನಾಗಿರುತ್ತೆ. [illegible] ರುಚಿಯಾಗಿಯೂ ಇರುತ್ತದೆ. [illegible] ವಲ್ಲಿ ಮಾಡಿದಲ್ಲಿ ರೋಗದಿಂದ [illegible] ಬರುವದಿಲ್ಲ. [illegible]

ಈ ರಬಿಂಗಳು ಸಾಮಲಕೋಟೆಯಲ್ಲಿ [illegible] ಮತ್ತು [illegible] ಪೈರಿನಿಂದ ಶಾನೆ ಲಾಭ ಕಂಡುಬಂದದ್ದರಿಂದಲೂ [illegible] ದಲ್ಲಿರುವ ಮೆಲ್ರೋಸಪುರದಲ್ಲಿ ಮೊಟ್ಟಮೊದಲು [illegible] ಮಿಯು ಅನುಕೂಲಿಸಲಿಲ್ಲವಾದ್ದರಿಂದ ದಕ್ಷಿಣ ಆರ್ಕಾಡು ಜಿಲ್ಲೆಯ ನೆಲ್ಲಿಕುಪ್ಪದಲ್ಲಿರುವ ಪ್ಯಾರಿಕಂಪೆನಿಯ ಮ್ಯಾನೇಜರಿಗೆ ಕಳುಹಿಸಿರಲು ಅವರು [illegible] ರೈತರಿಗೆ ಕೊಟ್ಟರು. ಈ ರಬಿಂಗಳನ್ನು ಪಾಲೂರು ಸರಕಾರಿ ಫಾರಂನಲ್ಲಿಯೂ ಹಾಕಿದ್ದರಲ್ಲಿ ಅವು ನಾಟು ತರಹೆಗಳಿಗಿಂತ ಚೆನ್ನಾಗಿ ಬೆಳೆಯುತ್ತವೆಂದು ತಿಳಿದು ಬಂದದ್ದರಿಂದ ಅನೇಕ ಮಂದಿ ರೈತರು ಇವುಗಳನ್ನೇ ಪ್ರತಿವರುಷದಲ್ಲೂ ಬೆಳೆಯುತ್ತಾರೆ. ಇವು ಇಲ್ಲಿಂದ ತಿನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟು ಅಲ್ಲಿಯೂ ಚೆನ್ನಾಗಿ ಆಗಿರುತ್ತವೆ. ತಾಳಿಪರಂಬಾ ಫಾರಂನಲ್ಲಿಯೂ ಇವು ಬಹಳ ಚೆನ್ನಾಗಿ ಆಗಿರುವದರಿಂದ ಕಬ್ಬಿನ ಪೈರನ್ನೇ ಕಾಣದ ಮಳಯಾಳ ದೇಶದಲ್ಲಿಯೂ ಈ ವ್ಯವಸಾಯವು ಹರಡುವಂತಿದೆ. ಇದಕ್ಕಿಂತಲೂ ಇನ್ನೂ ಉತ್ತಮವಾದ ರಬಿಂಗಳನ್ನು ಕಂಡು ಹಿಡಿಯುವದಕ್ಕಾಗಿ ಪ್ರಯತ್ನನಡೆದಿದೆ.

ಈ ದೇಶದಲ್ಲಿ ಕೆಲವು ಕಡೆಗಳಲ್ಲಿ ಕಬ್ಬು ಧಾರಾಳವಾಗಿ ಹೂ ಬಿಟ್ಟರೂ ಕಣೆಕ್ಕಿ ಬೀಜದ್ದು ಸಾರವಿಲ್ಲದೇ ಹೋಗೋಣದರಿಂದ ಕಬ್ಬನ್ನೇ ಕತ್ತರಿಸಿ ಬೀಜಕ್ಕಾಗಿ ಉಪಯೋಗಿಸುವದೊಂದೇ ಉತ್ತಮ ಪಕ್ಷವೆಂದು ಗೊತ್ತಾಗುತ್ತದೆ. ಕೆಲವು ಕಡೆಗಳಲ್ಲಿ ಸಾರವುಳ್ಳ ಬೀಜಗಳು ಆಗುವದೂ ಉಂಟು. ಅಂಥಾ ಬೀಜಗಳನ್ನು ತಂದು ಬಿತ್ತನೆಗೆ ಉಪಯೋಗಿಸಬಹುದು. ಹೀಗೆ ಬೀಜಗಳಿಂದಾದ ಕಬ್ಬುಗಳು ಮಾಮೂಲಿನಂತಾ [illegible] ಶ್ರೇಷ್ಠವಾಗಿರುತ್ತವೆಯಾದ್ದರಿಂದ ಅವುಗಳಲ್ಲಿ ಕೆಲವನ್ನು ಸಾಮಲಕೋಟೆ ಫಾರಂನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಇವುಗಳ ಪೈಕಿ ಬಹಳ ದೂರದೇಶವಾದ ಜಾವಾ [illegible] ದ್ವೀಪದಿಂದ ತರಿಸಿರುವ ರಬಿಮು ಹೋದ ವರುಷ ಸಾಮಲಕೋಟೆಯಲ್ಲಿ ಬೇರೆ ಎಲ್ಲಾ ರಬಿಂಗಳಿಗಿಂತಲೂ ಬಹಳ ಮೇಲಾಗಿತ್ತು. ಈ ಕಬ್ಬು ಕುರುಡಾಗಿಯೂ ದಪ್ಪವಾಗಿಯೂ ಬೆಳೆಯುವದರಿಂದ ಉದ್ದವಾಗಿ ಬೆಳೆಯುವ ಪೂಂಡ್ಸ್ ಕಬ್ಬಿಗೆ ಬೇಕಾಗುವಂತೆ ಇದಕ್ಕೆ ಬೊಂಬು ಕಟ್ಟುವದು ಅವಶ್ಯವಿಲ್ಲ. ಇದರ ರಂಗು ಬಂಗಾರದ ವರ್ಣವಾಗಿಯೂ, ರಸವು ಬಹು ಮಧುರವಾಗಿಯೂ ಇರುತ್ತವೆ. ಹೋದ ವರುಷ ಫಾರಂನಲ್ಲಿ ಇದರಿಂದ ಬೆಲ್ಲ ಮಾಡಿರುವಲ್ಲಿ ಇಷ್ಟು ಅವಲ್ ಸರಕು ಹಿಂದೆ ಯಾವಾಗಲೂ ಆಗಲಿಲ್ಲವಂತೆ. ಸಾಮಲಕೋಟೆಯಲ್ಲಿ ಮಾತ್ರವೇ ಅಲ್ಲದೆ ನೆಲ್ಲಿಕುಪ್ಪಂನಲ್ಲಿಯೂ ಮತ್ತು ವಿಶಾಖಪಟ್ಟಣ ಜಿಲ್ಲೆಯಲ್ಲಿ ಅನಕಪಲ್ಲಿಯಲ್ಲಿಯೂ ಈ ರಬಿಮು ಬಹು ಚೆನ್ನಾಗಿ ಆಗಿರುತ್ತದೆ.

ಇದನ್ನು ಅಪೇಕ್ಷಿಸುವವರು ಕೂಡಲೆ ಮುಟ್ಟಿಗೂ ಶೀಘ್ರವಾಗಿ ಸಾಮಲಕೋಟೆಯ ಫಾರಂ ಮ್ಯಾನೇಜರವರಿಗೆ ಬರೆದುಕೊಂಡಲ್ಲಿ ಸಾಧ್ಯವಾಗುವಷ್ಟು ಬೀಜವನ್ನು ಮಿಗಿಸಿ ಮುಂದಿನ ವರುಷ ದರಖಾಸ್ತುದಾರರಿಗೆ ಹಂಚಲಾಗುತ್ತದೆ. ಮತ್ತು ಬೆಳೆಯತಕ್ಕವರು ಸಾಮಲಕೋಟೆಯಲ್ಲಿ ಮಾಡುವಂತೆ ಬಿತ್ತವನ್ನು ವರಸೆಯಾಗಿ ಹಾಕಿ ಬಹಳ ಶ್ರದ್ಧೆಯಿಂದ ಕೆಲಸಮಾಡಬೇಕು.

ಮೈ. ವ್ಯ. ಪ. ಗ.

BERNA WATCH COMPANY.
ಬೆರ್ನಾ ವಾಚು ಕಂಪೆನಿ

ಕೈಗಡಿಯಾರುಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ತಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.

ನಮ್ಮ 'ಮೆಕ್ಸಿಮ್' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ. ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೪-೮-೦
ನಮ್ಮ 'ಮ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ. ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಜರ್' ನಿಕಲ್ ಕೇಸಿನಲ್ಲಿ ರೂ. ೧೭-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. [illegible]
ನಮ್ಮ [illegible] ನಿಕಲ್ ಕೇಸಿನಲ್ಲಿ ರೂ. [illegible]
ಬೆಳ್ಳಿ ಕೇಸಿನಲ್ಲಿ ರೂ. [illegible]

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಚ್ಚಿನಲ್ಲಿರುವವು. [illegible] ಹಳ್ಳಿಗೆ ಖರ್ಚಿನಲ್ಲಿ ವಿ. ಪಿ. ಮೂಲಕ ಕಳುಹಿಸುವೆವು. [illegible]

ಪತ್ರವ್ಯವಹಾರ.

"(ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)" [illegible]

ಅಧ್ಯಾತ್ಮ ವಿಚಾರ.

ಅಯ್ಯಾ ಪತ್ರಿಕಾಕರ್ತರೇ,

ಕಳೆದ ಫೆಬ್ರುವರಿ ತಿಂಗಳ ೧೧ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ "ನಿಷ್ಪಕ್ಷಪಾತಿ" ಎಂಬ ಹೆಸರಿನಿಂದ ಬರೆದಿರುವ ಪತ್ರವನ್ನು ಓದಿದೆನು ಈ ಪತ್ರಕ್ಕೆ ಉತ್ತರವನ್ನು ಬರೆಯುವ ಮೊದಲು ಪತ್ರದ ವಿಷಯವಾದ ಅಧ್ಯಾತ್ಮವಿಚಾರ ಗ್ರಂಥದಲ್ಲಿ ತೋರುವ ಒಂದೆರಡು ವಿಷಯಗಳ ಕುರಿತು ಕೆಲವು ಸಂಗತಿಗಳನ್ನು ಬರೆಯುವೆನು

ಗ್ರಂಥಕರ್ತರು ಛಾಂದೋಗ್ಯದಲ್ಲಿರುವ ತತ್ವಮಸಿ ಅಹಂಬ್ರಹ್ಮಾಸ್ಮೀತ್ಯಾದಿ ವಾಕ್ಯಗಳಿಗೆ ಕೆಲವರು ಮಾಡಿದ ಅದ್ವೈತಪರ ಭಾಷ್ಯಗಳನ್ನು ಮನಸ್ಸಿನಲ್ಲಿ ಸ್ವೀಕರಿಸಿಕೊಂಡು ದ್ವೈತಪರ ಭಾಷ್ಯಗಳಲ್ಲಿ ಅನೇಕ ವಿಧ ಕಲ್ಪನಾ ಮೂಲಕ ಅಸ್ವಾರಸ್ಯಗಳನ್ನು ಉದ್ಭಾವನೆ ಮಾಡಿ ಜೀವ ಬ್ರಹ್ಮಾದ್ವೈತವೆ ಈ ಛಾಂದೋಗ್ಯದ ಮುಖ್ಯ ಸಿದ್ಧಾಂತವಾಗಿರುವುದೆಂತ ಗ್ರಂಥದ I II XIನೇ ಪಾಠಗಳಲ್ಲಿ ವಿವರಿಸುವದಾಗಿ ಉಪೋದ್ಘಾತದ XIನೇ ಪುಟದಲ್ಲಿ ಬರೆದ್ದಾಗಿ ಕಾಣುತ್ತದೆ

ಈ ಜೀವನು ಸ್ವಲ್ಪವನ್ನರಿತವನು, ಸ್ವಪರರ ಹುಟ್ಟು ಸಾವುಗಳನ್ನು ತಿಳಿಯದವನು, ದೇಶಾಂತರಿತ ವಸ್ತುಗಳನ್ನೂ ಇತಪರಗಳನ್ನೂ ಯಾವದೊಂದು ಮೋಕ್ಷೋಪಾಯವನ್ನು ಕೂಡ ಸ್ವತಃ ಅರಿಯದವನಾದರೂ ತಾನೇ ಪರಮ ಬುದ್ಧಿಶಾಲಿಯು ಇತರರೆಲ್ಲರು ಪಶುಸಮಾನರು, ತಾನೇ ಚತುರೋಪಾಯನು, ಸರ್ವಕಾರ್ಯ ಧುರಂಧರನು ಪರಮ ಸ್ವತಂತ್ರನು, ತನ್ನನ್ನು ಕೇಳುವವರು ಯಾರೂ ಇಲ್ಲ, ತಾನೇ ಮಹಾ ಸಮರ್ಥನು ಎಂಬ ಇತ್ಯಾದಿ ದುರನುಸಂಧಾನ ಪೂರ್ಣನು ಪಾಪ ಪುಣ್ಯ ಫಲ ಲೇಪ ಉಳ್ಳವನು, ಸ್ವರ್ಗ ನರಕ ಮೋಕ್ಷಾದಿಗಳಿಗೆ ಭಾಜನನು, ಅಲ್ಪಗುಣಕನು, ಸ್ವರೂಪ ನಾಶರಹಿತನಾದರೂ ದೇಹ ಸಂಯೋಗ ವಿಯೋಗ ನಾಶವುಳ್ಳವನು ಸಕಲ ವಿಧಿ ನಿಷೇಧ ಬದ್ಧನು ಕೂಡ ಆಗಿರುವನು ಪರಬ್ರಹ್ಮನಾದರು ತದ್ವಿಪರೀತ ಧರ್ಮವುಳ್ಳವನೆಂದು ಸಕಲ ವೇದ ತದಿತರ ಶಾಸ್ತ್ರ ಸಿದ್ಧಾಂತವಾಗಿಯದೆ

"ಮನ್ಮನಾಭವಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು | ಭಕ್ತೋಽಸಿಮೇ ಸಖಾಚೇತಿ ರಹಸ್ಯಂ ಹ್ಯೇತದುತ್ತಮಂ | ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ || ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ || ದ್ವಾವಿಮೌ ಪುರುಷೌಲೋಕೇ" ಇತ್ಯಾದಿ ಶ್ರೀಮದ್ಭಗವದ್ಗೀತಾವಚನಗಳೂ ಭಕ್ತಿಸಿದ್ಧೇರ್ಗರೀಯಸೀ, ಜರಯತ್ಯಾಶುಯಾ ಕೋಶಂ ಇತ್ಯಾದಿ ಭಾಗವತ ವಚನಗಳೂ ಇನ್ನು ಅನೇಕ ಪ್ರಮಾಣ ವಾಕ್ಯಗಳಿಂದ ಭಕ್ತಿಯು ಮೋಕ್ಷಕ್ಕೆ ಕಾರಣವೆಂದು ತೋರುತ್ತದೆ ಜೀವನಿಗಿರುವ ಸ್ವಮಹತ್ವ ಬುದ್ಧಿಯನ್ನು ತಿರಸ್ಕರಿಸಿ ಪರಬ್ರಹ್ಮನಲ್ಲಿ ಮಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹವೆಂಬ ಭಕ್ತಿ ಹುಟ್ಟೋಣದರ ಹೊರತು ಮೋಕ್ಷವಾಗುವದಿಲ್ಲವಾಗಿ ಅನೇಕ ಶ್ರುತಿಸ್ಮೃತೀತಿಹಾಸ ಪುರಾಣ ವಾಕ್ಯಗಳು ಇರುತ್ತವೆ ಇಂಥಾ ಭಕ್ತಿರಸವನ್ನುಂಟು ಮಾಡುವದಕ್ಕಾಗಿಯೇ ಸರ್ವ ಶಾಸ್ತ್ರಗಳೂ ಪ್ರವೃತ್ತವಾಗಿರುವದೆಂಬದು ಪ್ರಾಮಾಣಿಕವಾದದ್ದು ಹೀಗಿರುತ್ತಾ ಜೀವನಿಗೆ ನೀನೇ ಬ್ರಹ್ಮನಾಗಿದ್ದೀ! ನಾನು ಬ್ರಹ್ಮನಾಗಿರುವೆನು! ಎಂಬದಾಗಿ ಉಪದೇಶ ಮಾಡಿದರೆ ಸ್ವತ ಅಹಂ ಬ್ರಹ್ಮತ್ವಬುದ್ಧಿಯುಳ್ಳವನಿಗೆ ಮತ್ತೂ ಮಹತ್ವ ಬುದ್ಧಿಯು ಅಧಿಕವಾಗುವದೆ ಹೊರತು ದೇವರು ತನ್ನಿಂಗಲೂ ಸರ್ವರಿಂದಲೂ ದೊಡ್ಡವನೆಂಬ ಬುದ್ಧಿಪೂರ್ವಕ ಸ್ನೇಹವೆಂಬ ಭಕ್ತಿರಸವು ಹುಟ್ಟೀತೇ? ಅದಿಲ್ಲದೆ ಮೋಕ್ಷವಾದೀತೇ? ಒಬ್ಬ ಸಾರ್ವಭೌಮ ಮಹಾರಾಜನೆದುರಲ್ಲಿ ಒಬ್ಬ ಚಿಕ್ಕ ನೌಕರನು ನೀನೇನಾನು ನಾನೇ ನೀನು ಎಂತ ವದರಿದರ ಅಥವಾ ತನ್ನ ಮನಸ್ಸಿನಲ್ಲಿ ಹಾಗೆ ಭಾವಿಸಿಕೊಂಡಿರುವದನ್ನು ರಾಜನು ತಿಳಿದರೆ ಈ ನೌಕರನ ಗತಿ ಏನಾದೀತೆಂಬದನ್ನು ವಿವೇಕಿಗಳು ತಮ್ಮ ಮನಸ್ಸಿಗೆ ತಂದುಕೊಂಡರೆ ಜೀವಬ್ರಹ್ಮಾದ್ವೈತವೇ ಛಾಂದೋಗ್ಯದ ಮುಖ್ಯ ಸಿದ್ಧಾಂತವೆಂಬ ಗ್ರಂಥಕರ್ತರ ತಿಳುವಳಿಕೆಯ ಅವಸ್ಥೆ ಏನಾಗಬೇಕು?

ಇದು ಮಾತ್ರವಲ್ಲ, ಛಾಂದೋಗ್ಯದ ೬ನೆ ಅಧ್ಯಾಯಾರಂಭದಲ್ಲಿ ಹೇಳಿದ ಪ್ರಕಾರ ಶ್ವೇತಕೇತುವು ಸಾಂಗವೇದಗಳನ್ನು ಮಾತ್ರ ಕಲಿತು ತಾನು ಅತಿ ಮಹಾತ್ಮನು ತನಗೆ ಯಾರೂ ಸರಿ ಇಲ್ಲ. ತಾನು ಒಬ್ಬ ದೇವತೆಯೋ ಅಥವಾ ಸಾಕ್ಷಾತ್ ನಾರಾಯಣಾಂಶನೋ ಯೋ ಯಾರೊ ಒಬ್ಬ ದೊಡ್ಡವನಾಗಿರಬೇಕಲ್ಲದೆ ಇಂಥಾ ಮೇಧೆಯು ತನಗೆ ಬರುತ್ತಿದ್ದಲ್ಲವೆಂಬ ಭಾವದಿಂದ ವಿನಯಾದಿಗುಣರಹಿತನಾದನು ಅಂತಹ ಅವನ ದುರ್ಬುದ್ಧಿಯು ಪರಿಹಾರವಾಗಿ ದೇವರಲ್ಲಿ ಮಹತ್ವಬುದ್ಧಿಯು ಹುಟ್ಟುವದಕ್ಕಾಗಿ ನಿನ್ನಿಂದ ದೊಡ್ಡವನು ದೇವನು ಇರುವನು. ಅವನನ್ನು ನೀನು ಅರಿಯದೆ ಸ್ತಬ್ಧನಾಗಿರುವಿ" ಇವೇ ಮೊದಲಾದ ಉಪದೇಶಗಳನ್ನು ಶ್ವೇತಕೇತುವಿಗೆ ಪರಮ ಶ್ರೇಯಸ್ಕರವಾದ [illegible] ಉದ್ದಾಳಕರು ಉಪದೇಶಮಾಡಿದ್ದಾಗಿ ತೋರುವದಲ್ಲದೆ ಕೊನೆಗೆ [illegible] ಉಪದೇಶವು ಸಹ ಕಾಣುತ್ತದೆ. ತತ್ವಮಸಿ ಎಂತ ಉಪದೇಶವನ್ನು [illegible] ನೀನು ಬ್ರಹ್ಮನಾಗಿರುವಿ ಎಂಬದಾಗಿ ಐಕ್ಯಾರ್ಥಕತ್ವವನ್ನು [illegible] ಸ್ವಮಹತ್ವಬುದ್ಧಿ [illegible] ನಾಶವಾಗಿ [illegible]

ದ್ವೈತಭಾಷ್ಯಗಳಿಂದ ವಿಸ್ತಾರವಾಗಿ [illegible] ಜೀವನಿಗೆ ಬ್ರಹ್ಮನಿಂದ ಭೇದ [illegible] ಬುದ್ಧಿಯನ್ನು ಹುಟ್ಟಿಸುತ್ತದೆಂಬದು ಛಾಂದೋಗ್ಯದ [illegible] ತಾತ್ಪರ್ಯವಾಗಿರುವದು. ಈ ಅನೇಕ ಕಾರಣಗಳಿಂದ ಜೀವಬ್ರಹ್ಮಭೇದವೆ ಈ ಉಪನಿಷತ್ತಿನ ಮುಖ್ಯ ಸಿದ್ಧಾಂತವಾಗಿರುವದರಿಂದ ಜೀವಬ್ರಹ್ಮಾದ್ವೈತವೆ ಸಿದ್ಧಾಂತವೆಂತ ಬರದು ಸಾಮಾನ್ಯ ಜನರನು ಮೋಹಿಸಲಿಕ್ಕೆ ಗ್ರಂಥಕರ್ತರ ಯೋಗ್ಯತೆಯೆ ಕಾರಣವಾಗಿರುವದು.

ಹಾಗಾದರೆ ತತ್ವಮಸಿ ಅಹಂಬ್ರಹ್ಮಾಸ್ಮಿ ಈ ಮೊದಲಾದ ಉಪದೇಶಗಳಿಗೆ ನಿಜವಾದ ಅರ್ಥವು ಯಾವದು? ಅವುಗಳಿಗೆ ಅನೇಕ ಅರ್ಥಗಳಿದ್ದರೂ ಮುಖ್ಯ ಅಭಿಪ್ರಾಯವೇನಂದರೆ ಲೋಕದಲ್ಲಿ ಒಬ್ಬ ಕ್ರೂರ ಮನುಷ್ಯನನ್ನು ಕುರಿತು ಆತನ ಕ್ರೌರ್ಯವನ್ನು ಎಲ್ಲರಿಗೆ ತಿಳಿಸುವದಕ್ಕಾಗಿ ಪುರುಷಸಿಂಹ, ಪುರುಷವ್ಯಾಘ್ರ ಎಂತ ಪದಗಳನ್ನು ಉಪಯೋಗಿಸುವರು ಇದರಿಂದ ಆಕಳುಗಳನ್ನಾಗಲಿ ಗಜಕುಂಭಸ್ಥಳವನ್ನಾಗಲಿ ಭೇದಿಸುವ ವ್ಯಾಘ್ರವು ಅಥವಾ ಸಿಂಹವು ಎಂತ ಅರ್ಥಮಾಡುವದಿಲ್ಲ ಯಾವನೋ ಒಬ್ಬ ಕ್ರೂರನೆಂದು ಮಾತ್ರ ನಿಶ್ಚೈಸುವರು • • • •

• • • • • •

• • • • • •

• • • • • •

• • • • • •

• • ಹಾಗೆಯೇ ನೀನು ಬ್ರಹ್ಮನಂತೆ ನಿತ್ಯವಾಗಿರುವಿ ನಾನು ನಿತ್ಯವಾಗಿರುವೆನು ಎಂತಲೇ ಈ ವಾಕ್ಯಗಳಿಗೆ ಅರ್ಥವಾಗುವದು ಹೊರತು ಬೇರೆ ಅರ್ಥವು ಪಂಡಿತರಿಂದ ಮಾನ್ಯವಾಗಲಾರದು (ಸಶೇಷ)

ಉಡುಪಿ ವಿಮರ್ಶಿ

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು

ಹಂಚು ಕೈಗಾರಿಕೆಯೂ ಪಟ್ಟಣ ಪೌರಾಗ್ರೇಸರರೂ

ಪಟ್ಟಣವಾಸಿಗಳ ನಿವೇಶಗಳೂ ಕಾರ್ಯಾಲಯಗಳೂ ವ್ಯಾಪಾರ ಸದನಗಳೂ ಕೈಗಾರಿಕೆಯ ಗೃಹಗಳೂ ಮೊದಲಾದ ವಿಶಿಷ್ಟ ಕಟ್ಟೋಣಗಳ ಮೇಲಿನ ತೆರಿಗೆಗಳನ್ನು ಕೆಲವು ತಿಂಗಳ ಮೊದಲು ಪುನರ್ನಯಿಸುವ ಉದ್ದಿಶ್ಯ ಪೌರಾಗ್ರೇಸರರು ಎಷ್ಟು ಆತುರಪಟ್ಟರೆಂಬದು ಸರ್ವರಿಗೂ ತಿಳಿದ ವಿಷಯವೇ ಈ ಕಾರ್ಯದ ಪ್ರವರ್ತನೆಯು ಹೇಗ ಪರಿಣಮಿಸಿತು ಎಂಬ ವಿಚಾರವೂ ಸಕಲರಿಗೂ ಗೊತ್ತೇ ಇದೆ ಇದರ ದುರ್ಲಕ್ಷಣಗಳಲ್ಲಿ ಪ್ರಥಮಸ್ಥಾನವನ್ನು ಅಲಂಕರಿಸುವ ದುರಿತವು ಯುಕ್ತಾಯುಕ್ತತೆಯನ್ನು ಗ್ರಹಿಸಲರಿಯದ ಮತ್ತು ಅನುಭವರಾಹಿತ್ಯದಿಂದ ಅಯೋಗ್ಯರಾದವರನ್ನು ಈ ದೊಡ್ಡ ಕೆಲಸಕ್ಕೆ ನೇಮಿಸಿದ ವಿವೇಕವೈಕಲ್ಯವೆನ್ನಬಹುದು ಅಂಥವರಿಂದ ಸಿದ್ಧವಾದ ಕೆಲಸವು ಪಟ್ಟಣದ ನಿವಾಸಿಕರಿಗೆಲ್ಲ ಮಿತಿಮೀರಿದ ಮನಸ್ತಾಪಕ್ಕೆ ಅವಕಾಶ ಕೊಟ್ಟಿತು ಹೊಳೆ ತನಕ ಓಟ, ದೊರೆ ತನಕ ದೂರು ಎಂಬ ನಾಣ್ಣುಡಿಯನ್ನನುಸರಿಸಿ ಈ ದೊಡ್ಡ ಬಾಧೆಯ ಭಾರವನ್ನು ತಗ್ಗಿಸಲು ಸಾಧ್ಯವಾಗುವದೋ ನೋಡೋಣ ಎಂದು ಬಹುಮಂದಿ ಪುನರ್ವಿಮರ್ಶೆಯಗೋಸ್ಕರ ಪೌರಾಗ್ರೇಸರಿಗೆ ಶಾಸನಾನುಗುಣವಾಗಿ ಮನವಿಗಳನ್ನು ಬರಕೊಂಡರು ಇವರು ತಾವು ದಯಾಳುಗಳೆಂಬ ಸ್ತೋತ್ರಕ್ಕೆ ಪಾತ್ರರಾಗುವೆವೆಂಬ ವಿಶ್ವಾಸದಿಂದ ೧೫ ಆಣೆ ತೆರಿಗೆ ಇದ್ದಲ್ಲಿ ೧ ರೂಪಾಯಿ ತೆರಿಗೆಯ ಸಂಗತಿಯಲ್ಲಿ ಅರ್ಧ ಆಣೆ, ೧೦೦ ರೂಪಾಯಿ ತೆರಬೇಕಾದ ಸಂಗತಿಯಲ್ಲಿ ೮ ಆಣೆ ಎಂಬಂತೆ ಔದಾರ್ಯ ಪ್ರದರ್ಶಕ ಪಡಿಕಟ್ಟು ದಯಪಾಲಿಸಿದರು ಈ ತೀರ್ಮಾನಗಳು ಸಮಾಧಾನಕರವಲ್ಲವಾದ ಪ್ರಯುಕ್ತ ಬಾಧಕ ಪಟ್ಟವರು ಕೌನ್ಸಿಲ ಎಂಬ ಹೆಸರುಳ್ಳ ಸಭೆಯ ಮುಂದೆ ಅಪ್ಪೀಲುಗಳನ್ನು ಮಾಡಿದರು ಅವುಗಳ ವಿಚಾರಕ್ಕಾಗಿ ಕೂಡಿ ಬಂದ ಸಭೆಯ ಮುಂದೆ ಸಮ್ಮಂದಪಟ್ಟ ವ್ಯಕ್ತಿಗಳಲ್ಲಿ ಹಂಚಿನ ಕಾರ್ಖಾನೆಯವರು ಒಬ್ಬ ವಕೀಲರನ್ನು ತಮ್ಮ ಕಡೆಯಿಂದ ವ್ಯವಹರಿಸಲು ನೇಮಿಸಿದರು ಪರಂತು ಮೊತ್ತಮೊದಲು ಪೌರಾಗ್ರೇಸರರು ವಕೀಲರನ್ನಾಗಲೀ ಕಕ್ಷಿಗಾರರನ್ನಾಗಲೀ ಸಭೆಯ ಮುಂದೆ ಬರಗೊಡದೆ ಅವರ ಬೆನ್ನ ಕಡೆಯಲ್ಲಿ ಅವರ ಮನವಿಗಳ ಉದ್ದೇಶಗಳೇ ಹಾಳಾಗುವ ಸಂಭವವು ಒದಗುವ ಹಾಗೆ ತಾನು ನಡಿಸಿದ ಕ್ರಮವೆಲ್ಲಾ ಸರಿಯಾದದ್ದು ಅಪ್ಪೀಲುಗಾರರ ಎದುರಾಟವು ಪರ್ಯಾಲೋಚನೀಯವಾದದ್ದಲ್ಲವೆಂಬಂತೆ ಪೌರರ ಮನಸ್ಸಿನಲ್ಲಿ ದುರಭಿಪ್ರಾಯವು ನೆಲೆಗೊಳ್ಳುವಂತೆ ಯುಕ್ತಿಯನ್ನು ನಡಿಸಿದರೆಂಬ ಆಕ್ಷೇಪವನ್ನೂ ಇತರ ಕಾರಣಗಳನ್ನೂ ವಿವರಿಸಿ ದೊಡ್ಡದೊಂದು ಬಿನ್ನಹ ಪತ್ರವನ್ನು ಮುದ್ರಣ ಮಾಡಿಸಿ ಕಲೆಕ್ಟರ್ ಧೊರೆಗಳಿಗೆ ಕಕ್ಷಿಗಾರರು ಕೊಟ್ಟಿರುವದಾಗಿ ತಿಳಿಯುತ್ತದೆ. ಇದರಲ್ಲಿ ಹೇಳಲ್ಪಡುವ ಬೇರೆ ಬೇರೆ ಸಂಗತಿಗಳಲ್ಲಿ ಗಮನೀಯವಾದ ಇನ್ನೊಂದು ವಿಷಯವು ಅವರ ಅಪ್ಪೀಲುಗಳು ತೀರ್ಮಾನವಾಗುವ ಕಾಲದಲ್ಲಿ ಶಾಸನಾನುಸ್ಸಾರವಾಗಿ ಸಭೆಯಲ್ಲಿ ಕೂಡಿರಬೇಕಾದ [illegible] ಅತ್ಯಂತ ಕಡಿಮೆ ಸಂಖ್ಯೆಗಿಂತಲೂ ಕಡಿಮೆ ಪೌರರು ಸಭೆಯನ್ನು ಅಲಂಕರಿಸಿದ್ದರು [illegible] ದೇ. ಇದು ನಿಜವಾದ ಪಕ್ಷದಲ್ಲಿ ಇಂತಹ [illegible] ನಡೆಯಲು [illegible] ದೊರಕಿತು ಎಂಬ ಪ್ರಧಾನ [illegible]

ವಿದೇಶ ವೃತ್ತಾಂತ.

ಹಂಗೇರಿ ದೇಶದ ಒಯಿಕೊರಿಟೊ ಎಂಬ ಹಳ್ಳಿಯಲ್ಲಿ ಗಾಡಿಗಳ ಒಂದು ಕಟ್ಟೋಣದಲ್ಲಿ ಸ್ತ್ರೀಪುರುಷರು 'ಬೋಲ್'ಎಂಬ ವಿನೋದಾಟದಲ್ಲಿ ಕುಣಿಯುತ್ತಿದ್ದರು. ಅಕಸ್ಮಿತವಾಗಿ ಈ ಕಟ್ಟೋಣಕ್ಕೆ ಬೆಂಕಿ ಬಿದ್ದು ೩೫೦ ಜನರು ಸತ್ತು ಹೋದರು.

ಮಂಗಳಗ್ರಹದಲ್ಲಿ ನಿವಾಸಿಕರಿರುವರೆಂತ ಎರಿಜೋನಾ ಎಲ್ಲಿಯ ಪ್ರೊಫೆಸ್ಸರ್ ಪರ್ಸಿವಾಲ್ ಲೋವೆಲ್ ಎಂಬವರು ರುಜುಪಡಿಸಿರುವರು. ಮಂಗಳಗ್ರಹದಲ್ಲಿ ತಯ್ಯಾರಿಸಲ್ಪಟ್ಟ ೧೦೦೦ ಮೈಲುಗಳು ಉದ್ದವುಳ್ಳ ಒಂದು ಕಾಲುವೆಯ ಛಾಯಚಿತ್ರವನ್ನು ಅದು ಸಿದ್ಧವಾದೊಡನೆಯೇ ಪ್ರೊಫೆಸ್ಸರರವರು ತೆಗದಿದ್ದರು. ಮೇಯಿಂದ ಸಪ್ಟೆಂಬರು ತಿಂಗಳವರೆಗೆ ಈ ಕಾಲುವೆಯ ಸಮೀಪದಲ್ಲೆಲ್ಲಾ ಸಸ್ಯಾದಿಗಳು ಕಂಡುಬರುವುದರಿಂದಲೂ ಕಾಲುವೆಯಲ್ಲಿ ನೀರು ಹರಿಯುವುದನ್ನು ಗುರುತಿಸಿರುವುದರಿಂದಲೂ ಪ್ರೊಫೆಸ್ಸರರವರು ಮಂಗಳಗ್ರಹವು ನಿವಾಸಿಸಲ್ಪಟ್ಟಿರುವುದೆಂಬ ಅಭಿಪ್ರಾಯಪಟ್ಟಿರುವರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರದವರು ತಮ್ಮ ನೌಕಾಸೈನ್ಯವನ್ನು ಬಲಪಡಿಸುವುದಕ್ಕೆ ೧೨ ಮಿಲಿಯ ಡೊಲ್ಲರುಗಳನ್ನು ವೆಚ್ಚಮಾಡಬೇಕೆಂದು ನಿರ್ಣಯಿಸಿರುವರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮುನಿಸಿಪಾಲಿಟಿಗಳೊಂದರಲ್ಲಿ ಹಲವು ಮುನಿಸಿಪಲ್ ಕೌನ್ಸಿಲರವರ ಮೇಲೆ ಲಂಚವನ್ನು ತಕ್ಕೊಂಡ ದೋಷಾರೋಪಣೆಯನ್ನು ಮಾಡಿರುವರು. ಇಂಥವರಲ್ಲಿ ಅಲ್ಲಿಯ ಮಾನ್ಯ ಡಾಕ್ಟರರೂ ಜಮೀನುದಾರರೂ ಮೊದಲಾದವರು ಸೇರಿರುವರು. ಇವರಲ್ಲಿ ಹಲವರು ತಮ್ಮ ತಪ್ಪನ್ನು ಒಪ್ಪಿರುವರಂತೆ.

ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಪ್ರಭುಸದನದವರಿಗೂ ಪ್ರಜಾಪ್ರತಿನಿಧಿಗಳ ಸಭೆಯವರಿಗೂ ನಡಿಯುತ್ತಿರುವ ಕಡದಾಟವು ಇನ್ನೂ ಮುಗಿಯಲಿಲ್ಲ. ಸಾಮ್ರಾಜ್ಯದ ಮುಂತ್ರಿಗಳಾದ ಮಿ. ಸ್ಕ್ವಿತರವರ ಕಡೆಯಿಂದ ಮಾಸ್ಟರ ಒವ್ ಎಲಿಬಾಂಕರವರು ಪ್ರಭುಸದನದವರ ಅಧಿಕಾರವನ್ನು ಕಡಿಮೆ ಮಾಡುವ ಕಾನೂನು ಮಸವಿದೆಯನ್ನು ಪಾರ್ಲಿಮೆಂಟ ಸಭೆಯ ಮುಂದಿಟ್ಟಿರುವರು. ಪ್ರಭುಸದನದವರು ಬ್ರಿಟಿಷ ರಾಜ್ಯದ ಆದಾಯ ವೆಚ್ಚದ ಸಂಗತಿಗಳಲ್ಲಿ ಪ್ರವೇಶಿಸಕೂಡದೆಂದೂ ಪಾರ್ಲಿಮೆಂಟ ಸಭೆಯ ಎರಡು ವರುಷಗಳಲ್ಲಿ ಮುಂಗೂರಾದ ನಿರ್ಣಯವನ್ನು ಪ್ರಭುಸದನದವರು ಪಚಾವಮಾಡಕೂಡದೆಂದೂ ಪಾರ್ಲಿಮೆಂಟ ಪ್ರಜಾಪ್ರತಿನಿಧಿಗಳ ಮೆಂಬರುತನದ ಅವಧಿಯು ಐದು ವರುಷಗಳಾಗಿರಬೇಕೆಂದೂ ಈ ಕಾನೂನು ಮಸವಿದೆಯ ಮುಖ್ಯ ಸಾರಾಂಶವಾಗಿರುವುದು.

ಅಮೇರಿಕಾ ದೇಶದ ಧನಾಢ್ಯ ಮಿ। ರೋಕಫೆಲ್ಲರರವರು ತಮ್ಮ ದ್ರವ್ಯವನ್ನು ಲೋಕೋಪಕಾರಾರ್ಥವಾಗಿ ಹ್ಯಾಗೆ ಉಪಯೋಗಿಸುತ್ತಿರುವರೆಂಬದು ವಾಚಕರಿಗೆ ಗೊತ್ತಿರಬಹುದು. ಇನ್ನೂ ಅಮಿತವಾಗಿರುವ ತನ್ನ ಸಂಪತ್ತನ್ನು ಪರೋಪಕಾರಾರ್ಥ ವಿನಿಯೋಗಿಸುವರೆ ಒಂದು ಸಂಸ್ಥೆಯನ್ನು ಸ್ಥಾಪಿಸಿ ಈ ಸಂಸ್ಥೆಯ ಕೆಲಸ ನಿರ್ವಾಹಕ್ಕೆ ಬೇಕಾದ ಅಧಿಕಾರವನ್ನು ಪಡಿಯುವರೆ ಅಮೇರಿಕ ಸಂಸ್ಥಾನದ ಕೊಂಗ್ರೆಸ್ ಸಭೆಯ ಮುಂದೆ ಒಂದು ಕಾನೂನು ಮಸೂದೆಯು ಇಡಲ್ಪಟ್ಟಿರುವುದು. ಈ ಸಂಸ್ಥೆ ಮೂಲಕ ೧೦೦,೦೦೦,೦೦೦ ರವನುಗಳನ್ನು [illegible] ಉಪಯೋಗಿಸುವರೆ ಪ್ರತ್ಯೇಕ [illegible]

ಹಿಂದುಸ್ಥಾನಕ್ಕೆ ರಫ್ತಾಗುವ ಹೊಗೆಸೊಪ್ಪಿನಿಂದ ತಯ್ಯಾರಾಗುವ ಸಿಗರೇಟ್ ಮೊದಲಾದವುಗಳ ಮೇಲೆ ಸುಂಕವು ವಿಧಿಸಲ್ಪಟ್ಟಿರುವುದರಿಂದ ಅಂಗ್ಲಾಂಡದಲ್ಲಿಯ ಸಿಗರೇಟು ಕಾರಖಾನೆಯವರು ಈ ತೆರಿಗೆಯಿಂದ ತಮಗೆ ಬಹಳ ನಷ್ಟ ಉಂಟಾಗಿ ಕಾರಖಾನೆಗಳನ್ನು ಮುಚ್ಚಿಬಿಡುವ ಸಂಭವವು ಒದಗಲಿಕ್ಕೆ ಸಾಕೆಂಬದಾಗಿ ಮೋರ್ಲೆ ಪ್ರಭುಗಳಿಗೆ ತಿಳಿಸಿರುವರೆಂತಲೂ ಮೋರ್ಲೆ ಪ್ರಭುಗಳು ಈ ತೆರಿಗೆಗಳಿಂದ ಏನೇನು ಸಂಭವಿಸುವುದೆಂಬದನ್ನು ತಾನು ಜಾಗರೂಕತೆಯಿಂದ ಪ್ರತೀಕ್ಷಿಸುವೆನೆಂತಲೂ ಈ ಮೊದಲಾದ ಸಮಾಚಾರವನ್ನು ನಮ್ಮ ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿರುತ್ತೇವೆ. ಈ ತೆರಿಗೆಗಳಿಂದ ಹಿಂದುಸ್ಥಾನದ ಸ್ಥಳೀಕ ಸಿಗರೇಟು ಮೊದಲಾದ ಕೈಗಾರಿಕೆಗೆ ಪ್ರೋತ್ಸಾಹ ದೊರಕದಂತೆ ಇಲ್ಲಿಯೂ ಸಹಾ ತಯ್ಯಾರಾಗುವ ಸಿಗರೇಟುಗಳ ಮೇಲೆ ಸುಂಕ ವಿಧಿಸೋಣಾಗುವಂತೆ ಅಂಗ್ಲಾಂಡದಲ್ಲಿ ಕೆಲವರು ಪ್ರಯತ್ನಿಸುವರು.

ಲಿವರ್‌ಪೂಲಿನಲ್ಲಿ ಇತ್ತರಲ್ಲಿಯೇ ಒಂದು ಸಿಗರೇಟು ಕಾರ್ಖಾನೆಯು ಮುಚ್ಚಲ್ಪಟ್ಟು ೩೦೦ ಜನರಿಗೆ ಉದ್ಯೋಗವು ಇಲ್ಲದಿರುವುದು. ಇನ್ನೂ ಬ್ರಿಸ್ಟಲ್ ಮೊದಲಾದ ಕಡೆಗಳಲ್ಲಿರುವ ಕಾರ್ಖಾನೆಗಳು ಮುಚ್ಚಲ್ಪಟ್ಟು ೬೫೦ ಜನರನ್ನು ಕೆಲಸದಿಂದ ತೆಗದು ಹಾಕುವ ಸಂಭವವು ಬೇಗನೆ ಬರುವುದೆಂತ ಈ ಕಾರ್ಖಾನೆಗೆ ಸಮ್ಮಂಧಪಟ್ಟವರು ಮೋರ್ಲೆ ಪ್ರಭುಗಳ ಹತ್ತರ ಚಾಡೀದು ಮಾಡಿಕೊಂಡಿರುವರು. ಕೇಳಕಳ ಬೆಸ್ಸಿಗಿ ತಮ್ಮ ಕಾರ್ಯಸಾಧನೆಗಳನ್ನು ಸರಕಾರದವರಿಂದ ಮಾಡಿಸಲು ಶಕ್ತರಾದ ಅಂಗ್ಲೇಯರು ಹಿಂದುಸ್ಥಾನದಲ್ಲಿರುವ ಸಿಗರೇಟು ಕಾರಖಾನೆಗಳಲ್ಲಿ ತಯ್ಯಾರಾಗುವ ಸಾಮಾಗ್ರಿಗಳ ಮೇಲೆ ಸಹಾ ಸುಂಕವನ್ನು ವಿಧಿಸುವಂತೆ ಮಾಡುವರೋ ಏನೆಂಬದನ್ನು ಇನ್ನು ಮುಂದೆ ತಿಳಿಯಬೇಕಾಗಿದೆ.

ಉತ್ತರ ಹಿಂದುಸ್ಥಾನ.

ಒಪೀಟು ಸಮ್ಮಂಧವಾಗಿ ವ್ಯಾಸರಾಯ ಪ್ರಭುಗಳ ನ್ಯಾಯನಿರ್ಮಾಣ ಸಭೆಯು ಕಳದ ತಿಂಗಳ ತಾ ೨೫ರಲ್ಲಿ ಕಲ್ಕತ್ತೆಯಲ್ಲಿ ಕೂಡಿರುವುದು. ಒಪೀಟು ವಿಷಯವಾದ ತಮ್ಮ ಕಡೇ ಅಭಿಪ್ರಾಯಗಳನ್ನು ಪ್ರಜಾಪ್ರತಿನಿಧಿಗಳಾದ ಸರ್ ವಿಟ್ಠಳದಾಸ ದಾಮೋದರದಾಸ ಠೆಕರ್ಸೆ, ಮಿ. ಗೋಖಲೆ ಮೊದಲಾದವರು ಹೇಳಿಕೊಳ್ಳುತ್ತಿರುವರು.

ಕೆಲವು ದಿವಸಗಳ ಹಿಂದೆ ಪುಣೆಯಲ್ಲಿ ಬಾಲಗಂಗಾಧರ ತಿಲಕರವರ ಪುತ್ರರನ್ನು ಕೈದುಮಾಡಿರುವರೆಂಬ ವರ್ತಮಾನವಿತ್ತು. ಆದರೆ ಈ ವರ್ತಮಾನವು ಆಧಾರವಿಲ್ಲದ್ದಾಗಿ ತಿಳಿದುಬರುತ್ತದೆ. ನೂತನ ಮರಾಟಿ ವಿದ್ಯಾಲಯದಲ್ಲಿ ಉಪಾಧ್ಯಾಯನಾಗಿರುವ ೬೦ ವರುಷ ಪ್ರಾಯದ ದತ್ತಾತ್ರೆಯ ಬಲವಂತ ತಿಲಕ ಮತ್ತು ಪುಣೆಯ ಫರ್ಗುಸನ್ ಕೊಲೇಜಿನಲ್ಲಿ ಕಲಿಯುತ್ತಿದ್ದ ಗೋವಿಂದ ಕೃಷ್ಣ ತಿಲಕ ಎಂಬಿಬ್ಬರನ್ನು ಕೈದು ಮಾಡಿದ್ದರಿಂದ ಇವರು ಬಾಲಗಂಗಾಧರ ತಿಲಕರವರ ಪುತ್ರರಾಗಿರುವರೆಂಬ ಊಹೆಯ ಮೇಲೆ ಹಬ್ಬಿದ ಈ ವರ್ತಮಾನವು ಬರೆ ಸುಳ್ಳು ಎಂತ ತಿಳಿಯುತ್ತೇವೆ.

ಸರಕಾರಿ ಜವಾಬ್ದಾರಿಯುಳ್ಳ ಮತ್ತು ಸರಕಾರಿ ರೈಲ್ವೆಗಳ ಉತ್ಪತ್ತಿಯು ಕಳದ ಎಪ್ರಿಲ್ ತಿಂಗಳ ಒಂದನೇ ತಾರೀಕಿನಿಂದ ಕಳದ ಮಾರ್ಚ ತಿಂಗಳ ೧೨ನೇ ತಾರೀಕಿನವರೆಗೆ ರೂ. ೩೩,೦೦೮,೭೭೭ರಷ್ಟು ಇತರ ವರುಷಗಳಿಗಿಂತ (೧೯೦೮-೦೯ ಮತ್ತು ೦೭-೦೮) ಜಾಸ್ತಿಯಾಗಿರುವುದು.

[illegible] ಬಗ್ಗೆ ಒಂದು ಮಹಾ ಸಭೆಯು [illegible] ರಾಮಭಜದತ್ತರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಸಭೆಯ ವೃತ್ತಾಂತದಿಂದ ಕಳದ ವರುಷದಲ್ಲಿ ೨೦೬೬ ಮಹಮ್ಮದೀಯ ಮತ್ತು ಕ್ರೈಸ್ತರನ್ನು ಆರ್ಯಸಮಾಜಕ್ಕೆ ಕೂಡಿಸಿರುವರೆಂತ ತಿಳಿದುಬರುತ್ತದೆ. ಸಭೆ ನೆರೆದ ಸಾಯಂಕಾಲ ಗಂಗಾನದೀ ತೀರದಲ್ಲಿ ಮಹಮ್ಮದಿ ಮತದ ಪಂಡಿತರೂ ಮಾನ್ಯ ಕುಟುಂಬದವರೂ ಆದ ಮೌಲ್ವಿ ಗುಲಾಮ ಹೈದರರೆಂಬವರನ್ನು ಶುದ್ಧೀಕರಿಸಿ ಆರ್ಯಸಮಾಜಕ್ಕೆ ಕೂಡಿಸಿಕೊಂಡು ಸತ್ಯದೇವನೆಂಬ ಹೆಸರನ್ನು ಇವರಿಗೆ ಕೊಟ್ಟರು.

ಅಲ್ಲಹಾಬಾದಿನಲ್ಲಿ ಅಂಗ್ಲೊಇಂಡಿಯನರ ಮಹಾಸಭೆಯು ಕಳದ ತಿಂಗಳ ತಾ. ೨೬ರಲ್ಲು ಜರಗಿತು.

೧೮೬೫ನೇ ಇಸವಿಯಲ್ಲಿ ಭೂತಾನ ಮತ್ತು ಇಂಡಿಯಾ ಸರಕಾರಗಳೊಳಗೆ ಆದ ಒಪ್ಪಂದದಲ್ಲಿ ಈ ವರುಷ ಒಂದೆರಡು ಬದಲಾವಣೆಗಳನ್ನು ಮಾಡಿರುವರು. ಇಂಡಿಯಾ ಸರಕಾರದವರಿಂದ ಭೂತಾನದ ರಾಜರವರಿಗೆ ವರುಷಂಪ್ರತಿ ಕೊಡೋಣಾಗುವ ದ್ರವ್ಯಸಹಾಯವು ೫೦,೦೦೦ಗಳಿಂದ ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲ್ಪಟ್ಟಿರುವುದು. ಈ ರೀತಿ ದ್ರವ್ಯಸಹಾಯವು ಈ ವರುಷದ ಜನವರಿ ತಿಂಗಳ ೧೦ನೇ ತಾರೀಕಿನಿಂದಲೇ ಕೊಡೋಣಾಗುವದು. ಇಂಡಿಯಾ ಸರಕಾರದವರು ಭೂತಾನ ದೇಶದ ರಾಜ್ಯಾಡಳಿತೆಯಲ್ಲಿ ತಾವು ಪ್ರವೇಶವಾಗುವದಿಲ್ಲವೆಂತ ವ್ಯಕ್ತಪಡಿಸಿರುವರು. ಇದಕ್ಕೆ ಬದಲಾಗಿ ಭೂತಾನ ರಾಜರವರು ಬ್ರಿಟಿಷ ಸರಕಾರದವರ ಒಪ್ಪಿಗೆಯಾದವನ್ನನುಸರಿಸಿ ತಮ್ಮ ರಾಜ್ಯಕ್ಕೂ ಇತರ ರಾಜ್ಯಗಳಿಗೂ ಇರುವ ಕಾರ್ಯ ವ್ಯವಹಾರವನ್ನು ನಡಿಸುವರು. ಸಿಕ್ಕೀಮ್ ಕೂಚಬಿಹಾರ ಮತ್ತು ಭೂತಾನ ರಾಜರುಗಳೊಳಗೆ ಬರಬಹುದಾದ ಎಲ್ಲಾ ವಿವಾದವನ್ನು ಬ್ರಿಟಿಷರು ಪಂಚಾಯಿತರಾಗಿ ತೀರುಸುವುದೆಂಬೀ ಶರ್ತಗಳು ಭೂತಾನ ಸರಕಾರದವರಿಂದಲೂ ಇಂಡಿಯಾ ಸರಕಾರದವರಿಂದಲೂ ಅಂಗೀಕರಿಸಲ್ಪಟ್ಟಿವೆಯಂತೆ.

ಮುಂಬಯಿಯಲ್ಲಿ ಪ್ರಕಟವಾಗುತ್ತಿರುವ 'ರಾಷ್ಟ್ರಮತ' ಎಂಬ ಮರಾಟಿ ಪತ್ರವು ೫೦೦೦ ರೂಪಾಯಿಗಳ ಹಣ ಜವಾಬ್ದಾರಿಯನ್ನು ಕೊಡಲಾರದ್ದರಿಂದ ನಿಲ್ಲಿಸಲ್ಪಟ್ಟಿರುವುದು. 'ಗುಜರಾತಿ' ಎಂಬ ಪತ್ರಿಕೆಯಿಂದ ರೂ.೩೫೦೦ರ ಜವಾಬ್ದಾರಿಯನ್ನು ತಕ್ಕೊಂಡಿರುವರು.

ಕಲಿಕತ್ತೆಯ 'ಸಾಯಂಟಿಫಿಕ್ ಮತ್ತು ಇಂಡಸ್ಟ್ರಿಯಲ್ ಎಸೋಸಿಯೇಷನ್' ಎಂಬ ಸಂಘದವರು ಈ ವರುಷ ೬೧ ಜನ ವಿದ್ಯಾರ್ಥಿಗಳನ್ನು ಅಮೇರಿಕಾ ಜಪಾನ್ ಮತ್ತು ಅಂಗ್ಲಾಂಡಕ್ಕೆ ವ್ಯವಸಾಯ ಮತ್ತು ಕಲಾಶಿಕ್ಷಣವನ್ನು ಕಲಿತುಬರುವರೆ ಕಳುಹಿಸಿಕೊಡುವರು.

ರೈಲ್ವೆ ಬಂಡಿಗಳಲ್ಲಿ ಪ್ರಯಾಣ ಮಾಡುತ್ತಿರುವ ಭಾರತೀಯ ಪ್ರಯಾಣಿಕರ ಸೌಕರ್ಯಗಳಿಗಾಗಿ ನೊರ್ತ್‌ವೆಸ್ಟರ್ನ್ ರೈಲ್ವೆಗಳಲ್ಲಿ ಪೆನಶನು ಪಡೆದ ೨೫ ನೆಟೀವ್ ದಳವಾಯಿ ಆಫೀಸರರನ್ನು ತಿಂಗಳು ಒಂದರ ರೂ. ೧೨೫ರ ವೇತನದಲ್ಲಿ ನೇಮಿಸಿರುವರು. ಪ್ರಯಾಣಿಕರಲ್ಲಿ ಆಯಾ ಕ್ಷೇತ್ರಗಳವರು ಹತ್ತಬೇಕಾಗಿರುವ ಗಾಡಿಗಳನ್ನು ತೋರಿಸಿಕೊಡುವುದೂ ಗಾಡಿಗಳಲ್ಲಿ ಜನರು ಹೆಚ್ಚಾಗಿ ತುಂಬದಂತೆ ನೋಡಿಕೊಳ್ಳುವುದೂ, ಪ್ರಯಾಣಿಕರನ್ನು ಒಳ್ಳೇ ರೀತಿ ನಡಿಸುವಂತೆ ಜಾಗರೂಕರಾಗಿರುವುದೂ ಮೊದಲಾದ ಭಾರತೀಯ ಪ್ರಯಾಣಿಕರ ಸೌಕರ್ಯಗಳನ್ನು [illegible] ಕೊಳ್ಳುವರು. ಒಳ್ಳೇ ಮರ್ಯಾದಸ್ಥರನ್ನು [illegible] ಕೆಲಸಗಳಿಗೆ ನೇಮಿಸುವರು.

[illegible]

ಅಂತೆಯಿದ್ದರೂ ಹಲವು ಕಾರಣಗಳಿಂದ ತಮ್ಮ ಬರೋಣವನ್ನು ಈ ತನಕ ಮುಂದೆನಿಸಿಡಬೇಕಾಯಿತು ಒಂದೆರಡು ಸಲ ಈ ಪಟ್ಟಣಕ್ಕೆ ಬಂದು ತಮ್ಮ ಆಟಗಳನ್ನು ಪ್ರದರ್ಶಿಸಿ ನಿವಾಸಿಕರಿಂದ ಉದಾರ ಆಶ್ರಯವನ್ನು ಪಡಿರುವುದರಿಂದ ತರಬೇತು ಮಾಡಲ್ಪಟ್ಟ ಆನೆ ಸಿಂಹಗಳೂ, ಇತರ ಅನೇಕ ಭೀಕರ ಹಿಂಸ್ರಜಂತುಗಳೂ ವಿಶೇಷವಾದ ಸಾಧಕಗಳನ್ನಾಡುವವರೂ ಮೊದಲಿನಕ್ಕಿಂತ ಹೆಚ್ಚಾಗಿ ಸರ್ಕಸ್ ಮಂಡಳಿಯಲ್ಲಿದ್ದು ಈ ಸರ್ತಿ ಸಹಾ ಮಂಗಳೂರ ಪಟ್ಟಣಕ್ಕೆ ಬರುವುದು ತಮ್ಮ ಕರ್ತವ್ಯವೆಂದರಿತು ನಿವಾಸಿಕರ ಉದಾರ ಆಶ್ರಯವನ್ನು ಈ ಸಲ ಸಹ ಕೋರಿ ನಮ್ಮ ಪಟ್ಟಣಕ್ಕೆ ಬರುತ್ತಿರುವರು ಇಲ್ಲಿ ಬಹಳ ಸ್ವಲ್ಪ ದಿನವೇ ಇರಬೇಕೆಂಬುವ ಇವರ ಸಂಕಲ್ಪ ಇರುವುದು

~~~~~~

ಕಾಸರಗೋಡು ಕಳೆದ ಆದಿತ್ಯವಾರ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ವಕೀಲರಾದ ಮ ರಾ ರಾ| ಕೆ ಪಿ ಅಚ್ಯುತಯ್ಯನವರು ಡಿಸ್ಟ್ರಿಕ್ಟ್ ಒಡ್ಡರಾದ ಮೆ| ಹಾರ್ಡಿಂಗ್ ದೊರೆಗಳವರನ್ನು ಡಿಸ್ಟ್ರಿಕ್ಟ್ ಪೋಲೀಸು ಸುಪರಿಂಟೆಂಡೆಂಟ ದೊರೆಗಳೊಡನೆ ಇಲ್ಲಿಗೆ ಆಮಂತ್ರಿಸಿದ್ದರು ರಾ| ಅಚ್ಯುತಯ್ಯನವರು ಇವರ ವಿನೋದಾರ್ಥ ಒಂದು ಪಾರ್ಟಿಯನ್ನು ಏರ್ಪಡಿಸಿದ್ದರು

ಇಲ್ಲಿಗೆ ಕಳೆದ ರವಿವಾರ ಮಲಬಾರ ಸರ್ಕಸ್ ಕಂಪೆನಿಯವರು ಬಂದಿರುವರು ಇನ್ನು ಸ್ವಲ್ಪ ಕಾಲ ಸರ್ಕಸ್ ಆಟಗಳನ್ನು ಆಡುತ್ತ ಇಲ್ಲಿಯೇ ಇರುವರಾಗಿ ಕೇಳುತ್ತೇನೆ

~~~~~~

ಪುತ್ತೂರು ಒಬ್ಬಾತ ಆಗತಕ್ಕ ರಿಜಿಸ್ಟ್ರಿ ಕವರ್ ವಗೈರೆಗಳನ್ನು ವಿಸಾತಿ ಹ... ಮಾಡಲ್ಪಟ್ಟ ಹಳ್ಳಿ ಟಪ್ಪಾಲು ... ಬದಲಿ ನೋಡುತ್ತಿದ್ದ ನಾ... ಯಾರ್ಡರ್ ... ಕೆಲವು ... ಪಯೋಗಿಸಿದ್ದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ... ತಪ್ಪು ವಿಚಾರಣೆಯಾಗಿ ... ಶಿಕ್ಷೆಯನ್ನು ಪಡದಿರುವನು

ಇಲ್ಲಿಯ ಸ್ಟೇಶನರಿ ಸಬ್‌ಮ್ಯಾಜಿಸ್ಟ್ರೇಟರಾದ ಮ ರಾ ರಾ ಅಚ್ಯುತಯ್ಯನವರಿಗೆ ಕಾಸರಗೋಡಿಗೆ ವರ್ಗವಾಗಿರುವುದರಿಂದ ಇವರು ಎಪ್ರಿಲ್ ತಾ ... ತಮ್ಮ ... ದಾರರಿಗೆ ವಹಿಸಿಕೊಟ್ಟು ... ತೆರಳುವರಾಗಿ ಕೇಳುತ್ತೇವೆ

ಇಲ್ಲಿಯ ಮುನ್ಸಿಫ ಕೋರ್ಟಿನ ... ಜ್ಯಾರಿ ಮೊಕದಮೆ ... ಇದು ನಂತರದಲ್ಲಿ ಮುಖ್ಯಾರಿ ಕ್ಲಾರ್ಕ್ ... ನಾರಾಯಣರಾಯರ ಹಸ್ತದಲ್ಲಿ ... ಕುಡುಗಸಿಗ ಸಿಕ್ಕಿತು

ಇಲ್ಲಿಯ ವಕೀಲ ಮ ರಾ ರಾ ಬೆಳ್ಳಿಪಾಡಿ ಬಿಸಾಡಿ ಶಂಕ್ರಯ್ಯನವರು ಕಳೆದ ತಿಂಗಳು ತಾ ... ರಲ್ಲಿ ಪರಪನ್ನೈದಿದರು

ನೊರಕೆ ಕಾಳಿವೈದನು ಮುಂಡೂರು ಗ್ರಾಮದ ಪದ್ಮನಾಭಪಂಜಕಣ್ಣಾಯರ ಮೇಲೆ ಪೋಜರಿ ದಸ್ತಾವೇಜಿಗೆ ಮಾಡಿದ ಮದ್ದತಿನ ಕುರಿತು ಮಾಡಿದ ಫಿರ್ಯಾದು ತಲಶೇರಿ ಶೆಶನ್ಸ್ ಕೋರ್ಟಿನಲ್ಲಿ ತನಖಿಯಾಗಿ ಮುದ್ದೈಆಲೆಗೆ ಆವರು ಷದ ಶಿಕ್ಷೆಯೂ ೫೦೦ರೂಪಾಯಿ ಜುರುಮಾನೆಯೂ ವಿಧಿಸಲ್ಪಟ್ಟಿರುವುದು

~~~~~~

ಮುಲ್ಕಿ ಇಲ್ಲಿ ಬಪ್ಪನಾಡ ಜಾತ್ರೆಯು ಜರಗಲಿಕ್ಕಿರುವದರಿಂದ ಬಂದೋಬಸ್ತಿನ ಬಗ್ಗೆ ಮಂಗಳೂರಿನಿಂದ ಪೋಲೀಸಿನವರೂ ಮೆಜಿಸ್ಟ್ರೇಟರವರೂ ಬಂದು ಪಂಚೆಮಾಲ್ ಧರ್ಮಛತ್ರದಲ್ಲಿ ಇದ್ದುಕೊಂಡು ಅನೇಕ ಕ್ರಿಮಿನಾಲ್ ಮೊಕದಮೆಗಳನ್ನು ವಿಚಾರಿಸುತ್ತಿರುವರು ಪೋಲೀಸಿನವರೇ ಜಾತ್ರೆ ಸಂಬಂಧವಾಗಿ ಬಂದಿದ್ದರೂ ಜುಗಾರಾಟದಕ್ಕಿಂತಲೂ ಕನಿಷ್ಟ ಎಂದು ಹೇಳಬಹುದಾದ, ಹುಡುಗರನ್ನೂ ಮಕ್ಕಳನ್ನೂ ಕೂಡಾ ಮರುಳುಗೊಳಿಸುವ, ಖಾಲಿ ಆಟವನ್ನು ನಿಲ್ಲಿಸದಿರುವುದು ... ಮುದೇಶ್ಯ...

ಮುಲ್ಕಿ ಬಂದರಿನ ವ್ಯಾಪಾರ ಸ್ಥಿತಿಯು ಹಾಳಾಗಿ ಹೋಗಿರುವದರಿಂದ ಮಾತ್ರವೇ ಮಾರ್ಗಗಳು ಹಾಳಾಗಿವೆ ಎಂತ ಪೂರ್ಣ ಅಭಿಪ್ರಾಯಪಡಕೂಡದು ಕೆಲವು ಸಂವತ್ಸರಗಳ ಹಿಂದೆ ಬಡವರು ದೊಡ್ಡವರು ಎಂಬ ಬೇಧವಿಲ್ಲದೆ ಕಾಲ್ನಡಿಯವರಾಗಿಯೇ ಹೆಚ್ಚು ಕಡಿಮೆ ಎಲ್ಲರೂ ಹೋಗುತ್ತಿದ್ದರು ರೋಗಪೀಡಿತನಾದವನೊಬ್ಬನಿದ್ದರೆ ಪಾಲಕಿ ಮೇಲಾಗಲೀ ಕಂಬಳಿಯಲ್ಲಿ ಕಟ್ಟಿಯಾಗಲೀ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೊರುತಿದ್ದರು ಜಟಕಾ ಬಂಡಿಗಳ ಸುಳಿವೇ ಇರಲಿಲ್ಲ ಈಗಲಾದರೋ ತಿರುಗುವವರಾದರೂ ಬತಕಾ ಟಿಕೇಟು ಕೊಂಡು ಕಂಪೆನಿಯವರಿಂದ ವಂಚಿಸಲ್ಪಟ್ಟು ಒಂದೆರಡು ದಿನಗಳಾದರೂ ಮಂಗಳೂರು ಮೊದಲಾದ ಜಟ್ಕಾ ಆಫೀಸುಗಳಲ್ಲಿ ಬಿದ್ದುಕೊಳ್ಳುವಲ್ಲದೆ ನಡೆಯಲಾರರು ... ಬಿದಷ್ಟೂ ಒಂದು ಮೈಲಿನ ಮಾರ್ಗಕ್ಕೂ ಪಾದಿಯಲ್ಲಿ ಒಂದು ಕಡೆ ಮೇಲೆ ಕೂತು ಲಟಕ್ಕನೆ ಮುರಿದು ಬಿದ್ದರೂ ಚಿಂತಿಲ್ಲ ಎಂದು ಹೇಳುವವರು ಅನೇಕರಿರುವರು ... ದಿನಾವಹಿ ... ಮಾರ್ಗಗಳಲ್ಲಿ ಪಲವುಗಳ ಸ್ಥಿತಿಯನ್ನು ನೋಡುವವರು ಯಾರೂ ಇಲ್ಲ !! ನಾಮಲೇಶ್ ಇಲ್ಲದ ಮಾರ್ಗಗಳು ಸಿಕ್ಕವು ... ದೃಷ್ಟಿಯನ್ನು ಕುದುರೆಗಳೂ ಕಾಣರು !!|

~~~~~~

ವಿವಿಧ ವಿಷಯಗಳು

~~~~~~

ಊಟ ಮಾಡಿದಕೂಡಲೇ ಬಿಸಿ ನೀರು ಸ್ನಾನ ಮಾಡಬಹುದೋ? ಬ್ರಾಹ್ಮಣರಲ್ಲಿ ಊಟ ಮಾಡುವ ಮೊದಲೇ ಸ್ನಾನಮಾಡಬೇಕೆನ್ನುವ ಆಚಾರವಿರುವುದರಿಂದ ಈ ಪ್ರಶ್ನೆಯು ಉತ್ತಮ ... ವ್ಯಕ್ತವಾಗುವ ಆರೋಗ್ಯವು ಆವರಿಗೆ ತಿಳಿದಿಂದ ಹೇಳು ... ಆದರೆ ಬ್ರಹ್ಮಣರಲ್ಲದ ... ತಿಳಿಯ ... ಪರಮುನಾನಾದ ... ಮಕ್ಕಳಲ್ಲಿಯೂ ಊಟವಾದೊಡನೆ ಸ್ನಾನ ಮಾಡುವ ಪಾಠಕರು ಅಲ್ಪವಿರತ್ತದೆ ... ಸ್ತ್ರೀಯರು ಮಕ್ಕಳನ್ನು ... ನಿಸಿದ ಕೂಡಲೇ ... ಮೈ ಮೇಲೆ ... ಮೊದಲೇ ... ಕೊಳ್ಳುವುದೇ ... ಊಟವಾದ ... ಉಷ್ಣ ... ವಾಗ ... ಹೀಗೆ ಸ್ನಾನ ಮಾಡುವುದು ಮಕ್ಕಳಿಗೆ ... ದೊಡ್ಡವರಿಗೆ ... ಕ್ತವಲ್ಲ ಸ್ನಾನ ಮಾಡಿದ ಕೂಡಲೇ ರಕ್ತ ಚಲನೆಯು ... ಉದ್ರೇಕಿಸಲ್ಪಟ್ಟ ಅನ್ನಕೋಶ ಮೊದಲಾದ ... ರಕ್ತವು ಮೇಲಕ್ಕೆ ಬಂದು ಬೆವರು ರೂಪದಲ್ಲಿ ... ಉಂಟಾಗುವ ... ಹೊರಪಡಿಸುವುದು ಊಟ ಮಾಡಿದ ಕೂಡಲೇ ಸಹಾ ತಕ್ಕಷ್ಟು ಆಹಾರವು ಸಮನಾಗಿ ಪಚನವಾಗುವಂತ ರಕ್ತ ಚಲನೆಯು ಅನ್ನಕೋಶ ಮೊದಲಾದವುಗಳಲ್ಲಿ ಉದ್ರೇಕಿಸಲ್ಪಟ್ಟು ರಕ್ತ ಚಲನೆಯ ಪ್ರವಾಹವು ಆಯಾ ಕೋಶಗಳಲ್ಲಿ ಅಧಿಕವಾಗಿ ಬೇಕಾಗಿರುವುದು ಹೀಗೆ ಊಟ ಮಾಡಿದ ನಂತರ ಆಹಾರ ಪಚನೆಗೂ, ಸ್ನಾನವಾದ ನಂತರ ಬೆವರು ಬರುವಂತೆ ಮಾಡಲಿಕ್ಕೂ ರಕ್ತ ಚಲನೆಯ ಪ್ರವಾಹ ಉದ್ರೇಕವೇ ಅಗತ್ಯವಾಗಿರುವುದರಿಂದ ಮಧ್ಯಕಾಲದಲ್ಲಿ ಹೆಚ್ಚು ವಿಳಂಬವಿಲ್ಲದೆ ಊಟವನ್ನೂ ಸ್ನಾನವನ್ನೂ ಮಾಡಿದರೆ ರಕ್ತ ಚಲನೆಯ ಪ್ರವಾಹಕ್ಕೆ ಎಲ್ಲಿ ಹೋಗಲು ಸಾಧ್ಯ? ಆದ್ದರಿಂದ ಊಟ ಮಾಡಿದೊಡನೆಯೇ ಸ್ನಾನಮಾಡಿದರೆ ಜೀರ್ಣಶಕ್ತಿಗೆ ಕೇಡುಂಟಾಗಿ ರೋಗಾಗ್ರಸ್ತರಾಗುವೆವು. ಬಲಹೀನರಾದ ಮಕ್ಕಳಲ್ಲಿಯೂ ಇತರರಲ್ಲಿಯೂ ಇಂಥಾ ಸ್ನಾನವು ಅನಾರೋಗ್ಯಕರ ಮಾತ್ರವಲ್ಲ, ಕೇವಲ ಅಪಾಯಕರವಾಗಿರುವುದು. ಊಟವಾದ ನಂತರ ಸ್ನಾನಮಾಡಬೇಕಾದರೆ ... ಎರಡು ... ಸಮಯ ...

ಸಾಯಂಕಾಲ ಊಟ ಮಾಡಿದ ... ಮಕ್ಕಳನ್ನು ಮಲಗಿಸುವುದು ... ಊಟ ಆದ ಸ್ವಲ್ಪ ಸಮಯದ ಮೇಲೆ ಮಲಗಿಸುವುದಾದರೆ ಅಂಥಾ ಸಮಯವು ಎಷ್ಟು?

ಊಟ ಮಾಡಿಸಿದ ಒಂದು ಗಂಟೆಯ ನಂತರ ಮಕ್ಕಳನ್ನು ಮಲಗಿಸುವುದುಚಿತ. ಈ ಸಮಯದಲ್ಲಿ ಮಕ್ಕಳಿಗೆ ಬಹು ಕಠಿಣವಾದ ವ್ಯಾಯಾಮವನ್ನು ಮಾಡಬಿಡದೆ, ವಿನೋದದಲ್ಲಿ ಅತ್ತಿತ್ತ ತಿರುಗಾಡಿದ ನಂತರ ಮಲಗಲು ಬಿಡುವುದುಚಿತ ಮಕ್ಕಳು ಬೇಗನೆ ಮಲಗುವಂತೆ ಭಯಂಕರವಾದ ರಾಕ್ಷಸರ ಕಥೆ, ಭೂತಪಿಶಾಚಿಗಳ ಕಥೆ, ಅಥವಾ ಹುಲಿಕರಡಿಗಳ ಕಥೆ ಮೊದಲಾದವುಗಳನ್ನು ಹೇಳಿ ಕೆಲಸ ಅವಸರದಲ್ಲಿ ತಾಯಂದಿರು ಮಕ್ಕಳನ್ನು ಬೇಗನೆ ಮಲಗಿಸುವಂತೆ ಮಾಡುವುದುಂಟು ತಾಯಂದಿಯರ ಈ ವರ್ತನೆಯು ಬಹಳ ಆಕ್ಷೇಪಕರ ಬಹಳ ಗಾಬರಿಪಟ್ಟು ಮಕ್ಕಳು ಈ ರೀತಿ ಮಲಗುವುದರಿಂದ ನಿದ್ರೆ ಕಾಲದಲ್ಲಿ ಈ ಗದರಿಕೆಯು ಅವರ ಮನಸ್ಸಿನಲ್ಲಿದ್ದು ಬಹಳವಾಗಿ ಕೂಗುವವು ಇದರಿಂದ ನರ ಸಮ್ಮಂಧವಾದ ಬಲಹೀನತೆಯು ಸಹಾ ಉಂಟಾಗಿ ನವೀನ ರೋಗಗಳು ಸಹಾ ಮಕ್ಕಳಲ್ಲಿ ಜನಿಸುವುದುಂಟು

~~~~~~

ಪಾಶ್ಚಾತ್ಯ ಜನಾಂಗಗಳಲ್ಲಿ ಹೊಲ್ಲೆಂಡಿನವರು ಮತ್ತು ತುರ್ಕರು ಚುರುಟು, ಸಿಗರೇಟು ಮೊದಲಾದವುಗಳನ್ನು ಸೇದುವಷ್ಟು ಇತರ ಯಾವ ಜನಾಂಗವೂ ಸೇದುವುದಿಲ್ಲವಂತೆ

~~~~~~

ಜೀನಸುಗಳ ಧಾರಣೆ, ಮಂಗಳೂರು.

~~~~~~

ಕೊಳೂರು ಮಸ್ತತಿ ಅಕ್ಕಿ , , , , , ,	4—6—0
ಗುಡ್ಡು ಮಸ್ತತಿ , , , , , , , ,	3—13—0
ಮಸ್ತತಿ , , , , , , , , , , , , ,	3—12—0
ಗುಡ್ಡು ರಾತಿ , , , , , , , , , , ,	3—10—0
ವಕ್ಕ ಸುಗ್ಗಿ , , , , , , , , , , ,	3—11—0
ಮಸ್ತತಿ ಬೆಳ್ತಿಗೆ , , , , , , , , ,	4—8—0
ರಂಗೂನ್ ಬೆಳ್ತಿಗೆ ಗೋಣಿ . , , ,	7—4—0
ಹುರುಳಿ ಗೋಣಿ ೧ ಮುಡಿ 2ರ , , ,	6—8—0
ಉಪ್ಪು ಗೋಣಿ ೧ರ , , , , , , ,	3—7—0
ಕೊಪ್ರಿ ಖಂಡಿ ೧ರ , , , , , , ,	105—0—0
ಕೊಪ್ರಿ ಎಣ್ಣೆ ಮಣ , , , , , , , ,	6—14—0
ಕಾಫಿ ಖಂಡಿ ೧ರ , , , , , , ,	185—0—0
ಕಾಳು ಮೆಣಸು ಖಂಡಿ , , , , ,	115—0—0
ಹೊಸ ಬಿಳಿ ಗೋಟು ಅಡಿಕೆ , , ,	77—8—0
ಕರಿ ಗೋಟು , , , , , , , , , , , ,	65—0—0
ಏಲಕ್ಕಿ ಮಣ ೧ರ , , , , , , ,	28—0—0

~~~~~~

ಅಬಲಾ ಸಂಜೀವಿನೀ ಗುಳಿಗೆಗಳು.

~~~~~~

ರೋಮನ್‌ಕಥೋಲಿಕ್ ಕ್ರೈಸ್ತರಾದ ನಮ್ಮ ಒಬ್ಬ ಜಾತ್ಮೀದಾರರು ರೋಮನ್ ಕಥೋಲಿಕ್ ವಾಚಕರ [illegible] ಸ್ವರ್ಗಸ್ಥ ಘನಯೊಂದಿದ ಬಿಶೋಪ್ ಕವದಿನಿ ಪ್ರಭುಗಳ ಉತ್ತರಾಧಿಕಾರಿಯನ್ನು ಚುನಾಯಿಸುವ ಕ್ರಮವನ್ನೂ ಇಂಥಾ ಚುನಾವಣೆಯಲ್ಲಿ ಆರಿಸಲ್ಪಡುವ ಸಂಭವವು ಸೈಂಟ್ ಎಲೋಶಿಯಸ್ ಕೋಲೇಜಿನ ರೆಕ್ಟರರಾದ ಫಾದರ್ ಪಿ ಪೆರಿನಿಯವರಿಗೆ ಹೆಚ್ಚಾಗಿರುವುದೆಂಬ ಜನಾಭಿಪ್ರಾಯವನ್ನೂ ಸಹಾ ವ್ಯಕ್ತಗೊಳಿಸಿರುವರು.

ರೋಮನ್‌ಕಥೋಲಿಕ್ ದೇವಾಲಯದ ಮತಾಧಿಕಾರವು ಸಾಂಗ್ಯವಾಗಿ ನಡಿಸಲ್ಪಡುವಂತೆ ಹಿಂದುಸ್ಥಾನದಲ್ಲಿರುವ ರೋಮನ್‌ಕಥೋಲಿಕರಿರುವ ರಾಜ್ಯಗಳೆಲ್ಲವೂ 'ಡಾಯೊಸಿ' ಎಂಬ ಆರ್ಚ ಬಿಶೋಪರ ಅಧಿಕಾರಕ್ಕೆ ಒಳಪಟ್ಟ ಬೇರೆ ಬೇರೆಯಾದ ಪ್ರದೇಶಗಳಾಗಿ ವಿಭಾಗಿಸಲ್ಪಟ್ಟಿರುವವು. ಮಂಗಳೂರು ಡಾಯೊಸಿಯು ಮುಂಬಯಿಯ ಆರ್ಚಬಿಶೋಪರವರ ಅಧಿಕಾರಕ್ಕೆ ಒಳಪಟ್ಟಿರುವುದು. ಮಧುರಾ ಮತ್ತು ಪೂನಾ ಬಿಶೋಪರವರ ಅಧಿಕಾರ ಪ್ರದೇಶಗಳು ಮುಂಬಯಿ ಡಾಯೊಸಿಗೇ ಕೂಡಿರುತ್ತವೆ. ಪ್ರಕೃತ ಮಂಗಳೂರು ಬಿಶೋಪರವರು ಗತಿಸಿದ್ದರಿಂದ ದಕ್ಷಿಣಕನ್ನಡ ಜಿಲ್ಲೆಯ ರೋಮನ್‌ಕೆಥೋಲಿಕ್ ವೈದಿಕ ಮಂಡಳಿಯಿಂದ ಬೇಕಾದ [illegible]ವೆಲ್ಲವನ್ನು ತಿಳಕೊಂಡು ಮಂಗಳೂರಿನಲ್ಲಿರುವ ಜೆಜುಯಿಟರ ಪೈಕಿ ಮೂರು ಜನರ ಹೆಸರುಗಳನ್ನು ಆರಿಸಿ ತೆಗಿಯುವರು. ಇಂಥಾ ಹೆಸರುಗಳನ್ನು ಅವರವರ ಪಾತ್ರತೆ ಪ್ರಕಾರ ಕ್ರಮದಲ್ಲಿಟ್ಟು ಪೋರ್ಟುಗಲ್ ದೇಶದ ರಾಜರವರಿಗೆ ಕಳುಹಿಸಿಕೊಡುವರು. ಪೋರ್ತುಗೀಸ್ ರಾಜರವರು ಇವರಲ್ಲಿ ಅತ್ಯಧಿಕ ಯೋಗ್ಯತೆಯುಳ್ಳವರ ಹೆಸರನ್ನೇ ಚುನಾಯಿಸುತ್ತೇವೆಂದು ಆ ಹೆಸರಿನವರನ್ನು ಬಿಶೋಪ ಅಧಿಕಾರ ಸ್ಥಾನಕ್ಕೆ ನೇಮಿಸಬಹುದೆಂಬ ತಮ್ಮ ಅಭಿಪ್ರಾಯವನ್ನು ರೋಮು ದೇಶದಲ್ಲಿರುವ ಪೋಪ ಗುರುಶ್ರೇಷ್ಠರಿಗೆ ವಿಜ್ಞಾಪಿಸಿಕೊಳ್ಳುವರು. ಪೋಪರವರು ಹೀಗೆ ಆರಿಸಲ್ಪಟ್ಟವರು ಬಿಶೋಪ್ ಪದವಿಗೆ ಯೋಗ್ಯರೋ ಎಂಬುದನ್ನು ಇಲ್ಲಿಯ ವಿಕಾರ ಜನರಲರವರ ಮುಖಾಂತರ ಕೆಥೋಲಿಕ್ ವೈದಿಕ ಮಂಡಳಿಯ ಅಭಿಪ್ರಾಯವನ್ನು ಕೇಳಿ ತಮ್ಮ ನೇಮಕದ ಮಂಜೂರಾತಿಯನ್ನು ಇಲ್ಲಿಯ ವಿಕಾರ್ ಜನರಲರವರಿಗೆ ಅನಂತರದಲ್ಲಿ ತಿಳಿಯಪಡಿಸುವರು. ಒಂದು ವೇಳೆ ಹೀಗೆ ಚುನಾಯಿಸಲ್ಪಟ್ಟವರು ಬಿಶೋಪ್ ಪದವಿಗೆ ಯೋಗ್ಯರಲ್ಲವೆಂಬುದಾಗಿ ಇಲ್ಲಿಯ ವೈದಿಕ ಮಂಡಳಿಯಿಂದ ತಿಳಿದುಬಂದರೆ ಪೋಪರವರು ಬಿಶೋಪರವರ ನೇಮಕ ಮಂಜೂರಾತಿಯನ್ನು ತಿಳಿಯಪಡಿಸುವ ಮೊದಲೇ ಪೋರ್ತುಗೀಸ್ ಅರಸರನ್ನು ಮುಂಬಯಿ ಪೂನಾ ಮತ್ತು ಮಧುರಾ ಬಿಶೋಪರವರಿಂದ ಸಂಗ್ರಹಿಸಲ್ಪಟ್ಟ ಬಾಕಿ ಇರುವ ಎರಡು ಹೆಸರುಗಳಲ್ಲೊಬ್ಬರನ್ನು ಪುನಹಾ ಆರಿಸಬೇಕೆಂದು ಕೇಳಿಕೊಳ್ಳುವುದೂ ಉಂಟು.

ಬಿಶೋಪರಾಗಿ ನೇಮಿಸಲ್ಪಟ್ಟಿರುವರೆಂಬ ವರ್ತಮಾನವು ಪೋರ್ತುಗೀಸ್ ಅರಸರ ಮುಖಾಂತರ ಮುಂಬಯಿ ಪೂನಾ ಮತ್ತು ಮಧುರಾ ಬಿಶೋಪರುಗಳಿಗೆ ಬಂದು ತಲುಪಿ ನೇಮಿಸಲ್ಪಟ್ಟಿರುವ ಉಮೇದ್ವಾರರಿಗೆ ತಿಳಿಸೋಣಾಗುವುದು. ಜೆಜುಯಿತರ ವರ್ತನೆಯ ಪ್ರಕಾರ ಅವರು ಯಾವ ಹುದ್ದೆಯನ್ನಾದರೂ ಅಂಗೀಕರಿಸಲೂ ಬಯಸಲೂ ಕೂಡದಾದ್ದರಿಂದ ಪೋಪರವರ ಆಜ್ಞೆಯನ್ನು ಹೀಗೆ ನೇಮಿಸಲ್ಪಟ್ಟ ಜೆಜುಯಿತ ಗುರುಗಳಿಗೆ ಕೊಟ್ಟ ಬಳಿಕ ಬಿಶೋಪ್ ಪದವಿಯು ಇವರಿಂದ ಅಂಗೀಕರಿಸಲ್ಪಡುವುದು.

ಹೀಗೆ ಬಿಶೋಪ ಪದವಿಯನ್ನು ಅಂಗೀಕರಿಸಿದ ಮೇಲೆ ಅವರನ್ನು ಆ ಪದವಿಯಲ್ಲಿ ಪ್ರತಿಷ್ಠಿಸುವ ಆಚಾರವಿರುವುದು. ಇಂಥಾ ಆಚಾರವು ಇಲ್ಲಿಯೇ ಆಗಲೂ ಬಹುದೆಂದು ಕೆಲವರು ಅಭಿಪ್ರಾಯಪಡುವರು. ಇಲ್ಲಿಯೇ ಆಗುವುದಾದರೆ ಮುಂಬೈ, ಪೂನಾ ಮತ್ತು ಮಧುರೆಯ ಬಿಶೋಪರವರು ಇಲ್ಲಿಗೆ ಬಂದು ಇದನ್ನು ನೆರವೇರಿಸಿಕೊಡಬೇಕು. ಹಲವು ಸಂದರ್ಭಗಳಲ್ಲಿ ಈ ಆಚಾರವು ಪೋಪರವರ ಸನ್ನಿಧಾನದಲ್ಲಿಯೇ ಆಗುವುದ[illegible]ಂತ ಕೇಳುತ್ತೇವೆ. ಹೀಗೆ ಬಿಶೋಪರವರು ಪ್ರತಿಷ್ಠೆ ಹೊಂದುವ [illegible] ರೋಮ ಪಟ್ಟಣಕ್ಕೆ ಹೋಗಿ ೩ ಯಾ ನಾಲ್ಕು [illegible] [illegible] ಕೇಳುತ್ತೇವೆ.
~~~~~~~~~

ವಿದೇಶ ವೃತ್ತಾಂತ.

ರೈಲ್‌ಭಂಡಿಗಳು ಒಂದೇ ಚಕ್ರದಲ್ಲಿ ನಡಿಯುವ ಯಂತ್ರರಚನೆಯು ಇನ್ನು ಬಹುಬೇಗ ಅಲ್ಲಲ್ಲಿ ತಲೆದೋರು ವಂತಿದೆ. ಇಂಥಾ ಯಂತ್ರಚಲನೆಯು ಗಾಡಿಗಳ ಚಲನೆಯನ್ನು ಪರೀಕ್ಷಾರ್ಥ ಅಂಗ್ಲಾಂಡದಲ್ಲಿ ಮಾಡಿ ನೋಡುತ್ತಿರುವರು ಇಷ್ಟರ ತನಕ ಗಂಟೆ ಒಂದಕ್ಕೆ 22 ಮೈಲುಗಳ ತನಕ ಈ ರೈಲು ಭಂಡಿಗಳು ನಡಿಯುತ್ತಿರುವವು. ಇಂಥಾ ಬಂಡಿಗಳು ಓಡುತ್ತಿರುವಾಗ್ಯೆ ಆಯಾ ಸ್ಟೇಶನುಗಳಲ್ಲಿ ನಿಂತು ಸಾಮಾನು ಗಳನ್ನು ಸಹಾ ಬೇಕಾದ ರೀತಿಯಲ್ಲಿ ತುಂಬಿಸಿಕೊಳ್ಳುವುದು ಸಾಧ್ಯವೆಂತ ಕಂಡುಬಂದಿರುವುದು. ಇನ್ನು 18 ತಿಂಗಳುಗಳಲ್ಲಿಯೇ ಪ್ರಯಾಣಿಕರ ಒಗ್ಯೆ ಇಂಥಾ ರೈಲ್ ಗಾಡಿಗಳ ಸುಳಿದಾಟವು ಪ್ರಾರಂಭಿಸಲಾಗುವದೆಂತ ನಿರ್ಧರಿಸಿರುವರು. ಈ ಗಾಡಿಗಳ ಉಪಯೋಗದ ಪ್ರಥಮ ಹಕ್ಕು ಇಂಡಿಯಾ ಸರಕಾರದವರದಾಗಿರುವುದೆಂತ ತಿಳಿಯುತ್ತೇವೆ.

~~~~~~

ಅಮೇರಿಕದ ಸಂಯುಕ್ತ ಸಂಸ್ಥಾನದ ಮಾಜೀ ಪ್ರೆಸಿಡೆಂಟರಾದ ಮಿ। ರೊಸ್‌ವೆಲ್ಟರವರು ರೋಮು ಪಟ್ಟಣಕ್ಕೆ ಬಂದು ತಲಪಿರುವರು.

~~~~~~

ಹಿಂದುಸ್ಥಾನದ ವ್ಯೆಸರಾಯ ಪ್ರಭುಗಳಾದ ಮಿಂಟೋ ಪ್ರಭುಗಳ ಕೆಲಸದ ಅವದಿಯು ಇನ್ನು ಸನ್ನಿಹಿತವಾಗಿ ತೀರುವುದು. ಇವರ ಉತ್ತರಾಧಿಕಾರಿಯಾಗಿ ಯಾರನ್ನು ನೇಮಿಸುವರೆಂಬುದು ಇನ್ನೂ ಗೊತ್ತಾಗುವದಿಲ್ಲ. ಹಿಂದುಸ್ಥಾನದ ಮಾಜೀ ಸರ್ವಸೇನಾಧಿಪತಿಯಾಗಿದ್ದ ಕಿಚ್ನರ್ ಪ್ರಭುಗಳು ಔಸ್ಟ್ರೇಲಿಯದ ಇಂಗ್ಲೀಷ ವಸಾಹತುಗಳಿಗೆ ಹೋಗಿರುವುದರಿಂದ ಕಿಚ್ನರ್ ಪ್ರಭುಗಳು ಮಿಂಟೋ ಪ್ರಭುಗಳ ನಂತರ ವ್ಯಾಸರಾಯ ಪ್ರಭುಗಳಾಗುವರೆಂದು ವಾದವು ಅಂಗ್ಲಾಂಡದಲ್ಲಿ ಹಲವು ಕಡೆಗಳಲ್ಲಿ ನಡಿಯುತ್ತಿರುವುದಂತೆ. ಕಿಚ್ನರ್ ಪ್ರಭುಗಳಿಗ ಈ ಪದವಿಯನ್ನಲಂಕರಿಸುವ ಇಚ್ಛೆಯು ಬಹಳವಾಗಿರುವುದೆಂತಲೂ ಇವರಿಗೆ ಈ ಹುದ್ದೆಯು ಸಿಕ್ಕುವಂತೆ ಪ್ರಯತ್ನಗಳು ನಡಿಯುತ್ತಿರುವುದೆಂತಲೂ ಮುಂಬಯಿಯ "ಟೈಮ್ಸ ಆಫ್ ಇಂಡಿಯಾ" ಎಂಬ ಅಂಗ್ಲೇಯ ಪತ್ರದ ಲಂಡನ್ ಬಾತ್ಮೀದಾರನೊಬ್ಬನು ಬರೆದಿರುವನು. ಆದರೆ ದಳವಾಯಿ ಅಧಿಕಾರಿಗಳಾಗಿದ್ದವರನ್ನು ಹಿಂದುಸ್ಥಾನದಲ್ಲಿ ಸರ್ವಾಧಿಕಾರಿಯಾಗಿ ನೇಮಿಸುವ ಕಾಲವು ಬಂದೊದಗಿರುವುದೆಂತ ಮೋರ್ಲೆ ಪ್ರಭುಗಳಿಗೆ, ಪ್ರಧಾನ ಮಂತ್ರಿಗಳಾದ ಮಿ। ಎಸ್ಕ್ವಿತರಿಗೂ ಅಭಿಪ್ರಾಯ ಪಡುವುದು ಕಷ್ಟಸಾಧ್ಯವೆಂಬದಾಗಿ ಭಾವಿಸಲ್ಪಟ್ಟಿರುವುದು. ವ್ಯಾಸರಾಯಿಗಳು ಯಾರಾಗುವರೆಂಬದನ್ನು ಇಷ್ಟರಲ್ಲಿಯೇ ಪ್ರಕಟಿಸಬೇಕಾಗಿತ್ತು. ಆದರೆ ಪಾರ್ಲಿಮೆಂಟ್ ಸಭೆಯಲ್ಲಿಯ ಒಜೇಟು ಮತ್ತು ಪ್ರಭುಸದನ ಅಧಿಕಾರವನ್ನು ಮಿತಪಡಿಸುವ ಕಾನೂನು ಮಸೂದೆಯ ತರ್ಕಗಳ ಕತದಾಟದಲ್ಲಿ ಮಂತ್ರಿಗಳೆಲ್ಲರೂ ಉದ್ಯುಕ್ತರಾಗಿರುವುದರಿಂದ ಈ ವಿಷಯವು ಇಷ್ಟರ ತನಕ ಬಾಕಿಯಲ್ಲಿರುವುದೆಂತ ಊಹಿಸಬೇಕಾಗಿರುವುದು. ಅಂಗ್ಲಾಂಡ ಸರಕಾರದ ಲಿಬರಲ್ ಕಡೆಯ ಪ್ರಭುಗಳು ಈ ಹುದ್ದೆಗೆ ದೊರಕಲು ಸಾಕಷ್ಟು ಮಂದಿ ಪ್ರಭುಗಳ ಸಂಖ್ಯೆಯು ಇಲ್ಲದ್ದರಿಂದ ಸರಕಾರದಕಡೆಯ ಪಕ್ಷಕ್ಕೆ ವಿರೋಧ ಪಕ್ಷದವರಲ್ಲಿ ಉದಾರಚಿತ್ತದವರಾದೊಬ್ಬರನ್ನು ವ್ಯಾಸರಾಯರಾಗಿ ನೇಮಿಸುವರೆಂಬ ಅಭಿಪ್ರಾಯವಿದೆ. ಭಾರತೀಯರಿಗೆ ಪರಿಚಿತಿಯುಳ್ಳ ಇಂಥಾ ಪ್ರಭುಗಳು ಹಿಂದುಸ್ಥಾನದ ವ್ಯಾಸರಾಯ ಪ್ರಭುಗಳಾಗುವರೆಂದು ಈ ಬಾತ್ಮೀದಾರರು ತೋರಿಸಿರುವರು.

~~~~~~

ಬಂಗಾಳದಿಂದ ಗಡಿಪಾರಾದವರನ್ನು ವಿಮೋಚನೆ ಮಾಡಬೇಕೆಂಬುದಾಗಿ ಬ್ರಿಟಿಷ್ ಪಾರ್ಲಿಮೆಂಟು ಸಭೆಯಲ್ಲಿ ಯಾರೂ ಪ್ರಭುಗಳು ಪ್ರಶ್ನೆ ಕೇಳಿದಾಗ್ಯೂ ಅವರಿಗೆ ಬಿಡುಗಡೆ ಕೊಡುವುದು ಯೋಗ್ಯವಲ್ಲವೆಂದೂ, ಯಾವ ನಿಯಮಗಳಿಗೆ ಒಳಪಟ್ಟು ಗಡಿಪಾರಾದವರ ಬಂಧ ವಿಮೋಚನೆ ಆಗುವ ತನಕ ಬಹಳ ಸಾಹಸಪಟ್ಟ ಭರತಭೂಮಿಯ ವಾತ್ಸಲ್ಯವುಳ್ಳ ಮಿ। ಮೆಕರ್ನೆಸ್ ಮೊದಲಾದವರು ಇತ್ತಲಾಗೆ ಹಿಂದೂ ದೇಶದಲ್ಲಿ ಜಾರಿಗೆ ಬಂದ ವರ್ತಮಾನಪತ್ರಗಳ ಮತ್ತು ಮುದ್ರಣಾಲಯಗಳ ಈ ಶಾಸನವನ್ನು ಆಲೋಚಿಸುವ ಬಗ್ಗೆ ಒಂದು ಸಭೆ ಕೂಡಿದರಾಗಿ ತಿಳಿಯುತ್ತೇವೆ. ಸರ್ ಹೆನ್ರಿಕೊಟನರವರು ಈ ಸಭೆಯ ಅಧ್ಯಕ್ಷರೂ, ಮಿ। ಮೆಕರ್ನೆಸ್‌ರವರೂ ಉಪನ್ಯಾಸ ಕರ್ತರೂ ಆಗಿದ್ದರು. ಈ ಶಾಸನದಲ್ಲಿರುವ ಕುಂದುಕಗಳನ್ನು ಕುರಿತು ಒಂದು ಮನವಿಯನ್ನು ಸ್ಟೇಟ್ ಸೆಕ್ರೆಟರಿಗಳಾದ ಮೊರ್ಲೆ ಪ್ರಭುಗಳಿಗೆ ಬರದು ಉತ್ತರ ನಿರೀಕ್ಷಿಸುತ್ತಿರುವರು.

~~~~~~

ಉತ್ತರ ಹಿಂದುಸ್ಥಾನ.

~~~~~~

ಮುಂಬಯಿ ಜನರಲ್ ಪೋಸ್ಟ್ ಆಫೀಸಿನಿಂದ ಅಮೃತಸರದ ಎಂಬಲ್ಲಿಗೆ ಕಳುಹಿಸಲ್ಪಟ್ಟ ಗಂಟನ್ನು ಕಡಿದಿರುವ ನಾಲ್ಕು ಪಾರ್ಸಲುಗಳು ಕಳುಹಿಸಲ್ಪಟ್ಟವು. ಪಾರ್ಸಲುಗಳನ್ನೂ ಅವಷ್ಟೇ ಮೌಲ್ಯಕ್ಕೆ ವಿಮೇ ಉತ್ತರವಾಯಿ ಸಲ್ಪಟ್ಟಿದ್ದವು. ಅಮೃತಸರಕ್ಕೆ ಈ ಟಪ್ಪಾಲು ಹೋಗಿ ತಪ್ಪಿದೊಡನೆ ನೋಡಿದ್ದಲ್ಲಿ ಈ ಪಾರ್ಸಲುಗಳ ಟಪ್ಪಾಲು ಚೀಲದಲ್ಲಿ ಕಾಣೆಯಾಗಿ ಹೋಗಿರುವಂತೆ. ಪಾರ್ಸಲುಗಳ ಮೌಲ್ಯವು ರೂ ೬೫,೬೦೦ ಆಗಿರುವುದು. ಕಳ್ಳರು ಯಾರೆಂತಾಗಲಿ ಅಥವಾ ಚಿನ್ನದ ಗಟ್ಟಿಗಳು ಎಲ್ಲಿರುವವೆಂದಾಗಲಿ ಇಷ್ಟರ ವರೆಗೆ ತಿಳಿದಿರುವದಿಲ್ಲ. ತಲಾಶಿಯು ನಡಿಯುತ್ತಿರುವುದು.

~~~~~~

ಬಂಗಾಳದಲ್ಲಿ ಜಾರಿಗೆ ಬರತಕ್ಕ ಪೋಲೀಸುಪಿಟ್ ಎಂಬ ಕಾನೂನು ಮಸೂದೆಯು ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಗಿರುವುದು.

~~~~~~

ಕಲ್ಕತ್ತೆಯ ಪೋಲೀಸಿನವರು ಕೆಲವು ಮನೆಗಳಲ್ಲಿ ಜಪ್ತಿ ಮಾಡಿದರು. ಇತ್ತಲಾಗೆ ಗಡಿಪಾರಿನಿಂದ ವಿಮೋಚನೆಯಾಗಿ ಬಂದ ಬಾಬು ಕೃಷ್ಣಕುಮಾರ ಮಿತ್ರರವರ ಮನೆಯೂ ಬಾಬು ಅರವಿಂದ ಘೋಷರವರಿಂದ ನಡಿಸಲ್ಪಡುತ್ತಿದ್ದ ಕರ್ಮಯೋಗಿನಿ ಎಂಬ ಪತ್ರದ ಆಫೀಸೂ, ಸಹಾ ಜಪ್ತಿಮಾಡಲ್ಪಟ್ಟಿವಂತೆ. ಜಪ್ತಿಯ ಫಲಿತಾಂಶವು ಈ ತನಕ ತಿಳಿದು ಬರಲಿಲ್ಲ. ಕರ್ಮಯೋಗಿನಿ ಎಂಬ ಪತ್ರದ ಹೊಸೇ ಸಂಚಿಕೆಯಲ್ಲಿ ವಿರೋಧ ಆಕ್ಷೇಪಕರ ಲೇಖನಗಳು ಪ್ರಕಟಿಸಲ್ಪಟ್ಟದ್ದರಿಂದ ಕರ್ಮಯೋಗಿನಿ ಆಫೀಸು ಜಪ್ತಿಮಾಡುವದೆ ಕಾರಣವಾಯಿತೆಂಬದಾಗಿ ವರ್ತಮಾನ ಇರುವುದು.

ಮೂರು ಪೆಟ್ಟಿಗೆ ತುಂಬ ಕರ್ಮಯೋಗಿನಿಯ ಸಂಚಿಕೆಗಳನ್ನೂ ಇತರ ರಿಕಾರ್ಡನ್ನೂ ಕರ್ಮಯೋಗಿನಿ ಆಫೀಸಿನಿಂದ ತಕ್ಕೊಂಡು ಹೋಗಿರುವರಲ್ಲದೆ, ಅದನ್ನು ಮುದ್ರಿಸುತ್ತಿದ್ದ ಮನಮೋಹನಘೋಷ ಎಂಬವನನ್ನು ಸಹಾ ಕೈದುಮಾಡಿರುವರಂತೆ.

~~~~~~

ಟೆಲಿಗ್ರಾಫು ಮನಿಯಾರ್ಡರು ಮೂಲಕ ಬಟ್ವಾಡೆಗೆ ಬಂದ ರೂ ೬೦೦ರನ್ನು ದುರುಪಯೋಗಿಸಿದಕ್ಕೆ ಆಗ್ರದ ಒಬ್ಬ ಟಪ್ಪಾಲು ಪೇದೆಗೆ ೨ ವರುಷಗಳ ಕಠಿಣ ಸಜೆಯನ್ನೂ, ೬೦೦ ರೂಪಾಯಿ ಜುರುಮಾನೆಯನ್ನೂ ವಿಧಿಸಿದರು.

~~~~~~

ವಂಗಭಂಗದಿಂದ ವಿಂಗಡಿಸಲ್ಪಟ್ಟ ಹೊಸ ಸಂಸ್ಥಾನದ ಶಿಬಂದಿ ಖರ್ಚಿಗೆ ೧೨ ಲಕ್ಷ ರೂಪಾಯಿಗಳೂ, ಈ ವರೆಗೆ ಸರಕಾರ ಕಟ್ಟಡಗಳಲ್ಲಿ ವಿನಿಯೋಗಿಸಿದ [illegible] ಶಿಬಂದಿ ಖರ್ಚಿಗೂ ಕಟ್ಟೋಣಗಳ ಖರ್ಚಿಗೂ ಇನ್ನೂ ಹಣ ಬೇಕಾಗುವುದಂತೆ. ಕರ್ಜನ್ ಪ್ರಭುಗಳು ವಂಗಭಂಗವನ್ನು ಮಾಡಿದಾಗ ಆ ಕಾಲದ ಸರಕಾರದವರು ಈ ನವೀನ ಸಂಸ್ಥಾನಕ್ಕೆ ಬೇಕಾಗಿರುವ ಖರ್ಚಿನ ಅಂದಾಜಿಯನ್ನು ಬಹಳ ಕಡಿಮೆಯಾಗಿ ಮಾಡಿದ್ದರು. ೫೦ ಲಕ್ಷ ರೂಪಾಯಿಗಳು ಕಟ್ಟೋಣ ಮೊದಲಾದವುಗಳ ಬಗ್ಗೆಯೂ ೮ ಲಕ್ಷ ರೂಪಾಯಿ ಶಿಬಂದಿಗೋಸ್ಕರವೂ ಬೇಕಾದೀತೆಂತ ಅಂದಾಜು ಮಾಡಲ್ಪಟ್ಟಿತಂತೆ.

ಮುಂಬಯಿ ಹ್ಯಾಕೋರ್ಟಿನ ಜಡ್ಜರಾದ ಮಿ। ದಾವಾರರವರ ಧರ್ಮಪತ್ನಿಯರಾದ ಬಾಯಿ ಪಿರೋಜಬಾಯಿಯವರು ಕಳೆದ ವಾರ ಮುಂಬಯಿಯಲ್ಲಿ ಮೃತಪಟ್ಟರು.

~~~~~~

ಕಷ್ಟವಿಲ್ಲದೆ ವಿಶೇಷ ದ್ರವ್ಯಸಂಪಾದನೆಯನ್ನು ಬಯಸುವ ವಂಚಕನೊಬ್ಬನು ಬ್ರೋಚ ಎಂಬಲ್ಲಿಂದ ಅರಳೆ ಅಂಡಿಗೆಗಳನ್ನು ಕಳುಹಿಸಿಕೊಟ್ಟಿರುವೆನೆಂದು ತೋರಿಸುವ ರೈಲ್ವೆ ರಶೀದಿಗಳನ್ನು ಮುಂಬಯಿಯಲ್ಲಿಯ ಕೆಲವು ಹತ್ತಿ ವ್ಯಾಪಾರಸ್ಥರಿಗೆ ಕಳುಹಿಸಿಕೊಟ್ಟು ತನಗೆ ಹೀಗೆ ರೂಪಾಯಿ ೬೮೦೦೦ ಬರಬೇಕಾಯಿತಾದ್ದರಿಂದ ಈ ಐವಜಿಗೆ ಸಾವುಕಾರರ ಮೇಲೆ ಹುಂಡಿ ಬರೆದನು. ಸಾವುಕಾರರು ಹುಂಡಿಗಳನ್ನು ಸ್ವೀಕರಿಸಿ ಹಣವನ್ನು ಹುಂಡಿಯಲ್ಲಿ ಸೂಚಿಸಿದ ಮುಂಬಯಿ ಸರಾಫರಿಗೆ ಕೊಟ್ಟರು. ಈ ವಂಚಕನು ತನಗೆ ಪಾವತಿಯಾ ಬೇಕಾದ ಹಣವನ್ನು ಮುಂಬಯಿಯಲ್ಲಿರುವ ತನ್ನ ನೌಕರನೊಬ್ಬನಿಗೆ ಕೊಡಬೇಕೆಂತ ಸರಾಫರಿಗೆ ಕಾಗದ ಬರೆದನು. ಆದರೆ ಸರಾಫನು ಈ ನೌಕರನಿಗೆ ಹಣವನ್ನು ಕೊಡದೆ ತನ್ನ ನೌಕರನ ಮುಖಾಂತರ ಬ್ರೋಚಿಗನೇ ಈ ಹಣ ಪಾವತಿ ಮಾಡುತ್ತೇನೆಂತ ಹಣ ಸಮೇತ ತನ್ನ ನೌಕರನನ್ನು ಬ್ರೋಚಿಗೆ ಕಳುಹಿಸಿಕೊಟ್ಟನು. ಆದರೆ ಬ್ರೋಚಿನಲ್ಲಿ ಕಾಗದ ಬರೆದ ಹೆಸರಿನ ಕಂಪೆನಿಯೇ ಇರಲಿಲ್ಲ. ಹಣ ಸಮೇತ ಸರಾಫನ ನೌಕರನು ಬಂದು ಈ ರೀತಿ ತಿಳಿಸಿದ ಕೂಡಲೇ ತನಖಿ ನಡಿಸಿದ್ದಲ್ಲಿ ಅರಳೆ ಗಂಟ್ಟುಗಳನ್ನು ರೈಲ್ವೆಗೆ ಹತ್ತಿಸಿ ಕೊಟ್ಟವೆಂತ ತೋರ್ಪಡಿಸುವ ರೈಲ್ವೆ ರಶೀದಿಗಳು ಕೃತ್ರಿಮ ರಶೀದಿಗಳೆಂತ ತಿಳಿದುಬಂತು. ಈ ವಂಚಕನು ಯಾರೆಂಬದನ್ನು ತಿಳಕೊಳ್ಳುವರೆ ಮುಂಬಯಿ ಪೋಲಿಸಿನವರು ಪ್ರಯತ್ನಿಸುತ್ತಿರುವರಂತೆ.

~~~~~~

ಪೇಶಾವರದಲ್ಲಿ ಹಿಂದೂ ಮುಸಲ್ಮಾನರುಗಳೊಳಗಾದ ಕಲಹವು ಪೂರ್ಣಶಾಂತವಾಗಿದೆ. ಪೇಶಾವರಿನಲ್ಲಿ ಯಾದ ಈ ಕಲಹದಲ್ಲಿ ಒಟ್ಟಿಗೆ ೬ ಜನ ಹಿದುಗಳೂ ೫ ಜನ ಮಹಮ್ಮದೀಯರೂ ಮಡಿದಿರುವರೆಂತಲೂ ೪೮ ಜನ ಹಿಂದುಗಳೂ ೫೫ ಜನ ಮಹಮ್ಮದೀಯರೂ ಘಾಯಪಡೆದಿರುವರೆಂತಲೂ ಇಲ್ಲಿಯ ಖಾತ್ರಿಯಾದ ವರ್ತಮಾನವಾಗಿರುವದಾಗಿ ತಿಳಿಯುತ್ತೇವೆ. ಹಿಂದುಗಳೂ ಮುಸಲ್ಮಾನರೂ ಮಸೀದಿಗಳಲ್ಲಿ ಸಭೆಕೂಡಿ ಒಬ್ಬರನ್ನೊಬ್ಬರು ಕ್ಷಮಿಸಬೇಕೆಂತಲೂ, ಈ ಎಲ್ಲಾ ಕಲಹವನ್ನು ಮರೆತುಬಿಡಬೇಕೆಂಬದಾಗಿಯೂ ನಿರ್ಣಯಿಸಿಕೊಂಡಿರುವರು. ತದನಂತರ ಪೇಶಾವರದ ಟೌನ್ ಹೋಲಿನಲ್ಲಿ ಹಿಂದೂ ಮುಸಲ್ಮಾನ ಮುಖಂಡರು ಸಭೆ ಕೂಡಿ ಉಭಯ ಮತದವರಲ್ಲಿಯೂ ಪರಸ್ಪರ ಮೈತ್ರಿಯುಂಟಾಗುವಂತೆ ಸಾಧಿಸಬೇಕಾಗಿ ನಿರ್ಧರಿಸಿದರು. ಕಲಹ ಕಾಲದಲ್ಲಿ ಸುಲಿಯಲ್ಪಟ್ಟ ಅಂಗಡಿಗಾರರ ಸಹಾಯಾರ್ಥವಾಗಿ ೪೦,೦೦೦ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ೧೨ ಸಾವಿರ ರೂಪಾಯಿ ನೆರೆದ ಸಭೆಯಲ್ಲಿಯೇ ಸಂಗ್ರಹಿಸಲ್ಪಟ್ಟಿತು. ಅಲ್ಲಿಯ ಮುನಿಸಿಪಾಲಿಟಿಯವರು ಈ ಬಗ್ಗೆ ರೂಪಾಯಿ ೧೦,೦೦೦ವನ್ನು ಕೊಟ್ಟಿರುವರು. ಬ್ರಿಟಿಷ ಸೋಲ್ಜರು ಇನ್ನೂ ಬೀದಿಗಳನ್ನು ಕಾಯುತ್ತಿರುವರು. [illegible]
~~~~~~

[illegible] ಸಹಾ ಶಿಕ್ಷೆಯನ್ನು ವಿಧಿಸಿರುವರು.

ವ್ಯಾಸರಾಯಪ್ರಭುಗಳು ಸಂಚಾರಾರ್ಥವಾಗಿ ಆಗ್ರಕ್ಕೆ ಬಂದು ಅಲ್ಲಿಂದ ಡಿಲ್ಲಿಗೆ ಹೊರಟಿರುವರು.

ಇಂಗ್ಲಾಂಡಕ್ಕೆ ಕ್ರಿಕೆಟ್ ಎಂಬ ಚೆಂಡಾಟವನ್ನು ಇಂಗ್ಲೀಷ ಯುವಕರೊಂದಿಗೆ ಆಡಲಿಕ್ಕೆ ಮುಂಬಯಿಂದ ಭಾರತೀಯ ಯುವಕರು ಹೋಗಬೇಕೋ ಎಂಬುದು ಬರುವ ಆಗೋಸ್ತು ತಿಂಗಳಲ್ಲಿ ತೀರ್ಮಾನಿಸಲ್ಪಡುವುದು ಈ ಬಗ್ಗೆ ಬೇಕಾದ ಹಣಸಹಾಯಕ್ಕೆ ರೂ. 48000 ವಾಗ್ದತ್ತ ಮಾಡಲ್ಪಟ್ಟಿರುವುದು.

ಕಪುರ್ಥಳದ ಮಹಾರಾಜರವರು ಕೆಲವು ವರ್ತಮಾನ ಪತ್ರಗಳು ತಮ್ಮ ದೇಶದೊಳಗೆ ಬರಬಾರದೆಂಬದಾಗಿ ಅಪ್ಪಣೆಕೊಟ್ಟಿರುವರು. ಇವುಗಳಲ್ಲಿ ಕೆಲವು ಪ್ರಸಿದ್ಧ ಬಂಗಾಳಿ ಪತ್ರಗಳು ಸಹಾ ಸೇರಿರುವವು. ಲೋಹಾರು ಸಂಸ್ಥಾನದ ನವಾಬರವರು ವರ್ತಮಾನಪತ್ರಗಳೇ ಮೊದಲಾದ ಪ್ರಕಟಿಸಲ್ಪಡುವ ಇತರ ಯಾವುದನ್ನಾದರೂ ತನ್ನ ಪ್ರಜೆಗಳು ತಕ್ಕೊಳ್ಳಬೇಕಾದರೆ ಪ್ರಥಮತಃ ತಮ್ಮ ಸರಕಾರದವರ ಅಪ್ಪಣೆಯನ್ನು ಪಡಕೊಳ್ಳಬೇಕೆಂದು ಆಜ್ಞಾಪಿಸಿರುವರಂತೆ.

ಬಾಬು ಅರವಿಂದ ಘೋಷರವರನ್ನು ಕೈದು ಮಾಡುವರೆ ಒಂದು ಪೋಲೀಸು ವಾರಂಟು ಕೊಡಲ್ಪಟ್ಟಿರುವುದಂತೆ. ಅರವಿಂದ ಘೋಷರವರು ಎಲ್ಲಿರುವರೆಂದು ಗೊತ್ತಿಲ್ಲದ ಕಾರಣ ವಾರಂಟು ಜ್ಯಾರಿಯಾಗಲಿಲ್ಲವಂತೆ ದಶಂಬರ ತಿಂಗಳ ಇವರ 'ಕರ್ಮಯೋಗಿ' ಪತ್ರದ ಸಂಚಿಕೆಯಲ್ಲಿ ಒಂದು ಆಕ್ಷೇಪಕರ ಲೇಖನವನ್ನು ಪ್ರಕಟಿಸಿದ್ದರಿಂದ ಈ ವಾರಂಟು ಕೊಡಲ್ಪಟ್ಟಿರುವುದೆಂದು ತಿಳಿದು ಬರುತ್ತದೆ

ಬಾಬು ಅರವಿಂದ ಘೋಷರವರು ಬಂಗಾಳಿಯಲ್ಲಿ ಪ್ರಕಟಿಸುತ್ತಿರುವ ಧರ್ಮ ಎಂಬ ಪತ್ರಿಕೆಯನ್ನು ಪ್ರಕಟಿಸಬೇಕಾದರೆ ಮುದ್ರಣಾಲಯದವರು ರೂ ೧೦೦೦ವನ್ನು ಜಾಮೀನು ದ್ರವ್ಯವಾಗಿ ಕೊಡಬೇಕಾಗಿರುವುದೆಂದು ನೋಟೀಸು ಕೊಡಲ್ಪಟ್ಟಿರುವುದು

'ರಾಷ್ಟ್ರಮತ' ಎಂಬ ಮುಂಬಯಿಯಲ್ಲಿ ಪ್ರಕಟವಾಗುತ್ತಿರುವ ಪತ್ರವು ನಿಲ್ಲಿಸಲ್ಪಟ್ಟಿರುವುದೆಂದು ತಿಳಿದಿರುವಿರಷ್ಟೆ. ಪೂಣೆಯಲ್ಲಿ ಪ್ರಕಟವಾಗುತ್ತಿರುವ 'ಕಾಳ' ಪತ್ರಿಕೆಯಿಂದ ರೂ. ೧೦,೦೦೦ರದ ಜವಾಬ್ದಾರಿಯು ಕೇಳಲ್ಪಟ್ಟಿರುವುದರಿಂದ ಈ ಹಣ ಜವಾಬ್ದಾರಿಯನ್ನು ಕೊಡಲಾರದೆ ಇದು ಸಹಾ ನಿಲ್ಲಿಸಲ್ಪಟ್ಟಿರುವುದು ಕೇಸರಿ ಆಫೀಸಿನಲ್ಲಿ "ಮರಾಟಾ" ಎಂಬ ಇಂಗ್ಲೀಷ್ ಪತ್ರಿಕೆಯನ್ನು ಅಚ್ಚು ಹಾಕಲಿಕ್ಕೆ ರೂ. ೧೦೦೦ರದ ಜವಾಬ್ದಾರಿಯು ಕೊಟ್ಟಿರುವುದಂತೆ.

ದಕ್ಷಿಣ ಹಿಂದುಸ್ಥಾನ.

ಈ ತಿಂಗಳ ತಾ. 5ರಲ್ಲು ಮದ್ರಾಸು ಗವರ್ನರರವರ ನ್ಯಾಯವಿಧಾಯಕ ಸಭೆಯು ಜರಗಿತ್ತು ಗವರ್ನರ ದೊರೆಗಳು ಅಸ್ವಸ್ಥದಿಂದ ಆರೋಗ್ಯ ಹೊಂದಿ ಸಭೆಯ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು ಬಹುಮಾನಪಟ್ಟ ಕೊಲ್ಲಂಗೋಡಿನ ವಾಸುದೇವ ರಾಜರವರೂ ಕೃಷ್ಣನ್ನಾಯರರವರೂ, ಅಳಿಯ ಸಂತಾನ ಮತ್ತು ಮರುಮಕ್ಕತಾಯ ಕಾನೂನುಗಳಲ್ಲಿ ತಿದ್ದುಪಡಿ ಸೂಚಿಸುವ ಮಸೂದೆಗಳನ್ನು ಸಭೆಯ ಮುಂದಿಡಲಿಕ್ಕೆ ಅಪ್ಪಣೆ ಕೇಳುವವರಾದರು.

ಸ್ವಾಮಿ ಬಾಬಾ ಪ್ರೇಮಾನಂದರವರು ಬೆಂಗಳೂರ [illegible]ದವರು ಮದ್ರಾಸಿಗೆ ತಲಪಿ ಈ ದಿನ ಅಲ್ಲಿಂದ [illegible]ಗೆ ಹೊರಟು ಟ್ಯುಟಿಕೋರಿನಲ್ಲಿ ಸ್ಟೀಮರು [illegible] ಹೋಗುವರು.

[illegible]

[illegible] ಪಿ. ಆರ್. ಸುಂದರಯ್ಯನವರನ್ನು ಸಭಾಧ್ಯಕ್ಷಸ್ಥಾನಕ್ಕೆ ಆರಿಸಿರುವರು.

ಈ ವರುಷ ಡಿಗ್ರಿಗಳನ್ನು ಹೊಂದಲಿಕ್ಕೆ ಮದ್ರಾಸು ಸರ್ವ ವಿದ್ಯಾನಿಲಯದಲ್ಲಿ ಹಾಜರಾದ ಹೆಚ್ಚು ಕಡಿಮೆ ೭೫೦ ಜನ ವಿದ್ಯಾರ್ಥಿಗಳಲ್ಲಿ ೧೫ ಜನರು ಮಾತ್ರ ಮಹಮ್ಮದೀಯರಿದ್ದರೆಂತ ತಿಳಿದು ಬರುತ್ತದೆ

ದಕ್ಷಿಣ ಕನ್ನಡ.

ನೋಟೀಸು

ಸುರಿಂಜೆ ಗ್ರಾಮದ ಶೇಷಗಿರಿ ಬಂಡಾರಿಗಳ ಮಗ ಮುಕುಂದ ಬಂಡಾರಿಯು ನನಗೆ ಕೂಡಾ ೯ ಜನರಿಗೆ ರೂಪಾಯಿ ೪೦೦ಕ್ಕೆ ರಿಜಿಸ್ಟ್ರ ಸಿಸಿಂ ಬರಕೊಟ್ಟ ಮೇಲಣ ತೋರದವು ನಸ್ಟೈವಾಯಿ ರಿಕಾರ್ಡ ಕಟ್ಟಿನಲ್ಲಿ ಇದ್ದದ್ದು ಸಿಕ್ಕೆ ಮುಟ್ಟಿಯಲ್ಲಿ ಸೋಡುವಾಗ್ಗೆ ಗೈರಹಾಜರಾಗಿದೆ ಸಿಕ್ಕಿದವರು ತಂದುಕೊಟ್ಟರೆ ರೂ ೫ ೦—೦ ಇನಾಮು ಕೊಡುತ್ತೇನೆ ತಾ ೫ ೪ ೧೯೧೦

ಕೊಂಡೆ ಮೂಲಗ್ರಾಮದ ಪಕ್ಷಿಕೆರೆ ವೀರಪ್ಪೈ ಮಗ ಮಾದವ ಪೈ ರುಜು

ಎಪ್ರಿಲ್ ತಾ 9 ಶನಿವಾರ ರಾತ್ರೆ ಪ್ರೊಫೆಸರ್ ದೇವಾಲವರವರ ಸರ್ಕಸ್ ಮಂಡಳಿಯು ಪೂರ್ಣವಾಗಿ ನವೀನ ದೇಖಾವೆಗಳುಳ್ಳ ಸರ್ಕಸ್ ಆಟವನ್ನು ಆಡಿ ತೋರಿಸುವರೆಂದು ತಿಳಿಸಿರುವರು ವಿಶೇಷವಾದ ನವೀನ ಸಾಧಕಗಳೆಲ್ಲವೂ ಆ ದಿನ ರಾತ್ರೆ ಇರುವುದರಿಂದ ಜನರೆಲ್ಲರೂ ಈ ಅಪೂರ್ವ ಸಂದರ್ಭವನ್ನು ಬಿಡದೆ ಸರ್ಕಸ್ ಮಂಡಳಿಯವರ ಸುಧಾರಣೆಯ ವಿಶೇಷತ್ವವನ್ನು ಕಣ್ಣಾರೆಕಂಡು ಇವರ ಶ್ರಮ ಸಾಹಸಗಳನ್ನು ಸಾರ್ಥಕಗೊಳಿಸಬೇಕೆಂಬದಾಗಿ ಕೋರಿರುವರು

ಮಂಗಳೂರು ಕಳೆದ ವಾರದಲ್ಲಿ ೬ ಪ್ಲೇಗು ಮರಣಗಳೂ ೨೫ ಸಿಡುಬುರೋಗದ ಮರಣಗಳೂ ಇದ್ದವು.

ಇದೇ ತಿಂಗಳ ಕಳೆದ ತಾ ೬ನೇ ದಿವಸ ಇಲ್ಲಿಯ ಮುನ್ಸಿಫ್ ಕೋರ್ಟಿನಲ್ಲಿ ಪ್ಲೇಗಿನ ಇಲಿ ಬಿದ್ದ ಕಾರಣ ಮುನ್ಸೀಫರ ಮತ್ತು ಸಬ್‌ಜಡ್ಜರ ಕೋರ್ಟುಗಳು ಅಲ್ಲಿಯೇ ಸಮೀಪವಿರುವ ಡಿಸ್ಟ್ರಿಕ್ಟ್ ಕೋರ್ಟಿಗೆ ವರ್ಗಾವಣೆಯಾದವು ಇನ್ನು ಕೆಲವು ಕಾಲಕ್ಕೆ ನಂಬ್ರಗಳು ಅಲ್ಲಿಯೇ ತೀರ್ಮಾನವಾಗುವವು

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟು ಸೆಂಟ್ರಲ್ ಕೊಪಿಸ್ಟ ಡಿಪಾರ್ಟುಮೆಂಟಿನ ಸುಪರಿಂಟೆಂಡೆಂಟರಾದ ಮ| ರಾ| ಎನ್ ಲಕ್ಷ್ಮಣರಾಯರು ಪೆನ್ಶನು ಪಡಕೊಂಡಿರುವರು

ಇದೇ ತಿಂಗಳ ತಾ ೫ಕ್ಕೆ ಇಲ್ಲಿಯ ಡಿಪ್ಯುಟಿ ಕಲೆಕ್ಟರರಾದ ಮ| ರಾ| ರಾ| ಪಿ ನಾರಾಯಣ ಮೆನನರವರು, ಮ| ರಾ| ರಾ ಕೆ ಕುಂಜರಾಮನ್ ಎಂಬವರಿಗೆ ಚಾರ್ಜು ವಹಿಸಿಕೊಟ್ಟು ತಾವು ಅದೇ ದಿನ ಮದ್ರಾಸಿಗೆ ತೆರಳುವವರಾದರು

ಇದೇ ದಿವಸ ಇಲ್ಲಿಯ ಕಲೆಕ್ಟರ್ ಸಾಹೇಬರವರು ಪರಂಗಿಪೇಟೆ ಅತ್ತಕಡೆ ಸರ್ಕೀಟಿನ ಮೇಲೆ ಹೋಗಿ ಸುಮಾರು ತಾ ೧೨ ಕ್ಕೆ ಹಿಂತಿರುಗಿ ಬರುವರಾಗಿ ತಿಳಿದು ಬರುತ್ತದೆ

ಕಳೆದ ಎಪ್ರಿಲ್ ತಿಂಗಳ ತಾ ೪ಕ್ಕೆ ಇಲ್ಲಿಯ ಸೆಶನ್ಸ್ ಜಡ್ಜರು, ಬಂಟ್ವಾಳ ಮೇಜಿಸ್ಟ್ರೇಟರು ಕಮಿಟುಮಾಡಿದ ಲಕ್ಷ್ಮಣ್ಣ ಸಪಲ್ಯ ಎಂಬವನನ್ನು ಕೊಂದ ಖೂನಿ ಮೊಕದ್ದಮೆಯಲ್ಲಿ ೧ ಸುಬ್ಬಣ್ಣ, ೨ ತುಕ್ರ, ೩ ವಾಸಣ್ಣಯ್ಯ ಯಾನೆ ಸೋಮಯಾಜಿ, ೪ ದುಮಿಂಗಸೋಜ ಎಂಬ ಈ ನಾಲ್ವರಿಗೂ ನಾಲ್ಕು ನಾಲ್ಕು ವರುಷದ ಕಠಿಣ ಸಜೆ ಶಿಕ್ಷೆಯನ್ನು ವಿಧಿಸಿರುವರು.

ಅದೇ ಎಪ್ರಿಲ್ ತಿಂಗಳ ತಾ. ೩ಕ್ಕೆ [illegible]

[illegible]

[illegible] ಸೆಶನ್ಸ್ ಜಡ್ಜರು ಸದರಿ [illegible] ಶಿಕ್ಷೆ ವಿಧಿಸಿದರು. ಆದರೆ ಸದರಿ ಮುದ್ದಾಯಿಗಳಿಗೆ [illegible] ದರೂ ಶಿಕ್ಷೆ ಕಮ್ಮಿಮಾಡಬಹುದೆಂತ ಗವರ್ನಮೆಂಟಿಗೆ ಬರೆದು ಹಾಕಿರುವರಂತೆ.

ಕಳೆದ ತಾರೀಕು 2ರಲ್ಲು ಎಲಿಮೆಂಟರಿ ಹಳ್ಳಿ ಶಾಲಾ ಉಪಾಧ್ಯಾಯರ ಸಭೆಯು ಮಡಕೇರಿ ಗುಡ್ಡೆ ಮಿಶನ್ ಶಾಲೆಯಲ್ಲಿ ಜರಗಿತು ಇನ್ನು ಬರುವ ಸಭೆಯು ಜುಲೈ ತಾ. 2ನೇ ಶನಿವಾರ ದಿನ ಕೂಡುವುದು

ರೋಮನ್ ಕಥೋಲಿಕ್ ಜಪ್ಪು ಸೆಮಿನರಿಯಲ್ಲಿ ಐದು ಜನ ಹೊಸ ಪಾದ್ರಿಗಳಿಗೆ ದೀಕ್ಷೆ ಕೊಡುವರೆ ಮಂಗಳೂರಿನ ಬಿಶೋಪರವರು ಮೃತಪಟ್ಟಿದ್ದರಿಂದ, ಕೊಚ್ಚಿ ಬಿಶೋಪರವರು ಬಂದಿದ್ದರು

ಗೌಡಸಾರಸ್ವತ ಬ್ರಾಹ್ಮಣರ ಪರಿಷದವು ಈ ಮೊದಲು ನಿಶ್ಚಯಿಸಿದಂತೆ ಬೆಳಗಾಂವಿನಲ್ಲಿ ಕೂಡುವುದು ಬೆಳಗಾಂ ಪರಿಷದದ ಆಮಂತ್ರಣ ಸಭೆಯ ಅಧ್ಯಕ್ಷರಾದ ಮ| ರಾ| ರಾವುಜಿ ಗಂಗಾದರ ಬೋಟೆನಕೆಂಪ್, ಇವರು ಸಹಿಯಲ್ಲಿ ಈ ಬಗ್ಗೆ ಪ್ರಕಟಣಾ ಪತ್ರಗಳು ಕಳುಹಿಸಲ್ಪಟ್ಟಿರುತ್ತವೆ. ಗೌಡಸಾರಸ್ವತ ಜಾತಿಯ ಆಯಾ ಶಾಖೆಗಳೆಲ್ಲವುಗಳ ಪ್ರತಿನಿಧಿಗಳಿಂದ ಈ ಸರ್ತಿಯ ಸಭೆಯು ಕೂಡಿರುವುದೆಂದೂ, ಸಭೆಯು ಈ ತಿಂಗಳ ತಾ ೨೮, ೨೯, ೩೦ರಲ್ಲಿ ನಡೆಯುವುದೆಂದೂ ಈ ಪ್ರಕಟಣಾಪತ್ರದಿಂದ ತೋರಿಬರುವುದು

ಇಲ್ಲಿಂದ ವರ್ಗವಾಗಿ ಹೋಗುವ ಡಿಸ್ಟ್ರಿಕ್ಟ್ ಜಡ್ಜ್ ಮಿ| ಹಾರ್ಡಿಂಗರವರಿಗೆ ಗವರ್ನಮೆಂಟ್ ಕೊಲೇಜಿನಲ್ಲಿಯೂ ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರಾಗಿದ್ದ ರಾ| ನಾರಾಯಣ ಮೇನನರಿಗೆ ಕೆನರಾ ಹೈಸ್ಕೂಲಿನಲ್ಲಿಯೂ ಸ್ಥಳೀಯ ವಕೀಲರಿಂದ ಏರ್ಪಡಿಸಿದ ವಿನೋದ ಪಾರ್ಟಿಗಳ ಉಪಚಾರ ಸನ್ಮಾನಗಳಾದವು

ಕಾಸರಗೋಡು ಕಳೆದ ವಾರದಲ್ಲಿ ಇಲ್ಲಿ ಬಂದಿರುವ ಮಲಬಾರ ಸರ್ಕಸ್ ಕಂಪೆನಿಯವರು ಇದೇ ತಾ. 3ನೇ ಆದಿತ್ಯವಾರ ಬೆಳಿಗ್ಯೆ ಕುಂಬಳೆ ಮೊಕ್ಕಾಮಿಗೆ ತೆರಳಿದರು.

ಮಂಗ್ಳೂರಿಗೆ ಈಗ ಬಂದಿರುವ ಪ್ರಖ್ಯಾತಿಪಟ್ಟ ದೇವಲ್ ಸರ್ಕಸ್ ಕಂಪೆನಿಯವರು ಇಲ್ಲಿಗೆ ಕೆಲವು ವರ್ಷಗಳ ಹಿಂದೆ ಬಂದು ಮೂರು ಆಟಗಳು ಆಡಿ ಜನರಿಗೆ ಅತ್ಯಾನಂದವನ್ನು ಮಾಡಿದಂತೆ ಈ ಸರ್ತಿ ಸಹ ಒಂದೆರಡು ಆಟಗಳಾದರೂ ಇಲ್ಲಿಯ ನಿವಾಸಿಕರಿಗೆ ತೋರಿಸಿ ಸರ್ವರನ್ನು ಸಂತೋಷಿಸುವರಾಗಿ ಕೋರುತ್ತೇವೆ

ಸೆಖೆಯು ಅತ್ಯಂತ ಕಠಿಣವಾಗಿದೆ ಮಳೆಯ ಕುರುಹು ಆಗಿಂದಾಗ್ಯೆ ತೋರುತ್ತಾ ಇದೆ ಸಿಡುಬು ರೋಗದ ಹಾವಳಿಯು ಪೂರ್ಣ ಶಾಂತಿಯಾಯಿತೆಂದು ಹೇಳಲ್ಲಸಾಧ್ಯ

ಕುಂಬಳೆ. ನಮ್ಮ ಡಿಸ್ಟ್ರಿಕ್ಟ್ ಕಲೆಕ್ಟರರವರ ಸವಾರಿಯು ಕಳೆದ ಮಾರ್ಚಿ ಅಖೈರಿಗೆ ಈ ಊರಿಗೆ ಚಿತ್ತೈಸಿದಾಗ್ಯೆ ಇಲ್ಲಿಯ ಕೆನರಾ ವೀವಿಂಗ್ ಕಂಪೆನಿಗೆ [illegible] ಮಾಡಿ ಮಗ್ಗಗಳಲ್ಲಿ ತಯಾರಾಗುವ ತರತರದ ವಸ್ತ್ರಗಳನ್ನು ಪರಾಂಬರಿಸಿ ಇಂಥಾ ಕೈಗಾರಿಕೆಗಳು ವೃದ್ಧಿಯಾಗ[illegible] ತಾನು ಸಂತೋಷಪಡುತ್ತೇನೆಂತ ಅಪ್ಪಣೆ ಕೊಡಿಸಿದ್ದ[illegible] ಇಲ್ಲಿ ತಯಾರಾಗುವ ವಸ್ತ್ರಗಳು ಜರ್ಮನ್ ಮಿಶನ್ [illegible]ಗಳಂತೆ ಉತ್ತಮ ತರದ್ದೆಂತ ಸರ್ಟಿಫಿಕೇಟು ಸಹಾ ದಯಾ ಮಾಡಿರುತ್ತಾರಾಗಿ ಕೇಳಿ ಸಂತೋಷ ಪಡುತ್ತೇವೆ.

ಇಲ್ಲಿ ಒಳ್ಳೇ ಯೋಗ್ಯವಾದ ಸ್ಥಳದಲ್ಲಿ [illegible]ದ ಹೊಸ ಬೆಂಚ್‌ಕೋರ್ಟು [illegible]

[illegible]

ರೈಲ್ವೆ ಶುರುವಾದಂದಿನಿಂದ ಈ ಬಂದ್ರಕ್ಕೆ ಆಮದು ರಫ್ತಾಗುವ ಪೂರಾ ಸಾಮಾನು ರೈಲ್ವೆಯಲ್ಲಿಯೇ ಆಗುವದರಿಂದ ಪತ್ತೆಮಾರಿಗಳ ವ್ಯಾಪಾರವು ಬಂದು ಆಗಿರುವದರಿಂದ ಇಲ್ಲಿಯ ಅಳ್ವೆಸಾಯರ ಕಚೇರಿಯನ್ನು ಇದೇ ಏಪ್ರಿಲ್ ಶುರುವಿನಿಂದ ತೆಗದು ಹಾಕಿರುತ್ತಾರೆ.

~~~~~

ಮುಲ್ಕಿ. ಇಲ್ಲಿ ಈಗ ರಿಜಿಸ್ಟ್ರಿ ಆಫೀಸು ಇರುವ ಕಟ್ಟೋಣದಲ್ಲಿ ಸುಮಾರು 20 ವರ್ಷಗಳ ಮೊದಲು ಮುನ್ಸಿಫ಼ ಕೋರ್ಟು ಇತ್ತು. ವ್ಯಾಪಾರಕ್ಕೆ ಮೂಲವೇ ಲೇವಾದೇವಿ. ಇಂಥಾ ಲೇವಾದೇವಿಯು ವ್ಯತಿರಿಕ್ತವಾದರೆ ಕೂಡಲೇ ಕೈವೇಕು ಹಾಕಿ ವಸೂಲು ಮಾಡುತ್ತಿತ್ತು. ಆದರೆ ಈ ಕೋರ್ಟು ಇಲ್ಲಿಂದ 22 ಮೈಲು ದೂರ ಮೂಡು ಪ್ರಾಂತ್ಯದಲ್ಲಿರುವ ಕಾರ್ಕಳದಲ್ಲಿ ಇರಿಸಲ್ಪಟ್ಟಿತು. ಅಲ್ಲಿಗೆ ಹೋಗುವ ರಸ್ತೆಯಾದರೋ ನಿಬಿಡವಾದ ಅರಣ್ಯ ಮಧ್ಯದಲ್ಲಿದ್ದು ಹುಲಿ ಚಿರತೆಗಳ ಕೋಲಾಹಲ ಧ್ವನಿಯು ಕೇಳಿಸಲ್ಪಡುವಂಥಾದ್ದಾಗಿರುವದಲ್ಲದೆ ಕಾಲುದಾರಿಯಾಗಿ ಹೋಗುವವರಿಗೆ ನೀರು-ಆಶ್ರಯವಿಲ್ಲದಿರುವದರಿಂದಲೂ ಕೆಲವು ಕಡೆ ಮಾರ್ಗಮಧ್ಯದಲ್ಲಿ ಸಾಲುಮರಗಳು ಕೂಡ ಇಲ್ಲದಿರುವುದರಿಂದ ಗಾಡಿ ಇಲ್ಲದೆ ಹೋಗುವದು ಕಷ್ಟ! ಒಬ್ಬ ಮನುಷ್ಯನಿಗೆ ಅಲ್ಲಿಗೆ ಹೋಗಿ ಬರುವದರ ನಾಲ್ಕೈದು ರೂಪಾಯಿ ತಗಲುವದು. ವ್ಯಾಜ್ಯದ ಮೊಬಲಗು 20ರೊಳಗಾದರೆ ನಾಲ್ಕೈದು ಸಾರಿ ಕೋರ್ಟು ಬಾಗಲು ಕಾದು ಬರುವಷ್ಟರೊಳಗೆ [illegible] ಇಷ್ಟತ್ರಕ್ಕೆ [illegible] ಇದನ್ನು ಪ್ರತಿವಾದಿಯು ಕೊಡುವನೋ? ಒಸನಾದರೂ ಕಾರ್ಕಳಕ್ಕೆ ಹೋಗುವ ದಾರಿಯಲ್ಲಿ ಒಬ್ಬನಿಗೆ ಪ್ರಯಾಣ ಮಾಡುವುದು ಕೂಡದ [illegible] 10 ರೂಪಾಯಿ ಮೇಲಿನ ಲೇವಾದೇವಿ ಸಣ್ಣ ವ್ಯಾಜ್ಯಗಳನ್ನು ಮಂಗಳೂರು ಸಬ್ ಕೋರ್ಟಿನಲ್ಲಿ ಮಾಡುತ್ತಿತ್ತು. ಆ ಕೋರ್ಟನ್ನು ಕೂಡಾ ಮಂಗಳೂರಿಂದ ತೆಗೆಯೋಣವೆಂದು ಎಲ್ಲಾ ವ್ಯಾಜ್ಯಗಳನ್ನು ಕಾರ್ಕಳದಲ್ಲಿ ಮಾಡಬೇಕಾಗಿ ಬಂದದೆ [illegible] ಕೋರ್ಟಿನ [illegible] ಕಂಡರೆ ತಮ್ಮ [illegible] ಬೇಕೆಂಬುದಾಗಿಯೂ [illegible] ಮಾಡಿದರೂ ಪ್ರಯೋಜನ ಸಿಕ್ಕದೆ [illegible] ವಾಗಿರುವ ಲೇವಾದೇವಿಯು [illegible] ವಂತ ಸಾಹುಕಾರರು ಅನೇಕ [illegible] ಪಟ್ಟು ಲೇವಾದೇವಿಯನ್ನು ನಡಿಸುವದಿಲ್ಲವಾದ್ದರಿಂದ ಬಡ ಸಾಹುಕಾರರು [illegible] ಈ ಊರನ್ನೇ ಬಿಟ್ಟು ಬೇರೆ ಊರುಗಳಿಗೆ ಹೋಗಿ ವ್ಯಾಪಾರ ನಡಿಸುತ್ತಿರುವರು. ಈ ಕ್ಷೇತ್ರದ ಚರ್ಚಿಯು ಮಂಗಳೂರು ಮುನ್ಸಿಫ಼್ ಕೋರ್ಟಿಗೆ ಒಳಪಟ್ಟರೆ ಲೇವಾದೇವಿಯು ಸುಧಾರಿಸಲ್ಪಟ್ಟು ವ್ಯಾಪಾರವು ವೃದ್ಧಿ ಹೊಂದಿ ಊರು ಬಿಟ್ಟ ಗಟ್ಟಿ ಸೆಟ್ಟಿ ವ್ಯಾಪಾರಸ್ಥರೂ ಇಲ್ಲಿ ನೆಲಸಿ [illegible] ನಂತರ ಮುಲ್ಕಿಯೇ ಒಂದನೇ [illegible] ವ್ಯಾಪಾರಕ್ಕೆ ಬರುವದೆಂಬುದಕ್ಕೆ ಸಂಶಯವೂ ಇಲ್ಲ! ದಿನಪತ್ರಗಳೆಲ್ಲಾ ಪತ್ತೆಮಾರು ಮೂಲಕವೇ ದೂರದಿಂದ ತರಿಸಲ್ಪಟ್ಟು ಎಲ್ಲವೂ ಅಗ್ಗವಾಗಿ ಸಿಕ್ಕುವದಕ್ಕೆ ಅಸ್ತಿಯೂ ಇಲ್ಲ!!

ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಬೇಕಲ್ ರಾಮರಾಯರವರಿಗೆ ಇಲ್ಲಿಂದ ಹೊಸಂಗಡಿಗೆ ವರ್ಗವಾಗುತ್ತದೆಂಬ ವಾರ್ತೆಯು ಎಲ್ಲರ ಕಿವಿಯನ್ನು ಕಿವುಡು ಮಾಡುವಂಥಾದ್ದಾಗಿದೆ. ಇವರು ಇಲ್ಲಿಗೆ ಬಂದು 3—4 ತಿಂಗಳಾಯಿತಷ್ಟೆ! ವರ್ಗವಾಗುವದು ನಿಜವಾಗಿದ್ದ ಪಕ್ಷಕ್ಕೆ ಇಂಥಾ ನಿಷ್ಪಕ್ಷಪಾತಿಯೂ ನ್ಯಾಯಪರರೂ ಆದ ಇನ್ನೊಬ್ಬರು ಬರುವದು ಕಷ್ಟವೆಂದ್ಹೇಳಬೇಕು.

~~~~~

ವಿವಿಧ ವಿಷಯಗಳು.

~~~~~

ತೆಂಗು ಚೆನ್ನಾಗಿ ಬೆಳೆಯಬೇಕಾದರೆ ಮರವು ಘಾಳಿ ವಿಶೇಷವಾಗಿ ಬೀಸುವ ಕಡೆ ಇರಬೇಕು. ಸೂರ್ಯರಶ್ಮಿ ಚೆನ್ನಾಗಿ ಬೀಳಬೇಕು. ಜಮೀನು ತುಂಬಾ ಸಾರವತ್ತಾಗಿರಬೇಕು. ಮತ್ತು ನೀರಾವರಿಯೂ ಚೆನ್ನಾಗಿರಬೇಕು.

~~~~~

ಜಮೀನು ತಗ್ಗಾಯಾಗಿದ್ದ ವಿನಹ ನಿಂತಿರುವ ಪೈರಿಗೆಲ್ಲಾ ಒಂದೇ ಸಮನಾಗಿ ನೀರು ಹಾಯಿಸುವದಕ್ಕಾಗುವದಿಲ್ಲ. ಜಮೀನು ಹಳ್ಳ ತಿಟ್ಟುಗಳಾಗಿಯೂ ಇಳಿಜಾರಾಗಿಯೂ ಇದ್ದರೆ ನೀರು ವಿಶೇಷವಾಗಿ ಹಲಾಕಾಗುವದು ಮತ್ತು ಪೈರಿಗೂ ಕೆಡಕಾಗುವದಲ್ಲದೆ ಜಮೀನಿನ ಒಂದು [illegible] ಕಲ್ಲು ಜಮಾಯಿಸುವದಕ್ಕೆ ಅವಕಾಶ ದೊರೆಯುತ್ತದೆ. ಆದಕಾರಣ ಸಾಗುವಳಿ ಜಮೀನನ್ನು ಸಾಧ್ಯವಾದಮಟ್ಟಿಗೂ ಸಮಪಡಿಸಿ ಪೈರು ಇಡುವದು ಒಳ್ಳೇದು.

~~~~~

ಈಗ ಮದ್ರಾಸು ಪಟ್ಟಣದಲ್ಲಿ ಮೇಣದ ಬತ್ತಿಯನ್ನು ತಯಾರು ಮಾಡುವ ಕಾರ್ಖಾನೆಯು ಏರ್ಪಟ್ಟಿರುತ್ತದೆ. ಕಾರ್ಖಾನೆಯು ಈ ಕಸಬನ್ನು ಅನ್ಯದೇಶದಲ್ಲಿ ಕಲಿತುಕೊಂಡು ಬಂದಿರುವ [illegible] ಘಟ್ಟಿಗರ [illegible] ನೋಡಿಕೊಳ್ಳುತ್ತಿದ್ದಾರೆ. ಇಲ್ಲಿ ತಯಾರಾದ ಬತ್ತಿಗಳು ಒಳ್ಳೆ ಬೆಳಕು ಕೊಡುವದರಿಂದಲೂ ನೋಡುವದಕ್ಕೆ ಅನ್ಯದೇಶದ ಬತ್ತಿಗಳಿಗೇನೂ ಕಮ್ಮಿಯಾಗಿರುವದಿಲ್ಲವೆಂತಲೂ ಹೇಳುತ್ತಾರೆ. ಸರಕು ಮದರಾಸು ಅಧಿಪತ್ಯದಲ್ಲಿ ಧಾರಾಳವಾಗಿ ವಿಕರಿಯಾಗುತ್ತಿದೆಯಂತೆ. ಇದರ ಬೇಡಿಕೆಯೇನೋ ಸ್ವಲ್ಪ ದುಬಾರಿ ಬೀಳುತ್ತದೆ. ಆದರೆ ಬತ್ತಿಯ ತಯಾರಿಗೆ ಮುಖ್ಯವಾಗಿ ಬೇಕಾಗುವ ಕೊಬ್ಬು ಮತ್ತು ಇತರ ಕಚ್ಚಾ ಪದಾರ್ಥಗಳನ್ನು ಸ್ಥಳದಲ್ಲಿ ಮಾಡಿಕೊಳ್ಳಲು ಬೇಕಾದ ದ್ರವ್ಯವನ್ನು ಮಾತ್ರ ಜನರು ಸಹಾಯ ಮಾಡುವದಾದರೆ ಸರಕನ್ನು ಬಹಳ ಅಗ್ಗವಾಗಿ ಮಾರಬಹುದೆಂದು ಕಾರ್ಖಾನೆಯ ಮಾಲೀಕರು ಹೇಳುತ್ತಾರೆ. ಈ ಸರ್ವಜನೋಪಯುಕ್ತವಾದ ಕಸಬನ್ನು ಅಭಿವೃದ್ಧಿಪಡಿಸುವ ಭಾಗದಲ್ಲಿ ಜನಗಳು ಆಸಕ್ತರಾಗುವರೆಂದು ನಂಬಿದೆ.

~~~~~

ಈಗ [illegible] ವರುಷಗಳಿಂದ ವ್ಯವಸಾಯ ವಿಷಯಗಳಲ್ಲಿ ರೈತರಿಂದ ಸರ್ಕಾರದವರಿಗೂ, ಸರ್ಕಾರದಿಂದ ರೈತರಿಗೂ ಸಮಾಚಾರಗಳನ್ನು ತಿಳಿಸುವದಕ್ಕೆ ಈಸ್ಟರ್ನ್ ಬಂಗಾಲ್ ಮತ್ತು ಅಸ್ಸಾಂನಲ್ಲಿ ಬಹಳ ಒಳ್ಳೇ ಏರ್ಪಾಟು ಮಾಡಿರುತ್ತಾರೆ. ಸರ್ಕಾರದವರು ಬುದ್ಧಿಶಾಲಿಗಳೂ, ಅನುಭವಸ್ಥರೂ ಮತ್ತು ಪ್ರಜಾಹಿತೈಷಿಗಳೂ ಆದ ಕೆಲವು ದೊಡ್ಡಮನುಷ್ಯರುಗಳನ್ನು "ಗೌರವ ಬಾತ್ಮೀದಾರರಾಗಿ" (Honorary Correspondents) ನೇಮಕಮಾಡಿಕೊಂಡು ವ್ಯವಸಾಯ ಇಲಾಖೆಯವರು ನಡೆಸುವ ಆಜಮಾಯಿಷಿಗಳ ಫಲಿತಾಂಶಗಳನ್ನು ರೈತರ ತಿಳುವಳಿಕೆಗ ತರುವ [illegible] ಮತ್ತು ರೈತರ ಸ್ಥಿತಿಗತಿಗಳನ್ನು ಇಲಾಖೆಯವರಿಗೆ ತಿಳಿಸುವದು, ಈ ವಿಶಿಷ್ಟವನ್ನೂ ಈ ಬಾತ್ಮೀದಾರರ ಮುಖಾಂತರವೇ ನಡೆಸುತ್ತಾರೆ. ಇವರಲ್ಲಿ ಕೆಲವರು ಸರ್ಕಾರದವರು ಹೊಸದಾಗಿ ರೂಢಿಯಲ್ಲಿ ತರಬೇಕೆಂದಿರುವ ನೂತನ ವ್ಯವಸಾಯ ಕ್ರಮಗಳನ್ನು ರೈತರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಡುವಷ್ಟು ಯೋಗ್ಯತೆವುಳ್ಳವರಾಗಿರುವುದಲ್ಲದೆ, ನಿಂತಿರುವ ಪೈರುಗಳ ಸ್ಥಿತಿಯನ್ನು ಕುರಿತು ಇಲಾಖೆಯವರಿಗೆ ಸಮಾಚಾರ ಕೊಡುವುದರಲ್ಲಿ ಬಹಳ ಮಟ್ಟಿಗೆ ಸಹಾಯಕಾರರಾಗಿರುತ್ತಾರೆಂತ ಈಸ್ಟರ್ನ್ ಬೆಂಗಾಲ್ ಮತ್ತು ಅಸ್ಸಾಂ ವ್ಯವಸಾಯ ಇಲಾಖೆಯ [illegible]ನೇ ಜೂನ್ ಮಾಹೆಗೆ ಆಖೈರಾಗುವ ರಿಪೋರ್ಟಿನಿಂದ ಗೊತ್ತಾಗುತ್ತದೆ. ರೆ. ವ್ಯ.

~~~~~

ಫ್ರೆಂಚು ಸಿನೇಟು ಸಭೆಯಲ್ಲಿ ಇತ್ತಲಾಗೊಂದು ನವೀನ ಕಾನೂನು ಏರ್ಪಡಿಸಲ್ಪಟ್ಟಿರುವುದು. ಮಕ್ಕಳಿಗೆ ಹಾಲು ಕುಡಿಯಲಿಕ್ಕೆ ಕೊಡುವ ರಬ್ಬರಿನ ನಳಿಗೆಗಳುಳ್ಳ ಬಾಟ್ಲಿಗಳನ್ನು ಮಾರಲೂ ಅಥವಾ ಒಬ್ಬನಿನ್ನೊಬ್ಬನಿಗೆ ಕೊಡಲೂ, ಮಾರಲಿಕ್ಕಿಡಲೂ ಕೂಡದು. ಇವುಗಳನ್ನು ಅನ್ಯದೇಶದಿಂದ ತರಿಸಲೂ ಸಹಾ ಕೂಡದು. [illegible] [illegible]

ಈ ಕಾನೂನಿನ [illegible] ನಡೆಸುವುದಕ್ಕೆ ಬೇಕಾದ ಅಧಿಕಾರವು ಕೊಡಲ್ಪಟ್ಟಿರುವದು. ಈ ಕಾನೂನನ್ನು ಪ್ರಥಮ ಸರ್ತಿ ಉಲ್ಲಂಘಿಸಿ ನಡದವರಿಗೆ 25 ರಿಂದ 100 ಫ್ರೆಂಕುಗಳ ವರೆಗಿನ ಜುರುಮಾನೆಯೂ ಎರಡನೇ ಸರ್ತಿ ಇದೇ ತಪ್ಪನ್ನು ಮಾಡಿದವರಿಗೆ 8 ದಿವಸಗಳಿಂದ ಒಂದು ತಿಂಗಳು ತನಕದ ಸಜಾ ಶಿಕ್ಷೆಯೂ ವಿಧಿಸಲ್ಪಡುವುದು. ಇಂಥಾ ಬಾಟ್ಲಿಗಳು ಯಾರ ಹತ್ತಿರ ಇದ್ದರೂ ಅವುಗಳನ್ನು ಜಪ್ತಿ ಮೂಲಕ ಸ್ವಾಧೀನಮಾಡಿಕೊಳ್ಳುವ ಅಧಿಕಾರವು ಸರಕಾರಕ್ಕಿರುವುದು.

~~~~~

ಇತೀ ಭೂಲೋಕದಲ್ಲಿ ವಿವಿಧಮತಸ್ಥರ ಸಂಖ್ಯೆಯು ಯಾವ ರೀತಿ ಇರುವುದೆಂಬದನ್ನು [illegible]ಯಿಸಲಿಕ್ಕೆ ಇತ್ತಲಾಗೊಂದು ಖಾನೆಸುಮಾರಿ ತೆಗೆಯಲ್ಪಟ್ಟಿತ್ತು. ಇದು ಭೂಲೋಕದಲ್ಲಿ ೧,೫೪೪,೫೧೦,೦೮೦ ಜನರಲ್ಲಿ ೫೭೪,೧೧೦,೦೦೦ ಜನ ಕ್ರೈಸ್ತರಿರುವರೆಂದೂ ೧೬೫,೫೭೦,೧೮೦ ಮಂದಿ ಮಹಮ್ಮದೀಯರಿರುವರೆಂತಲೂ, ೧೦,೮೦೦೦೦ ಯಹೂದ್ಯರಿರುವರೆಂತಲೂ, ೮೩೬,೪೨೦,೦೦೦ ಜನ ಇತರ ಜಾತಿಯವರಿರುವರೆಂದೂ ತಿಳಿದುಬರುತ್ತದೆ. ಈ ಇತರರಲ್ಲಿ ೬೦೦,೦೦೦,೦೦೦ ಜನರು ಕನ್ಫೂಸಿಯನ್ನರು, ೨೧೪,೦೦೦,೦೦೦ ಮಂದಿ ಬ್ರಾಹ್ಮಣರು, ೧೨೧,೦೦೦,೦೦೦ ಜನ ಬುದ್ಧಮತ್ತು ಇತರ ಮತಸ್ಥರಾಗಿರುವರು. ಈ ರೀತಿ ಭೂಲೋಕದ ಪ್ರತೀ ಸಾವಿರ ನಿವಾಸಿಗಳಲ್ಲಿ ೩೪೮ ಜನ ಕ್ರೈಸ್ತರು, ೧೧೪ ಮಹಮ್ಮದೀಯರು, ೭ ಯಹೂದ್ಯರು, ೫೩೬ ಜನರು ಇತರ ಮತಸ್ಥರಿರುವರು.

~~~~~

ಅಬಲಾ ಸಂಜೀವಿನೀ ಗುಳಿಗೆಗಳು.

~~~~~

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮಗುರುತು ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯು ಕೇಳಲಾಗನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಆಣೆ.

ಮಿಡ್ ವೈಫ್‌ರಾದ ಕಮಲಾಬಾಯಿ, ಜ. ಎಮ್.

~~~~~

ಜೀವಸುಗಳ ಧಾರಣೆ, ಮಂಗಳೂರು.

~~~~~

ಕೊಂಡ. ಮುಸ್ತಿ ಅಕ್ಕಿ ,,,,,,	4—4—0
ಗುಡ್ಡು ಮುಸ್ತಿ ,,,,,,,,,,,	3-15—0
ಮುಸ್ತಿ ,,,,,,,,,,,,,,,	3-14—0
ಸುಗ್ಗಿ ,,,,,,,,,,,,,,,	3-11—6
ವಕ್ಲು ಸುಗ್ಗಿ ,,,,,,,,,,,,	3-11--0
ಮುಸ್ತಿ ಬೆಳ್ತಿಗೆ ,,,,,,,,,,,	4—6—0
ರಂಗೂನ್ ಬೆಳ್ತಿಗೆ ಗೋಣಿ ,,,,	7—3—0
ಹುರುಳಿ ಗೋಣಿ ೧ ಮುಡಿ 2ರ ,,,	6—0—0
ಉಪ್ಪು ಗೋಣಿ ೧ರ ,,,,,,,	3—4—0
ಕೊಬ್ರಿ ಖಂಡಿ ೧ರ ,,,,,,,	100—0—0
ಕೊಬ್ರಿ ಎಣ್ಣೆ ಮಣ ,,,,,,,,	7—0—0
ಕಾಫಿ ಖಂಡಿ ೧ರ ,,,,,,,	18—0—0
ಕಾಳು ಮೆಣಸು ಖಂಡಿ ,,,,,	112—0—0
ಹೊಸ ದಳಿ ಗೋಟು ಅಡಿಕೆ ,,,	80—0—0
ಕರಿ ಗೋಟು ,,,,,,,,	68—0—0
[illegible] ಖಂಡಿ ೧ರ ,,,,,,	28—0—0

"ಲಾ" ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಫುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ. ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ. ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು "ಎಂ ವ ಲ್ಲಾದಪ್ಪನೆಕ್ಟೆ ಪಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವದು

THE HINDU SOAP MANUFACTURING CO,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.
ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರುಗಳ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್. ಮೆನೇಜಿಂಗ್ ಏಜಂಟ್ಸ್

ಪಂಡಿತ್ ಟಿ. ಬಾಬುರಾಯರ
ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಜಿಕ್ಕೆನ್ನ್, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಜ್ವರ, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0 8 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—1—0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ ವಿ. ಪಿ. ಖರ್ಚು ಪ್ರತ್ಯೇಕ

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
[illegible], ಮಂಗಳೂರು ದ. ಕ.

ಕೀರ್ತಿಶೇಷ ಅಮ್ಮೆಂಬಳ
ಸುಬ್ರಾಯ ಪೈಗಳವರ
ಭಾವ ಚಿತ್ರಗಳು
ಎಕ್ರಿತಕ್ಕೆ ಸಿದ್ಧವಾಗಿರುವವು.
ಕ್ರಯ ಪ್ರತಿ ಒಂದಕ್ಕೆ ೧ ರೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಷನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ
ಕವಿ ಎಂಡ್ ಸನ್ಸ್ ಮಂಗಳೂರು ದ. ಕ.

ಡಾಕ್ಟರ್ ವಾಮನ ಗೋಪಾಲರವರ
ಐಯೊಡ್ಯಾಯಿಡಿನಿಂದ ಕೂಡಿದ
ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು [illegible] ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು [illegible] ವಾತ, ತಮರೋಗಗಳು, ಗಂಟುಮಾಲೆ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗುವ [illegible]

ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಸುಮಾರು ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಖ್ಯಾತಿಪಡೆದಿರುವದು [illegible] ಶಕ್ತಿಗೆ ಉತ್ತಮವಾಗಿರುತ್ತದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ ಶರೀರದಲ್ಲಿ ಚೈತನ್ಯವನ್ನುಂಟುಮಾಡುವುದು.

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ಆ ೪. ವಿ.ಪಿ. ಟಪ್ಪಾಲು ಖರ್ಚು ೫ ಆಣೆ.

ಗಜಕರ್ಣದ ಮುಲಾಮು—4 ಆಣೆ. ಟೂತ್ ಪೌಡರ್ ಆಣೆ 2

ಏಜಂಟರು: ಮ್ಯಾನೇಜರ್, ಮಾಧವ್ ಬುಕ್ ಡಿಪೊ

ಗಂಗಾರಾಮ ಖಾತ್ರಿಸ್‌ವಾಡಿ, ಮುಂಬಯಿ ನಂ. 2.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಮೈಸೂರು.

ಲಕ್ಷ್ಮಿನಿ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಎಶ್ಯೂರೆನ್ಸ್ ಕಂಪೆನಿ.
ಲಿಮಿಟೆಡ

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಅಫಿಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ [illegible]ಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಬದ್ಧವಾದ ವಿಮೇ ದರಗಳಲ್ಲಿ ಉತ್ತರಾಯಿಸಿ ಕೊಡುವುದು

ಇತರ [illegible] ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ಧತಾಪತ್ರಗಳಲ್ಲಿ ರೇವಹಾತಿಯಾಗಿಟ್ಟಿರುವುದು

[illegible] ಜೀವವಿಮೇ ಉತ್ತರಾಯಿಸ [illegible]

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ—ಪ್ರಖ್ಯಾತಿಗೊಂಡ ಶ್ರೀಕೃಷ್ಣಪ್ರಸಾದರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್, ಮಂಗಳೂರು, ದ. ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು [illegible] ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲ್ಲ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸಲ್ಪಡುವವು ತರಕಾರೀ ಮತ್ತು [illegible] ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಿ. ಎಲ್. ಬೈಯಣ್ಣ ಬ್ರದರ್ಸ್,

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

ಯುಗಾದಿಯ ಬಹುಮಾನ! ಯುಗಾದಿಯ ಬಹುಮಾನ!!

[illegible] 1 ಕ್ಕೆ 0 8-0 10 ಟೋಪಿ [illegible] 1ಕ್ಕೆ [illegible] 7 0. [illegible] ಕಪ್ಪು [illegible] 1ಕ್ಕೆ 2 [illegible] 1ಕ್ಕೆ 0 10 0, [illegible] ಕೆಂಪು ಕಪ್ಪು ಮತ್ತು ಬೇಟಿ ಕೆಂಪು [illegible] 1ಕ್ಕೆ 2 12 0. ಅರು ಟೋಪಿ [illegible] 1ಕ್ಕೆ 0-1 6 ಮತ್ತು 0 [illegible] 1ಕ್ಕೆ [illegible] 1 12-0.

[illegible] 1ಕ್ಕೆ 8 0-0 ಮತ್ತು 13 0 0 ತರಬೇತಾರಿತ [illegible] [illegible] 1ಕ್ಕೆ ರೂ 2-4-0

[illegible] ಎಲ್ಲಾ ತರದ ವಾತಕ್ಕೆ 0-8 0 ದೊಡ್ಡವರ ಕಾಲುಚೀಲ [illegible] ಆಣೆ 0-4-0 [illegible] 1 8 0 [illegible] ಮಕ್ಕಳ ಕಾಲುಚೀಲಗಳು 0-4 0 ಮತ್ತು 0 6-0 ದೊಡ್ಡವರ ಕಾಟನ್ [illegible] 1ಕ್ಕೆ [illegible] 1 0 0 ದೊಡ್ಡವರ ಮುಸುಕಿನ [illegible] 1ಕ್ಕೆ 1 0 0 ಹಣ [illegible] ಪಾಕೆಟ್ 1ಕ್ಕೆ 0-2 0 [illegible] ಪಾಕೆಟ್ 1ಕ್ಕೆ 0-2 0 [illegible] ಕಮರ್‌ಬಂದ್ 1ಕ್ಕೆ 10 [illegible] 1 0 [illegible]ಗಳು 1ಕ್ಕೆ 0 1 0 0 1 6 [illegible] 0 4-0 [illegible] 1ಕ್ಕೆ 0 [illegible] ವರ್ಣದ ಕೊಳೆ 1ಕ್ಕೆ 0 4 0 ಪಿತನಾ ಡಬ್ಬಿ 1ಕ್ಕೆ 0 4 0. [illegible] 1ಕ್ಕೆ [illegible] 0 12-0 ವರೆಗೆ [illegible] ಬಟ್ಲಿ 1ಕ್ಕೆ 0 4 0 [illegible] 300 ಮಾತ್ರೆಗ [illegible] ಪಾಕೆಟ್ 1ಕ್ಕೆ 0 [illegible] 0 ಮೊಸ್ಕ್ಯಾಲ್ ಡಬ್ಬಿ 1ಕ್ಕೆ 0 3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5 0 ದೇಶಿ ಕೈವಸ್ತ್ರಗಳು ಡಜನ್ 1ಕ್ಕೆ 1 0 0 [illegible] ವಸ್ತ್ರಗಳು ಡಜನ್ 1ಕ್ಕೆ 1 6 0 ಕಸ್ತೂರಿ ಮಾತ್ರೆ 200ರ ಸೀಸೆ 1ಕ್ಕೆ 0 4 0 [illegible] ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಸೀಸೆ 1ಕ್ಕೆ 1 0 0 ಪರಿಮಳ ನಸ್ಯ ಡಬ್ಬಿ 1ಕ್ಕೆ 0 2-0 ದಂತಮಂಜನ ಡಬ್ಬಿ 1ಕ್ಕೆ 0 1 6 [illegible] ಸೀಸೆ 1ಕ್ಕೆ 0 5-0. [illegible] ಇದು ಅಮೂಲ್ಯವಾದ ಅತ್ತರ್ ಸೀಸೆ 1ಕ್ಕೆ 1-8 0 ಶಾಮಿನಿ ಅತ್ತರ್ ಸೀಸೆ 1ಕ್ಕೆ 1-8 0. ರೋಜ್ ಅತ್ತರ್ ಸೀಸೆ 1ಕ್ಕೆ 2 0 0. ಇಂಗ್ಲಿಷ ಅಕ್ಷರದ ಪಟ್ಟಿಗೆ 1ಕ್ಕೆ 10 ಆಣೆಯಿಂದ 3 0 0 ಬಿಳಿ ಪೋಸ್ಟು ಕಾರ್ಡುಗಳು 100ಕ್ಕೆ 0 3 0 [illegible] ಲೆಟರ್ ಪೇಪರ್ ಪಾಕೆಟ್ 1ಕ್ಕೆ 0 4 0 ಇದಕ್ಕಾಗುವ ಕವರ್ 100ಕ್ಕೆ 0-5 0. ಕಾಬೂಲ್ ದೇಶದ ಹಿಂಗು 12 ತೊಲೆ ಡಬ್ಬಿ 1ಕ್ಕೆ 0-14-0. ಕೆಂಪು ನೂಲಿನಿಂದ ತಯಾರಿಸಿದ ಕಮರ್‌ಬಂದ್—0-4-0, 0 7-0 ಮತ್ತು 0 9-0. ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0-4 0.

ಎಂಟಾಣೆಯಕ್ಕಿಂತಲೂ ಜಾಸ್ತಿ ಸಾಮಾನು ಕರಿದಿ ಮಾಡುವವರಿಗೆ ಒಂದು "ಸ್ವದೇಶಿ ಕರವಸ್ತ್ರ ಬಹುಮಾನವಿದೆ. ವಿ. ಪಿ. ಖರ್ಚು ಜಾಸ್ತಿ.

ಏಜೆಂಟರು—ದಿ. "ಊಲನ್ ವರ್ಕ್ಸ್, ಆಸ್ಪತ್ರೆ ಎದುರಿಗೆ, ಮಂಗಳೂರು.

SMALL-POX BALM.

ಅತ್ಯಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರು ವುದು.

ಸಿಡುಬು ರೋಗಕ್ಕೆ ಮುಲಾಮು.

ಸಿಡುಬು ರೋಗದ [illegible] ಸುವ ವಿವಿಧ ವೈದ್ಯರಿಂದ [illegible] ಔಷಧಿ ಎಂದು ಮನ್ನಿಸಲ್ಪಟ್ಟಿರುವುದು.

ಮೈಲಿಯಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಚಿಜ್ಜಿಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಚಿಜ್ಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೭ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ. ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್. (ಮಂಗಳೂರು ವ್ಯಾಪಾರ ಸಂಘ.)

ರಥಬೀದಿ, ಮಂಗಳೂರು. ಇವರಲ್ಲಿ ದೊರಿಯುತದು.

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

3" × 8¼", 3" × 5¼"; 8¼" × 6½", 6½" × 4" ಪರಿಮಾಣವಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.
ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ. ಮೆನೇಜರ್.

ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

~~ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.~~
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್, [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷ ೧ಕ್ಕೆ ರೂ 1-4-0 ಟಪ್ಪಾಲು ಹಾಸಲು ಸೇರಿ ರೂ 2-1-0

ಪುಸ್ತಕ 4. | ಮಂಗಳೂರು, ತಾರೀಕು 15ನೇ ಶುಕ್ರವಾರ ಏಪ್ರಿಲ್ 1910 | ಸಂಚಿಕೆ 15

Amrutanjan Depot Fort Bombay.

ಅಮೃತಾಂಜನ

Trade Mark-Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ತುಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ. 4.

ಧಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

AMRUTANJAN.

BEST INDIAN PAIN BALM.

The best and Purest medicine ever made.

Amrutanjan Cures All Kind of Pains

TRY A BOTTLE TO-DAY. PRICE ANS 0—8—0 ONLY.

ವಿಳಾಸ:—ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ವಿಳಾಸ:—"ಅಮೃತಾಂಜನ". ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರಮಾಯಿಷಿಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಶೇರು 1ಕ್ಕೆ

	ರೂ. ಅ. ಪೈ.	ರೂ. ಅ. ಪೈ.
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ	0—12—0	

ಗಂಧದ ಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1 ಪುನುಕೋಟಿ ಬಿಲ್ಲೆ	3-0-0	1-8-0	0-12-0
2 ಕಸ್ತೂರಿ ಬಿಲ್ಲೆಗಳು	1-8-0	0-12-0	0-6-0
3 { 1 ಕೇಸರಿ ಬಿಲ್ಲೆ	0-8-0	0-4-0	0-2-0
2 ಡಿಟ್ಟೊ	0-4-0	0-2-0	0-1-0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ 5ರೂ

4 ಅವಲ್ ಹಸೀ ಬಿಲ್ಲೆ	0-8-0	0-4-0	0-2-0
ಎರಡನೇ ರಖಂ	0-4-0	0-2-0	0-1-0

ಕಾಲು ತೊಲೆ ತೂಕ ಉಳ್ಳ ಹಸೀ ಬಿಲ್ಲೆ 100ಕ್ಕೆ 8ರೂ 5ರೂ

5 ಅರಗಜ ಅಥವಾ ಜವ್ವಾಜಿ ಗಂಧ ತೊಲಾ 1ಕ್ಕೆ 1-0-0

ಪರಸ್ಥಳದವರಿಗೆ ಟಪ್ಪಾಲ್ ಹಾಸಲು ಮತ್ತು ಪ್ಯಾಕಿಂಗ್ ಖರ್ಚು ಅಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು ಅಮಾಯಿಷಿಯಿಂದ ಪ್ರೋತ್ಸಾಹಿಸುವಿರೆಂದು ಕೋರುತ್ತೇನೆ

ಯಂ ವರಸಿಹ್ಮ ಶಾಸ್ತ್ರಿ, ಸುಗಂಧಕಾರಿ,
ಶಂಕರಪುರ ಬೆಂಗಳೂರು ಸಿಟಿ.

ಮುಖತ್ಸರ ಗಣನೆ ಪುರುಷರ ಕ್ಯಾಲೆಂಡರು ಮುಖತ್ಸ

ಕಾನಪೂರ ಉಲನ್ ಚೌಕಗಳು.

ಸೈಜು 40×40, ಕಪ್ಪು, ಗುಲಾಬಿ ಊದ, ಹಸರು, ಕರೀದು, ಕೇಸರಿ, ಬಿಳಿಪು, ಚ್ಯಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0—4—0

ಶಾಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ 4 4-0 2ನೇ ನಂಬರು ರೂ 3—12—0. 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0—4—0

ಸಾಚಾ ಒಳ್ಳೇ ಕಲಾವತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು 0—10—0 1—1—0,

2ನೇ ನಂಬರು 0—14—0, 1—8—0, 2—4—0

ರೇಷ್ಮೆ ನವುಕಟ್ಟುಗಳು.

ಕೆಂಪು, ಪೂವಾ, ..., ರೇಸಿಬು, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ ... ಇಂಚು, 1ಕ್ಕೆ ರೂ 1 4-0. 1 8-0, 2-4-0, 2-8-0, 3 0 0

ಚಿತ್ರದ 3 0-0, 4 0 0, 5-0 0, 6-0 0

ಡಿಟ್ಟೊ ಗಜ 1ಕ್ಕೆ 1-8-0

ರೇಷ್ಮೆ ಅಂತುಗಳು ಗಜ 1ಕ್ಕೆ ಆಣೆ 2, 3, 4, ...

ಮಕ್ಮಲ್ ಅಂಚು ಗಜ 1ಕ್ಕೆ ಆಣೆ 1, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ, ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6-0, 2 8 0, 3 0 0

ದಾರದ ಬನೀನುಗಳು 1ಕ್ಕೆ ಆಣೆ 4, 5 6 7, 8

ಉಲನ್ ಬನೀನುಗಳು 1ಕ್ಕೆ ರೂ 2 4 0, 2 8 0, 3-0-0, 3-8-0.

ಪಿಲ್ಸ್ ಕ್ಯಾಪ್‌ಗಳೂ ಕ್ರಿಸ್ಟೀನ್ 1ಕ್ಕೆ ರೂ 1 12 0, 2-4 0, 2-8-0 2-12-0

ಜರಿ ಕ್ಯಾಪ್‌ಗಳು 1ಕ್ಕೆ ರೂ 0-12 0 1 0 0, 1-4-0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4-0-0, 4-4-0, 4-8-0, 5-8-0, 6-0 0, 7-0 0 8 0-0 9 0 0, 10-0-0, 12-0-0,

ಬೀಟ ಕಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲಿ	1ಕ್ಕೆ	ರೂ	0—11—0
ಕುಂತಳ ಕೌಮುದಿ ತೈಲ	,,	,,	0—12—0.
ಕಮೋನಿಯಾ ಓಯಿಲ್	,,	,,	1—0—0.
ಭೃಂಗಾಮಲಕ ತೈಲ ಸೀಸೆ	,,	,,	0—4—0, 0—8—0, 1—0—0
ಕಸ್ತೂರಿ ಮಾತ್ರೆ ಸೀಸೆ	,,		0—4—0.

ಎಲ್. ಎ. ಶೋರುವಾಲ್,

ಮಾಡಿನ ಗಿಡಗಳು ವಗೈರೆ ಸಕಲ ವಿಧವಾದ ... ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ... ವಾದ ಬೀಜಗಳು, ಶೀಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರದು ತರಿಸಿ ಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್ ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಕಟವಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಶ್ಲೋಕ ಪಾದಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಸಿದ್ಧವಾಗಿದೆ ಬೆಲೆ 0—4—0

ವಿಳಾಸ:
ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕೂಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯುಪಯೋಗಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವುದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.
216 ಕಾರನ್‌ವಾಲಿಸ್ ಬೀದಿ, ಕಲಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್ ಎ ಶೋರುವಾಲ್ ...

...

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 15ನೇ ಏಪ್ರಿಲ್ '1910

ಸೆಕೆಂಡರಿ ಶಾಲಾ ಫೀಸುಗಳನ್ನು ಹೆಚ್ಚಿಸುವುದರ ಕುರಿತು

ನವೀನವಾಗಿ ಮಾರ್ಪಟ್ಟ ಮದ್ರಾಸು ಸಂಸ್ಥಾನದ ನ್ಯಾಯವಿಧಾಯಕ ಸಭೆಯು ಪ್ರಥಮ ಸರ್ತಿಗೆ ಬಜೇಟು ಸಮ್ಮಂಧ ಒಗ್ಗಿಂದಾಗ್ಯೆ ಕೂಡಿ ಈ ತಿಂಗಳ ತಾ ೭ಕ್ಕೆ ಮುಕ್ತಾಯವಾಯಿತು ಸಭೆಯಲ್ಲಿ ಸಂಸ್ಥಾನದ ರಾಜಕಾರ್ಯ ವಿಷಯಗಳು ಹಲವು ವಾದಿಸಲ್ಪಟ್ಟವು. ನಮ್ಮ ಹಿಂದಿನ ಒಂದು ಸಂಚಿಕೆಯಲ್ಲಿ ಸೂಚಿಸಿದಂತೆ ಸಕೆಂಡರಿ ಶಾಲೆಗಳ ವಿದ್ಯಾರ್ಥಿ ಸಂಬಳಗಳ ದರವನ್ನು ಹೆಚ್ಚಿಸಕೂಡದೆಂದು ಬಹುಮಾನಪಟ್ಟ ಶೆಂಗಾಚು ಪಂತ್ಲುರವರು ಸಭೆಯ ಮುಂದಿರಿಸಿದ ನಿರ್ಣಯವು ಚರ್ಚಿಸಲಾಯಿತು ಪ್ರಜಾಕಡೆ ಮೆಂಬರರಲ್ಲಿ ಬಹುಮಂದಿಯು ದರಗಳನ್ನು ಹೆಚ್ಚಿಸಕೂಡದೆಂದುಕೊಂಡರೂ ಈ ನಿರ್ಣಯಕ್ಕೆ ಬಹುಪಕ್ಷ ಸಮ್ಮತವು ದೊರೆಯ ದಿಲ್ಲದ್ದರಿಂದ ನಿರ್ಣಯವು ಮಂಜೂರಾಗಲಿಲ್ಲ. ಗಲ ಜನ ಮೆಂಬರರು ಈ ನಿರ್ಣಯದ ಪರವಾಗಿಯೂ ಕೆಲವರು ವಿರೋಧವಾಗಿಯೂ ಉಳ್ಳ ತಮ್ಮ ಸಮ್ಮತಿಯನ್ನು ಕೊಡುವವರಾದರು ಶಾಲಾ ಫೀಸುಗಳ ದರ ಹೆಚ್ಚಿಸೋಣವು ಈ ತನಕ ಸರಕಾರದವರು ಪರ್ಯಾಲೋಚಿಸುತ್ತಿರುವರು ವಿನಹಾ ಅದು ಇಷ್ಟರ ವರೇಗೆ ಸರಕಾರದವರಿಂದ ಮಂಜೂರುಮಾಡಲ್ಪಟ್ಟಿಲ್ಲ ನ್ಯಾಯವಿಧಾಯಕ ಸಭೆಯಲ್ಲಿ ನಡದ ತರ್ಕದಲ್ಲಿ ಸರಕಾರ ಕಡೆಯಿಂದ ವ್ಯಕ್ತಪಡಿಸಿದ ಈ ವಿಷಯದ ಅಭಿಪ್ರಾಯವು ವಿದ್ಯಾರ್ಥಿ ಶಾಲಾ ಸಂಬಳವನ್ನು ಹೆಚ್ಚಿಸಬೇಕೆಂದಿದ್ದರೂ ಸಭಾಧ್ಯಕ್ಷರಾಗಿರುವ ಗವರ್ನರ್ ಧೊರೆಗಳವರು ಫೀಸುಗಳ ಹೆಚ್ಚಿಸೋಣವನ್ನು ಮಂಜೂರು ಮಾಡುವಾಗ್ಯೆ ಪ್ರಜಾಕಡೆಯ ಮೆಂಬರರು ಸಭೆಯಲ್ಲಿ ಹೇಳಿದ ಅಭಿಪ್ರಾಯಗಳಿಗೆ ಗಮನಕೊಡುವೆವೆಂಬದಾಗಿ ಅಪ್ಪಣೆಕೊಟ್ಟಿರುವರು

ಸೆಕೆಂಡರಿ ಶಾಲಾ ವಿದ್ಯಾಭ್ಯಾಸವನ್ನು ಸಾಧ್ಯವಿದ್ದಷ್ಟರ ಉತ್ಕೃಷ್ಟ ತರಗತಿದ್ದಾಗಿ ಮಾಡಲಿಕ್ಕೆ ಶಾಲೆಗಳನ್ನು ಯೋಗ್ಯವಾದ ರೀತಿಯಲ್ಲಿ ವ್ಯವಸ್ಥೆಪಡಿಸಬೇಕೆಂದು ಗವರ್ನಮೆಂಟಿನವರ ಅಭಿಪ್ರಾಯವು ಪ್ರಕಾರ ಸರಕಾರದವರ ಈ ಉದ್ದಿಶ್ಯದ ಒಟ್ಟು ನಡಿಸಲಿಕ್ಕೆ ದ್ರವ್ಯಸಹಾಯವು ಬೇಕಾಗಿರುವುದರಿಂದ ಇಂದ ಸಹಾಯವನ್ನು ಸೆಕೆಂಡರಿ ಶಾಲೆಗಳ ಫೀಸುಗಳನ್ನು ಹೆಚ್ಚಿಸಿಯೇ ಪ್ರಾಪ್ತಿಸಿಕೊಳ್ಳಬೇಕೆಂದು ಸರಕಾರದವರು ಅನ್ನುವರು. ಸರಕಾರದವರ ದ್ರವ್ಯಸಹಾಯವೆಂದರೆ ಪ್ರಜೆಗಳಿಂದ ಕಂದಾಯ ಮೂಲಕ ಸಂಗ್ರಹಿಸಲ್ಪಟ್ಟ ದ್ರವ್ಯದಿಂದಲೇ ಕೊಡುವಂಥಾದ್ದಾದ್ದರಿಂದ ಇಂಥಾ ದ್ರವ್ಯಸಹಾಯಗಳಲ್ಲಿ ಹಣ ವ್ಯಯಮಾಡುವದರ ಕುರಿತ ಸರಕಾರವು ಬಹಳ ಜಾಗರೂಕರಾಗಿರಬೇಕು ಇಲ್ಲದಿದ್ದರೆ ತೆರಿಗೆಗಳನ್ನು ಕೊಡುವ ಪ್ರಜೆಗಳಲ್ಲಿ ಅತಿ ಬಡವರಾದವರಿಗ ನಿಜವಾಗಿಯೂ ಸರಕಾರದವರ ಅನ್ಯಥಾ ವರ್ತನೆಯು ಸಂಕಟಕರವಾಗಿರುವುದು ತಮಗೆ ಶಿಕ್ಕಿದ ವಿದ್ಯಾಲಾಭದಿಂದ ಸಮಾಜದಲ್ಲಿ ಉತ್ತಮ, ಮಧ್ಯಮ ತರಗತಿಗಳನ್ನು ಐದುವವರು ಮುಖ್ಯವಾಗಿ ಈ ವಿದ್ಯಾಭ್ಯಾಸವನ್ನು ಪಡಿಯುವರೆಂಬದಾಗಿ ಗ್ರಹಿಸಬೇಕಾದ್ದರಿಂದ ಇಂಥವರೇ ತಮ್ಮ ಶಿಕ್ಷಣವನ್ನು ಉಚ್ಚಸ್ಥಿತಿಗೆ ತರಬೇಕಾಗುವ ಖರ್ಚನ್ನು ತೆತ್ತಬೇಕಲ್ಲದೆ ಸಮಾಜದ ಕನಿಷ್ಠ ಪಕ್ಷದವರಲ್ಲ ಈ ರೀತಿ ಸರಕಾರ ಅಭಿಪ್ರಾಯವಿರುವುದರಿಂದ ಸೆಕೆಂಡರಿ ಶಾಲಾ ಫೀಸುಗಳ ದರವನ್ನು ಹೆಚ್ಚಿಸಬೇಕೆನ್ನುವರು

ಈ ವಿಷಯವನ್ನು ಪರ್ಯಾಲೋಚಿಸಿ ಸಂಬಳಗಳ ದರವನ್ನು ನಿರ್ಣಯಿಸುವರೆ ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿದರು ದರಗಳು ಈ ಕಮಿಟಿಯವರಿಂದ ನಿರ್ಣಯಿಸಲ್ಪಟ್ಟವೆ. ಅವುಗಳು—ಬಾಲಕರ ದರ್ಜೆಗಳಿಗೆ ವರುಷಕ್ಕೆ ರೂ ೨, ನಾಲ್ಕನೇ ದರ್ಜೆ ತನಕ ಪ್ರತಿ ದರ್ಜೆಗೆ ರೂ 10, ಒಂದನೇ, ಎರಡನೇ, ಮೂರನೇ ಫೋರ್ಮುಗಳಿಗೆ ಪ್ರತಿ ಒಂದಕ್ಕೆ ರೂ. 22, ನಾಲ್ಕನೇ, ಐದನೇ, ಆರನೇ ಫೋರ್ಮುಗಳಿಗೆ ವರುಷಕ್ಕೆ ರೂ. 42 ಪ್ರಕಾರ, ಇಂಟರ್‌ಮಿಡಿಯೇಟ್ ಕ್ಲಾಸುಗಳಿಗೆ ರೂ 83, ಬಿ ಎ ಕ್ಲಾಸುಗಳ ಪ್ರಥಮ ಭಾಗ ರೂ 52, ಮತ್ತು ಪ್ರತಿ ಗ್ರೂಪಿಗೆ ರೂ 53 ಪ್ರಕಾರ ಈ ರೀತಿ ದರಗಳು ಕಮಿಟಿಯವರಿಂದ ನಿರ್ಣಯಿಸಲ್ಪಟ್ಟಿರುವವು ಇದೇ ದರಗಳು ಈಗ ಆರನೇ ಫೋರ್ಮಿಗೆ ವರುಷಕ್ಕೆ ರೂ. 38, ಐದನೇ ಫೋರ್ಮಿಗೆ ರೂ. 34, ನಾಲ್ಕನೇ ಫೋರ್ಮಿಗೆ ರೂ. 30, ಮೂರನೇ ಫೋರ್ಮಿಗೆ ರೂ. 20, ಎರಡನೇ ಫೋರ್ಮಿಗೆ ರೂ. [illegible] ಫೋರ್ಮಿಗೆ ರೂ. [illegible]

[illegible]

ಪ್ರಜಾ ಕಡೆಯ ಮೆಂಬರರು ಸೂಚಿಸಿದಂತೆ ಶಾಲಾ ಫೀ[illegible]ನ್ನಾದರೂ ತತ್ಕಾಲದಲ್ಲಿ ಹೆಚ್ಚಿಸುವುದು ಅಯುಕ್ತವೆಂತ ತೋರುತ್ತದೆ [illegible] ಹೋದಾಟದ ದೆಶೆಯಿಂದ ಸಮಾಜದಲ್ಲಿ ಮಧ್ಯಮ ತರಗತಿಯವರು ದ್ರವ್ಯಾನುಕೂಲತೆಯ ಅಡಚಣೆಯಿಂದ ಬಹಳ ಸಂಕಷ್ಟಗೊಳ್ಳುತ್ತಿರುವರು ಕೈಗಾರಿಕೆಗಳು ನೋಡೋದವು ದೇಶದಲ್ಲಿ ಪ್ರಬಲವಾಗಿಲ್ಲದ ಕಾರಣ ಶಿಕ್ಷಣ ಪಡದವರು ಸಹಾ ವೃತ್ತಿಗಳನ್ನು ಸಂಪಾದಿಸಿಕೊಳ್ಳುವುದು ಬಹಳ ಪ್ರಯಾಸವಾಗಿದೆ ಸರ್ವ ರೀತಿಯಲ್ಲಿಯೂ ಪ್ರಜೆಗಳ ಚಿತ್ತವೃತ್ತಿಯಲ್ಲಿ ಅಭಾವಕ್ಕೇನೇ ಹೆಚ್ಚಿನ ಅವಕಾಶವಿರುವಾಗ ಶಾಲಾ ಕೊಲೇಜುಗಳಲ್ಲಿ ಒಂದೇ ಸಲ ಹಲವು ಮಾರ್ಪಾಟುಗಳಾದವು ಮೆಟ್ರಿಕ್ಯುಲೇಶನ್ ಪರೀಕ್ಷೆಯು ತೆಗೆದುಹಾಕಲ್ಪಟ್ಟು ಇದರ ಬದಲೆ ಸ್ಕೂಲ್ ಫೈನಲ್ ಎಂಬ ಪರೀಕ್ಷೆಯು ಇಡೋಣಾಯಿತು ಇಷ್ಟೆಲ್ಲವೂ ಒಂದೇ ಸಲ ಜಾರಿಗೆ ಬಂದುದರಿಂದ ಶಿಕ್ಷಣದಲ್ಲಿ ಉಂಟಾಗಬಹುದಾದ ಅಭಾವವು ಕಳದ ವರುಷದ ಮೆಟ್ರಿಕ್ಯುಲೇಶನ್ ಪರೀಕ್ಷೆ ಫಲಿತಾಂಶ ಇನ್ನಷ್ಟು ನಿಶ್ಚಯವಾಯಿತು ಇಂಥಾ ಸಮಯದಲ್ಲಿ ಶಾಲಾ ಸಂಬಳವನ್ನು ಏರಿಸಿದರೆ ಪ್ರಜೆಗಳಲ್ಲಿ ಬಹಳ ಸಂಕಷ್ಟಕ್ಕೆ ಕಾರಣವಾಗುವುದು

ಸರಕಾರಿ ಮತ್ತು ಲೋಕಲ್‌ಫಂಡು ಮುನಿಸಿಫಲ್ ಮೊದಲಾದ ಸಾರ್ವಜನಿಕ ಸಂಸ್ಥೆಗಳಿಂದ ನಡಿಸಲ್ಪಡುವ ಶಾಲೆಗಳಲ್ಲಿ ಮಾತ್ರ ಹೆಚ್ಚಿಸಿದ ಶಾಲಾವಿದ್ಯಾರ್ಥಿ ಸಂಬಳ ದರಗಳನ್ನು ವಸೂಲು ಮಾಡಬೇಕೆಂತಿರುವುದಲ್ಲದೆ ಖಾಸಗಿ ಶಾಲಾ ಕೊಲೇಜುಗಳಲ್ಲಿ ಈ ದರದಲ್ಲಿಯೇ ಸಂಬಳಗಳನ್ನು ವಸೂಲು ಮಾಡಬೇಕೆಂತ ಸರಕಾರದವರ ಏರ್ಪಾಟು ಸಹ ಇಲ್ಲವೆಂತ ಇರುವುದಾದರೂ ಶಾಲೆಗಳಿಗೆ ಕೊಡೋಣಾಗುವ ಸರಕಾರಿ ಗ್ರೇಂಟ್ ಇನ್‌ಏಡ್ ಎಂಬ ದ್ರವ್ಯಸಹಾಯವು ಶಾಲಾ ವಿದ್ಯಾರ್ಥಿಗಳ ಎರಿಸಿದ ಸಂಬಳದ ದರದಲ್ಲಿಯೇ ನಿರ್ಣಯಿಸಲ್ಪಡುವ ಮುನಾಫಯನ್ನಾದರಿಸಿರುವುದರಿಂದ ಖಾಸಗಿ ಶಾಲಾ ಕೊಲೇಜುಗಳಲ್ಲಿ ಸಹಾ ಏರಿದ ದರಗಳಲ್ಲಿ ಸಂಬಳವನ್ನು ವಸೂಲುಮಾಡಬೇಕಾಗುವುದು

ಸೆಕೆಂಡರಿ ಶಾಲೆಗಳಲ್ಲಿ ನಾವು ಈ ಮೊದಲು ಪ್ರಸ್ತಾಪಿಸಿದಂತೆ ದೊರಿಯೋಣಾಗುವ ಶಿಕ್ಷಣವನ್ನು ಒಳ್ಳೇದಾಗಿ ಮಾಡಲಿಕ್ಕೆ ಈ ಎಲ್ಲಾ ಏರ್ಪಾಡುಗಳನ್ನು ಮಾಡುತ್ತಿರುವರು ಗವರ್ನರ್ ಇಸವಿಯಲ್ಲಿ ಸಿಮ್ಲಾದಲ್ಲಿ ಕೂಡಿದ ವಿದ್ಯಾ ಪರಿಷತ್ತಿನ ನಿರ್ಣಯಗಳನ್ನು ಈ ಎಲ್ಲಾ ಏರ್ಪಾಡುಗಳು ಅನುಸರಿಸಿರುವವು ಈ ವಿದ್ಯಾ ಪರಿಷತ್ತಿನ ನಿರ್ಣಯಗಳನ್ನು ಇನ್ನು ಹಲವು ರೀತಿಗಳಿಂದ ಕಾರ್ಯರೂಪಗೊಳಿಸಲಿಕ್ಕೆ ಪ್ರತಿ ಒಂದು ಜಿಲ್ಲೆಯಲ್ಲಿಯೂ ಒಂದು ಮಾದರಿ ಹೈಸ್ಕೂಲನ್ನು ಗವರ್ನಮೆಂಟಿನವರೇ ಸ್ಥಾಪಿಸಿ ನಡಿಸುತ್ತಿರಬೇಕೆಂದು ೧೯೦೪ನೇ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನವರ ಸೂಚನೆ ಇದ್ದದ್ದಾಗಿ ತೋರುತ್ತದೆ ಈ ಸೂಚನೆ ಪ್ರಕಾರ ಮದ್ರಾಸು ಸರಕಾರದವರು ಇಡೀ ಸಂಸ್ಥಾನದಲ್ಲಿ ೧೧ ಮಾದರಿ ಹೈಸ್ಕೂಲುಗಳನ್ನು ಸ್ಥಾಪಿಸಬೇಕೆಂದಿರುವರು ಇಂಥಾ ಶಾಲೆಗಳನ್ನು ಸ್ಥಾಪಿಸಲಿಕ್ಕೆ ಬೇಕಾಗುವ ದ್ರವ್ಯವನ್ನು ಪೂರ್ಣ ಪ್ರಜೆಗಳ ತೆರಿಗೆಗಳಿಂದ ಸಂಗ್ರಹಿಸಲ್ಪಟ್ಟ ಸರಕಾರ ಬಂಡಾರದಿಂದ ಕೊಡುವದು ಅನುಚಿತವಾದ್ದರಿಂದ ಸೆಕೆಂಡರಿ ಶಾಲೆಗಳ ಸಂಬಳ ದರವನ್ನು ಹೆಚ್ಚಿಸಿ ಈ ಮೂಲಕ ಅದಕ್ಕೆ ಬೇಕಾಗಿರುವ ದ್ರವ್ಯದ ಕೆಲವಂಶವನ್ನು ಒದಗಿಸಿಕೊಳ್ಳಬೇಕೆಂತಿರುವರು

ವಿದ್ಯಾಭ್ಯಾಸದ ವೆಚ್ಚಕ್ಕಾಗಿ ಚಾಲ್ತಿ ಬಜೇಟಿನಲ್ಲಿ 41 12 ಲಕ್ಷ ರೂಪಾಯಿಗಳ ಅಂದಾಜುಮಾಡಲ್ಪಟ್ಟಿರುವುದು ಇದರಲ್ಲಿ ಸರಕಾರದವರು ಸ್ಥಾಪಿಸಬೇಕೆಂದಿರುವ 11 ಮಾದರಿ ಹೈಸ್ಕೂಲುಗಳನ್ನು ಪ್ರಕೃತ ಜ್ಯಾರಿಯಲ್ಲಿರುವ ಸಂಬಳ ದರದಲ್ಲಿ ನಡಿಸಬೇಕಾದರೆ ಸರಕಾರದವರಿಗೆ ಇನ್ನು 1 ಲಕ್ಷ ರೂಪಾಯಿ ಬೇಕಾಗಿರುತ್ತದೆ. ಸಂಬಳ ದರಗಳನ್ನು ಕಮಿಟಿಯವರು ಸೂಚಿಸಿದಂತೆ ಏರಿಸಿದರೆ ಸರಕಾರದವರು 90,000 ರೂಪಾಯಿ ಮಾತ್ರ ಈ ವಿಷಯ ವೆಚ್ಚಮಾಡಿದರೆ ಸಾಕೆಂತ ತೋರಿಬರುತ್ತದೆ

ಸರಕಾರದವರು ತಾವಾಗಿಯೇ ಹೈಸ್ಕೂಲುಗಳನ್ನು ನಡಿಸುವುದು ಬಿಟ್ಟು ಹಲವು ವರುಷಗಳಾದವು ಸೆಕೆಂಡರಿ ವಿದ್ಯಾಭ್ಯಾಸವು ಮುಖ್ಯವಾಗಿ ಪ್ರಜೆಗಳಿಂದಲೇ ಸಾಗಿಸಲ್ಪಡುತ್ತದೆನ್ನಬೇಕು ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ನಮ್ಮ ಸರಕಾರದವರು ವಿನಿಯೋಗಿಸುವ ದ್ರವ್ಯವು ಅತ್ಯಲ್ಪವಾಗಿರುವುದು ವಿದ್ಯಾಖಾತೆಯ ಡಿರೆಕ್ಟರರಾದ ಮೆ| ಬೂರ್ನ ದೊರೆಗಳವರ 1908 09ನೇ ವರುಷದ ವರದಿ ಪ್ರಕಾರ ಸೆಕೆಂಡರಿ ಶಾಲೆಗಳ ವೆಚ್ಚವು ಸೇಕಡಾ 84ರಂತೆ ಖಾಸಗಿ ಜನರಿಂದಲೇ ಸಂಗ್ರಹಿಸಲ್ಪಡುವುದು ಶಾಲಾ ಫೀಸುಗಳಿಂದ ಹುಟ್ಟಿ ಬರುವ ಉತ್ಪತ್ತಿಯು ನಮ್ಮ ಸಂಸ್ಥಾನದಲ್ಲಿ ಇತರ ಎಲ್ಲಾ ಸಂಸ್ಥಾನಗಳಿಗಿಂತ ಅಧಿಕವಾಗಿರುವುದು ನಮ್ಮ ಶಾಲಾ ಫೀಸುಗಳ ದರವನ್ನು ಬಂಗಾಳ, ಸಂಯುಕ್ತ ಸಂಸ್ಥಾನ ಮತ್ತು ಮುಂಬಯಿ ಈ ಸಂಸ್ಥಾನಗಳಲ್ಲಿರುವ ದರದೊಂದಿಗೆ ಸರಿಹೋಲಿಸಿದರೆ ಮುಂಬಯಿಯ ಹೊರತು, ನಮ್ಮ ಸಂಸ್ಥಾನದ ದರವೇ ಅಧಿಕವಾಗಿ ತೋರಿಬರುತ್ತದೆ. ಹಿಂದುಸ್ಥಾನದ ಬಾಕಿ ಯಾವ ಸಂಸ್ಥಾನದಲ್ಲಿಯಾದರೂ ಸೆಕೆಂಡರಿ ಶಾಲಾ ಫೀಸುಗಳ ದರವನ್ನು ಹೆಚ್ಚಿಸುವ ಏರ್ಪಾಡಿನ ಪ್ರಸ್ತಾಪವೇನೂ ಇಲ್ಲದಿರುವಾಗ ಈ ಎಲ್ಲಾ ವಿದ್ಯಾ[illegible] ನಮ್ಮ ಸಂಸ್ಥಾನದಲ್ಲಿ ಮಾತ್ರ ಹೆಚ್ಚಿಸುವದು ಅನುಚಿತವೆಂತ ಪ್ರಜಾಕಡೆ[illegible] ಸೆಕೆಂಡರಿ [illegible]

[illegible] ಸಹಕಾರದಿಂದಲೇ ತಿದ್ದಬಹುದು." ಮಾದರಿ ಶಾಲೆಗಳನ್ನು ಸರಕಾರದವರು ಹೊಸತಾಗಿ ಸ್ಥಾಪಿಸುವ ಬದಲಿಗೆ ಈ ಮಾದರಿ ಶಾಲೆಗಳಿಗೆ ಬೇಕಾದ ಹಣವನ್ನು ಖಾಸಗಿ ಶಾಲೆಗಳಿಗೆ ಕೊಟ್ಟು ಅವುಗಳಲ್ಲಿ ಬೇಕಾದ ಅಭಿವೃದ್ಧಿಯ ಏರ್ಪಾಡನ್ನು ಮಾಡಿಸಬಹುದು. ಈ ರೀತಿ ಹಲವು ಸೂಚನೆಗಳು ಮಾಡಲ್ಪಟ್ಟವು [illegible] ಸಂಬಳಗಳದರವನ್ನು ಏರಿಸಬಾರದೆಂಬ ನಿರ್ಣಯವು ಹ್ಯಾಗೂ ಸಭೆಯಲ್ಲಿ ಮಂಜೂರಾಗದೆ ಹೋಯಿತು ವಿದ್ಯಾಖಾತೆಯ ಡಿರೆಕ್ಟರರಾದ ಬಹುಮಾನಪಟ್ಟ ಮಿ। ಬೂರ್ನರವರು ಸಂಬಳಗಳ ದರವನ್ನು ಏರಿಸಿದ್ದಲ್ಲಿ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಇದರಿಂದ ಏನೂ ಪ್ರತಿಕೂಲವುಂಟಾಗಲಿಕ್ಕಿಲ್ಲವೆಂತ ಹೇಳಿ ಪರೀಕ್ಷಾರ್ಥವಾಗಿ ಒಂದೆರಡು ಶಾಲೆಗಳಲ್ಲಿ ಹೀಗೆ ದರವನ್ನು ಏರಿಸಿದ್ದಲ್ಲಿ ವಿದ್ಯಾರ್ಥಿಗಳು ಕಡಿಮೆಯಾಗಲಿಲ್ಲವೆಂತ ವಾದಿಸಿದರು. [illegible] ಸಂಬಳವೇರಿಸಿದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಕಾಲಕ್ರಮವಾಗಿ ಕಡಿಮೆಯಾದ್ದಲ್ಲಿ ಹೀಗೆ ಹೆಚ್ಚಿಸಿದ ದರವನ್ನು ತೆಗೆದು ಹಾಕುವರೆ ತಾನೇ [illegible] ಅಪ್ಪಣೆ, ಕೊಡುವವರಾದರು. ಮದ್ರಾಸು ಸರಕಾರ ಮತ್ತು [illegible] ತಿಳಕೊಂಡವರು ಒಂದು [illegible] ತಂದ ಯಾವದೊಂದು ಸರಕಾರ [illegible] ಪುನಹಾ ವಜಾ ಮಾಡುವ ಸಂಭವವು [illegible]

ನಿರ್ಣಯವು ಸಭೆಯಲ್ಲಿ ಮಂಜೂರಾಗದೆ [illegible] ಪ್ರಜಾ [illegible] ಸಭೆಯಲ್ಲಿ [illegible] ಸೂಚನೆಗಳ [illegible] ಗವರ್ನರ್ ಧೊರೆಗಳವರು ಕೊಟ್ಟ [illegible] ರಿಂದ ಪ್ರಜಾಕ್ಷೇಮಕರವಾದ ಮಾರ್ಪಾಟವೇ ಈ [illegible] ಮಾಡಲ್ಪಡುವುದೆಂಗ ನಂಬಿದ್ದೇವೆ

~~~~~~~~

ಕಳೆದ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಇತರ ಕಾನೂನು ವಿಷಯಗಳು

ನವೀನವಾಗಿ [illegible] ನ್ಯಾಯವಿಧಾಯಕ [illegible] ಏರ್ಪಾಡುಗಳಲ್ಲವು [illegible] ಬರುವ ಸರಕಾರದವರ [illegible] ಕೊಳ್ಳುವುದು [illegible] ವಿಧಾಯಕ ಸಭೆಯ [illegible] ವಿಷಯಗಳನ್ನು ಪ್ರಕಟಿಸುತ್ತೇವೆ

ಪ್ರಜಾ ಕಡೆಯಿಂದ [illegible] ಪರವಾಗಿ [illegible] ಪ್ರಜಾ ಸಂಕಷ್ಟಗಳ [illegible] ದ್ದರಿಂದ ಅವು [illegible] ತಿಳಿಯುವಂತಾಯಿತು. ಈ [illegible] ಪ್ರಶ್ನೆಗಳೊಳಗೆ [illegible] ಗಳು ರಾತ್ರೆ [illegible] ಮಾಡುತ್ತಿರುವುದರಿಂದ [illegible] ರಾತ್ರೆ [illegible] ಮಾಡುವವರಿಗೆ ಹಾಗೆ ಕೆಲಸ ಮಾಡಲು [illegible] ರವು ಸರಕಾರದವರ ಮುಂದೆ [illegible] ಈ [illegible] ತನಕ ಕೆಲಸ ಮಾಡುತ್ತಿರುವರು. ಈ [illegible] ಸರಕಾರದವರ [illegible] ವಳಿಕೆಗೆ ಬಂದಿರುವುದಿಲ್ಲವೆಂತಲೂ [illegible] ನಿಯಮಾನುಸಾರ [illegible] ನಂತರ ಕೆಲಸವನ್ನು ಮಾಡುವ ಅವಶ್ಯಕತೆಯು ಎಲ್ಲಾ ಸರಕಾರಿ ನೌಕರರಿಗಿರುವುದರಿಂದಲೂ ಪ್ರಜಾಕಡೆಯಿಂದ ಸೂಚಿಸಲ್ಪಟ್ಟ ನಿವೃತ್ತಿಗೆ ಅವಕಾಶ [illegible]

ಸೆಕೆಂಡರಿ ಶಾಲೆಗಳಲ್ಲಿ [illegible] ಸ್ಕೂಲ್ ಫ್ಯಾನಲ್ ಪರೀಕ್ಷೆ [illegible] ಗಳು ಈ ವರೇಗೆ ನಿಷ್ಕರ್ಷಿಸಲ್ಪಡಲಿಲ್ಲವಾದ್ದರಿಂದ ಶಾಲೆಗಳಲ್ಲಿ [illegible] ಕಲಿಸಲಿಕ್ಕಾಯವಿಲ್ಲವೆಂತ ವಿಜ್ಞಾಪಿಸಿಕೊಂಡದ್ದಕ್ಕೆ [illegible] ಸ್ಕೂಲ್ ಫ್ಯಾನಲ್ ಪರೀಕ್ಷೆಯ ಬೋರ್ಡಿನವರು ನಿರ್ಣಯಿಸುವರೆ ಈ ಮೊದಲೇ [illegible] ತಿಳಿಸಲಾಯಿತು.

ವಿದ್ಯಾಖಾತೆಯ ಸರ್ಕಲ್ ಇನ್ಸ್‌ಪೆಕ್ಟರರವರು ನಮ್ಮ ಸಂಸ್ಥಾನಕ್ಕೆ ಎಂಟು ಜನರಿರುವರೆಂದೂ ಇವರ ಕೈಕೆಳಗೆ 8 ಸರ್ಕಲುಗಳಲ್ಲಿ 16, 16, 12, 23, 20, 24, 25, ಮತ್ತು 21 ಈ ರೀತಿ ಸೆಕೆಂಡರಿ ಶಾಲೆಗಳಿರುವವೆಂದೂ ಪ್ರಜಾಪ್ರತಿನಿಧಿಗಳ ಈ ವಿಷಯವಾದ ಪ್ರಶ್ನೆಗೆ ದೊರಕಿರುವ ಉತ್ತರದಿಂದ ತಿಳಿದುಬರುತ್ತದೆ.

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟುಗಳ ಗುಮಾಸ್ತರುಗಳಿಗೆ ಗವರ್ನಮೆಂಟಿನವರ ಸೆಂಕ್ಷನು ಪ್ರಕಾರ ಕನಿಷ್ಟಪರಿಮಾಣದಲ್ಲಿ 20 ರೂಪಾಯಿಗಳಿಗೆ ಕಡಿಮೆಯಾಗದ ಸಂಬಳವು ಈ ತಿಂಗಳಿಂದಾದರೂ ದೊರಿಯುವುದೋ ಎಂತ ಕೇಳಿದ್ದಲ್ಲಿ ಮದ್ರಾಸು ಗವರ್ನಮೆಂಟಿನವರ ಈ ಸೆಂಕ್ಷನಿಗೆ ಇಂಡಿಯಾ ಗವರ್ನಮೆಂಟಿನವರ ಮಂಜೂರಾತಿಯು ಬೇಕಾಗಿರುವುದರಿಂದ ಇಂಡಿಯಾ ಗವರ್ನಮೆಂಟಿನವರು ಮಂಜೂರಾತಿಯು [illegible]

[illegible]

ಸೆಶನ್ಸು ಕೋರ್ಟುಗಳಿಗೆ ಎಸ್ಸೆಸರುಗಳು ಮತ್ತು ಜೂರರುಗಳಾಗಿ ಬರುವವರಿಗೆ ಯುನೈಟೆಡ್ ಪ್ರೊವಿನ್ಸುಗಳ ಸರಕಾರದವರು ಪ್ರಯಾಣದ ಮತ್ತು ಊಟದ ಖರ್ಚುಗಳನ್ನು ಕೊಡಬೇಕೆಂತ ಮಾಡಿದ ಏರ್ಪಾಡಿನಂತೆಯೇ ನಮ್ಮ ಸಂಸ್ಥಾನದಲ್ಲಿಯೂ ಮಾಡಬೇಕೆಂತ ಸಭೆಯಲ್ಲಿ ಪ್ರಜಾಕಡೆಯಿಂದ ಕೇಳಲಾಯಿತು. ಈ ಏರ್ಪಾಡನ್ನು ನಮ್ಮ ಸಂಸ್ಥಾನದಲ್ಲಿ ಮಾಡಬೇಕೆಂತ ಸರಕಾರದವರು ಸೂಚಿಸಿದ್ದರೂ ಹೈಕೋರ್ಟು ಜಡ್ಜರವರ ಶಿಫಾರಸು ಮೇರೆಗೆ ಈ ಏರ್ಪಾಡನ್ನು ಜಾರಿಗೆ ತರಲಿಕ್ಕಾಗಲಿಲ್ಲವೆಂತಲೂ [illegible] ತಿಂಗಳು [illegible] ಜೂರರರಿಗೆ ಮತ್ತು ಎಸ್ಸೆಸರರಿಗೆ ಸ್ಥಳ ತನಿಖೆ ಮಾಡಲಾದವುಗಳಿಗೆ ಕೋರ್ಟಿನಿಂದ ಐದು ಮೈಲುಗಳಿಗಿಂತಲೂ ದೂರವಿರುವ ಸ್ಥಳಗಳಿಗೆ ಹೋದರೆ ಅವರಿಗೆ [illegible] ಖರ್ಚನ್ನು ಕೊಡಬೇಕೆಂತ ಏರ್ಪಡಿಸಿರುವೆವೆಂತಲೂ ಈ ಏರ್ಪಾಡು [illegible] ಜೂರರು [illegible] ಮತ್ತು ಎಸ್ಸೆಸರರಿಗೆ ಭತ್ತೆಯನ್ನು ಕೊಡುವ ವಿಷಯವನ್ನು [illegible] ಸುತ್ತಿರುವೆವೆಂತಲೂ ಅಪ್ಪಣೆ ಕೊಡಲಾಯಿತು

ತಾಲೂಕುಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಿಗೆ ರಸ್ತೆ ಮೊದಲಾದವುಗಳನ್ನು ತನಿಖೆ ಮಾಡುವದಕ್ಕೆ ಹೋದಾಗ್ಯೆಯೂ ಮಾಗಣೆ ಶ್ಯಾನುಭಾಗರಿಗೆ ತಾಲೂಕು ಮತ್ತು ಡಿವಿಜನಲ್ ಆಫೀಸುಗಳಿಗೆ ಕೆಲಸದ ನಿಮಿತ್ತ ಹೋಗಬೇಕಾಗುವಾಗಲೂ, ತಹಸೀಲ್ದಾರರು ಕಲೆಕ್ಟರರು ಮೊದಲಾದ ರೆವಿನ್ಯು ಆಫೀಸರರುಗಳೊಂದಿಗೆ ಸರ್ಕೀಟಿನ ಮೇಲೆ ಹೋಗುವ ಪೇದೆಗಳಂತೆಯೇ ಅಬ್ಕಾರಿ ಮತ್ತು ಸಮ್ಮರ್ ಇಲಾಖೆಯ ಪೇದೆಗಳಿಗೂ, ಅಬ್ಕಾರಿ ಸಬ್ ಇನ್ಸ್‌ಪೆಕ್ಟರರುಗಳಿಗೆ ತಮ್ಮ ಅಧಿಕಾರಕ್ಕೆ ಒಳಪಟ್ಟ ರಾಜ್ಯಗಳನ್ನು ದಾಟಿ ಮೇಜಿಸ್ಟ್ರೇಟು ಕೋರ್ಟುಗಳಿಗೆ ಹೋದಾಗಲೂ ಭತ್ತೆಯು ಕೊಡಲ್ಪಡಬೇಕೆಂದು ವಿಜ್ಞಾಪಿಸಿಕೊಂಡದ್ದಾಯಿತು. ಅಬ್ಕಾರಿ ಪೇದೆಗಳು ಮತ್ತು ಮಾಗಣೆ ಶ್ಯಾನಭೋಗರುಗಳ ಹೊರತು ಬಾಕಿಯವರ ಭತ್ತೆಯ ವಿಷಯವಾಗಿ ಪರ್ಯಾಲೋಚಿಸುವೆವೆಂತ ತಿಳಿಸಲ್ಪಟ್ಟಿತು. ಮಾಗಣೆ ಶ್ಯಾನುಭಾಗರು ತಾಲೂಕು ಮತ್ತು ಡಿವಿಜನು ಆಫೀಸುಗಳಿಗೆ [illegible] ಅವರನ್ನು [illegible] ಈ ಆಫೀಸುಗಳಲ್ಲಿ ಇರಗೊಡಿಸದೆ ಅವರು [illegible] ಕಳುಹಿಸಿಕೊಡುವಂತೆ ಅಪ್ಪಣೆಕೊಡುವೆವೆಂತ ಸರಕಾರದವರು ಈ ಸಂಬಂಧದಲ್ಲಿ ಹೇಳಿರುವರು

ಹೀಗೆ ಸಭೆಯಲ್ಲಿ ನಡೆದ ಪ್ರಶ್ನೋತ್ತರಗಳ ಹೊರತು ಇತರ ಕೆಲವು ವಿಷಯಗಳ [illegible] ಪ್ರತಿನಿಧಿಗಳು ಸರಕಾರದವರ ಮಂಜೂರಾತಿಗೆ ತಂದ ಕೆಲವು [illegible] ಬಹುಮಾನಪಟ್ಟ ಕೊಲ್ಲೆಂಗೋಡಿನ ರಾಜಾ ವಾಸುದೇವರಾಜರವರಿಗೂ ಬಹುಮಾನಪಟ್ಟ ಮಿ। ಕೃಷ್ಣನ್ನಾಯರರವರಿಗೂ ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯಂ ಕಾಯಿದೆಗಳಲ್ಲಿ ಈ ಮೊದಲು ನಮ್ಮ ಹಿಂದಿನ [illegible] ತಿದ್ದುಪಾಟನ್ನು ಸೂಚಿಸುವ ಕಾನೂನು ಮಸೂದೆಗಳನ್ನು ಸಭೆಯಲ್ಲಿ [illegible] ಅಪ್ಪಣೆ ದೊರಕಿತು

ತದನಂತರ ಬಹುಮಾನಪಟ್ಟ ಮಿ। ಜೆ ಎಸ್ ಅಟ್ಕಿನ್‌ಸನ್‌ರವರು ೧೯೧೦—೧೧ ನೇ [illegible] ಬಜೆಟನ್ನು ಸಭೆಯ ಮುಂದೆ ತರುವವರಾದರು. ೧೯೦೯—೧೦ನೇ ವರುಷದಲ್ಲಿ [illegible] ಸಲ್ಪಟ್ಟದ್ದಕ್ಕಿಂತ ರೂ [illegible] ಲಕ್ಷ ಆದಾಯವು ಹೆಚ್ಚಿಗೆ ದೊರಕಿರುವುದೆಂದೂ [illegible] ಅಂದಾಜಿ ಮಾಡಿದ್ದಕ್ಕಿಂತ ರೂ [illegible] ಲಕ್ಷ ಹೆಚ್ಚು ತಗಲಿರುವುದೆಂದು ತಿಳಿಸುತ್ತದೆ. ೧೯೧೦—೧೧ ವರುಷಾರಂಭಕ್ಕೆ ಎಲ್ಲಾ ಸಿಲುಕುಗಳಲ್ಲಿ ಒಟ್ಟಿಗೆ ರೂ [illegible] ಲಕ್ಷ [illegible] ಇರುವುದಾಗಿ ತಿಳಿಯುತ್ತೇವೆ

ಮಾರಣೆ ದಿನ ಕೂಡಿದ ಸಭೆಯಲ್ಲಿ ಮಿ। ಕೃಷ್ಣನ್ನಾಯರರವರು ಡಿಪ್ಯುಟಿ ತಹಸೀಲ್ದಾರರು ಮತ್ತು ಸಬ್ ಮೇಜಿಸ್ಟ್ರೇಟರುಗಳ ಸಂಬಳಗಳನ್ನು ರೂ ೧೫೦ಕ್ಕೆ ಹೆಚ್ಚಿಸಬೇಕೆಂಬ ನಿರ್ಣಯವನ್ನು ಸಭೆಯ ಮುಂದಿರಿಸಿದರು. ಡಿಪ್ಯುಟಿ ತಹಸೀಲ್ದಾರರಿಗೂ ಮೇಜಿಸ್ಟ್ರೇಟರಿಗೂ ಒಂದೇ ಪ್ರಕಾರ [illegible] ಸಂಬಳವನ್ನು ಏರಿಸುವುದು ಅಯುಕ್ತವೆಂತಲೂ ಮದ್ರಾಸು ಸರಕಾರದವರು ಡಿಪ್ಯುಟಿ ತಹಸೀಲ್ದಾರರನ್ನು ಮತ್ತು ಮೇಜಿಸ್ಟ್ರೇಟರನ್ನು ಎರಡು ತರಗತಿಗಳಲ್ಲಿರಿಸಿ ಒಂದನೇ ತರಗತಿಯವರಿಗೆ ೧೫೦ರಂತೆಯೂ ಎರಡನೇ ತರಗತಿಯವರಿಗೆ [illegible] ರಂತೆಯೂ ಸಂಬಳವನ್ನು ಹೆಚ್ಚಿಸಬೇಕೆಂತ ತಾವು ಆಲೋಚಿಸಿರುವೆವೆಂತಲೂ ಈ ಏರ್ಪಾಟಿಗೆ ಇಂಡಿಯಾ ಗವರ್ನಮೆಂಟಿನವರ ಮತ್ತು ಸ್ಟೇಟ್ ಸೆಕ್ರೆಟರಿಯ ಸಮ್ಮತಿ ಬೇಕಾಗಿರುವುದೆಂದೂ ವ್ಯಕ್ತಗೊಳಿಸಿದ ಮೇಲೆ ಮಿ। ಕೃಷ್ಣನ್ನಾಯರರವರು ತಮ್ಮ ನಿರ್ಣಯವನ್ನು ಹಿಂತೆಗದರು

ಮದ್ರಾಸು ರೆವಿನ್ಯುಬೋರ್ಡು ಮೆಂಬರುತನಕ್ಕೆ ಭಾರತೀಯರಲ್ಲಿ ಸಮರ್ಥರಾದೊಬ್ಬರನ್ನು ಸರಕಾರದವರು ನೇಮಿಸಬೇಕುದೆಂಬ ನಿರ್ಣಯವು ಬಹುಮಾನಪಟ್ಟ ದಿವಾನ್ ಬಹದೂರ ರಘುನಾಥರಾಯರವರಿಂದ ಸಭೆಯ ಮುಂದಿಡಲಾಯಿತು. ರೆವಿನ್ಯುಬೋರ್ಡು ಮೆಂಬರುತನಕ್ಕೆ ಕಲೆಕ್ಟರರುಗಳಾಗಿ ಬಹಳ ಅನುಭವ [illegible] ಬೇಕಾಗಿರುವುದರಿಂದ ಹೀಗೆ ಅನುಭವ ಪಡಿಯದಿದ್ದವರನ್ನು ಈ ಹುದ್ದೆಗೆ ನೇಮಿಸುವುದು ಅನುಚಿತವೆಂದೂ, ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿಯೂ ಪ್ರೊವಿನ್ಶಿಯಲ್ ಸರ್ವಿಸಿನಲ್ಲಿಯೂ ಪ್ರಕೃತ ಇರುವ ಭಾರತೀಯರಿಗೆ ಅನುಭವ [illegible] ಈ ಎರಡು ಸರ್ವಿಸುಗಳಲ್ಲಿ [illegible] ಭಾರತೀಯರಿದ್ದರೆ [illegible]

[illegible]
~~~~~~~~

ಭಾರತೀಯರಲ್ಲಿ ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿನವರಿಗೆ ಮೆದ್ರಾಸು ಸರಕಾರದ ಅಂಡರ್ ಸೆಕ್ರೆಟರಿಗಳಾಗಿ ನೇಮಿಸಬಹುದೆಂದು ಇರುವುದರಿಂದ ಈ ಹುದ್ದೆಗಾದರೂ ಒಬ್ಬ ಭಾರತೀಯನನ್ನು ನೇಮಿಸಬಹುದೆಂಬ ನಿರ್ಣಯದ ಮೂಲಕ ಬಹುಮಾನಪಟ್ಟ ದಿವಾನ್‌ಬಹದೂರ ರಘುನಾಥರಾಯರವರೇ ಸರಕಾರದವರನ್ನು ವಿಜ್ಞಾಪಿಸಿಕೊಂಡರು. ಈ ಹುದ್ದೆಗೆ ಬೇಕಾದ ಯೋಗ್ಯತೆಗಳುಳ್ಳ ಭಾರತೀಯರು ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿನಲ್ಲಿ ದೊರಕುವುದು ಅಸಾಧ್ಯವಾದುದರಿಂದ ಭಾರತೀಯರನ್ನು ನೇಮಿಸಲಿಕ್ಕಾಗಲಿಲ್ಲವೆಂತ ಅಪ್ಪಣೆಯಾಯಿತು. ಈ ಹುದ್ದೆಗೆ ಭಾರತೀಯರು ಅಯೋಗ್ಯರೆಂತಾದ ಮೇಲೆ ಹುದ್ದೆಯು ಭಾರತೀಯರಿಗೆ ಸಿಕ್ಕಬಹುದಾದದ್ದೆಂತ ಇರುವ ನಿಯಮವನ್ನು ಊರ್ಜಿತ ಇಡುವುದು ಅನುಚಿತವೆಂದು ಮಿ॥ ರಘುನಾಥರಾಯರವರು ವಾದಿಸಿದರು. ನಿರ್ಣಯಕ್ಕೆ ಸಭೆಯಲ್ಲಿ ಬಹುಪಕ್ಷದವರ ಸಮ್ಮತಿ ದೊರಕದಿದ್ದರಿಂದ ಅದು ಮಂಜೂರಾಗಲಿಲ್ಲ.

ಸರಕಾರಿ ಮಂಜೂರಾತಿಯನ್ನು ಪಡೆದ ಯಾವುದಾದರೂ ಸರ್ವವಿದ್ಯಾನಿಲಯದ ಗ್ರೆಜುಯೇಟ್ಸ್ ಯಾ ಬಿ. ಎ. ಮೊದಲಾದ ಪರೀಕ್ಷೆ ಪಾಸಾದವರನ್ನು ಮುನ್ಸಿಪಲ್ ಕೌನ್ಸಿಲಿನ ಮೆಂಬರುತನಕ್ಕೆ ಅಯೋಗ್ಯರನ್ನಾಗಿ ಮಾಡಕೂಡದೆಂಬ ನಿರ್ಣಯವು ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟಿತು. ಪರೀಕ್ಷೆ ಪಾಸಾಗಿ ಡಿಗ್ರಿಗಳನ್ನು ಪಡೆದು ಐದು ವರುಷಗಳಾದ ಗ್ರೆಜ್ಯುಯೇಟ್ಸರವರು ಈ ಮೆಂಬರುತನಕ್ಕೆ ಅರ್ಹರಾಗುವರೆಂತ ಸರಕಾರದವರು ತಿಳಿಸಿದ್ದರಿಂದ ನಿರ್ಣಯವು ಹಿಂತೆಗೆಯಲ್ಪಟ್ಟಿತು.

ಮುನ್ಸಿಪಲ್ ಕೌನ್ಸಿಲರರನ್ನು ಆರಿಸುವ ವೋಟರುಗಳ ಯೋಗ್ಯತೆಗಳನ್ನು ಕಡಿಮೆ ಮಾಡಕೂಡದೆಂಬ ವಿಜ್ಞಾಪನೆಯ ಕುರಿತು, ಈ ವಿಷಯವನ್ನು ಪ್ರಕೃತ ಸರಕಾರದವರು ಪರ್ಯಾಲೋಚಿಸುತ್ತಿರುವರೆಂದೂ ತಮಗೆ ಯುಕ್ತ ತೋರಿದ ತಿದ್ದುಪಾಟುಗಳನ್ನು ಮಾಡಿದ ತರುವಾಯ ವೋಟರುಗಳ ಯೋಗ್ಯತೆಗಳನ್ನು ವ್ಯವಸ್ಥಪಡಿಸುವ ಕ್ರಮಗಳನ್ನು ಪ್ರಜಾಭಿಪ್ರಾಯದ ಬಗ್ಗೆ ಪ್ರಕಟಿಸುವರೆಂಗೂ ತಿಳಿಯುತ್ತದೆ.

ಬಜೇಟು ಸಮ್ಮಂಧವಾಗಿಯೂ ಇತರ ಹಲವು ವಿಷಯಗಳ ಕುರಿತಾಗಿಯೂ ವಾದವು ನಡೆದ ನಂತರ ಸಭೆಯು ಮುಕ್ತಾಯವಾಯಿತು.

ಆಯುರ್ವೇದ ಪುನರುಜ್ಜೀವನ.

ಅಯ್ಯಾ, ಆರ್ಯಸಹೋದರರುಗಳಿರಾ, ಅನೇಕ ಸಮಯಗಳ ಹಿಂದೆ ನಮ್ಮ ಮೂಲಪುರುಷರಾದ ಅನೇಕ ಋಷಿಗಳು ಕರುಣಾ ಮೂರ್ತಿಯಾ, ಪರೋಪಕಾರತತ್ಪರತಾ, ಎಂಬೀ ಮೊದಲಾದ ಸದ್ಗುಣಗಳಿಗೆ ಅನುಗುಣವಾಗಿ ಅವರುಗಳ ಅನಂತರ ಉತ್ಪತ್ತಿಯಾದ ಪ್ರಾಣಿಗಳ ಸ್ವಾಸ್ಥ್ಯ ಸಂರಕ್ಷಣೆಗೂ ಅಸ್ವಾಸ್ಥ್ಯದ ನಿಧಾರಣೆಗೂ ಅತ್ಯಂತೋಪಯೋಗವಾದ ಉಪಾಯಗಳನ್ನು ಹುಡುಕಿ ಸಿದ್ಧಾಂತ ಗ್ರಂಥವನ್ನು ರಚಿಸಿದ್ದರೆಂಬ ಸಂಗತಿ ನಮ್ಮಗಳಿಗೆ ತಿಳದೇ ಇದೆ. ಹಾಗಿದ್ದರೂ (ವಿಷಮಾ ವಿವೇಕರೋತಿ ಬಲಾದ್ಬಲಂ) ಎಂದು ಮಾಘಕವಿ ಹೇಳಿದ ಹಾಗೆ ಕಾಲಮಾಹಾತ್ಮ್ಯೆಯಿಂದ ಆಂಥಾ ಗ್ರಂಥಗಳ ಅಧ್ಯಯನ ಮತ್ತು ಅಧ್ಯಾಪನ ಪರಿಪಾಟಿಯು ವಿಚ್ಛಿನ್ನವಾಗಿ ಮನೆ ಮನೆ ವೈದ್ಯರು ಜನಜನಿತ ಪಂಡಿತರು ಎಂಬೀ ಕೃತ್ರಿಮ ವ್ಯಕ್ತಿಗಳು ಆಯುರ್ವೇದದ ವರ್ತಮಾನವನ್ನು ತಿಳಿಯದಿದ್ದರೂ ಚಿಕಿತ್ಸಾ ವಿಷಯದಲ್ಲಿ ನಮ್ಮಗಳಿಗೆ ಸರಿ ಇನ್ಯಾರು ಇಲ್ಲ ಎಂಬ ಅಭಿಮಾನದಿಂದ ಇತರರುಗಳ ಯುಕ್ತಿಯುಕ್ತವಾದ ಮಾರ್ಗಗಳನ್ನು ತಿರಸ್ಕರಿಸುತ್ತಾ ತಾವಾದರೂ ಅಕ್ಷರ ವಿಮುಖರಾಗಿ ವ್ಯಾಧಿಗಳ ಸ್ವಭಾವವನ್ನು ಗಂಭೀರ ವಿಚಾರದಿಂದ ತಿಳಕೊಳ್ಳದೇನೆ ಅದಕ್ಕೆ ಬಾಯಿಗೆ ಬಂದ ನಾಮಧೇಯವನ್ನೂ ಕೈಗೆ ಬಂದ ಔಷಧವನ್ನೂ ಮಾಡಿಕೊಂಡು ಯಾವನಾದರೂ ಒಬ್ಬನು, ಪಂಡಿತರೇ ಅದು ಹ್ಯಾಗೆ ಎಂದು ಕೇಳಿದರೆ ಅಪ್ಪಾ ಅದೆಲ್ಲಾ ಹೇಳುವದಲ್ಲಾ ಅದನ್ನು ಗೂಢವಾಗಿಟ್ಟುಕೊಳ್ಳಬೇಕು, ಅದು ನಮ್ಮ ವಂಶಪರಂಪರೆಯಿಂದ ಬಂದದ್ದು. ಅದನ್ನು ಇನ್ನೊಬ್ಬರಿಗೆ ಹೇಳಕೂಡದು ಎಂದು ಮಿಥ್ಯಾಕಲ್ಪನೆಯಿಂದ ತಮ್ಮಗಳ ಅಜ್ಞತ್ವವನ್ನು ಅಭಿವೃದ್ಧಿಮಾಡಿಕೊಂಡು ಜನಗಳನ್ನು ವಂಚಿಸುತ್ತಾ ಇನ್ನೊಬ್ಬನಿಗೂ ಆಯುರ್ವೇದಾಧ್ಯಯನದಲ್ಲಿ ಪ್ರವೃತ್ತಿಯಾಗದಂತೆ ಮಾಡಿ ಅನರ್ಘ್ಯರತ್ನತುಲ್ಯವಾದ ಆಯುರ್ವೇದದ ಹೆಸರನ್ನು ಕೂಡಾ ಹೋಗಲಾಡಿಸಿಕೊಂಡು ಘನಾಂಧಕಾರದಲ್ಲಿ ಚೋರರ ಸಾಮ್ರಾಜ್ಯದಂತೆ ಅಜ್ಞಾನ ತಿಮಿರದಲ್ಲಿ ಚಿಕಿತ್ಸಾ ಸಾಮ್ರಾಜ್ಯವನ್ನು ನಡಿಸಿಕೊಂಡು ಇರುತ್ತಿರುವರು. ಹಿಂದೆ ಹೇಳಿದಂತೆ ಕಾಲಮಹಾತ್ಮೆಯಿಂದ ಪಕ್ಷಪಾತರಹಿತರಾದ ಮತ್ತು ವಿದ್ಯೈಕ ಜೀವಿತರಾದ ಮಹಾಮಹಿಮ ಇಂಗ್ಲಿಷ ಗವರ್ನಮೆಂಟಿನವರು ಬಂದು ವಿದ್ಯೆ ಎಂಬ ವಿದ್ಯುತ್ತನ್ನು ಪ್ರದ್ಯೋತಿಸಿ ಅಜ್ಞಾನವೆಂಬ ಗಾಢಾಂಧಕಾರದಲ್ಲಿ ಚೆದರಿರುವ ವಿವಿಧ ವಿಜ್ಞಾನಗಳೆಂಬ ರತ್ನ ಸಂಚಯಗಳನ್ನು ತೋರಿ [illegible] ತನ್ನದು ಅದು ಆತನದು ಎಂಬೀ ಬಂದ್ಸು ವಿಧ ಪರಿಷ್ಕೃತವಾದವನ್ನು ಮಾಡಿ [illegible] ಗೃಹದಲ್ಲಿ ಸ್ಥಾಪನೆಯಾಗಿಟ್ಟ ಗ್ರಂಥಗಳನ್ನು ಕ್ರಮಶಃ ಹೊರಪಡಿ [illegible] ದಿವಸ ಜ್ಞಾನವೆಂಬ ತೇಜೋಮಯವಾದ ಸೂರ್ಯಪ್ರಕಾಶವು ಪೂರ್ಣವಾಗಿ [illegible] ಪ್ರತಿಬಂಧಕವಾಗಿದ್ದರೂ ನಿರವಚ್ಛಿನ್ನವಾಗಿ [illegible]

[illegible]

ಇದನ್ನು ಓದಿದರೆ ತಿಳಿಯುತ್ತದೆ. ತರಿಸಿದರೆ ಸಿಕ್ಕುತ್ತೆ!!

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರೀಕ್ಷೆ ಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಟೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಷರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು.

ಗಣನೆಗೆ ಮಿಗಿಲಾದ ಅಕಾಶವಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ. ಪಿ. ಮೂಲಕ ೧—೬—೦.

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ.

ಅಥವಾ

ಏಜಂಟರು —(೨) ದಿ ಊಲನ್ ಮಾರ್ಟ್,
ನಂ ೧, ಮಂಗಳೂರು (ದ ಕ.)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ.

ರಸಾರ್ಣವ, ಎಂಬಿ ಮೊದಲಾದ ಗ್ರಂಥಗಳ ಹೆಸರುಗಳನ್ನೂ ಆಯುರ್ವೇದ ಡಾಕ್ಟರ್ ಕವಿರಾಜ, ಕವಿರಂಜನ, ವೈದ್ಯಶಾಸ್ತ್ರಿ, ಆಯುರ್ವೇದ ಮಹೋಪಾಧ್ಯಾಯ ಎಂಬೀ ಬಹುಮಾನಪಟ್ಟ ಬಿರುದುಗಳನ್ನೂ ದ್ರಾಕ್ಷಾರಿಷ್ಟ, ಶಾಂವಾದಿ ಚೂರ್ಣ, ಸಿದ್ಧಮಕರಧ್ವಜ, ದಶಮೂಲಾರಿಷ್ಟ, ಚಂದನಾಸವ, ಕೇಶರಂಜನ ತೈಲ, ಜಪಾಕುಸುಮ ತೈಲ ಎಂಬ ಔಷಧಿಯ ನಾಮಗಳನ್ನೂ ಕಿವಿಯಿಂದ ಕೇಳುವದಲ್ಲದೆ ಚಿಕ್ಕ ಮತ್ತು ದೊಡ್ಡ ಪಟ್ಟಣಗಳಲ್ಲಿ ಆಯುರ್ವೇದಿಕ್ ಷೋಪ್, ಆಯುರ್ವೇದ ಭವನ, ಆಯುರ್ವೇದ ಧರ್ಮಶಾಲಾ ಧನ್ವಂತರಿ ನಿಲಯ ಎಂಬ ಹೆಸರುಗಳನ್ನಿಕ್ಕಿ ಸುಂದರವಾದ ಬೋರ್ಡುಗಳನ್ನು ಹಾಕಿನ ಮುಂದುಗಡೆ ತೂಗಾಡಿಸುವದನ್ನೂ ಕೂಡಾ ಕಣ್ಣಿನಿಂದ ನೋಡಿಕೊಂಡು ಆಯುರ್ವೇದಕ್ಕೆ ಸಮ್ಮಂಧಪಟ್ಟ ಬಾರಿ ಬಾರಿ ನೋಟೀಸುಗಳೂ, ಕೆಟಲಾಗುಗಳೂ, ಅಡ್ವರ್ಟೈಸ್‌ಮೆಂಟುಗಳೂ ದಿನೇ ದಿನೇ ವೃದ್ಧಿಹೊಂದುವಂಥಾದ್ದು ನೋಡುತ್ತಲಿದ್ದೇವೆ. ಹಾಗೆ ಅಭಿವೃದ್ಧಿ ಹೊಂದುವದು ನಮ್ಮಗಳಿಗೆ ಎಷ್ಟೋ ಆರೋಗ್ಯಕ್ಕೆ ಕಾರಣವಲ್ಲದೆ, ಜ್ಞಾನಕ್ಕೂ, ಸಭ್ಯತಕ್ಕೂ ಶ್ರೇಯಸ್ಸಿಗೂ ಪರಮನಿದಾನವಾಗಿರುವದು. ಹಾಗಿರುವದರಿಂದ ಇವೆಲ್ಲಕ್ಕೆ ಕಾರಣವಾದ ಆಯುರ್ವೇದ ವಿದ್ಯೆಯ ಮರ್ಮವನ್ನು ತಿಳಕೊಳ್ಳುವದು ಪ್ರತಿಯೊಬ್ಬರಿಗೂ ಅತ್ಯಾವಶ್ಯಕವಾದ ಸಂಗತಿಯಾಗಿರುವುದೆಂದು ತರ್ಕಿಸಿ ನನಗೆ ತಿಳದಷ್ಟಿನ ವಿಷಯವನ್ನು ಜನಗಳ ಮುಂದೆ ವಿಜ್ಞಾಪಿಸುವದು ನನ್ನ ಕರ್ತವ್ಯ ಎಂದು ನಿಶ್ಚಯಿಸಿ ಆ ವಿಷಯದಲ್ಲಿ ನನ್ನ ಲೇಖನಿಯನ್ನು ಚಲಿಸುವದಕ್ಕೆ ಯತ್ನಮಾಡಿ ಅದರಿಂದಾದ ಫಲವನ್ನು ವರ್ತಮಾನಪತ್ರಿಕೆಗಳಿಗೆ ಕೊಟ್ಟರೆ ಎಲ್ಲರಿಗೂ ತಿಳಿದಂತಾಗುವದೆಂದು ಈ ವಿಷಯ ಲೇಖನವನ್ನ ಕ್ರಮಶಃ ಪತ್ರಿಕಾಕರ್ತರಿಗೆ ವಿಜ್ಞಾಪಿಸಿಕೊಳ್ಳುವೆನು.

ಸತೀಶ.

ಪಾತಿವ್ರತ್ಯದ ಕೆಚ್ಚು

ಭೋಜರಾಜನ ಕಾಲದಲ್ಲಿ ಧಾರಾಪಟ್ಟಣದಲ್ಲಿ ಒಬ್ಬ ಪತಿವ್ರತೆಯು ತನ್ನ ತೊಡೆಯ ಮೇಲೆ ಪತಿಯ ತಲೆಯನ್ನಿಟ್ಟು ಮಲಗಿಕೊಂಡಿರುವಾಗ್ಗೆ, ತನ್ನ ಮಗುವು ಬೆಂಕಿಗೆ ಬೀಳುತ್ತಿದ್ದರೂ, ಗಂಡನ ನಿದ್ರೆಯನ್ನು ಕೆಡಿಸಬಾರದೆಂಬ ಪತಿಭಕ್ತಿಯಿಂದ ದೃಢಬುದ್ಧಿಯುಳ್ಳವಳಾಗಿ, ಹಾಗೇ ಕುಳಿತಿದ್ದಳೆಂದೂ, ಆಗ ಬೆಂಕಿಯು ಆ ಮಗುವಿನ ವಿಷಯದಲ್ಲಿ ತಣ್ಣಗಾಗಿ ಇದ್ದಿತೆಂದೂ ಪುರಾಣವೃತವನ್ನು ಕೇಳುತ್ತಿರುವೆವು. ಈಗಿನ ಕಾಲದಲ್ಲಿ ಅಂಥ ಪತಿವ್ರತೆಯರು ನಮ್ಮ ಭಾರತ ಪುಣ್ಯಭೂಮಿಯಲ್ಲಿ ಅಲ್ಲಲ್ಲಿ ಗೋಚರರಾಗುತ್ತಿರುವ ಸಂಗತಿಯು ಈ ಕೆಳಗೆ ಕಂಡ ವಿಷಯದಿಂದ ಗೊತ್ತಾಗಿ ಸಂತೋಷಿಸಬೇಕಾಗಿರುವುದು. ಅದೇನಂದರೆ—ಜೀಲಂ ಜಿಲ್ಲೆಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಭೂಸ್ವಾಮಿಯು ಗ್ರಾಮಕ್ಕೆ ಸ್ವಲ್ಪ ದೂರವಾಗಿ ಮನೆಯನ್ನು ಕಟ್ಟಿಕೊಂಡು ಅಲ್ಲಿ ವಾಸಮಾಡುತ್ತಿರುವನು. ಒಂದು ವ್ಯವಹಾರದ ನಿಮಿತ್ತವಾಗಿ ಆತನು ಜೀಲಂ ಪಟ್ಟಣಕ್ಕೆ ಹೋಗಬೇಕಾಗಿ ಬರಲು, ತನ್ನ ಹೆಂಡತಿಯನ್ನೂ [illegible] ವರ್ಷದ ಗಂಡು ಮಗುವನ್ನೂ ಸಹ ಮನೆಯಲ್ಲಿ ಬಿಟ್ಟು, ತಾನು ಹೋದನು. ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಫಕೀರನು ಭಿಕ್ಷೆಗಾಗಿ ಅಲ್ಲಿಗೆ ಬಂದನು. ಭಿಕ್ಷೆಯನ್ನು ಹಾಕಿದ ಮೇಲೂ [illegible]

[illegible]

ಭಾರತೀಯರಲ್ಲಿ ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿನವರಿಗೆ ಮದ್ರಾಸು ಸರ್ಕಾರದ ಅಂಡರ್ ಸೆಕ್ರೆಟರಿಗಳಾಗಿ ನೇಮಿಸಬಹುದೆಂದು ಇರುವುದರಿಂದ ಈ ಹುದ್ದೆಗಾದರೂ ಒಬ್ಬ ಭಾರತೀಯನನ್ನು ನೇಮಿಸಬಹುದೆಂಬ ನಿರ್ಣಯದ ಮೂಲಕ ಬಹುಮಾನಪಟ್ಟ ದಿವಾನ್‌ಬಹದೂರ ರಘುನಾಥರಾಯರವರೇ ಸರಕಾರದವರನ್ನು ವಿಜ್ಞಾಪಿಸಿಕೊಂಡರು, ಈ ಹುದ್ದೆಗೆ ಬೇಕಾದ ಯೋಗ್ಯತೆಗಳುಳ್ಳ ಭಾರತೀಯರು ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿನಲ್ಲಿ ದೊರಕುವುದು ಅಸಾಧ್ಯವಾದುದರಿಂದ ಭಾರತೀಯರನ್ನು ನೇಮಿಸಲಿಕ್ಕಾಗಲಿಲ್ಲವೆಂತ ಅಪ್ಪಣೆಯಾಯಿತು ಈ ಹುದ್ದೆಗೆ ಭಾರತೀಯರು ಅಯೋಗ್ಯರೆಂತಾದ ಮೇಲೆ ಹುದ್ದೆಯು ಭಾರತೀಯರಿಗೆ ಸಿಕ್ಕಬಹುದಾದದ್ದೆಂತ ಇರುವ ನಿಯಮವನ್ನು ಊರ್ಜಿತ ಇಡುವುದು ಅನುಚಿತವೆಂದು ಮೆ| ರಘುನಾಥರಾಯರವರು ವಾದಿಸಿದರು. ನಿರ್ಣಯಕ್ಕೆ ಸಭೆಯಲ್ಲಿ ಬಹುಪಕ್ಷದವರ ಸಮ್ಮತಿ ದೊರಕದಿದ್ದರಿಂದ ಅದು ಮಂಜೂರಾಗಲಿಲ್ಲ

ಸರಕಾರಿ ಮಂಜೂರಾತಿಯನ್ನು ಪಡೆದ ಯಾವುದಾದರೂ ಸರ್ವವಿದ್ಯಾನಿಲಯದ ಗ್ರೆಜುಯೇಟ್ಸ್ ಯಾ ಬಿ ಎ ಮೊದಲಾದ ಪರೀಕ್ಷೆ ಪಾಸಾದವರನ್ನು ಮುನ್ಸಿಪಲ್ ಕೌನ್ಸಿಲಿನ ಮೆಂಬರುತನಕ್ಕೆ ಅಯೋಗ್ಯರನ್ನಾಗಿ ಮಾಡಕೂಡದೆಂಬ ನಿರ್ಣಯವು ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟಿತು ಪರೀಕ್ಷೆ ಪಾಸಾಗಿ ಡಿಗ್ರಿಗಳನ್ನು ಪಡೆದು ಐದು ವರುಷಗಳಾದ ಗ್ರೆಜ್ಯುಯೇಟ್ಸರವರು ಈ ಮೆಂಬರುತನಕ್ಕೆ ಅರ್ಹರಾಗುವರೆಂತ ಸರಕಾರದವರು ತಿಳಿಸಿದ್ದರಿಂದ ನಿರ್ಣಯವು ಹಿಂತೆಗೆಯಲ್ಪಟ್ಟಿತು

ಮುನ್ಸಿಪಲ್ ಕೌನ್ಸಿಲರರನ್ನು ಆರಿಸುವ ವೋಟರುಗಳ ಯೋಗ್ಯತೆಗಳನ್ನು ಹೆಚ್ಚಿಸಕೂಡದೆಂಬ ವಿಜ್ಞಾಪನೆಯ ಕುರಿತು, ಈ ವಿಷಯವನ್ನು ಪ್ರಕೃತ ಸರಕಾರದವರು ಪರ್ಯಾಲೋಚಿಸುತ್ತಿರುವರೆಂದೂ ತಮಗೆ ಯುಕ್ತ ತೋರಿದ ತಿದ್ದುಪಾಟುಗಳನ್ನು ಮಾಡಿದ ತರುವಾಯ ವೋಟರುಗಳ ಯೋಗ್ಯತೆಗಳನ್ನು ವ್ಯವಸ್ಥಪಡಿಸುವ ಕ್ರಮಗಳನ್ನು ಪ್ರಜಾಭಿಪ್ರಾಯದ ಬಗ್ಗೆ ಪ್ರಕಟಿಸುವರೆಂದೂ ತಿಳಿಯುತ್ತೇವೆ

ಬಜೇಟು ಸಮ್ಮಂಧವಾಗಿಯೂ ಇತರ ಹಲವು ವಿಷಯಗಳ ಕುರಿತಾಗಿಯೂ ವಾದವು ನಡೆದ ನಂತರ ಸಭೆಯು ಮುಕ್ತಾಯವಾಯಿತು

~~~~~~

'ಆಯುರ್ವೇದ' ಪುನರುಜ್ಜೀವನ

~~~~~~

ಅಯ್ಯಾ, ಆರ್ಯಸಹೋದರುಗಳಿರಾ, ಅನೇಕ ಸಮಯಗಳ ಹಿಂದೆ ನಮ್ಮ ಮೂಲ ಪುರುಷರಾದ ಅನೇಕ ಋಷಿಗಳು ಕರುಣಾ ಭೂತದಯಾ, ಪರೋಪಕಾರತತ್ಪರತಾ, ಎಕ್ಕಿಬೀ ಮೊದಲಾದ ಸದ್ಗುಣಗಳಿಗೆ ಅನುಗುಣವಾಗಿ ಅವರುಗಳ ಅನಂತರ ಉತ್ಪತ್ತಿದ ಪ್ರಾಣಿಗಳ ಸ್ವಾಸ್ಥ್ಯ ಸಂರಕ್ಷಣೆಗೂ ಅಸ್ವಾಸ್ಥ್ಯದ ಸುಧಾರಣೆಗೂ ಅತ್ಯಂತೋಪಯೋಗವಾದ ಉಪಾಯಗಳನ್ನು ಹುಡುಕಿ ನಿತಾಂತ ಅನುಗ್ರಹವನ್ನು ತೋರಿಸಿದ್ದರೆಂಬ ಸಂಗತಿ ನಮ್ಮಗಳಿಗೆ ತಿಳದೇ ಇದೆ ಹಾಗಿದ್ದರೂ (ಸಮಯ ಏವ ಕರೋತಿ ಬಲಾಬಲಂ) ಎಂದು ಮಾಘಕವಿ ಹೇಳಿದ ಹಾಗೆ ಕಾಲಮಹಾತ್ಮ್ಯೆಯಿಂದ ಅಂಥಾ ಉಪಾಯಗಳ ಅಧ್ಯಯನ ಮತ್ತು ಅಧ್ಯಾಪನ ಪರಿಪಾಟಿಯು ವಿಚ್ಛಿನ್ನವಾಗಿ ಮನೆ ಮನೆ ವೈದ್ಯರು ಜನಜನಿತ ಪಂಡಿತರು ಎಂಬೀ ಕೃತ್ರಿಮ ವ್ಯಕ್ತಿಗಳು ತುಂಬಿ ಆಯುರ್ವೇದದ ವರ್ತಮಾನವನ್ನು ತಿಳಿಯದಿದ್ದರೂ ಚಿಕಿತ್ಸಾ ವಿಷಯದಲ್ಲಿ ನಮ್ಮಗಳಿಗೆ ಸರಿ ಇನ್ನ್ಯಾರು ಇಲ್ಲ ಎಂಬ ಅಭಿಮಾನದಿಂದ ಇತರರುಗಳ ಯುಕ್ತಿಯುಕ್ತವಾದ ಮಾರ್ಗಗಳನ್ನು ತಿರಸ್ಕರಿಸುತ್ತಾ ತಾವಾದರೊ ಅಕ್ಷರ ವಿಮುಖರಾಗಿ ವ್ಯಾಧಿಗಳ ಸ್ವಭಾವವನ್ನು ಗಂಭೀರ ವಿಚಾರದಿಂದ ತಿಳಕೊಳ್ಳದ್ದೇನೆ ಅದಕ್ಕೆ ಬಾಯಿಗೆ ಬಂದ ನಾಮಧೇಯವನ್ನೂ ಕೈಗೆ ಬಂದ ಔಷಧವನ್ನೂ ಮಾಡಿಕೊಂಡು ಯಾವನಾದರೂ ಒಬ್ಬನು, ಪಂಡಿತರೇ ಅದು ಹ್ಯಾಗೆ ಎಂದು ಕೇಳಿದರೆ ಅಪ್ಪಾ ಅದೆಲ್ಲಾ ಹೇಳುವದಲ್ಲಾ ಅದನ್ನು ಗೂಢವಾಗಿಟ್ಟುಕೊಳ್ಳಬೇಕು, ಅದು ನಮ್ಮ ಪೂರ್ವಪರಂಪರೆಯಿಂದ ಬಂದದ್ದು ಅದನ್ನು ಇನ್ನೊಬ್ಬರಿಗೆ ಹೇಳಕೂಡದು ಎಂದು ಮಿಥ್ಯಾಕಲ್ಪನೆಯಿಂದ ತಮ್ಮಗಳ ಅಜ್ಞತ್ವವನ್ನು ಅಭಿವೃದ್ಧಿಮಾಡಿಕೊಂಡು ಜನಗಳನ್ನು ವಂಚಿಸುತ್ತಾ ಇನ್ನೊಬ್ಬನಿಗೂ ಆಯುರ್ವೇದಾಧ್ಯಯನದಲ್ಲಿ ಪ್ರವೃತ್ತಿಯಾಗದಂತೆ ಮಾಡಿ ಅನರ್ಘರತ್ನತುಲ್ಯವಾದ ಆಯುರ್ವೇದದ ಹೆಸರನ್ನು ಕೂಡಾ ಹೋಗಲಾಡಿಸಿಕೊಂಡು ಘನಾಂಧಕಾರದಲ್ಲಿ ಚೋರರ ಸಾಮ್ರಾಜ್ಯದಂತೆ ಅಜ್ಞಾನ ತಿಮಿರದಲ್ಲಿ ಚಿಕಿತ್ಸಾ ಸಾಮ್ರಾಜ್ಯವನ್ನು ನಡಿಸಿಕೊಂಡು ಇರುತ್ತಿರುವರು ಹಿಂದೆ ಹೇಳಿದಂತೆ ಕಾಲಮಹಾತ್ಮೆಯಿಂದ ಪಕ್ಷಪಾತರಹಿತರಾದ ಮತ್ತು ವಿದ್ಯೈಕ ಜೀವಿತರಾದ ಮಹಾಮಹಿಮ ಇಂಗ್ಲಿಷ ಗವರ್ನಮೆಂಟಿನವರು ಬಂದು ವಿದ್ಯೆ ಎಂಬ ವಿದ್ಯುತ್ತನ್ನು ಪ್ರದ್ಯೋತಿಸಿ ಅಜ್ಞಾನವೆಂಬ ಗಾಢಾಂಧಕಾರದಲ್ಲಿ ಚೆದರಿರುವ ವಿವಿಧ ವಿಜ್ಞಾನಗಳೆಂಬ ರತ್ನ ಸಂಚಯಗಳನ್ನು ತೋರಿಸಲು ಇದು ತನ್ನದು ಅದು ಆತನದು ಎಂಬೀ ಬಂದು ವಿಧ ಪರಿಷ್ಕೃತವಾದವನ್ನು ಮಾಡಿಕೊಂಡು ಪುಸ್ತಕಾಲಯ ಗೃಹದಲ್ಲಿ ಸ್ಥಾಪನೆಯಾಗಿಟ್ಟ ಗ್ರಂಥಗಳನ್ನು ಕ್ರಮಶಃ ಹೊರಪಡಿಸುತ್ತಾ ಇನ್ನೂ ದಿವಸ ಜ್ಞಾನವೆಂಬ ತೇಜೋಮಯವಾದ ಸೂರ್ಯಪ್ರಕಾಶವು ಪೂರ್ಣವಾಗಿ [illegible] ಪ್ರತಿಬಂಧಕವಾಗಿದ್ದರೂ ನಿರವಶೇಷವಾಗಿ [illegible] [illegible]

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!!

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರಿಶೀಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಸರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶವಾಣ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦.

(೧) ವಿಳಾಸ — ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

ಏಜಂಟರು — (೨) ದಿ ಊಲನ್ ಮಾರ್ಟ್,
ನಂ| ೧, ಮಂಗಳೂರು (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

~~~~~~

ರಸಾರ್ಣವ, ಎಂಬಿ ಮೊದಲಾದ ಗ್ರಂಥಗಳ ಹೆಸರುಗಳನ್ನೂ ಆಯುರ್ವೇದ ಡಾಕ್ಟರ್ ಕವಿರಾಜ, ಕವಿರಂಜನ, ವೈದ್ಯಶಾಸ್ತ್ರಿ, ಆಯುರ್ವೇದ ಮಹೋಪಾಧ್ಯಾಯ ಎಂಬೀ ಬಹುಮಾನಪಟ ಬಿರುದುಗಳನ್ನೂ ದ್ರಾಕ್ಷಾರಿಷ್ಟ, ಶಾಂಪಾದಿನಾನಕ, ಸಿದ್ಧಮಕರಧ್ವಜ ದಶಮೂಲಾರಿಷ್ಟ, ಚಂದನಾಸವ, ಕೇಶರಂಜನ ತೈಲ, ಜಪಾಕುಸುಮ ತೈಲ ಎಂಬ ಔಷಧಿಯ ನಾಮಗಳನ್ನೂ ಕಿವಿಯಿಂದ ಕೇಳುವದಲ್ಲದೆ ಚಿಕ್ಕ ಮತ್ತು ದೊಡ್ಡ ಪಟ್ಟಣಗಳಲ್ಲಿ ಆಯುರ್ವೇದಿಕ್ ಶೋಪ್, ಆಯುರ್ವೇದ ಭವನ ಆಯುರ್ವೇದ ಧರ್ಮಶಾಲಾ ಧನ್ವಂತರಿ ನಿಲಯ ಎಂಬ ಹೆಸರುಗಳನ್ನಿಕ್ಕೆ ಸುಂದರವಾದ ಬೋರ್ಡುಗಳನ್ನು ಶೋಪಿನ ಮುಂದುಗಡೆ ತೂಗಾಡಿಸುವದನ್ನೂ ಕೂಡಾ ಕಣ್ಣಿನಿಂದ ನೋಡಿಕೊಂಡು ಆಯುರ್ವೇದಕ್ಕ ಸಮ್ಮಂಧಪಟ್ಟ ಭಾರಿ ಭಾರಿ ಸೊಸೈಟಿಗಳೂ, ಕಟೆಲಾಗುಗಳೂ, ಅಡ್ವರ್ಟೈಸ್‌ಮೆಂಟುಗಳೂ ದಿನೇ ದಿನೇ ವೃದ್ಧಿಹೊಂದುವಂದಾದ್ದು ನೋಡುತ್ತಲಿದ್ದೇವೆ ಹಾಗೆ ಅಭಿವೃದ್ಧಿ ಹೊಂದುವದು ನಮ್ಮಗಳಿಗೆ ಎಷ್ಟೋ ಉದ್ಯೋಗಕ್ಕೆ ಕಾರಣವಲ್ಲದೆ, ಜ್ಞಾನಕ್ಕೂ, ಸಭ್ಯತಕ್ಕೂ, ಶ್ರೇಯಸ್ಸಿಗೂ ಪರಮನಿಧಾನವಾಗಿರುವದು ಹಾಗಿರುವದರಿಂದ ಇವೆಲ್ಲಕ್ಕೆ ಕಾರಣವಾದ ಆಯುರ್ವೇದ ವಿದ್ಯೆಯ ಮರ್ಮವನ್ನು ತಿಳಕೊಳ್ಳುವದು ಪ್ರತಿಯೊಬ್ಬರಿಗೂ ಅತ್ಯಾವಶ್ಯಕವಾದ ಸಂಗತಿಯಾಗಿರಬಹುದೆಂದು ತರ್ಕಿಸಿ ನನಗೆ ತಿಳದ ಮಟ್ಟಿನ ವಿಷಯವನ್ನು ಜನಗಳ ಮುಂದೆ ವಿಜ್ಞಾಪಿಸುವದು ನನ್ನ ಕರ್ತವ್ಯ ಎಂದು ನಿಶ್ಚಯಿಸಿ ಆ ವಿಷಯದಲ್ಲಿ ನನ್ನ ಲೇಖನಿಯನ್ನು ಚಲಿಸುವದಕ್ಕೆ ಯತ್ನಮಾಡಿ ಅದರಿಂದಾದ ಫಲವನ್ನು ವರ್ತಮಾನಪತ್ರಿಕೆಗಳಿಗೆ ಕೊಟ್ಟರೆ ಎಲ್ಲರಿಗೂ ತಿಳಿದಂತಾಗುವದೆಂದು ಈ ವಿಷಯ ಲೇಖನವನ್ನ ಕ್ರಮಶಃ ಪತ್ರಿಕಾಕರ್ತರಿಗೆ ವಿಜ್ಞಾಪಿಸಿಕೊಳ್ಳುವೆನು

ಸಶೇಷ

——o——

ಪಾತಿವ್ರತ್ಯದ ಕೆಚ್ಚು

——o——

ಭೋಜರಾಜನ ಕಾಲದಲ್ಲಿ ಧಾರಾಪಟ್ಟಣದಲ್ಲಿ ಒಬ್ಬ ಪತಿವ್ರತೆಯು ತನ್ನ ತೊಡೆಯ ಮೇಲೆ ಪತಿಯ ತಲೆಯನ್ನಿಟ್ಟು, ಮಲಗಿಕೊಂಡಿರುವಾಗ್ಗೆ, ತನ್ನ ಮಗುವು ಬೆಂಕಿಗೆ ಬೀಳುತ್ತಿದ್ದರೂ, ಗಂಡನ ನಿದ್ರೆಯನ್ನು ಕೆಡಿಸಬಾರದೆಂಬ ಪತಿಭಕ್ತಿಯಿಂದ ದೃಢಬುದ್ಧಿಯುಳ್ಳವಳಾಗಿ, ಹಾಗೇ ಕುಳಿತಿದ್ದಳೆಂದೂ, ಆಗ ಬೆಂಕಿಯು ಆ ಮಗುವಿನ ವಿಷಯದಲ್ಲಿ ತಣ್ಣಗಾಗಿ ಇದ್ದಿತೆಂದೂ ಪುರಾಣವೃತವನ್ನು ಕೇಳುತ್ತಿರುವೆವು ಈಗಿನ ಕಾಲದಲ್ಲಿ ಅಂಥ ಪತಿವ್ರತೆಯರು ನಮ್ಮ ಭಾರತ ಪುಣ್ಯಭೂಮಿಯಲ್ಲಿ ಅಲ್ಲಲ್ಲಿ ಗೋಚರರಾಗುತ್ತಿರುವ ಸಂಗತಿಯು ಈ ಕೆಳಗೆ ಕಂಡ ವಿಷಯದಿಂದ ಗೊತ್ತಾಗಿ ಸಂತೋಷಿಸಬೇಕಾಗಿರುವುದು. ಅದೇನಂದರೆ—ಜೀಲಂ ಜಿಲ್ಲೆಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಭೂಸ್ವಾಮಿಯು ಗ್ರಾಮಕ್ಕೆ ಸ್ವಲ್ಪ ದೂರವಾಗಿ ಮನೆಯನ್ನು ಕಟ್ಟಿಕೊಂಡು ಅಲ್ಲಿ ವಾಸಮಾಡುತ್ತಿರುವನು. ಒಂದು ವ್ಯವಹಾರದ ನಿಮಿತ್ತವಾಗಿ ಆತನು ಜೀಲಂ ಪಟ್ಟಣಕ್ಕೆ ಹೋಗಬೇಕಾಗಿ ಬರಲು, ತನ್ನ ಹೆಂಡತಿಯನ್ನೂ, ೩ ವರ್ಷದ ಗಂಡು ಮಗುವನ್ನೂ ಸಹ ಮನೆಯಲ್ಲಿ ಬಿಟ್ಟು ತಾನು ಹೋದನು. ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಫಕೀರನು ಭಿಕ್ಷೆಗಾಗಿ ಅಲ್ಲಿಗೆ ಬಂದನು. ಭಿಕ್ಷೆಯನ್ನು [illegible] [illegible]
~~~~~~

ಮತ್ತೂ ಆ ಯುವತಿಯೊಡನೆ ತನ್ನ ಕಾಮವಾಸನೆಯನ್ನ ಸೂಚಿಸಿ ಮಾತಾಡಲು, ಆಕೆಯು ತಿರಸ್ಕರಿಸಿದಳು. ಅಷ್ಟರಲ್ಲಿ ಸೂರ್ಯಾಸ್ತಮಯವಾಯಿತು ಫಕೀರನು ಮನೆಯನ್ನು ಬಿಟ್ಟು ಕದಲಲಿಲ್ಲ. ಹೊರಕ್ಕೆ ಹೋಗೆಂದು ಆಕೆಯು ಗದರಿಸಲು, ತುರುಕನು ತನ್ನಲ್ಲಿದ್ದ ಕತ್ತಿಯನ್ನು ತೋರಿಸಿ ಭಯಪಡಿಸಿದನು ಆದರ ಮೇಲೆ ಆಕೆಯು ಆ ದುಷ್ಟನ ದುರಾಲೋಚನೆಯನ್ನು ಊಹಿಸಿಕೊಂಡು, ಯಾವುದಾದರೊಂದು ತಂತ್ರದಿಂದ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಬೇಕೆಂದು ಯೋಚಿಸಿ ಒಂದು ಉಪಾಯವನ್ನು ಮಾಡಿದಳು ಮಗುವು ಬಹಿರ್ದೇಶಕ್ಕೆ ಹೋಗಬೇಕಾಗಿರುವುದರಿಂದ ಅದನ್ನು ಕರೆದುಕೊಂಡು ಹೋಗಲು ತನ್ನಗೆ ಅವಕಾಶ ಕೊಡು, ಬಳಿಕ ನಿನ್ನ ಇಷ್ಟದಂತೆ ನಡದುಕೊಳ್ಳುತ್ತೇನೆಂದು ಆಕೆಯು ಫಕೀರನನ್ನು ಕೇಳಿಕೊಂಡಳು ಸೂಕ್ಷ್ಮಮತಿಯಾಗಿದ್ದ ಆ ಫಕೀರನು ಯುವತಿಯ ಭಾವವನ್ನು ತಿಳಿದುಕೊಂಡು, ಅತಿ ವಿನಯದಿಂದ—ತಾನೇ ಆ ಮಗುವನ್ನು ಬಯಲ ಕಡೆಗೆ ಕರೆದುಕೊಂಡು ಹೋಗಿಸಿ ತರುತ್ತೇನೆಂದು ಹೇಳಿ ಮಗುವನ್ನು ಹೊರಕ್ಕೆ ಕರೆದುಕೊಂಡು ಹೋದನು ತನ್ನ ತಂತ್ರವು ವ್ಯರ್ಥವಾದುದನ್ನು ಕಂಡು ಆಕೆಯು ವಿಫಲ ಮನೋರಥಳಾಗದೆ ಆಗಲೂ ಧೈರ್ಯದಿಂದ ಮತ್ತೊಂದು ಸಾಹಸನ್ನು ಮಾಡಿದಳು ಫಕೀರನು ಮಗುವಿನ ಸಮೇತ ಹೊರಕ್ಕೆ ಹೋದಕೂಡಲೇ ಮನೆಯ ತಲೆ ಬಾಗಿಲನ್ನು ಮುಚ್ಚಿ, ಅಗುಳಿಯನ್ನು ಹಾಕಿ ಬಲಪಡಿಸಿದಳು ಸ್ವಲ್ಪ ಹೊತ್ತಿಗೆ ಫಕೀರನು ಬಂದು ಕದವನ್ನು ತಟ್ಟಿದನು ಆಕೆಯು ತೆರೆಯಲಿಲ್ಲ ಎಷ್ಟೋ ಆರ್ಭಟವನ್ನು ಮಾಡಿದರೂ ತೆರೆಯಲಿಲ್ಲ ಕಡೆಗೆ ಮಗುವಿನ ಕತ್ತನ್ನು ಹಿಸುಕಿ ಕೊಂದುಬಿಡುತ್ತೇನೆಂದು ಬೆದರಿಸಿದನು ಅದಕ್ಕೂ ಆಕೆಯು ಬಗ್ಗಲಿಲ್ಲ ಆ ಕಠಿಣಚಿತ್ತನಾದ ದುರಾತ್ಮನು ಪ್ರಾಣಹೋಗುವವರೆಗೂ ಆ ಮಗುವಿನ ತಲೆಯನ್ನು ಝಾಡಿಸಿ ಕದಕ್ಕೆ ಹೊಡೆಯುತ್ತ ಬಂದನು ಆಗಲೂ ತೆರೆಯಲಿಲ್ಲ ಕಡೆಗೆ ಮಗುವು ಸತ್ತಿತು ಅಲ್ಲಿಗೂ ಫಕೀರನು ಬಿಡಲಿಲ್ಲ ತನ್ನಲ್ಲಿದ್ದ ಯಾವುದೋ ಒಂದು ಆಯುಧದಿಂದ ಮನೆ ಗೋಡೆಯಲ್ಲಿ ಕನ್ನವನ್ನಿಕ್ಕಿ ಒಳಹೊಕ್ಕಬೇಕೆಂದು ಯತ್ನಿಸಿದನು ಕನ್ನ ಬಿದ್ದ ಕೂಡಲೇ ಮೊದಲು ತಲೆಯನ್ನು ಒಳಕ್ಕೆ ತೂರಿಸಿದನು ದೇಹವೆಲ್ಲಾ ಹೊರಗಿದ್ದಿತು ಅದನ್ನು ಯುವತಿಯು ಕಂಡು ಇನ್ನು ಯೋಚಿಸಿ ಫಲವಿಲ್ಲವೆಂದು ನಿರ್ಧರಿಸಿದಳು ಆಶೆಯನ್ನು ನಿರಾಶೆಮಾಡಿಕೊಂಡಳು ದೇಹಾಭಿಮಾನವನ್ನು ತೊರೆದುಬಿಟ್ಟಳು ಪ್ರಾಣವನ್ನಾದರೂ ನೀಗಿ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳಬೇಕೆಂದು ನಿಶ್ಚಯಿಸಿದಳು ಕೂಡಲೆ ಉಪಾಯವೊಂದನ್ನು ಮಾಡಿದಳು ಕುಯ್ಯುತ್ತಿಯನ್ನು ತಂದು ಕನ್ನದಲ್ಲಿ ಸಿಗ್ಗಿದ ಅವನ ಕತ್ತನ್ನು ಬಲವಾದ ಪೆಟ್ಟಿನಿಂದ ಕೊಯಿದು ಬಿಟ್ಟಳು ಅದು ಆ ಬರ್ಬರ ಪಿಶಾಚಿಯನ್ನು ಕಣ್ಣಿನಿಂದ ನೋಡುತ್ತಿರುವ ಮೂರ್ಛೆ ಹೋದಳು ಕೆಲವು ಕಾಲಾಂತರದಲ್ಲಿ ಆ ಪ್ರಯತ್ನದ ನಿರರ್ಥಕವೂ ಸತ್ತನೆಂಬ ವಿಷಯವೂ ಆಕೆಗೆ ತಿಳಿಯದು ಮನೆ ಯಜಮಾನನು ಹೊರಗಿನಿಂದ ಬಂದ ಕೂಡಲೇ ಮುಂದೆಯೇ ಅನ್ಯಮನುಷ್ಯನ ಶವವೂ ಪಕ್ಕದಲ್ಲಿ ಒಂದು ಮುಂಡವೂ ಬಿದ್ದಿರುವುದನ್ನು ಕಂಡು ದಿಗ್ಭ್ರಮೆಯುಳ್ಳವನಾಗಿ, ಹೀಗೆ ಮನೋಲನ ... ಗತಿಯನ್ನು ತಿಳಿ ಹಿದನು ಅವನ ಮನಸ್ಸು ವ್ಯಸನಾಕ್ರಾಂತವಾಯಿತು ವೈದ್ಯನ ಸಮೇತ ಪೊಲೀಸು ಅಧಿಕಾರಿಗಳು ಪೋಲೀಸು ಸುಪರಿಂಡೆಂಟರು ಮೊದಲಾದ ಅಧಿಕಾರಿಗಳೆಲ್ಲಾ ಬಂದರು ಬಾಗಿಲನ್ನು ತೆರೆದು ನೋಡಿ ಸ್ತ್ರೀಯ ಮೂರ್ಛನವನ್ನು ಉಪಶಮನಿಸಲು, ಸ್ತ್ರೀಗೆ ಸ್ಮೃತಿ ಬಂದಿಯಿತು ಬಳಿಕ ಆಕೆಯು ನಡೆದ ಸಂಗತಿಯನ್ನೆಲ್ಲಾ ಹೇಳಿದಳು ಅಧಿಕಾರಿಗಳು ಪ್ರಾಣಹತ್ಯಕ್ಕಾಗಿ ಆಕೆಯ ಮೇಲೆ ಯಾವ ದೋಷವನ್ನೂ ಆರೋಪಿಸದೆ, ಆಕೆಯ ಶೂರತ್ವಕ್ಕೂ, ಪಾತಿವ್ರತ್ಯಕ್ಕೂ ಮೆಚ್ಚಿ ಕೊಂಡಾಡಿದರು ಆ ಸಮಯದಲ್ಲಿ ಯಜಮಾನನು ಪ್ರಿಯಪುತ್ರನ ದುರ್ಮರಣಕ್ಕಾಗಿ ವ್ಯಸನಪಟ್ಟನೋ ಪ್ರಿಯಸತಿಯ ಪಾತಿವ್ರತ್ಯರಕ್ಷಣ ಸಾಹಸಕ್ಕಾಗಿ ಸಂತೋಷಪಟ್ಟನೋ ತಿಳಿಯದು "ಅಸಾರೇಖಿಲು ಸಂಸಾರೇ ಸಾರಭೂತಾಃ ಪತಿವ್ರತಾಃ" ಎಂಬ ವಚನಕ್ಕೆ ಇಂಥ ಸಾಧ್ವೀಮಣಿಗಳೇ ಲಕ್ಷ್ಯಭೂತರು ಜಗದೀಶ್ವರನು ಆಕೆಯ ಪಾತಿವ್ರತ್ಯಕ್ಕೆ ಮೆಚ್ಚಿ ಶೀಘ್ರವಾಗಿ ಸತ್ಸಂತಾನವನ್ನು ಅನುಗ್ರಹಿಸದ ಇರಲಾರನು ಜಗತ್ತಿನಲ್ಲಿ ಪುತ್ರವಾತ್ಸಲ್ಯವು ಅತಿಶಯವಾದುದು ಅದನ್ನು ಕೂಡ ತೃಣವಾಗಿ ಗಣಿಸಿ, ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡ ಆ ನಾರೀಮಣಿಯ ಧನ್ಯತೆಯನ್ನು ಎಲ್ಲರೂ ಕೊಂಡಾಡಬೇಕಲ್ಲವೇ। ಮ್ಮ ಸ್ತ್ರಾ

~~~~~~~~

ಚಿನ್ನಾಭರಣ ಹೊಸೂರು ಎಂಬಲ್ಲಿಂದ ಜಿ ಎಚ್ ಬೆಡ್‌ಕೊಕ್ (Captain G H Badcock) ದೊರೆಗಳು ಮದ್ರಾಸು ವೀಕ್ಲಿಟೈಮ್ಸ್ ಎಂಬ ವರ್ತಮಾನಪತ್ರದಲ್ಲಿ ಈ ಕೆಳಗಿನ ಲೇಖನ ಪ್ರಕಟಿಸಿದ್ದಾರೆ

"ಬಹು ಜನರ ಉಪಯೋಗದ ಬಗ್ಗೆ ಈ ಸಂಗತಿ ಪ್ರಕಟಿಸಲಿಕ್ಕೆ ಯೋಗ್ಯವಾದದ್ದೇ ಕಳೆದ ಜನವರಿ 29ನೇ ತಾರೀಕಿನ ದಿವಸ ಈ ಗ್ರಾಮದ ಒಬ್ಬ ನಶೆ ಅಂಗಡಿಗಾರನ 9 ವರುಷ ಪ್ರಾಯದ ಒಂದು ಹುಡುಗಿಯು ಕಾಣೆಯಾದಳು ರಾತ್ರಿಯಲ್ಲಿ ಹುಡುಗಿಯು ಮನೆಗೆ ಬಾರದೆ ಇದ್ದಾಗ್ಯೂ ಆಕೆ ನೆರೆಮನೆಯಲ್ಲಿ ಇರಬಹುದೆಂತ ಹೆತ್ತವರು ಗಣ್ಯ ಮಾಡಲಿಲ್ಲ. ಮರುದಿನ ಬೆಳಿಗ್ಗೆ ಆಕೆ ಬಾರದ್ದರಿಂದ ಹೆತ್ತವರು ಭಾದ್ರಿಯಾಗಿ ಕಾಣೆಯಾದ ವರ್ತಮಾನ ಪ್ರಕಟಿಸಿ ಕೆರೆ, ಭಾವಿ, ಹಳ್ಳ ಹೊಂಡ ಮೊದಲಾದವುಗಳಲ್ಲಿ ಹುಡುಗಿಯನು ಹುಡುಕಿದರು ... ಇನಾಮು ಕೊಡೋಣಾಗುವದೆಂತ ಪ್ರಕಟಿಸಿತು. ಒಂದು ದಿನ ಕಟ್ಟಿಗೆ ಕಡಿಯುವವನು ಸಮೀಪ ಕಾಡಿನಲ್ಲಿ ಕಟ್ಟಿಗೆ ಕಡಿಯುವಾಗ್ಯೆ ನರಧ್ವನಿಯೋಪಾದಿ ಧ್ವನಿ ಕೇಳಿತು. ಏನೆಂಬುದು ವಿಚಾರಿಸಿಕೊಳ್ಳಲಿಕ್ಕೆ ಹುಡುಕಿದ್ದಲ್ಲಿ ಆಳವಾದಂಥ ಕತ್ತಲೆ ಹೊಂಡದಲ್ಲಿ ಪುನಹ ಧ್ವನಿಕೇಳಿತು . ಬಹು ಜನರು ಕೂಡಿದರು ಪರಂತು ಹೊಂಡದಲ್ಲಿ ಇಳಿಯುವದಕ್ಕೆ ಯಾರೂ ಸಮ್ಮತಿಸಲಿಲ್ಲ. ಹೊಂಡ 40 ಅಡಿ ಕಂತವಿತ್ತು ಒಬ್ಬ ಧೈರ್ಯಶಾಲಿಯು ಇಳಿದು ಹುಡುಗಿಯನ್ನು ಸಜೀವ ಮೇಲಕ್ಕೆ ತಂದನು ಹುಡುಗಿಯು ಅನ್ನ ಪಾನವಿಲ್ಲದೆ ಗಟ್ಟಿ ಮಾತಾಡುವಷ್ಟು ಶಕ್ತಿಹೀನಳಾಗಿ ಬಹಳ ಕ್ಷೀಣವಾಗಿದ್ದಳು ಒಂದು ದೊಡ್ಡ ಬಲಿಷ್ಠ ಹೆಂಗಸು ಆಕೆಯನ್ನು ಅಲ್ಲಿಗೆ ಕರತಂದು ಆಕೆಯು ಧರಿಸಿದ್ದ ಬೆಳ್ಳಿಯ ಉಡಿದಾರವನ್ನು ತೆಗೆದು ಹೊಂಡದಲ್ಲಿ ಹಾಕಿದಳು ಎಂತ ಪ್ರಯಾಸದಿಂದ ಹೇಳುವಷ್ಟು ಮಾತ್ರ ಸಾಮರ್ಥ್ಯ ಹುಡುಗಿಗೆ ಇತ್ತು ಹೊಂಡದಲ್ಲಿ ಸರ್ಪ ಇತ್ತು ಎಂತ ಹುಡುಗಿ ಹೇಳಿತು ಅಹಾ ಇಪ್ಪತ್ತು ರೂಪಾಯಿ ಬೆಲೆಯಾಗುವ ಉಡಿದಾರದ ಬಗ್ಗೆ ಈ ಬಾಲಕಿಯನ್ನು ಅನ್ನವಿಲ್ಲದೆ ಸಾಯುವ ಹಾಗೆ ಹೊಂಡದಲ್ಲಿ ದೂಡಿದ್ದೂ, 6 ದಿವಸಗಳ ವರೆಗೆ ಸರ್ಪಗಳಿರುವ ಕತ್ತಲೆ ಹೊಂಡದಲ್ಲಿ ಅನ್ನವಿಲ್ಲದೆ ಆ ಮಗು ಉಳಿದು ಮೇಲಕ್ಕೆ ಸಜೀವ ಬಂದದ್ದೂ ಆಶ್ಚರ್ಯವೇ ಆ ಮಗುವಿನ ಹೇಳಿಕೆ ಕೇಳುತ್ತಲೇ ಸರ್ವಾಂಗ ರೋಮಾಂಚವಾಗುತ್ತದೆ ಪಕ್ಕನೇ ಆ ಹುಡುಗಿಯನ್ನು ಕೊಂದರೆ ಆ ಹುಡುಗಿಗೆ ಅಷ್ಟು ಪೀಡೆ ಇರುತ್ತಿದ್ದಿಲ್ಲಾ—ಆಹಾ ಕ್ರೂರತನವೇ!"

"ಹಿಂದು ದೇಶದಲ್ಲಿ ಮಕ್ಕಳಿಗೆ ಚಿನ್ನಾಭರಣ ಹಾಕಿ ಜೀವಕ್ಕೇನೇ ಅಪಾಯ ಉಂಟುಮಾಡುವದು ವಾಡಿಕೆಯಾಗಿರುವದರಿಂದ ಈ ವರ್ತಮಾನ ಸರ್ವ ವರ್ತಮಾನ ಪತ್ರಗಳಲ್ಲಿಯೂ, ಮುಖ್ಯವಾಗಿ ದೇಶಭಾಷಾ ವರ್ತಮಾನಪತ್ರಗಳಲ್ಲಿ ಪ್ರಕಟಿಸುವುದು ಅಗತ್ಯವೆಂತ ನಾನು ಅಭಿಪ್ರಾಯಪಡುತ್ತೇನೆ"

~~~~~~~~

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು

~~~~~~~~

ಅಣಿಲೆ ಕಾಯಿ ಪಂಡಿತರು

ಉದರ ಪೂರ್ತಿಗೆ ಯಾವದೊಂದು ವೃತ್ತಿಯೂ ದೊರಕದ ವ್ಯಕ್ತಿಗಳು ವೈದ್ಯರೆನ್ನಿಸಿಕೊಳ್ಳುವದು ಸುಲಭೋಪಾಯವೆಂದದನ್ನು ಅವಲಂಬಿಸುತ್ತಾರೆ ಹೆಚ್ಚು ಧೈರ್ಯವುಳ್ಳವರು ಈ ವೃತ್ತಿಯೊಂದಿಗೆ ಮಂತ್ರವಾದಿಗಳೆನ್ನಿಸಿಕೊಳ್ಳುವದಕ್ಕೂ ಅಂಜುವದಿಲ್ಲ ಊರ ವೈದ್ಯರಲ್ಲಿ ಕೆಲವರು ನಿಜವಾಗಿಯೂ ಔಷಧಾನುಭವವುಳ್ಳವರೇ ಅವರ ಕೊಡುವ ಮದ್ದು ಆಯಾವ ರೋಗಕ್ಕೆ ಉಪಯುಕ್ತವಾದದ್ದೇ ಪರಂತು ರೋಗ ಪರೀಕ್ಷೆಯು ಸುಲಭಸಾಧ್ಯವಲ್ಲ ಅಂಗೋಪಾಂಗ ಪರಿಜ್ಞಾನವು ಚೆನ್ನಾಗಿ ತಿಳಿದವರೇ ರೋಗವಿಂಥಾದ್ದೇ ಎಂದು ನಿರ್ಧರಿಸಿದ ಬಳಿಕ ತಕ್ಕ ಚಿಕಿತ್ಸೆಯನ್ನು ತೊಡಗುವರು

BERNA WATCH COMPANY.
ಬರ್ನಾ ವಾಚು ಕಂಪನಿ.

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು ಗೊತ್ತಾದ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳ್ಳು ಖಂಡಿತವಾಗಿ ತೃಪ್ತಿ ಕೊಡುವವು

ನಮ್ಮ 'ಮೆಕ್ಸಿಮ್'
ವಾಚನ್ನು ಬರವಸೆ
ಯಿಂದ ಕೊಂಡು
ಕೊಳ್ಳಿರಿ
ನಿಕಲ್ ಕೇಸಿನಲ್ಲಿ
ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ
ರೂ ೧೪-೮-೦
ನಮ್ಮ 'ಮ್ಯಾ ಡಿ ಪಿ'
ನಿಕಲ್ ಕೇಸಿನಲ್ಲಿ
ರೂ ೧೪-೦-೦.
ಬೆಳ್ಳಿ ಕೇಸಿನಲ್ಲಿ
ರೂ ೧೮-೮-೮
ಕಟಲಾಗನ್ನು ಉಚಿತವಾಗಿ
ಕಳುಹಿಸಿಕೊಡುವೆವು



ನಮ್ಮ 'ಚಾರ್ಮರ್'
ನಿಕಲ್ ಕೇಸಿನಲ್ಲಿ
ರೂ ೧೬-೦-೦
ಬೆಳ್ಳಿ ಕೇಸಿನಲ್ಲಿ
ರೂ. ೨೧-೦-೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ
ರೂ ೧೮-೦-೦
ಸಿಲ್ವರ್ ಕೇಸಿನಲ್ಲಿ
ರೂ. ೨೩-೦-೦
ನಮ್ಮ 'ಬೆಸ್ಟ್'
ನಿಕಲ್ ಕೇಸಿನಲ್ಲಿ
ರೂ. ೨೧-೦-೦
ಬೆಳ್ಳಿ ಕೇಸಿನಲ್ಲಿ
ರೂ. ೨೮-೦-೦

ಎಲ್ಲಾ ಗಡಿಯಾರುಗಳು ಚಂಟ್ಸ್ ಸ್ಟಾಬೆಲ್ಲಿರುವವು. ವಾಚುಗಳನ್ನು ... ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮೂಲಕ ಕಳುಹಿಸುವೆವು. ನಮ್ಮ 59 ... ರೋಡ್ ಮುಂಬಯಿ ಆಫೀಸಿನಲ್ಲಿಯೂ ...
~~~~~~~~

ಅಂಥ ಅನುಭವಶಾಲಿಜನರು ಕೊಡುವ ಮದ್ದು ಅದೃಷ್ಟವಶಾತ್ ರೋಗಿಗೆ ಹಿಡಿಯುವದೂ ಉಂಟು, ವೈವಸ್ವತಾಲಯದ ದಾರಿಯನ್ನು ತೋರಿಸುವದೂ ಉಂಟು. ಸಂಸಾರ ಶರಧಿಯಲ್ಲಿ ಓಲಾಡುವ ಮನುಷ್ಯನು ಅದರ ಅಲೆಗಳಿಗೆ ಇಳಿತವೇ ಇಲ್ಲ, ಯಾವಾಗಲೂ ಭರ್ತವೇ ಎಂಬ ಜ್ಞಾನ ಸಂಪಾದಿಸಿದವನಾಗಿ ಮಳೆಗಾಲದ ವೆಚ್ಚಕ್ಕೆ ಮೊದಲಾಗಿಯೇ ಜಾಗರೂಕತೆಯನ್ನು ಮಾಡಲು ತಪ್ಪದೆ ಅನುದಿನದ ಖರ್ಚು ಆದಾಯವನ್ನು ಮೀರದಂತೆ ತನ್ನ ಕುಟುಂಬದ ಆಡಳಿತೆಯನ್ನು ನಡಿಸಿಕೊಂಡು ಬರುವನು ಎಷ್ಟರಮಟ್ಟಿಗೆ ಅರ್ಥಶಾಸ್ತ್ರವನುಸರಿಸಬೇಕೆಂಬ ಮಿತವು ಹಣದ ಆಶೆಯ ಮುಂದೆ ಅಜ್ಞಾನ ಪಥಕ್ಕೆ ಸೇರುವದೇ ಇಲ್ಲ ಅಂಥ ವ್ಯಕ್ತಿಗಳಿಗೆ ಸ್ವದೇಶಿ ಚಿಕಿತ್ಸಕರು ಪರಮ ಪ್ರಿಯರು. ಅಲ್ಪಸ್ವಲ್ಪ ದ್ರವ್ಯ ಅವರ ಕೈಗೆ ತಗಲಿಸಿಬಿಟ್ಟರೆ ತಾಮಸವಿಲ್ಲದೆ ಮಾತ್ರೆ ರಸಾಯನ ತೈಲ ಮೊದಲಾದ್ದು ಸಿದ್ಧವಾಗಿ ದೊರಕುತ್ತದೆ ರೋಗಿಗಳ ನಾಲಿಗೆಗಳಿಗೆ ರುಚಿಕರವಾಗಿರುವಂತೆ ಸಕ್ಕರೆ ಅಥವಾ ಬೆಲ್ಲ ಕೂಡದ ಮದ್ದೇ ಪಂಡಿತನು ಕೊಡಲೊಲ್ಲನು. ಡಾಕ್ಟರರ ಬಳಿಗೆ ಹೋದರೆ ಅವರ ಪರೀಕ್ಷೆಯ ವಿಧಾನವೂ ಔಷದಿಗಳ ಅರುಚಿಯೂ ಅವುಗಳ ಹೆಚ್ಚು ಮೌಲ್ಯವೂ ಮನಸ್ಸಿನ ನೈರ್ಮಲ್ಯವನ್ನೇ ಕೆಡಿಸಿಬಿಡುತ್ತವೆ ಆ ಸಮಯದಲ್ಲೇ ಜ್ಞಾನವು ತಲೆದೋರುವುದು ಆಯುರ್ಬಲವಿದ್ದವನಿಗೆ ಹೆಸರು ಪೂರ್ತಿ ಮದ್ದು ಯಾವದಾದರೂ ಬಿದ್ದರಾಯಿತು ಇಂಥ ತತ್ವಜ್ಞಾನವುದಯವಾಗುವ ಕಾಲದಲ್ಲಿ ದೈವವಶಾತ್ ಕುಲಪುರೋಹಿತರು ಹೇಳಿಕಳುಹಿಸಿದ ಹಾಗೆ ಹಸನ್ಮುಖಿಗಳಾಗಿ ಒದಗಿದರೆ ಸರಿ—ಅಯ್ಯಾ ಯಜಮಾನರೇ! ಒಳೆ ಔಷದಿಯಿಂದುಪಯೋಗವೇನಿದೆ! ತಂತು ಮಾತ್ರ ಮದ್ದು ಕೊಟ್ಟರಾಯಿತು ಛೂ! ಛೂ! ಹುಂ! ಹುಂ! ಇಕೊಳ್ಳಿ! ನಿಮ್ಮ ಕುಲದೇವರು ಈಗ ನನ್ನ ಕೂಡೆ ಮಾತಾಡುತ್ತಾರೆ. ತನ್ನ ದಯದಿಂದ ನಿಮ್ಮ ವಹಿವಾಟೆಲ್ಲ ಪರಿಷ್ಕಾರವಾಗಿ ನಡಿಯುತ್ತದೆ ತನ್ನ ನೆನಪೇ ನಿಮಗೆ ಕಡಿಮೆಯಾಯಿತು ಎಂಬ ಕೋಪವು ಕೆರಳಿಕೊಂಡಿದೆ "ಅಯ್ಯೋ! ಸ್ವಾಮಿ ಪ್ರತಿ ಸಂವತ್ಸರಾದಿಯಲ್ಲಿ ಮತ್ತು ನಿಯಮಿತ ಕಾಲಗಳಲ್ಲಿ ನಾನು ಇದು ವರೆಗೆ ಶಕ್ತಿಮೀರಿ ಭಕ್ತಿಯಿಂದ ಉತ್ಸಹಾದಿಗಳನ್ನು ಮಾಡಿಸಿ ದೇವರ ಪ್ರೀತಿಗೆ ಪಾತ್ರನಾಗಿದ್ದೇನೆ ತಾವು ಹೀಗೆ ಅಪ್ಪಣೆ ಕೊಡುವದು ನನ್ನ ದುರದೃಷ್ಟವೇ ಸರಿ" ಎಂದು ಯಜಮಾನನು ಪ್ರತ್ಯುತ್ತರಕೊಡುವನು ಹಾಗಲ್ಲ ಸ್ವಾಮಿ! ನಿಮ್ಮ ಕುಲದೇವಿ ನನ್ನ ಕಿವಿಯಲ್ಲಿ ಹೇಳಿದ ಮಾತು ನಿಮ್ಮ ಕಿವಿಗೆ ಹಾಕಿದೆ ಸಿಟ್ಟುಮಾಡಬೇಡಿ ಎಂದು ಪುರೋಹಿತರ ಬಾಯಿಯಿಂದ ಪ್ರತಿ ವಚನ ಹೊರಡುವಷ್ಟರಲ್ಲಿ ಗೋಡೆಗೆ ತಗಲಿಸಿಟ್ಟ ಘಡಿಯಾರ ರಾಂ ರಾಂ ಶಬ್ದಮಾಡಿಯೇ ತೀರಿತು 'ಸೈ! ಹ್ಯಾಗೆ ಸತ್ಯ! ನಾನು ಹೇಳಿದ್ದು ಸತ್ಯವೆಂದು ದೇವರೇ ದೃಷ್ಟಾಂತ ತೋರಿಸಿದನಲ್ಲ ಇನ್ನು ತಾಮಸ ಮಾಡಿದರೆ ಮೋಸವಾಗುವದು ಎಂಬ ಎಚ್ಚರಿಕೆಯನ್ನು ಪುರೋಹಿತರು ಕೊಟ್ಟಾಯಿತು. ತತ್ಕಾಲಕ್ಕೆ ಹತ್ತು ರೂಪಾಯಿ ವೆಚ್ಚವಾಗುವಷ್ಟು ಸೇವೆಯಾಗಲಿಕ್ಕೆ ಸಂಕಲ್ಪವಾಯಿತು ಆ ದೇವಸ್ಥಾನದ ಬಚ್ಚರು ಬಂದೇಬಂದರು ಹಣವೀಸಿಕೊಂಡು ಪುರೋಹಿತರ ಸಂಗಡ ಮರಳಿದರು ದಾರಿಯಲ್ಲಿ ತನ್ನ ಶುಲ್ಕವೆಲ್ಲಿದೆ ಎಂದು ಪುರೋಹಿತರು ನೆನಪು ಕೊಟ್ಟು ಚತುರ್ಥಾಂಶವನ್ನು ಪಡದರು. ಸ್ವಲ್ಪ ದೂರ ಹೋಗುವಷ್ಟರಲ್ಲಿ ವೈದ್ಯನು ಸಿಕ್ಕಿ "ಸ್ವಾಮೀ! ನನ್ನ ಬಾಯಿಗೆ ಅಡ್ಡ ಬರಬೇಡಿ," ತಮ್ಮ ಕಾಲಿನ ಸಿಡಿವಾತಕ್ಕೆ ಧರ್ಮಕ್ಕೆ 'ಮರಿನತರಾಂ' ಎಂದು ಪ್ರಾರ್ಥಿಸಿಕೊಂಡದೆ ನಾಳೆ ಬೆಳಿಗ್ಗೆ ೯ ಘಂಟೆಗೆ ಯಜಮಾನನನ್ನು ಕಂಡು ನಿನ್ನ ಮನಸಾಭೀಷ್ಟ ಸಲ್ಲಿಸಿಕೊಡುವೆನೆಂದು ವಾಗ್ದಾನವು ಅವನಿಗೆ ಸಿಕ್ಕಿತು

(ಮುಂದೆ ಸಾಗುವದು)

ಹೆಲ್ಲೆಸ್ ಕೊಮೆಟ್ ಎಂಬ ಧೂಮಕೇತು

ಕಳೆದ ವರುಷ ಸಪ್ಟಂಬರ ತಿಂಗಳ 11ನೇ ತಾರೀಕಿನಿಂದ ಅಂತರಿಕ್ಷದಲ್ಲಿ ಕಾಣಿಸಿಕೊಂಡ ಹೆಲ್ಲೆಸ್ ಕೊಮೆಟ್ ಎಂಬ ಚುಕ್ಕಿಯು ಇದೇ ಬರುವ ಮೇ ತಿಂಗಳ ತಾ 18ಕ್ಕೆ ಭೂಗೋಳಕ್ಕೆ ಬಹಳ ಹತ್ತಿರ ಸಾರುವುದೆಂದು ಸಂಕೇತ ಮಾಡಲ್ಪಟ್ಟಿರುವುದು ಈ ಚುಕ್ಕಿಯು ಕಾಣಿಸಿಕೊಂಡದ್ದರಿಂದ ದೇಶದಲ್ಲಿ ಅನೇಕ ಶುಭಾಶುಭಗಳು ಪ್ರಾಪ್ತವಾಗುವವು ಎಂತ ಕೆಲವರ ಗ್ರಹಿಕೆ ಇರುವದು ಆದರೆ ಕೆಲವು ವರುಷಗಳ ಹಿಂದೆ ಸಹಾ ಇದು ಕಾಣಿಸಿಕೊಂಡಾಗ ಅಂಥಾ ಶುಭಾಶುಭಗಳು ಏನೂ ಸಂಭವಿಸಲಿಲ್ಲವೆಂತ ತೋರಿಬರುತ್ತದೆ. ಒಂದು ವೇಳೆ ಹಾಗೇನಾದರೂ ಸಂಭವಿಸಿದ್ದರೂ ಅದು ಕಾಕತಾಳಿಯ ಮಾತಿನಂತೆ ಸಮಯ[illegible] ಧೂಮಕೇತುವಿ[illegible] ತೋರಿಬರುವಿಕೆಯಿಂದಲ್ಲವೆಂತ ಹಲವು ಜ್ಯೋತಿಷ್ಕರರು ಅಭಿಪ್ರಾಯಪಡುವರು.

ಖಗೋಲ ಶಾಸ್ತ್ರದ ಚರಿತ್ರೆಯನ್ನು ಚೀನಾದೇಶದವರ ದಾಖಲೆಗಳ ಪ್ರಕಾರ ಪರಿಶೋಧಿಸಿದ್ದಲ್ಲಿ ಈ ಧೂಮಕೇತುವು ಕ್ರಿಸ್ತಶಕದ ಆರಂಭ ಕಾಲದಲ್ಲಿಯೇ ಕಾಣಿಸಿಕೊಂಡಿತ್ತೆಂದು ತೋರಿಬರುತ್ತದೆ ಹೆಲ್ಲೆಸ್ ಕೊಮೆಟಿನ ದರ್ಶನವು ಕ್ರಿ. ಶ. 1066 ಮತ್ತು 1456 ರಲ್ಲಿ ಬಹಳ ಗಂಭೀರವಾಗಿತ್ತಂತೆ 'ವಿಲಿಯಂ ದಿ. ಕೊಂಕರರ್' ಎಂಬ ಆಂಗ್ಲೇಯ ನಾಯಕನು ಈ ಧೂಮಕೇತುವಿನ ದರ್ಶನವನ್ನು ಕಂಡು, ರಾಜ್ಯಕ್ಕೆ ಒಬ್ಬ ಅರಸನು ಬೇಕಾಗಿರುವನು ಎಂತ ಈ ಚುಕ್ಕಿಯ ದರ್ಶನವು ಸೂಚಿಸಿರುವುದೆಂತ ಹೇಳಿ ತನ್ನ ಬೆಂಬಲದವರನ್ನು ಪ್ರೋತ್ಸಾಹಪಡಿಸಿದನೆಂಬದಾಗಿ ಒಂದು ಕಟ್ಟುಕಥೆ ಇರುವುದು. 1456ರಲ್ಲಿ ಇದು ಕಾಣಿಸಿಕೊಂಡಾಗ ಕೋನ್ಸ್ಟಂಟಿನೋಪಲ್ ಎಂಬ ಪಟ್ಟಣವು ತುರ್ಕರ ಕೈವಶವಾಗಿ ಕ್ರೈಸ್ತರಿಗೂ ತುರ್ಕರಿಗೂ ಯುದ್ಧ ನಡಿಯುತ್ತಿತ್ತು. ಆ ಕಾಲದಲ್ಲಿ ಎಲ್ಲಾ ಕ್ರೈಸ್ತಮಂಡಳಿಯ ಜಗದ್ಗುರುಗಳಾದ ಪೋಪಕೇಲಿಕ್ಸಟಸ್ III ಎಂಬವರು ಈ ಚುಕ್ಕಿಯ ದರ್ಶನದಿಂದ ಹೀಗೆ ಅನರ್ಥ ಉಂಟಾಯಿತೆಂತ ಗ್ರಹಿಸಿ ತುರ್ಕರನ್ನೂ ಈ ಚುಕ್ಕಿಯನ್ನೂ ಶಪಿಸಿ ಚುಕ್ಕಿಯು ಬೆದರಿ ಓಡಿ ಹೋಗುವಂತೆ ಕ್ರೈಸ್ತ ದೇವಾಲಯಗಳ ಗಂಟೆಗಳನ್ನು ಬಾರಿಸುವರೆ ಅಪ್ಪಣೆಕೊಟ್ಟಿರುವರೆಂದು ಇನ್ನೊಂದು ಕಟ್ಟುಕಥೆಯ ಮೂಲಕ ತಿಳಿದುಬರುವುದು ಪೋಪಸಾಹೇಬರವರು ಹೀಗೆ ವರ್ತಿಸಿದ್ದು ನಿಜವಲ್ಲವೆಂತ ನಂತರದಲ್ಲಿ ರುಜು ಪಡಿಸಿರುವುದು

ಖಗೋಲ ಶಾಸ್ತ್ರಜ್ಞರಾದ ನ್ಯೂಟನ್ ಪಂಡಿತಮಹನೀಯರು 'ಗ್ರೇವಿಟೇಶನ್' ಎಂಬ ಗುರುತ್ವಾಕರ್ಷಣ ಶಕ್ತಿಯ ಸಿದ್ಧಾಂತವನ್ನು ಕಂಡುಹಿಡಿದು ಈ ಸಿದ್ಧಾಂತ ಮೇರೆಗೆ ಚುಕ್ಕಿಗಳ ಚಲನೆಯ ಗಣಿತ ಶಾಸ್ತ್ರವನ್ನು 1680ರಲ್ಲಿ ತೋರಿ ಬಂದ ಪ್ರಥಮ ಚುಕ್ಕಿಯಿಂದ ನಿಷ್ಕರ್ಷಿಸಿದರು 1682ರಲ್ಲಿ ಇನ್ನೊಂದು ಚುಕ್ಕಿಯು ಕಾಣಿಸಿತು ಇದರ ಚಲನಾಕ್ರಮ ಮೊದಲಾದವುಗಳನ್ನು ಜ್ಯೋತಿಷಜ್ಞರಾದ ಪ್ರಖ್ಯಾತ ಮಿ| ಹೆಲ್ಲಿ ಎಂಬವರು ಗಣಿತ ಶಾಸ್ತ್ರಕ್ಕೆ ಒಳಪಡಿಸಿ ಬಹಳ ಪರಿಶ್ರಮದಿಂದ ಇದೇ ಚುಕ್ಕಿಯು 1758ರಲ್ಲಿ ತಿರುಗಿ ಕಾಣಿಸಿಕೊಳ್ಳುವುದೆಂತ ಪ್ರವಾದಿಸಿದರು ಇವರ ಗಣಿತ ನಿರ್ಣಯಗಂತೆಯೇ ಇದು 1758ರಲ್ಲಿ ಕಾಣಿಸಿಕೊಂಡಿತು ಈ ಚುಕ್ಕಿಯ ಚಲನೆಯ ಗತಿಯು ಇವರಿಂದ ಪ್ರಥಮತಾ ನಿರ್ಣಯಿಸಲ್ಪಟ್ಟದ್ದರಿಂದ ಇದಕ್ಕೆ ಇವರ ಹೆಸರನ್ನನುಸರಿಸಿ ಹೆಲ್ಲೆಸ್ ಕೊಮೆಟ್ ಎಂತ ಹೆಸರಿಟ್ಟಿರುವರು ಹೀಗೆ ಖಗೋಲ ಗಣಿತವನ್ನು ಪ್ರಥಮದಲ್ಲಿ ಈ ಧೂಮಕೇತುವಿನ ಮುಖಾಂತರ ರುಜುಪಡಿಸಿದ ಕೀರ್ತಿಯು ಆಂಗ್ಲೇಯರಾದ ಮಿ| ಹೆಲ್ಲಿರವರದಾಗಿರುವುದು

ಪ್ರತಿ 76 ವರುಷಕ್ಕೊಮ್ಮೆ ಈ ಧೂಮಕೇತುವು ಆಕಾಶದಲ್ಲಿ ತೋರಿಬರುವುದು ಕೆಲವು ವರುಷಗಳ ಹಿಂದೆ ತೋರಿದ ಪರಿಮಾಣದಲ್ಲಿಯೇ ಇದು ಈಗ ಕಾಣಿಸಿಕೊಳ್ಳುವುದಿಲ್ಲ ಯಾಕಂದರೆ ಸೂರ್ಯಮಂಡಲದ ಹತ್ತಿರ ಸೇರುತ್ತಾ ಅದರ ಪ್ರಭೆಯಿಂದ ಧೂಮಕೇತುಗಳ ಪರಿಮಾಣವು ಅವುಗಳ ಬಾಲರೂಪದಲ್ಲಿ ಜರಿದುಹೋಗಿ ಪರಿಮಾಣದಲ್ಲಿ ಇವುಗಳು ಚಿಕ್ಕದಾಗುತ್ತಾ ಬರುತ್ತಿರುವವು ಈ ತಿಂಗಳ ಅಂತ್ಯದಲ್ಲಿ ಈ ಧೂಮಕೇತುವು ಸೂರ್ಯನ ಇನ್ನೊಂದು ಕಡೆಯನ್ನು ಸೇರುವುದರಿಂದ ಸೂರ್ಯೋದಯದ ಮುಂಚೆ ಇದನ್ನು ಬರೇ ಕಣ್ಣಿನಿಂದ ನೋಡಲು ಬಹಳ ಅನುಕೂಲವಾಗಿರುವುದು. ಮೇಲೆ ಸೂಚಿಸಿದಂತೆ ಮೇ ತಿಂಗಳ ೧೮ನೇ ತಾರೀಕಿನಲ್ಲಿ ಇದು ಭೂಗೋಲಕ್ಕೆ ಸಾಧ್ಯವಿದ್ದಷ್ಟು ಹತ್ತಿರ ಬರುವುದು ಅಂದರೆ ಆ ದಿನ ಈ ಚುಕ್ಕಿಗೂ ಭೂಮಂಡಲಕ್ಕೂ ೧೪ ಮಿಲಿಯ ಮೈಲುಗಳ ದೂರವಿರುವುದು ಇದೇ ದಿನ ಇದು ಸೂರ್ಯಬಿಂಬವನ್ನು ಹಾದುಹೋಗುತ್ತಿರುವುದು ಹೀಗೆ ಹಾದುಹೋಗುತ್ತಿರುವಾಗ ಇದರ ಬಾಲವು ಭೂಮಂಡಲಕ್ಕೆ ಎದುರಾಗಿ ತಾಗುವುದು ಇದರಿಂದ ಈ ಧೂಮಕೇತುವಿನ ಬಾಲವು 14 ಮಿಲಿಯ ಮೈಲುಗಳಿಗಿಂತ ಉದ್ದವೂ 250,000 ಮೈಲುಗಳಿಗಿಂತ ಅಗಲವೂ ಆಗಿರಬೇಕೆಂದು ತಿಳಿಯಬೇಕಾಗಿದೆ ಹೀಗೆ ಭೂಮಂಡಲಕ್ಕೆ ಇದರ ಬಾಲವು ತಾಗುವುದರಿಂದ ವಿಪರ್ಯವೇನೂ ಸಂಭವಿಸಲಿಕ್ಕಿಲ್ಲ ಯಾಕಂದರೆ ಚುಕ್ಕಿಗಳ ಪ್ರಕೃತಿ ಎಲ್ಲವೂ ಚೂರುಚೂರಾಗಿರುವ ಧಾತುವಿನಿಂದ ಕೂಡಿರುವುದು ಒಂದು ವೇಳೆ ಭೂಮಂಡಲವು ಚುಕ್ಕಿಗಳ ಬಾಲವನ್ನು ತಾಗಿ ದಾಟಿ ಹೋಗುವಾಗ ವಾಯುಮಂಡಲದಲ್ಲಿ ಒಂದು ವಿಶೇಷ ಪ್ರಕಾಶವು ತೋರಬಹುದು ಆದರೆ ಇಂಥಾ ಪ್ರಕಾಶವು ವಾಯುಮಂಡಲದಲ್ಲಿ ಅಡಗಿ ಹೋಗಿ ಇತರ ಪ್ರಕಾಶಗಳಿಂದ ಪ್ರತ್ಯೇಕವಾಗಿ ಕಂಡುಬರಲಿಕ್ಕೆ ಅಸಾಧ್ಯವಾಗಬಹುದು ಮೇ 18ನೇ ತಾರೀಕಿನಲ್ಲಿಯೂ ಎಪ್ರಿಲ್ ತಿಂಗಳ ಅಂತ್ಯಭಾಗದಲ್ಲಿಯೂ ವಾಚಕರೆಲ್ಲರೂ ಈ ಧೂಮಕೇತುವನ್ನು ನೋಡಿಕೊಂಡು ಅದರ ವಿಶೇಷತ್ವವನ್ನು ಕಣ್ಣಾರೆ ನೋಡಿ ಪರೀಕ್ಷಿಸಬಹುದು

M. T.

ಪರದೇಶ ವೃತ್ತಾಂತ.

[illegible] ಸಾಮ್ರಾಜ್ಯದ ಪತ್ರಿಕಾಕರ್ತರ ಸಮ್ಮೇಳನದವರು ಅಭಿಪ್ರಾಯಪಟ್ಟಂತೆ ಈಸ್ಟರ್ನ್ ಟೆಲಿಗ್ರಾಫ್ ಕಂಪೆನಿಯವರು ಹಿಂದೂಸ್ಥಾನ, ಆಫ್ರಿಕಾ, ಮತ್ತು ಆಸ್ಟ್ರೇಲ್ಯ ದೇಶಗಳಿಗೆ [illegible]

ಅಂಗ್ಲಾಂಡದಲ್ಲಿ ಇತ್ತಲಾಗೆ ಹನ್ನಾ ಎಂಬ ಹೆಸರಿನ ಮುದಿ ಅತ್ತೆಗೂ ಮಿಸಿಸ್ ಪ್ರೊಟೆಸನ್ ಎಂಬ ಸೊಸೆಗೂ ಜಗಳ ಹತ್ತಿ ಸೊಸೆಯು ಅತ್ತೆಯನ್ನು ಚನ್ನಾಗಿ ಕೊಡಲಿಯಿಂದ ಬಡದದ್ದರಿಂದ ಅತ್ತೆಯು ಬಹಳ ಘಾಯ ಪಟ್ಟದ್ದರಿಂದ ಇವಳನ್ನು ಚಿಕಿತ್ಸೆ ಬಗ್ಗೆ ಆಸ್ಪತ್ರೆಗೆ ಒಯ್ಯಲು [illegible]

ಜರ್ಮನಿಯ ಪ್ರಿನ್ಸ್ ಐಟೆಲ್ ಫ್ರಿಟ್ಸ್ ತಮ್ಮ ಸಹಧರ್ಮಿಣಿಯರಸಿ ಮೇತ ಯೇಸುಕ್ರಿಸ್ತನ ಜನ್ಮಭೂಮಿಯಾದ ಪಲೆಸ್ತೀನ್ ಎಂಬಲ್ಲಿಗೆ ಯಾತ್ರಸ್ಥರಾಗಿ ಹೋಗಿದ್ದರು. ಅಲ್ಲಿ ಅವರಿಗೆ ಪಟ್ಟಣದ ಜನರು ಬಹಳ ಸಂಭ್ರಮದಿಂದ ಉಪಚರಿಸಿದರು. ಒಂದು ಜರ್ಮನ್ ಆಸ್ಪತ್ರೆಯೂ ಕ್ರೈಸ್ತ ದೇವಾಲಯವೂ [illegible]

[illegible] ವಧುವರರಿಬ್ಬರೂ ಮದುವೆಯಾದ [illegible] ಯೇ ವರನು ವಧುವಿಗೆ ವಿಷಕೊಟ್ಟು ಅರ್ಧ ವಿಷವನ್ನು ತಾನೂ ತಿಂದು ಉಭಯತರೂ ಮರಣಪಟ್ಟರೆಂದು ತಿಳಿದುಬರು ತ್ತದೆ.

~~~~~

[illegible]ದುಸ್ಥಾನದ ಸ್ಟೇಟ್ ಸೆಕ್ರಿಟರಿಗಳಾದ ಮೋರ್ಲೆ ಪ್ರಭುಗಳು ಮಿ॥ ಹೋಮ್ ಪೀಲ್ ಎಂಬವರನ್ನು ತನ್ನ [illegible] ಪ್ರೈವೇಟ್ ಸೆಕ್ರಿಟರಿಗಳಾಗಿ ನೇಮಿಸಿರು ವರು.

~~~~~

ಬ್ರಿಟಿಷ್ ಪಾರ್ಲಿಮೆಂಟಿನ ಪ್ರಭುಸದನ ಮತ್ತು ಪ್ರಜಾ ಪ್ರತಿನಿಧಿಗಳಸದನಗಳೊಳಗೆ ಉಂಟಾಗಿರುವ ವಿಪರ್ಯವನ್ನು ಚಕ್ರವರ್ತಿಯವರು ಪರಿಹರಿಸುವ ಸಂಭವವಿರುವುದೆಂತ ತಿಳಿದುಬರುತ್ತದೆ

~~~~~

ಅಂಟುರೋಗದ ಬಾಧೆಯ ೧ ತಗಲದಂತೆ ಮಾಡುವುದ ಕ್ಕೆ ಪಾರೀಸು ನಗರದ ಡಾಕ್ಟ್ರರ ಡೊಯನ್ ಎಂಬವರು ಒಂದು ದ್ರವ್ಯವನ್ನು ಕಂಡುಕೊಂಡಿರುವರು

~~~~~

ಉತ್ತರ ಹಿಂದುಸ್ಥಾನ.

~~~~~

ಎನಾಘಡಿನ ಲಾಭಶಂಕರ ಲಕ್ಷ್ಮೀದಾಸ ಎಂಬವರು ಪಕ್ಷಿಗಳನ್ನು ಹಿಡಿದು ಗೂಡಿನಲ್ಲಿ ಹಾಕಿ ವ್ಯಾಪಾರ ಮಾಡು ವ ಕ್ರೌರ್ಯವನ್ನು ಕುರಿತು ಕೆಲವು ವರ್ತಮಾನಪತ್ರಗಳಲ್ಲಿ ಹೀಗೆ ಬರೆದಿರುವರು —ಪಕ್ಷಿಗಳು ಮನುಷ್ಯರಂತೆಯೇ ಮರಿಗಳನ್ನೂ ತಮ್ಮ ಸ್ವತಂತ್ರವನ್ನೂ ತಮ್ಮ ಜೊತೆ ಪಕ್ಷಿ ಗಳನ್ನೂ ಪ್ರೀತಿಸುವುದರಿಂದ ಇವುಗಳನ್ನು ಗೂಡಿನಲ್ಲಿ ಹಾಕಿ ನಿರ್ಬಂಧಿಸುವುದು ಯುಕ್ತವಲ್ಲವೆಂತಲೂ ಪಕ್ಷಿಗಳಿಗ ಕ್ರೌ ರ್ಯವನ್ನು ತೋರಿಸಿದ್ದಲ್ಲಿ ಅಂಥಾ ಸಂಗತಿಗಳನ್ನು ಇಂಡ್ಯಾ ಸರಕಾರದವರ ತಿಳುವಳಿಕೆಗೆ ತಂದು ಸರಕಾರದಿಂದ ಹೀಗೆ ಪಕ್ಷಿಗಳನ್ನು ನಿರ್ಬಂಧಿಸುವ ಪದ್ಧತಿಯನ್ನು ನಿಲ್ಲಿಸುವಂತೆ ಮಾಡಿಸುವುದಕ್ಕೆ ಸಾಹಸಪಡಬೇಕೆಂತಲೂ ಅಮೇರಿಕದ ಸಂ ಸ್ಥಾನಗಳಲ್ಲಿ ಪಕ್ಷಿಗಳನ್ನು ಗೂಡಿನಲ್ಲಿ ಹಾಕಿ ಮಾರಕೂಡ ದೆಂಬ ಕಾನೂನು ಇರುವುದೆಂತಲೂ ಬರೆದಿರುವರು

~~~~~

ಲಾಹೋರಿನಲ್ಲಿ ಪ್ರಕಟವಾಗುತ್ತಿರುವ ಒಂದು ಪತ್ರಿ ಕೆಯಲ್ಲಿ ರಾವಲ್‌ಪಿಂಡಿಯ ಸಾವುಕಾರರೊಬ್ಬರು ತನ್ನ ಒಡವೆಗಳ ಪ್ರಕಟಣೆಯನ್ನು ಛಾಪಿಸಬೇಕೆಂದು ತಹಾ ಮಾ ಡಿದ್ದರು. ಪತ್ರಿಕೆಯ ಮೆನೇಜರರು ಈ ಸಾವುಕಾರರಿಗೆ ತಮ್ಮ ಪತ್ರಿಕೆಯ ೯,೦೦೦೦ ಪ್ರತಿಗಳು ಪ್ರಕಟಿಸಲ್ಪಡುವ ವೆಂತ ಹೇಳಿ ಆ ರೀತಿ ಅವರಿಂದ ಪ್ರಕಟಣಾ ಪೀಸನ್ನು ವಸೂಲುಮಾಡಿಕೊಂಡಿದ್ದರು ಸಾವುಕಾರರು ಲಾಹೋ ರಿಗೆ ಬಂದು ಪತ್ರವು ಛಾಪಿಸಲ್ಪಡುವ ಮುದ್ರಣಾಲಯದ ವರನ್ನು ವಿಚಾರಿಸಿದ್ದಲ್ಲಿ ೨೫,೦೦೦ ಪ್ರತಿಗಳೇ ಛಾಪಿಸುತ್ತಿ ರುವರೆಂತ ತಿಳಿದು ಬಂತು ಪತ್ರಿಕೆಯ ಮೆನೇಜರರು ತನಗೆ ಈ ರೀತಿ ಠಕಾಯಿಸಿದರೆಂತ ಅವರ ಮೇಲೆ ಫಿರ್ಯಾ ದು ದಾಖಲು ಮಾಡಿರುವರು. ಮೇಜಿಸ್ಟ್ರೇಟರು ಪತ್ರಿಕಾ ಮೆನೇಜರರ ಮೇಲೆ ಚಾರ್ಜು ಮಾಡಿ ಅವರನ್ನು ಜಾಮೀ ನಿನ ಮೇಲೆ ಬಿಟ್ಟಿರುವರು ಮೊಕದ್ದಮೆಯು ಪೂರ್ಣ ತೀರ್ಮಾನ ಆಗಲಿಲ್ಲ

~~~~~

ತಿಬೇತಿನ ದಲೈಲಾಮರವರು ಡಾರ್ಜಿಲಿಂಗನಲ್ಲಿಯೇ ಇರುವರು. ಚೀನಾ ಸರಕಾರದವರು ಲಾಮಾರವರು ಲ್ಹಾಸ್ಸಾದಿಂದ ಓಡಿದ್ದಕ್ಕೆ ತಾವು ಕಾರಣಭೂತರಲ್ಲವೆಂತ ಲೂ, ಲಾಮರವರ ಅಧಿಕಾರ ಅತಿಕ್ರಮಣ ಮಾಡುವ ಇರಾದೆಯು ತಮಗಿಲ್ಲವೆಂತಲೂ ಖಂಡಿತವಾಗಿ ವ್ಯಕ್ತಪಡಿ ಸಿರುವರು.

ಅಫೀಮು ವ್ಯಾಪಾರದಲ್ಲಿ ಚೆಸ್ಟಿಗೆ ರೂ. [illegible] ಸಿಕ್ಕುವುದೆಂಬ ಅಂದಾಜನ್ನು ಮಾಡಿ ಇದರಿಂದ ತೆರಿಗೆಯು ಕಡಿಮೆಯಾಗುತ್ತದೆಂತ ನವೀನ ಸುಂಕಗಳನ್ನು ವಿಧಿಸಿರು ವರು ಚೆಸ್ಟಿಗೆ ರೂ. ೩,೮೫೦ರ ಪ್ರಕಾರ ಏಲಂ ಆಗಿರುವು ದೆಂದೂ ಈ ರೀತಿ ಒಂದೇ ತಿಂಗಳಲ್ಲಿ ಸರಕಾರದವರಿಗೆ ೬೮॥ ಲಕ್ಷ ರೂಪಾಯಿ ಉಳಿಯುವುದೆಂತಲೂ ಈ ದರದಲ್ಲಿ ಯೇ ಗವರ್ನಮೆಂಟಿನವರಿಗೆ ಇದೇ ವರುಷದಲ್ಲಿ ಅಫೀಮು ತೆರಿಗೆಯಿಂದಲೇ ೮ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮುನಾಫೆಯು ಉಂಟಾಗುವುದೆಂತಲೂ ಸರ್ ಸೆಸೂನ್ ಡೆವೀಡ್‌ರವರು ಮುಂಬಯಿ ವರ್ತಮಾನಪತ್ರಗಳಿಗೆ ಬರೆ ದಿರುವರು.

~~~~~

ಹಿಂದುಸ್ಥಾನದಲ್ಲಿ ಪ್ಲೇಗುಮರಣಗಳು ಹೆಚ್ಚುತ್ತಿರು ವವು ಈ ತಿಂಗಳ ತಾರೀಕು ೭ಕ್ಕೆ ಅಂತ್ಯವಾಗುವ ವಾರ ದಲ್ಲಿ ಪ್ಲೇಗಿನಿಂದ ಮೃತಪಟ್ಟವರ ಸಂಖ್ಯೆಯು ೨೫,೦೦೦ ಸಾವಿರಕ್ಕಿಂತಲೂ ಮಿಕ್ಕಿತ್ತು ಯುನೈಟೆಡ್ ಪ್ರೊವಿನ್ಸು ಗಳಲ್ಲಿ ೯೧೧೧ ಮರಣಗಳೂ, ಪಂಜಾಬಿನಲ್ಲಿ ೮೬೩೫ ಮರಣಗಳೂ, ಬಂಗಾಳದಲ್ಲಿ ೩,೯೭೧ ಮರಣಗಳೂ, ಸಂಟ್ರಲ್ ಪ್ರೊವಿನ್ಸುಗಳಲ್ಲಿ ೯೫೫. ಬರ್ಮಾ ೪೮೨, ಮುಂಬಯಿ ೩,೮೭೭, ಮಧ್ಯ ಹಿಂದುಸ್ಥಾನ ೯೯, ಮೈಸೂರು ೧೯, ಮದ್ರಾಸು ೭, ಹೈದರಾಬಾದು ೭, ಕಾಶ್ಮೀರ ೨೨ ಈ ರೀತಿ ಮರಣಗಳಿದ್ದವು

~~~~~

ಫರಿದಪುರದಲ್ಲಿ ಇತ್ತಲಾಗೊಂದು ಸರಕಾರಿ ಸರ್ಕ್ಯು ಲಾರು ಪ್ರಕಟವಾಗಿರುವುದಂತೆ ಈ ಸರ್ಕ್ಯುಲಾರಿನ ಮೇರೆಗೆ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಬಂದ ಪೆಕೆಟುಗಳೂ ಬುಕ್‌ಪೋಸ್ಟುಗಳೂ ಮೇಜಿಸ್ಟ್ರೇಟರವರಿಗೆ ಕಳುಹಿಸಲ್ಪಟ್ಟು ಮೇಜಿಸ್ಟ್ರೇಟರವರು ಸಂಶಯ ಕಂಡವುಗಳನ್ನು ತೆರದು ನೋಡುವರಂತೆ

~~~~~

ಕಪುರ್ತಲದ ಮಹಾರಾಜರವರು ಒಟ್ಟಿಗೆ ೨೫ ಪತ್ರ ಗಳನ್ನು ತಮ್ಮ ಸಂಸ್ಥಾನಕ್ಕೆ ತರಬಾರದೆಂತ ಆಜ್ಞಾಪಿಸಿರು ವರಂತೆ ಈ ಕಾನೂನು ಈ ನವ ಸಂವತ್ಸರದ ಆರಂಭ ದಿಂದಲೇ ಜ್ಯಾರಿಗೆ ಬರುವುದು ಇದನ್ನು ಉಲ್ಲಂಘಿಸಿ ನಡದವರಿಗೆ ೧೦ ವರುಷಗಳ ವರೆಗಿನ ಕಠಿಣ ಕಾಮಗಿರಿಯ ಶಿಕ್ಷೆಯನ್ನೂ ಜುರುಮಾನೆಯನ್ನೂ ವಿಧಿಸಬಹುದಾಗಿ ಏರ್ಪಡಿಸಿರುವುದಂತೆ

~~~~~

ಡಿಲ್ಲಿಯಲ್ಲಿ ಕೃತ್ರಿಮ ನೋಟುಗಳನ್ನು ತಯ್ಯಾರಿಸು ತ್ತಿದ್ದರೆಂಬ ಸಬಬಿನಲ್ಲಿ ಹಲವು ಮಂದಿಯರನ್ನು ಒಬ್ಬ ದೇಶದಾಸ ವರ್ತಮಾನ ಪತ್ರ ಕರ್ತರೊಡನೆ ಕೈದು ಮಾಡಿ ರುವರು ಕೆಲವು ಕೃತ್ರಿಮ ನೋಟುಗಳು ಅಪರಾಧಿಗಳ ಹತ್ತಿರವಿದ್ದವು ದೊರಕಿರುವುವಂತೆ ಪತ್ರಿಕಾಕರ್ತರ ಮೇಲೆ ರುಜುವಾತಿಲ್ಲದ ದೆಸೆಯಿಂದ ಅವರನ್ನು ಬಿಟ್ಟದ್ದರೂ ನಂತರದಲ್ಲಿ ಇವರ ಕೂಡೆ ಸಾವಿರ ಚಲ್ಲೆಯಲ್ಲಿರುವ ಠಕಾರಿ ನೋಟುಗಳೊಡನೆ ಇವರನ್ನು ಪುನಹಾ ಕೈದು ಮಾಡಿರು ವರಂತೆ

~~~~~

ಮುಂಬಯಿಯಲ್ಲಿ ಬಾಲಕೃಷ್ಣಚಾವ್ಲಾ ಎಂಬ ೨೨ ವರುಷ ಪ್ರಾಯದ ಯುವಕನೊಬ್ಬನು ಚಂಡಿಕಾ ಎಂಬ ಮುದ್ರಣಾಲಯವನ್ನು ಇಡಲಿಕ್ಕೆ ಅನುಮತಿ ಕೇಳಿದ್ದಲ್ಲಿ ಈತನು ಈ ವರೆಗೆ ಮುದ್ರಣಾಲಯವನ್ನು ಇಟ್ಟಿದ್ದಾನೋ ವಿನೆಂಬದರ ವಿಷಯ ವಿಚಾರಿಸಲ್ಪಟ್ಟು ಇಡಲಿಲ್ಲವೆಂತ ಕೇಳಿ ಮೇಜಿಸ್ಟ್ರೇಟರವರು ರೂ. ೫೦೦ ಜಾಮೀನು ಕೊಡ ಬೇಕೆಂತ ಈತನಿಗೆ ಅಪ್ಪಣೆಕೊಟ್ಟಿರುವರು.

~~~~~

ಮುಂಬಯಿ ಗವರ್ನಮೆಂಟು ಗಜೇಟಿನಲ್ಲಿ "ಗೇಲಿಕ್ ಅಮೇರಿಕನ್" [illegible]

ತಿಲಕರ ಮತ್ತು ಪರಂಜಪೇಯವರ [illegible] ಪ್ರತಿ ಗಳು, ಚಕ್ರಾವಿಡ್ ಎಂಬ ನಾಟಕ ಪ್ರತಿಗಳು, ಭೋಪಾ ಟಕರ್ ಎಂಬವರಿಂದ ರಚಿಸಲ್ಪಟ್ಟ ಲಾಲಾ ಲಾಜಪತ್‌ರೈ ಗಳವರ ಗಡಿಪಾರಿನ ವೃತ್ತಾಂತ ಎಂಬ ಪುಸ್ತಕ ಪ್ರತಿಗಳು, ಹರಿಭಾಗವತ್ ಎಂಬವರಿಂದ ಪ್ರಕಟಿಸಲ್ಪಟ್ಟ ತಿಲಕರ ಭಾ ಷಣಗಳು, ಇವೆಲ್ಲವೂ ಸಂಸ್ಥಾನದಿಂದ ನಿಷೇಧಿಸಲ್ಪಟ್ಟವೆ.

~~~~~

ಅಹಮದಾಬಾದ, ಹಣಿಪಾಲಾ ನೂಲಾಚಂದ್ ಎಂಬ ವರಲ್ಲಿ ಒಂದು ದರೋಡೆ ಕಳವಾಗಿ ಒಂದು ಲಕ್ಷ ೫೦ ಸಾ ವಿರ ರೂಪಾಯಿಗಳ ಆಭರಣಗಳನ್ನು ಕಳ್ಳರು ತಕ್ಕೊಂಡು ಹೋಗಿರುವರು ಈ ಆಭರಣಗಳಲ್ಲಿ ೪೦ ಸಾವಿರ ರೂ ಪಾಯಿಗಳ ಮೌಲ್ಯದ ಒಂದು ಸರವೇ ಇರುವುದಂತೆ.

~~~~~

ಅಲ್ಲಹಾಬಾದಿನಲ್ಲಿ ಈ ವರುಷ ಕೂಡಲಿಕ್ಕಿರುವ ನೇಶನಲ್ ಕಾಂಗ್ರೆಸು ಸಭೆಯ ಕಾರ್ಯನಿರ್ವಾಹಕ ಸಭೆ ಯವರು ಸಭಾಮಂಟಪದ ಬಗ್ಗೆ ಬೇಕಾದ ಸ್ಥಳವನ್ನು ಆರಿ ಸುವ ಒಗ್ಯೆಯೂ ಇತರ ಕೆಲಸದ ನಿಮಿತ್ಯವಾಗಿಯೂ ಕಳದ ತಿಂಗಳ ತಾರೀಕು 8ರಲ್ಲಿ ಸಭೆಕೂಡಿದರು.

~~~~~

ಸರ್ ಹಾರ್ವೆ ಏಡಾಮ್‌ಸನ್‌ರವರನ್ನು ಬರ್ಮಾ ದೇಶದ ಗವರ್ನರರಾಗಿ ನೇಮಿಸಿರುವರು. ವ್ಯಾಸರಾಯ ಪ್ರಭು ಕೌನ್ಸಿಲಿಗೆ ಇವರ ಬದಲಾಗಿ ಯಾರನ್ನು ನೇಮಿಸುವ ರೆಂಬದು ಪ್ರಕಟವಾಗಲಿಲ್ಲ

~~~~~

ಗ್ವಾಲಿಯರದ ಮತ್ತು ವಿಕಾನೀರಿನ ಮಹಾರಾಜರವ ರು ಸಂಟ್ರಲ್ ಹಿಂದೂ ಕೊಲೇಜಿನ ಆಶ್ರಯದಾತರಾಗಲಿಕ್ಕೆ ಸಮ್ಮತಿಸಿರುವರು

~~~~~

ಮುಂಬಯಿಯ ಕೀರ್ತಿಶೇಷ ಜೇಮಸೆಟಜಿ ನಸರ್ ವಂಜೀ ಟಾಟಾರವರು ಭಾರತೀಯ ವಿಚಕ್ಷಣ ವಿದ್ಯಾರ್ಥಿ ಗಳು ವಿಲಾಯತಿ ಮೊದಲಾದ ವಿದೇಶಗಳಿಗೆ ಹೋಗಿ ಕಲಿ ಯುವರೆ ಬೇಕಾದ ದ್ರವ್ಯಸಹಾಯವನ್ನು ದೊರಕಿಸಿಕೊ ಳ್ಳುವುದಕ್ಕೆ 1892ನೇ ಇಸವಿಯಲ್ಲಿ ಮಾಡಿದ ಏರ್ಪಾಡಿ ನಿಂದ 30 ಜನ ವಿದ್ಯಾರ್ಥಿಗಳು ಈ ವರೇಗೆ ಸಹಾಯ ಪಡೆದಿರುವರಾಗಿ ತಿಳಿದುಬರುತ್ತದೆ ಇವರಲ್ಲಿ 22 ಜನ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಗಿಸಿ ವೃತ್ತಿಗಳ ನ್ನವಲಂಬಿಸಿರುವರು ೮ ಜನರು ಯ್ಯುರೋಪಿನಲ್ಲಿ ಶಿಕ್ಷಣ ಹೊಂದುತ್ತಿರುವರು ಈ 22ರಲ್ಲಿ 16 ಜನರು ಪಾರ್ಸಿಯ ರು ಬಾಕಿಯವರು ಹಿಂದೂಗಳಾಗಿರುವರು. ಇವರ ಪೈಕಿ 7 ಜನರು ಕಲೆಕ್ಟರ್ ಮೊದಲಾದ ಹುದ್ದೆಗಳಿಗೆ ಅರ್ಹ ರನ್ನಾಗಿ ಮಾಡುವ ಸಿವಿಲ್ ಸರ್ವಿಸಿನಲ್ಲಿ ನೇಮಿಸಲ್ಪಟ್ಟಿರು ವರು ಟಾಟಾರವರು ಈ ಫಂಡನ್ನು ಆರಂಭದಲ್ಲಿ ಪಾರ್ಸಿ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿಯೇ ಸ್ಥಾಪಿಸಿದ್ದ ರು ಆದರೆ ಸ್ಥಾಪಿಸಿದ ಎರಡು ವರುಷಗಳಲ್ಲಿ ಇದರಿಂದ ಸರ್ವ ಜಾತಿಯ ಭಾರತೀಯ ವಿದ್ಯಾರ್ಥಿಗಳಿಗೂ ಪ್ರಯೋ ಜನ ದೊರಕುವಂತೆ ಏರ್ಪಡಿಸಿದರು

~~~~~

ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯು ಬರುವ ಆಗೋಸ್ತು ತಿಂಗಳ ಮುಂಚೆಯೇ ಕೂಡುವ ಸಂಭವ ವಿರುವದಾಗಿ ಊಹಿಸುತ್ತಾರೆ. ಸಭೆಯು [illegible] ಬಗ್ಯೆ ಹಲವು ಬಿಲುಗಳಿರುವವು. ರಾಜದ್ರೋಹಪರ ವಾದ ಸಭೆಗಳ ಮತ್ತು ತಪ್ಪುಗಳ ಬಗ್ಯೆ ಏರ್ಪಡಿಸಿದ ಕಾ ನೂನಿನ ಅವಧಿಯು ಆಗೋಸ್ತು ತಿಂಗಳೊಳಗೆ ಮುಗಿಯು ತ್ತಿರುವುದರಿಂದ ಮುಂದಕ್ಕೆ ಈ ಕಾನೂನನ್ನು [illegible] ಲ್ಲಿಡಬೇಕೋ ಎಂಬ ವಿಷಯವನ್ನು [illegible] ಸದೇಕಾಗಿರುವುದು.
~~~~~

[illegible] ಇಂಡಿಯಾ ಗವರ್ನಮೆಂಟಿನವರ ಅತಿಥಿಯಾಗಿ ಡಾರ್ಜಿಲಿಂಗ್‌ನಲ್ಲಿರುವರು. ಇವರಿಗೆ ಉಳಕೊಳ್ಳುವ ಬಗ್ಗೆ ಸರಕಾರದ ಕಡೆಯಿಂದ ಒಂದು ಬಂಗ್ಲೆಯನ್ನು ಬಾಡಿಗೆಗೆ ತಕ್ಕೊಂಡು ಕೊಟ್ಟಿರುವರು. ಇತರ ಎಲ್ಲಾ ವಿಲೆವಾರಿಗಳನ್ನು ಡಲೈಲಾಮರವರೇ ಮಾಡಿಕೊಳ್ಳುತ್ತಿರುವರು.

~~~~~

ಈ ತಿಂಗಳ ತಾ. ೧೦ರಲ್ಲಿ ಪೂರ್ವಬಂಗಾಳ ಮತ್ತು ಅಸ್ಸಾಮಿನಲ್ಲಿ ಭೂಕಂಪವಾಯಿತು. ಚಿಟಗೊಂಗ್ ಮತ್ತು ನಕೊಹಳ್ಳಿ ಎಂಬಲ್ಲಿರುವ ಸರಕಾರಿ ಮತ್ತು ಖಾಸಗಿ ಕಟ್ಟೋಣಗಳು ಅಲ್ಪಸ್ವಲ್ಪ ಹಾಳಾಗಿವೆ. ಪ್ರಾಣನಷ್ಟವು ಸಂಭವಿಸಲಿಲ್ಲವೆಂತ ತಿಳಿಯುತ್ತೇವೆ.

~~~~~

ದೇಶ ಸಂಚಾರಾರ್ಥವಾಗಿ ಅಮೇರಿಕದಿಂದ ೭೦೦ ಜನ ಪ್ರಯಾಣಸ್ಥರು ಕಲ್ಕತ್ತೆಗೆ ಬಂದು ತಲ್ಪಿರುವರು. ಬೆನಾರಸ್, ಆಗ್ರಾ, ಲಕ್ಷ್ಮೀಪುರ, ಖಾನಪುರ, ಡಿಲ್ಲಿ ಮೊದಲಾದ ಪಟ್ಟಣಗಳನ್ನು ನೋಡಲಿಕ್ಕೆ ಇವರೆಲ್ಲರು ಪ್ರತ್ಯಪ್ರತ್ಯೇಕವಾಗಿ ಹೋಗಿರುವರು. ಕೆಲವು ರೈಲ್ವೆಗಳ ದರವೂ ಹಿಂದುಸ್ಥಾನದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಗಾಡಿಗಳ ದರವೂ ಬಹಳ ಹೆಚ್ಚಾಗಿರುವುದೆಂದು ಇವರ ಅಭಿಪ್ರಾಯ. ೩೦೦ರಕ್ಕಿಂತ ಹೆಚ್ಚು ಜನ ಸ್ತ್ರೀಯರು ಇವರಲ್ಲಿವರು. ಖಾಸಗಿ ಖರ್ಚು ವಿನಹಾ ಪ್ರತಿಯೊಬ್ಬಗೆ ರೂ. ೭೦೦೦ರ ಖರ್ಚು ಇಡೀ ಪ್ರಯಾಣಕ್ಕೆ ಬೇಕಾಗಿರುವುದಂತೆ.

~~~~~

ಮುಂಬಯಿಯ ಮಲಬಾರ್ ಗುಡ್ಡೆಯ ಬಂಗ್ಲೆಯೊಂದರಲ್ಲಿ ದಾಮೋದರ ಲಕ್ಷ್ಮಿ ಖಿಮ್ಜಿಯವರ ವಿಧವೆಯನ್ನು ಕೊಂದವರ್‍ಯಾರೆಂದು ಈ ವರೆಗೆ ಪತ್ತೆಯಾಗಲಿಲ್ಲ. ಅಪರಾಧಿಯನ್ನು ಗೊತ್ತುಮಾಡಿದವರಿಗೆ ರೂ. ೫೦೦ರನ್ನು ಕೊಡುವೆವೆಂತ ಪೋಲೀಸು ಕಮಿಶನರವರು ಪ್ರಕಟಿಸಿದ್ದರು. ಈ ಇನಾಮನ್ನು ಈಗ ರೂ. ೨೦೦೦ಕ್ಕೆ ಹೆಚ್ಚಿಸಿರುತ್ತಾರೆ.

~~~~~

ಸಿಮ್ಲದಲ್ಲಿ ಇಂಡಿಯಾ ಗವರ್ನಮೆಂಟಿನವರು ಸದ್ಯದಲ್ಲಿ ಹೆಚ್ಚಾಗಿ ಬರುತ್ತಿರುವ ಸರಕಾರದ ಖರ್ಚಿನ ವಿಷಯವಾಗಿಯೂ, ಪ್ರಾಂತಿಕ ಸರಕಾರಗಳಿಗೆ ಕೊಡಬೇಕಾದ ದ್ರವ್ಯಸಹಾಯದ ಕುರಿತಾಗಿಯೂ ಪ್ರ್ಯಾಮರಿ ಮತ್ತು ಕಲಾಶಿಕ್ಷಣಗಳ ವಿಷಯವಾಗಿಯೂ ಪರ್ಯಾಲೋಚಿಸುವರಂತೆ.

~~~~~

ಅರವಿಂದ ಘೋಷರವರು ಎಲ್ಲಿರುವರೆಂಬದನ್ನು ತಿಳಿಸಿದರೆ ಸರಕಾರದವರು ರೂ. ೩೦೦ನ್ನು ಉಚಿತವಾಗಿ ಕೊಡುವರೆಂತ ಪ್ರಕಟಿಸಿರುವುದಂತೆ.

~~~~~

ದಕ್ಷಿಣ ಹಿಂದುಸ್ಥಾನ.

~~~~~

ಮದ್ರಾಸು ಸಂಸ್ಥಾನದ 'ಹೊಸ್ಪಿಟಲ್ ಅಸಿಸ್ಟಾಂಟ್' ಅಥವಾ ಈಗ 'ಸಿವಿಲ್ ಮೆಡಿಕಲ್ ಅಸಿಸ್ಟಾಂಟ್' ಎಂಬ ವೈದ್ಯ ಇಲಾಖೆಯ ಸಿಬಂದಿಯವರಿಗೆ ಇಂಡಿಯಾ ಗವರ್ನಮೆಂಟಿನವರು ಈ ರೀತಿ ಸಂಬಳಗಳನ್ನು ಹೆಚ್ಚಿಸಿರುವರು:– ಒಂದರಿಂದ ಐದು ವರುಷ ಸರ್ವಿಸಿನ ನಾಲ್ಕನೇ ಗ್ರೇಡಿನವರಿಗೆ ರೂ. ೩೦, ಆರರಿಂದ ಹತ್ತು ವರುಷ ಸರ್ವಿಸಿನವರೆಗೆ ಮೂರನೇ ಗ್ರೇಡಿನವರಿಗೆ ರೂ. ೪೦, ಹನ್ನೊಂದರಿಂದ ಹದಿನೈದು ವರುಷ ಸರ್ವಿಸಿನ ಎರಡನೇ ಗ್ರೇಡಿನವರಿಗೆ ರೂಪಾಯಿ ೫೦, ಹದಿನೈದು ವರುಷಗಳ ಮೇಲಣ ಸರ್ವಿಸಿನ ಒಂದನೇ ಗ್ರೇಡಿನವರಿಗೆ ರೂ. ೭೦; ಸೀನಿಯರ್ ಗ್ರೇಡ್ (ಎರಡನೇ ತರಗತಿ) ರೂ. ೭೦, ಸೀನಿಯರ್ ಗ್ರೇಡ್ (ಒಂದನೇ ತರಗತಿ) ರೂ. ೮೦. ಹೀಗೆ ಸಂಬಳಗಳನ್ನು ಏರಿಸಿದ್ದು [illegible]

ಈ ತಿಂಗಳ ತಾರೀಕು ೧೦ರ ವರೆಗೆ ತಿದ್ದುಪಡಿಯಾಗಿ ಪ್ರಕಟಿಸಲ್ಪಟ್ಟ ಮದ್ರಾಸು ಕ್ವಾರ್ಟರ್ಲಿ ಸಿವಿಲ್ ಲಿಸ್ಟಿನಲ್ಲಿ ಗವರ್ನರ್ ದೊರೆಗಳವರ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಬಹುಮಾನಪಟ್ಟ ಮೆ| ಮರ್ರೆ ಹೊವಿಕ್ ಮತ್ತು ಪಿ. ಜಿ. ಎನ್. ಎಟ್ಕಿನ್‌ಸನ್ ಇವರಿಗೆ ಪ್ರತಿಯೊಬ್ಬರಿಗೆ ತಿಂಗಳು ಒಂದಕ್ಕೆ ರೂ. ೫೩೩೩-೫-೪ ಸಂಬಳವೆಂತ ಪ್ರಕಟಿಸಲ್ಪಟ್ಟಿರುವುದು. ಆದರೆ ಇತ್ತಲಾಗೆ ಅದೇ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟ ಬೊಬಿಲಿಯ ಮಹಾರಾಜರವರಿಗೆ ಸಂಬಳ ಎಷ್ಟೆಂತ ವ್ಯಕ್ತಪಡಿಸಲಿಲ್ಲ.

~~~~~

ಬ್ರಾಹ್ಮಣ ವಿಧವೆಯ ಬಲತ್ಕಾರದ ಮುಂಡನವು. ಗಂಜಾಮು ಜಿಲ್ಲೆಯ ತೆಕ್ಕಾಲಿ ಎಂಬಲ್ಲಿ ಮಂತ್ರಾಳ ಲಕ್ಷ್ಮಿನರಸಮ್ಮ ಎಂಬ ಹುಡುಗಿಯ ಗಂಡನು ಮೃತಪಟ್ಟು ಆರು ವರುಷಗಳಾದವು. ಹುಡುಗಿಯು ಬಹಳ ಚಿಕ್ಕಪ್ರಾಯದವಳಾಗಿರುವಳು. ೧೯೦೮ನೇ ಇಸವಿಯಲ್ಲಿ ಅವಳು ರಾಜಮಹೇಂದ್ರಿಯಲ್ಲಿರುವ ವಿಧವಾಗ್ರಹವನ್ನು ಸೇರಿದಳು. ಈ ಬಾಲವಿಧವೆಗೆ ಅಲ್ಪಸ್ವಲ್ಪ ಆಸ್ತಿ ಇತ್ತು. ಈ ಆಸ್ತಿಗೆ ಹಕ್ಕುದಾರನಾಗುವಂತೆ ಹುಡುಗಿ ಒಬ್ಬ ಹುಡುಗನನ್ನು ಸಾಕಣಕ್ಕಾಗಿ ತಕ್ಕೊಳ್ಳಬೇಕೆಂಬುವ ಇರಾದೆಯು ಹುಡುಗಿಯ ಹೆತ್ತವರಿಗಿತ್ತು. ಆದರೆ ಹೆತ್ತವರ ಈ ಇರಾದೆಯನ್ನು ಪೂರೈಸಲಿಕ್ಕೆ ಈ ಬಾಲಿಕೆಗೆ ಮನಸ್ಸಿರಲಿಲ್ಲದ್ದರಿಂದ ತಂದೆಯು ಕೋಪಗೊಂಡು ಹಲವು ಆಭರಣಗಳನ್ನು ಕದ್ದು ತಕ್ಕೊಂಡುಹೋಗಿರುವಳೆಂಬ ತಪ್ಪಿನ ಮೇಲೆ ಆಕೆಯನ್ನು ರಾಜಮಹೇಂದ್ರಿಯಿಂದ ವಾಪಸು ತಂದು ಈ ಬಗ್ಗೆ ಕ್ರಿಮಿನಲ್ ಮೊಕದಮೆ ಆಕೆಯ ಮೇಲೆ ಆಯಿತು. ಮೊಕದಮೆಯಲ್ಲಿ ತಪ್ಪಿತಸ್ಥಳಲ್ಲವೆಂತ ಲಕ್ಷ್ಮಿನರಸಮ್ಮಳು ಬಿಡುಗಡೆಹೊಂದಿದಳು. ಆದರೆ ತಂದೆತಾಯಿಗಳು ಮಗಳಿಗೆ ಕೊಟ್ಟ ಈ ಬಾಧೆಯಿಂದ ತೃಪ್ತಿ ಹೊಂದದೆ ಆತಳನ್ನು ಪೀಡಿಸುವ ಇನ್ನೊಂದು ನವೀನ ಉಪಾಯವನ್ನು ನಿಶ್ಚಯಿಸಿಕೊಂಡುರಾಜಮಹೇಂದ್ರಿ ವಿಧವಾಗ್ರಹಕ್ಕೆ ಇವಳಿಗೆ ಪ್ರವೇಶ ದೊರಕದಂತೆ ಶಿರೋಮುಂಡನವನ್ನು ಮಾಡಲುದ್ಯುಕ್ತರಾದರು. ತಾಯಿತಂದೆಗಳಿಬ್ಬರು ಕೂಡಿ ಮಗಳನ್ನು ಒಂದು ಕೋಣೆಯಲ್ಲಿ ಹಾಕಿ ಬಾಗಿಲು ಮುಚ್ಚಿ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿಬಿಟ್ಟು ತಾಯಿಯು ಮಗಳನ್ನು ಬಲತ್ಕಾರದಿಂದ ಹಿಡಿದು ತಂದೆಯು ಕತ್ತರಿಯಿಂದ ತಲೆಯನ್ನು ಬೋಳಿಸಿದನಂತೆ. ಹುಡುಗಿಯು ಕೂಗುವದ್ದನ್ನು ಮನೆಯ ಹತ್ತರದಿಂದ ಹೋಗುತ್ತಿರುವ ಪಾಗಣೆಶ್ಯಾನುಭಾಗನು ಕೇಳಿ ಪೋಲೀಸಿನವರನ್ನು ಆ ಮನೆಗೆ ಕೂಡಲೇ ತರಿಸಿದನು. ತಂದೆಯು ತಾನು ಮಾಡಿದ ತಪ್ಪನ್ನು ಒಪ್ಪಿ ಹಿಂದೂಶಾಸ್ತ್ರ ಪ್ರಕಾರ ಈ ರೀತಿ ಮಾಡಿರುವೆನೆಂತ ಹೇಳಿದನು. ಮೊಕದಮೆಯು ಮೇಜಿಸ್ತ್ರೇಟರಲ್ಲಿ ತನಖಿಯಾಗಿ ಮೇಜಿಸ್ತ್ರೇಟರು ಹೆತ್ತವರ ತಪ್ಪಾಗುವುದಿಲ್ಲವೆಂತ ಮೊಕದಮೆಯನ್ನು ತೆಗದು ಹಾಕಿದರು. ಆದರೆ ಅಲ್ಲಿಯ ಈಗ ಮೃತಪಟ್ಟಿರುವ ಪ್ರಸಾದರಾವ್ ಎಂಬವರು ಡಿಸ್ಟ್ರಿಕ್ಟ್ ಮೇಜಿಸ್ತ್ರೇಟರಲ್ಲಿ ರಿವಿಜನ್ ಅರ್ಜಿ ದಾಖಲುಮಾಡಿ ಮೊಕದಮೆಯು ಪುನಹಾ ತನಖಿ ಮಾಡಲ್ಪಟ್ಟು ತಂದೆಗೆ ರೂ. ೨೫ ತಾಯಿಗೆ ರೂ. ೧೦ ಈ ರೀತಿ ಜುಲುಮಾನೆಯು ವಿಧಿಸಲ್ಪಟ್ಟಿರುವುದು. ವಿಧವೆಯ ಶಿರೋಮುಂಡನವನ್ನು ಮಾಡಲಿಕ್ಕೆ ತಕ್ಕ ಶಾಸ್ತ್ರಾಧಾರಗಳಿಲ್ಲವೆಂತ ರಾ| ಎಮ್. ಸುಬ್ರಮಣ್ಯಮ್. ಬಿ. ಎ. ಬಿ. ಎಲ್. ಇವರು ಮದ್ರಾಸು ಸಮಾಜಸಂಸ್ಕಾರ ಸಂಘದವರ ಪರವಾಗಿ ತಮ್ಮ ಆಧಾರಗಳನ್ನೆಲ್ಲ ಕೊಟ್ಟು ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸಿರುತ್ತಾರೆ.

~~~~~

ದಕ್ಷಿಣ ಕನ್ನಡ.

~~~~~

ಪ್ರಕಟಣೆ.

[illegible] ಗ್ರಾಮದ ಮುದ್ದಣ್ಣಯ್ಯ [illegible]

[illegible] ಇಟ್ಟಿತ್ತು. [illegible] ಸಮೇತ ಮಾರ್ಕೆಟ್ಟಿಗೆ ಹೋಗುವ ಸಮಯ ಹಳೆಯಂಗಡಿಯಲ್ಲಿ ರಿಕಾರ್ಡು ಕಟ್ಟಿನಲ್ಲಿ ನೋಡುವಾಗ್ಯೆ ಸದರಿ ನೋಟು ಗೈರವಿಲೆಯಾಗಿಯದೆ. ಸಿಕ್ಕಿದವರು ತಂದು [illegible] ಟ್ಟರೆ ೧ ಒಂದು ರೂಪಾಯಿ ಇನಾಮಾಗಿ ಕೊಡುವೆನು.
ತಾ. 13—4—1910,

||| ಪಾವಂಜೆ ಗ್ರಾಮದ ಗುರುರಾಯ [illegible]
ವಿಧವೆ ಕೃಷ್ಣಮ್ಮನ ಗೆರೆ ರುಜು.

~~~~~

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳೂ, ೧೯ ಸಿಡುಬು ರೋಗದ ಮರಣಗಳೂ ಇದ್ದವು.

ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಸ್ಕೂಲಿನ ಫಸ್ಟ್ ಅಸಿಸ್ಟಾಂಟರಾಗಿದ್ದ ಮ| ರಾ| ರಾ| ಕೆ. ವೆಂಕಟ್ರಾಯರಿಗೆ ೫೦ ರೂಪಾಯಿ ಒಡ್ಡಿಯ ಮೇಲೆ ರಾಜಮಹೇಂದ್ರಿ [illegible]ಜಿಗೆ ವರ್ಗವಾಗಿರುತ್ತದೆ. ಇಲ್ಲಿ ಅವರ ಬದಲಾಗಿ ಮ| ರಾ| ಎಮ್. ಬಾಬು ಬಿ. ಎ., ಎಲ್. ಟಿ. ಇವರನ್ನು ಫಸ್ಟ್ ಅಸಿಸ್ಟಾಂಟರನ್ನಾಗಿ ನೇಮಿಸಿರುತ್ತಾರೆ.

ಎರಡು ಮೂರು ದಿವಸಗಳಿಂದೀಚೆಗೆ ಇಲ್ಲಿಯ ಮಂಗಳೂರು ಟ್ರಾನ್ಸಿಟು ಕಂಪೆನಿಯವರು ಪ್ರಯಾಣಸ್ಥರ ಉಪಯೋಗಾರ್ಥವಾಗಿ ಪುತ್ತೂರಿಗೆ ಮಾತ್ರ ಸಾಗಿಸುತ್ತಿದ್ದ ತಮ್ಮ ಜಟಕಾ ಗಾಡಿಗಳನ್ನು ಬಂಟ್ವಾಳತ್ತಕಡೆಗೂ ಸಾಗಿಸುವ ವಿಲೆವಾರಿಮಾಡಿರುತ್ತಾರೆ.

ಇದೇ ತಿಂಗಳ ಕಳದ ೮ನೇ ತಾರೀಕಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಇಲ್ಲಿಗೆ ಬಂದಿದ್ದರು.

ಮೊನ್ನೆ ದಿನ ಇಲ್ಲಿಯ ಮುನಿಸಿಪಲ್ ಆಫೀಸಿನ ಒಂದು ಕೋಣೆಯಲ್ಲಿ ಸೀಮೆ ಎಣ್ಣೆ ಡಬ್ಬಿಗಳೊಂದಕ್ಕೆ ಅಕಸ್ಮಾತವಾಗಿ ಬೆಂಕಿ ಬಿದ್ದಿತ್ತು. ಆದರೆ ಏನೊಂದೂ ಗಂಡಾತರ ಉಂಟಾಗದೆ ಬೆಂಕಿಯು ಅಲ್ಲಿಯೇ ನೊಂದಿ ಹೋಯಿತು.

ಕಂಕನಾಡಿ ಸಬ್ ಪೋಸ್ಟ್ ಆಫೀಸಿನ ಸಬ್ ಪೋಸ್ಟ್ ಮಾಸ್ತರರಾಗಿದ್ದ ಮ| ರಾ| ರಾ| ವಿಟ್ಠಳ ಕಮ್ತಿಯವರಿಗೆ ೫೦ ರೂಪಾಯಿ ಒಡ್ಡಿಯ ಮೇಲೆ ಮಂಗಳೂರು ಹೆಡ್ ಪೋಸ್ಟು ಆಫೀಸಿಗೆ ವರ್ಗವಾಗಿಯದೆ.

ಇದೇ 1910ನೇ ಇಸವಿ ಕಳದ ಮಾರ್ಚಿ [illegible] 30ಕ್ಕೆ ಗೌಡಸಾರಸ್ವತ ಸಮಾಜಕ್ಕೆ ಸೇರಿದ ಕಾಶೀ ಮಠ ಸಂಸ್ಥಾನದ ಗುರುಗಳಾದ ಶ್ರೀಮದ್ ವರದೇಂದ್ರ ತೀರ್ಥಸ್ವಾಮಿ ಶ್ರೀಪಾದಂಗಳವರಿಗೆ ತಿರುವಾಂಕೋಡಿನ ಮಹಾರಾಜರವರು, ವಿನಯಪೂರ್ವಕ ಆಥಿತ್ಯವನ್ನು ಮಾಡಿದರೆಂದಾಗಿಯೂ ತತ್ಸಮಯದಲ್ಲಿ ಅಮೂಲ್ಯವಾದ ಆಭರಣಗಳನ್ನು ಯತಿವರರ ಪಾದಂಗಳಿಗೆ ಅರ್ಪಿಸಿರುವರೆಂದಾಗಿಯೂ ತಿಳಿಸುವರೆ ಬಹಳ ಸಂತೋಷಪಡುತ್ತೇವೆ.

ಮಂಗಳೂರು ಟ್ರಾನ್ಸಿಟ್ ಕಂಪೆನಿಯಲ್ಲಿರುವ ರಾ| [illegible] ನರಸಿಂಹ ನ್ಯಾಕರವರು ಈ ಕೆಳಗಿನ ಸಮಾಚಾರವನ್ನು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಬೇಕೆಂದು ವಿಜ್ಞಾಪಿಸಿಕೊಂಡಿರುವರು:–ರಾ| ಕೆ| ನರಸಿಂಹ ನ್ಯಾಕರವರು ಹೆಚ್ಚು ಸಮಯ ಹಿಂದೂ ಟ್ರಾನ್ಸಿಟು ಕಂಪೆನಿಯ ಮಂಗಳೂರ ಆಫೀಸಿನ ಮೆನೇಜರರಾಗಿದ್ದರು. ಕಳದ ದಶಂಬರ ತಿಂಗಳಲ್ಲಿ ಅವರ ಕಂಪೆನಿಯಲ್ಲಿ ಕೆಲಸ ಬಿಟ್ಟು ಮಂಗಳೂರ ಟ್ರಾನ್ಸಿಟ್ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದರು. ಹಿಂದೂ ಟ್ರಾನ್ಸಿಟ್ ಕಂಪೆನಿಯ ಪ್ರೊಪ್ರೈಟರರಾದ ರಾ| ಸುಬ್ಬಯ ಶೆಟ್ರರವರು, ನರಸಿಂಹ ನ್ಯಾಕರ ಮೇಲೆ ಠಕ್ಕವಂಚನೆಯ ವಿಶ್ವಾಸಘಾತಕದ ಫಿರ್ಯಾದು ದಾಖಲು ಮಾಡಿದರು. ಫಿರ್ಯಾದಿಯ ತನಖಿಯು ನಡದು ಈ ತಿಂಗಳ [illegible] ನರಸಿಂಹ ನ್ಯಾಕರವರ ಮೇಲೆ ತಪ್ಪು [illegible] [illegible]
~~~~~

ಕಾಸರಗೋಡು.—[illegible] ಶನಿವಾರ ಸಬ್ ಮ್ಯಾಜಿಸ್ಟ್ರೇಟ್ ಮ. ರಾ. ರಾ. ಅಚ್ಯುತಯ್ಯನವರು ಬಂದು ಛಾರ್ಜ್ ವಹಿಸಿಕೊಂಡಿರುವರು.

ಇದೇ ತಿಂಗಳ ೧೦ನೇ ಆದಿತ್ಯವಾರ ಸಾಯಂಕಾಲ ಲೋಕಲ್ ರಿಕಾರ್ಡು ರೆವಿನ್ಯು ಇನ್ಸಪೆಕ್ಟರರಾದ ಕಾಸರಗೋಡು ವೆಂಕಟರಾಯರು ಜ್ವರ ಕಾಹಿಲೆಯಿಂದ ಪರವಶರಾದರೆಂದು ತಿಳಿಸಲು ವಿಷಾದಪಡುತ್ತೇನೆ.

ನಮ್ಮಲ್ಲಿಗೆ ವರ್ಗವಾಗಿ ಬಂದ ಅಚ್ಯುತಯ್ಯನವರು ಸದ್ಯದಲ್ಲಿಯೇ ರಜೆ ಮೇಲೆ ಹೋಗಿ ಇಲ್ಲಿಗೆ ಅವರ ಬದಲಾಗಿ ಟಿ. ಭವಾನಿಶಂಕರರಾಯರು ಬರುವರೆಂಬ ವರ್ತಮಾನವಿರುವುದು

~~~~~~

ಮುಲ್ಕಿ. ತಾರೀಕು ೭ರಲ್ಲು ೮ನೇ ಸರ್ಕಲಿನ ಶಾಲಾ ಇನ್ಸ್ಪೆಕ್ಟರರಾದ ಮ ಪಿ ಪಿ ಬ್ರೈತ್‌ವೇಟ್ ದೊರೆಗಳವರೂ ಅಸಿಸ್ಟಾಂತ ಇನ್ಸ್ಪೆಕ್ಟರರಾದ ಮ. ಯು ರಾಘವೇಂದ್ರ ರಾಯರವರೂ ಬಿ ಜಿ ಯಂ ಸೆಕೆಂಡರಿ ಶಾಲೆಯ ವರ್ಷಾವಧಿ ಸಂದರ್ಶನೆಗಾಗಿ ದಯಮಾಡಿದ್ದರು ಪೂರ್ವಾಹ್ನ ೧೦ ಗಂಟೆಯಿಂದ ಅಪರಾಹ್ನ ೪ ಗಂಟೆಯ ವರೆಗೂ ಪರೀಕ್ಷೆ ನಡಿಯಿತು ನಂತರ ಶಾಲಾ ಮಕ್ಕಳು ಇಂಗ್ಲೀಷಿನ ಮಾತುಗಳಿದ್ದು ಕನ್ನಡದ ಸೊಗಸಾದ ರಾಗಗಳ ಪದ್ಯಗಳಿಂದ ಕೂಡಿದ, ಈ ಸಂದರ್ಭಕ್ಕಾಗಿಯೇ ತಯಾರು ಮಾಡಲ್ಪಟ್ಟ ಸಾವಿತ್ರಿ ನಾಟಕವನ್ನು ಸಾಂಗವಾಗಿ ಆಡಿ ತೋರಿಸಿ ಕೂಡಿಬಂದವರನ್ನು ಸಂತೋಷಗೊಳಿಸಿದರು

ನಂತರ ಶಾಲಾ ಮಕ್ಕಳಲ್ಲಿ ನಿಪುಣರಾದವರಿಗೆ ಇನ್ಸ್ಪೆಕ್ಟರ್ ದೊರೆಗಳವರೇ ಇನಾಮುಗಳನ್ನು ಹಂಚಿ ಈ ಶಾಲೆಯಿಂದ ಕ್ಷೇತ್ರಕ್ಕೆ ಇರುವ ಪ್ರಯೋಜನವನ್ನೂ ಶಾಲೆಯ ಉಚ್ಛಸ್ಥಿತಿಯನ್ನೂ ಸಭಿಕರಿಗೆ ತಿಳಿಸಿದ ನಂತರ ಶಾಲಾ ರಿಪೋರ್ಟಿನ ಮೂಲಕ ಈ ಶಾಲೆಯಲ್ಲಿ ೧೨೫ ಹುಡುಗರಿರುವರೆಂತಲೂ, ಸರಕಾರದ ಸಹಾಯವು ದಿನೇ ದಿನೇ ಕಮ್ಮಿಆಗುತ್ತಾ ಬರುವುದರಿಂದ ಮಿಶ್ಶನಿನವರಿಗೆ ನಷ್ಟವಾಗುತ್ತದಾದರೂ ಕ್ಷೇತ್ರಿಕರ ಉಪಕಾರಕ್ಕಾಗಿ ಮಿಶ್ಶನಿನವರು ಈ ಶಾಲೆಯನ್ನು ನಡಿಸುತ್ತಿರುವುದರಿಂದ, ಪ್ರತ್ಯುಪಕಾರವಾಗಿ ಮಕ್ಕಳನ್ನು ಹೆಚ್ಚಾಗಿ ಶಾಲೆಗೆ ಕಳುಹಿಸುವಂತೆ ಮಕ್ಕಳ ಹೆತ್ತವರು ಜಾಗ್ರತೆ ತೆಗೆದುಕೊಳ್ಳುವುದಾಗಿಯೂ ಅಭಿಪ್ರಾಯ ವಾಯಿತು

ಬಳಿಕ ಶಾಲಾ ಮೆನೇಜರರಾದ ರೆವರೆಂಡ್ ಬ್ರೈಡೆನ್ ಬಾಕ್ ದೊರೆಗಳವರು ಈ ಶಾಲೆಯನ್ನು ಇಲ್ಲಿರಿಸಬೇಕಾದರೆ ಪಟ್ಟಂಥಾ ಕಷ್ಟನಷ್ಟಗಳನ್ನೂ ಆ ಕಾಲದಲ್ಲಿ ಶಾಲಾ ಮಕ್ಕಳ ಸಂಖ್ಯೆಯನ್ನೂ ಈಗಿನ ಉಚ್ಛಸ್ಥಿತಿಯನ್ನೂ ಹೇಳಿ ಬರಲ್ಲದೆ ಶಾಲಾ ಉಪಾಧ್ಯಾಯರ ಚಟುವಟಿಕೆ ನಂಬಿಕೆ ಮುಂತಾದವುಗಳನ್ನು ಹೊಗಳಿ ಶಾಲೆಯನ್ನು ಮಂಜೂರು ಮಾಡಿದ ಸರಕಾರದವರನ್ನೂ ಕೊಂಡಾಡಿ ವಿದ್ಯೆಯಿಂದುಂಟಾಗುವ ಆತ್ಮೀಕ, ಶರೀರಿಕ ಫಲಗಳನ್ನು ಸಭಿಕರಿಗೆ ವಿವರಿಸಿದ್ದು ಬಹಳ ಶ್ಲಾಘನೀಯವೇ ಸೈ ಹ್ಯಾಗೂ ಕೂಡಿಬಂದ ಸಭಿಕರೂ ಶಾಲಾ ಇನ್ಸ್ಪೆಕ್ಟರರವರೂ ಮಕ್ಕಳ ನಾಟಕವನ್ನೂ ಪದಗಳನ್ನೂ ಕೇಳಿ ಮನಃ ತೃಪ್ತಿಹೊಂದಿ ಹಿಂದೆರಳಿದರೆಂಬದಕ್ಕೆ ಯಾವ ಸಂಶಯವೂ ಇರದು ಆದರೆ ಕ್ಷೇತ್ರಿಯರಲ್ಲಿ ಬರೇ ಅಲ್ಪ ಮಂದಿ ಮಾತ್ರವೇ ಶಾಲಾ ಹಿತಚಿಂತಕರಾಗಿರುವರು? ಹೀಗಿರುವುದರಿಂದ ಕ್ಷೇತ್ರಿಕರು ವಿದ್ಯೆಯ ಮಹಿಮೆಯನ್ನು ಅರಿತು ಈ ಶಾಲೆಗೆ ಮತ್ತಷ್ಟು ಉತ್ತೇಜನ ಕೊಡುವುದೂ ಬಡ ಮಕ್ಕಳಿಗೆ ವೇತನ ಮೊದಲಾದ ಸಹಾಯ ಸಿಕ್ಕುವಂತೆ ತಮ್ಮಲ್ಲಿಯೇ ಒಂದು ಫಂಡನ್ನಾಗಲೀ ಸಂಘವನ್ನಾಗಲೀ ಏರ್ಪಡಿಸಿ ಬಡವರಿಗೆ ಕೂಡಾ ವಿದ್ಯಾಲಾಭವಾಗುವಂತೆ ಮಾಡುವುದೂ ಉತ್ತಮವೆಂದು ನನ್ನ ಅಭಿಪ್ರಾಯ.

ಪ್ರತ್ಯಕ್ಷದರ್ಶಿ.

ಎರ್ಮಾಳು. ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುವುದು ವಿದ್ಯಾ ಇಲಾಖೆಯ ಮೇಲಾಫೀಸರರು ಮನವರಿತವರಾಗಿ ಶಾಲೆಗೆ ೪ನೇ ಮಾಸರನ್ನಾಗಿ [illegible] ಎಂಬ ಯೋಗ್ಯ ತರುಣರನ್ನು ನೇಮಕ ಮಾಡಿದ್ದಾರಾಗಿ ಕೇಳಿ ತುಂಬಾ ಸಂತೋಷವಾಗಿರುತ್ತದೆ. ಆದರೆ ೪ ಜನ ಉಪಾಧ್ಯಾಯರುಗಳಿಗೂ ೧೦೦ ವಿದ್ಯಾರ್ಥಿಗಳಿಗೂ ಕೂತುಕೊಳ್ಳುವರೆ ಸಾಕಷ್ಟು ಸ್ಥಳವೂ ಬೇಕಾದ ಸಾಮಾನುಗಳೂ ಇಲ್ಲದೆ ಇರುವದು ಬಂದವರಿಗೆ ಕಲ್ಕತ್ತದ ಕತ್ತಲೆಯ ಸೆರೆಮನೆಯ ನೆನಪು ಮಾಡುವ ಹಾಗಿದೆ ಇದಕ್ಕೆ ಆಸ್ಪದ ಸಿಕ್ಕದಂತೆ ದಯಾಳುವಾದ ವಿದ್ಯಾ ಇಲಾಖೆಯ ಆಫೀಸರರುಗಳು ಬೇಕಾದ ಸಾಮಾನುಗಳನ್ನು ಆದಷ್ಟು ಬೇಗನೆ ಸಂಗ್ರಹಿಸಿ ಕೊಟ್ಟಾರು ಎಂದು ನಂಬುತ್ತೇನೆ.

ಇಲ್ಲಿಯೇ ಸಮೀಪವಿರುವ ಕಾಪು ಬೋರ್ಡ್ ಎಲಿಮೆಂಟರಿ ಶಾಲೆಯು ಆ ಊರಲ್ಲಿ ಪ್ರಬಲಿಸುತ್ತಾ ಬಂದ ಸಿಡುಬು ರೋಗದ ಕುರಿತು ೧೫ ದಿನಗಳು ತನಕ ಮುಚ್ಚಲ್ಪಟ್ಟಿರುತ್ತದೆ

~~~~~~

ವಿವಿಧ ವಿಷಯಗಳು

~~~~~~

"ದೈವಿಕ ಮೊಸಳೆಗಳು" ಕಲ್ಕತ್ತೆಯ ದೈನಿಕ ಬಂಗಾಲಿ ಪತ್ರಿಕೆಗೆ ಸುರೇಂದ್ರನಾಥ ಗಂಗೂಲಿ ಎಂಬವರು ತಾನು ಸ್ವತಹ ನೋಡಿದ ದೈವಿಕ ಮೊಸಳೆಗಳ ವೃತ್ತಾಂತವನ್ನು ಕಳುಹಿಸಿ ಅದರ ಯಥಾರ್ಥದ ಕುರಿತು ತಾನು ಬದ್ಧನೆಂದು ಕೂಡಾ ಬರದಿರುತ್ತಾರೆ ಅದೇನಂದರೆ:— ಬಂಗಾಲದ ಮಾಲ್ಡಾ (Maldah) ಜಿಲ್ಲೆಯ ಕೋಟಿಹಾರ ಗೋದಗರಿ ಲೋಹಮಾರ್ಗದ ರೋಹಿಣಿಪುರವೆಂಬ ಠಾಣ್ಯದ ಸಮೀಪ ಉಜಿರಪುರವೆಂಬ ಹಳ್ಳಿಯಲ್ಲಿ ಒಬ್ಬ ಮಹಮ್ಮದಿ ಫಕೀರನು ವಾಸಿಸುವ ಒಂದು ಗೋರಿಮಸೀದಿ ಇರುವದು ಅದರ ಪಕ್ಕದಲ್ಲಿ ಒಂದು ಕೆರೆಯಲ್ಲಿ ದೈವಿಕ ಮೊಸಳೆಗಳೆಂದು ಹೆಸರುಗೊಂಡ ಹೆಚ್ಚು ಕಡಿಮೆ ಪರಿಮಾಣದ ೩ ಮೊಸಳೆಗಳಿರುತ್ತವೆ ವಿಶ್ವಾಸವುಳ್ಳ ಅನೇಕ ಜನರು ತಮ್ಮ ಕಷ್ಟಕಾಲದಲ್ಲಿ ಮೊಸಳೆಗಳಿಗ ಹೇಳಿಕೊಂಡ ಹರಿಕೆಗಳನ್ನು ಒಪ್ಪಿಸುವದಕ್ಕಾಗಿ ಅಲ್ಲಿಗೆ ಬಂದು ಆ ಕೆರೆಯಲ್ಲಿ ಮಿಂದು ತಮ್ಮ ಶಕ್ತ್ಯಾನುಸಾರ ಕುರಿಯನ್ನಾಗಲೀ ಕೋಳಿಯನ್ನಾಗಲೀ ಮಹಮ್ಮದಿ ಪದ್ಧತಿಯಂತೆ ಕೊಂದು ಆ ಕೆರೆಯಲ್ಲಿ ಬಿಸಾಡುತ್ತಾರೆ ಯಾರ ಹರಕೆಯಗೋಸ್ಕರ ಆ ಆಹಾರವು ಹಾಕಲ್ಪಟ್ಟಿತ್ತೋ ಅಂಥವರ ಭಕ್ತಿಗೆ ಆ ಮೊಸಳೆಗಳು ಮೆಚ್ಚಿದುದಾದರೆ ಮೇಲಕ್ಕೆ ಬಂದು ಇಕ್ಕಿದ ಆಹಾರವನ್ನು ಸ್ವೀಕರಿಸಿ ಹರಕೆಯನ್ನು ಒಪ್ಪಿಕೊಳ್ಳುತ್ತವೆ ಮೊಸಳೆಗಳು ಮೇಲಕ್ಕೆ ಬಂದು ಆಹಾರವನ್ನು ತಕ್ಕೊಳ್ಳುವ ತನಕ ಭಕ್ತನು ಕೈಜೋಡಿಸಿಕೊಂಡು ಪ್ರಾರ್ಥಿಸಿಕೊಳ್ಳುತ್ತಾ ನಿಲ್ಲಬೇಕಾಗುವದು ಎಷ್ಟು ಹೊತ್ತಾದರೂ ಮೇಲಕ್ಕೆ ಬಂದು ಬಲಿಯನ್ನು ಮೊಸಳೆಗಳು ಮುಟ್ಟದಿದ್ದರೆ ಹರಕೆಯನ್ನು ಒಪ್ಪಿಸಿಕೊಳ್ಳಲಿಲ್ಲವೆಂದೂ ತನ್ನ ಗ್ರಹಚಾರವು ಬಯಲಾಗಲಿಲ್ಲವೆಂದೂ ಭಕ್ತನು ತಿಳುಕೊಳ್ಳುವದಲ್ಲದೇ ತುಸದಿನಗಳಲ್ಲಿಯೇ ಆತಗೆ ಏನಾದರೊಂದು ಕಷ್ಟಬರುವದೆಂದು ತಿಳುಕೊಳ್ಳಬೇಕು ಕೆಲವು ಸಂದರ್ಭಗಳಲ್ಲಿ ಬಹಳ ಹೊತ್ತು ಮೊಸಳೆಗಳನ್ನು ಅಂತಃಕರಣಪೂರ್ವಕ ಪ್ರಾರ್ಥಿಸುತ್ತಾ ನಿಂತನಂತರ ಮೊಸಳೆಗಳು ಬಂದು ತುತ್ತನ್ನು ಒಪ್ಪಿಕೊಂಡ ಕಾರಣದಿಂದ ಭಕ್ತನ ಗಂಡಾಂತರಗಳು ಪ್ರತ್ಯಕ್ಷ ಪರಿಹಾರವಾಗಿವೆ ಎಂಬ ದೃಷ್ಟಾಂತಗಳನೇಕವಿರುವವು. ಈ ಎಲ್ಲಾ ಸಂಗತಿಗಳು ನಿಜವಾಗಿಯೂ ತಾನು ಕಣ್ಣಾರೆ ಕಂಡಿರುವನೆಂದೂ ಅನುಮಾನವಿರುವವರು ಆ ಸ್ಥಳಕ್ಕೆ ಹೋಗಿ ನೋಡಬಹುದೆಂದೂ ಸಹ ಹೇಳುತ್ತಾರೆ. ಆ ಕೆರೆಯು ಕಹಿರಪುರದ ರಾಜಾಶಶಿಶೇಖರೇಶ್ವರ ಎಂಬವರದಾಗಿರುತ್ತದಂತೆ.

"ದಲಾಯಿಲಾಮರಗತಿ." ಈಗ ಹಿಂದುಸ್ಥಾನದಲ್ಲಿರುವ ಟಿಬೇಟಿನ ದಲಾಯಿ ಲಾಮರು ಆ—ತಾಂಗ— ಲೊ—ತು—ಸ್ಯಾಂಗ್—ಟು—ತು—ಟಾಸ್—ಜಯಾ—[illegible] [illegible] ದಾವಳಿಯುಳ್ಳವರು—ಈ ಪದೆಗೆ [illegible] ಕಾರಿಯೆಂದು ಭಾವಿಸಲ್ಪಟ್ಟು ಅವರ ಕೈಯಲ್ಲಿ ಸ್ವತಂತ್ರ ಅಧಿಕಾರಿ ಸಿಕ್ಕಿದಂದಿನಿಂದ ದುರಾಚಾರಿಯಾಗಿ ಟಿಬೇಟಿನ ಜನರಿಗೆ ಉಪದ್ರಕಾರಕನೆಂದು ತಿಳಿದುಬಂದದರಿಂದ ರಾಜ್ಯಭಾರವನ್ನು ಕ್ರಮಪಡಿಸಬೇಕೆಂತ ಚೀನದ ಮಹಾ ಸಾಮ್ರಾಜ್ಯದ "ಸೆಚುಅನ್" ಸೈನ್ಯವನ್ನು ಟಿಬೇಟಿಗೆ ಕಳುಹಿಸುತ್ತಲೆ. ಆ ದಂಡು ಲ್ಹಾಸ್ಸಾ ಪಟಣಕ್ಕೆ ಮುಟ್ಟಿದ ಕೂಡಲೇ ಈ ಗುರುಗಳು ಹೇಳದೆ ಪಲಾಯನ ಮಾಡಿದರು. ಅವರನ್ನು ಹುಡುಕಿ ತಿರಿಗಿ ಟಿಬೇಟಿಗೆ ಕರತಂದು ಅವರ ಬಗ್ಗೆ ಏನಾದರೂ ಪ್ರಯೋಜನವನ್ನು ಮಾಡಿಡಬೇಕೆಂತ ತಾಂವು ಅಲ್ಲಿಯ ನಿವಾಸಿಕರಿಗೆ ತಿಳಿಸಿದೆವು ಆದರೆ ಅವರ ಸಮಾಚಾರ ಸಿಕ್ಕಲಿಲ್ಲ. ಶ್ರೇಷ್ಟ ಧರ್ಮಾಧಿಕಾರಿಯಾದವರು ಈ ರೀತಿ ಮಾಡಿದುದಕ್ಕಾಗಿ ಅವರು ಹುತ್ ಉಖ್ತು ಅಥವಾ ಸಂತರ ಹಿರೇತನಕ್ಕೆ ಯೋಗ್ಯರಲ್ಲವು ಅಲ್ಲದೇ ಅವರಿಗೆ ಶೀಕ್ಷಾಪ್ರದವಾಗಿ ದಲಾಯಿ ಲಾಮನೆಂಬ ಹೆಸರನ್ನು (ಬಿರುದು ಸಹ) ತೆಗದು ಹಾಕಿರುವೆವು ಅವರೆಲ್ಲಿ ಹೋದರೂ ಯಾ ತಿರಿಗಿ ಟಿಬೇಟಿಗೆ ಬಂದರೂ ಸಾಮಾನ್ಯ ಜನರಂತೆ ಭಾವಿಸಲ್ಪಡುವರು.

ಟಿಬೇಟಿನ ಜನರು ಅಸಮಾನ ಲಕ್ಷಣಗಳೊಡನೆ ಹುಟ್ಟಿದ ಮಕ್ಕಳನ್ನು ಹುಡುಕಬೇಕೆಂದೂ ಅವರ ಹೆಸರನ್ನು ಸುವರ್ಣ ಚಕ್ರದಿಂದ ಆರಿಸಿ ತೆಗೆಯಲ್ಪಟ್ಟವ ಧರ್ಮಾಧಿಕಾರದ ಉಚ್ಚ ಪದವಿಗೆ ಅರ್ಹನಾಗಿ ಹುಬಿಲ್ ಹಾನ್ (ಪುನರವತಾರ) ವೆಂದು ತಿಳಿಯಲ್ಪಡಬೇಕು ವೆಂತ ಚೀನಿ ಸಾಮ್ರಾಜ್ಯದ ರಾಜಾಧಿಕಾರ ಸ್ಥಾನದವರು ಆಜ್ಞೆ (Decree) ಮಾಡಿರುತ್ತಾರೆಂದು ಪಾಯೊನಿಯರ್ ಪತ್ರಿಕೆಯು ಹೇಳುತ್ತದೆಂದು ಒಂದು ಸುದ್ದಿಯು ಕೇಳಿಸುತ್ತಿರುವುದು

B. S. R.

~~~~~~

ಜೀವಸುಗಳ ಧಾರಣೆ, ಮಂಗಳೂರು.

ಕೊಳಂರು ಮಸ್ಕತಿ ಅಕ್ಕಿ ,,,,,,	4—4—0
ಗುಡ್ಡು ಮಸ್ಕತಿ, ,,,,,,,,,,	3-14—0
ಮಸ್ಕತಿ ,,,,,,,,,,,,,,	3-13—0
ವಕ್ಲ ಸುಗ್ಗಿ ,,,,,,,,,,,	3-13—0
ಸುಗ್ಗಿ ,,,,,,,,,,,,,,,	3-10-0
ಮಸ್ಕತಿ ಬೆಳ್ತಿಗೆ ,,,,,,,,,,	4—6—0
ರಂಗೂನ್ ಬೆಳ್ತಿಗೆ ಗೋಣಿ .,	7—3—0
ಹುರುಳಿ ಗೋಣಿ ೧ ಮುಡಿ ೭ರ ,	6—0—0
ಉಪ್ಪು ಗೋಣಿ ೧ರ ,,,,,,,,	3—6—0
ಕೊಬ್ರಿ ಖಂಡಿ ೧ರ ,,,,,,,,	105—0—0
ಕೊಬ್ರಿ ಎಣ್ಣೆ ಮಣ ,,,,,,,,	7—4—0
ಕಾಫಿ ಖಂಡಿ ೧ರ ,,,,,,,,	180—0—0
ಕಾಳು ಮೆಣಸು ಖಂಡಿ, ,,,,,	112—0—0
ಹೊಸ ಬಿಳಿ ಗೋಟು ಅಡಿಕೆ ,,,	80—0—0
ಕರಿ ಗೋಟು ,,,,,,,,,,,	68—0—0
ಏಲಕ್ಕಿ ಮಣ ೧ರ ,,,,,,,,	28—0—0

ಅಬಲಾ ಸಂಜೀವಿನೀ ಗುಳಿಗೆಗಳು.

~~~~~

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದರೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲ ಕ್ರಮಪಡಿಸುತ್ತವೆ ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮದ ಗುರುತು ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಾಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸುವವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು [illegible] ಮಿತವಾಗಿದೆ. ವಿಶೇಷ ಮಾಹಿತಿಯು [illegible] ತವಾಗಿ ಕಳುಹಿಸುವೆವು. [illegible]

[illegible]
~~~~~

K. R. PATAK & CO

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆಬೀಳುವದು

ಬಾಟ್ಲ ಒಂದರ 6 ಆಣೆ

ಮೋಹಿನಿ ಎಣ್ಣೆ

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸಗಳ ವರೇಗೆ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ. ಬಾಟ್ಲ ಒಂದರ ಕಿಮ್ಮತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ ಗಿರಗಾಂ ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಸುರೆನ್ಸ್ ಸೊಸ್ಯಾಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —14 ಹೇರ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಫೀಸುಗಳು.—42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ

8 ಬ್ರೊಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು

ಸಂಘದ ನಿಯಮಿತ ಭಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲ್ಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು ಕಂಪೆನಿಯ ಪಾಲುಮ್ಹಾಲಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು. , ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ಬಿ. ಬಾಬುರಾವ್ ಎಂಡ್ ಸನ್ಸ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಮಾನಪತ್ರ ಬಾಟ್ಲಿಯೊಂದಿಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟ್ಲಿಗೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳು [illegible] ಕುರುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಷಣಾದಿ [illegible]ಗಳೂ, ಬಿಜ್ಜೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. [illegible]ಗೆ ಇದು ದಿವ್ಯ ಔಷಧವಾಗಿರುವದು.

[illegible] ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ [illegible] ಮಂಗಳೂರು [illegible] ಕುಂದಾಪುರ [illegible]

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಲೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

[illegible]

ಅನುಭವಸಿದ್ಧವಾದ ವನೌಷಧಿಗಳು.

೧. ಕುಂತಳಾನಂದ ತೈಲವು ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ ೧೦ ಆಣೆ,

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ

೩. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನು ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೫ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನವಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿದೆ. ೧೦ ತೊಲೆಗೆ ೧೨ ಆಣೆ

೮ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

೯. ಮಹಾಜ್ವರಾಂಕುಶ ಮಾತ್ರೆ. ಜೀರ್ಣಜ್ವರ, ಪರಿಸಿದ್ಧ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ಇಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮೊತ್ತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ— **ಬಿ. ಎಸ್. ನಾಥು ಮತ್ತು ಕಂಪೆನಿ,**

ಬಾಂದ್ರಾ (ಮುಂಬಯಿ ಹತ್ತಿರ).

Bandra (near Bombay).

ರೋಯಲ್ ಇಂಡಿಯನ್ ಬಾಂ.

ವಾತ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿಯದೆ.

ಪಿ ಎಲ್ ಸಾನಿಕ್ ಮುನ್ಸಿಪಾಲ್ ಸೆಕ್ರೆಟರಿ ಹಂಗನಘಾಟ ಮಧ್ಯ ಪ್ರದೇಶ ಇವರು ಬರೆಯುತ್ತಾರೆ ನಾನು ಮನೋರಾ ಕಂಪೆನಿಯ ರೋಯಲ್ ಇಂಡಿಯನ್ ಬಾಮನ್ನು ವಾತದ ನೋವುಗಳ ಮೇಲೆ ಉಪಯೋಗಿಸಿದ್ದು ಪೂರ್ಣವಾಗಿ ಗುಣಬಂದಿರುತ್ತದೆ. ಈ ಅಮೂಲ್ಯವಾದ ಮುಲಾಮು ಎಲ್ಲಾ ಮುಲಾಮಿಗಿಂತಲೂ ಶ್ರೇಷ್ಠವಾದದ್ದು.

ರೋಯಲ್ ಇಂಡಿಯನ್ ಬಾಂ

ತಲೆ ನೋವು, ಸಂಧಿವಾತ, ಉಳುಕು ಮೂರು ಲೇಪನಗಳಿಂದ ಗುಣವಾದದ್ದು.

ಇಂದು ಪ್ರಕಾಶ ಎಂಬ ಇಂಗ್ಲಿಷು ಪತ್ರ ಎಡಿಟರು ಬರೆಯುವದೇನಂದರೆ - ಮನೋರಾ ಕಂಪೆನಿಯವರ ರೋಯಲ್ ಇಂಡಿಯನ್ ಬಾಂ ತಲೆನೋವಿಗೆ ಸಂಧಿವಾತಕ್ಕೆ ಉಳುಕಿಗೂ ಬಹಳ ಉತ್ತಮವಾದದ್ದು. ಇದನ್ನು ಆತಿಥಿಗಳ ಮೇಲೂ ಹೆಚ್ಚು ಕಡತದ ಮೇಲೂ ಸುಖಕರವಾಗಿ ಉಪಯೋಗಿಸಬಹುದು.

ರೋಯಲ್ ಇಂಡಿಯನ್ ಬಾಂ.

ಇದರಿಂದ ವಾತ ಸಂಧಿವಾತ, ತಲೆನೋವು, ಜಬರು, ಹಾವು, ಉರಿ, ಸೊಂಟದ ನೋವು, ಉಳುಕು ಮುಂತಾದ ಎಲ್ಲಾ ತರದ ನೋವುಗಳು ಖಾತಿಯಿಂದ ನಿಲ್ಲುವವು.

ಬಾಟ್ಲಿ ಒಂದರ ಕಿಮ್ಮತು 0 8-0, 6 ಬಾಟ್ಲಿಗಳಿಗೆ 2 10-0, 12 ಬಾಟ್ಲಿಗಳಿಗೆ 5-0-0

ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ಸಿಕ್ಕುವದು.

ಅಥವಾ,

ವಿಳಾಸ:—ಮನೋರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

ಪೆರ್ಲ ಎಂಡ್ ಸನ್ಸ್ ಮಂಗಳೂರು.

ಬೇಕಲ ವೆಂಕಟರಾವ್ - ಉಡುಪಿ.

ರಾಮರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು ಸುರಂಗಿ ಹೂಗಳಿಂದಲೇ ತಯಾರಿಸಲ್ಪಟ್ಟ ಅತೀ ಸುವಾಸಿಕ ಮತ್ತು ಮನೋಹರವಾದ ಅತ್ತರು. ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೆಗೆ ಹೋಗುವದಿಲ್ಲ. ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು. ಬಾಟ್ಲಿ ಒಂದರ ಕಿಮ್ಮತು ೧—೪—೦.

ದಿಲ್ ಬಹಾರ್ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು ಒಂದು ಸಾರಿ ತರಿಸಿ ನೋಡಿರಿ ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತು ೧—೦—೦

ಜಾಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾ ಕೊಂಡಾಡುತ್ತಾರೆ. ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೆಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತು ೦—೧೪—೦.

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ ಕಾಲ ಬಿಟ್ಟು ಇಟ್ಟು ತೆಗೆದದ್ದಾಗಿರುತ್ತದೆ.

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು.

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯ... ವದು.

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಲಾ ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀಯ ಲಾಗಳು, ಅನೇಕ ಶಾಸನಗಳು ಇವುಗಳ ಸಂಗ್ರಹವು, ೯೦ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳದ್ದಾಗಿಯೂ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ ಪಿ ಮಾದಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯರ್ರ್ಸ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವರು

THE HINDU SOAP MANUFACTURING CO,

ಹಿಂದೂ ಸೋಪ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರೆಕುವವು ಮಾರಾಟಕ್ಕೆ ಏಜಂಟರುಗ ಅಪೇಕ್ಷಿಸುವವರು ಬರಕೊಳ್ಳಬಹುದು

ದಿ ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು ಶಿರೋಭಾರ, ಒಳಕೆಬ್ಬು, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ದಬ್ಬಿ ೧ರ ಕ್ರಯ 0-8 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೭-8-0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ ವಿ ಪಿ. ಖರ್ಚು ಪ್ರತ್ಯೇಕ

ಟಿ ಬ ಬಾರಾಯರ

ಯುನಿವರ್ಸಲ್ ಔಷಧಾಲಯ,

ವೆಬ್ಸ್ಟರ್ ಮಾರ್ಕೆಟ್ ರಸ್ತೆ ಮಂಗಳೂರು, ದ ಕ.

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ! ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು ದ ಕ

ಡಾಕ್ಟರ್ ವಾಮನ ಗೋಪಾಲರವರ

ಐವತ್ತು ವರ್ಷಗಳಿಂದ ಕೂಡಿರುವ

ಸರ್ಸಪರಿಲ್ಲಾ.

(ರಕ್ತ ಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು. ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು ಬಹುಕಾಲದ ವಾತ, ಚರ್ಮರೋಗಗಳು, ಗಂಡಮಾಲೆ, ಪಕ್ಷವಾತ, ಅಶುದ್ಧ ರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ [illegible] ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು ಧಾತು [illegible] ದಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ [illegible] ಹೆಚ್ಚು ಮಾಡುವುದು.

[illegible] ದೊಡ್ಡ ಬಾಟ್ಲಿ ರೂ. ೧-೮. ೬ ಬಾಟ್ಲಿಗಳು ದಸ್ತಾರಿ ೫ ಆಣೆ.

[illegible] — ೯ ಆಣೆ. [illegible] ಆಣೆ ೩.

[illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಕ್ರಯಕ್ಕೆ ಕೊಡಲ್ಪಡುವ ಊದುಬತ್ತಿಗಳು (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಕ್) ಜೇಷ್ಠಿಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ, ಮೈಸೂರು.

ಅಕ್ಷೈನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ - ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಬದ್ಧವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರೆಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್ ಮಂಗಳೂರು, ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಚಹಾ ಮತ್ತು ಕಾಫಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗ್ಯೆರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಸಿ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗ್ಯೆರೆ ಬಹಳ ಕಮ್ಮಿ ದರಗಳಲ್ಲಿ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) [illegible] ತರಕಾರೀ ಮತ್ತು [illegible] ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ದಿ ಎಲ್ ಬೈಯಣ್ಣ ಬ್ರದರ್ಸ್,

೬೯ ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

ಯುಗಾದಿಯ ಬಹುಮಾನ! ಯುಗಾದಿಯ ಬಹುಮಾನ!!

ಜಸನ್ ಟಿ ಓ ಸುಪೀರಿಯರ್ ಉಲ್‌ದಾರ 1 ಟೋಪಿ ದಾರಕ್ಕೆ 0 8 0 10 ಟೋಪಿ ದಯಾಗುವ ಬಂಡಲ್ 1ಕ್ಕೆ ರೂ 1 7 0 [illegible] ಗುಲಾಬಿ ಪಟ್ಟೆ ನೀಲಿ ಮತ್ತು ಕಾಫಿ ಬಣ್ಣಗಳಲ್ಲಿ ಜಾಸನ್ ಟೋಪಿ ಹೊಲಿಯುವ ಸಾಧಾರಣ ದಪ್ಪದ ಉಲ್ ಪೌಂಡು 1ಕ್ಕೆ 2 4 0, ಔನ್ಸ್ 1ಕ್ಕೆ 0 10 0, ಬಗಿನಲ್ಲಿ ಎಷ್ಟೆ ಕೆಂಪು ಕಪ್ಪು ಮತ್ತು ಹೇಟೆ ಕೆಂಪು ಮಿಶ್ರ ಉಲ್ ಪೌಂಡು 1ಕ್ಕೆ 2 12 0 ಆರು ಟೋಪಿ ಆಗುವದು ಹೆಣಿಕೆ ಸೂಜಿ 1ಕ್ಕೆ 0 1 6 ಮತ್ತು 0 -0 ಜಾಸನ್ ಟೋಪಿ ಹೊಲಿಯುವ ದಪ್ಪದ ಉಲ್ ಪೌಂಡು 1ಕ್ಕೆ ರೂ 1 12 0

ಜಾಸನ್ ಟೋಪಿಗಳು ಡಜನ್ 1ಕ್ಕೆ 8 0 0 ಮತ್ತು 1 0 0 ಶರದೇವಾಂಗ ರಂಗಿನಲ್ಲಿ ಕಸೂತಿಕೆಲಸ ಉಲನ್ ದಾರಗಳು ಪೌಂಡು 1ಕ್ಕೆ ರೂ 3 4 0

ಕೆಟಿಟೋ ಟಾಂ ಎಲ್ಲಾ ತರದ ವಾಕಕ್ಕೆ 0 8 0 ದೊಡ್ಡವರ ಕಾಲುಚೀಲಗಳು ಆಣೆ 0 4-0 ರಿಂದ 1 8 0 ಎಳೇ ಮಕ್ಕಳ ಕಾಲುಚೀಲಗಳು 0 4 0 ಮತ್ತು 0 6 0 ದೊಡ್ಡವರ ಕಾಟನ್ ಬನಿಯನ್ 1ಕ್ಕೆ 8 ಆಣೆಯಿಂದ 1 0 0 ದೊಡ್ಡವರ ಮುಸುಕಿನ ಟೋಪಿ 1ಕ್ಕೆ 1 0 0 [illegible] ಕಾಸುಗಳು ಹಾಕುವ ಉಲ್‌ದಾರದ ಪಾಕೆಟ್ 1ಕ್ಕೆ 0 2 0 [illegible] ವಾಚ್ ಪಾಕೆಟ್ 1ಕ್ಕೆ 0-2 0 ಉಲ್‌ದಾರದ ಕಮರ್‌ಬಂದ್ 1ಕ್ಕೆ 10 ಆಣೆಯಿಂದ 1 4 0 [illegible] 1ಕ್ಕೆ 0 1 0 0 1 6 [illegible] 0 1 0 ಪೋಣಿಗಿನ ಕಡ್ಡಿ ಕೊಳೆ 1ಕ್ಕೆ 0 2 0 ದಶಾಂಗ ಕೊಳೆ 1ಕ್ಕೆ 0 4 0 ಪಿತನಾ ಡಬ್ಬಿ 1ಕ್ಕೆ 0 4 0 ದಾಚು ಸರಪಣಿ 1ಕ್ಕೆ ಆಣೆ 6ರಿಂದ 0 12 0 ವರೆಗೆ. ರಬ್ಬರ್ ಸ್ಟಾಂಪು ಶಾಯಿ ಡಬ್ಬಿ 1ಕ್ಕೆ 0 4 0 ಸೇನ್ [illegible] ಬಾಲಮಿತ್ರನು 300 ಮಾತ್ರೆಗಳಿರುವ ಪಾಕೆಟ್ 1ಕ್ಕೆ 0 3 0 ಮೆಂತ್ಯಾಲ್ ಡಬ್ಬಿ 1ಕ್ಕೆ 0 3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5 0 ದೇಶಿ ಕೈವಸ್ತ್ರಗಳು ಡಜನ್ 1ಕ್ಕೆ 1 0 0 ಲಿನನ್ ಕೈವಸ್ತ್ರಗಳು ಡಜನ್ 1ಕ್ಕೆ 1 6 0 ಕಸ್ತೂರಿ ಮಾತ್ರೆ 200ರ ಶೀಸೆ 1ಕ್ಕೆ 0 4-0 ಕಾಮಿನಿಯ ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಶೀಸೆ 1ಕ್ಕೆ 1 0 0 ಪರಿಮಳ ನಶ್ಯ ಡಬ್ಬಿ 1ಕ್ಕೆ 0-2-0 ದಂತಮಂಜನ ಡಬ್ಬಿ 1ಕ್ಕೆ 0 1 6 ಪೋಮೇಡ್ ಶೀಸೆ 1ಕ್ಕೆ 0-5 0 ವಿಲ್‌ಬಾರ್ [illegible] ವಾದ ಅತ್ತರ್ ಶೀಸೆ 1ಕ್ಕೆ 1-8 0 ಕಾಮಿನಿ ಅತ್ತರ್ ಶೀಸೆ 1ಕ್ಕೆ 1-8 0 [illegible] ಅತ್ತರ್ ಶೀಸೆ 1ಕ್ಕೆ 2 0 0. ಇಂಗ್ಲಿಷ್ ಅಕ್ಷರದ ಪೆಟ್ಟಿಗೆ 1ಕ್ಕೆ 10 ಆಣೆಯಿಂದ 3-0-0. [illegible] ಕಾರ್ಡುಗಳು 100ಕ್ಕೆ 0 3 0 ರೂಲು ಹಾಕಿದ ಲೆಟರ್ ಪೇಪರ್ ಪಾಕೆಟ್ 1ಕ್ಕೆ 0-4-0 [illegible] ಕವರ್ 100ಕ್ಕೆ 0 5 0. ಕಾಬೂಲ್ ದೇಶದ ಹಿಂಗು 12 ತೊಲೆ ಡಬ್ಬಿ 1ಕ್ಕೆ 0-14-0. ಕೆಂಪು ಸೂಲಿನಿಂದ ತಯಾರಿಸಿದ ಕಮರ್‌ಬಂದ್—0-4-0, 0-7-0 ಮತ್ತು 0-9-0. [illegible] ಕಾಡಿಗೆ [illegible] 0-4-0.

[illegible]

SMALL-POX BALM.

ಅತ್ಯಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು.

ಶಿಡುಬು ರೋಗಕ್ಕೆ ಮುಲಾಮು:

ಶಿಡುಬು ರೋಗಕ್ಕೆ ... ವಿವಿಧ ... ಔಷಧಿ ಎಂದು ...

ಮೈಲೆಯಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಶಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ ಶಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಖಜ್ಜಿಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಖಜ್ಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು

ಹೋಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾವರೂ ಇದರ ಲೇಪನವು ಆಕ್ಷೇಪಕರವಲ್ಲ

ಮುಲಾಮನ್ನು ರೋಗತಗಲಿದ ೬ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ)

ರಥಬೀದಿ, ಮಂಗಳೂರು ಇವರಲ್ಲಿ ದೊರೆಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ
ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) — **ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ, — **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

1 × 8¼ 3 × 3¼, 8¼ × 6¼ 6" × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ್ದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮೆನೇಜರ್,

ಶಾರದಾ ಮುದ್ರಾಲಯ, ಮಂಗಳೂರು,

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗ
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:— ಮ್ಯಾನೇಜರ್, ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

Printed by V. S. Kamath, at the ... Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷ ೧ಕ್ಕೆ ರೂ 1 4 0 ಟಪ್ಪಾಲು ಹಾಸಲು ಶೇರಿ ರೂ 2 1 0

ಪುಸ್ತಕ 4 | ಮಂಗಳೂರ ತಾರೀಕು 22ನೇ ಶುಕ್ರವಾರ ಎಪ್ರಿಲ್ 1910 | ಸಂಚಿಕೆ 16

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು.

Trade Mark Registered

ಹಿಂದ ಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ ತಲೆನೋವು, ಶಿರೋಭಾರ ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು ಜಖಮು ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಚಿನ್ನದ ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿಯಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿದಾಯಕಗಳಿವೆ. ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

AMRUTANJAN.

BEST INDIAN PAIN BALM.

The best and Purest medicine ever made.

Amrutanjan Cures All Kind of Pains

TRY A BOTTLE TO-DAY PRICE ANS 0—8—0 ONLY.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಮೇಲ್ವಿಚಾರಣೆಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಶೇರು 1ಕ್ಕೆ

		ರೂ. ಅ. ಪೈ.	ರೂ. ಅ. ಪೈ.
1	ಮೂಸಾ ಅಂಬರ್ ಬತ್ತಿ	6—0—0	5—0—0
2	ಕೇಸರಿ ಬತ್ತಿ	4—0—0	3—8—0
3	ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4	ಪುನಗು ಬತ್ತಿ	1—8—0	1—0—0
5	ಪನ್ನೀರು ಬತ್ತಿ	0—10—0	0—8—0
6	ಉತ್ತಮವಾದ ದಶಾಂಗ	0 12—0	

ಗಂಧದ ಬಿಲ್ಲೆಗಳು

		1 ತೊಲೆ	ತೊಲೆ	ತೊಲೆ
1	ಪುಮುಕೋಟಿ ಬಿಲ್ಲೆ	3 0- 0	1 8- 0	0 12- 0
2	ಕಸ್ತೂರಿ ಬಿಲ್ಲೆಗಳು	1 8- 0	0 12 -0	0 6 --0
3	1 ಕೇಸರಿ ಬಿಲ್ಲೆ	0 8- 0	0 -4 -0	0 2 -0
	2 ಡಿಟ್ಟೊ	0 4 -0	0 2 0	0 1 -0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ.-ಗಳು

4	ಅವಲ್ ಹಸಿ ಬಿಲ್ಲೆ	0 8 -0	0 4 0	0-2 -0
	ಎರಡನೇ ರಖಂ	0 4--0	0 2 0	0-1- -0

ಕಾಲು ತೊಲೆ ತೂಕ ಉಳ್ಳ ಹಸಿ ಬಿಲ್ಲೆ 100ಕ್ಕೆ 8 ರೂ. 8 ಆ

5 ಅರಗಜ ಅಥವಾ ಜವ್ವಾಜಿ ಗಂಧ ತೊಲ 1ಕ್ಕೆ 1 0- 0

ಪರಸ್ಥಳದವರಿಗೆ ಟಪ್ಪಾಲ್ ಖರ್ಚು ಮತ್ತು ಪ್ಯಾಕಿಂಗ್ ಚಾರ್ಜ ಅಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು ಖರೀದಿ ಮಾಡಿ ನನ್ನ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ.

ಯಂ ವರಸಿದ್ಧ ಶಾಸ್ತ್ರಿ, ಗಂಧಕಾರಿ,
ಶಂಕರಪುರ ಬೆಂಗಳೂರು ಸಿಟಿ

ಮುಫತ್ತು ೧೯೧೦ನೇ ಸಂವತ್ಸರದ ಕ್ಯಾಲೆಂಡರು ಮುಫತ್ತು

ಕಾನ್‌ಪೂರ್ ಉಲನ್ ಚೌಕಗಳು.

ಸೈಜು 40×40, ಹಸಿರು, ನೀಲಿ, ಊದ, ಹಳದಿ, ಕರಿದು, ಕೇಸರಿ, ಬಿಳಿಪು, ಚಾಕಲೇಟು ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0—4—0

ಶಾಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ. 4 4—0. 2ನೇ ನಂಬರು ರೂ 3—12—0. 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ತು 0 —4—0

ಸಾಚಾ ಒಳ್ಳೇ ಕಲಾವತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು 0—10—0, 1—1—0

2ನೇ ನಂಬರು 0—14—0, 1—8 0, 2—4—0

ರೇಷ್ಮೆ ನೆಸುಕಪ್ಪುಗಳು.

ಕೆಂಪು, ಪೂವಾ, ಹಸಿರು, ನೀಲಿ, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5–6 ಮೊಳ, ಅಗಲ 1 ಇಂಚು, 1ಕ್ಕೆ ರೂ 1 4-0, 1 8-0, 2-4-0, 2-8-0, 3-0-0

ಚಿತ್ರಾಪನ 3 0-0, 4 0 0 5 -0 0, 6 0 0

ಡಿಟ್ಟೊ ಗಜ 1ಕ್ಕೆ 1 8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4,

ಮಖ್‌ಮಲ್ ಅಂಚು ಗಜ 1ಕ್ಕೆ ಆಣೆ 4 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6 0, 2 8 0, 3 0 0

ದಾರದ ಬನೀನುಗಳು 1ಕ್ಕೆ ಆಣೆ 4, 5 6, 7, 8

ಉಲನ್ ಬನೀನುಗಳು 1ಕೆ ರೂ 2 4 0, 2 8 0, 3-0-0, 3-8 0.

ಫಿಲ್ಟ್ ಕ್ಯಾಪ್‌ಗಳೂ ಕ್ರಿಸ್ಟಿನ್ 1ಕ್ಕೆ ರೂ 1 12 0, 2-4 0, 2 8-0 2-12-0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0 12 0 1 0 0, 1 4-0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4 0 0, 4-4-0, 4-8-0, 5-8-0, 6-0-0, 7-0 0, 8 0-0, 9 0 0, 10 0-0, 12-0-0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12

ಕೇಶರಂಜನ ತೈಲ ಬಾಟ್ಲ 1ಕ್ಕೆ ರೂ		0—11—0
ಕುಂತಳ ಕೌಮುದಿ ತೈಲ ,,	,,	0—12—0.
ಕಮೋನಿಯಾ ಓಯಿಲ್ ,,	,,	1—0—0.
ಭೃಂಗಾಮಲಕ ತೈಲ ಸೀಸೆ	,, ,,	0—4—0, 0—8—0, 1—0—0
ಕಸ್ತೂರಿ ಮಾತ್ರೆ ಸೀಸೆ	,,	0—4—0.

ಎಲ್. ಎ. ಫೋರುವಾಲ್
ಚಿಕ್ಕಪೇಟೆ, ಬೆಂಗಳೂರು ಸಿಟಿ

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುಳಸಿ, ಹಾರ ವಗೈರೆ ಹುವ್ವುಗಳು, ಬೇಕಾದವರು ಬರೆದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್. ಎನ್. ರಾವ್ ಬ್ರದರ್ಸ್
ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ತಾತ್ಪರ್ಯ, ವ್ಯಾಕರಣ ವಿಷಯ, ವಿಶೇಷ ಟಿಪ್ಪಣಿಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಶ್ಲೋಕ ಪಾದಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ:- ಮ್ಯಾನೇಜರ್,
ವಿದ್ಯಾನಂದ ಆಫೀಸ್ಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿರುವರು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದ್ದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.
216 ಕಾರ್ನವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಫೋರುವಾಲ್ ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮ॥ ರಾ॥ ರಾ॥ ಸಿ. ಆರ್. ಕಾಮತ್
[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 22ನೇ ಏಪ್ರಿಲ್ 910

ಮುಂಬಯಿಯಲ್ಲಿ ಕೂಡಿದ ವಿದ್ಯಾಪರಿಷತ್ತು

ನಮ್ಮ ಹಿಂದಿನ ಸಂಚಿಕೆಯೊಂದರಲ್ಲಿ ಸೂಚಿಸಲ್ಪಟ್ಟಂತೆ ಮುಂಬಯಿಯಲ್ಲಿ ಇತ್ತೀಚೆಗೆ ವಿದ್ಯಾಪರಿಷತ್ತು ಕೂಡಿತ್ತು. ಪರಿಷದಿನ ಉದ್ದಿಶ್ಯವು ಮತ ಯಾ ಧರ್ಮಶಿಕ್ಷಣವನ್ನೂ, ಆರೋಗ್ಯಶಾಸ್ತ್ರ ಮತ್ತು ಪ್ರಜಾಧರ್ಮ ಇವೇ ಮೊದಲಾದುವುಗಳ ಕುರಿತು ತಕ್ಕ ಮಾಹಿತಿಯನ್ನೂ ಈಗಿನ ವಿದ್ಯಾಭ್ಯಾಸ ಕ್ರಮದಿಂದ ವಿದ್ಯಾರ್ಥಿಗಳಿಗೆ ಹ್ಯಾಗೆ ದೊರಕಿಸಿಕೊಡಬಹುದೆಂಬುದನ್ನು ಪರ್ಯಾಲೋಚಿಸುವದಾಗಿತ್ತು. ಸಭಾಕಾರ್ಯ ಪ್ರಾರಂಭವು ಮುಂಬಯಿಯ ಗವರ್ನರ ಧೊರೆಗಳವರಿಂದ ಮಾಡಲ್ಪಟ್ಟಿತು. ಮುಂಬಯಿ ಸಂಸ್ಥಾನದಲ್ಲಿರುವ ಬೇರೆ ಬೇರೆ ವಿದ್ಯಾಲಯಗಳ ಮುಖ್ಯೋಪಾಧ್ಯಾಯರೂ, ವಿದ್ಯಾಖಾತೆಗೆ ಸಂಬಂಧಪಟ್ಟ ಡಿರೆಕ್ಟರ್ ಮೊದಲಾದ ಮೇಲುದ್ಯೋಗಸ್ಥರೂ ಮೈಸೂರು ಸಂಸ್ಥಾನದ ವಿದ್ಯಾಖಾತೆಯ ಮಾಜಿ ಡಿರೆಕ್ಟರರಾಗಿದ್ದ ಬಾಬಾರವರೂ ಈ ಸಭೆಗೆ ದಯಮಾಡಿಸಿ ತಂತಮ್ಮ ಸ್ವಾನುಭವಗಳಿಂದ ಪರಿಷದದ ಉದ್ದಿಶ್ಯವನ್ನು ಕಾರ್ಯತಃ ಹ್ಯಾಗೆ ಸಾಧಿಸಬೇಕೆಂಬುದನ್ನು ತರ್ಕಿಸುವವರಾಧರು.

ದೇಶದ ಈಗಿನ ಸ್ಥಿತಿಗೆ ಸ್ವಲ್ಪ ಲಕ್ಷಿಸಿ ಹಿಂದುಸ್ಥಾನದ ವಿದ್ಯಾಲಯಗಳ ಶಿಕ್ಷಣಕ್ರಮದಲ್ಲಿ ಕುಂದುಕಗಳಿವೆ ಎಂತ ಸರಕಾರದವರೂ ಪ್ರಜಾಮುಂದಾಳುಗಳೂ ಏಕರೀತಿ ಅಭಿಪ್ರಾಯಪಡುತ್ತಿರುವರೆಂಬುದಕ್ಕೆ ಆಯಾ ಪ್ರಾಂತ್ಯಗಳಲ್ಲಿ ತಲೆದೋರುತ್ತಿರುವ ವಿದ್ಯಾಖಾತೆಗಳಲ್ಲಾಗುವ ನವೀನ ಏರ್ಪಾಡುಗಳೂ ಇಂಥಾ ಪರಿಷತ್ತುಗಳೂ ನಿದರ್ಶನಗಳಾಗಿವೆ. ಕುಂದುಕಗಳಿವೆ ಎಂತ ಪ್ರಜೆಗಳೂ ಸರಕಾರದವರೂ ಏಕರೀತಿ ಅಭಿಪ್ರಾಯಪಟ್ಟರೂ ಈ ಕುಂದುಕಗಳ ನಿವಾರಣೋಪಾಯಗಳಲ್ಲಿ ಉಭಯತರಲ್ಲಿ ಭಿನ್ನಾಭಿಪ್ರಾಯವಿರುವುದು. ಇದರಿಂದ ವಿದ್ಯಾಪರಿಸ್ಥಿತಿಯನ್ನು ಆಗಿಂದಾಗ್ಯೆ ಪರ್ಯಾಲೋಚಿಸುವರೆ ಕಮಿಶನುಗಳು ಏರ್ಪಟ್ಟರೂ ಸರಕಾರದವರೇ ಅಂಥಾ ಕಮಿಶನುಗಳು ಸೂಚಿಸಿದ ಏರ್ಪಾಟುಗಳಿಂದ ತೃಪ್ತಿಹೊಂದಲಿಲ್ಲವೆಂತ ತೋರುತ್ತದೆ. ಕರ್ಜನ್ ಪ್ರಭುಗಳಿಂದ ಏರ್ಪಡಿಸಿದ ಯುನಿವರ್ಸಿಟಿ ಕಮಿಶನಿನವರು ಸೂಚಿಸಿದ ಏರ್ಪಾಡುಗಳು ಜ್ಯಾರಿಗೆ ಬರುತ್ತಿರುವಾಗ ಈಗಿನ ಸ್ಟೇಟ್ ಸೆಕ್ರೆಟರಿಗಳಾದ ಮೋರ್ಲೆ ಪ್ರಭುಗಳು ಹಿಂದುಸ್ಥಾನದಲ್ಲಿಯ ವಿದ್ಯಾಭ್ಯಾಸದ ಏರ್ಪಾಡುಗಳ ವಿಷಯವಾಗಿ ಯೋಚಿಸುತ್ತಿರುವರೆಂದು ಕೇಳುತ್ತೇವೆ. ಕರ್ಜನ್ ಪ್ರಭುಗಳ ಈ ವಿಷಯವಾದ ಏರ್ಪಾಡುಗಳು ಪುನರ್ವಿಮರ್ಶಿಸತಕ್ಕವೇ. ಆದರೆ ಪ್ರಜಾ ವಿದ್ಯಾಭ್ಯಾಸದ ಏರ್ಪಾಡುಗಳನ್ನು ಮಾಡಬೇಕಾಗ್ಯೆ ಪ್ರಜಾಮುಂದಾಳುಗಳಿಂದ ಪ್ರಜೆಗಳ ನಿಜವಾದ ಸ್ಥಿತಿಗತಿಗಳನ್ನೂ ಸ್ವಭಾವವನ್ನೂ ತಿಳಿದು ಕಾಲಕ್ಕನುಗುಣವಾಗಿ ಪ್ರಜಾವರ್ಗವು ಜೀವನದ ಹೋರಾಟದಲ್ಲಿ ಇತರ ಜನಾಂಗಗಳಿಂದ ಹಿಂದೆ ಬೀಳದಂತೆ ಪ್ರಜಾಭಿಪ್ರಾಯಗಳನ್ನು ಮನ್ನಿಸಿ ವಿದ್ಯಾ ಏರ್ಪಾಡುಗಳನ್ನು ಮಾಡಬೇಕಾಗುವುದು. ಈ ಭಾರತೀಯ ಮಹಾ ದೊಡ್ಡ ಪ್ರಜಾ-ಸಮೂಹದಲ್ಲಿ ಅಶಿಕ್ಷಿತರು ಅಧಿಕಾಂಶವಿದ್ದು ಯಾವ ವಿಷಯದಲ್ಲಿಯೂ ಇಂಥವರ ಅಜ್ಞಾನದಿಂದ ಹಿಡಿತರುಂಬ ಶಿಕ್ಷಿತ ಪ್ರಜಾವರ್ಗದ ಅಭಿಪ್ರಾಯಗಳು ಬಹಳಮಟ್ಟಿಗೆ ಮನ್ನಿಸಲ್ಪಡುವುದಿಲ್ಲವಾದ್ದರಿಂದ ಸರಕಾರದವರು ಪ್ರಜಾಹಿತವನ್ನರಿತು ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೂ ಹಾಗೆ ಮಾಡಿದ ಏರ್ಪಾಡುಗಳಲ್ಲಿ ಪ್ರಜಾಮುಂದಾಳುಗಳ ಸಹಕಾರ ದೊರಿಯಲಿಕ್ಕೂ ಸಂಗತಿಗಳೇ ಬಹಳ ಅಪರೂಪವಾಗಿವೆ. ಪ್ರಜಾಮುಂದಾಳುಗಳೂ ಸರಕಾರದವರೂ ಒಟ್ಟು ಸೇರಿ ಮುಂಬಯಿಯ ಈ ವಿದ್ಯಾಪರಿಷತ್ತಿನಲ್ಲಿ ಮತ ಯಾ ಧರ್ಮ ಶಿಕ್ಷಣಕ್ಕೂ, ಪ್ರಜಾವರ್ತನೆ ಮತ್ತು ಆರೋಗ್ಯ ಸೂತ್ರಗಳ ಮಾಹಿತಿಯನ್ನು ವಿದ್ಯಾರ್ಥಿಗಳಲ್ಲಿ ದೃಢಮೂಲವಾಗಿಸಲಿಕ್ಕೂ ಯಾವ ಉಪಾಯಗಳನ್ನು ಸೂಚಿಸಿರುವರೆಂಬುದನ್ನು ತಿಳಕೊಳ್ಳುವಾ.

ಆಯಾ ಜಾತಿಯವರು ಸ್ಥಾಪಿಸಿದ ಶಾಲೆಗಳಲ್ಲಿ ಅವರವರಿಗೆ ಬೇಕಾದಂಥಾ ರೀತಿಯ ಮತಶಿಕ್ಷಣವನ್ನು ಕೊಡಿಸಬಹುದು. ಆದರೆ ಹಿಂದುಸ್ಥಾನವು ಹಲವು ಮತಾವಲಂಬಿಗಳಿಂದ ಕೂಡಿರುವುದರಿಂದ ಇಂಥಿಂಥಾ ಮತಬೋಧೆಯನ್ನೇ ಶಾಲೆಗಳಲ್ಲಿ ಕಲಿಸಬೇಕೆಂದು ಸರಕಾರದವರು ನಿರ್ಧರಿಸಲಿಕ್ಕೆ ಉಪಾಯವಿಲ್ಲ. ಮುಂಬಯಿಯ ಗವರ್ನರ ಧೊರೆಗಳವರು ಈ ಸಂದರ್ಭದಲ್ಲಿ ಮಾಡಿದ ತಮ್ಮ ಪ್ರಾರಂಭದ ಭಾಷಣದಲ್ಲಿ ಹಲವು ಸೂಚನೆಗಳನ್ನು [illegible] ಸಭೆಯಲ್ಲಿ ವ್ಯಕ್ತಪಡಿಸಿರುವರು. ಧರ್ಮಶಿಕ್ಷಣವನ್ನು ಇತರ ಶಿಕ್ಷಣ [illegible] ಕೊಡುವುದು ಅಗತ್ಯವೆಂಬುದು ಭೂಲೋಕದ ಎಲ್ಲಾ ಕಡೆಯಲ್ಲಿಯೂ ಪ್ರಕೃತ [illegible] ವಿಷಯವಾಗಿದ್ದದೆ [illegible] ಈ ವಿಷಯ

ವನ್ನು [illegible] ಸುವರೆ [illegible] ವಿವಿಧ ಜನಾಂಗಗಳ [illegible] ಯೊಂದು ಕೂಡಿತ್ತು. ಇದಕ್ಕೆ ಯುರೋಪಿಯ ಜನಾಂಗಗಳ [illegible] ಗಳಲ್ಲಿ, ಜಪಾನ, ಮೆಕ್ಸಿಕೊ, ಅಮೇರಿಕದ ಸಂಯುಕ್ತಸಂಸ್ಥಾನದ ಪ್ರತಿನಿಧಿಗಳೂ ಸಹ ಬಂದಿದ್ದರು. ಪ್ರತಿನಿಧಿಗಳೆಲ್ಲರೂ ವಿವಿಧ ಮತಸ್ಥರಾಗಿದ್ದರೂ ಸದಾಚಾರ ಸದ್ವರ್ತನೆಗಳು ವಿದ್ಯಾರ್ಥಿಗಳಲ್ಲಿ ನೆಲೆಗೊಳ್ಳುವಂತೆ ಶಿಕ್ಷಣಪದ್ಧತಿಯನ್ನು ತಿದ್ದಬೇಕೆಂದು ಸರ್ವರೂ ಒಂದೇ ರೀತಿ ಅಭಿಪ್ರಾಯಪಟ್ಟಿದ್ದರು. ಪಾಶ್ಚಾತ್ಯ ದೇಶಗಳಲ್ಲಿ ಸದಾಚಾರ ಶಿಕ್ಷಣಕ್ರಮವು ಬಹಳವಾಗಿ ಮುಂದವರಿಯುತ್ತಿರುವುದು. ಸರಕಾರದವರೂ ಖಾಸಗಿ ಜನರೂ ಈ ಬಗ್ಗೆ ಸಭೆಗಳನ್ನು ಏರ್ಪಡಿಸಿ ತಕ್ಕ ಉಪಾಯಗಳನ್ನು ಸೂಚಿಸುತ್ತಿರುವರು. ಇಂಗ್ಲೆಂಡಿನಂಥಾ ಕ್ರೈಸ್ತದೇಶದಲ್ಲಿ ಒಂದೇ ಬಗೆಯ ಮತಶಾಸ್ತ್ರವನ್ನೇ ಶಾಲೆಗಳಲ್ಲಿ ಕಲಿಸಬೇಕೆಂದು ನಿರ್ಧರಿಸುವುದು ಕಷ್ಟಸಾಧ್ಯವಾಗಿರುತ್ತಾ ಹಿಂದುಸ್ಥಾನದಂಥಹ ದೇಶಗಳಲ್ಲಿ ಇದು ಅಸಾಧ್ಯವಾಗಿರುವುದು. ಆದ್ದರಿಂದ ಶಾಲೆಗಳಲ್ಲಿ ಮತಶಿಕ್ಷಣವಲ್ಲದಿದ್ದರೆ ಸದಾಚಾರ ಸದ್ವರ್ತನೆಗಳಿಗೆ ಬೇಕಾದಂಥಾ ಶಿಕ್ಷಣವನ್ನಾದರೂ ಕೊಡುವಂತೆ ಮಾಡಬಹುದು. ಜಪಾನಿನಲ್ಲಿ ಸಹಾ ಇದೇ ರೀತಿಯ ಶಿಕ್ಷಣವನ್ನು ಕೊಡುತ್ತಿರುವರು. ಮತಸೂತ್ರಗಳನ್ನು ಕಾರ್ಯತಃ ಸಾಧಿಸುವುದೇ ಸದಾಚಾರವಾದ್ದರಿಂದ ಈ ರೀತಿ ಏರ್ಪಾಡನ್ನು ಶಾಲೆಗಳಲ್ಲಿ ಪ್ರಯತ್ನಿಸಬಹುದೆಂದು ಗವರ್ನರ ಧೊರೆಗಳ ಅಭಿಪ್ರಾಯವೆಂತ ತೋರುತ್ತದೆ.

ಆದರೆ ಈಗ ವಿದ್ಯಾರ್ಥಿಗಳಿಗೆ ಕಲಿಸುತ್ತಿರುವ ಶಾಲಾಪಾಠಗಳಲ್ಲಿ ಸದಾಚಾರ ವಿಷಯವಾದ ಅನೇಕ ಪಾಠಗಳಿರುವುದರಿಂದ ಈ ಗೋಸ್ಕರವಾಗಿಯೇ ಪ್ರತ್ಯೇಕ ಪಾಠಗಳನ್ನು ಕೂಡಿಸಬೇಕೆಂದೇನು ಅಗತ್ಯವೋ? ಸಂದರ್ಭಾನುಸಾರ ಮಾತ್ರ ಇಂಥಾ ಪಾಠಗಳನ್ನು ಈ ರೀತಿ ಕೊಡಬಹುದಾದ್ದರಿಂದ ಕ್ರಮವಾಗಿ ಇವುಗಳನ್ನು ಕಲಿಸುವ ಏರ್ಪಾಡು ಶಾಲೆಗಳಲ್ಲಿರುವುದಿಲ್ಲ. ಅಂಥಾ ಏರ್ಪಾಡನ್ನು ಮಾಡಿದ್ದಲ್ಲಿ ಕಾರ್ಯತಃ ಅದರಿಂದ ಪ್ರಯೋಜನ ಉಂಟಾಗುವುದೋ? ಈ ಏರ್ಪಾಡಿನ ಸಾರ್ಥಕತೆಯು ಮುಖ್ಯವಾಗಿ ಇಂಥಾ ಪಾಠಗಳನ್ನು ಕಲಿಸುವ ಉಪಾಧ್ಯಾಯನ ಕೈಸೇರಿರುವುದು. ಕಥಾರೂಪವಾಗಿಯೂ ಇತರ ಅನೇಕ ವಿಧಾನಗಳಿಂದಲೂ ಉಪಾಧ್ಯಾಯನು ಶ್ರದ್ಧೆಯಿಂದ ಇದನ್ನು ಕೈಕೊಂಡರೆ ಅಂಥಾ ಪಾಠಗಳು ವಿದ್ಯಾರ್ಥಿಗಳಲ್ಲಿ ಚನ್ನಾಗಿ ನಾಟುವವು. ಕಲಿಸುವಂಥಾ ವಿಷಯದಲ್ಲಿ ಅಭಿರುಚಿಯು ಉಪಾಧ್ಯಾಯನಿಗಿಲ್ಲದಿದ್ದರೆ ವಿದ್ಯಾರ್ಥಿಗಳು ಇಂಥಾದ್ದನ್ನು ಆತನ ಮೂಲಕ ಕಲಿತು ಪ್ರಯೋಜನ ಹೊಂದಲಿಕ್ಕಿಲ್ಲ. ಸದಾಚಾರದಲ್ಲಿ ಉಪಾಧ್ಯಾಯನಿಗಿರುವ ಆಸಕ್ತಿಯೂ ಪ್ರದ್ಯಾತಿಶಯಗಳೂ ತನ್ನ ವರ್ತನೆಯಿಂದಲೇ ಉದಯಿಸಿ ವಿದ್ಯಾರ್ಥಿಗಳ ಭಕ್ತಿಭಾವನೆಗಳಿಗೆ ಪಾತ್ರನಾಗಿ ತಾನು ಹೇಳುವ ಸನ್ಮಾರ್ಗ ಸಿದ್ಧಾಂತಗಳನ್ನು ವಿದ್ಯಾರ್ಥಿಗಳು ಮನನಮಾಡುವ ರೀತಿಯಲ್ಲಿ ಅವನ್ನು ಅವರಿಂದ ಅಭ್ಯಾಸಮಾಡಿಸಬೇಕು. ಇಂಥಾ ಉಪಾಧ್ಯಾಯನ ಸಹಾಯಕವಾಗಿ ಕೆಲವು ನಿಯಮಗಳನ್ನು ಕಲ್ಪಿಸಿ, ಆತನಿಗೆ ಬೇಕಾಗುವ ಪುಸ್ತಕಗಳನ್ನು ಸಹಾ ಒದಗಿಸಿಕೊಟ್ಟು ಶಾಲೆಗಳಲ್ಲಿ ಆತನ ಪಾಠಗಳ ಬಗ್ಗೆ ಪ್ರತ್ಯೇಕ ಸಮಯವನ್ನಿಡಬೇಕು. ಈ ರೀತಿ ಏರ್ಪಡಿಸಿದ್ದಲ್ಲಿ ಪ್ರಯೋಜನ ಸಿಕ್ಕಬಹುದೆಂದು ಮುಂಬಯಿ ಸರಕಾರದವರ ಅಭಿಪ್ರಾಯ.

ಆದರೆ ಶಾಲಾ ಹುಡುಗ ಹುಡುಗಿಯರು ತಮ್ಮ ಸಮಯದ ಅಧಿಕಾಂಶವನ್ನು ಮನೆಗಳಲ್ಲಿ ಕಳೆಯುವುದರಿಂದ ಮನೆಗಳಲ್ಲಿ ಇಂಥಾ ಶಿಕ್ಷಣವೇನೂ ಇಲ್ಲದೆ ಶಾಲೆಗಳಲ್ಲಿ ಒಂದೆರಡು ತಾಸು ಇಂಥಾ ಪಾಠಗಳನ್ನು ಕಲಿಸಿ ವಿಶೇಷ ಪ್ರಯೋಜನ ದೊರಕಲಿಕ್ಕಿಲ್ಲವೆಂದು ಹಲವರ ಅಭಿಪ್ರಾಯವಿರುವುದು. ಈ ಅಭಿಪ್ರಾಯವನ್ನು ಮುಂಬಯಿ ಗವರ್ನರರವರು ಪ್ರತಿವಾದಿಸಿರುವರು. ಇಂದು ಪಾಠಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಮುಂದಕ್ಕೆ ಮನೆಯ ಯಜಮಾನರಾಗುವುದರಿಂದ ವಿದ್ಯಾರ್ಥಿಗಳಾಗಿರುವಾಗ ಇವರಿಗೆ ಕೊಟ್ಟ ಅಲ್ಪಸ್ವಲ್ಪ ಸದಾಚಾರ ಶಿಕ್ಷಣ ಪ್ರಾಬಲ್ಯವು ಮುಂದಕ್ಕೆ ಅವರವರ ಮನೆಗಳಲ್ಲಿ ತಲೆದೋರದಿರದು. ಅದಲ್ಲದೆ ಶಾಲೆಗಳಲ್ಲಿ ದೊರಿಯುವ ಪಾಶ್ಚಾತ್ಯ ವಿದ್ಯಾವ್ಯಾಸಂಗದ ಕ್ರಮಗಳಿಂದುಂಟಾಗುವ ದೋಷಗಳನ್ನು ಹೋಗಗೊಡಿಸಲಿಕ್ಕೆ ಹ್ಯಾಗೂ ಸದಾಚಾರ ಶಿಕ್ಷಣದಂಥಾ ಉಪಾಯಗಳು ಶಾಲೆಗಳಲ್ಲಿರುವುದು ಅಗತ್ಯ. ಶಾಲೆಗಳಲ್ಲಿ ಸದಾಚಾರ ಶಿಕ್ಷಣದಿಂದ ವಿದ್ಯಾರ್ಥಿಗಳನ್ನು ತಿದ್ದುವ ಅವಕಾಶವು ಬಹಳ ಸ್ವಲ್ಪವೇ ಆಗಿದ್ದರೂ ಮನೆಗಳಲ್ಲಿಯೇ ಇಂಥಾ ಶಿಕ್ಷಣವು ಸಾಧ್ಯವೆಂತ ಈ ಅಲ್ಪಸ್ವಲ್ಪ ಅವಕಾಶವನ್ನು ಸಹಾ ಬಿಟ್ಟು ಕಳೆಯುವುದು ಅನುಚಿತ. ಸದಾಚಾರ ಶಿಕ್ಷಣಕ್ಕೆ ಪ್ರಕೃತ ದೇಶದಲ್ಲಿ ಹಲವು ಇತರ ಸಂದರ್ಭಗಳಿದ್ದರೂ ಶಾಲೆಗಳಲ್ಲಿ ಸಹಾ, ಇಂಥಾ ಸಂದರ್ಭಗಳನ್ನುಂಟುಮಾಡಿ ಈ ಶಿಕ್ಷಣವನ್ನು ಕೊಡಬೇಕಾಗಿ ಗವರ್ನರ ಧೊರೆಗಳವರು ಸಭೆಯಲ್ಲಿ ಮಾಡಿದ ಸೂಚನೆಯಾಗಿರುತ್ತದೆ. ಈ ಸದಾಚಾರ ಶಿಕ್ಷಣವೆಲ್ಲವೂ ಹಿಂದುಸ್ಥಾನದ ಭಗವದ್ಗೀತೆ ಮೊದಲಾದ ಪವಿತ್ರ ಗ್ರಂಥಗಳಲ್ಲಿಯೂ ಇತರ ಇತಿಹಾಸಗಳಲ್ಲಿಯೂ ತೋರಿಸಿರುವ ತತ್ವಗಳನ್ನಾಧರಿಸಿರಬೇಕೆಂದು ಖಾಪರ್ಡರವರ ಅಭಿಪ್ರಾಯವಾಗಿರುವುದು.

ಪ್ರಜಾ ಧರ್ಮ ಅಥವಾ 'ಸಿವಿಕ್ಸ್' ವಿಷಯವಾಗಿ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ತಕ್ಕ ಶಿಕ್ಷಣವನ್ನು ಕೊಡುವುದು ಅಗತ್ಯವೆಂತಲೂ ರಾಜಕೀಯ ವಿಷಯಗಳು [illegible] ಯಾಗ ಗ್ರಾಹ್ಯವಾಗುವಂತೆಯೂ ಈ ವಿಷಯಗಳಲ್ಲಿ [illegible]

ಕುಲಕಸುಬುಗಳೂ ತಕ್ಕ ಆಧಾರವಿರುವವುಗಳೂ ಆಗಿ ತಂತ್ರ [illegible] ಯುಕ್ತಿ [illegible] ರೀತಿ ಮಾ ಡಲ್ಪಡಿಸಿದ ಅಭಿಪ್ರಾಯಗಳುಳ್ಳ ಯುಕ್ತಿಶಾಲಿಗಳ ಸಿದ್ಧಾಂತಗಳನ್ನು ಬರಿಯ ಉರುಹೊಡೆರಂತೆ ಅನುಸರಿಸದಂತೆಯೂ ತಕ್ಕ ಪ್ರಜಾಧರ್ಮ ಶಿಕ್ಷಣವನ್ನು ಕೊಡುವುದುಚಿತವೆಂತ ಗವರ್ನರ್ ದೊರೆಗಳವರು ಅಪ್ಪಣೆಕೊಟ್ಟರು. ಈ ಬಗ್ಗೆ ಹಿಂದೂಸ್ಥಾನದ ಚರಿತ್ರೆಯನ್ನೂ ಬಾರ ತೀಯ ರಾಜಧರ್ಮವನ್ನೂ ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಬೇಕೆಂದು ತಿಳಿಯ ಹೇಳಿದರು. ಪ್ರಜೆಗಳಲ್ಲಿ ಆರೋಗ್ಯ ಸೂತ್ರಗಳ ಅನುಭವವೇನೂ ಇಲ್ಲದ್ದರಿಂದ ಇಂಥಾ ಅನುಭವವು ಅವರಿಗೆ ಮನಸ್ಸಿಗೆ ಗ್ರಾಹ್ಯವಾಗುವಂತೆ ಸುಲಭ ರೀತಿಗಳಲ್ಲಿ [illegible] ದರ್ಜೆಗಳಿಂದಲೇ ಅವುಗಳನ್ನು ಕಲಿಸಿ ಅಂಟು ರೋಗಗಳಿಂದ ತಪ್ಪಿಸಿಕೊಳ್ಳುವುದು ಹ್ಯಾಗೆ ಎಂಬೀ ವಿಷಯಗಳನ್ನು ತಿಳಿಯಹೇಳಿ ಆರೋಗ್ಯ ಸೂತ್ರ ಶಿಕ್ಷಣವನ್ನು ಸಹಾ ಕೊಡಬೇ ಕೆಂದು ದೊರೆಗಳವರ ಸೂಚನೆಯಾಯಿತು.

ಈ ರೀತಿಯಲ್ಲಿಯೇ ಸಭೆಗೆ ಬಂದ [illegible] ಮೊದಲಾದವರು ತಂತಮ್ಮ ಅನುಭವಗಳಿಂದ ತೋರಿಬಂದ ಈ ವಿಷಯದ ಅಭಿಪ್ರಾಯಗಳನ್ನು ತಿಳಿಯ ಪಡಿಸಿದರು.

ಸದಾಚಾರ, ಪ್ರಜಾ [illegible] ಶಿಕ್ಷಣ ಪದ್ಧತಿಯು [illegible] ಪ್ರಾಟವು [illegible] ಗಳಿಗೆ ತಮ್ಮ [illegible] ಕೊಲೇಜು [illegible] ಯಲ್ಲಿ ಅದನ್ನು ತಿದ್ದುವ [illegible] ಯೋಗ್ಯರಿ [illegible] ಯನ್ನು ಮಾಡಲು [illegible] ಅಭ್ಯಾಸಿಸ [illegible] ರುವಾಗ [illegible] ರಣವಿಗೆ ಕಷ್ಟಸಾಧ್ಯ.

ಬೆ[illegible]ಗೆ ಗೊಬ್ಬರದ ಅವಶ್ಯತೆ

[illegible] ವರ್ಗಕ್ಕೂ ಆಹಾರವು ಅವಶ್ಯ [illegible] ತಮ್ಮ ಆಹಾರವನ್ನು ಗಾಳಿಯಿಂದಲೂ ಮಣ್ಣಿನಿಂದಲೂ [illegible] ಎಲೆಗಳ ಮೂಲಕವೂ [illegible] ಮೂಲಕವೂ ಗಿಡವೃಕ್ಷಗಳು [illegible] ಬೇಕಾದ ಆಹಾರವು [illegible] ಹಾಗಿಲ್ಲ. ಆದರೆ [illegible] ಯಾಗುತ್ತಾ ಬರುವುದು [illegible] ವಂತೆ ಮಾಡುವುದು ರೈತ [illegible] ವದರಿಂದಲೂ, ಮತ್ತು ಗದ್ದೆಯನ್ನು ಚೆನ್ನಾಗಿ [illegible] ಪೈರಿಗೆ ಬೇಕಾದ ಆಹಾರವನ್ನು ದೊರೆಯುವಂತೆ ಮಾಡುವನು. ಹೀಗೆ ಮಾಡದೆ ಇದ್ದರೆ ಕೊಂಚಕಾಲದಲ್ಲಿ [illegible] ಕಳೆದು [illegible]

ಈ ಜಿಲ್ಲೆಯಲ್ಲಿ [illegible] ಮತ್ತು ಹಟ್ಟಿಯ ಗೊಬ್ಬರ [illegible] ಸೊಪ್ಪುಗಳನ್ನು ಕೂಡ ಗೊಬ್ಬರವಾಗಿ [illegible] ಒಹಳ ಉತ್ತಮತರದ್ದಾಗಿರುತ್ತದೆ. [illegible] ವನ್ನು ತಕ್ಕಮಟ್ಟಿಗೆ ವದಗಿಸಿಕೊಡುವುದು. ಈ ಗೊಬ್ಬರವು ಪೈರಿಗೆ ಬೇಕಾದ [illegible] ಆಹಾರವನ್ನು ಕೊಡುವುದಲ್ಲದೆ ಮಣ್ಣಿನಲ್ಲಿ [illegible]

ಹಟ್ಟಿಯ ಗೊಬ್ಬರವನ್ನು ತಯಾರಿಸುವ [illegible] ರಲ್ಲಿಯೂ ಗದ್ದೆಗೆ ಉಪಯೋಗಿಸುವುದರಲ್ಲಿಯೂ ಹೆಚ್ಚಿನ ಜಾಗ್ರತೆಯನ್ನು ತೆಗೆದು ಕೊಳ್ಳತಕ್ಕದ್ದು. ಇಲ್ಲದಿದ್ದರೆ ಗೊಬ್ಬರದ ಸತ್ವವು ಆರಿಹೋಗಿ ಬೇಗ ಗೊಬ್ಬರದಿಂದ ಅಷ್ಟೊಂದು ಪ್ರಯೋಜನವು ಸಿಕ್ಕದು. ಅನೇಕ ಕಡೆಗಳಲ್ಲಿ [illegible] ಯಿಂದ ಬೆರಣಿ ಗಳನ್ನು ತಟ್ಟಿ ಒಣಗಿಸಿ ಒಲೆಗೆ ಹಾಕುವ ಪದ್ಧತಿ ಉಂಟು. ಇದರಿಂದ ರೈತನು ತನ್ನ ಗೊಬ್ಬರದ ಮುಖ್ಯ ಸಾರವನ್ನು ಕಳಕೊಳ್ಳುವನು. ಪೈರಿಗೆ ಬೇಕಾದ ಮುಖ್ಯ ಆಹಾರವು ಬಿಸಿಲಿನ ಕಾವಿನಿಂದಲೂ, ಉರಿಯ ಕಾವಿನಿಂದಲೂ ಅಣುವಾಗಿ ಹಾರಿಹೋಗುವುದು. ಹೀಗಿರುತ್ತಲೆ ರೈತರೆಲ್ಲರೂ ಬೆರಣಿಗಳನ್ನು ತಟ್ಟಿ ಸುಡುವುದನ್ನು ಬಿಡಬೇಕು. ಹಟ್ಟಿಯ ಗೊಬ್ಬರವನ್ನು ಜೋಪಾಸನಮಾಡುವುದರಲ್ಲಿ ಹೆಚ್ಚಿನ ಜಾಗ್ರತೆ ತೆಗೆದುಕೊಳ್ಳತಕ್ಕದ್ದು. ಗೊಬ್ಬರವನ್ನು ಹಟ್ಟಿಯ ಹೊರಕಡೆಯಲ್ಲಿ [illegible] ಗದ್ದೆಗಳಲ್ಲಿಯೂ ರಾಶಿಮಾಡುವ [illegible] [illegible]

ಸೇರಿಕೊಳ್ಳುವುದು [illegible] ಗೊಬ್ಬರವನ್ನು [illegible] ದಲ್ಲಿ ರಾಶಿಮಾಡಬೇಕು. ಒಂದು ವೇಳೆ ಗದ್ದೆಯಲ್ಲಿ ರಾಶಿ [illegible] ಗೊಬ್ಬರದ ರಾಶಿಗಳನ್ನು ಮಣ್ಣಿನಿಂದ ಮುಚ್ಚಿಡತಕ್ಕದ್ದು. ಗೊಬ್ಬರವನ್ನು ಗದ್ದೆಗೆ ಹರ ಡಿದ ಕೂಡಲೇ ಗದ್ದೆಯನ್ನು ಹೂಡಬೇಕು. ಹಲವು ಕಡೆಗಳಲ್ಲಿ ಮಳೆಯ ನೀರಿನಿಂದ ಗೊಬ್ಬರದ ರಾಶಿಗಳು ತೊಳೆದುಹೋಗಿ ಅದರ ಸಾರವು ಕಳೆದು ಹೋಗುವುದು. ಇದು [illegible] ದರಿಂದ ಗೊಬ್ಬರದ ರಾಶಿಗಳು ಮಳೆಯ ನೀರಿನಿಂದ ತೊಳೆದು ಹೋಗದಂತೆ ಜಾಗ್ರತೆ ನೋಡಿಕೊಳ್ಳತಕ್ಕದ್ದು. ಗೊಬ್ಬರದ ರಾಶಿಯಲ್ಲಿ ಸಾಕಷ್ಟು ಪಸೆ ಇರಬೇಕು, ಹೆಚ್ಚಾಗಿ ಒಣಗಿಹೋಗ[illegible] ಬಿಡಬಾರದು. ಹೀಗಿರುವದರಿಂದ ಗೊಬ್ಬರದ ರಾಶಿಗೆ ಆಗಿಂದಾಗ್ಗೆ ನೀರನ್ನು ಚಿಮುಕಿಸುತ್ತಿರಬೇಕು, ಮತ್ತು ರಾಶಿಗಳನ್ನು ಚೆನ್ನಾಗಿ ಒತ್ತಿಡತಕ್ಕದ್ದು.

ಪಶ್ಚಿಮ ಕರಾವಳಿಯಲ್ಲಿ [illegible] ಗೊಬ್ಬರವು ವಿಶೇಷವಾಗಿರುತ್ತದೆ. ಕಳೆದ ವರುಷ [illegible] ಲಕ್ಷ ರೂಪಾಯಿ ಬೆಲೆಯ ಮೀನಿನ ಗೊಬ್ಬರವು ಮದ್ರಾಸು ಸಂಸ್ಥಾನದಿಂದ [illegible] ಕಳುಹಿಸೋಣಾಗಿರುತ್ತದೆ. ಈ ಪೈಕಿ ಹೆಚ್ಚಿನ [illegible] ರಾಜ್ಯಕ್ಕೆ ಕಳುಹಿಸೋಣಾಗಿರುತ್ತದೆ. ಈ ಜಿಲ್ಲೆಯಲ್ಲಿ ರೈತರು ಮೀನಿನ ಗೊಬ್ಬರವನ್ನು ಹೆಚ್ಚಾಗಿ ಉಪಯೋಗಿಸುವದಿಲ್ಲ. ಬಡ ಒಕ್ಕಲು ರೈತರಿಗೆ ಈ [illegible] ರವನ್ನು ಉಪಯೋಗಿಸುವಷ್ಟು ಸಾಮರ್ಥ್ಯವು ಇರುವದಿಲ್ಲ. ಈ ಗೊಬ್ಬರ [illegible] ಪ್ರಯೋಜನ ದೊರೆ[illegible] ಸಾಕು. ಈ ಗೊಬ್ಬರವು ಬೆಳೆಗೆ ಬೇಕಾದ ಎಲ್ಲಾ ಆಹಾರವನ್ನು ದೊರಕಿಸುವುದು. ಈ ಗೊಬ್ಬರವನ್ನು ಕೃಷಿ ಪ್ರಿಯರಾದ [illegible] ತಮ್ಮ ಒಕ್ಕಲುಗಳಿಗೆ ವದಗಿಸಿಕೊಟ್ಟು [illegible] ಒಕ್ಕಲುಗಳೂ ತಮಗೂ ಪ್ರಯೋಜನವನ್ನು ಹೊಂದಬಹುದು. ಧನಿ ಒಕ್ಕಲು ಇಬ್ಬರಲ್ಲಿ ಪರಸ್ಪರ ಐಕ್ಯವಿರತಕ್ಕದ್ದು. ಸಾಧಾರಣವಾಗಿ ಒಕ್ಕಲುಗಳಿಗೆ ತಮ್ಮ ಗದ್ದೆಗಳಿಂದ [illegible] ಉಂಟಾಗುವ ಬೇಯ ಅಂದಾಜು ಇರುತ್ತದೆ. ಧನಿಯು ವದಗಿಸಿಕೊಟ್ಟ ಮೀನಿನ ಮುಂತಾದ ಹೊಸ ಗೊಬ್ಬರಗಳನ್ನು ಹಾಕುವದರಿಂದ ಉಂಟಾಗ [illegible] ಹೆಚ್ಚಿನ ಉತ್ಪಾದನೆಯಿಂದ ಗೊಬ್ಬರದ ಖರ್ಚನ್ನು ಕಳದು ಮಿಕ್ಕ ಉಳಿದ ಮೊತ್ತ [illegible] ಒಕ್ಕಲುಗಳು ಸಮವಾಗಿ ಪಂಚಿಕೊಳ್ಳತಕ್ಕದ್ದು. ಇಲ್ಲವೆ ಧನಿಯು ಗೊಬ್ಬರಕ್ಕೆ ವೆಚ್ಚವಾದ [illegible] ಅಸಲು ಬಡ್ಡಿಯನ್ನು ಒಕ್ಕಲು ತೆರತಕ್ಕದ್ದು.

ಒಕ್ಕಲಿಗ ಒಂದು ಮುಡಿ ಗದ್ದೆಯಿಂದ ದೊರೆಯುವ ಬೆಳೆ ೧೦ ಮುಡಿ ಅಕ್ಕಿ. ಧನಿಯು ವದಗಿಸಿಕೊಟ್ಟ ಮೀನಿನ ಗೊಬ್ಬರದ ಕ್ರಯ ೬ ರೂಪಾಯಿ. ಈ ಗೊಬ್ಬರ ವನ್ನು ಹಾಕುವದರಿಂದ ಉಂಟಾದ ಬೆಳೆ ೧೬ ಮುಡಿ [illegible] ಗೊಬ್ಬರದ ಖರ್ಚನ್ನು ಕಳೆದು ಉಂಟಾದ ಹೆಚ್ಚು ಉತ್ಪನ್ನ ೨ ಮುಡಿ ಅಕ್ಕಿ. ಈ ಎರಡು ಮುಡಿ ಅಕ್ಕಿ ಯನ್ನು ಧನಿ ಒಕ್ಕಲು ಸರಿಯಾಗಿ ಹಂಚಿಕೊಳ್ಳತಕ್ಕದ್ದು. ಒಂದು ವೇಳೆ ಗೊಬ್ಬರದ ಮೌಲ್ಯವು ಹುಟ್ಟದೆ ಹೋದರೆ ಧನಿಯು ತಾಳ್ಮೆಯಿಂದಿದ್ದು ಬರುವ ವರುಷದ ಬೆಳೆಯಿಂದ ತನ್ನ ಗಂಟನ್ನು ವದಗಿಸಿಕೊಳ್ಳತಕ್ಕದ್ದು.

ಗದ್ದೆಗಳಿಗೆ ಸೊಪ್ಪು ಗೊಬ್ಬರವನ್ನು ಇಡುವದರಿಂದ ಮಣ್ಣಿನ ಸ್ಥಿತಿಯು ಒಳ್ಳೇ ದಾಗುವುದು. ಆದರೆ ರೈತರಿಗೆ ಎಲ್ಲಾ ಕಡೆಗಳಲ್ಲಿ ಕಾಡು ಕರೆಗಳ ಆಸ್ಪದವು ಇಲ್ಲದೆ ಇರುವುದರಿಂದ ಸರಿಯಾಗಿ ಸೊಪ್ಪುಗಳನ್ನು ಉಪಯೋಗಿಸುವುದಕ್ಕೆ ದೊರೆಯುವುದಿಲ್ಲ. ಆದುದರಿಂದ ಗೊಬ್ಬರಕ್ಕೋಸ್ಕರ ಸಣಬು, ನೆಲಕಡಲೆ, ಹುರುಳಿ, ಕಾಡುನೀಲಿ, ಅಲ ಸಂದೆ ಮುಂತಾದವುಗಳನ್ನು ಗದ್ದೆಯಲ್ಲಿ ಬೆಳೆಯಿಸಿ ಅವುಗಳು ಹೂ ಬಿಡುವ ಸಮಯ ದಲ್ಲಿ ಅವುಗಳನ್ನು ಗದ್ದೆಯಲ್ಲಿ ಹೂಡಬೇಕು. ಮೇಲೆ ಹೆಸರು ಕಾಣಿಸಿದ ಸಸಿಗಳು ಒಳ್ಳೇ ಗೊಬ್ಬರವಾಗಿರುವವಲ್ಲದೆ ಈ ಸಸಿಗಳು ಗದ್ದೆಯ ಮಣ್ಣಿಗೆ ಹೆಚ್ಚಿನ ಸಾರವನ್ನು ದೊರೆಯುವಂತೆ ಮಾಡುತ್ತವೆ. ಎರಡು ಬತ್ತದ ಬೆಳೆಯಾಗಿ ಒಂದು ಹೆಸರಿನ ವ [illegible] ಗೊಬ್ಬರಕ್ಕಾಗಿ ಬಿತ್ತ [illegible] ಏಪ್ರಿಲ್ ತಿಂಗಳ ಮಧ್ಯದಲ್ಲಿ ಕಟಾವು [illegible] ಬೆಳೆಯನ್ನು ಬಿತ್ತಬೇಕು. [illegible] ಏಪ್ರಿಲ್ ತಿಂಗಳ [illegible] ತಿಂಗಳ ಮಧ್ಯವಿನಲ್ಲಿ ಬರುವ ಮುಂಗಾರು [illegible] ಬೆಳೆಯುವುದು. [illegible] ತಿಂಗಳಲ್ಲಿ ಎಳೆಲು ಸಾಗು ವಳಿಯ ಸಮಯದಲ್ಲಿ ಈ ಸಸಿಗಳು ಸಾಕಷ್ಟು ದೊಡ್ಡದಾಗಿರುವವು ಮತ್ತು ಇದನ್ನು ಗದ್ದೆಗೆ ಹೂಡಿದ್ದಲ್ಲಿ ಕೊಂಚ ಖರ್ಚಿನಿಂದ ಮಣ್ಣಿಗೆ ಒಳ್ಳೇ ಸಾರವನ್ನು ಕೊಡುವುದು. ಇವರೀತಿ ರೈತನಿಗೆ ಅನೇಕ ಆದಾಯವು ದೊರೆಯುವುದು. ದೂರ ಕಾಡಿನಿಂದ ಸೊಪ್ಪುಗಳನ್ನು ತರುವ ಖರ್ಚು ಇಲ್ಲ. ಅಲ್ಪ ಖರ್ಚಿನಿಂದ ಒಳ್ಳೇ ಗೊಬ್ಬರವನ್ನು ಪಡೆಯಬಹುದು. ಇದಕ್ಕೆ ಬೇಕಾದ ಬೀಜಗಳನ್ನೂ ಮತ್ತು ವಿಶೇಷ ಅನುಭವಗಳನ್ನೂ ತಿರುಚಿನಾಪಳ್ಳಿ ಜಿಲ್ಲೆಯಲ್ಲಿರುವ ವ್ಯವಸಾಯ ಇಲಾಖೆಯ ಡಿಪ್ಯುಟಿ ಡೈರೆಕ್ಟರ್ ದೊರೆಗಳವರಿಗೆ ಬರಕೊಂಡರೆ ರೈತರಿಗೆ ಸಂತೋಷದಿಂದ ವದಗಿಸಿಕೊಡುವರು.

K. T. [illegible]

ಶ್ರವಣಬೆಳ್ಗುಳದಲ್ಲಿ ಸೇರಿದ ಭಾರತವರ್ಷದ ಜೈನ ಮಹಾಸಭೆ

ಜೈನರಿಗೆ ಪವಿತ್ರವಾದ ಕ್ಷೇತ್ರಗಳಲ್ಲಿ ಶ್ರವಣಬೆಳ್ಗುಳ [illegible] ಅನೇಕ [illegible] [illegible]

ಜೈನ ಗುರುಗಳ ಒಂದು ಮಠವೂ ಸುಮಾರು ೧೫೦ ಜೈನರ ಮನೆಗಳೂ ಇರುತ್ತವೆ. ದಕ್ಷಿಣಪ್ರಾಂತ್ಯದಲ್ಲಿ ಜೈನರ ಇಷ್ಟು ಮನೆಗಳು ಒಂದೇ ಗುಂಪಿನಲ್ಲಿ ಬೇರೆ ಎಲ್ಲಿಯೂ ಕಂಡುಬರುವದಿಲ್ಲ. ಬಹು ಸುಂದರವಾದ ಕಲ್ಯಾಣಕೆರೆ ಯೆಂಬ ಸರೋವರದ ಎಡಬಲ ದಲ್ಲಿರುವ ಸುಮಾರು ೩೫೦ ಅಡಿ ಎತ್ತರವಿರುವ ಚಂದ್ರಗಿರಿ ಮತ್ತು ಸುಮಾರು ೪೦೦ ಅಡಿ ಎತ್ತರವಾದ ವಿಂಧ್ಯಗಿರಿಯೆಂಬ ಅಂದವಾದ ಎರಡು ಬೆಟ್ಟಗಳಿಂದ ಈ ಕ್ಷೇತ್ರವು ಶೋಭಿಸುತ್ತಿರುವದು. ಇವುಗಳ ಮುಂದೆ ಪಟ್ಟಣವೂ ಗುರುಗಳ ಮಠವೂ ನಾಲ್ಕೈದು ಚೈತ್ಯಾಲಯಗಳೂ ಇವೆ. ಹಿಂದುಗಡೆ ಬಹು ವಿಸ್ತಾರವಾದ ಮತ್ತು ನೆರಳಾಸ್ಪದವಿರುವ ಒಂದು ಮೈದಾನೂ ಇರುತ್ತದೆ. ವಿಂಧ್ಯಗಿರಿಯ ತಲೆಯ ಮೇಲೆ ಗೋಮಟೇಶ್ವರ ಸ್ವಾಮಿ ಯೆಂಬ ನಾಮಾಂಕಿತದಿಂದ ಪ್ರಸಿದ್ಧಿ ಹೊಂದಿದ ಬಾಹುಬಲಿಸ್ವಾಮಿಯ ೬೦ ಅಡಿ ಎತ್ತರವುಳ್ಳ ಅತಿ ಸುಂದರವಾದ ಒಂದು ಪ್ರತಿಮೆಯು ಇರುತ್ತದೆ. ಇಂಥಾ ಪ್ರತಿಮೆಗಳು ಮೈಸೂರು ಸಂಸ್ಥಾನದಲ್ಲಿ ಇಲ್ವಾಲ ಎಂಬಲ್ಲಿ ೨೭ ಅಡಿ ಎತ್ತರದ್ದೂ ಹೊಸಲತ್ತಿ ಎಂಬಲ್ಲಿ ೩೦ ಅಡಿ ಎತ್ತರದ್ದೂ ಇರುವದಲ್ಲದೆ ಕನ್ನಡ ಜಿಲ್ಲೆಯಲ್ಲಿ ವೇಣೂರು ಎಂಬಲ್ಲಿ ೩೬ ಅಡಿ ಎತ್ತರದ್ದೂ ಕಾರ್ಕಳ ಎಂಬಲ್ಲಿ ೪೮ ಅಡಿ ಎತ್ತರದ್ದು ಇರುತ್ತವೆ. ಆದರೆ ಈ ಎಲ್ಲಾ ಪ್ರತಿಮೆಗಳಲ್ಲಿ ಶ್ರವಣ ಬೆಳ್ಗೊಳದಲ್ಲಿರುವ ಪ್ರತಿಮೆಯೇ ಅತಿ ಎತ್ತರವಾದ್ದೂ ಬಹು ಸುಂದರವಾದ್ದೂ ಆಗಿರುತ್ತದೆ. ಈ ಪ್ರತಿಮೆಯನ್ನು ಇತರ ಪ್ರತಿಮೆಗಳಂತೆ ಪ್ರತ್ಯೇಕ ಕಡೆಯಲ್ಲಿ ತಯ್ಯಾರಿಸಿ ತಂದು ಸ್ಥಾಪಿಸಿದ್ದಲ್ಲ. ಗಿರಿಯಲ್ಲಿಯೇ ಬೆಳೆದಿರುವ ಕಲ್ಲಿನಿಂದಲೇ ಕೆತ್ತಿ ಬಿಡಿಸಿದ್ದಾಗಿರುವದು. ಪ್ರತಿಮೆಯನ್ನು ಶಿಲೆಯಲ್ಲಿ ಕಮಲಾಸನದ ಮೇಲೆ ನಿಲ್ಲಿಸಿರುವರು. ಬಿಂಬದ ಎಡಬಲದಲ್ಲಿ ಗೆದ್ದಲು ಹುತ್ತಗಳ ನಡುವೆಗಳೂ ಮತ್ತು ಎರಡು ಒದಿಯಲ್ಲಿಯೂ ಎರಡು ಬಳ್ಳಿಗಳು ಕಾಲನ್ನು ಸುತ್ತಿಕೊಂಡು ಮೇಲಕ್ಕೆ ತೋಳಿನ ವರೇಗೆ ಹೋದಂತೆ ತೋರಿಸಲ್ಪಟ್ಟಿವೆ. ಈ ಹುತ್ತಗಳೂ ಬಳ್ಳಿಗಳೂ ಬಾಹುಬಲಿ ಸ್ವಾಮಿಯ ತಪೋಮಗ್ನತೆಯನ್ನು ವ್ಯಕ್ತಗೊಳಿಸುವ ಬಗ್ಗೆ ಬಿಡಿಸಲ್ಪಟ್ಟಿದ್ದಾಗಿರುತ್ತವೆ. ಶ್ರವಣ ಬೆಳ್ಗೊಳದಲ್ಲಿ ಗೋಮಟೇಶ್ವರ ಸ್ವಾಮಿಯ ಪ್ರತಿಮೆ ಹೊರತು ಗಿರಿಗಳ ಮೇಲೆಯೂ ಮತ್ತು ಅವುಗಳ ಎದುರು ಮತ್ತು ಎಡಬಲದಲ್ಲಿ ಕೂಡಾ ೩೦ ಜಿನಚೈತ್ಯಾಲಯಗಳಿವೆ.

ಈ ಪುಣ್ಯಕ್ಷೇತ್ರದಲ್ಲಿ ಕಳೆದ ಮಾರ್ಚಿ ತಾ. ೧೧ರಿಂದ ೩೧ರ ವರೆಗೆ ಗೋಮಟೇಶ್ವರ ಸ್ವಾಮಿ ಮಸ್ತಕಾಭಿಷೇಕದ ಮಹಾ ಉತ್ಸವವು ಬಹಳ ಸಂಭ್ರಮದಿಂದ ನಡೆಯಿತು. ಉತ್ಸವ ಸಮಯದಲ್ಲಿಯೇ ಭಾರತವರ್ಷೀಯ ದಿಗಂಬರಜೈನ ಮಹಾಸಭೆಯು ಸಹಾ ಸೇರಿತ್ತು. ಸಭೆಯು ತಾ. ೨೬ರಿಂದ ೨೮ರ ವರೆಗೆ ಕೂಡಿತ್ತು. ಉತ್ಸವಕ್ಕೂ ಮಹಾಸಭೆಗೂ ಹಿಂದುಸ್ಥಾನದ ಸರ್ವ ಪ್ರಾಂತ್ಯಗಳಿಂದಲೂ ಒಟ್ಟಿಗೆ ಸುಮಾರು ೫೦,೦೦೦ ಜನರು ಕೂಡಿದ್ದರು. ಮೂಡಬಿದ್ರಿ, ಕಾರ್ಕಳ, ಕೊಲ್ಲಾಪುರ, ಕಂಚಿ ಮಠಗಳ ಪಟ್ಟಾಚಾರ್ಯರುಗಳು ಸಭೆಗೆ ದಯಮಾಡಿಸಿದ್ದರು. ಮೈಸೂರಿನ ದಿವಾನರು, ಅಲ್ಲಹಾಬಾದಿನ ಜಗಮಂದಿರ ಲಾಲಜಿ ಎಂ. ಜೈನ್ ಬ್ಯಾರಿಸ್ಟರರವರು, ಲಕ್ನೌ ಪಟ್ಟಣದ ಗವರ್ನಮೆಂಟ ವಕೀಲರಾದ ಅಜಿತ ಪ್ರಸಾದ ಜೈನಿ, ಎಮ್ ಎ ಎಲ್ ಎಲ್ ಬಿ. ಜಯಪುರದ ಅರ್ಜುನಲಾಲಾ ಶೇಠ್ ಜೈನಿ, ಬಿ ಎ ಕುಂಬಕೋಣದ ಚಕ್ರವರ್ತಿ ಜೈನಿ, ಎಮ್. ಎ., ಇಂದೋರಿನ ಬಿಸೋದಿ ರಾಮಚಂದ, ಲಾಲಚಂದ, ಮುಂಬಯಿ ಪಟ್ಟಣದ ಪನ್ನಾಲಾಲ್, ಅಲಪಟ್ಟಣದ ಕರೋಡಿಚಂದ್, ಬೆಳಗಾವಿನ ಅಣ್ಣಾಚೌಗುಲೆ ಬಿ. ಎ. ಎಲ್. ಎಲ್ ಬಿ ಮುಂತಾದ ಅನೇಕ ಜಿನ ವಿದ್ವಾಂಸರೂ ಶ್ರೀಮಂತರೂ ಬಂದಿದ್ದರು. ಮ|ರಾ| ಮುಂಬಯಿ ಪಟ್ಟಣದ ದಾನವೀರ ಶೇಟ್ ಮಾಣಿಕಚಂದ ಹೀರಾಚಂದ್ ಜೆ ಪಿ ಯವರು ಈ ಸಭೆಯ ಅಧ್ಯಕ್ಷರಾಗಿದ್ದರು. ಇವರು ಸಭೆಯಲ್ಲಿ ಮಾಡಿದ ಭಾಷಣವು ಸಮಯೋಚಿತವಾದದ್ದೂ ಬಹಳ ಅರ್ಥ ಗಾಂಭೀರ್ಯವುಳ್ಳದ್ದೂ ಆಗಿತ್ತು. ಭಾಷಣವು ಪುಸ್ತಕರೂಪವಾಗಿ ಅಚ್ಚುಹಾಕಲ್ಪಟ್ಟು ಪ್ರಕಟಿಸಲ್ಪಟ್ಟಿಸಿರುವದು. ಪ್ರತಿ ಜೈನಮತಸ್ಥನು ಈ ಭಾಷಣದ ಪ್ರತಿಯೊಂದನ್ನು ಸಂಗ್ರಹಿಸಿಕೊಂಡು ಅದನ್ನು ಪದೇ ಪದೇ ಓದಿ ಅದರಲ್ಲಿ ಸೂಚಿಸಲ್ಪಟ್ಟಿರುವ ಹಿತವಾದವನ್ನು ಕಾರ್ಯತಃ ಸಾಧಿಸಿದರೆ ನಮ್ಮಲ್ಲಿ ಜೈನ ಸಮಾಜಕ್ಕೆ ಬಂದಿರುವ ಕ್ಷೀಣದೆಸೆಯು ಬೇಗನೆ ತೊಲಗುವುದು.

ಜೈನಮತಸ್ಥರಲ್ಲಿಯೇ ಇರುವ ನಾನಾ ಪಕ್ಷದವರು ಒಕ್ಕಟ್ಟಾಗಿ ನಡಿಯಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದ ಜಾತಿಬೇಧ ವಿಚಾರವು ಪರಿಶೀಲನೀಯವಾಗಿರುವುದು. "ಪ್ರಜೆಗಳ ಸುಖಸಂಪತ್ತಿಯ ಸ್ವಾತಂತ್ರಕ್ಕೆ ಜಾತಿವಿಭಾಗವು ಅವಶ್ಯವಾಗಿ ಬೇಕು. ಪ್ರತಿ ಒಂದು ವರ್ಣದ ಸಂತತಿಯು ತಮ್ಮ ಕುಲ ಉದ್ಯೋಗದಲ್ಲಿ ಆನುವಂಶಿಕ ಸಂಸ್ಕಾರದ ಬಲದಿಂದ ನಿಪುಣತೆಯನ್ನು ಹೊಂದುತ್ತದೆ. ತಂದೆಯು ತನ್ನ ವಿದ್ಯೆಯನ್ನು ಮಗನಿಗೆ ಹ್ಯಾಗೆ ತನ್ನ ಏಕನಿಷ್ಠೆಯಿಂದ ಹೇಳುವನೋ ಅದರಂತೆ ಅನ್ಯರಿಂದ ಆಗದು. ಜಾತಿ ಬಂಧನವನ್ನು ಮರಿಯಬೇಕೆಂಬುವವರ ಅಂಬೋಣವು ನನಗೆ ತೀರಾ ವಿರುದ್ಧವಾದರೂ ಸ್ವಾತಂತ್ರಕ್ಕೆ ನಾಲ್ಕು ವರ್ಣಗಳಲ್ಲಿ ವಿದ್ಯಮಾನವಾದ ಅನೇಕ ಸೂಕ್ಷ್ಮ ವಿಭಾಗಗಳು ಅನಾವಶ್ಯಕಗಳಾಗಿರುವದರಿಂದ ತೆಗೆದುಹಾಕುವದು ಯೋಗ್ಯವು."

[illegible] ಸಕಲ ವಿಷಯದಲ್ಲಿಯೂ ಎಷ್ಟು ಅಧೋಗತಿಯನ್ನಿಳಿದ [illegible]

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ.

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಬಂಗಾರ, ರತ್ನಗಳ) ಪರಿಶೀಲನೆ, ಕಟಿವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಷರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು.

ಗಣನೆಗೆ ಮಿಗಿಲಾದ ಆಕಾಶಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦.

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ.
ಅಥವಾ
ಏಜಂಟರು —(೨) ದಿ ಯೂನಿಯನ್ ಮಾರ್ಟ್,
ನಂ ೧, ಮಂಗಳೂರು (ದ. ಕ)
ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ರಾಗಿ, ಆಲಸ್ಯ ವಿಷಯಲೋಲುಪ್ತಿಗಳಲ್ಲಿ ಮಗ್ನರಾಗಿರುವರು. ಆದರಿಂದ ನಮ್ಮ ಸಮಾಜದಲ್ಲಿ ರಾಜಮಾನ್ಯರಿಲ್ಲ. ಕೋಟ್ಯಾಧೀಶರಿಲ್ಲ. ಕಾಲಿನ್ಸ್ ಕಂಪೆನಿಯಂಥಾ ವ್ಯಾಪಾರಿಗಳಿಲ್ಲ. ಶಾಸ್ತ್ರಜ್ಞ, ನಿಗಳಾದ ಪಂಡಿತರಿಲ್ಲ, ಅಸಾಮಾನ್ಯ ವಿದ್ವಾಂಸರಿಲ್ಲ. ತನುಮನಧನವನ್ನು ಅರ್ಪಣಮಾಡುವಂಥ ಸತ್ಪುರುಷ, ಪರೋಪಕಾರಿಗಳಿಲ್ಲ, ಶಾಸ್ತ್ರಾನುಯಾಯಿಗಳೂ ಸ್ವಾರ್ಥತ್ಯಾಗಿಗಳೂ ಆದ ಬ್ರಹ್ಮಚಾರಿಗಳು ಮತ್ತು ಸಾಧುಗಳಿಲ್ಲ. ಎತ್ತ ನೋಡಿದತ್ತ ಔದಾಸೀನ್ಯವೇ ತುಂಬಿಹೋಗಿದೆ. ಸಮಾಜವೆಲ್ಲ ಪಶುಗಳಂತೆ ಉದರಪರಾಯಣದಲ್ಲಿ ಆಸಕ್ತವಾಗಿದೆ." ಈ ಕೊರತೆಗಳನ್ನು ನಿವಾರಣೆಮಾಡಿಕೊಂಡಲ್ಲಿ ಜಿನಸಂಘವು ಅಭಿವೃದ್ಧಿಹೊಂದುವುದು. ಈ ಕುಂದುಕಗಳನ್ನು ತಿದ್ದಲಿಕ್ಕೆ ಮಹಾಸಭೆಯು ಕಳೆದ ೧೫ ವರುಷಗಳಿಂದ ಪ್ರಯತ್ನಪಡುತ್ತದೆ. ಇದಕ್ಕೆ ಸರ್ವಪ್ರಾಂತ್ಯದ ಜಿನಮತಾಭಿಮಾನಿಗಳಾದವರು ಸರ್ವರೂ ಸೇರಿಕೊಂಡು ಪ್ರಯತ್ನಿಸಿದರೆ ಅಧ್ಯಕ್ಷ ಮಹನೀಯರು ಅಪ್ಪಣೆಕೊಡಿಸಿದ ಜಿನಸಮಾಜದ ಕೊರತೆಗಳನ್ನು ಬೇಗನೆ ಹೋಗಲಾಡಿಸಬಹುದು. ಮಹಾಸಭೆಯು ಸಾಹಸದಿಂದ ಅನೇಕ ಕಡೆಗಳಲ್ಲಿ ಪಾಠಶಾಲೆಗಳೂ, ಔಷಧಾಲಯಗಳೂ, ಛಾತ್ರಾಲಯ(ಬೋರ್ಡಿಂಗ್)ಗಳೂ ಸ್ಥಾಪಿಸಲ್ಪಟ್ಟಿವೆ. ಇಷ್ಟರವರೇಗೆ ಜೈನವಿದ್ಯಾರ್ಥಿಗಳಿಗೋಸ್ಕರ ಮೈಸೂರು ಸೊಲ್ಲಾಪುರ, ಕೊಲ್ಲಾಪುರ, ಅಹ್ಮದಾಬಾದ್, ಇಂದುರು, ಜಬಲಪುರ, ಹುಬ್ಬಳ್ಳಿ, ಮಂಗಳೂರು, ಲಾಹೋರ್, ಕಾಶಿ ಹೀಗೆ ಹತ್ತು ಕಡೆಗಳಲ್ಲಿ ಬೋರ್ಡಿಂಗ್‌ಗಳು ಸ್ಥಾಪಿಸಲ್ಪಟ್ಟಿವೆ. ಇನ್ನೂ ಕೆಲವು ಸ್ಥಳಗಳಲ್ಲಿ ಸ್ಥಾಪಿಸುವ ಆಲೋಚನೆ ಉಂಟು. ಈ ಪೈಕಿ ಅನೇಕ ಛಾತ್ರಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ದರ್ಮಾರ್ಥವಾಗಿ ಊಟ ಮುಂತಾದವುಗಳನ್ನು ಕೊಡುವರು.

ಮಂಗಳೂರಲ್ಲಿಯೂ ಸಹಾ ಜಿನವಿದ್ಯಾರ್ಥಿಗಳ ಬಗ್ಗೆ ಒಂದು ಬೋರ್ಡಿಂಗ್ ಹೌಸ್ ಯಾ ವಿದ್ಯಾರ್ಥಿಭವನವು ಸ್ಥಾಪಿಸಲ್ಪಟ್ಟಿದೆ ಅಷ್ಟು. ಆದರೆ ಸ್ಥಳೀಕ ಜೈನರ ವಿದ್ಯಾಲಾಭಾವದಿಂದ ಈ ಸ್ಥಾಪನೆಯು ಇನ್ನೂ ಬಲಗೊಳ್ಳಲಿಲ್ಲ. ಉತ್ತರ ಪ್ರಾಂತ್ಯಗಳಲ್ಲಿ ವಿದ್ಯಾರ್ಥಿಗಳ ಬಗ್ಗೆ ವಿದ್ಯಾರ್ಥಿಭವನಗಳನ್ನು ಏರ್ಪಡಿಸಿ ವಿದ್ಯಾಭ್ಯಾಸಕ್ಕೆ ಬೇಕಾದ ಹಣವನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ಕೊಟ್ಟು ಊಟ ಮುಂತಾದವುಗಳನ್ನು ಸಹಾ ಒದಗಿಸಿ ವಿದ್ಯೆಗೆ ಬೇಕಾದ ಸಕಲ ಸೌಕರ್ಯಗಳನ್ನೂ ಅನುಗೊಳಿಸುತ್ತಿರುವಾಗ ನಮ್ಮವರಲ್ಲಿ ವಿದ್ಯಾರ್ಥಿಭವನದ ಕಟ್ಟೋಣಕ್ಕೆ ಬೇಕಾದ ಹಣವನ್ನು ಸಂಗ್ರಹಿಸುವರೆ ಸಹ ಆಗಲಿಲ್ಲ. ತಮ್ಮ ಬಂಧುಜನಗಳು ಇತರ ಪ್ರಾಂತ್ಯಗಳಲ್ಲಿ ಜಿನಮತಾವಲಂಬಿಗಳ ಅಭಿವೃದ್ಧಿಯನ್ನು ಬಹಳವಾಗಿ ಪ್ರಯತ್ನಿಸುವಾಗ ಶಿಕ್ಷಣದ ಏರ್ಪಾಡುಗಳನ್ನು ಸಹಾ ನಮ್ಮಲ್ಲಿ ಮಾಡಿ ಇತರ ಬಂಧುಜನಗಳೊಡನೆ ಅಭಿವೃದ್ಧಿಯ ಪ್ರಯತ್ನಗಳಲ್ಲಿ ಸಹಕಾರಿಗಳಾಗದಿರುವುದು ಬಹಳ ಶೋಚನೀಯವೇ ಸರಿ.

ವಿದ್ಯಾರ್ಥಿಭವನ ಯಾ ಛಾತ್ರಾಲಯಗಳಲ್ಲಿ ಯಾವ ವಿಧದಲ್ಲಿ ವಿದ್ಯಾರ್ಥಿಗಳನ್ನು ತಿದ್ದಬೇಕೆಂಬದನ್ನು ಕೂಡಾ ಸೂಚಿಸಿರುವರು. "ಇಂಥಾ ಆಶ್ರಮದಲ್ಲಿ ಎರಡು ಪ್ರಕಾರದ ವಿದ್ವಾಂಸರು ತಯಾರಾಗಲಿಕ್ಕೆ ಬೇಕು. ಸಂಸ್ಕೃತ ಧಾರ್ಮಿಕ ವಿದ್ಯೆಯಲ್ಲಿ ಪೂರ್ಣತೆಯನ್ನು ಹೊಂದಿ ಲೌಕಿಕ ಅಂದರೆ ರಾಜಕೀಯ, ಮತ್ತು ವ್ಯವಹಾರಿಕ ವಿದ್ಯೆಯಲ್ಲಿ ತಕ್ಕಮಟ್ಟಿಗೆ ಜ್ಞಾನ ಸಂಪಾದಿಸಿದವರು ಮೊದಲನೆ ಪ್ರಕಾರದ ವಿದ್ವಾಂಸರು. ಧಾರ್ಮಿಕ ವಿದ್ಯೆಯಲ್ಲಿ ತಕ್ಕಷ್ಟು ಜ್ಞಾನಸಂಪಾದಿಸಿಕೊಂಡು ಲೌಕಿಕವಿದ್ಯೆಯಲ್ಲಿ [illegible]

ಉಪಾಸನದೇಶದವರಂತೆ ಮೇಲಾದ ವ್ಯಾಪಾರಿಗಳೂ ರಾಜಮಾನ್ಯತೆಯನ್ನು ದೊರಕಿಸುವವರೂ ಆಗಬೇಕು. ವಿದ್ಯಾರ್ಥಿಗಳೂ ಕೂಡಾ ಬ್ರಹ್ಮಚಾರಿಯಾಗಿರಬೇಕಲ್ಲದೆ ಗೃಹತ್ಯಾಗಿಗಳೂ ನಿಸ್ಪೃಹಿಗಳೂ ಆಗಬೇಕೆಂದು ಅಧ್ಯಕ್ಷರು ಅಪ್ಪಣೆಕೊಡಿಸಿರುತ್ತಾರೆ

ಶಾಸ್ತ್ರ ಪುಸ್ತಕಗಳನ್ನು ನಿಕ್ಷೇಪದಂತೆ ಮುಚ್ಚಿಡದೆ ಅವುಗಳನ್ನು ತಾವು ಓದುತ್ತಿರುವದಲ್ಲದೆ ಅನ್ಯರಿಗೂ ತೋರಿಸಿ ಅವರನ್ನೂ ಓದುವಂತೆ ಮಾಡಬೇಕೆಂದು ಶ್ರೀರವಿಯು ಅಪೇಕ್ಷಿಸಿದರು. "ಗ್ರಂಥಕರ್ತರ ಇಚ್ಛೆಯು ತಮ್ಮ ಗ್ರಂಥಗಳು ಪೆಟ್ಟಿಗೆಯಲ್ಲಿಯಾಗಲಿ, ಬೇರೆ ಕಡೆಗೆ ಆಗಲಿ ಹತ್ತೆಂಟು ವೇಷ್ಟನಗಳನ್ನು ಸುತ್ತಿಕೊಂಡು ಕೂತ್ರದೇಕೆಂದು ಇದ್ದಿಲ್ಲ. ಅವುಗಳ ಪ್ರಸಾರವು ಜಗತ್ತಿನಲ್ಲಿ ಹೆಚ್ಚಾಗಿ, ಜನರು ಜ್ಞಾನಿಗಳಾಗುವದೇ ಅವರ ಹೇತುವು. ಆದ್ದರಿಂದ ಪ್ರತಿ ಒಬ್ಬರು ಹಳೇ ಗ್ರಂಥಗಳನ್ನು ಆದಷ್ಟು ಬೈಲಿಗೆ ತೆರಲಿಕ್ಕೆ ಯತ್ನಿಸುವದು ಆದ್ಯಕರ್ತವ್ಯವು" ಎಂದು ಬೋಧಿಸಿ ತಮ್ಮ ತಮ್ಮ ಮಕ್ಕಳನ್ನು ಜಿನಮತಾಭಿಮಾನಿಗಳು ಗಂಡು ಹೆಣ್ಣು ಎಂಬ ಭೇದವಿಡದೆ ಅವರವರಿಗೆ ಯೋಗ್ಯವಾದ ವಿದ್ಯೆಯನ್ನು ಈನೇ ವರುಷದಲ್ಲಿಯೇ ಕಲಿಸಲು ಸುರುಮಾಡುವಂತೆ ಎಚ್ಚರವಿಡಬೇಕೆಂದು ಕೇಳಿಕೊಂಡರು.

ಕೊನೆಗೆ ತೀರ್ಥಕ್ಷೇತ್ರಗಳನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಇಡೀ ಸಂಘವು ಒಂದೇ ಮನಸ್ಸಿನಿಂದ ಪ್ರಯತ್ನಪಡಿಸಿಲ್ಲದೆ ಜಿನಸಂಘವು ಒಕ್ಕಟ್ಟಿನಲ್ಲಿರುವಂತೆ ಪ್ರತಿಯೊಬ್ಬನೂ ಯತ್ನಿಸಬೇಕೆಂದು ಉಪದೇಶಿಸಿದರು. ಅಧ್ಯಕ್ಷರ ಭಾಷಣವು ಹಿಂದಿಯಲ್ಲಿ ಆದ್ದರಿಂದ ಅನೇಕ ಜನರಿಗೆ ಈ ಭಾಷೆ ಜ್ಞಾನವಿಲ್ಲದೆ ಪರಿಸ್ಥಿತಿ ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ ಟೀಕಿಸಿ ಹೇಳಬೇಕಾದ್ದರಿಂದ ಸಮಯವು ಪ್ರವಾಸವಾಗಿ ಅಧ್ಯಕ್ಷರ ಮಾತನ್ನು ತಿಳಕೊಳ್ಳುವವರಲ್ಲಿಯೇ ಹೋಯಿತು. ಮಾರನೆ ದಿನ ಅನೇಕ ಠರಾವುಗಳನ್ನು ಸಭೆಯ ಮುಂದೆ ತಂದು ನಿರ್ಣಯಮಾಡಿದ್ದಾಯಿತು. ಈ ಪೈಕಿ ಮುಖ್ಯವಾದವುಗಳ್ಯಾವವಂದರೆ —

(1) ಮೈಸೂರು ಪ್ರಾಂತ್ಯದಲ್ಲಿ 'ಜೈನಸಾದರೆಂಬ ಜನರು ಅವರ ಈಗಿನ ನಡತೆಗಳಿಂದಲೂ, ಅವರ ವರ್ಗದ ಹೆಸರಿನ ಗುರುತಿನಲ್ಲಿ ಜೈನ ಎಂಬ ಶಬ್ದವಿರುವದರಿಂದಲೂ ಅವರು ಕೆಲವು ಕಾಲಕ್ಕೆ ಪೂರ್ವದಲ್ಲಿ ಜೈನರೇ ಆಗಿದ್ದರೆಂದು ವ್ಯಕ್ತವಾಗುತ್ತದೆ. ಅವರ ವಿಚಾರತತ್ವ ಮತ್ತು ಆಚಾರ ಶೀಲ್ಯಾನುಭವವು ತಪ್ಪಿಹೋಗಿ ಹೋದ್ದರಿಂದ ಅವರು ಅನ್ಯಮತಗಳನ್ನು ಅಂಗೀಕರಿಸಲಿಕ್ಕೆ ಸುರುಮಾಡಿರುತ್ತಾರೆ. ಆದರೂ ಜೈನ ಮೂಲವರ್ಗ ಅವರು ಇನ್ನು ಎಷ್ಟರಿಂದ ಅವರ ಅಪೇಕ್ಷೆ ಮೇರೆಗೆ ಜಿನಮತವನ್ನು ಪುನರುಜ್ಜೀವಿಸಲಿಕ್ಕೆ ಒಂದು ಕಮಿಟಿ ನೇಮಿಸಿಕೊಟ್ಟು ಅವರು ಹೆಸರಿನಲ್ಲಿ ಮಾತ್ರವಲ್ಲದೆ ಕಾರ್ಯದಲ್ಲಿಯೂ ಜೈನರಾಗುವಂತೆ ನೋಡತಕ್ಕದ್ದು.

(2) ಬೆಳ್ಗೊಳದಲ್ಲಿರುವ ಸಂಸ್ಕೃತ ಶಾಲೆ ವಿದ್ಯಾರ್ಥಿಗಳಿಗೋಸ್ಕರ ಒಂದು ಛಾತ್ರಾಲಯವನ್ನು ಏರ್ಪಡಿಸತಕ್ಕದ್ದು.

(3) ಜಿನಚೈತ್ಯಾಲಯಗಳಲ್ಲಿ ಯಾ ಅನ್ಯರ ಸಮಯದಲ್ಲಿಯೂ ಪ್ರವೇಶಿಸುವದು ಪೀಡಾಸ್ಪದವಾದ ಕಾರಣ ಸರ್ವಾತ್ಮನಾ ನಿಷೇಧಿಸತಕ್ಕದ್ದು.

(4) ಕೋರ್ಟುಗಳಲ್ಲಿ ಜೈನರ ವ್ಯಾಜ್ಯಗಳನ್ನು ಜೈನ ಕಾನೂನಿನ ಮೇರೆಗೆ ಈಗ ತೀರ್ಮಾನ ಮಾಡುವದಿಲ್ಲ. ಇದರಿಂದ ನಾವು ಬಹಳ ನಷ್ಟಹೊಂದುತ್ತೇವೆ ಆದ್ದರಿಂದ ಜೈನ ಶಾಸ್ತ್ರದಲ್ಲಿ ಹೇಳುವಂತೆ ತೀರ್ಮಾನವಾಗುವದಕ್ಕೆ ಏರ್ಪಾಡು ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಸರಕಾರಕ್ಕೆ ನಮ್ಮ ಕಷ್ಟಗಳನ್ನು ತಿಳಿಸಿಕೊಳ್ಳುವರೆ ಮತ್ತು ಜೈನ ಶಾಸ್ತ್ರದಲ್ಲಿ ಹೇಳುವ ಕ್ರಮವನ್ನು ಸರಕಾರದವರೆದುರು ವರೆ ಒಂದು ಕಮಿಟಿ ನೇಮಕ ಮಾಡಲಾಯಿತು. ಈ ಸಂಬಂಧದಲ್ಲಿಯು ಕನ್ನಡ ಜಿಲ್ಲೆಯ ಜೈನರು ಈ ಕೆಲಸಕ್ಕೆ ಬಹಳ ಹಣ ಕೊಟ್ಟು ಕೂಡಲೆ ತಮ್ಮ ಪ್ರವೃತ್ತಿಯನ್ನು ಕಾಣಿಸಿದ್ದು ಇಲ್ಲಿ ಪ್ರಸ್ತಾಪಿಸಬೇಕೆಂದು ನಿರ್ಣಯಿಸಲಾಯಿತು.

ಹೀಗೆ ಇನ್ನೂ ಕೆಲವು ನಿರ್ಣಯಗಳನ್ನು ಮಾಡಿಕೊಂಡ ಮೇಲೆ ಅಧ್ಯಕ್ಷ ಮಹನೀಯರು ಈ ಎಲ್ಲಾ ಕಾರ್ಯಗಳಿಗೂ, ಬೋರ್ಡಿಂಗ ಸ್ಥಾಪನೆಗೂ, ತೀರ್ಥಕ್ಷೇತ್ರಗಳ ರಕ್ಷಣೆಗೂ ಬೇಕಾದ ಐವಜಿನ ಬಗ್ಗೆ ದಕ್ಷಿಣ ಪ್ರಾಂತಿಕ ಜಿನಸಂಘದವರು ತಮ್ಮ ಪೂರ್ವದ ಯಶಸ್ಸನ್ನು ಬಿಡದೆ ಹಣಕೊಡಬೇಕೆಂದು ಬೋಧಿಸಿದರು. ಅಧ್ಯಕ್ಷ ಮಹನೀಯರು ಅನ್ಯರಿಗೆ ಮಾತ್ರ ಬೋಧಿಸುವವರಲ್ಲ. ಇವರು ತನ್ನ ಸ್ವಂತ ಪ್ರಯತ್ನದಿಂದ ಗಳಿಸಿದ ಹಣದಲ್ಲಿ ಬಹಳ ಹಣವನ್ನು ಸುಪ್ರಯೋಗ ಮಾಡಿ ದಾನವೀರರೆಂಬ ನಾಮಾಂಕಿತವನ್ನು ಪಡೆದವರಾಗಿರುತ್ತಾರೆ. ಇವರು ಇಷ್ಟರ ವರೆಗೆ ರೂ ೫ ಲಕ್ಷದ ಮೇಲೆ ಪರೋಪಕಾರಾರ್ಥವಾಗಿ ಖರ್ಚು ಮಾಡಿರುತ್ತಾರೆ.

ಮಹಾ ಸಭಾಕಾರ್ಯವೂ, ಗೋಮಟೇಶ್ವರ ಸ್ವಾಮಿಯ ಅಭಿಷೇಕ ಮಹೋತ್ಸವವು ಹ್ಯಾಗೂ ಕೊನೆಗಂಡಿತು. ದೇಶದ ಎಲ್ಲಾ ಕಡೆಗಳಿಂದ ಈ ಅಪೂರ್ವ ಸಂದರ್ಭದಲ್ಲಿ ಬಂದು ನೆರೆದ ಜನರ ಅನನುಕೂಲತೆಗಳನ್ನು ನೀಗಲಿಕ್ಕೆ ಸಭೆಯ ಬಗ್ಗೆ ಸ್ವಾಗತ ಕಮಿಟಿಯೊಂದನ್ನೂ ಅಭಿಷೇಕ ಉತ್ಸವಕ್ಕೆ ಪೂಜಾ ಕಮಿಟಿಯನ್ನೂ ಏರ್ಪಡಿಸಿದ್ದರು. ಆದರೆ ಈ ಎಲ್ಲಾ ಕೆಲಸಗಳನ್ನು ನಿರ್ವಹಿಸುವರೆ ಈ ಕಮಿಟಿಗಳ ಕಾರ್ಯದರ್ಶಿಗಳು ಮಾತ್ರ ಉದ್ಯುಕ್ತರಾದ್ದರಿಂದಲೂ, ಇತರ ಮೆಂಬರರ ಸಹಕಾರವಿಲ್ಲದಿದ್ದುದರಿಂದ ಬಂದಂಥಾ ಜನರು ಯಾವ ಅನುಕೂಲತೆಗಳೂ ಇಲ್ಲದೆ ಬಹಳ ಸಂಕಷ್ಟಕ್ಕೀಡಾಗಬೇಕಾಯಿತು.

ಪ್ರತ್ಯಕ್ಷದರ್ಶಿ.

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಅಣಿಲೆ ಕಾಯಿ ಪಂಡಿತರು.

(ಕಳೆದ ಸಂಚಿಕೆಯ 7ನೇ ಯ ಪುಟದ ಸರಣಿ.)

ಮಂತ್ರವಾದಿಗಳೂ, ಜೋತಿಷ್ಯರೂ, ಅನೇಕರಾಯಿ ವೈದ್ಯರೂ, ಏಕಮತವಾಗಿ ಅವರ ಮಾಯಾ ವಿದ್ಯೆಗಳನ್ನು ಪ್ರಯೋಗಿಸತೊಡಗಿದ ಸ್ಥಾನದಲ್ಲಿ ರಕ್ತವನ್ನು ಹೀರುವ ಜಿಗಣೆಗಳೂ ಅಷ್ಟು ಸ್ಪದ ದೊರಕುವದು ಪ್ರಯಾಸವೆನ್ನಬೇಕು. ಪರಂತು ಊರ ವೈದ್ಯರು ತೀರಾ ತುಚ್ಛರೆನ್ನುವದು ಅತಿಶಯೋಕ್ತಿಯೇ. ಅವರು ಓದುವ ಆಯುರ್ವೇದ ಗ್ರಂಥಗಳು ಕಪಟಸಾಧನಗಳಲ್ಲ, ಅವುಗಳಲ್ಲಿ ನಿರ್ದೇಶಿಸಿರುವ ಚಿಕಿತ್ಸಾ ಪ್ರಯೋಗಗಳು ಸುಲಭಸಾಧ್ಯವಾಗಿದ್ದು ಹೆಚ್ಚು ಸತ್ವವುಳ್ಳವುಗಳೆಂಬದರಲ್ಲಿ ಅನುಮಾನವಿಲ್ಲ. ಪರಂತು ರೋಗ ನಿಷ್ಪರ್ಷೆಯ ಸೌಲಭ್ಯಗಳು ಇವರಿಗೆ ಇದುವರೆಗೆ ಶಿಕ್ಕಲೇ ಇಲ್ಲ, ಮತ್ತು ಯಾವ ಪರ್ಯಂತ ಇವರಿಗೆ ಅವಯವ ಪರಿಜ್ಞಾನ ದೊರಕುವ ಸಂಭವವಿರುವದಿಲ್ಲವೋ ಆ ವರೆಗೆ ಇವರು ಸರ್ವತ್ರ ನಿಂದೆಗೆ ಗುರಿಯಾಗುವದೇ ಸರಿ. ನಿಜವಾಗಿ ಉಪಯೋಗಕರವಾಗುವ ಯೋಗ್ಯತೆಯುಳ್ಳವರು ಶಾರೀರಕ ವೈಶೇಷ್ಯಗಳ ಅಜ್ಞತೆಯ ದೆಸೆಯಿಂದ ಕೆಸರಿನಲ್ಲಿ ಹೂಳಿಹೋದ ರತ್ನದಂತೆ ತೇಜೋಹೀನರಾಗಿ ಅಂಧಕಾರದಲ್ಲಿ ತಡವರಿಸಿ ಅಪಹಾಸ್ಯಕ್ಕೆ ಗುರಿಯಾಗುವದು ನಮ್ಮ ದೇಶೀಯರಿಗೆ ಒಂದು ದೊಡ್ಡ ಕುಂದು ಕವಲ್ಲವೇ? ಕಲವು ಕಾಲದ ಮೊದಲು ನೆಲ್ಲೂರಿನಲ್ಲಿಯೋ ಬೇರೆ ಯಾವ ಜಿಲ್ಲೆಯಲ್ಲಿಯೋ ದೇಶಾಭಿಮಾನಿಯಿಂದ ಇಂಥ ವೈದ್ಯರಿಗೆ ಶಾರೀರಕ ಶಾಸ್ತ್ರವನ್ನು ಕಲಿಸಿ ಅವರ ಯೋಗ್ಯತೆಯನ್ನು ಅಭಿವೃದ್ಧಿಸುವ ಮೂಲಕ ಅವರನ್ನು ಜನೋಪಯೋಗಕ್ಕೆ ಸಿದ್ಧಪಡಿಸಿದಾಗ್ಯೂ ಅವರು ಅಂಗ್ಲ ವಿದ್ಯಾಭ್ಯಾಸದ ಮೂಲಕ ವೈದ್ಯ ಪರೀಕ್ಷೆಗಳನ್ನು ತೇರಿದವರಂತೆಯೇ ರಂಜಿಸಿದರು ಎಂಬ ವಿದ್ಯಮಾನವು ಪ್ರಕೃತದ ಜಿಜ್ಞಾಸಕ್ಕೆ ಉಪಯುಕ್ತವಾದದ್ದು. ಈ ಮಹತ್ಕಾರ್ಯದಲ್ಲಿ ಪ್ರಥಮತಾ ಪ್ರವೇಶಿಸಬೇಕಾದ ಅಧಿಕಾರಿಗಳು ಸ್ಥಳೀಕ ಬೋರ್ಡುಗಳೂ ಮುನ್ಸಿಪಾಲ್ ಕೌನ್ಸಿಲುಗಳೂ ಎಂಬ ಸ್ವರಾಜ್ಯ ಪ್ರವರ್ತನೆಗಳಲ್ಲಿ ಅಮರಿಕೊಂಡಿರುವ ಸಭೆಗಳ ಗೃಹಸ್ಥರಾಗಿರುತ್ತಾರೆ. ಮೊದಲು ಬೇರೆ ಜಿಲ್ಲೆಯವರು ಮೇಲುಪಂಗ್ತಿ ಹಾಕಲಿ, ಬಳಿಕ ನಾವು ಅವರ ಸನ್ಮಾರ್ಗವನ್ನು ಹಿಂಬಾಲಿಸುವದು ಯಥೋಚಿತವೆಂಬ ಅಲಸ್ಯ ಪಕ್ಷವನ್ನು ವರಿಸುವ ಸಭಾಸದರ ಸಂಘದಲ್ಲಿ ನಮ್ಮ ಜಿಲ್ಲೆಯವರು ಮೊದಲನೆಯ ಸ್ಥಾನವನ್ನು ಅಲಂಕರಿಸಲು ಸರ್ವದಾ ಮನಸುಳ್ಳವರು ಎಂದು ಪರಿಗಣಿಸಿದ ಮರ್ಯಾದೆಯಾಗಿದೆ. ದಿನೇ ದಿನೇ ಇಂತಹ ಸಂಘಗಳ ಅದಾಯವು ಏರುತ್ತಾ ಬರುವದು. ಸ್ವದೇಶೀಯರಹಿತಕ್ಕೆ ಬೇಕಾದ ಅನುಕೂಲ್ಯಗಳನ್ನು ಒದಗಿಸಿಕೊಡುವದಕ್ಕಿಂತ ದೊಡ್ಡ ದೇಶಾಭಿವೃದ್ಧಿಯ ಸೇವೆಯು ಬೇರೆ ಯಾವದಿದೆ. ನಮ್ಮ ಸ್ಥಳೀಕ ಬೋರ್ಡುಗಳೂ ಮುನ್ಸಿಪಲ್ ಸಭೆಯೂ ಸಮಯ ಕಳೆಯದೆ ಇಂತಹ ಸತ್ಪ್ರವರ್ತನೆಯಲ್ಲಿ ಸೇರುವವು ಎಂಬ ಕೋರಿಕೆಯು ಶೀಘ್ರ ಸಫಲವಾಗಲಿ!

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿರಿ ಗಡಿಯಾರಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯು ಶ್ರೇಷ್ಠವೂ ಹೆಸರುಳ್ಳವುದು. ಗೂರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರು ಅನ್ಯರನ್ನು ಬಿಟ್ಟು ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.

ನಮ್ಮ 'ಮೆಕ್ಸಿಕ' ವಾಚನ್ನು ಬಳವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೦-೦
ನಮ್ಮ 'ಮ್ಯಾಡಿಪಿ' ನಿಕಲ್ ಕೇಸಿನಲ್ಲಿ ರೂ ೧೫-೦-೦
ಬೆಳ್ಳಿ ಕೇಸಿನಲ್ಲಿ ರೂ ೧೮-೦-೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ. ೧೭-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ದಲಿ.' ನಿಕಲ್ ಕೇಸಿನಲ್ಲಿ ರೂ. ೧೮-೦-೦
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ' ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು ೧ ಆಣೆ ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮೂಲಕ ಕಳುಹಿಸುವೆವು. ನಮ್ಮ 59 ಎಸ್ಪ್ಲನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟಗಾರರಲ್ಲಿಯೂ ಕ್ರಯಕ್ಕೆ ದೊರಕುವವು.

ನೋಟೀಸ್

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ—ಸಂ 1910ನೇ ಇಸವಿ ಸ್ಮಾಲ ನಂಬ್ರ 321 S. I. A. $\frac{71}{10}$—ಕುಮಟೆ ಆದಂಸ್ಯಾಬ— ವಾದಿ— ಅರ್ಜಿದಾರ, ಮತ್ತು ವ್ಯಾದಿನ್ ಬ್ಯಾರಿ— ಪ್ರತಿವಾದಿ— ರೆಸ್ಪಾಂಡೆಂಟ್. ಸ್ಮಾಲ ನಂಬ್ರ $\frac{325}{1910}$ S. I. A. $\frac{72}{10}$ ಸದರಿ ಕುಮಟೆ ಆದಂಸ್ಯಾಬ— ವಾದಿ— ಅರ್ಜಿದಾರ, ಮತ್ತು ಸಾವುಂಞಿಬ್ಯಾರಿ— ಪ್ರತಿವಾದಿ— ರೆಸ್ಪಾಂಡೆಂಟ್:

ಸದರಿ ಪ್ರತಿವಾದಿಯರಿಂದ ಗೇಣಿಗಳ ಬಾಬ್ತು ಕೂಡ ಒಂಜೈವಳ ಜುಮ್ಮಾಮಹಜೀದಿ ಭಂಡಾರಕ್ಕೆ ಬರತಕ್ಕ ಹಣಗಳ ಒಗ್ಯೆ ಸದರಿ ಮಹಜೀದಿಯ ಪತ್ತು ಸನಸ್ತರ ಕಡೆಯಿಂದ ಸದರಿ ಪ್ರತಿವಾದಿಯರ ಮೇಲೆ ದಾವೆಗಳನ್ನು ಮಾಡುವರೆ ಆ ಪಳ್ಳಿಯ ಆಡಳಿತೆದಾರನಾದ ತನಗೆ ಪರ್ಮಿಶನ್ ಕೊಡಬೇಕೆಂತ ಸದರಿ ವಾದಿಯು ಅರ್ಜಿಗಳನ್ನು ಈ ಕೋರ್ಟಿನಲ್ಲಿ ಕೊಟ್ಟಿರುತ್ತಾನೆ. ಸದರಿ ವಿಷಯದಲ್ಲಿ ಆಕ್ಷೇಪಣೆ ಉಳ್ಳವರು ಸಂ 1910ನೇ ಇಸವಿ ಜೂನ್ ತಿಂಗಳ ತಾರೀಕು 13ರಲ್ಲು ಹಗಲು ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳುವದು.

ಸಂ 1910ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 12ರಲ್ಲು ಕೋರ್ಟಿನ ಮೊಹರ ನಿಶಿ ನನ್ನ ದಸ್ಕತೊಡನೆ ಕೊಡಲ್ಪಟ್ಟದೆ.

B. Krishna Rau
District Munsif

ಪತ್ರವ್ಯವಹಾರ

ಸ್ವದೇಶಾಭಿಮಾನಿ ಪತ್ರಕರ್ತರ ಸಮಕ್ಷಮಕ್ಕೆ.

ಸ್ವಾಮಿ,

ಶಾಲಾ ಹುಡುಗರ ಸಂಬಳದ ದರವನ್ನು ಹೆಚ್ಚಿಸುವ ಕುರಿತು ತಾವು ಬರದ ಲೇಖನವನ್ನೋದಿ ನನಗೆ ಸೂಚಿಸಿದ ಕೆಲವು ಸಂಗತಿಗಳನ್ನು ಅರಿಕೆಮಾಡಲಿಕ್ಕೆ ಅನುಮತಿಯನ್ನಪೇಕ್ಷಿಸುವೆನು.

ನಮ್ಮ ದೇಶದಲ್ಲಿ ವಿದ್ಯೆಯನ್ನು ಜೀವನೋಪಾಯಕ್ಕಾಗಿ ಅಲ್ಲದೆ ಅಲಂಕಾರಕ್ಕಾಗ್ಗಿ ಯಾ ಬರೇ ಬುದ್ಧಿವಿಕಾಸಕ್ಕೆಂದು ಕಲಿಯುವವರು ಅತಿ ವಿರಳ. ವಿದ್ಯೆಯೆಂಬುವದು ಹಣವಿನ ಒಂದು ವಿನಿಯೋಗ (Investment) ವೆಂದೆಣಿಸಿ ಹೆತ್ತವರು ಮಕ್ಕಳನ್ನು ಶಾಲೆಗೆ ಕಳುಹಿಸಿ ವರದಕ್ಷಿಣೆಯ ರೂಪದಲ್ಲಿ, ಸರಕಾರಿ ನೌಕರಿಯೇ ಮೊದಲಾದ ವೃತ್ತಿಗಳ ರೂಪದಲ್ಲಿ ಅದರ ಬಡ್ಡಿಯನ್ನು ಪಡೆಯುತ್ತಿದ್ದರು. ಇತ್ತೀಚೆಗೆ ಉಮೇದ್ವಾರರು ಹೆಚ್ಚಾಗಿ ವಿದ್ಯೆಯ ಬೆಲೆ ಇಳಿದದೆ. ಆದ್ದರಿಂದ ವಿದ್ಯೆಯಲ್ಲಿ ಹಣ ವೆಚ್ಚಮಾಡಲು ಸಾಮಾನ್ಯ ಸ್ಥಿತಿಯವರಿಗೆ ಪುರುಸೊತ್ತಿಲ್ಲ. ಅಂಥಾ ಸಮಯದಲ್ಲಿ ಸಂಬಳವೇರಿಸಿದರೆ ಈ ವ್ಯಾಪಾರದ ಗೋಜಿಗೆ ಹೋಗುವವರನ್ನು ಮಧ್ಯಮರಲ್ಲಿ ಬಡತರದವರು ನಷ್ಟಕರವೆಂದು ಬಿಡಬೇಕಾಗುವದು. ವಿದ್ಯಾರ್ಥಿಯಾಗಿರುವಾಗಲೇ ಹುಡುಗನು ಗೃಹಸ್ಥನಾಗುವದರಿಂದ ಉದರ ನಿರ್ವಾಹದ ಪ್ರಶ್ನೆಯು ಇನ್ನಷ್ಟು ಕಠಿಣವಾಗುವದೆಂದು ಬೇರೆ ಹೇಳಬೇಕೇ?

ಖಾಸಗಿ ಶಾಲೆಗಳಿಗೆ ದುರ್ದಿನ ಬರುವದೆಂಬ ಭಯ ಸಹಜ ಹುಟ್ಟುವದು. ಮಾದರಿ ಶಾಲೆಗಳ ಮಾದರಿಯನ್ನನುಸರಿಸಿಕ್ಕೂ ಹೊಸ ಹೊಸ ರೆಗ್ಯುಲೇಶನುಗಳ ಕಟ್ಟುಗಳನ್ನು ಪೂರೈಸಲಿಕ್ಕೂ ಹೆಚ್ಚೆಚ್ಚು ಹಣ ಬೇಕಾಗಬಹುದು. ಉಚ್ಚ ಶಿಕ್ಷಣವು ಪ್ರಿಯವಾದಂತೆ ಶಾಲಾ ಮಾಸ್ತರುಗಳೂ ಪ್ರಿಯವಾಗುವರು. ಸಂಬಳ ಹೆಚ್ಚಿಸಿದ್ದರಿಂದ ಹುಡುಗರು ಕಮ್ಮಿಯಾದರೆ ಶಾಲೆಗೆ ನಷ್ಟ ಬೀಳುವ ಸಂಭವ ಹೆಚ್ಚು. ಆದ್ದರಿಂದ ಇದ್ದ ಖಾಸಗಿ ಶಾಲೆಗಳು ಉಳಿಯುವದು ಕಷ್ಟ, ಇನ್ನು ಆಗುವದು ಅತಿಕಷ್ಟವಾಗುವದು. ಇಂಥಾ ಸಮಯದಲ್ಲಿ ಔದ್ಯೋಗಿಕ ಶಿಕ್ಷಣ ಕೈಗಾರಿಕೆಯ ಸ್ಥಾಪನೆಗಳಿಗೆ ಕೈಕೊಡುವವರು ನಿಜವಾಗಿ ಲೋಕೋಪಕಾರಿಗಳಾಗುವರು. ಸಾವಿರಾರು ಜನರ ಉದರ ನಿರ್ವಾಹಕ್ಕೆ ಮಾರ್ಗವಾಗುವದು. ಹೊಟ್ಟೆ ತುಂಬಿದರೆ ಅಸಂತುಷ್ಟಿ ಕಡಿಮೆಯಾಗುವದು, ಯಾಕಂದರೆ ಅಸಂತುಷ್ಟಿಗೆ ಕಾರಣ ವಿದ್ಯೆಯಲ್ಲ ಹಸಿವು.

ಈ ಕಾರ್ಯಕ್ಕೆ ದೇವಾಲಯಗಳು ಯೋಗ್ಯ ಸಂಸ್ಥೆಗಳೆಂದು ನನಗೆ ತೋರುವದು. ಹತ್ತು ಜನರಿಗೆ ವೃತ್ತಿಗೆ ಉಪಾಯವನ್ನನುಕೂಲಿಸುವದು ಪುಣ್ಯಪ್ರದವೂ ಹತ್ತು ಜನರ ಧನದ ಯೋಗ್ಯ ವಿನಿಯೋಗವೂ ಆಗಿದೆ. ಈ ವಿಷಯವನ್ನು ತಾವೇ ಹಿಂದೆ ಹಲವು ಸಂಚಿಕೆಗಳಲ್ಲಿ ವಿಶದಪಡಿಸಿರುವಿರಿ. ಪ್ರಕೃತದಲ್ಲಿ ದೇವಾಲಯಗಳಿಗೆ ಹರಿಕೆ ಕಾಣಿಕೆಗಳಿಂದ ಮುಂಚಿನಷ್ಟು ಧನ ಸಂಪಾದನೆಯಾಗುವದಿಲ್ಲವೆಂದು ನಂಬ ಕಾರಣವದೆ. ಆದ್ದರಿಂದ ಹೀಗೊಂದು ಕೈಗಾರಿಕೆಯನ್ನೂ ಅದಕ್ಕೆ ಆಗಿ ಒಂದು ಕಲಾ ಶಾಲೆಯನ್ನೂ ಸ್ಥಾಪಿಸಿದರೆ ಒಂದು ಲಾಭಕರವಾದ ಸಂಸ್ಥೆಯನ್ನು ಏರ್ಪಡಿಸಿದಂತಾಗುವದು. ನಮ್ಮ ದೇಶದಲ್ಲಿ ಜರ್ಮನ್, ಇಂಗ್ಲಿಷ್, ಕಥೋಲಿಕ್ ಮಿಶ್ಯನಿ ಹವರು [illegible] ಮಿಶನುಗಳು ಧರ್ಮಪ್ರಚಾರಕ್ಕೆ ನಿರ್ಮಿಸಲ್ಪಟ್ಟವುಗಳು. ಇವರ ಕಾರ್ಖಾನೆ ವಗೈರೆಗಳಿಂದ ಇವರು ತಮ್ಮ ಮತಸ್ಥರಿಗೆ ಜೀವನ ಕೊಡುವರು, ತಮ್ಮ ಫಂಡನ್ನು ಹೆಚ್ಚಿಸುವರು, ಸಮಾಜಕ್ಕೆ ಉಪಕಾರಿಗಳೆನ್ನಿಸುವರು.

ಆದರೆ ಈ ಸಂಗತಿಯಲ್ಲಿ ಎರಡು ವಿಷಯಗಳನ್ನು ನೆನಪಿಡಬೇಕಾಗಿದೆ. ಮಿಶ್ಯನಿನ್ ಪಾದರಿಗಳು ತಮ್ಮ ಧರ್ಮವನ್ನು ಮಾತ್ರವಲ್ಲ ತಾವು ಕೈಹಚ್ಚುವ ಕೈಗಾರಿಕೆಯನ್ನೂ ಕಲಿತು ಬರುವದು. ಹಾಗೆಯೇ ದೇವಾಲಯದ ಆಡಳಿತೆಯವರಲ್ಲಿ ಇಂಥ ವಿಚಕ್ಷಣರು ಇರಬೇಕಾಗುವದು. ಅಥವಾ ಅಂಥವರ ಕೈಯಲ್ಲಿ ಕೈಗಾರಿಕೆಗಳ ಮೇಲ್ವಿಚಾರವನ್ನು ಒಪ್ಪಿಸಬೇಕು. ಇನ್ನೊಂದು ಏನಂದರೆ ಒಂದುವೇಳೆ ಈ ಸಂಸ್ಥೆಯು ಕವಚಿಬಿದ್ದರೂ ದೇವಾಲಯದ ವಿನಿಯೋಗಗಳಿಗೆ ಹಾನಿಬಾರದಂತೆ ಆ ಉದ್ದಿಶ್ಯಗಳಿಗೆ ಪ್ರತ್ಯೇಕಿಸಿಟ್ಟು ಮಿಕ್ಕ ಹಣವನ್ನೇ ಶಾಲೆ ಕೈಗಾರಿಕೆ ವಗೈರೆಗೆ ಉಪಯೋಗಿಸತಕ್ಕದ್ದು.

ಸೇವಾಧರ್ಮ.

ಈ ಕಾಲದಲ್ಲಿ ಮುಕ್ಕಾಲುಪಾಲು ಜನರೆಲ್ಲರೂ ಸೇವಾವೃತ್ತಿಯನ್ನೇ ಬಯಸುತ್ತಾ, ಎಷ್ಟು ಕಷ್ಟಗಳನ್ನಾದರೂ ಸಹಿಸಿಕೊಂಡು ಅದರಲ್ಲಿಯೇ ಸೇರುತ್ತಿರುವರು. ಆದುದರಿಂದ ಅವರ ಧರ್ಮವನ್ನು ಸ್ವಲ್ಪಮಟ್ಟಿಗೆ ತಿಳಿಸುವೆನು.

ಪೂರ್ವಕಾಲದಲ್ಲಿ ಸೇವೆ ಎಂಬುದು ಒಂದು ಹೀನವೃತ್ತಿಯೆಂದು ತಿಳಿಯಲ್ಪಟ್ಟಿತ್ತು. ಎಷ್ಟು ಹೆಚ್ಚಾಗಿ ಹಣವನ್ನು ಕೊಡುವೆವೆಂದರೂ ಜನರು ಈ ವೃತ್ತಿಗೆ ಸೇರುತ್ತಿರಲಿಲ್ಲ. ನ್ಯಾಯವಾಗಿ ವಿಚಾರಮಾಡಿ ನೋಡಿದರೆ ಇತರ ವೃತ್ತಿಗಳಿಗಿಂತ ಇದರಲ್ಲಿ ಕಷ್ಟವು ಹೆಚ್ಚೆಂಬುದು ನಿಜ. ಆದರೂ ಪ್ರಕೃತಸ್ಥಿತಿಯಲ್ಲಿ ನಮ್ಮ ದೇಶದ ವೃತ್ತಿಗಳಿಗೆ ತಕ್ಕ ಪ್ರೋತ್ಸಾಹವಿಲ್ಲದೆ ಎಲ್ಲಾ ವೃತ್ತಿಗಳೂ ನಾಮಮಾತ್ರಾವಶಿಷ್ಟವಾಗುತ್ತಿರುವುದರಿಂದ ಜನರ ಜೀವನೋಪಾಯಕ್ಕೆ ಬೇರೆ ಮಾರ್ಗಗಳಿಲ್ಲದೆ ಈ ಕೆಲಸಕ್ಕೆ ಸೇರಬೇಕೆಂದು ಅಪೇಕ್ಷಿಸುವುದು ಆಶ್ಚರ್ಯಕರವಲ್ಲ.

ಸೇವಕರು ತಮ್ಮ ದಣಿಯ ಮನಸ್ಸಿನಂತೆ ನಡೆಯಬೇಕಾಗಿರುವುದರಿಂದ ಯಾವಾಗಲೂ ಅವರ ಆಜ್ಞೆಗೆ ಎದುರುತ್ತರವನ್ನು ಕೊಡಬಾರದು. ಅಂದರೆ, ಅವರು ಹೇಳಿದಂತೆ ನಡೆಯತಕ್ಕದ್ದು ಆವಶ್ಯ. ಅವರು ಹೇಳಿದುದೇ ಪ್ರಮಾಣ. ಅವರು ಕೆಟ್ಟುದನ್ನು ಒಳ್ಳೇಯದೆಂದರೂ, ಒಳ್ಳೇಯದನ್ನು ಕೆಟ್ಟದೆಂದರೂ ಅಹುದೆಂದು ಒಪ್ಪಿಕೊಳ್ಳಬೇಕು. ಇದರಿಂದ ಅವರ ಮೆಚ್ಚುಗೆಯನ್ನು ಪಡೆಯಬಹುದು. ವಾಸ್ತವವಾಗಿ ಯಜಮಾನನ ಅಭಿಪ್ರಾಯವು ತಪ್ಪೆಂದು ತನಗೆ ತಿಳಿದಿದ್ದರೂ ಅದನ್ನು ಹೇಳಿದರೆ, ತನಗೆ ಇದಿರುವಾದಿಸುವನೆಂದು ಯಜಮಾನನು ಕೋಪಿಸಿಕೊಳ್ಳಬಹುದು. ಆದುದರಿಂದ ತನ್ನೊಡೆಯನು ಹೇಳಿದ್ದಕ್ಕೆ ಒಪ್ಪಿಕೊಂಡು ನಡೆಯುವುದೇ ಸೇವಾಧರ್ಮದ ಗುಟ್ಟು.

ಯಾವ ಕೆಲಸವನ್ನು ಮಾಡಬೇಕಾದರೂ ಚಿತ್ತೈಕಾಗ್ರತೆಯು ಅವಶ್ಯ. ಇವುಗಳಿಲ್ಲದೆ ಮಾಡತಕ್ಕ ಕೆಲಸವು ಫಲಕಾರಿಯಾಗದು. ಸೇವಕನು ಯಾವಾಗಲೂ ತನ್ನ ಯಜಮಾನನಲ್ಲಿ ಭಕ್ತಿಯುಳ್ಳವನಾಗಿ, ಆತನು ಹೇಳಿದ್ದನ್ನು ತಪ್ಪದೆ ಮಾಡುವ ಅಭ್ಯಾಸವಿರಬೇಕು. ಹರಿಶ್ಚಂದ್ರ ಮಹಾರಾಜನು ಚಂಡಾಲನ ಸೇವೆ ಮಾಡುವುದರಲ್ಲಿ ಸ್ವಲ್ಪವಾದರೂ ಹಿಂಜರಿದನೆ? ದಣಿಯ ಅಪ್ಪಣೆಯಂತೆ ತನ್ನ ಸ್ವಂತ ಮಗನನ್ನು ಸುಡಲಿಕ್ಕೆ ಸುದಾ ಕಾಣಿಕೆಯನ್ನು ಕೊಟ್ಟಲ್ಲದೆ ತೀರದೆಂದು ತಡಮಾಡಿ, ಪ್ರಿಯಪತ್ನಿಯಾದ ಚಂದ್ರಮತಿಯ ಕೊರಳನ್ನು ಕೊಯ್ಯಲಿಕ್ಕೆ ತನ್ನ ಕೈಯಿಂದಲೇ ಕತ್ತಿಯನ್ನೆತ್ತಿದುದೂ ಸ್ವಾಮಿಭಕ್ತಿಯ ಪರಾಕಾಷ್ಠತೆಯನ್ನು ಬೋಧಿಸುವುದು. ರಾಮಾಯಣದಲ್ಲಿ ವರ್ಣಿತನಾದ ಆಂಜನೇಯನ ಪ್ರಭುಭಕ್ತಿಯನ್ನು ಎಷ್ಟೆಂದು ಹೊಗಳಬಹುದು. ಆತ್ಮಸುಖವನ್ನು ಲೆಕ್ಕಿಸದೆ ನಿದ್ರಾಹಾರಗಳನ್ನು ತೊರೆದು, ನೂರಾರುಗಾವುದ ದೂರ ಹೋಗಿ, ಒಡತಿಯನ್ನು ಕಂಡು, ರಾಮನ ಸಂದೇಶವನ್ನು ತಿಳುಹಿ, ಶತ್ರುವಿನ ಇದಿರಿಗೆ ತನ್ನೊಡೆಯನ ಪರಾಕ್ರಮವನ್ನು ಹೊಗಳಿ, ತನ್ನ ಸಾಹಸನ್ನು ತೋರಿ, ಹೆಸರುಗೊಂಡ ಈ ಮಹನೀಯನು ಸದಾ ಸ್ಮರಣೀಯನಾಗಿರುವನು. ಸೇವಕರು ತಮ್ಮೊಡೆಯನ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದರೆ ಅವರಿಗೆ ಪ್ರಖ್ಯಾತಿಗಳು ಲಭಿಸುವವಲ್ಲದೆ ಪ್ರಭುವಿನ ಅನುಗ್ರಹದಿಂದ ಬೇಕಾದಷ್ಟು ಲಾಭವೂ ಸಿಕ್ಕುವುದು.

ಸೇವಕರು ಸೋಮಾರಿಗಳಾಗಿರಬಾರದು. ಸದಾಕಾಲವೂ ಜಾಗರೂಕತೆಯಿಂದ ಇದ್ದುಕೊಂಡು, ದಣಿಯ ಮನಸ್ಸನ್ನು ತಿಳಿದು ಅದರಂತೆ ನಡೆಯಬೇಕು. ಆತನು ಕೋಪದಲ್ಲಿರುವಾಗ ಯಾವ ಮಾತನ್ನೂ ಆಡದೆ ಸುಮ್ಮನಿದ್ದು ಸೌಮ್ಯನಾಗಿರುವಾಗ ಹತ್ತಿರಕ್ಕೆ ಹೋಗಿ, ವಿನಯದಿಂದ ತನ್ನ ಕಾರ್ಯವನ್ನು ಬಿನ್ನಯಿಸತಕ್ಕದು. ಕಾರಣಾಂತರದಿಂದ ಆತನು ತನ್ನಲ್ಲಿ ಕೋಪಿಸಿದರೆ ಸೈರಿಸಿಕೊಂಡಿದ್ದು ಕ್ಷಮೆ ಬೇಡಿ ಆತನ ಅನುಗ್ರಹವನ್ನು ಪಡೆಯಬೇಕು.

ಪ್ರಾಮಾಣಿಕತೆಯು ಸೇವಕನಿಗೆ ಮುಖ್ಯಧರ್ಮವು. ಮನುಷ್ಯನು ಎಂತಹ ಗುಣಶಾಲಿಯಾಗಿದ್ದರೂ ಸುಳ್ಳುಗಾರನಾದರೆ ಅವನನ್ನು ಯಾರೂ ನಂಬಲಾರರು. ಸೇವಕನಂತೂ ಹೆಚ್ಚಾಗಿ ನಂಬುಗೆಯುಳ್ಳವರಾಗಿಯೇ ಇರಬೇಕಾದುದರಿಂದ ಎಂದಿಗೂ ಸತ್ಯವನ್ನು ಬಿಡಬಾರದು. ಹಲವರು ಸೇವಕರು ಕಂಡೂ ಕಾಣದಂತೆ ಸುಳ್ಳನಾಡುವುದು, ಯಜಮಾನನಿಗೆ ತಿಳಿಯದಂತೆ ಅವನ ಸೊತ್ತನ್ನಪಹರಿಸುವುದು, ತಮ್ಮ ಒಡತಿಯರೊಂದಿಗೆ ಸಲುಗೆಯಿಂದಿರುವುದು, ದಿಡುನುಡಿ [illegible] ಮುಂತಾದ ದುರ್ಗುಣಗಳನ್ನು ಪಡೆದಿರುವರು. ಸೇವಕರಿಗೆ ಈ [illegible]

ದಣಿಯನ್ನು ಮೆಚ್ಚಿಸುವುದು ಕಷ್ಟ; ಎಚ್ಚರದಿಂದ ನಡೆದುಕೊಂಡರೂ ದಣಿಯು ಸೇವಕನಲ್ಲಿ ದೋಷವನ್ನು ಹೊರಿಸಬಹುದು. ಇದರಿಂದ ಸೇವಕನು ಬೇಸರಗೊಳ್ಳದೆ ಕಣ್ಣು ಕೈಯಲ್ಲಾದಮಟ್ಟಿಗೆ ನಿರ್ವಂಚನೆಯಿಂದ ಸ್ವಾಮಿ ಕಾರ್ಯವನ್ನು ಮಾಡುತ್ತಾ ಬರತಕ್ಕದ್ದು. ಒಡೆಯನ ಇಂಗಿತವನ್ನು ತಿಳಿದು ನಡೆದುಕೊಂಡರೆ ಬಹು ಸುಲಭವಾಗಿ ಆತನ ಪ್ರೀತಿಯನ್ನು ಸಂಪಾದಿಸಬಹುದು

ಈ ಕಾಲದಲ್ಲಿ ಸ್ವತಂತ್ರ ಜೀವನವು ಪ್ರತಿಯೊಬ್ಬರಿಗೂ ಅವಶ್ಯಕವೆಂದು ಅನೇಕರು ಹೇಳುವರು. ಆದರೆ ಎಲ್ಲರೂ ಸ್ವತಂತ್ರರಾಗಿರಲು ಸಾಧ್ಯವಲ್ಲ ಆದುದರಿಂದ ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ವೃತ್ತಿಯನ್ನು ಅವಲಂಬಿಸಲೇ ಬೇಕಾಗಿದೆ. ಆದರಲ್ಲಿಯೂ ಸೇವಾವೃತ್ತಿಯು ಸದ್ಯಃ ಫಲಕಾರಿಯಾದುದರಿಂದ ಜನರು ಆದರಲ್ಲಿ ಪ್ರವೇಶಿಸಲು ತುಂಬಾ ಆತುರಗೊಳ್ಳುವರು. ಅದು ಕಷ್ಟವೆಂದು ಹೆದರದೆ ಭಕ್ತಿಶ್ರದ್ಧೆಗಳಿಂದ ಸ್ವಾಮಿಕಾರ್ಯಗಳನ್ನು ಮಾಡುತ್ತಾ ತಮ್ಮೊಡೆಯನ ಅನುಗ್ರಹಕ್ಕೆ ಪಾತ್ರರಾಗಿ ಇಹಪರ ಸೌಖ್ಯಗಳನ್ನು ಪಡೆಯಬಹುದು.

ಪರಸೇವೆಯೆಕಡುಕಷ್ಟಂ |
ನರನಿದನರಿತೊಡೆಯನಾಣತಿಯ ಮೀರದೆ ತ
ಗುರುಭಕ್ತಿಶ್ರದ್ಧೆಗಳಿಂ |
ದರಸನಪ್ರೀತಿಯುತೊಡೆಯನಂ ಸೇವಿಪುದೈ ‖ (ಏವೋಳೋದೆಯ)

———o———

ವಿದೇಶ ವೃತ್ತಾಂತ.

೨೪,೦೦೦ ಸುಳಿಗೆಯವರು ಚೀನಾದೇಶದಲ್ಲಿ ಚಂಗ್ಶಾ ಎಂಬ ಊರನ್ನು ಸೂರೆಮಾಡುತ್ತಿರುವರಂತೆ ಅನ್ಯದೇಶದ ತರಬೇತಾದ ೭೦೦೦ ಸಿಪಾಯಿಗಳು ಈ ದಂಗೆಗಾರರನ್ನು ಕೂಡಿರುವರು ಪಟ್ಟಣಕ್ಕೆಲ್ಲಾ ಬೆಂಕಿ ಹತ್ತಿಸಿರುವರು ಸರಕಾರದ ಹಲವು ಆಫೀಸರರನ್ನು ಕೊಂದಿರುವರು. ಆಫೀಸರರಲ್ಲಿ ಕೆಲವರು ಜೀವದಾಸೆಯಿಂದ ಓಡಿರುವರು

~~~~~

ಈಸ್ಟರ್ ರಜಾ ದಿನಗಳಲ್ಲಿ ಇಂಗ್ಲಾಂಡಿನಲ್ಲಿ ಪಾರ್ಲಿಮೆಂಟ ಸಭೆಯ ಬಿಡಾರ ತುಂಬಿನವರು ಸಭೆಕೂಡುವ ವಾಡಿಕೆ ಇರುವುದು ಇಂಗ್ಲಾಂಡಕ್ಕೆ ಪ್ರವಾಸಿಸುತ್ತಿರುವ ಲೇಬರ್‌ಪಾರ್ಟಿ ಅಥವಾ ಕೂಲಿ ಕೆಲಸಗಾರರ ಪ್ರತಿನಿಧಿಗಳ ಇಂಥಾದ್ದೊಂದು ಸಭೆಯು ಕಳೆದ ಮಾರ್ಚ ತಿಂಗಳ ೨೧ನೇ ತಾರೀಕಿನಲ್ಲಿ ಕೂಡಿತ್ತು ಈ ಸಭೆಗೆ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಬಾಬು ಬಿಪಿನ್‌ಚಂದ್ರಪಾಲರವರನ್ನೂ ಮಿ। ಜಿ ಎಸ್ ಖಪರ್ಡೆಯವರನ್ನೂ ಆಮಂತ್ರಿಸಿದ್ದರು ಆಂಗ್ಲೇಯ ರಾಜಕೀಯ ಸಭೆಗಳಿಗೆ ಭಾರತೀಯರನ್ನು ಬರಮಾಡಿದ್ದು ಇದೇ ಪ್ರಥಮ ಸಲವಾಗಿರುವುದು ‹

~~~~~

ಉತ್ತರ ಹಿಂದುಸ್ಥಾನ.

~~~~~

ಎಂ. ಬಿ. ಎಸ್. ಇಂಗ್ಲಿಷ್ ವೈದ್ಯ ಶಾಸ್ತ್ರಜ್ಞರು ಹಲವರು ಕೂಡಿ ಮುಂಬಯಿ ಗವರ್ನಮೆಂಟಿನವರಿಗೆ ನೇಟಿವ್ ವೈದ್ಯರಿಗೂ ಹಕೀಮರಿಗೂ ರೋಗಿಗಳಿಂದ ಪ್ರತಿಫಲವನ್ನು ವಸೂಲು ಮಾಡದಂತೆಯೂ ಇವರು ಕೊಟ್ಟ ಮರಣ ಸರ್ಟಿಫಿಕೇಟುಗಳು ಕೋರ್ಟುಗಳಲ್ಲಿ ಮಂಜೂರಾಗದಂತೆಯೂ ವೈದ್ಯ ಇಲಾಖೆಯಲ್ಲಿ ರಿಜಿಸ್ಟ್ರೇಶನ್ ಆಕ್ಟನ್ನು ಜಾರಿಗೆ ತರಬೇಕೆಂತ ಮನವಿ ಮಾಡಿಕೊಂಡಿದ್ದರು. ಇಂಥಾ ಏರ್ಪಾಡನ್ನು ಮಾಡಕೂಡದೆಂತ ಬೆಳಗಾವಿಯಲ್ಲಿ ಹಕೀಮರೂ ನೇಟಿವ್ ವೈದ್ಯರೂ ಸಭೆಕೂಡಿ ಮುಂಬಯಿ ಗವರ್ನಮೆಂಟಿನವರಿಗೆ ತಮ್ಮ ಮನವಿಯನ್ನು ಕಳುಹಿಸಿಕೊಟ್ಟಿರುವರು

———

ಬಂಗಾಳದ ಸಾಯಂಟಿಫಿಕ್ ಮತ್ತು ಇಂಡಸ್ಟ್ರಿಯಲ್ ಎಸೋಶಿಯೇಶನ್ ಎಂಬ ಕಲಾಶಾಸ್ತ್ರ ಪಾಂಡಿತ್ಯವನ್ನು ವಿದೇಶಗಳಿಗೆ ಹೋಗಿ ಕಲಿತು ಬರುವರೆ ವಿದ್ಯಾರ್ಥಿಗಳನ್ನು ಕಳುಹಿಸಿ ಕೊಡುವ ಸಂಘದವರ ೭ನೇ ವರುಷಾವಧಿ ಸಭೆಯು ಇತ್ತಲಾಗೆ ಕಲಿಕತ್ತೆಯಲ್ಲಿ ಜರಗಿತು. 'ಇಂಡಿಯನ್ ಮಿರರ್'. ಎಂಬ ಆಂಗ್ಲ ಭಾಷೆಯ ವರ್ತಮಾನ ಪತ್ರಿಕೆಯ ಸಂಪಾದಕರಾದ ನಾಗೇಂದ್ರನಾಥ ಸೇನರವರು ಸಭಾಧ್ಯಕ್ಷರಾಗಿದ್ದರು. ಬರ್ಮದೇಶದಲ್ಲಿ ಈ ಸಂಘದ ಶಾಖೆಯೊಂದನ್ನು ಸ್ಥಾಪಿಸಿರುವರೆಂತಲೂ ಒಬ್ಬ ವಿದ್ಯಾರ್ಥಿಯನ್ನು ಪರದೇಶಗಳಿಗೆ ವಿದ್ಯಾಭ್ಯಾಸಕ್ಕೋಸ್ಕರ ಕಳುಹಿಸುವ ಖರ್ಚನ್ನು ತಾವು ತೆರುವೆವೆಂತಲೂ ಈ ಶಾಖೆಯವರು ಒಪ್ಪಿಕೊಂಡಿರುವರೆಂತಲೂ ಪರಸ್ಪರ ಸಹಕಾರಕ್ಕಾಗಿ ಬಂಗಾಳ ಕೈಗಾರಿಕೆಯ ಕಾರ್ಖಾನೆಗಳ ಒಂದು ಸಂಘವ ಏರ್ಪಡುವುದೆಂತಲೂ ಸಭಾಧ್ಯಕ್ಷರು ಸೂಚಿಸಿದರು [illegible]

ಪ್ರಸಂಪ್ರತಿ ಈ ಸಂಘದವರಿಗೆ ರೂ. ೫೦೦೦ವನ್ನು ದ್ರವ್ಯ ಸಹಾಯವಾಗಿ ಕೊಡುವೆವೆಂದು ಮಾತುಕೊಟ್ಟಿರುವರೆಂತ ಸಹಾ ಹೇಳಿದರು ಈ ವರುಷ ಸಂಘದವರು ೬೦ ಜನ ವಿದ್ಯಾರ್ಥಿಗಳನ್ನು ವಿದೇಶಗಳಿಗೆ ಕಳುಹಿಸುವರು ಇವರಲ್ಲಿ ೨೮ ಜನರು ಇಂಗ್ಲಾಂಡಕ್ಕೂ, ೯ ಜನರು ಜರ್ಮನಿಗೂ, ೨೭ ಜನರು ಅಮೇರಿಕಕ್ಕೂ, ೫ ಮಂದಿ ಜಪಾನಿಗೂ, ಇಬ್ಬರು ಫ್ರಾನ್ಸ್‌ದೇಶಕ್ಕೂ ಹೋಗುವರು

~~~~~

ಕಲ್ಕತ್ತೆಯ ಪಟ್ಟಣದಲ್ಲಿ ಅಥವಾ ಪಟ್ಟಣದ ಸಮೀಪದಲ್ಲಿ ಸಾಯಂಕಾಲದ ನಂತರ ಸಭೆಕೂಡುವ ದಾಗಲಿ ಅಥವಾ ಸಭಾಕಾರ್ಯಗಳನ್ನು ಸಭೆಗಳಲ್ಲಿ ನಡೆಸುವುದಾಗಲಿ ಇನ್ನೂ ಒಂದು ವರುಷದ ತನಕ ಕೂಡದೆಂದು ಬಂಗಾಳ ಸರಕಾರದವರು ಆಜ್ಞಾಪಿಸಿರುವರು

~~~~~

ಕಳೆದ ೩೦ ವರುಷಗಳಿಂದ ಮುಂಬಯಿ ಪಟ್ಟಣದ ಶ್ರೇಯೋಭಿವೃದ್ಧಿಯನ್ನು ಸಾಧಿಸುತ್ತಿರುವ ಸರ್ ಫಿರೋಜಷಹಾ ಮೇಹತಾರವರನ್ನು ತಕ್ಕ ರೀತಿಯಲ್ಲಿ ಬಹುಮಾನಿಸಿ ಅವರಿಗೆ ಒಂದು ಸ್ಮಾರಕವನ್ನು ಮಾಡಬೇಕೆಂದು ಮುಂಬಯಿಯ ಯುರೋಪಿಯ ಮತ್ತು ಭಾರತೀಯ ಮುಂದಾಳುಗಳಲ್ಲಿ ಹಲವರು ನಿರ್ಣಯಿಸಿರುವರು

~~~~~

ಮುಂಬಯಿಯ ಸೊಸೈಟಿ ಫ್ರೆಂಡ್ಸ್ ಬ್ರದರ್‌ಹುಡ್ ಎಂಬ ವಿದ್ಯಾರ್ಥಿ ಸಂಘಕ್ಕೆ ಮುಂಬಯಿ ಗವರ್ನರರವರು ಆಶ್ರಯದಾತರಾಗುವರೆ ಸಮ್ಮತಿಸಿರುವರು

~~~~~

'ತಳವಾರ' ಎಂಬ ನಿಷೇಧಿಸಲ್ಪಟ್ಟ ವರ್ತಮಾನಪತ್ರಿಕೆಯ ಪ್ರತಿಗಳು ವಿದೇಶ ಟಪ್ಪಾಲಿನೊಂದಿಗೆ ಪಂಜಾಬು ಕೋರ್ಟಿನ ವಕೀಲರಿಗೆ ಬಂದಿದ್ದವಂತೆ ಇವರೆಲ್ಲರು ಈ ಪ್ರತಿಗಳನ್ನು ಡಿಸ್ಟ್ರಿಕ್ಟ ಕಮಿಷನರರವರಿಗೆ ಕಳುಹಿಸಿಕೊಟ್ಟಿರುವರು

~~~~~

ಪಟಿಯಾಲದ ಮಹಾರಾಜರವರು ತನ್ನ ರಾಜ್ಯದಲ್ಲಿ ಹದಿನೆಂಟು ವರುಷಗಳಿಗಿಂತ ಕಡಿಮೆ ಪ್ರಾಯದವರ್ಯಾರೂ ಹೊಗೆಸೊಪ್ಪು ಮೊದಲಾದ ಯಾವ ಮಾದಕ ಪದಾರ್ಥಗಳನ್ನಾಗಲಿ ಉಪಯೋಗಿಸಕೂಡದೆಂದು ಅಪ್ಪಣೆಕೊಟ್ಟಿರುವರು ಈ ಅಪ್ಪಣೆಯನ್ನು ಮೀರಿ ನಡೆದವರಿಗೆ ೧೫ ದಿವಸಗಳ ಸಜೆಯೂ ಮತ್ತು ಜುರುಮಾನೆಯೂ ವಿಧಿಸಲ್ಪಡುವುದು ಈ ಪದಾರ್ಥಗಳನ್ನು ಕಮ್ಮಿ ವಯಸ್ಸಿನವರಿಗೆ ಮಾರಾಟ ಮಾಡಿದವರಿಗೆ ಒಂದು ತಿಂಗಳ ಸಜೆಯೂ ಜುರುಮಾನೆಯೂ ವಿಧಿಸಲ್ಪಡುವುದು.

~~~~~

ಈ ತಿಂಗಳ ತಾ ೧೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲಿ ೨೩,೯೮೦ ಪ್ಲೇಗು ಮರಣಗಳಿದ್ದವು. ಪಂಜಾಬಿನಲ್ಲಿ ಜನರು ಹೆಚ್ಚಾಗಿ ಪ್ಲೇಗಿಗೆ ತುತ್ತಾಗುತ್ತಿರುವರು.

~~~~~

ಬಂಗಾಳ ಸರಕಾರದ ಚೀಫ್ ಸೆಕ್ರೆಟರಿಗಳಾದ ಸರ್ ಚಾರ್ಲ್ಸ ಎಲನ್‌ರವರು ಇತ್ತಲಾಗೆ ಮೃತಪಟ್ಟರು.

~~~~~

[illegible]

ನನ್ನು ಜಾಮೀನಿನ ಮೇಲೆ ಬಿಟ್ಟಿರುವರು. ಆರಫಿಂದ ಘೋಷರವರು ಇನ್ನೂ ಸಿಕ್ಕಲಿಲ್ಲವಾದ್ದರಿಂದ ಇವರ ವಿಚಾರಣೆಯನ್ನು ಮುಂದರಿಸಿಟ್ಟಿರುವರು.

~~~~~

ಸುಮಾರು ೩೦ ವರುಷ ಪ್ರಾಯದ ರತಿಬಾಯಿ ಎಂಬವಳ ಚಿಕ್ಕತಾಯಿ ಮೊದಲಾದ ಕೆಲವು ಜನ ಸಮ್ಮಂಧಿಕರು ಪ್ಲೇಗಿನಿಂದ ಮೃತಪಟ್ಟರು ರತಿಬಾಯಿಯ ಗಂಡನು ಹೀಗೆ ಮೃತಪಟ್ಟವರಿಗೆ ೧೦೦೦ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದನು. ಇವರೆಲ್ಲರೂ ಸಾಯುತ್ತಲೇ ರತಿಬಾಯಿಯ ಗಂಡನು ಆವಳ ಕೂಡೆ ತನಗೆ ಆಕೆಯ ಸಮ್ಮಂಧಿಕರಿಂದಾದ ನಷ್ಟದ ಕುರಿತು ಆಗಿಂದಾಗ್ಯೆ ಗುಣುಗುಟ್ಟುತ್ತಿದ್ದನು ಗಂಡನು ಹೀಗೆ ಯಾವಾಗಲೂ ಗುಣುಗುಟ್ಟುವುದನ್ನು ಕೇಳಲಾರದೆ ರತಿಬಾಯಿಯು ತನ್ನ ಒಂದು ಹೆಣ್ಣು ಶಿಶುವಿನ ಸಮೇತ ಮುಂಬಯಿಯ ಡೋಬಿತಲಾವಿನಲ್ಲಿರುವ ಕೆರೆಗೆ ಹಾರಿದಳು. ಆದರೆ ಮಗುವನ್ನೂ ತಾಯಿಯನ್ನೂ ಸಜೀವವಾಗಿ ಕೆರೆಯಿಂದ ತೆಗೆದಿರುವರು.

~~~~~

ವಿಷಪ್ರಯೋಗದಿಂದ ಮಹಮ್ಮದೀಯ ಒಬ್ಬ ಸರ್ಜಂಟನು ಮತ್ತು ಆತನ ಹೆಂಡತಿಮಕ್ಕಳು ಪೇಷಾವರದಲ್ಲಿ ಮೃತಪಟ್ಟರೆಂದು ತಿಳಿದುಬರುತ್ತದೆ. ಈ ತಿಂಗಳ ತಾ. ೭ರಲ್ಲಿ ಈ ಸರ್ಜಂಟನು ರೈಲ್ವೆಗಾಡಿಯಿಂದ ಇಳಿದು ಬರುವಾಗ್ಯೆ ಗಾಡಿಗಳ ಕೋಣೆಯೊಂದರಲ್ಲಿ ಹಲ್ವಾ ಮೊದಲಾದ ಅನೇಕ ತಿಂಡಿ ಸಾಮಾನುಗಳಿರುವ ಕರಡಿಗೆಯೊಂದನ್ನು ಕಂಡನು. ಕರಡಿಗೆಯಲ್ಲಿರುವ ತಿಂಡಿಗಳನ್ನೆಲ್ಲಾ ಮನೆಗೆ ತಂದು ಮನೆಯಲ್ಲಿ ಹೆಂಡತಿಮಕ್ಕಳೂ ಸರ್ಜಂಟನೂ ಇವನ್ನೆಲ್ಲಾ ತಿಂದರು ರಾತ್ರೆಯು ಕಳೆದು ಬೆಳಗಾಗುವಷ್ಟರೊಳಗೆ ಸರ್ಜಂಟನೂ ಆತನ ಇಬ್ಬರು ಮಕ್ಕಳೂ ಮೃತಪಟ್ಟರು ಅದೇ ಸಾಯಂಕಾಲ ಹೆಂಡತಿಯೂ ಸಹಾ ಮೃತಪಟ್ಟಳು

~~~~~

ಲಾಹೋರಿನಲ್ಲಿ ಸರಕಾರದ ವಿದ್ಯಾಖಾತೆಯ ಆಫೀಸರರೇ ಹೆಚ್ಚಾಗಿ ಕೂಡಿರುವ ವಿದ್ಯಾಪರಿಷತ್ತು ಕೂಡಿ ಶಿಕ್ಷಣ ಕ್ರಮವನ್ನು ಪರ್ಯಾಲೋಚಿಸುತ್ತಿರುವುದು.

~~~~~

ಹಿಂದುಸ್ಥಾನದಲ್ಲಿ ದವಸು ಧಾನ್ಯಗಳ ಕ್ರಯವು ಏರಲು ಕಾರಣವೇನೆಂಬದನ್ನು ಪರಿಶೋಧಿಸುವರೆ ನೇಮಿಸಲ್ಪಟ್ಟ ಮಿ। ಕೆ ಎಲ್ ಗುಪ್ತರವರು ಈ ಬಗ್ಯೆ ಸಿಮ್ಲಕ್ಕೆ ಬಂದಿರುವರು ದಕ್ಕಾ ಕೊಲೇಜಿನ ಪ್ರೊಫೆಸರರಾದ ಫಿಂಡ್ಲೆಶಿಂಸ ಎಂಬವರು ಇವರ ಸಹಾಯಕರಾಗಿ ನೇಮಿಸಲ್ಪಟ್ಟಿರುವರು

~~~~~

ಹಿಂದುಸ್ಥಾನದಲ್ಲಿ ಅಧಿಕವಾಗಿರುವ ಸಿವಿಲ್ ಪೆನ್ಶನುಗಳ ಖರ್ಚನ್ನು ಪರ್ಯಾಲೋಚಿಸುವರೆ ಇಂಡಿಯಾ ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸುವರು. ಕಮಿಟಿಯಲ್ಲಿ ಯಾರ್‍ಯಾರನ್ನು ನೇಮಿಸಲ್ಪಡುವರೆಂಬದು ತಿಳಿದು ಬರುವುದಿಲ್ಲ. ಆದರೆ ಈ ಪರಿಶೋಧನೆಗೆ [illegible] ವನ್ನು ಸಂಗ್ರಹಿಸಲಿಕ್ಕೆ ಮಿ। ದಿ. ಎಸ್. ಮಿತ್ರ [illegible] [illegible]

ಬಂಗಾಳದಲ್ಲಿ ಜ್ಯೂಂಟ್ ಮೇಜಿಸ್ಟ್ರೇಟನಾಗಿರುವ ಒಬ್ಬ ಆಂಗ್ಲೇಯ ಸಿವಿಲ್ ಸರ್ವಿಸಿನವನು ವಿದ್ಯಾ ಶಲಾಖೆಯಲ್ಲಿ ದೊಡ್ಡ ಆಫೀಸರನಾಗಿದ್ದು ಪ್ರಕೃತ ಪೆನಶೆನ್‌ಪಡವಿರುವ ಬಂಗಾಳಿ ಗ್ರಹಸ್ಥರೊಬ್ಬರ ಪುತ್ರಿಯನ್ನು ಮದಿವೆಮಾಡಿ ಕೊಳ್ಳುವನೆಂತ ಬಂಗಾಳದ ಹಿತವಾದಿ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದು

~~~~~~

ಕೃತ್ರಿಮಗಡ್ಡ ಮೀಸೆಗಳನ್ನು ಮಾರುತ್ತಿದ್ದ ಪ್ರಾಯನಾಥ ದಾಸ ಎಂಬವನನ್ನು ಕಲಿಕತ್ತೆಯ ಪೋಲೀಸಿನವರು ಕೈದು ಮಾಡಿರುವರು ಈತನ ಅಂಗಡಿಯನ್ನು ಜಪ್ತಿ ಮಾಡಿ ಎರಡು ಟ್ರೆಂಕು ಪೆಟ್ಟಿಗೆಗಳನ್ನು ಪೋಲೀಸಿನವರು ಕೊಂಡು ಹೋಗಿರುವರು ಗಡ್ಡ ಮೀಸೆಗಳನ್ನು ಬಂಗಾಳದಲ್ಲಿ ಆಗಿಂದಾಗ್ಯೆ ದರೋಡೆ ಕಳವುಗಳನ್ನು ಮಾಡುತ್ತಿರುವವರಿಗೆ ಈತನು ಕೊಡುತ್ತಲಿದ್ದನಂತೆ

~~~~~~

ಕಲಿಕತ್ತೆಯಲ್ಲಿ ಒಬ್ಬ ಖ್ಯಾತಿಗೊಂಡ ಬ್ರಾಹ್ಮಣ ಪುರೋಹಿತನು ಒಬ್ಬ ಮಹಮ್ಮದೀಯ ಸಬ್ ಇನ್ಸ್‌ಪೆಕ್ಟರರೊಂದಿಗೆ ಕೋಳಿ ತಿಂದಿರುವನೆಂತ ಸ್ಥಳೀಕ ಹಲವು ಬ್ರಾಹ್ಮಣರು ಅನ್ನುವುದರಿಂದ ಈ ಬ್ರಾಹ್ಮಣರ ಮೇಲೆ ಪುರೋಹಿತನು ಮಾನಹಾನಿಯ ಫಿರ್ಯಾದನ್ನು ದಾಖಲು ಮಾಡಿರುವನು ಮೇಜಿಸ್ಟ್ರೇಟರವರು ಮುದ್ದೈಯಾಳೆಯವರು ಕೋರ್ಟಿಗೆ ಹಾಜರಾಗುವರೆ ವಾರಾಂಟು ಕೊಟ್ಟಿರುವರು

~~~~~~

ಲಾಹೋರಿನಲ್ಲಿ ನಡಿಯುತ್ತಲಿದ್ದ ಬಾಯಿ ಪರಮಾನಂದರವರ ಮೊಕದಮೆಯಲ್ಲಿ ಪರಮಾನಂದರವರು ರೂ ೧೦೦೦ರದ ಐದು ಜನರ ಜಾಮೀನು ಅದವಾ ೬ ವರುಷಗಳ ಸಾಧಾರಣ ಸಜೆಯನ್ನು ಅನುಭವಿಸಬೇಕೆಂತ ತೀರ್ಮಾನಿಸಲ್ಪಟ್ಟಿರುವದು ಲಾಲಾ ರಾಜರಾಮ ಲಾಲಾ ಜಸ್ವಂತರೈ, ಎಮ್ ಎ ಲಾಲಾ ಸರದಾರಿಲಾಲ್ ವೈದ್ಯ ಲಾಲಾ ರಾಮಚಂದ್ ಮತ್ತು ಭೋಲಾನಾಥ ಇವರು ಭಾಯಿ ಪರಮಾನಂದರವರಿಗೆ ಜಾಮೀನು ನಿಂತಿರುವರು

~~~~~~

ಕೆಲವು ಸಮಯದ ಮೊದಲು ಡಾಕ್ಟರ್ ರಾಸವಿಹಾರಿ ಘೋಷರವರು ಹಿಂದೂ ದೇವಾಲಯಗಳು ಮೊದಲಾದ ಮತಸಂಸ್ಥೆಗಳು ಯೋಗ್ಯರೀತಿಯಲ್ಲಿ ನಡಿಸಲ್ಪಡುವಂತೆ ತಕ್ಕ ಕಾನೂನನ್ನು ಏರ್ಪಡಿಸಲಿಕ್ಕೆ ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯ ಮುಂದೆ ಒಂದು ಕಾನೂನು ಮಸೂದೆಯನ್ನು ತಂದಿದ್ದರು ಇಂಡಿಯಾ ಸರಕಾರದವರಿಗೆ ಇದನ್ನು ಪರ್ಯಾಲೋಚಿಸುವ ಮನಸ್ಸಿಲ್ಲವೆಂಬದಾಗಿ ತಿಳಿದುಬರುತ್ತದೆ

~~~~~~

ನಾಸಿಕದ ಕಲೆಕ್ಟರ್ ಮಿ| ಜೆಕಸನರನ್ನು ಕೊಂದ ಖೂನಿ ಮೊಕದಮೆಯಲ್ಲಿ ಮರಣದಂಡನೆ ವಿಧಿಸಲ್ಪಟ್ಟ ಮೂವರನ್ನು ತಾ ೧೯ರಲ್ಲಿ ಗಲ್ಲಕ್ಕೆ ಹಾಕಿದರು

~~~~~~

ದಕ್ಷಿಣ ಹಿಂದುಸ್ಥಾನ

~~~~~~

ಮೈಸೂರು ಮಹಾರಾಜರವರು ಕಲಾಡಿಯಲ್ಲಿರುವ ಶ್ರೀ ಶೃಂಗೇರಿ ಜಗದ್ಗುರುಗಳ ಭೇಟಿ ಮಾಡಲಿಕ್ಕೆ ಬರುವರಾಗಿ ತಿಳಿಯುತ್ತೇವೆ

~~~~~~

ಬರ್ಮಾ ದೇಶದ ಮಂಡಲೆ ಪಟ್ಟಣಕ್ಕೆ ಬೆಂಕಿಬಿದ್ದು ೩೦೦೦ಕ್ಕಿಂತ ಹೆಚ್ಚು ಕಟ್ಟೋಣಗಳು ನಾಶವಾಗಿ ಹೋಗಿಯವೆ [illegible] ಹೆಚ್ಚುಕಡಿಮೆ ೨೫ ಲಕ್ಷಕ್ಕೆ ಮಿಕ್ಕಿರು [illegible] ಅಂದಾಜು ಮಾಡಲ್ಪಟ್ಟಿರುವುದು. ಬರ್ಮಾದೇಶದಲ್ಲಿ [illegible] ದಲ್ಲಿರುವ ಮನೆಮಾರುಗಳನ್ನು, ಅಂಗಡಿ ಭಂಡಸಾಲೆಗಳನ್ನೂ ಮರದಿಂದ ಮೋಪೆನ್ನು ತಯ್ಯಾರಿಸುವ ಕಾರಖಾನೆಗಳನ್ನೂ ಸುಟ್ಟು ಬೂದಿಮಾಡಿರುವುದು. ಬೆಂಕಿ ಹತ್ತಿದಾಗ ಘಾಳಿಯು ಬಹಳ ವಿಶೇಷವಾಗಿದ್ದದರಿಂದ ಬೆಂಕಿಯನ್ನು ಶಮನಿಸಲು ಉಪಾಯವಾಗಲಿಲ್ಲ ಅಲ್ಲಲ್ಲಿರುವ ಬುದ್ಧನ ಚಂದ್ರಕಾಂತ ಶಿಲೆಯ ಪ್ರತಿಮೆಗಳೆಲ್ಲವು ನಾಶವಾಗಿ ಹೋಗಿರುವವು ಇಂದ್ಯಾ ಎಂಬಲ್ಲಿರುವ ಪ್ರತಿಮೆ ಮೊದಲಾದವುಗಳೆಲ್ಲವು ನಾಶವಾಗಿ ಇದರಿಂದ ೪ ಲಕ್ಷ ರೂಪಾಯಿಗಳ ನಷ್ಟ ಉಂಟಾಗಬಹುದಂತೆ ಕಾಖೋಪ ಶಾಖೆಗಳೆಲ್ಲವು ಪೂರ್ಣವಾಗಿ ದಹಿಸಲ್ಪಟ್ಟು ಕೊರಡು ಮಾತ್ರ ಉಳಿದಿರುವ ಸಾವಿರಾರು ತಾಳ ಮತ್ತು ಹುಣಸೆ ಮರಗಳ ನೋಟವು ಬಹಳ ಭೀಕರವಾಗಿ ತೋರುತ್ತಿರುವುದೆಂತಲೂ ಮನೆಮಾರುಗಳಿಲ್ಲದೆ ವಿಶೇಷವಾಗಿ ಅನೇಕ ಜನರು ಸಂಕಟಗೊಳ್ಳುತ್ತಿರುವರೆಂದೂ ತಿಳಿದುಬರುತ್ತದೆ ಬೆಂಕಿ ಹ್ಯಾಗೆ ಹತ್ತಿತೆಂದು ಯಾರಿಗೂ ಗೊತ್ತಿರುವುದಿಲ್ಲ

~~~~~~

ಮದ್ರಾಸಿನ ಕೈಗಾರಿಕೆ ಇಲಾಖೆಯ ಡಿರೆಕ್ಟರರಾದ ಪಿ ಚೆಟರ್ಟನವರು ಕೊಮರ್ಷಿಯಲ್ ಇಂಟೆಲಿಜನ್ಸ್ ಎಂಬ ವ್ಯಾಪಾರ ಇಲಾಖೆಯ ಡಿರೆಕ್ಟರ್ ಜನರಲ್ ರವರನ್ನು ನೋಡುವದು ಕಲಿಕತ್ತೆಗೆ ಹೋಗಿರುವರು

~~~~~~

ಬರುವ ತಿಂಗಳ ಮೊ ೯ರ ವರೆಗೆ ಮಳೆ ಬರುವುದೆಂತ ಸಿಲೋನಿನಿಂದ ಒಬ್ಬ ಜೋತ್ಸೀದಾರರು ಬರೆದಿರುವರು

~~~~~~

ಕರ್ನೂಲಿನಲ್ಲಿ ಕೂಡುವ ಮದ್ರಾಸು ಪ್ರಾಂತಿಕ ಕನ್ಫರೆನ್ಸ್ ಸಭಾಧ್ಯಕ್ಷರಾಗಲು ಮ| ರಾ| ರಾ| ಪಿ ಆರ್ ಸುಂದರಯ್ಯರ್ ಹೈಕೋರ್ಟು ವಕೀಲ ಇವರು ಸಮ್ಮತಿಸಿರುವರು

~~~~~~

ಮದ್ರಾಸು ಗವರ್ನರರವರ ಕಾರ್ಯನಿರ್ವಾಹಕ ಸಭೆಗೆ ಮೆಂಬರರಾಗಿ ನೇಮಿಸಲ್ಪಟ್ಟ ಬೊಬ್ಬಿಲಿ ಮಹಾರಾಜರವರು ಸರಕಾರದಿಂದ ಏನೂ ಪ್ರತಿಫಲ ಪಡಕೊಳ್ಳದೆ ತನ್ನ ಹುದ್ದೆಯನ್ನು ನೋಡುತ್ತಿರುವರೆಂಬ ವರ್ತಮಾನವಿರುವುದು

~~~~~~

ಬಳ್ಳಾರಿಯಲ್ಲಿ 'ಪೀಪಲ್ಸ್ ಯಸೋಶಿಯೇಶನ್' ಎಂಬ ಸಾರ್ವಜನಿಕ ಸಭೆಯವರು ಬಹುಮಾನವಂತ ಎಸ್ ಪಿ ಸಿಂಹರವರನ್ನು ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಗೆ ಮೆಂಬರರಾಗಿ ನೇಮಿಸಲ್ಪಟ್ಟ ದಿನವನ್ನು ಆಚರಿಸಬೇಕೆಂದು ನಿರ್ಣಯಿಸಿದರು ಕಳದ ತಿಂಗಳ ತಾ 24ರ ದಿನವು ಕಾಮದಹನ ಹಬ್ಬದ ಮುಂಚಿನ ದಿವಸವಾದ್ದರಿಂದ ಆ ದಿನವನ್ನು ಆಚರಿಸದೆ ಈ ತಿಂಗಳ ತಾ 11ನೇ ದಿನವನ್ನು ಬಹಳ ಸಂಭ್ರಮದಿಂದ ಆಚರಿಸಿದರು ವಕೀಲರೂ ಸಾವುಕಾರರೂ ಇತರರೂ ಸಭೆಕೂಡಿ ಸರಕಾರದವರು ಭಾರತೀಯರಿಗೆ ದಯಪಾಲಿಸಿದ ಈ ಹುದ್ದೆಗೋಸ್ಕರ ಸರಕಾರದವರನ್ನು ಕೊಂಡಾಡಿ ಇಂಗ್ಲಿಷಿನಲ್ಲಿಯೂ ದೇಶಭಾಷೆಯಲ್ಲಿಯೂ ಭಾಷಣಗಳಾದವು ಸಭಾವೃತ್ತಾಂತವನ್ನೆಲ್ಲಾ ಮಿ| ಎಸ್ ಪಿ ಸಿಂಹರವರಿಗೆ ತಿಳಿಸಬೇಕೆಂತ ನಿರ್ಣಯಿಸಿರುವರು

~~~~~~

ದಕ್ಷಿಣ ಕನ್ನಡ.

~~~~~~

'ಆಯುರ್ವೇದ ಪುನರುಜ್ಜೀವನ' ಈ ಲೇಖನದ ಮುಂದಿನ ಅಂಶವು ಪತ್ರವು ಮುದ್ರಾಲಯವನ್ನು ಸೇರುತ್ತಿರುವಾಗ ಬಂದು ತಲ್ಪಿರುವುದರಿಂದ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು [illegible]

ದೇವಾಂಗ ಧರ್ಮಪ್ರಸಾರಕ ಸಮಾಜದವರ 1904 ರಿಂದ 1909 ವರದಿಯು ನಮ್ಮ ಹಸ್ತಗತವಾಗಿರುವುದು. ಅಭಿಪ್ರಾಯವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

~~~~~~

ಮಂಗಳೂರು ಇದೇ ಕಳದ ವಾರದಲ್ಲಿ ಮುನಿಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳೂ ೧೯ ಸಿಡುಬು ರೋಗದ ಮರಣಗಳೂ ಇದ್ದವು

ದಕ್ಷಿಣಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ ಇಂಜನಿಯರಾದ ಮ ರಾ| ರಾ| ಕೆ ಕೃಷ್ಣನ್ನಾಯರರವರು ಆರು ಹಪ್ತೆಗಳ ರಜೆಯನ್ನು ಪಡದಿರುವುದರಿಂದ ಅಸಿಸ್ಟಾಂಟ್ ಇಂಜಿನಿಯರಾದ ರಾ ಕೆ ದೊರಸಾಮಿ ಅಯ್ಯರರವರು ಇಂಜನಿಯರರ ಚಾರ್ಜನ್ನು ನೋಡುವರು

ಇದೇ ತಿಂಗಳ ತಾ [illegible]ರಲ್ಲು ಸುಮಾರು ಹಗಲು ಗಂಟೆ ೧೧ಕ್ಕೆ ಉಪ್ಪಿನ [illegible] ಸಂಕದ ಹತ್ತಿರ ಹೋಗುತ್ತಿರುವ ಒಬ್ಬ ಮುಸಲ್ಮಾನ ಪ್ರಯಾಣಸ್ಥನು ಅಕಸ್ಮಿತವಾಗಿ ದಾರಿಯಲ್ಲಿ ಬಿದ್ದು ಪ್ರಾಣ ಬಿಟ್ಟನು

[illegible] ತಹಸೀಲ್‌ದಾರರಾದ ಮ ರಾ| ರಾ| ಕೆ ಶ್ರೀನಿವಾಸರಾಯರು ಕೆಲಸಕ್ಕೆ ಹಾಜರಾದ್ದರಿಂದ ಇವರ ಚಾರ್ಜ ವಹಿಸುತ್ತಿದ್ದ ರಾ ಕೆ [illegible]ನಂದರಾಯರು ಮಂಗಳೂರಿನ ಸೆಕೆಂಡ್ [illegible] ಮೆಜಿಸ್ಟ್ರೇಟರ ಚಾರ್ಜನ್ನು ವಹಿಸಿಕೊಂಡಿರುವರು

ಮಿ ಎಸ್ ಪಿ [illegible] ಉಡುಪಿ ತಹಸೀಲ್‌ದಾರರಾಗಿ ನೇಮಿಸಲ್ಪಟ್ಟಿದ್ದಾರೆ ಮ ರಾ| ರಾ| ಅ ದೇವಪ್ಪ ಪೂಂಜರವರು [illegible] ತಾಲೂಕಿನ ಕಾಯಂ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು

ಮೂಡಬಿದ್ರೆ ತಾಲೂಕನ್ನು ಇಷ್ಟು ಬೇಗನೇ ಏರ್ಪಡಿಸಬೇಕೆಂದು ಸರಕಾರದ ಹುಕುಂ ಇರುವದರಿಂದ ಈ ಬಗ್ಗೆ ಬೇಕಾದ ಏರ್ಪಾಡುಗಳನ್ನು ಮಾಡಲಿಕ್ಕೆ ಕಲೆಕ್ಟರ ದೊರೆಗಳವರೂ ಮಂಗಳೂರು ತಹಸೀಲದಾರರವರೂ ಮೂಡಬಿದ್ರೆಗೆ ಹೋಗಿರುವರೆಂದು ತಿಳಿಯುತ್ತೇವೆ

~~~~~~

ಪುತ್ತೂರು ಮ ರಾ ರಾ ಬೋಳಾರ ಕೃಷ್ಣಯ್ಯನವರು ಇಲ್ಲಿಯ ಸ್ಟೇಶನರಿ ಮೆಜಿಸ್ಟ್ರೇಟರ ಚಾರ್ಜನ್ನು ನಮ್ಮ ತಾಲೂಕು ತಹಶಿಲ್‌ದಾರರವರಿಂದ ತಾ ೧೧ಲ್ಲು ವಹಿಸಿಕೊಂಡರು

ನಮ್ಮ ತಾಲೂಕು ತಹಶಿಲ್‌ದಾರರವರು ತಾ ೧೧ಲ್ಲು ೭ ದಿವಸಗಳ ಕೇಜುವಲ್ ರಜೆ ಮೇಲೆ ಹೋಗಿರುವರು

ಮಂಡೆಕೋಲು ಗ್ರಾಮದ ಉಗ್ರಾಣಿ ಬಾಬ ಯಾನೆ ವೆಂಕಟ್ರಮಣ ಎಂಬವನು ತನ್ನ ಬಾಬ್ತು ಬೆಳೆ ತಿಂದಬಗ್ಗೆ ಮಂಡೆಕೋಲು ಈಶ್ವರ ಹೆಬ್ಬಾರರ ಬಾಬ್ತು ಜಾನುವಾರುಗಳನ್ನು ದೊಡ್ಡಿಗೆ ಕಟ್ಟಿದ ಎಂಬ ದ್ವೇಷದಿಂದ ಸದರಿ ಹೆಬ್ಬಾರರು ವ ಮಾರಾಟಿ ಚೆನಿಯ ಎಂಬವರು ಕೂಡಿ ಉಗ್ರಾಣಿ ಬಾಬ್ತು ಒಂದು ಕೋಣ ಮರಿಯನ್ನು ಬಲತ್ಕಾರದಿಂದ ಕಳವು ಮಾಡಿದ ಕುರಿತು ಸುಳ್ಯ ಪೋಲೀಸ್ ಸ್ಟೇಶನ್ ಹೆ ಕೊ ನಜ್ರೆತರವರು ತನ್ನಿಖೆಯಿಂದ ಸದರಿ ಮುದ್ದೈಯಾಳೆ ಮೇಲೆ ಏರ್ಪಡಿಸಿದ ಚಾರ್ಜು ಡಿವಿಜನ್ ಡಿಪ್ಯುಟಿ ಮೆಜಿಸ್ಟ್ರೇಟರವರಲ್ಲಿ ತನಿಖೆ ನಡದು ತಾ ೮ಲ್ಲು ಪ್ರತಿ ಒಬ್ಬ ಮುದ್ದೈಯಾಳೆಗೆ ೩೫ ದಿವಸಗಳ ಕಾರಾಗ್ರಹ ಶಿಕ್ಷೆಯನ್ನು ವಿಧಿಸಿರುವದಾಗಿ ತೀರ್ಮಾನಿಸಿದರು.

~~~~~~

ಮೂಡಬಿದ್ರೆ. ಶ್ರವಣ ಬೆಳ್ಗುಳದಲ್ಲಿ ನೆರೆದ ಜೈನ ಮಹಾ ಸಭೆಗೆ ಬಂದಿರುವ ಉತ್ತರ ಪ್ರಾಂತ್ಯದ ಗುಜರಾತಿ ಜೈನರಲ್ಲಿ ಕೆಲವರು ಯಾತ್ರಸ್ಥರಾಗಿ ಮೂಡಬಿದ್ರೆ ತನಕ ಬಂದಿದ್ದರು. ಮೂಡಬಿದ್ರೆಯಲ್ಲಿ ಈ ಯಾತ್ರಸ್ಥರು ಇದ್ದ ತನಕ ಅನೇಕ ಜನ ಬಡವರಿಗೆ [illegible]

ವರುಷಾವಧಿ ರಜೆ ಸಂಮ್ಮಂಧ ಇಲ್ಲಿಯ ಮುನ್ಸಿಫ ಕೋರ್ಟು ಇದೇ ಎಪ್ರಿಲ್ ತಾ. ೨೫ರಿಂದ ಮೊಕಟೂಪು ಮಾಡಲ್ಪಡುವದು.

ಮುಲ್ಕಿ. ಪ್ರಿವಿಲೆಜ್ ರಜೆಯ ಮೇಲೆ ಮದ್ರಾಸಿಗೆ ಹೋಗಿದ್ದ ನಮ್ಮ ಡಾಕ್ಟರರಾದ ಕೆ. ರಾಮರಾಯರವರು ತಾರೀಕು ೧೭ಕ್ಕೆ ಕ್ಷೇತ್ರಕ್ಕೆ ಬಂದು ಬದಲಿ ನೋಡುತ್ತಿದ್ದ ಕುಂಬಳೆ ರಾಮರಾಯರವರಿಂದ ಚಾರ್ಜು ತಕ್ಕೊಂಡಿರುವರು. ಒಂದುವರೆ ತಿಂಗಳು ಮಾತ್ರವೇ ನಮ್ಮ ಕ್ಷೇತ್ರದಲ್ಲಿ ವೈದಿಕ ವೃತ್ತಿ ನಡಿಸಿದ ಕುಂಬಳೆ ರಾಮರಾಯರವರು ಕೂಡಾ ಸಕಲ ಜನರ ಪ್ರೀತಿಗೆ ಪಾತ್ರರಾಗಿದ್ದರು.

ನಮ್ಮ ಮುಲ್ಕಿ ಡಿವಿಜನ್ ಸ್ಕೂಲು ಕಮ್ಮಿಟಿ ಮೆಂಬರರಾಗಿ ಇತ್ತಲಾಗೆ ರೆವೆರೆಂಡ್ ಫ್ರೈಡೆನ್ ಬಾಕ್ ದೊರೆಗಳವರು ಆರಿಸಲ್ಪಟ್ಟರೆಂಬದಾಗಿ ಕೇಳಿ ತುಂಬಾ ಸಂತೋಷಪಡುತ್ತೇವೆ. ಹೀಗೆಯೇ ಇನ್ನು ಮುಂದಕ್ಕೂ ಶಾಲೆಗೆ ಬಂದು ಉಪಾಧ್ಯಾಯರ ತಪ್ಪುಗಳನ್ನು ತಿದ್ದಿ, ಒಂದು ಮಾದರಿ ಪಾಠವನ್ನಾದರೂ ಕೊಡಶಕ್ತರಾದ ಇಂಗ್ಲೀಷ್ ಬಲ್ಲಂಥವರನ್ನು ಮಾತ್ರವೇ ಸ್ಕೂಲು ಕಮಿಟಿ ಮೆಂಬರರನ್ನಾಗಿ ಬೋರ್ಡಿನವರು ಆರಿಸಿದರೆ ಸರ್ವ ಪಕ್ಷಕ್ಕೂ ಹಿತವಾಗುವದು.

ಗತಸಂವತ್ಸರದಲ್ಲಿ ನಮ್ಮ ಮಾಜಿ ಡೆಪ್ಯುಟಿ ಕಲೆಕ್ಟರ್ ಮೆನನ್‌ರವರಿಂದ ಮಹೂರ್ತ ಮಾಡಲ್ಪಟ್ಟಂಥಾ ವ್ಯವಸಾಯ ಸಂಘವು ದಸೆಂಬರ ತಿಂಗಳ ತನಕ ಹ್ಯಾಗೂ ಕಷ್ಟದಲ್ಲಿ ಎರಡು ಮೀಟಿಂಗುಗಳನ್ನು ಮಾತ್ರವೇ ನಡಿಸಿತು. ಆದರೆ ಈ ವರುಷ ಸಂಘದ ಇರವಿನ ಕುರುಹುಗಳೇನೂ ತೋರುವದಿಲ್ಲ.

ವಿವಿಧ ವಿಷಯಗಳು.

ಪಶುಗಳು ಮತ್ತು ಮನುಷ್ಯರು. ಮನುಷ್ಯನಕ್ಕಿಂತ ಕೀಳು ಸ್ವಭಾವದ [illegible] ನಾವು [illegible] ಕರೆಯುತ್ತೇವೆ. ಆದರೆ [illegible] ಕೆಲವು [illegible] ಮನುಷ್ಯರಿಕ್ಕಿಂತ [illegible]. ಉದಾಹರಣೆ: ಪಶುಗಳು ಅವುಗಳಿಗೆ [illegible] ಸ್ವಭಾವಕ್ಕ[illegible] ವವು. [illegible] ಭ್ರಾಂತಿ [illegible] ಗಳು ಹೋಗವು. [illegible] ದಲ್ಪಡುತ್ತಿರುವ [illegible] ವಿಧದ ಅನಾರೋಗ್ಯಕರ ತಿಂಡಿಗಳನ್ನು [illegible] ಸಹಾ ತಿನ್ನುವದಿಲ್ಲ. [illegible] ಕಾಫಿ ಕುಡಿಯುವುದರಲ್ಲಿ [illegible]. [illegible] ಐಸ್‌ಕ್ರೀಮ್ [illegible] ಮುಟ್ಟುವದಿಲ್ಲ. ಅತ್ಯುತ್ಕೃಷ್ಟವಾದ [illegible] ಮೂಸಿ ಸಹಾ ನೋಡುವದಿಲ್ಲ.

ಮನುಷ್ಯನು ಮಾತ್ರವೇ ಸ್ವಭಾವ[illegible] ಅನಾರೋಗ್ಯಕರ ವಸ್ತುಗಳನ್ನು ತಿನ್ನ[illegible]. ಪಶುಗಳು ಯಾವ ರೀತಿ ವರ್ತಿಸುತ್ತಿರುವವೆಂಬದನ್ನು ನಾವು ಮನಸ್ಸುಕೊಟ್ಟು ನೋಡಿದರೆ ಅವುಗಳಿಂದ ಸಹಾ ನಾವು ಅನೇಕ ಬುದ್ಧಿವಾದವನ್ನು ತಿಳಕೊಳ್ಳಬಹುದು.

ನ್ಯೂಯೋರ್ಕಿನ ಸ್ಯಾಕೆಮೋರ್ ಎಂಬಲ್ಲಿ ಬಲಹೀನ ಮತ್ತು ಬುದ್ಧಿಮಾಂದ್ಯವಿರುವ ಮಕ್ಕಳಿಗೋಸ್ಕರ ಒಂದು ಪ್ರತ್ಯೇಕ ಶಾಲೆಯನ್ನು ಸ್ಥಾಪಿಸಿರುವರು. ಎಲ್ಲಾ ವಿಧದ ಮಕ್ಕಳು ಒಂದೇ ಶಾಲೆಗೆ ಬಂದು ಶಿಕ್ಷಣ ಹೊಂದುವುದು ಉತ್ತಮ. ಆದರೆ ಎಲ್ಲಾ ಮಕ್ಕಳು ಒಂದೇ ಪ್ರಕಾರವಿರುವದಿಲ್ಲ. ಕೆಲವರಲ್ಲಿ ಅಂಜಿಕೆಯೂ ಕೆಲವರಲ್ಲಿ ಬುದ್ಧಿಮಾಂದ್ಯವೂ ಮೊದಲಾದವುಗಳಿದ್ದು ಎಲ್ಲರ ಒಟ್ಟಿಗೆ ಶಾಲೆಯಲ್ಲಿರುವದೆಂದರೆ ಇವರಿಗೆ ದೊಡ್ಡ ಶಿಕ್ಷೆಯಾಗಿಯೇ ಪರಿಣಮಿಸುವದು. ಆದ್ದರಿಂದ-ಇಂಥಾ ಮಕ್ಕಳ ಸ್ವಭಾವವನ್ನು ಚೆನ್ನಾಗಿ ಅರಿತುಕೊಂಡು ಇವರನ್ನು ತಿದ್ದಿ ತಕ್ಕ ಶಿಕ್ಷಣ ಕೊಡಲಿಕ್ಕೆ ಇಂಥಾ ಶಾಲೆಗಳು [illegible]ವಾಗಿರುತ್ತವೆ.

ಬೆಂಕಿ ಉರಿಯಿಂದ ಉಂಟಾದ ಘಾಯಗಳಿಗೆ ಲಿನ್ಸೀಡ್ ಎಣ್ಣೆ ಮತ್ತು ಸುಣ್ಣದ ತಿಳಿನೀರನ್ನು ಸಮಪಾಲು ಬೆರಸಿ ಹಚ್ಚಿದರೆ ಘಾಯಗಳು ಬೇಗನೆ ವಾಸಿಯಾಗುವವು. ಬೆಂಕಿ ಉರಿಯು ಹತ್ತಿದ ಪಾರ್ಶ್ವಕ್ಕೆ ಘಾಳಿ ತಗಲದಂತೆ ಮಾಡಿದರೆ ಘಾಯವು ಅದಷ್ಟು ಬೇಗ ಗುಣಹೊಂದುವುದು. ಈ ಬಗ್ಗೆ ಮೇಲೆ ಸೂಚಿಸಿದ ಎಣ್ಣೆ ಮಿಳಿತವಾದ ಸುಣ್ಣದ ನೀರನ್ನು ಬೆಂಕಿ ಹಿಡಿದ ಪಾರ್ಶ್ವಕ್ಕೆ ತಾಗಿಸಿ ಅದರ ಮೇಲೆ ಗೋಧಿಹಿಟ್ಟು ಅಥವಾ ಬೇರೆ ಯಾವ ಹಿಟ್ಟನ್ನು ಹಾಕಿದ್ದಲ್ಲಿ ಹಿಟ್ಟು ಅದರಲ್ಲಿದ್ದುಕೊಂಡು ಘಾಳಿಯು ತಗಲದಂತೆ ಮಾಡುವುದು.

ಈ ಶೀತಕಾಲದಲ್ಲಿ ಬಾಯಾರಿಕೆಯ ಉಪದ್ರವು ಸರ್ವರನ್ನೂ ಪೀಡಿಸುತ್ತಿರುವುದು. ಇಂಥಾ ಬಾಯಾರಿಕೆಯನ್ನು ಶಮನಿಸಿ ದೇಹದಲ್ಲಿ ಶೀತಿಯಿಂದ ಉಂಟಾಗುವ ಸಂಕಷ್ಟವನ್ನು ಹ್ಯಾಗೆ ಪರಿಹರಿಸಿಕೊಳ್ಳಬಹುದೆಂಬುವುದರ ವಿಷಯ ಒಬ್ಬ ಪ್ರಖ್ಯಾತ ಅಮೇರಿಕದ ಡಾಕ್ಟರರನ್ನು ಕೇಳಿದ್ದಲ್ಲಿ ಅವರು ಈ ಕೆಳಗಿನ ಉಪಾಯವನ್ನು ಸೂಚಿಸಿರುವರು.

ಮಜ್ಜಿಗೆ ಪಾನವು ಶೀತಕಾಲಕ್ಕೆ ಅತ್ಯುಪಯುಕ್ತವಾಗಿರುವುದು. ಇದರಿಂದ ದೇಹಸ್ಥಿತಿಯಲ್ಲಿ ತಂಪುಂಟಾಗಿ ಶರೀರದಿಂದ ಶೀತಕಾಲದ ನಿರ್ಬಲತ್ವವು ಹೋಗಿ ದೇಹವು ಚೇತರಿಸಿಕೊಳ್ಳುವುದು. ಮನುಷ್ಯನ ದೇಹಪ್ರಕೃತಿಯಲ್ಲಿ ಸೇರಿರುವ ಅನೇಕ ಧಾತುಗಳು ಮಜ್ಜಿಗೆಯಲ್ಲಿರುವುದರಿಂದ ಇದು ಪಾನಗಳಲ್ಲಿ ಅತ್ಯುತ್ಕೃಷ್ಟವಾಗಿರುವುದು. ಧಾತುಪುಷ್ಟಿ ಕೆಟ್ಟುಹೋದವರಿಗೆ ಸಹಾ ಇದು ಪರಮೌಷಧಿಯಾಗಿರುವುದೆಂದು ಈ ಡಾಕ್ಟರರ ಅಭಿಪ್ರಾಯ. ಮಜ್ಜಿಗೆಯನ್ನು ದಿನಂಪ್ರತಿ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದೆಂದು ಈ ವೈದ್ಯರು ಸೂಚಿಸಿರುವರು. ಶೀತಕಾಲದಲ್ಲಿ ಪ್ರತಿನಿತ್ಯ ಬೆಳಗ್ಗೆ ೧೦ ಗಂಟೆಗೆ ಮತ್ತು ಸಾಯಂಕಾಲ ೪ ಗಂಟೆಗೆ ಸ್ವಲ್ಪ ಸಕ್ಕರೆಯನ್ನು ಹಾಕಿ ಮಜ್ಜಿಗೆ ಕುಡಿದರೆ ತೃಷ್ಣೆಯು ಉಂಟಾಗಲಿಕ್ಕಿಲ್ಲ ಎಂತ [illegible] ತಿಳಿಸಿರುವರು. ಬಹಳ ಒಳ್ಳೇ ಮಜ್ಜಿಗೆಯನ್ನು ಮಾತ್ರ ಹೀಗೆ ಉಪಯೋಗಿಸತಕ್ಕದ್ದು.

ಹಾಲಿನ ಉಪಯೋಗ. ದಿನಂಪ್ರತಿ ಯಾವ ಸಮಯದಲ್ಲಿಯಾದರೂ ಹಾಲನ್ನು ಕುಡಿಯುವ ಅಭ್ಯಾಸವು [illegible]. ಆದರೆ ಇಂಥಾ ಅಭ್ಯಾಸವನ್ನು [illegible]. ಹಾಲು ಬಹಳ ಪುಷ್ಟಿಕರ ಆಹಾರವಾದ್ದರಿಂದ ಒಂದು ಸರ್ತಿ ಆಹಾರವನ್ನು ತಕ್ಕೊಂಡು ಎರಡು ತಾಸುಗಳ ತನಕವಾದರೂ ಹಾಲನ್ನು ಕುಡಿಯುವುದು ಯುಕ್ತವಲ್ಲ. ಹಾಲನ್ನು ಕುಡಿದ ಕೂಡಲೇ [illegible] ಬೇರೆ ಆಹಾರವನ್ನು ತಕ್ಕೊಳ್ಳಬಹುದು. [illegible] ಹಾಲನ್ನು ಮಾತ್ರ ಕುಡಿದರೆ ಕುಡಿದ ಎರಡು ತಾಸುಗಳ ತನಕ ಇತರ ಆಹಾರವನ್ನು ತಕ್ಕೊಳ್ಳುವುದು ಶ್ರೇಯಸ್ಕರವಲ್ಲ. ಹಾಲಿಗೆ ಜೀರ್ಣವಾಗುವುದಕ್ಕೆ ಯಾವಾಗಲೂ ಹೆಚ್ಚು ಸಮಯ ಬೇಕಾಗುವುದು.

ಮಕ್ಕಳ ನಿದ್ರೆಯು. ಬಹಳ ಸಣ್ಣ ಶಿಶುಗಳಿಗೆ ಎರಡು ಮೂರು ತಾಸುಗಳ ವಿನಹ ಇಡೀ ದಿವಸದ ನಿದ್ರೆಯು ಅವಶ್ಯಕ. ಒಂದು ವರುಷ ಪ್ರಾಯದ ಮಗುವಿಗೆ ಹೆಚ್ಚು ಕಡಿಮೆ ೧೭ ತಾಸುಗಳ ನಿದ್ರೆಯೂ, ೨ ವರುಷಗಳಿಂದ ೫ ವರುಷ ಪ್ರಾಯದ ಮಕ್ಕಳಿಗೆ ಹಗಲು ಹೊತ್ತಿನ ಸ್ವಲ್ಪ ನಿದ್ರೆಯೂ ಅವಶ್ಯಕವಾಗಿರುವುದು. ಮಕ್ಕಳನ್ನು ಅವುಗಳು ತಮ್ಮಷ್ಟಕ್ಕೇನೆ ಎಚ್ಚರವಾಗುವ ತನಕ ಮಲಗಲಿಕ್ಕೆ ಬಿಡಬೇಕು. ಧಾತುಪುಷ್ಟಿಯು ಅಲ್ಪಸ್ವಲ್ಪ ಕಡಿಮೆ ಇರುವ ಮಕ್ಕಳಿಗೆ ನಿದ್ರೆಯು ಸ್ವಲ್ಪ ಹೆಚ್ಚು ಬೇಕಾಗಿರುವುದರಿಂದ ಅವುಗಳನ್ನು ನಿದ್ರೆಯಿಂದ ಎಚ್ಚರಿಸಿದರೆ ಅವುಗಳು ದೇಹದಲ್ಲಿ ಪುಷ್ಟಿಯನ್ನು ಹೊಂದಲಿಕ್ಕಿಲ್ಲ.

ಜರ್ಮನಿನ ದೇಶದಲ್ಲಿ ಬಾಲೆಯರ ಶಾಲೆಗಳು [illegible] ನಿವಾಸಿಗಳ ಸಂಖ್ಯೆಯು ಅರ್ಧ ಮಿಲಿಯ[illegible]ಯಾಗಿದ್ದರೂ ೧೬ ಸಾವಿರ ಹುಡುಗಿಯರಿರುವರು. [illegible] ಶಾಲೆಗಳಲ್ಲಿ ಇವರಿಗೆ ಅಡಿಗೆ ಮಾಡುವ ಕ್ರಮ, [illegible] ಮತ್ತು ಆಹಾರವನ್ನು ಸಿದ್ಧಪಡಿಸುವ ರೀತಿ, ಮನೆವಾರ್ತೆ ಲೆಕ್ಕಗಳ ಮಾಹಿತಿ, ಮಕ್ಕಳನ್ನು ಪೋಷಿಸುವ ರೀತಿ ಮೊದಲಾದವುಗಳನ್ನು ಕಲಿಸುತ್ತಿರುವರು. ಪ್ರಾಥಮಿಕ ಶಾಲೆಗಳಲ್ಲಿ ಅಕ್ಷರಾಭ್ಯಾಸವನ್ನು ಹೊಂದಿದ ನಂತರ ತಮ್ಮ ೧[illegible]ರಿಂದ ೧೭ನೇ ವಯಸ್ಸಿನ ತನಕ ಇಂಥಾ ಶಾಲೆಗಳಲ್ಲಿ ಶಿಕ್ಷಣವನ್ನು ಹೊಂದುವರು.

ಗೆಡ್ಡೆಗೆಣಸುಗಳು ನೋಡುವದಕ್ಕೆ ಗಾತ್ರವಾಗಿದ್ದ ಮಾತ್ರಕ್ಕೇನೇ ಅವು ಒಳ್ಳೇದೆಂದು ಹೇಳಲಿಕ್ಕಾಗುವದಿಲ್ಲ. ಅವುಗಳಲ್ಲಿ ಒಳ್ಳೇ ಬಲಕೊಡತಕ್ಕ ಆಹಾರಾಂಶವೂ ಇರಬೇಕು. ಎಷ್ಟೋ ಗೆಡ್ಡೆಗಳು ಗಾತ್ರವಾಗಿಯೂ ಬರೀ ನೀರು ತುಂಬಿಕೊಂಡು ಇರುತ್ತವೆಯೇ ಹೊರತು ಇವುಗಳಲ್ಲಿ ಆಹಾರಾಂಶವೇ ಕಡಿಮೆ. ಕೆಲವು ಗೆಡ್ಡೆಗಳು ನೋಟಕ್ಕೆ ಸಣ್ಣವಾಗಿದ್ದರೂ ಶಾನೆ ಪುಷ್ಟಿಕರವಾದ ಆಹಾರಾಂಶದಿಂದ ಕೂಡಿಕೊಂಡಿರುತ್ತವೆ. ಇಂಗ್ಲೆಂಡಿನಲ್ಲಿ ವ್ಯವಸಾಯ ಇಲಾಖೆಯವರು ಮೊದಲು ಒಂದೊಂದು ಗೆಡ್ಡೆ ಜಾತಿಯನ್ನೂ ರಸಾಯನ ಶಾಸ್ತ್ರರೀತ್ಯಾ ಪರೀಕ್ಷಿಸಿ ಅದರಲ್ಲಿ ಯಾವ ಯಾವ ಅಂಶ (ಅಂದರೆ, ಜಲಾಂಶ, ಆಹಾರಾಂಶ, ಶರ್ಕರ, ವಗೈರೆಗಳು) ಎಷ್ಟೆಷ್ಟು ಪ್ರಮಾಣದಲ್ಲಿದೆ ಎಂದು ಗೊತ್ತುಮಾಡಿ, ಪುಷ್ಟಿಕರವಾಗಿಯೂ ಮತ್ತು ಚೆನ್ನಾಗಿ ಫಲಿಸತಕ್ಕದ್ದಾಗಿಯೂ ಇರುವ ಒಳ್ಳೇ ರಖಂ ಗೆಡ್ಡೆಗಳನ್ನೇ ಚುನಾಯಿಸಿಕೊಂಡು ಅಜಮಾಯಿಷಿ ತರೀಖು ಬೆಳೆದು ಪುನಃ ಈ ದಿನಸಿ ಬಿತ್ತವನ್ನೆ ಮುಂದಿನ ಅಜಮಾಯಿಷಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ. ಮುಖ್ಯವಾಗಿ ಈ ಚುನಾವಣೆ ಕ್ರಮದಿಂದ ದೇಶದಲ್ಲಿ ಮೇಲಾದ ರಖಂಗಳ ಬೆಳೆಯನ್ನು ವೃದ್ಧಿಪಡಿಸಬೇಕೆಂಬುವದೇ ಇಲಾಖೆಯವರ ಉದ್ದೇಶವಾಗಿರುತ್ತದೆ.

ಜೀನಸುಗಳ ಧಾರಣೆ, ಮಂಗಳೂರು.

ಕೂಳೂರು ಮಸ್ಕತಿ ಅಕ್ಕಿ ,,,,,,	4—4—0
ಗುಡ್ಡು ಮಸ್ಕತಿ ,,,,,,,,,,	3-15—0
ಮಸ್ಕತಿ ,,,,,,,,,,,,,,	3-14—0
ವಕ್ಲ ಸುಗ್ಗಿ ,,,,,,,,,,,,	3-14—0
ಸುಗ್ಗಿ ,,,,,,,,,,,,,,,,,	3-11—0
ಮಸ್ಕತಿ ಬೆಳ್ತಿಗೆ ,,,,,,,,,,,	4—8—0
ರಂಗೂನ್ ಬೆಳ್ತಿಗೆ ಗೋಣಿ ,,,,	7—6—0
ಕುರುಳಿ ಗೋಣಿ ೧ ಮುಡಿ 2ರ ,,,	6—0—0
ಉಪ್ಪು ಗೋಣಿ ೧ರ ,,,,,,,,	3—7—0
ಕೊಬ್ರಿ ಖಂಡಿ ೧ರ ,,,,,,,,,	110—0—0
ಕೊಬ್ರಿ ಎಣ್ಣೆ ಮಣ ,,,,,,,,,	7—8—0
ಕಾಫಿ ಖಂಡಿ ೧ರ ,,,,,,,,	180—0—0
ಕಾಳು ಮೆಣಸು ಖಂಡಿ ,,,,,,	115—0—0
ಹೊಸ ಬಿಳಿ ಗೋಟು ಅಡಿಕೆ ,,,	84—0—0
ಕಪ್ಪು ಗೋಟು ,,,,,,,,,,,,,	7[illegible]—0—0
ಏಲಕ್ಕಿ ಮಣ ೧ರ ,,,,,,,,	28—0—0

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದ್ದೊಂದು ಅಕ್ರಮ ಗುರ್ತು ಕಂಡುಬಂದಾಗ್ಯೂ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಾಲಾಬಾಯಿಯವರ ಗುಳಿಗೆಯ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇಂಗ್ಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯು ಕೇಳಿದವರಿಗೆ ಉಚಿತವಾಗಿ ಕಳುಹಿಸುವರು. [illegible]

K. R. PATAK & CO

ಬಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ

ಬಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲಿ ಒಂದರ 6 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 9 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಹಿಡಿಯುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲಿ ಒಂದರ ಕಿಮ್ಮತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ [illegible] ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ

ಹೆಡ್ ಆಫೀಸು —14 ಡೇರ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಫೀಸುಗಳು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ

8 ಬ್ರೊಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು

ಸಂಘದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತಿ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ 18,00 000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು ಕಂಪೆನಿಯು ಪಾಲುದ್ದಾರಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದರಿಯೇ ವಿನೋದಾದನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ ಕಂಪೆನಿಯವರು ಸ್ವರಾಷ್ಟ್ರ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 2೦ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಬಿ. ಬಾಬುರಾವ್ ಎಂಡ್ ಸನ್ಸ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಭವಪತ್ರ ಬುಟ್ಟಿಯೊಂದಿಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟಲಿಗೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವ ಗಂಟುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ಬಾವುಗಳೂ, ಬಚ್ಚೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು [illegible] ಎಸೋಸಿಯೇಶನ್, ಮಂಗಳೂರು. [illegible]

[illegible]

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ನಾನಾವಿಧ ಗಿಡಗಳು ವಗೈರೆ ಸಕಲ ವಿಧವಾದ ಹಸ್ತೆನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಲೆಮು, ಚಿತ್ರಳೆ ವಗೈರೆ ಹಣ್ಣುಗಳು ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು [illegible] ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಏಮ್. ದ್ಯಾವಪ್ಪ ಅಂಡ್ ಸನ್ಸ್,

[illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ... ನಾಲ್ಕು ಪದವಿನ ಪತ್ರಗಳನ್ನೂ ಅನೇಕಾನೇಕ ... ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ... ಬಾಟ್ಲಿಗೆ ...ರೂ ... ಆಣೆ

೨. ಪ್ರಮೇಹರಿಪು ಬಿಂದು. ... ನ್ನೂ ...ವನ್ನೂ ಕಡಿಮೆ ಮಾಡಿ ... ... ಚಿತವಾಗಿ ... ಕೊಡುವದು. ಬಾಟ್ಲಿಗೆ ...ರೂ

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ...ಜಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆ ...ರೂ

೪. ಪಂಚಜೀರಕ ಪಾಕ. ... ... ಗಳನ್ನೂ ಬಂಜೆತನವನ್ನೂ ತಪ್ಪದೆ ... ... ರಾತಲಿಗೆ ...ರೂ

೫. ಸೂರಣಾವ ಲೇಹ. ... ... ಮೇಲೆ ಅತ್ಯುತ್ತಮವು. ... ... ರಾತಲಿಗೆ ...ರೂ

೬. ಪ್ಲೀಹೋದರಾರಿ ಚೂರ್ಣ. ... ... ಆಗಾಯವಿಲ್ಲದೆ ದಾರುಣವಾದ ಜ್ವರದ ... ... ಪಡಿಸುವದು. ತೊಲೆ... ... ...ರೂ ... ಆಣೆ

೭. ಜಗನ್ಮೋಹನ ದಂತಮಂಜನ. ದಂತ ... ... ಗಳನ್ನು ಪರಿಹರಿಸತಕ್ಕ ... ... ವನೌಷಧಗಳಿಂದ ತಯಾರಿಸಿದ್ದು. ... ತೊ... ... ಆಣೆ

೮. ಸರಳಭೇದಿ ಮಾತ್ರೆ. ... ... ತೊಲೆಗೆ ೨ರೂ

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ...ರೂ

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದು... ... ... ವ್ಯಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗ... ... ಶಕ್ತಿ, ಕಾಂತಿ, ... ಕೊಡುವದು. ರಾತಲಿಗೆ ೨ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟ ನೋವು, ... ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ... ಆಣೆ. ... ಬಾಟ್ಲಿಗೆ ೧ರೂ ... ಆಣೆ

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂ... ... ವ್ಯಾಧಿಗಳನ್ನು ... ಲೇಪನದೊಳಗಾಗಿ ಗೆಲ್ಲುವದು. ಉರಿಯು ... ಸುವಾಸಿಕವಾಗಿದೆ. ಕರಡಿಗೆ ... ಆಣೆ. ... ಕರಡಿಗೆಗೆ ೧೧ ಆಣೆ.

೧೪. ಸಪ್ತಾಮೃತಾಂಜನ (ಸುರುಮಾ). ... ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿ ಪಟುತ್ವವನ್ನುಂಟುಮಾಡುವ... ತೊಲೆಗೆ ...ರೂ

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯ... ... ... ಸ್ಮರಣಶಕ್ತಿಯನ್ನು ಬೆಳೆಯಿಸುವದು. ... ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ರೂ. ... ಆಣೆ

☞ ಮೇಲಿನ ಬೆಲೆಗಳಲ್ಲಿ ... ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ... ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ... ಲಕ್ಷಣಗಳನ್ನು ಬರದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ — ಬಿ. ಎಸ್. ನಾಥು ಮತ್ತು ಕಂಪನಿ,

ಬಾಂದ್ರಾ (ಮುಂಬಯಿ ಹತ್ತಿರ)

Bandra (near Bombay)

ರೋಯಲ್ ಇಂಡಿಯನ್ ಬಾಮ್.

ವಾತ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿಯದೆ

... ... ಪ್ರದೇಶ ... ... ರೋಯಲ್ ಇಂಡಿಯನ್ ... ... ವಾತದ ನೋವುಗಳ ಮೇಲೆ ... ...

ರೋಯಲ್ ಇಂಡಿಯನ್ ಬಾಮ್

... ... ಸಂಧಿವಾತ, ಉಳುಕು ... ...

... ... ಕಂಪೆನಿಯವರ ... ... ಇಂಡಿಯನ್ ... ... ತಲೆನೋವಿಗೂ ಸಂಧಿವಾತಕ್ಕೂ ಉಳುಕಿಗೂ ಬಹಳ ಉತ್ತಮವಾದದ್ದು. ಇದನ್ನು ... ... ಮೇಲೂ ಚೇಳು ಕಡತದ ಮೇಲೂ ಸುಖಕರವಾಗಿ ಉಪಯೋಗಿಸಬಹುದು

ರೋಯಲ್ ಇಂಡಿಯನ್ ಬಾಮ್

ಇದರಿಂದ ವಾತ, ಸಂಧಿವಾತ, ತಲೆನೋವು, ಜಖಮು, ಹಾಳಯು, ಉರಿ, ಸೊಂಟದ ನೋವು, ಉಳುಕು ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು

ಬಾಟ್ಲಿ ಒಂದರ ಕಿಮ್ಮತು 0-8-0, 6 ಬಾಟ್ಲಿಗಳಿಗೆ 2-10-0, 12 ಬಾಟ್ಲಿಗಳಿಗೆ 5-0-0

ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ಶಿಕ್ಕುವದು

ವಿಳಾಸ:—ಮ್ಯನೋರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

ಏಜಂಟರು, ಪರ್ಲ ಎಂಡ್ ಸನ್ಸ್ ಮಂಗಳೂರು.

... ... ರಾವ್. ಉಡುಪಿ

ರಾಮರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು ಸುರಂಗಿ ಹೂಗಳಿಂದಲೇ ತಯಾರಿಸಲ್ಪಟ್ಟ ಅತೀ ಸುವಾಸಿಕ ಮತ್ತು ಮನೋಹರವಾದ ಅತ್ತರು. ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಘಮಘಮವು ಹೆಚ್ಚು. ಇದರ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೇಗೆ ಹೋಗುವದಿಲ್ಲ. ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು. ಬಾಟ್ಲಿ ಒಂದರ ಕಿಮ್ಮತು ೧—೪—೦

ದಿಲ್ ಖುಷ್. ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು ... ... ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತು ೧—೦—೦

ಜುಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ. ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೇಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತು ೦—೧೪—೦.

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ ತಾಜಾ ಬಟ್ಟಿ ಇಟ್ಟು ತೆಗೆದದ್ದಾಗಿರುತ್ತದೆ

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರಹ ... ಶಿಕ್ಕುವದು

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ —

... ರಾವ್

ಪ್ರಕಟನೆಗಳು

1. ವ್ಯವಹಾರ ನಿರ್ಣಯ—ಕೃತಿಗಳ ಸೀಲ ಹಿಂದೂ ಮಹಮದೀಯ ದಾನ, ಇತ್ಯಾದಿ ಕಾನೂನುಗಳ ಉಪಯೋಗ ಸಂಗ್ರಹವೂ, ೯೨ ದಸ್ತಾವೇಜು, ೪೬ ಅರ್ಜಿ ಇವುಗಳ ನಮೂನೆಗಳೂ ಉಳ್ಳ [illegible] ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ [illegible] ಪುಸ್ತಕ ಕ್ರಯ ವಿ ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ. ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರಯ ವಿ ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ಎಂ ವಲ್ಲಭಾಚಾರ್ಯರು ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವದು.

THE HINDU SOAP MANUFACTURING CO.,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು ಮೋಟಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ವ್ಯಾಪಾರಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿಲೋದಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಚಳುಕು, ಉಳುಕು, ಗಾಯಗಳು, ಶೂಲ ವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.

ವಿ ಪಿ. ಖರ್ಚು ಪ್ರತ್ಯೇಕ ಟಿ ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಬೆಬ್ಬರ್ ಮಾರ್ಕೆಟ್ ರಸ್ತೆ, ಮಂಗಳೂರು, ದ. ಕ.

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೧ ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು ದ ಕ

ಡಾಕ್ಟರ್ ವಾಮನ ಗೋಪಾಲರವರ

ಖ್ಯಾತಿಯಿಂದ ಕೂಡಿರುವ

ಸಾರ್ಸಪರಿಲ್ಲಾ.

ರಕ್ತಶುದ್ಧಿಗೆ ಅತ್ಯುತ್ಕೃಷ್ಟವಾದ ಔಷಧಿಯು ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯುಪಕಾರಿಯೆಂದು ಕಂಡುಕೊಂಡಿರುವರು ಖಯಕಾಲದ ವಾತ, ಚರ್ಮರೋಗಗಳು, ಗುಳ್ಳೆ, ಸಿಡುಬು, ಅಶುದ್ಧರಕ್ತದಿಂದ ಉಂಟಾಗತಕ್ಕಂಥ ಇತರ ರೋಗಗಳು, ಬಲಹೀನತೆ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ಕೃತಬುದ್ಧಿಯ ವೈದ್ಯರಲ್ಲಿ ಶ್ರೇಷ್ಠವಾದುದೆಂದು ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು. ಧಾತುಪುಷ್ಟಿಗೆ ಉತ್ತಮವಾಗಿರುವುದರಿಂದ ಇದರ ಪ್ರತಿನಿತ್ಯದ ಸೇವನೆಯು ಆರೋಗ್ಯವನ್ನು ಬಲಗೊಳಿಸಿ ಶರೀರದಲ್ಲಿ ಶಕ್ತಿಯನ್ನುಂಟುಮಾಡುವುದು.

ಕ್ರಯ ಬಾಟ್ಲಿ ಒಂದಕ್ಕೆ ರೂ. ೧—೪—೦, ಎರಡು ಟಪಾಲು ದಸ್ತೂರಿ ೬ ಆಣೆ.

[illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು

ಸಟ್ಟಿಗೆಯಲ್ಲೂ, ಚಿಲ್ಲರೆಯಾಗಿಯೂ, ಕ್ರಯಸೌಲಭ್ಯದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೧೮. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸೆ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಿಟ್ಸ್) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ

ಲಿಮಿಟೆಡ್

ಆಪೀಸು ವಿಶಾಖಪಟ್ಟಣ ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಬದ್ಧವಾದ ವಿಮೆ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೆ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೆ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀ ಕೃಷ್ಣಬ್ರದರ್ಸ್‌ರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು

ಎಲ್ಲೂರು ರಾಮರಾವ್, ಜನರಲ್ ಏಜೆಂಟ್, ಮಂಗಳೂರು, ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲ್ಲ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸಲ್ಪಡುವವು ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗಿನ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್ ಬೈಯಣ್ಣ ಬ್ರದರ್ಸ್

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

ಯುಗಾದಿಯ ಬಹುಮಾನ! ಯುಗಾದಿಯ ಬಹುಮಾನ!!

ಹಾಸನ ಟೋಪಿ ವಿಲೇಯತ್ ಉಲ್ಲಾದ 1 ಟೋಪಿ ದಾರಕ್ಕೆ 0 8-0 10 ಟೋಪಿ ರೂಪಾಯಿ ಒಟ್ಟಲ್ 1ಕ್ಕೆ ರೂ 3 7 0 ಬಿಳಿ ವಸ್ತ್ರ ಮತ್ತು ಕಪ್ಪು ಬಿಳಿ ಕೆಂಪು ಬಣ್ಣ ಗುಲಾಬ ಪಟ್ಟಿ ನೀಲಿ ಪಟ್ಟಿ ಕಾಫಿ ಬಣ್ಣಗಳಲ್ಲಿ ಹಾಸನ ಟೋಪಿ ಹೊಲಿಯುವ ಸಾಧಾರಣ ವಸ್ತ್ರದ ಉಲ್ ಪೌಂಡು 1ಕ್ಕೆ 2 4 0, ಸಿಲ್ಕ್ 1ಕ್ಕೆ 0-10 0, ರಂಗಿನಲ್ಲಿ ಎಲ್ಲ ಕೆಂಪು ಕಪ್ಪು ಮತ್ತು ತಿಳಿ ಕೆಂಪು ಮತ್ತು ಉಲ್ ಪೌಂಡು 1ಕ್ಕೆ 2-12 0 ಅದು ಟೋಪಿ ಹೊಲಿಯುವರು ಕೊಕ್ಕೆ ಸೂಜಿ 1ಕ್ಕೆ 0 1 6 ಮತ್ತು 0 3-0 ಹಾಸನ ಟೋಪಿ ಹೊಲಿಯುವ ವಸ್ತ್ರದ ಉಲ್ ಪೌಂಡು 1ಕ್ಕೆ ರೂ. 1 12-0.

ಹಾಸನ ಟೋಪಿ ಉ ದರ್ಜೆ 1ಕ್ಕೆ 8 0 0 ಮತ್ತು 13 0 0 ತರಹೇವಾರಿ ರಂಗಿನಲ್ಲಿ ಕಸೂತಿ ಕೆಲಸದ ಉಲನ್ ದಾರಗಳು ಪೌಂಡು 1ಕ್ಕೆ ರೂ 3 4 0

ಕೆಲಿಕೋ ಬಾಂ ಎಲ್ಲಾ ತರದ ವಾತಕ್ಕೆ 0 8 0, ದೊಡ್ಡವರ ಕಾಲುಚೀಲಗಳು ಆಣೆ 0 4 0 ರಿಂದ 1 8 0 ಎಳೇ ಮಕ್ಕಳ ಕಾಲುಚೀಲಗಳು 0-4 0 ಮತ್ತು 0 6-0 ದೊಡ್ಡವರ ಕಾಟನ್ ಬನಿಯನ್ 1ಕ್ಕೆ 8 ಆಣೆಯಿಂದ 1-0-0 ದೊಡ್ಡವರ ಮುಸುಕಿನ ಟೋಪಿ 1ಕ್ಕೆ 1 0 0 ಹಣ್ಣು ಕಾಯಿಗಳು ಹಾಕುವ ಬೀಡಿ ಎಲೆದ ಪಾಕೆಟ್ 1ಕ್ಕೆ 0-2 0 ಉಲ್ ದಾರದ ವಾಟ್ ಪಾಕೆಟ್ 1ಕ್ಕೆ 0-2 0 ಉಲ್ ದಾರದ ಕಮರ್‌ಬಂದ್ 1ಕ್ಕೆ 10 ಆಣೆಯಿಂದ 1 4 0 ಲಾಟೀನುಗಳು 1ಕ್ಕೆ 0-1 0 0 1 6 ರಿಂದ 0 4-0 ಘಮಗಿನ ಕಡ್ಡಿ ತೊಲಿ 1ಕ್ಕೆ 0-2-0 ದಶಾಂಗ ತೊಲೆ 1ಕ್ಕೆ 0 4 0 ಪಿತನಾ ಡಬ್ಬಿ 1ಕ್ಕೆ 0 4 0. ದಾಟು ಸರಪಣಿ 1ಕ್ಕೆ ಆಣೆ 6ರಿಂದ 0 12-0 ವರೆಗೆ. ರಬ್ಬರ್ ಸ್ಟ್ಯಾಂಪ್ ಶಾಯಿ ಬಾಟ್ಲಿ 1ಕ್ಕೆ 0 4-0 ಪೀನ್ ಸೇಪ್ ತಾ ಬರೀ ಪತ್ರನು 300 ಪಾಕ್ಕೆಗಳಿರುವ ಪಾಕೆಟ್ 1ಕ್ಕೆ 0 2 0 ಮೊಕ್ಕಾಲ್ ಡಬ್ಬಿ 1ಕ್ಕೆ 0 3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5-0 ದೇಶಿ ಕೈವಸ್ತ್ರಗಳು ಡಜನ್ 1ಕ್ಕೆ 1-0 0 ಲಿನನ್ ಕೈವಸ್ತ್ರಗಳು ಡಜನ್ 1ಕ್ಕೆ 1-6 0 ಕಸ್ತೂರಿ ಮಾತ್ರೆ 200ರ ಸೀಸೆ 1ಕ್ಕೆ 0 4 0. ಕಾಮಿನಿಯು ತೈಲವು ಅನೇಕ ತರದ ತೈಲಗಳಲ್ಲಿ ಪಸಂದಾದದ್ದು ಸೀಸೆ 1ಕ್ಕೆ 1 0 0 ಪಾಮುಳ ಸಸ್ಯ ಡಬ್ಬಿ 1ಕ್ಕೆ 0-2-0 ದಂತಮಂಜನ ಡಬ್ಬಿ 1ಕ್ಕೆ 0 1 6 ಪೊಮೆಟು ಸೀಸೆ 1ಕ್ಕೆ 0 5-0 ದಿಲ್‌ಬಾರ್ ಇದು ಅಮೂಲ್ಯವಾದ ಅತ್ತರ್ ಸೀಸೆ 1ಕ್ಕೆ 1-8 0. ಕಾಮಿನಿ ಅತ್ತರ್ ಸೀಸೆ 1ಕ್ಕೆ 1-8-0. ರೋಜ್ ಅತ್ತರ್ ಸೀಸೆ 1ಕ್ಕೆ 2-0-0. ಇಂಗ್ಲಿಷ್ ಅಕ್ಷರದ ಪೆಟ್ಟಿಗೆ 1ಕ್ಕೆ 10 ಆಣೆಯಿಂದ 3-0-0. ಚಿತ್ರ ಪೋಸ್ಟ್ ಕಾರ್ಡುಗಳು 100ಕ್ಕೆ 0-3-0. ರೂಲು ಹಾಕಿದ ಲೆಟರ್ ಪೇಪರ್ ಪಾಕೆಟ್ 1ಕ್ಕೆ 0-4-0. ಅದಕ್ಕಾಗುವ ಕವರ್ 100ಕ್ಕೆ 0-5-0. ಕಾಬೂಲ್ ದೇಶದ ಹಿಂಗು 12 ತೊಲೆ ಡಬ್ಬಿ 1ಕ್ಕೆ 0-14-0. ಕೆಂಪು ನೂಲಿನಿಂದ ತಯಾರಿಸಿದ ಕಮರ್‌ಬಂದ್—0-4-0, 0-7-0 ಮತ್ತು 0-9-0. ಸಂಗೀತ ಪಾರಿಜಾತವೆಂಬ ಹಾಡಿನ ಪುಸ್ತಕ 0-4-0.

ಎಂಟಾಣೆಯಷ್ಟಂತಲೂ ಹೆಚ್ಚಿನ ಸಾಮಾನು ತರಿಸುವವರಿಗೆ ಒಂದು [illegible]

[illegible] ಮಂಗಳೂರು

SMALL-POX BALM

ಸಿಡುಬು ರೋಗಕ್ಕೆ ಮುಲಾಮು.

ಅಕ್ಕಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು

ಸಿಡುಬು [illegible] ಸುವ ವಿವಿಧ ವೈದ್ಯ[illegible] ಔಷಧಿ ಎಂದು ಮನ್ನಿಸಲ್ಪ[illegible]

ಮೈಲೆಯುಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮಿಸಿಸುವದು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದ[illegible] ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯ[illegible] ಅತ್ತಿತ್ತ ಚಲಿಸು[illegible]ವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು

ಮೈಲೆಯ ಮರ್ದನಸೆಯನ್ನು ಹೋಗಗೊಳಿ[illegible], ಚರ್ಮದ ಕಲೆಗಳು ವಿಕಾರ ಹೊಂದದಂತೆ ಮಾಡಿ, [illegible]ದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾವ[illegible]ಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು ರೋಗದ ಸೋಂಕನ್ನು ಸ[illegible] ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಸ್ಯು ರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೭ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ವೃತ್ತಾಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ. ದೊಡ್ಡದು ೮ ಆಣೆ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ[illegible])

ರಥಬೀದಿ, ಮಂಗಳೂರು. [illegible] ದೊರೆಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್ ಕವರ	ಹಾಫ್ ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8½, 3' × 5½, 8½" × 6'', 6' × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕಾರ ವ ಆಫೀಸರರುಗಳಿಗ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ [illegible]ಗಳಿ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮ್ಯ[illegible]ರ್,

ಶಾರದಾ ಮುದ್ರಾಲಯ, [illegible].

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,

[illegible]

Printed b[illegible] at the Mangalore Trading Association's Sharada [illegible], Mangalore.

Registered No. M. 108

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷಕ್ಕೆ ರೂ. 140 ಟಪ್ಪಾಲು ಹಾಸಲು ಸೇರಿಸ್ಸೂ 2 10

ಪುಸ್ತಕ ... ತಾರೀಕು 21ನೇ ಶುಕ್ರವಾರ ಎಪ್ರಿಲ್ 1910 ಸಂಚಿಕೆ 17

Amrutanjan Depot Fort Bombay.

ಅಮೃತಾಂಜನ್

Trade Mark Registered

ಹಿಂದಣ ಸ್ಥಾನದ ಪ್ರಸ್ತುತಿಯಿಂದ ತಲೆ ನೋವು, ಕಟಿ ನೋವು, ಸಂಧಿವಾತ, ತಲೆನೋವು, ಶಿರೋಭಾರ, ಗಂಟಲು ಕೆಂಟಲು ನೋವು, ಹಲ್ಲು ನೋವು, ಜಂತು, ಉಳುಕು, ಛಳಿ ಶೀತ, ಈ ಎಲ್ಲಾ ತರ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಕ್ಕಳಿಗೂ ದೊಡ್ಡವರಿಗೂ ಭಯವಿರಹಿತವಾಗಿ ಹಚ್ಚಬಹುದು ... ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯ ನಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿಗೆ ಕಿಮ್ಮತ್ತು 8 ಆಣೆ

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿಗೆ ಕಿಮ್ಮತ್ತು ೨ ಆ

ಗಜಕರ್ಣದ ಮುಲಾಮು.

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತ್ತು ಆರು ಆಣೆ ಈ ನಮೂನೆ ಡಬಿ

ಗಜಕರ್ಣದ ಮುಲಾಮು.

ಇದನ್ನು ಉಪಯೋಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ನಾಲ್ಕಾರು ಸಾರಿ ಹಚ್ಚುವದರೊಳಗೆ ಗಜಕರ್ಣವು ಹೋಗುವದು ಡಬ್ಬಿಗೆ ಕಿಮ್ಮತ್ತು 6 ಆಣೆ. ೧೨ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ದಾತ ಪುಷ್ಟಿ ಸ್ಪರ್ಶೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆವೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿಗೆ ಕಿಮ್ಮತ್ತು ರೂ 1

AMRUTANJAN.

BEST INDIAN PAIN BALM.

The best and Purest medicine ever made.

Amrutanjan Cures All Kind of Pains

TRY A BOTTLE TO-DAY PRICE ANS 0—8—0 ONLY

ವಿಳಾಸ:—ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಪತ್ತೆ:—ಅಮೃತಾಂಜನ, ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರಮಾಯಿಷಿಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಶೇರು 1ಕ್ಕೆ

	ರೂ. ಆ. ಪೈ.	ರೂ. ಆ. ಪೈ.
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ...	0—12—0	

ಗಂಧದ ಬಿಲ್ಲೆಗಳು.

	1 ತೊಲೆ.	½ ತೊಲೆ.	¼ ತೊಲೆ.
1 ಪುದುಚೇರಿ ಬಿಲ್ಲೆ... ...	3--0--0	1---8--0	0-12--0
2 ಕಸ್ತೂರಿ ಬಿಲ್ಲೆಗಳು... ...	1--8--0	0-12--0	0-6---0
3 } 1 ಕೇಸರಿ ಬಿಲ್ಲೆ	0--8--0	0--4---0	0-2---0
2 ಡಿಟ್ಟೊ	0--4--0	0--2---0	0-1---0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ.-5ರೂ.

4 ಅವಲ್ ಹಸೀ ಬಿಲ್ಲೆ	0--8--0	0--4---0	0-2---0
ಎರಡನೇ ರಖಂ	0--4--0	0--2---0	0-1---0

ಕಾಲು ತೊಲೆ ತೂಕ ಉಳ್ಳ ಹಸೀ ಬಿಲ್ಲೆ 100ಕ್ಕೆ 8ರೂ.-5ರೂ.

5 ಅರಗಜ ಅಥವಾ ಜವ್ವಾಜಿ ಗಂಧ ತೊಲಾ 1ಕ್ಕೆ 1-0---0

ಪರಸ್ಥಳದವರಿಗೆ ಟಪ್ಪಾಲ್ ಹಾಸಲು ಮತ್ತು ಪ್ಯಾಕಿಂಗ್ ಖರ್ಚು ಅಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು ಅಬಿಮಾನಪೂರ್ವಕವಾಗಿ ಪ್ರೋತ್ಸಾಹಿಸುವಿರೆಂದು ಕೋರುತ್ತೇನೆ.

ಯಂ ವರಸಿಹ್ಮ ಶಾಸ್ತ್ರಿ, ಸುಗಂಧಕಾರಿ,
ಶಂಕರಪುರ.ಬೆಂಗಳೂರು ಸಿಟಿ.

ಮುಫತ್ತು ೧೯೧೦ನೇ ವರುಷದ ಕ್ಯಾಲೆಂಡರು ಮುಫತ್ತು

ಕಾನಪೂರ್ ಉಲನ್ ಚೌಕಗಳು.

ಸೈಜು 40×40, ಹಳದಿ, ಗುಲಾಬಿ ಊದ, ಹಸರು, ಕರೀದು, ಕೇಸರಿ, ನೀಲಿ, ಚಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ. 1—4—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0.

ಶಹಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ. 4-4-0. 2ನೇ ನಂಬರು ರೂ. 3—12—0. 3ನೇ ನಂಬರು 3—8—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0.

ಸಾಚಾ ಒಳ್ಳೇ ಕಲಾಪತ್ತು "ಜರಿ"

	ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.
1ನೇ ನಂಬರು	0—10—0, 1—4—0,
2ನೇ ನಂಬರು	0—14—0, 1—8—0, 2—4—0.

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂದಾ, ನೀಲಿ, ರೋಜಾ, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ 3 ಇಂಚು, 1ಕ್ಕೆ ರೂ. 1-4-0. 1-8-0, 2-4-0, 2-8-0, 3-0-0.

ಚಿತ್ರಾಸನ 3-0-0, 4-0-0, 5-0-0, 6 0 0.

ಡಿಟ್ಟೊ ಗಜ 1ಕ್ಕೆ 1-8-0.

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5.

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4, 5, 6.

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ, ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ. 1-6-0, 2-8-0, 3-0 0.

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8.

ಉಲನ್ ಬನೀನುಗಳು 1ಕ್ಕೆ ರೂ. 2-4-0, 2-8-0, 3-0-0, 3-8-0.

ಫೆಲ್ಟ್ ಕ್ಯಾಪ್‌ಗಳೂ ಕ್ರಿಸ್ಟಿಸ್ 1ಕ್ಕೆ ರೂ. 1-12-0, 2-4-0, 2-8-0 2-12-0.

ಇಟಲಿ ಕ್ಯಾಪ್‌ಗಳು 1ಕ್ಕೆ ರೂ. 0-12-0. 1-0-0, 1-4-0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ. 4-0-0, 4-4-0, 4-8-0, 5-8-0, 6-0-0, 7-0-0, 8-0-0, 9-0-0, 10-0-0, 12-0-0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, ~~0-10-0, 0-12-0.~~

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲ	1ಕ್ಕೆ	ರೂ.	0—11—0.
ಕುಂತಳ ಕೌಮುದಿ ತೈಲ	,,	,,	0—12—0.
ಕಮೋನಿಫೆರಾ ಓಯಿಲ್	,,	,,	1—0—0.
ಭೃಂಗಾಮಲಕ ತೈಲ ಸೀಸೆ	,,	,,	0—4—0, 0-8-0, 1-0-0
ಕಸ್ತೂರಿ ಮಾತ್ರೆ ಸೀಸೆ			[illegible]—0.

ಎಲ್. ಎ. [illegible]ವಾಲ್
[illegible]

ಗಿಡಗಳು, ಬೀಜಗಳು, ಹಣ್ಣು, ಹುವ್ವು ಮತ್ತು ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಶೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್. ಎನ್. ರಾವ್ ಬ್ರದರ್ಸ್
ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ: ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—[illegible] ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. [illegible] ಅತ್ಯಾಶ್ಚರ್ಯಕರವಾಗಿ ಕೂದಲನ್ನು [illegible] ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ~~೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.~~

ಕವಿರಾಜ ಆರ್. ಸಿ. ಸೈನ್, ಎಲ್. ಎಮ್. ಎಸ್.,
216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. [illegible]ವಾಲ್ ಎಂಡ್ ಕೋ,
[illegible] ಬೆಂಗಳೂರು.
[illegible] ಆರ್. [illegible],
[illegible] ಬೆಂಗಳೂರು

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 29ನೇ ಏಪ್ರಿಲ್ 1910

ಭಾರತವರ್ಷದ ಭವಿಷ್ಯವು

ಭವಿಷ್ಯ ... ಎಸುವುದು ಅಮಾನುಷ ವ್ಯಕ್ತಿಗಳಾದ ತ್ರಿಕಾಲಜ್ಞಾನಿಗಳಿಗೆ ಮಾತ್ರ ಸಾಧ್ಯ. ವರ್ತಮಾನಕಾಲದಲ್ಲಿ ಕಾರ್ಯಪ್ರಯತ್ನಗಳನ್ನು ಮಾಡಿ ಈ ಪ್ರಯತ್ನಗಳಿಂದ ಭವಿಷತ್ಕಾಲದಲ್ಲಿ ದೊರಿಯುವ ಫಲಗಳನ್ನು ಸಾಧಾರಣ ಮನುಷ್ಯರು ಕಾಲಕ್ಕೆನೇ ನಿರ್ಧರಿಸಲಿಕ್ಕೆ ಬಿಡುವರು. ಆದರೆ ಪೂರ್ವ ವೃತ್ತಾಂತವನ್ನು ತಿಳಿದು ವರ್ತಮಾನಕಾಲದಲ್ಲಿಯ ವರ್ತನೆಯನ್ನನುಸರಿಸಿ ಭಾವೀಕಾಲದಲ್ಲಿ ಹೀಗೀಗಾಗಬಹು ದೆಂಬದನ್ನು ತರ್ಕಿಸಬಹುದು ಅಥವಾ ಹೀಗೀಗಾಗಬೇಕೆಂದು ಅಪೇಕ್ಷಿಸಲೂ ಬಹುದು.

ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ತಲೆದೋರುತ್ತಿರುವ ಪಾಶ್ಚಾತ್ಯ ನವನಾಗರೀಕತೆಯ ಪ್ರಾಬಲ್ಯವು ಹಿಂದುಸ್ಥಾನದಲ್ಲಿಯೂ ಸಹ ವ್ಯಾಪಿಸಿರುವುದು. ಪಾಶ್ಚಾತ್ಯ ಜನಾಂಗಗಳ ನವನಾಗರೀಕತೆಯ ಮೇಲಾಟದಿಂದ, ಈ ಮೇಲಾಟವನ್ನು ಎದುರಾಡಲು ಪ್ರಯತ್ನಿಸದ ಜನಾಂಗಗಳು ಬೇಗನೆ ಅಳಿದುಹೋಗುವವು. ಹಿಂದುಸ್ಥಾನದಲ್ಲಿ ಇತ್ತಲಾಗೆ ತೋರಿಬರುವ ರಾಷ್ಟ್ರೀಯ ಐಕ್ಯ ಮೊದಲಾದ ನವಚೇತನದ ಕಳಕಳವು ಇಲ್ಲವಾದ್ದಲ್ಲಿ ಹಿಂದುಸ್ಥಾನದ ಭವಿಷ್ಯವು ಈ ನಾಗರೀಕತೆಯ ಮೇಲಾಟದಿಂದ ಬಹಳ ದುಃಖಾಸ್ಪದವಾಗುತ್ತಿತ್ತು. ನವನಾಗರೀಕತೆಗನುಗುಣವಾಗಿ ಹಿಂದುಸ್ಥಾನವನ್ನು ಅಣಿಗೊಳಿಸುವರೆ ಪ್ರಯತ್ನಗಳು ನಡಿಯುತ್ತಿರುವವು. ಅಂಥಾ ಪ್ರಯತ್ನಗಳ ಫಲವು ನಿರರ್ಥಕವಾಗುವದೆ ... ಬಹುದೆಂಬದನ್ನು ಚರ್ಚಿಸಬೇಕಾಗಿರುತ್ತದೆ.

ಪ್ರಯತ್ನಗಳ ಫಲವು ನಿರರ್ಥಕವಾಗುವುದು ಹ್ಯಾಗೆಂಬುವದನ್ನು ಉದಹರಿಸಬಹುದು. ಹೆಚ್ಚುಕಡಿಮೆ ಅರ್ಧ ಶತಮಾನದ ಮೊದಲು ಆಂಗ್ಲೇಯ ವಿದ್ಯಾಭ್ಯಾಸವನ್ನು ಪಡದು ಇಂಗ್ಲಿಷ ಭಾಷಾ ಪಾಂಡಿತ್ಯವನ್ನೂ ವಾಙ್ಮಯವನ್ನೂ ಹೊಂದಿದ ಹಲವು ಪ್ರಭಾಮುಂದಾಳುಗಳು ಭಾರತೀಯ ಪುನರುಜ್ಜೀವನವು ಆಂಗ್ಲೇಯರ ವರ್ತನೆ ಪ್ರಕಾರ ನಡದ್ದಲ್ಲಿ ಸಾಧ್ಯವಾಗುವುದೆಂಬ ಕೋರಿಕೆಯಿಂದ ಹಾಗೆಯೇ ವರ್ತಿಸುವುವರಾದರು. ಆದರೆ ಇವರ ಕೋರಿಕೆಯೂ ಪ್ರಯತ್ನಗಳೂ ಹೆಚ್ಚು ಸತಿ ವ್ಯರ್ಥವಾದ ಮೇಲೆ ಭಾರತೀಯ ಪುನರುಜ್ಜೀವನಕ್ಕೆ ಆಂಗ್ಲೇಯ ಮೊದಲಾದ ಪಾಶ್ಚಾತ್ಯರ ಚರಿತ್ರಾಂಶಗಳನ್ನೂ ಭಾರತೀಯ ಪುರಾತನ ನಾಗರೀಕತಯ ಮಹಿಮೆಯನ್ನೂ ಅರಿತು, ನಮ್ಮ ಪ್ರಕೃತ ಸ್ಥಿತಿಯನ್ನು ಈ ನವೀನ ವಿದ್ಯಮಾನಗಳಿಗನುಸಾರವಾಗಿ ತಿದ್ದಬೇಕಲ್ಲದೆ, ಪಾಶ್ಚಾತ್ಯರಂತೆಯೇ ವರ್ತಿಸುವುದು ಶುಭಕರವಲ್ಲವೆಂತ ತಿಳಕೊಂಡರು. ಆಮೇಲಿನ ನಮ್ಮ ಪ್ರವರ್ತನೆಯೊಂದಿಗೆ, ನವನಾಗರೀಕತೆಯ ಪ್ರಾಬಲ್ಯದಿಂದ ವ್ಯಕ್ತವಾಗುವ ಪ್ರಪಂಚದ ಅಭಿವೃದ್ಧಿಯ ಮಾರ್ಪಾಟಗಳನ್ನು ಪರ್ಯಾಲೋಚಿಸಬೇಕಾಗಿರುವುದು.

ನವೀನ ಮತ ಪ್ರಸಾರದೊಂದಿಗೆ ಲೌಕಿಕ ಅಭಿವೃದ್ಧಿಯು ಮುಂದುವರಿಯುವುದೆಂಬುದು ಪ್ರಾಚೀನ ಮತ್ತು ನವೀನ ಇತಿಹಾಸಗಳಿಂದ ವ್ಯಕ್ತವಾಗುತ್ತದೆ. ಮತವಿಕಾಸವು ಲೋಕಪ್ರಗತಿಯಲ್ಲಿ ಸರ್ವಕಾರ್ಯ ಪ್ರವರ್ತಕವಾಗಿರುವುದೆಂಬದನ್ನು ಯಾರೂ ನಿರಾಕರಿಸಲಿಕ್ಕಿಲ್ಲ. ಬುದ್ಧ, ಮಹಮ್ಮದ, ಕ್ರೈಸ್ತ ಮೊದಲಾದ ಮತಸ್ಥಾಪಕರಿಂದ ಆಯಾ ಕಾಲದಲ್ಲಿ ತೋರಿದ ಮತವಿಕಾಸವು ಲೌಕಿಕ ಅಭಿವೃದ್ಧಿಯನ್ನು ಹ್ಯಾಗೆ ಮುಂದುವರಿಸಿರುವುದೆಂಬದು ವಾಚಕರಿಗೆ ತಿಳಿದಿರುವ ವಿಷಯ. ಈಗಲೂ ಸಹ ಮತಪಸರಣೆಯೇ ಲೋಕಕ್ಕೆ ಅಭಿವೃದ್ಧಿಯ ಮಾರ್ಗವನ್ನು ಸೂಚಿಸುತ್ತಿರುವುದು. ಮಹಮ್ಮದಿ ಮತ್ತು ಕ್ರೈಸ್ತಮತಗಳು ಈಗ ಪ್ರಸಾರವಾಗುತ್ತಿರುವಾಗ ಇತರ ಮತಗಳ ಪ್ರವರ್ತನೆಯು ಶಿಥಿಲವಾಗಿ ಮತಾನುಯಾಯಿಗಳಲ್ಲಿ ಅನ್ಯಮತದ್ವೇಷವು ಕ್ಷಯಿಸಿ ಉದಾರ ಕಲ್ಪನೆಗಳಿಗೆಡೆದೊರಕುತ್ತಿರುವುದು. ಲೋಕದಲ್ಲಿ ತಲೆದೋರುವ ಈ ಮತವಿಚಾರದಿಂದ ಹಿಂದುಸ್ಥಾನವು ಹೇಗೆ ಮತಾಂತರ ಹೊಂದಿದೆ?

ಹಿಂದೂ ಮತವು ಈಚೆಗೆ ದುರ್ದಶೆಯನ್ನು ಹೊಂದಿ ಮತಾವಲಂಬಿಗಳು ಸಹಾ ಬಂಗಾಳದಲ್ಲಿ ಕ್ಷಯಿಸುತ್ತ ಬಂದಿರುವರೆಂದು ಕರ್ನಲ್ ಮುಕರ್ಜಿಯವರು ಈ ವಿಷಯವಾಗಿ ಬರೆದ ಚಿಕ್ಕದೊಂದು ಪುಸ್ತಕದಿಂದ ತೋರಿಬರುವುದು. ದೇಶದ ಇತರ ಕಡೆಗಳಲ್ಲಿ ಸಹಾ ಇದೇ ದುರ್ದಶೆಯು ... ಬಹುದೆಂದು ಕೆಲವರು ... ರುವರು. ಹಿಂದೂ ಮತಸ್ಥರಲ್ಲಿ ಪ್ರಬಲವಾಗಿರುವ ... ಮತಸಿದ್ಧಾಂತಗಳ ಅಜ್ಞಾನವೇ ಇದರ ಕಾರಣವಾಗಿರುವುದು. ಬರಿಯ ಬಾಹ್ಯ ಆಚಾರಗಳನ್ನು ಮತಸಿದ್ಧಾಂತಗಳೆಂದೆಣಿಸಿ ವರ್ಣಭೇದ ಮೊದಲಾದವುಗಳಿಂದ ಪರಸ್ಪರ ವೈಷಮ್ಯವನ್ನು ಸಾಧಿಸಿಕೊಳ್ಳುತ್ತಿರುವುದರಿಂದ ಈ ದುರ್ದಶೆಯು ಪ್ರಾಪ್ತವಾಯಿತೆನ್ನಬೇಕು. ಆದರೆ ಇಂಥಾ ದುರ್ದಶೆಯ ದಿನಗಳು ಸಂದುಹೋಗುತ್ತಿರುವವೆಂದು ಕೋರಬಹುದೋ? ಪ್ರತಿ ಶಿಕ್ಷಣಾಲಯದಲ್ಲಿಯೂ ಮತವಿಚಾರದಲ್ಲಿ ಉದಾರಕಲ್ಪನೆಗಳಿಗೆ ಅವಕಾಶ ದೊರಕುವುದರಿಂದ ಇಂಥಾ ಕಲ್ಪನೆಗಳಿಂದ ದೇಶಕ್ಕೆ ಶುಭವುಂಟಾಗಬಹುದೆಂದು ನಿರೀಕ್ಷಿಸಬಹುದೋ? ಇಂಥಾ ಕಲ್ಪನೆಗಳು ಕೊನೆಗೊಂಡು ವಿವಿಧ ಮತಾನುಯಾಯಿಗಳು ಅನುಸರಿಸುವಂಥಾ ಒಂದೇ ಮತವು ಉಂಟಾಗುವುದೋ? ಸ್ಪರ್ಶಹೀನರಾದ ಪತಿತರನ್ನು ಉದ್ಧರಿಸಿ ಜಾತಿಯಲ್ಲಿ ಕೂಡಿಸಿಕೊಳ್ಳುವರೋ? ಅಥವಾ ಕೆಲವು ವರುಷಗಳಿಂದ ಬಂಧಿಸುತ್ತಿರುವ ಬರಿಯ ಬಾಹ್ಯ ಆಚಾರಗಳನ್ನು ಕಾಲಕ್ಕನುಗುಣವಾಗಿ ತೊರೆದುಬಿಡುವರೋ? ಭಾರತೀಯ ಜನಾಂಗವು ಯಾರೂ ನಿರೀಕ್ಷಿಸದ ರೀತಿಯಲ್ಲಿ ಮತಾಂತರಗೊಳ್ಳುವುದೋ? ಇದನ್ನೆಲ್ಲಾ ಪ್ರವಾದಿಸುವರೆ ಯಾರಿಗೆ ತಾನೆ ಸಾಧ್ಯ? ಹಿಂದುಸ್ಥಾನದ ಮತ ಚರಿತ್ರೆಯಲ್ಲಿ ಆಯಾ ಕಾಲಗಳಲ್ಲಿ ಫಕ್ಕನೆ ಅವತಾರ ಪುರುಷರು ಜನ್ಮವೆತ್ತಿ ಸಮಾಜ ಸ್ಥಿತಿಯನ್ನು ಮಾರ್ಪಡಿಸಿದ ಹಲವು ದೃಷ್ಟಾಂತಗಳಿರುವವು. ಇಂಥ ಮಹನೀಯರ್ಯಾರಾದರೂ ಅವತರಿಸಲಿಕ್ಕೂ ಸಾಕು. ಪ್ರಕೃತ ಆರ್ಯಸಮಾಜ, ಬ್ರಹ್ಮಜ್ಞಾನಸಂಘ, ಮೊದಲಾದವರು ಹಿಂದೂ ಮತೋದ್ಧರಣೆಯನ್ನು ಸಾಧಿಸುತ್ತಿದ್ದು ಹಿಂದೂ ಮತಾವಲಂಬಿಗಳನ್ನು ಹೆಚ್ಚಿಸಲು ಪ್ರಯತ್ನಿಸುರುವರು.

ಜನಾಂಗದ ಐಕ್ಯವು ಹಿಂದುಸ್ಥಾನದಲ್ಲಿ ಹ್ಯಾಗೆ ಸಾಧ್ಯವಾಗುವುದೆಂದು ನಾವು ತಿಳಕೊಳ್ಳಬೇಕಾಗುವ ಎರಡನೇ ವಿಷಯವಾಗಿರುವುದು. ಬಹಳ ಪೂರ್ವಕಾಲದಲ್ಲಿ ನಾವೆಲ್ಲಾ ಒಂದೇ ಆರ್ಯಜನಾಂಗದವರೆಂದು ತಿಳಕೊಳ್ಳುತ್ತಿದ್ದರೂ ಕ್ರಮೇಣ ಈ ಐಕ್ಯಭಾವವು ಮರೆಯಲ್ಪಟ್ಟು ಮರಾಠೆಯವರು, ರಾಜಪುತ್ರರು, ಸಿಕ್ಖ ಮತಸ್ಥರು ಮೊದಲಾದ ಭೇದಗಳುಂಟಾದವು. ಆದರೆ ಐಕ್ಯಭಾವವು ಭಾರತೀಯ ಜನಾಂಗದಲ್ಲಿ ತಿರುಗಿ ಮೊಳೆತಿರುವುದು. ಇಂಥಾ ಭಾವನೆಯು ಬಂಗಾಳದಲ್ಲಿ ವಿಶೇಷವಾಗಿ ತೋರುವುದು. ಇತರ ಪ್ರಾಂತ್ಯಗಳಲ್ಲಿ ಸಹಾ ಐಕ್ಯವನ್ನುಂಟುಮಾಡಲು ಪ್ರಯತ್ನಿಸುತ್ತಿರುವರು. ಜನರಲ್ಲಿ ಉಂಟಾದ ಈ ರಾಷ್ಟ್ರೀಯ ಭಾವದೊಂದಿಗೆ ತಂತಮ್ಮ ಜಾತಿಗಳಲ್ಲಿ ಐಕ್ಯವನ್ನುಂಟುಮಾಡಿ ಅಭಿವೃದ್ಧಿಯ ಪ್ರಯತ್ನಗಳನ್ನು ಮಾಡಬೇಕೆಂಬ ಕಾಂಕ್ಷೆಯು ಸಹ ಉಂಟಾಗಿರುವುದು. ರಾಷ್ಟ್ರೀಯ ಐಕ್ಯಕ್ಕೆ ಇಂಥಾ ಕಾಂಕ್ಷೆಯು ಕೇಡಾಗಿ ಪರಿಣಮಿಸುವುದೋ ಎಂದು ಕಲವರು ಅನುಮಾನ ಪಡುತ್ತಿರುವರು. ಆದರೆ ಹೀಗೆ ಒಂದೇ ಜನಾಂಗದಲ್ಲಿ ವಿವಿಧ ಶಾಖೆಗಳಿದ್ದು ಐಕ್ಯಭಾವದಿಂದ ವರ್ತಿಸುತ್ತಿರುವ ಜನಾಂಗಗಳು ಅಮೇರಿಕ ಯೂರೋಪ್ ಖಂಡಗಳಲ್ಲಿರುವುದರಿಂದ ಭರತಖಂಡದಲ್ಲಿಯೂ ಜನಾಂಗದ ಐಕ್ಯವು ಸಾಧ್ಯವಾದೀತೆಂದೆನ್ನಬೇಕು. ಆದರೆ ಯೂರೋಪಿಯ ದೇಶಗಳಂತೆ ಇಲ್ಲಿರುವ ವಿವಿಧ ಜಾತಿಗಳಲ್ಲಿ ಪರಸ್ಪರ ಸಮ್ಮಂದ ಮೊದಲಾದವುಗಳು ಆಗುವುದಿಲ್ಲ. ಜನಾಂಗದ ಐಕ್ಯವು ಅದ್ದರಿಂದ ಅಲ್ಲಿಯಕ್ಕಿಂತ ಇಲ್ಲಿ ಕಷ್ಟಸಾಧ್ಯವೆಂದರೂ ಜನರಲ್ಲಿ ಪರಸ್ಪರ ಮೈತ್ರಿಯು ಉಂಟಾಗುವಂತೆ ತಕ್ಕದಾದ ... ಬೀರುವರೆ ಪ್ರಯತ್ನಿಸಿದರೆ ಕ್ರಮೇಣ ಐಕ್ಯಭಾವನೆಯು ಸರ್ವರಲ್ಲಿಯೂ ಉಂಟಾಗುವುದು. ವಿದ್ಯೆಯೇ ಜನಾಂಗದ ಐಕ್ಯಕ್ಕೆ ಮೂಲಕಾರಣವೆಂದರಿತು ಜಪಾನದೇಶವು ಶಿಕ್ಷಣ ಬಲದಿಂದ ಐಕ್ಯವನ್ನು ಸಾಧಿಸಿ ಬಲಿಷ್ಟ ಜನಾಂಗಗಳಲ್ಲಿ ಒಂದಾಗಿ ಖ್ಯಾತಿಗೊಂಡಿರುವುದು. ಚೀನಾ ದೇಶದಲ್ಲಿ ಸಹಾ ಈ ಬಗ್ಗೆ ಬೇಕಾದ ಶಿಕ್ಷಣ ಏರ್ಪಾಡುಗಳನ್ನು ಬಹಳ ಲವಲವಿಕೆಯಿಂದ ಮಾಡುತ್ತಿರುವರು. ಹಿಂದುಸ್ಥಾನವು ಇಂಥಾ ಶಿಕ್ಷಣ ಪಸರಣೆಯಲ್ಲಿ ಹಿಂದುಳಿಯದಂತೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿರುವುದು. ತಂದೆತಾಯಿಗಳು ಬಾಲಿಕಾ ಶಿಕ್ಷಣಕ್ಕೆ ಹೆಚ್ಚಿನ ನಿಗಾಕೊಟ್ಟು ತಮ್ಮ ಹುಡುಗಿಯರಿಗೆ ಈಗಿನ ವಿದ್ಯಮಾನಗಳಲ್ಲಿ ಶಾಲೆಗಳಲ್ಲಿ ದೊರಿಯಲಶಕ್ಯವಾದ ವಿದ್ಯಾಭ್ಯಾಸವನ್ನು ಮನೆಯಲ್ಲಿಯೇ ಕೊಡುವಂತೆ ಏರ್ಪಡಿಸಬೇಕು. ಮಾತೃಭಾಷೆಯಲ್ಲಿಯೇ ಇಂಥಾ ಶಿಕ್ಷಣವನ್ನು ಕೊಟ್ಟು ಪ್ರಕೃತ ಶಿಕ್ಷಣಪಡೆದವರಲ್ಲಿರುವ, ಆಂಗ್ಲಭಾಷೆಯಲ್ಲಿಯೇ ಮಾತಾಡುವ ಮತ್ತು ಭಾವಿಸುವ ರೂಢಿಯನ್ನು ಕಿತ್ತುಬಿಡುವಂತೆ ಪ್ರಯತ್ನಿಸಬೇಕು. ಯಾಕಂದರೆ ಮಾತೃಭಾಷೆಯನ್ನು ಪೂರ್ಣ ಮರೆತುಬಿಟ್ಟು ಭಾವನೆಯಲ್ಲಿಯೂ ಸಹಾ ಅನ್ಯ ವಾಙ್ಮಯವನ್ನೇ ಇರಗೊಡಿಸುವುದು ಜನಾಂಗದ ಅಭಿಮಾನಕ್ಕೆ ಅಪಾಯಕರ. ಈ ಎಲ್ಲಾ ಏರ್ಪಾಡುಗಳ ಜಾರಿ ನಡಿಸಿದ್ದಲ್ಲಿ ಮುಂದಕ್ಕೆ ಅಭ್ಯುದಯವು ತೋರದಿರದು.

ಸಾಂಪತ್ತಿಕ ಅಭಿವೃದ್ಧಿ ಬಗ್ಗೆ ಭೂಲೋಕದ ಇತರ ಕಡೆಗಳಂತೆ ಇಲ್ಲಿಯೂ ಸಹಾ ಸಾಧನೆಯು ನಡಿಯುತ್ತಿರುವುದು. ಆದರೆ ಹಣ ಸಂಪಾದನೆಯನ್ನೇ ಜೀವನದ ಒಂದೇ ಉದ್ದಿಶ್ಯವಾಗಿ ಮಾಡಿಕೊಂಡು ದ್ರವ್ಯಕ್ಕಿಂತಲೂ ಮಹತ್ವವಾದ ಕರ್ತವ್ಯಕರ್ಮಗಳನ್ನು ಮರೆತುಬಿಡುವ ಸಂಭವಗಳು ನವನಾಗರಿಕರಲ್ಲಿ ಹೆಚ್ಚಾಗಿರುವವಾದ್ದರಿಂದ ಭಾರತೀಯರು ಇಂಥಾ ಸಂಭವಗಳಿಗೆಡೆಕೊಡದೆ ತಮ್ಮಲ್ಲಿಲ್ಲದ ಸಾರ್ಥಕವಾದ ಜೀವನೋಪಾಯಗಳನ್ನು ಮಾತ್ರ ಈ ನವನಾಗರೀಕತೆಯಿಂದ ... ದ್ರವ್ಯಸಂಪಾದನೆಯೊಂದಿಗೆ ... ಮಹತ್ವವಾದ ... [illegible]

ನಾಗರೀಕತೆಯಲ್ಲಿಯೂ ಇರುವ ಚರಿತ್ರನ್ನು ಮಾತ್ರ ತಿಳಿಕೊಂಡು ಜೀವನದ ಮೇಲ್ಗಾಟದಲ್ಲಿ ಇತರ ಜನಾಂಗಗಳಿಗೆ ಬಲಿಬೀಳದೆ ಸಮರ್ಥ ಜನಾಂಗವೆಂದನ್ನಿಸಿಕೊಂಡು ಲೋಕಕ್ಕೆಲ್ಲಾ ಜೀವನದ ಅತಿ ಕಠಿಣ ಹೋರಾಟದಲ್ಲಿ ಸಹಾ ಸನ್ಮಾರ್ಗ ಪ್ರವರ್ತನೆಯು ಹ್ಯಾಗೆ ಸಾಧ್ಯವೆಂಬುದನ್ನು ಸೂಚಿಸಿ ಭಾರತೀಯ ಜನಾಂಗವು ಮಾದರಿ ಜನಾಂಗವಾಗಿ ಪರಿಣಮಿಸಬೇಕಾಗಿ ನಮ್ಮ ಅಪೇಕ್ಷೆಯಾಗಿದೆ.

ಅಳಿಯಸಂತಾನದ ಕಟ್ಟು.

ಬಹುಮಾನಪಟ್ಟ ಕೃಷ್ಣನಾಯರವರು ಮತ್ತು ವಾಸುದೇವರಾಜರವರು ಮದ್ರಾಸು ನ್ಯಾಯಾಧಿಪತಿಗಳ ಸಭೆಯಲ್ಲಿ ಈ ಜಿಲ್ಲೆಯಲ್ಲಿ ಪ್ರಚಾರದಲ್ಲಿರುವ ಅಳಿಯ ಸಂತಾನದ ಕಟ್ಟಿನಲ್ಲಿಯೂ, ಮಲಬಾರಿನ ಮರುಮಕ್ಕತಾಯ ಕಟ್ಟಿನಲ್ಲಿಯೂ ಕೆಲವು ಬದಲಾವಣೆಗಳಿಗೆ [illegible] ಕೊಡಬೇಕೆಂದು ಪ್ರಯತ್ನ ಮಾಡುವರು. ಈ ಬದಲಾವಣೆಗಳು ಏನೆಂಬವುಗಳು ಈ ಪತ್ರದ ಮೂಲಕ ಮುಂದೆ ತಿಳಿಸುವುದರಿಂದ [illegible] ಗಳನ್ನು ಇಲ್ಲಿ ಬರೆಯುವುದು ಅಗತ್ಯವಿಲ್ಲ. [illegible] ಜಿಲ್ಲೆಯಲ್ಲಿ ಇದ್ದಂತೆ ಅನೇಕ ಕಡೆಗಳಲ್ಲಿ [illegible] ಸಭೆಗಳು ನಡೆದು ಈ ಬದಲಾವಣೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು [illegible] ಕೃಷ್ಣನ್ನಾಯರವರಿಗೆ ಕಳುಹಿಸುತ್ತಿರುವರು. ಬಹುಪಕ್ಷದವರು ಈ ಬದಲಾವಣೆಗಳನ್ನು ಸಂತೋಷದಿಂದ ಸ್ವೀಕರಿಸಿ ಕೃಷ್ಣನ್ನಾಯರವರನ್ನು ಪ್ರೋತ್ಸಾಹಗೊಳಿಸಿರುವರು, ಕೆಲವು ಪಕ್ಷದವರು ಈ ಬದಲಾವಣೆಗಳನ್ನು [illegible] ಭಾವದಿಂದ ನೋಡಿ ಕೃಷ್ಣನ್ನಾಯರವರ ಪ್ರಯತ್ನಕ್ಕೆ [illegible] ತಡೆಯುವರು. ಇದು ಲೋಕದ ಸ್ವಾಭಾವಿಕವಾಗಿರುತ್ತದೆ. ಎಲ್ಲಾ ಸುಧಾರಣೆಗಳು [illegible] ನಡೆಯಲ್ಪಡುವವು, ಆದರೆ ಕೊನೆಗೆ ಈ ಸುಧಾರಣೆಗಳೇ ನೆಲೆಗೊಳ್ಳುವವು. ಈ ವಾದ [illegible] ಸತ್ಯಾಂಶದಲ್ಲಿ [illegible].

ನಮ್ಮ ಜಿಲ್ಲೆಯಲ್ಲಿ [illegible] ಸಭೆಯೊಂದು [illegible] ಕಂಡು ಬರಲಿಲ್ಲ. ಇದಕ್ಕೆ ಏನು ಕಾರಣವೆಂದು ತಿಳಿಯದು. ಈ ಜಿಲ್ಲೆಯಲ್ಲಿ ಅಳಿಯ ಸಂತಾನದ ಕಟ್ಟಿನ [illegible] ಅಭಿಪ್ರಾಯವನ್ನು [illegible] ಲ್ಲ ಮತ್ತು ತಮ್ಮ [illegible] ಕಡೆಗಳಲ್ಲಿ ಏನು ನಡೆಯುತ್ತದೆಯೆಂಬುದು ಅವರಿಗೆ ತಿಳಿಯದು. [illegible] ಅಳಿಯಸಂತಾನದ ಕಟ್ಟಿನಲ್ಲಿ ಬದಲಾವಣೆಗಳು ಅವಶ್ಯ [illegible] ಈ ಕಟ್ಟಿನ ಅನೇಕ ಕುಟುಂಬಗಳು ಸಂಕಟಗೊಳ್ಳುತ್ತಿವೆ [illegible] ಪ್ರಚಾರಕ್ಕೆ ಬರುತ್ತಲೇ ಈ ಕಟ್ಟು [illegible] ಲಾಗುವದೇ [illegible] ಜಿಲ್ಲೆಯಲ್ಲಿ ಈ ಕಟ್ಟನ್ನು ಅನುಸರಿಸುವವರು 1891ನೇ [illegible] ಈ ಜಿಲ್ಲೆಯ [illegible] ಆದರೆ ಕೆಲವು [illegible] ತಿಳುವಳಿಕೆ ಬಗ್ಗೆ ಇಲ್ಲಿ ಸೂಚಿಸುವೆನು.

ಈ [illegible] ಕಾಣುತ್ತದೆ. [illegible] ಸ್ವಭಾವಿಕವಾಗಿ [illegible] ತನ್ನ ಮಕ್ಕಳ ಮೇಲಿನ ಪ್ರೀತಿಯಿಂದ ತನ್ನ ಎಲ್ಲಾ [illegible] ತನ್ನ ಮಕ್ಕಳಿಗೆ [illegible] ಮತ್ತು ಅವರು ಸಂಸಾರದಲ್ಲಿ [illegible] ನೆಲೆಗೊಂಡಿರುವವು. ಆದರೆ ಅಳಿಯಸಂತಾನದ ಕಟ್ಟಿನ ಪ್ರಕಾರ ಅವನು ತನ್ನ ಅಳಿಯಂದಿರನ್ನು ಮಕ್ಕಳಿಗಿಂತಲೂ ಹೆಚ್ಚಾಗಿ ಪ್ರೀತಿ ಮಾಡಬೇಕಾಗಿದೆ. [illegible] ಸ್ವಭಾವಕ್ಕೆ [illegible] ಸ್ವಭಾವಕ್ಕೆ ವಿರುದ್ಧವಾಗಿ ನಡೆಯುವುದು [illegible] ಅಳಿಯ ಸಂತಾನದ ಕುಟುಂಬಗಳ [illegible] ಮನುಷ್ಯನ [illegible] ವಶವಾಗುತ್ತಲೇ ಅವನು ಮನುಷ್ಯ ಸ್ವಭಾವದ ಪ್ರೇರಣೆಗೆ ತುತ್ತಾಗಿ ಅನೇಕ ತರದ ಕೆಟ್ಟ ಯುಕ್ತಿಗಳಿಂದ [illegible] ಮಕ್ಕಳಿಗೆ [illegible] ವನು. ಅಳಿಯಸಂತಾನದ ಕಟ್ಟು ಪ್ರಚಾರಕ್ಕೆ ಬಂದಂದಿನಿಂದ ಅನೇಕ ತರದ ಕೆಡಕುಗಳು ಕುಟುಂಬಗಳಲ್ಲಿ ನೆಲೆಗೊಂಡಿರುವವು. ಈ ಜಿಲ್ಲೆಯ ಅನೇಕ [illegible] ವಾದ ವ್ಯಾಜ್ಯಸಾಜ್ಯಗಳು ಈ ಅಳಿಯಸಂತಾನದ ಕಟ್ಟಿನಿಂದಲೇ ಹುಟ್ಟುತ್ತವೆ ಎಂದು ಅಭಿಪ್ರಾಯಪಡಬೇಕು. ಈ ಕಟ್ಟಿನಿಂದ ಅನೇಕ [illegible] ಯುಕ್ತವಾದ ದೊಡ್ಡ ಕುಟುಂಬಗಳು ನಾಶವನ್ನು ಹೊಂದಿದವು. ಮಕ್ಕಳ ಸಂತಾನದಲ್ಲಿ ತಂದೆಯ ಆಸ್ತಿಯನ್ನು ಊರ್ಜಿತವಿಡಬೇಕೆಂಬ ಆಶೆಯಾದರೂ ಮಕ್ಕಳಲ್ಲಿ ನೆಲೆಗೊಂಡಿರುವುದು. ಆದರೆ ಇಂಥಾ ಆಶೆಯು ಅಳಿಯಸಂತಾನದ ಕುಟುಂಬಗಳಲ್ಲಿ ಹುಟ್ಟುವದಿಲ್ಲ. ತಂದೆಯು ಜೀವಮಾನ ಕಾಲದಲ್ಲಿ ತಮ್ಮಿಂದ ಕೂಡುವಷ್ಟು ಆದಾಯವನ್ನು ಹೊಂದಲಿಕ್ಕೆ ಮಕ್ಕಳು ಪ್ರಯತ್ನಿಸುವರು. ತಂದೆಯು ಮನೆಯಲ್ಲಿ ಮಕ್ಕಳಿಗೆ ಆಶೆ ಇರುವುದಿಲ್ಲ. ತಂದೆ ಇರುವ ಕಾಲದಲ್ಲಿ ಕಟ್ಟಿದ್ದ ಗಂಟೆಂದು ತಿಳಿದು ತಮ್ಮಿಂದ ಕೂಡುವಷ್ಟು ಸಾರವನ್ನು ತಂದೆಯ ಆಸ್ತಿಯಿಂದ ಹೀರಿಕೊಳ್ಳುವರು. ದಿವಸ ಹೋಗುತ್ತಾ ಅಳಿಯಸಂತಾನದ ಕುಟುಂಬಗಳು ಕಳೆಗುಂದುತ್ತವೆ. ಸಂಸಾರದ ಅಭಿವೃದ್ಧಿಯಲ್ಲಿ ಮುಂದರಿಯುವದರ ಬದಲಿಗೆ ಅವರು

ಹಿಂದರಿಯುವರು. [illegible] ಮೇಲಿನ ವಿವರದಿಂದ ಈ ಜಿಲ್ಲೆಯ ಜನರು ಕೂಡಾ ಬದಲಾವಣೆಗಳನ್ನು ಅಪೇಕ್ಷಿಸುವರೆಂಬುವುದು ವ್ಯಕ್ತವಾಗುತ್ತದೆ.

ಭೂತಾಳ ಪಾಂಡ್ಯನೆಂಬ ಅರಸು ಈ ಕಟ್ಟಿನ ಮೂಲಪುರುಷನೆಂದು ಅಭಿಪ್ರಾಯಪಡುತ್ತಾರೆ. ಇವನು ಯಾವ ಕಾಲದಲ್ಲಿ ಮತ್ತು ಯಾವ ಕಾರಣಗಳಿಂದ ಈ ಕಟ್ಟನ್ನು ಪ್ರಚಾರಕ್ಕೆ ತಂದನೆಂಬುವುದಕ್ಕೆ ಭರವಸದ ಯಾವುದೊಂದು ಮೂಲಾಧಾರವು ತೋರುವದಿಲ್ಲ. ಭೂತಾಳ ಪಾಂಡ್ಯನ ಕಟ್ಟೆಂಬ ಒಂದು ಸಣ್ಣ ಕಥೆಯುಂಟು. ಇದು ಕಟ್ಟು ಕಥೆಯೋ ಇಲ್ಲವೇ ನಿಜವಾದ ಕಥೆಯೋ ಎಂದು ಹೇಳುವಷ್ಟು ತಕ್ಕದಾದ ಆಧಾರಗಳು ನಮ್ಮಲ್ಲಿ ತೋರುವದಿಲ್ಲ. ಈ ಕಟ್ಟಿನ ಮೂಲಪುರುಷನಾದ ಭೂತಾಳ ಪಾಂಡ್ಯನು ಅಳಿಯಸಂತಾನದ ಕಟ್ಟನ್ನು ನಿರ್ಮಿಸಿದರೂ ಅವನು ಈ ಕಟ್ಟನ್ನು ತಾನಾಗಿ ಅನುಸರಿಸಲಿಲ್ಲ. ಈ ಅರಸನಿಗೆ ಹನ್ನೆರಡು ಮಂದಿ ಹೆಂಡರಿದ್ದರೆಂದೂ, ಮತ್ತು ತನ್ನ ಹನ್ನೆರಡು ಮಂದಿ ಮಕ್ಕಳಿಗೆ ತನ್ನ ರಾಜ್ಯದಿಂದ ಭಾಗಗಳನ್ನು ವಿಂಗಡಿಸಿ ಅವರಿಗೆ ಕೊಟ್ಟಿರುವನೆಂದೂ ತೋರುತ್ತದೆ. ಈ ಮೂಲಪುರುಷನಿಂದ ಕೂಡಾ ಮನುಷ್ಯ ಸ್ವಭಾವಕ್ಕೆ ವಿರುದ್ಧವಾಗಿ ನಡೆಯುವುದಕ್ಕೆ ಆಗಲಿಲ್ಲ. ಹೀಗಿರುತ್ತಲೇ ಈಗಿನ ಕಾಲದ ಮನುಷ್ಯರು ಹೇಗೆ ತಾವೇ ಈ ಕಟ್ಟನ್ನು ಅನುಸರಿಸಿ ನಡೆಯುವರು? ಅದಲ್ಲದೆ ಬ್ರಾಹ್ಮಣರ ಹೊರತು ಮಿಕ್ಕ ಉಳಿದ ತ್ರಿವರ್ಣದವರಿಗೆ ಈ ಕಟ್ಟನ್ನು ಅನುಸರಿಸಬೇಕೆಂದು ಭೂತಾಳ ಪಾಂಡ್ಯನು ಕಟ್ಟು ಮಾಡಿದ್ದನೆಂದು ತಿಳಿದುಬರುತ್ತದೆ. ಆದರೆ ಈಗ ಬಂಟರು ಮತ್ತು ಇನ್ನು ಹಿಂದಿನ ಜಾತಿಯವರ ಹೊರತು ಬೇರೆಯವರು ಈ ಕಟ್ಟನ್ನು ಅನುಸರಿಸುವದಿಲ್ಲ. ಅನುಸರಿಸುವವರು ಕೂಡಾ ಈ ಕಟ್ಟಿನ ಕೆಡುಕುಗಳನ್ನು ನೋಡಿ ಮನನೊಂದುಗುತ್ತಿರುವರು. ಕುಟುಂಬದ ಎಲ್ಲಾ ಮೆಂಬರರಿಗೆ ಹಕ್ಕು ಇದ್ದ ಆಸ್ತಿಯ ಯಜಮಾನಿಕೆಯನ್ನು ಹಿರಿಯನು ತನ್ನ ಸ್ವಾಧೀನ ಗುಣದಿಂದ ನೋಡಿಕೊಂಡಿದ್ದು ಸರ್ವಸ್ವಾತಂತ್ರಿಕನಾಗಿದ್ದು, ಆಸ್ತಿಯ ಹುಟ್ಟಿನ ಮೇಲೆ ಕುಟುಂಬದ ಬೇರೆ ಮೆಂಬರರಿಗೆ ಎಡೆಗೊಡದೆ, ಈ ಹುಟ್ಟನ್ನು ತನ್ನ ಇಚ್ಛಾನುಸಾರ ವೆಚ್ಚಮಾಡುವ ಸಮಯದಲ್ಲಿ, ಕುಟುಂಬದ ಬೇರೆ ಮೆಂಬರರಿಗೆ ಮನನೊಂದುವದು ಸಹಜವೆ. ಕೆಲವು ಕಡೆಗಳಲ್ಲಿ ಯಜಮಾನರ ಹೆಂಡರು ಮಕ್ಕಳು ಹಾಲನ್ನು ಉಣ್ಣುವಾಗ ಅಳಿಯ ಸೊಸೆಯಂದಿಯರು ನೀರನ್ನು ಉಣ್ಣುವದುಂಟು. ಕೆಲವು ಯಜಮಾನರು ತನ್ನ ಕುಟುಂಬದವರಿಗೆ ಪಡಿಯಕ್ಕಿ ಕೊಡುವುದುಂಟು ಮತ್ತು ಅವರವರ ಮನೆಯ ಮೂಲೆಯಲ್ಲಿ ಇವನ್ನು ಬೇಯಿಸಿ ತಿನ್ನಬೇಕು. ಮುಕ್ಕಾಲುಪಾಲು [illegible] ಅಳಿಯಸಂತಾನದ ಮನೆಗಳಲ್ಲಿ ಕಲಹವು ತಪ್ಪುವದಿಲ್ಲ. [illegible] ವುದೂ, ಅಣ್ಣನು ತಮ್ಮನಿಗೆ ಮಾಟ ಮಾಡುವುದೂ, ತಮ್ಮನು ಅಣ್ಣನ ಮಂಡೆ ಒಡೆಯುವುದೂ ಇದೇ ಮುಂತಾದ ದುಷ್ಕೃತ್ಯಗಳು ಅಳಿಯ ಸಂತಾನ ಕುಟುಂಬಗಳಲ್ಲಿ ನಡೆಯುವವು. ಹೀಗಿರುತ್ತಲೆ ಅಳಿಯ ಸಂತಾನದ ಕಿರಿಯ ಮೆಂಬರರು ತಮ್ಮ ಹಿರಿಯರ ಆಸ್ತಿಗಳನ್ನು ಊರ್ಜಿತಕ್ಕೆ ತರಲಿಕ್ಕೆ ಪ್ರಯತ್ನಿಸುವದಿಲ್ಲ.

ಸಂಸಾರವೆಂಬ ಸಮುದ್ರವು ಮಕ್ಕಳ ಸಂತಾನದಲ್ಲಿಯೂ, ಅಳಿಯ ಸಂತಾನದಲ್ಲಿಯೂ ಒಂದೇ ಮಾದರಿ, ಉಭಯ ಸಂತಾನದವರು ಇದನ್ನು ದಾಟುವ ರೀತಿಯಲ್ಲಿ ಭೇದವಿರುವುದು. ಅಳಿಯ ಸಂತಾನದ ಕೆಲವು ಮನೆಗಳಲ್ಲಿ ದಿವಸಕ್ಕೆ ಒಂದು ಮುಡಿ ಅಕ್ಕಿಯು ಬೇಕಾಗುವಷ್ಟು ಕುಟುಂಬದವರಿರುವರು. ಇಂಥಾ ಸಂಸಾರಕ್ಕೆ ಮುದುಕಿಸ್ತ್ರೆ [illegible] ಸಂಸಾರವೆಂದು ಹೇಳುವರು. ಕೋರ್ಟು ಕಚೇರಿಗಳಲ್ಲಿ ಅಳಿಯ ಸಂತಾನದ ನೂರು ನೂರೈವತ್ತು ಮೆಂಬರರ ಹೆಸರುಗಳನ್ನು ಓದುತ್ತಿರುವ ಯುರೋಪಿಯನ್ ಅಧಿಕಾರಿಗಳಿಗೆ ಬೇಸರವೂ ಕಷ್ಟಕರತೆಯೂ ಬರುವದುಂಟು. ಇಂಥಾ ದೊಡ್ಡ ಸಂಸಾರವನ್ನು ಮನಃಕ್ಲೇಶವಿಲ್ಲದೆ ಐಕ್ಯತೆಯಿಂದ ನಡೆಸುವುದಕ್ಕೆ ಯಜಮಾನರುಗಳಿಗೆ ತಕ್ಕಷ್ಟು ಶಕ್ತಿಯು ಇರುವದಿಲ್ಲ. ಹೆಂಡತಿ ಮಕ್ಕಳ ಮೇಲಿರುವ ಮೋಹವೆಂಬ ಪಾಶದಿಂದ ಬಂಧಿಸಲ್ಪಟ್ಟವನಾಗಿ ಆತನು ಸಂಸಾರವೆಂಬ ಸಮುದ್ರವನ್ನು ದಾಟುವನೋ? ಸಹೋದರಿಯರ ಮೇಲೂ ಅಳಿಯಂದಿರ ಮೇಲೂ ಒಬ್ಬ ಮನುಷ್ಯನಿಗೆ ಇರುವ ಪ್ರೇಮವು ಇಷ್ಟೇ ಎಂದು ವಾಚಕರೇ ಗ್ರಹಿಸುವಿರಿ. ಹೀಗಿರುತ್ತಾ ಅಳಿಯಸಂತಾನದ ಯಜಮಾನರುಗಳು ಸಂಸಾರ ಸಮುದ್ರವನ್ನು [illegible] ಬಲವತ್ತಾದ ಪ್ರೇಮಪಾಶದ ಬಲವು ಕುಟುಂಬದಲ್ಲಿ ಇಲ್ಲದಿರುವದರಿಂದ ಅನೇಕ ಜನ ಈ ಘೋರ ಸಮುದ್ರದಲ್ಲಿ ಮುಳುಗಿ ಹೋಗುವರು. ಇವರು ಸಂಸಾರವೆಂಬ ಸಮುದ್ರವನ್ನು ಎರಡು ದೋಣಿಗಳ ಮೇಲೆ ಕಾಲಿಟ್ಟು ದಾಟುವರು. ಹೆಂಡತಿ ಮಕ್ಕಳೆಂಬ ಒಂದು ದೋಣಿ, ಅಳಿಯ ತಂಗಿಯಂದಿರೆಂಬುವ ಇನ್ನೊಂದು ದೋಣಿ. ಎರಡು ದೋಣಿಗೆ ಕಾಲಿಟ್ಟವ ನೀರಿಗೆ ಬೀಳುವುದು ಸಹಜವೇ ಸರಿ. ಈ ಕಾರಣಗಳಿಂದಲೇ ಅಳಿಯ ಸಂತಾನದ ಮನೆಗಳಲ್ಲಿ ಅಷ್ಟು ಅನರ್ಥಗಳು, ಕಲಹಗಳು, ವ್ಯಾಜ್ಯಸಾಜ್ಯಗಳು ಹುಟ್ಟುತ್ತಿವೆಯೆಂದು ನಂಬಬೇಕಾಗುತ್ತದೆ. ಬೆಂಕಿಯನ್ನು ಹೇಗೆ ಗಾಳಿಯು ವಿಸ್ತರಿಸುವುದೋ ಹಾಗೆಯೇ ಅವಿದ್ಯೆಯೆಂಬ [illegible] ಕಾರಣವು ಈ ವ್ಯಾಜ್ಯಸಾಜ್ಯಗಳನ್ನು ವರ್ಧಿಸ್ಸುವುದು. ಎರಡು ದೋಣಿಯಲ್ಲಿ ಕಾಲಿಟ್ಟ ನಾವಿಕನು ತನ್ನ ಪ್ರಯಾಣವನ್ನು ಭದ್ರಪಡಿಸುವದಕ್ಕೆ ದೋಣಿಗಳನ್ನು ಒಂದಕ್ಕೊಂದು ಗಟ್ಟಿಯಾಗಿ ಕಟ್ಟುವದುಂಟು. ಹೀಗೆಯೇ ಅಳಿಯ ಸಂತಾನದ ಯಜಮಾನರುಗಳು ಸಹ ತಮ್ಮ ಮಕ್ಕಳನ್ನೂ ಅಳಿಯ ಸೊಸೆಯಂದಿಯರನ್ನೂ ಒಕ್ಕಟ್ಟಿನಲ್ಲಿಡುವರೆ ಪ್ರಯತ್ನಿಸುವರು. [illegible] ಗಂಟು, ಮಗಳಿಗೂ ಅಳಿಯನಿಗೂ ಗಂಟು. ಅಳಿಯನ

ಕುತ್ತಿಗೆಗೂ ಮಗಳ ಕಾಲಿಗೂ, ಮಗನ ಕುತ್ತಿಗೆಗೂ ಸೊಸೆಯ ಕಾಲಿಗೂ ವಿವಾಹ ಗಂಟನ್ನು ಹಾಕುವುದು ಅಳಿಯ ಸಂತಾನದ ಮುಖ್ಯ ಗುಟ್ಟಾಗಿರುವುದು. ಈ ಗಂಟು ಪ್ರೇಮದ ಗಂಟೋ ಕಲಹದ ಗಂಟೋ ಎಂಬದು ನಾನರಿಯೆನು ಪ್ರೇಮಕ್ಕಿಂತಲೂ ಕಲಹವೇ ವಿಶೇಷ ತಂದೆಯು ಆ ಪಾಪದ ಗೋವನ್ನು ಅಳಿಯನೆಂಬ ಕಟಕನಿಗೆ ಮಾರಿಬಿಡುವನು ಮಾವನ ಕಾಲದಲ್ಲಿ ಅಳಿಯನು ಗೋಮುಖದ ವ್ಯಾಘ್ರನಂತಿರುವನು. ಮಾವನು ತೀರಿದ ಕೂಡಲೇ ಆ [illegible] ಅಕಳಿನ ಗಂಟನ್ನು ಮುರಿದು ಬಿಡುವನು. ಪ್ರೇಮವಿದ್ದರೆ ಮದುವೆ, ಬತ್ತಾ[illegible] ಮದುವೆಗಿಂತ ಮಸಗಾವೇ ಲೇಸು ಮಾವನ ಆಸ್ತಿಗೆ ಅಳಿಯನೇ ಬಾಧ್ಯನು, ಮಗಳ ಕೈಗೆ ಪ್ರೇಮವೇ ಬಾಧ್ಯವು ದೊಡ್ಡ ಕುಟುಂಬಗಳು ಒಬ್ಬ ಯಜಮಾನನಿಂದ ನಡಿಸಲಿಕ್ಕೆ ಮತ್ತು ಒಂದೇ ಗ್ರಹಕೃತ್ಯದಲ್ಲಿ ಇರಲಿಕ್ಕೆ ಅಸಾಧ್ಯವಾದ ಕಾರಣ ಈ ವಿಷಯದಲ್ಲಿ [illegible] ಅವಶ್ಯವಾಗಿರುತ್ತವೆ ಬಹುಮಾನಪಟ್ಟ ಕೃಷ್ಣಸ್ವಾಯರರವರ [illegible] ಈ ಉದ್ದಿಶ್ಯವಾಗಿರುತ್ತವೆ. ಕೃಷ್ಣಸ್ವಾಯರರವರ [illegible] ದೊಡ್ಡ [illegible] ಕುಟುಂಬಗಳು ತುಂಡುತುಂಡಾಗಿ ಹೋಗಲಿಕ್ಕೆ ಸಾಕೆಂದು ಕೆಲವರು ಅಭಿಪ್ರಾಯ [illegible] ಒಂದು ಬಳ್ಳಿಯಲ್ಲಿ ದೊಡ್ಡ ಕೊಳತ [illegible] ಇರುವುದ [illegible] ಕೆಲವು [illegible] ಒಳ್ಳೇ ಸೌತೆಕಾಯಿ ಇರುವದು ಲೇಸು [illegible] ಹೆಚ್ಚುವುದರಿಂದಲೂ, ಉದರ ಪೋಷಣೆಯು [illegible] ಜೀತಾಳ ಸಾಂದ್ಯನ ಕಟ್ಟನ್ನು ಸಮಯೋಚಿತವಾಗಿ ತಿದ್ದ[illegible] ಆದುದರಿಂದ ನಮ್ಮ ಜಿಲ್ಲೆಯಲ್ಲಿ ಕೂಡಾ ಈ ಕಟ್ಟನ್ನು [illegible] ಚನ್ನಾಗಿ ಆಲೋಚಿಸಿ ತಮ್ಮ ಅಭಿಪ್ರಾಯಗಳನ್ನು ಕೃಷ್ಣಸ್ವಾಯರ [illegible] ಅವರನ್ನು ಪ್ರೋತ್ಸಾಹ [illegible] ವುದು ಜಾತಿಯ ಹಿತಚಿಂತಕರ ಕರ್ತವ್ಯ [illegible].

ತುಳು ನಾಡಿನ ಬಂಟ

ಹಿಂದುಸ್ತಾನದ ಗೊಬ್ಬರದ ವ್ಯಾಪಾರ

ಈ ವರುಷದ ಮದ್ರಾಸು [illegible] ಸ್ಟ್ಯಾಂ[illegible] ಹ್ಯಾರಿ[illegible] ಬರದ ಲೇಖನದ ಸಾರಾಂಶ

ಗದ್ದೆಹೊಲಗಳಲ್ಲಿ ಬೆಳೆಯುವ ಪೈರುಗಳ [illegible] ಸಾರವನ್ನು ಹೀರಿಕೊಳ್ಳುವವು ಹೀಗೆ ಬಡವಾದ ಮಣ್ಣನ್ನು ಗೊಬ್ಬರದಿಂದ ಪುಷ್ಟಿಗೊಳಿಸಿದ ವಿನಹ ಬೆಳೆಯು [illegible] ವದು ಹಿಂದುಸ್ತಾನದಲ್ಲಿ ಈ ಎಲ್ಲೆಯನ್ನು ಸಾರಿದ ಅನೇಕ ಜಮೀನುಗಳವೆ ಜನಸಂಖ್ಯೆಯು ಏರುತ್ತಾ ಬರುವ ಈ ದೇಶದ ರೈತರು ಈಗ ಪರದೇಶ[illegible] ಹೆಚ್ಚಾಗಿ [illegible] ಗೊಬ್ಬರವನ್ನು ಇಲ್ಲಿ ಇರಗೊಳಿಸಿ ತಮ್ಮ [illegible] ಬೆಳೆಯನ್ನು ವರ್ಧಿಸುವದು ಅವಶ್ಯಕವದೆ ಯಾಕಂದರೆ ಗೊಬ್ಬರವು ರೈತನಿಗೆ [illegible] ಸಾಮಾಗ್ರಿಯು ಹೇರಳ [illegible] ನಮ್ಮ ಭೂಮಿಯೂ ರೈತರ [illegible] ಕೃಷಿಯಿಂದಲೇ ವರ್ತಿಸುವ ಹಿಂದುಸ್ತಾನದಲ್ಲಿ ಈ ವ್ಯಾಪಾರ [illegible] ವಿವರಿಸಲಗತ್ಯವಿಲ್ಲ

ಸಮುದ್ರದ ನೀರು [illegible] ಪುನಃ ಅದೇ ಚಕ್ರವನ್ನು ಪಕ್ರಮಿ[illegible] ಭೂಮಿಯ ಸಾರವನ್ನು ಸಸ್ಯಾದಿಗಳೂ ಪ್ರಾಣಿಗಳೂ [illegible] ತೆಗೆದುಕೊಳ್ಳುವವು ಸಸ್ಯಾದಿಗಳಿಂದ ತೆಂಗಿನಕಾಯಿ, ಎಳ್ಳು, ಹತ್ತಿಬೀಜ ಮೊದಲಾದ ತೈಲ ಪದಾರ್ಥಗಳು ದೊರಕುವವು ಇವುಗಳ ಹಿಂಡಿಯನ್ನೂ [illegible] ಮೂತ್ರ [illegible] ಮೀನು ಗೊಬ್ಬರವನ್ನೂ ಹೊಲಗದ್ದೆಗಳಿಗೆ [illegible] ಭೂಮಿಯು ಸಾರಹೊಂದಿ ಕೃಷಿವ್ಯಾಪಾರವು ನಿರಾತಂಕವಾಗಿ [illegible] ೧೯೧೭ [illegible] ಮದ್ರಾಸು ಸಂಸ್ಥಾನದಿಂದಲೇ ೪೩೦೦೦೦ ರೂಪಾಯಿಯ [illegible] ಲಕ್ಷದ ಮೀನುಗೊಬ್ಬರವೂ ೧೫ ಲಕ್ಷ ಹಿಂಡಿ ಗೊಬ್ಬರವೂ [illegible] ಲಕ್ಷ ಹಿಂಡಿ [illegible] ಲಕ್ಷದಷ್ಟು ಬೀಜಗಳೂ ರಪ್ತಾದವು. ಅಂದರೆ [illegible] ಕೋಟಿಯಷ್ಟು ಗೊಬ್ಬರವು ರಪ್ತಾಗುವದು

ಎಲುಬಿನ ಗೊಬ್ಬರವನ್ನು [illegible] ಮೀನು ಗೊಬ್ಬರವನ್ನು [illegible] ಫೊಸ್ಫೇಟ್ [illegible] ಜೊತೆಗೆ ಮಿಶ್ರಮಾಡಿದರೆ ಬತ್ತದ ಪೈರಿಗೆ ಒಳ್ಳೇ ಸಾರ ಕೊಡುವದೆಂದು ಕೃಷಿ ಇಲಾಖೆಯವರು ಕಂಡುಹಿಡಿದಿದ್ದಾರೆ [illegible] ಎಲುಬು ಗೊಬ್ಬರಗಳನ್ನು ಈ [illegible] ತಯ್ಯಾರಿಸಿರುತ್ತಾರೆ ಕರಾವಳಿ ಜಿಲ್ಲೆಗಳಲ್ಲಿ ಮೀನು ಗೊಬ್ಬರವು [illegible] ದೊರಕುವದು, ನಮ್ಮ ಸಂಸ್ಥಾನದ ಮಣ್ಣಿಗೆ ಹಿಂಡಿಯು ಅನುಕೂಲವಾದ ಗೊಬ್ಬರವೆಂದು ನಿರ್ಧರಿಸಿಯದೆ ಇದಲ್ಲದೆ ಹಿಂಡಿಯನ್ನು ಹೆಚ್ಚಾಗಿ ಗೊಬ್ಬರಕ್ಕೆ ಉಪಯೋಗಿಸಿದರೆ ಎಣ್ಣೆ ಕಾರ್ಖಾನೆಗಳಿಗೆ ಉತ್ತೇಜನ ದೊರಕಿ ಕೈಗಾರಿಕೆಗೆ ಕೈ ಕೊಟ್ಟಂತಾಗುವದು.

ಇಲ್ಲಿಂದ ಗೊಬ್ಬರಗಳನ್ನು ಸಾವಿರಾರು ಮೈಲುಗಳಿಗೆ ಒಯ್ಯುವ ಖರ್ಚನ್ನು ತೆತ್ತು ಇಂಗ್ಲೆಂಡ್, ಜಪಾನ ದೇಶದ ರೈತರು ನಮ್ಮಲ್ಲಿಯ ಗೊಬ್ಬರಗಳಿಂದ ಲಾಭ ಹೊಂದುವರೆಂದರೆ ಅವು ಇಲ್ಲಿಯ ರೈತರಿಗೆ ಎಷ್ಟು ಅಗ್ಗವ ಪ್ರಯೋಜನಕರವಾಗಿರಬೇಕು. ಆದ್ದರಿಂದ ನಮ್ಮ ಕೃಷಿ ಸಂಘಗಳೂ ಸಂಪನ್ನ ಜಮೀನುದಾರರೂ ಈ ವಿಷಯಕ್ಕೆ ಗಮನಕೊಟ್ಟು ತಮ್ಮ ತರ್ಫಿನಿಂದ ಯೋಗ್ಯ ಯುವಕರಿಗೆ ಹೊಸ ಕಾರ್ಯಗಳನ್ನು ಕಲಿಯಗೊಡಿಸಿ ತಮ್ಮ ರೈತರಿಗೂ ದೇಶಕ್ಕೂ ಮೇಲಿನಗೊಡುವದು.

ಇದನ್ನು ಓದಿದರೆ ತಿಳಿಯುತ್ತೆ! [illegible] ತರಿಸಿದರೆ ಸಿಕ್ಕುತ್ತೆ

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರೀಕ್ಷೆ ಲಸೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ.

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಬೆಂಕಿಪೆಟ್ಟಿ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಷರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, [illegible] ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ [illegible] ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವ[illegible] ಪುಸ್ತಕವು ಯಾವುದು? "ಸಚಿತ್ರ ಕಲಾ [illegible]" ಹಾಗಾದರೆ ಬೇಗನೆ [illegible] ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦.

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೨೭೮ ಅರಳಪೇಟೆ ಬೆಂಗಳೂರು ಸಿಟಿ.

ಅಥವಾ

[illegible] —(೨) ದಿ [illegible] ಮಾರ್ಟ್,
[illegible] ಮಂಗಳೂರು (ದ. ಕ)

[illegible] ಸ್ಥಳಗಳಲ್ಲಿಯೂ ಪುಸ್ತಕವು [illegible] ದೊರೆಯುತ್ತೆ

ಆಯುರ್ವೇದ ಪ್ರಶ್ನೋತ್ತರ [illegible]

ಆಯುರ್ವೇದವಂದರೇನು?

ಪ್ರಥಮ [illegible] ಆಯುರ್ವೇದ [illegible] ಪ್ರಶ್ನೋತ್ತರ [illegible]

ವಿದ್ಯಾರ್ಥಿಗಳು [illegible]?

[illegible]

ವಿ [illegible] ಚನ್ನಾಗಿದೆ [illegible] ತಾವು [illegible] ಚನ್ನಾಗಿ [illegible] ಪ್ರಥಮದಲ್ಲಿ ಆಯುರ್ವೇದ [illegible] ಆದಾಗ್ಯೂ [illegible] ತಿಳಿ[illegible]ಕೊಳ್ಳುವ ಅವಶ್ಯಕತೆಯನ್ನು [illegible] ಏನೆನು ಅಪ್ರಾಸಂಗಿಕ ವಿಷಯಗಳನ್ನು ತಂದು ನಮ್ಮ ತಲೆಗೆ [illegible] ಚಿಂತೆ ಇಲ್ಲಾ ವಿಜ್ಞಾಪಿಸೋಣ[illegible] ಉಪವೇದವೆಂದರೇನು?

ಅ ವಿದ್ಯಾರ್ಥಿಗಳೇ? [illegible] ವಿಷಯಗಳನ್ನು ತಂದು ನಿಮ್ಮಗಳ ತಲೆಗೆ ಹೊರಿಸುವ ತಾತ್ಪರ್ಯವಿಲ್ಲಾ ನೀವಾದರೂ ಈಗಿನ ಅಬಿನವವಿದ್ಯೆಯನ್ನು ಹೊಂದಿ [illegible] ಅಧ್ಯಾಪಕನು ಒಂದು ವಿಷಯವನ್ನು ಹೇಳಿದರೆ ಅದರ ಬೇರನ್ನು [illegible] ಲವಲವಿಕೆ ಉಳ್ಳವರು. [illegible]ದಿಂದ [illegible] ಬೇರು ಸಮೇತ ಕಿತ್ತು ತೋರಿಸಬೇಕೆಂದು ಹಾಗೆ ಹೇಳಿದ್ದೆ, ಈಗ [illegible] ಕೇಳಿಕೊಂಡಂತೆ ಉಪವೇದ [illegible] ಸಂಗತಿ ಕೂಡ ತಿಳಿಸಬೇಕಾದ್ದೆ

ವಿ ಹಾಗಾದರೆ [illegible] ತಿಳಿಸೋಣಾಗಲಿ

ಅ ನಮ್ಮಗಳಿಗೆ ಧರ್ಮ ಅರ್ಥ, ಕಾಮ ಮೋಕ್ಷ ಎಂಬ ಚತುರ್ವರ್ಗವನ್ನು ಸಾಧಿಸಲಿಕ್ಕೆ [illegible] ವಿವಿಧ ವಿದ್ಯೆಗಳೇ [illegible] ವಿದ್ಯೆಗಳು ಬೀಜರೂಪವಾಗಿ ಋಕ್, ಯಜು, ಸಾಮ, ಅಥರ್ವಗಳೆಂಬ ನಾಲ್ಕು ವೇದಗಳಲ್ಲಿ ಅಡಗಿರುವವು ಆ ನಾಲ್ಕು ವೇದಗಳೊಳಗೆ ಯಾವ ವೇದದಲ್ಲಿ ಸೂಕ್ಷ್ಮರೂಪವಾಗಿದ್ದ ವಿದ್ಯೆಯು [illegible] ವಿದ್ವಾಂಸರು ಅದನ್ನು ಯಾವದರಲ್ಲಿ ವಿಶದವಾಗಿ ವರ್ಣಿಸಿದ್ದರೊ ಅದು ಆ ವೇದದ ಉಪವೇದ ಎಂದು ಹೇಳಲ್ಪಡುತ್ತದೆ ಆ ಮೇರೇಗೆ ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥವೇದ ಎಂದು ನಾಲ್ಕು ವೇದಗಳಿಗೆ ನಾಲ್ಕು ಉಪವೇದಗಳಾಗಿರುವವು

ವಿ. ಉಪವೇದವಂದರೇನೆಂದು ಪರಿಷ್ಕಾರವಾಗಿ ತಿಳಿದಂತಾಯಿತು. ಈಗ ಆಯುರ್ವೇದವು ಯಾವ ವೇದದ ಉಪವೇದವೆಂದು ತಿಳಿಸೋಣಾಗಬೇಕು.

